ಶ್ರೀಮದ್ವಾಲ್ಮೀಕಿ

ರಾಮಾಯಣಮ್



ಅಯೋಧ್ಯಾ ಕಾಂಡಃ

(ಉತ್ತರಾರ್ಧಃ)

ಕನ್ನಡ ಅನುವಾದ ಸಹಿತ

ಅನುವಾದಕರು

ವಿದ್ವಾನ್ ಎನ್. ರಂಗನಾಥ ಶರ್ಮ

ಶ್ರೀ ಮದ್ವಾಲ್ಮೀಕಿ ರಾಮಾಯಾಣಮ್

ಅಯೋಧ್ಯಾಕಾಂಡಃ

ಉತ್ತರಾರ್ಧಃ

ಕ೭-೧೧೯ ಸರ್ಗಗಳು

(ಕನ್ನಡ ಅನುವಾದ ಸಹಿತ)

ಮುನ್ನುಡಿ

ಡಾ॥ ಡಿ.ವಿ. ಗುಂಡಪ್ಪನವರಿಂದ

ಅನುವಾದಕರು

ವಿದ್ವಾನ್ ಎನ್. ರಂಗನಾಥಶರ್ಮಾ

ಪ್ರಕಾಶಕರು:

ರಾಮಾಯಣ ಪ್ರಕಾಶನ ಸಮಿತಿ

ನರಸಿಂಹರಾಜ ಕಾಲೋನಿ, ಬೆಂಗಳೂರು-೧೯

ಐದನೆಯ ಮುದ್ರಣ ೨೦೦೭

ಹಕ್ಕುಗಳನ್ನು ಕಾದಿರಿಸಲಾಗಿದೆ
(All Rights Reserved)

ಬೆಲೆ: ರೂ. ೭೦-೦೦

ಮುದ್ರಣಕಾರರು:

ಶುಕ್ರಶ್ರೀ ಪ್ರಿಂಟರ್ಸ್

ನಂ.247, 7ನೇ 'ಎ' ಅಡ್ಡರಸ್ತೆ, ಶಾಸ್ತ್ರೀನಗರ, ಬೆಂಗಳೂರು – 28

ದೂರವಾಣಿ : 2677 1573 ಮೊಬೈಲ್ : 94483 31492

ಐದನೆಯ ಮುದ್ರಣಕ್ಕೆ ಮುನ್ನ.....
(ಅಯೋಧ್ಯಖಾಂಡ ಭಾಗ - 2)

ರಾಮಾಯಣದ ಜನಪ್ರಿಯತೆ ಭಾರತಕ್ಕಷ್ಟೇ ಸೀಮಿತವಲ್ಲ. ಅದು ವಿಶ್ವವ್ಯಾಪಿಯಾದುದು. ಜಗತ್ತಿನ ಎಲ್ಲ ಪ್ರಮುಖ ಭಾಷೆಗಳಲ್ಲಿ ರಾಮಾಯಣ ಮುದ್ರಣಗೊಂಡಿದೆ. ಆಗ್ನೇಯ ಏಷ್ಯಾದಲ್ಲಿಯಂತೂ ಕಥಾನಕ-ಚಿತ್ರ-ರೂಪಕ-ನಾಟಕ ಪುರಾತನ ಶಿಲ್ಪಗಳಲ್ಲಿ ರಾಮಾಯಣವು ಪಡೆದಿರುವ ಸ್ಥಾನ ತುಂಬಾ ಹಿರಿದಾದುದು.

ನಮ್ಮ ಈ ಕಾರ್ಯಕ್ಕೆ ಮುಖ್ಯ ಪ್ರೇರಕರು ದಿ॥ ಪೂಜ್ಯ ಡಿ.ವಿ.ಜಿ.ಯವರು. ವಾಲ್ಮೀಕಿ ರಾಮಾಯಣದ ಕನ್ನಡ ಅನುವಾದವನ್ನು ಪ್ರಕಟಿಸುವುದು ಸ್ತುತ್ಯವೂ, ಅಗತ್ಯವೂ ಆದ ಕೆಲಸವೆಂದು ಪ್ರೇರಣೆ ನೀಡಿದ ಅವರು ಅನುವಾದ ಕಾರ್ಯಕ್ಕೆ ವಿದ್ವಾನ್ ರಂಗನಾಥಶರ್ಮರ ಹೆಸರನ್ನೂ ಸೂಚಿಸಿದರು. ಹಾಗೂ ಈ ಗ್ರಂಥಕ್ಕೆ ಅಮೂಲ್ಯವಾದ ಮುನ್ನುಡಿಯನ್ನು ಬರೆದುಕೊಟ್ಟು ಉಪಕರಿಸಿದ್ದಾರೆ. ಅವರಿಗೆ ನಮ್ಮ ಸಂಘದ ಅನಂತ ವಂದನೆಗಳು.

ಶ್ರೀಮದ್ವಾಲ್ಮೀಕಿ ರಾಮಾಯಣವನ್ನು ಅನುವಾದ ಸಹಿತ ಪ್ರಕಟಿಸಿದಾಗ ಪ್ರತಿಯೊಂದು ಕಾಂಡಕ್ಕೂ ದಿ॥ ಪೂಜ್ಯ ಡಿ.ವಿ.ಜಿ.ಯವರ ಅನುಭವ-ಅಧ್ಯಯನ ಪೂರ್ಣ-ಸಾರಭೂತ ಮುನ್ನುಡಿಯನ್ನು ಪಡೆಯುವ ಭಾಗ್ಯ ನಮ್ಮದಾಗಿತ್ತು. ಆ ಮುನ್ನುಡಿಗಳು ಎಷ್ಟುಮಟ್ಟಿಗೆ ಗ್ರಂಥದ ತೂಕವನ್ನು ಹೆಚ್ಚಿಸಿ ಜನಪ್ರಿಯತೆ ತಂದು ಕೊಟ್ಟಿವೆಯೆಂಬುದು ಓದುಗರಿಗೆ ತಿಳಿದೇ ಇದೆ. ಎಲ್ಲಾ ಕಾಂಡಗಳ ಮುನ್ನುಡಿಗಳು ಪ್ರತ್ಯೇಕ ಪುಸ್ತಕರೂಪದಲ್ಲಿ ಪ್ರಕಟಿಸಲ್ಪಟ್ಟಿವೆ. ಆ ಮಹಾದಿಗ್ಗಜ ಡಿ.ವಿ.ಜಿ.ಯವರ ಪೂರ್ಣ ವಿಶ್ವಾಸಪಾತ್ರರಾದ ಶ್ರೀ ರಂಗನಾಥಶರ್ಮರು ನಿಜಕ್ಕೂ ಸ್ತುತ್ಯರ್ಹರು.

ಶುಕ್ರಶ್ರೀ ಪ್ರಿಂಟರ್ಸ್‌ರವರು ಅಂದವಾಗಿ ಈ ಅಯೋಧ್ಯಾಕಾಂಡ ಗ್ರಂಥ ಮುದ್ರಣವನ್ನು ಮಾಡಿಕೊಟ್ಟು ಉಪಕಾರ ಮಾಡಿದ್ದಾರೆ. ಅವರಿಗೆ ಸಂಘದ ವಂದನೆಗಳು. ಎಂದಿನಂತೆ ಮಹಾಜನಗಳು ಪ್ರೋತ್ಸಾಹ ನೀಡಬೇಕಾಗಿ ವಿನಂತಿ.

ಬೆಂಗಳೂರು.
1.3.2007

ಎಸ್. ಎನ್. ಮೂರ್ತಿ, ಅಧ್ಯಕ್ಷರು
ಶ್ರೀ ರಾಮಾಯಣ ಪ್ರಕಾಶನ ಸಮಿತಿ
ನರಸಿಂಹರಾಜ ಕಾಲೋನಿ, ಬೆಂಗಳೂರು
ದೂರವಾಣಿ : 2662 2231, 2677 0680

ರಾಮಾಯಣ ಪ್ರಕಾಶನ ಸಮಿತಿಯ ಸದಸ್ಯರುಗಳು

ಶ್ರೀ ಎಸ್. ಎನ್ ಮೂರ್ತಿ
ಶ್ರೀ ಕೆ.ಎನ್. ವೆಂಕಟನಾರಾಯಣ
ಶ್ರೀ ಎ. ಎಸ್. ನಂಜುಂಡರಾವ್
ಶ್ರೀ ಬಿ.ವಿ. ಚಂದ್ರಶೇಖರ್
ಶ್ರೀ ಎನ್.ಕೆ. ನರಸಿಂಹಮೂರ್ತಿ
ಶ್ರೀಮತಿ ಸಂಧ್ಯಾ ಎನ್. ಮಂಜುನಾಥ್
ಶ್ರೀ ಎಸ್. ಎನ್. ಉಮಾಶಂಕರ

ಶ್ರೀಮದ್ವಾಲ್ಮೀಕಿ ರಾಮಾಯಣದ

ಅಯೋಧ್ಯಾಕಾಂಡಃ ಭಾಗ - 2

ಐದನೆಯ ಮುದ್ರಣಕ್ಕೆ ಸಹಾಯ ಮಾಡಿದ
ರಾಮ ಭಕ್ತ ಮಹನೀಯರುಗಳು

ಶ್ರೀಮತಿ ಸಂಧ್ಯಾ ಎನ್. ಮಂಜುನಾಥ್	5,000.00
ಶ್ರೀಮತಿ ಮಹಾಲಕ್ಷ್ಮಮ್ಮ ಎಸ್.ಎನ್. ಮೂರ್ತಿ	3,000.00
ಶ್ರೀಮತಿ ಉಷಾ ಎಸ್.ಎನ್. ಉಮಾಶಂಕರ್	2,000.00

ಮೇಲ್ಕಂಡ ಸರ್ವರಿಗೂ ಶ್ರೀಸೀತಾರಾಮಚಂದ್ರರು ಆಯುರಾರೋಗ್ಯ ಐಶ್ವರ್ಯವನ್ನು ನೀಡಿ ಕಾಪಾಡಲೆಂದು ಪ್ರಾರ್ಥನೆ.

ಎಸ್. ಎನ್. ಮೂರ್ತಿ, ಅಧ್ಯಕ್ಷರು
ಶ್ರೀ ರಾಮಾಯಣ ಪ್ರಕಾಶನ ಸಮಿತಿ

***

ಮುನ್ನುಡಿ

ಶ್ರೀರಾಮಚಂದ್ರನು ಮಿಥಿಲೆಯಿಂದ ಸೀತಾಸಮೇತನಾಗಿ ಅಯೋಧ್ಯೆಗೆ ಬಂದು, ಸುಖಸಂತೋಷಗಳಲ್ಲಿದ್ದ ದಿನಗಳಲ್ಲಿ ಪ್ರಾರಂಭಿಸುತ್ತದೆ ಅಯೋಧ್ಯಾಕಾಂಡದ ಕಥೆ.

ಜೀವತ್ಸು ತಾತಪಾದೇಷು ನೂತನೇ ದಾರಸಂಗ್ರಹೇ ।
ಮಾತೃಭಿಶ್ಚಿಂತ್ಯಮಾನಾನಾಂ ತೇ ಹಿ ನೋ ದಿವಸಾ ಗತಾಃ ॥

ಉತ್ತರರಾಮಚರಿತೆ, ೧-೧೯

ತಂದೆ ದಶರಥರಾಯನು ರಾಜ್ಯದ ಭಾರವನ್ನೂ ಕುಟುಂಬದ ಭಾರವನ್ನೂ ನಿರ್ವಹಿಸಿಕೊಂಡು ಮಕ್ಕಳಿಗೆ ನಿಶ್ಚಿಂತೆಯಾಗುವಂತೆ ಅನುಕೂಲ ಪಡಿಸಿದ್ದಾನೆ. ರಾಮ ಸಹೋದರರ ಪತ್ನಿಯರು ಹೊಸದಾಗಿ ಮನೆಗೆ ಬಂದಿದ್ದಾರೆ ; ಆ ದಂಪತಿಗಳು ಯೌವನದಲ್ಲಿದ್ದಾರೆ ; ಪ್ರಣಯಾಂಕುರ ಸಂಭ್ರಮದಲ್ಲಿದ್ದಾರೆ ; ತಾಯಂದಿರು- ಕೌಸಲ್ಯೆ, ಸುಮಿತ್ರೆ, ಕೈಕೇಯಿ ಇವರು ಮೂವರೂ - ಆ ನವದಂಪತಿಗಳ ಸರಸ ಸಲ್ಲಾಪಗಳನ್ನು ನೋಡಿ ಹಿಗ್ಗುತ್ತ ಅವರ ಸಂತೋಷ ಇನ್ನೂ ಹೆಚ್ಚಲು ಏನೇನು ಮಾಡಬಹುದು - ಯಾವ ಯಾವ ಭಕ್ಷ್ಯ ಭೋಜ್ಯಗಳು, ಯಾವ ಯಾವ ವಸ್ತ್ರಾಲಂಕರಾಗಳು, ಎಂಥೆಂಥ ವಿನೋದಗಳು, ಎಂಥೆಂಥ ಆಟಪಾಟಗಳು ಇದ್ದರೆ ಆ ನವದಂಪತಿಗಳ ಮನಸ್ಸಿಗೆ ಮತ್ತೂ ಉಲ್ಲಾಸವುಂಟಾದೀತು - ಎಂದು ಯೋಚಿಸುತ್ತಿದ್ದಾರೆ. ಇದು ಸೀತಾರಾಮರು ಅಯೋಧ್ಯೆಗೆ ಬಂದ ಹೊಸತಿನಲ್ಲಿ ನಡೆಸುತ್ತಿದ್ದ ಜೀವನದ ಚಿತ್ರ. ಅವರ ಸಂತೋಷ ವೈಭವಗಳನ್ನು ಮತ್ತೂ ಅಭಿವೃದ್ಧಿ ಪಡಿಸಬೇಕೆಂಬ ದಶರಥನ ಆಲೋಚನೆಯೇ ಆ ಇದ್ದ ಸಂತೋಷಕ್ಕೂ ಕೊನೆಯನ್ನು ತಂದಿತು. ಪಟ್ಟಾಭಿಷೇಕದ ಆಲೋಚನೆ ಅವರೆಗೆ ಸಿದ್ಧವಾಗಿದ್ದ ಗೃಹಸೌಖ್ಯವನ್ನು ನುಂಗಿತು. ಇಂಥ ವಿಷಪರಿಪಾಕವು ಮನುಷ್ಯ ಸಂಕಲ್ಪದ ಚರಿತ್ರೆಯಲ್ಲಿ ಅಪರೂರಪವೇನೂ ಅಲ್ಲ.

ಅಯೋಧ್ಯೆಕಾಂಡದಲ್ಲಿ ಹೀಗೆ ಎದೆಮುಟ್ಟುವ ಸಂಗತಿಗಳು ನಾಲ್ಕಾರು ಇವೆ. ಪಟ್ಟಾಭಿಷೇಕಕ್ಕಾದ ವಿಘ್ನ, ಮಂಥರೆ- ಕೈಕೇಯಿಯರ ಸಂವಾದ ಸರಣಿ, ದಶರಥ ಕೌಸಲ್ಯಾದಿಗಳೊಡನೆ ರಾಮಲಕ್ಷ್ಮಣಾದಿಗಳ ಮಾತುಕಥೆ, ವನವಾಸಕ್ಕೆ ಮಾಡಿದ

ಸಿದ್ಧತೆ, ಬೀಳ್ಕೊಡುಗೆ, ಪುರಜನರ ಆಕ್ರೋಶಪ್ರಲಾಪಗಳು, ಅನಂತರ ಕಂಡ ನದೀ ಪರ್ವತವರ್ಣನೆಗಳು, ಋಷ್ಯಾಶ್ರಮ ಚಿತ್ರಗಳು, ಚಿತ್ರಕೂಟದ ಪರ್ಣಶಾಲೆ- ಹೀಗೆ ಬರುತ್ತವೆ ಹೃದಯವೇಧಕಗಳಾದ ಕಥಾಪ್ರಸಂಗಗಳು. ಅಯೋಧ್ಯಾಪುರವನ್ನು ಬಿಟ್ಟಂದಿನಿಂದ ದಂಡಕಾರಣ್ಯ ಪ್ರವೇಶದವರೆಗಿನ ಕಥಾವಾಹಿನಿ ಅಯೋಧ್ಯಾಕಾಂಡದ್ದು.

ಒಳ್ಳೆಯ ಕಾವ್ಯದಲ್ಲಿ ಸೊಗಸುಗಳು ನಾಲ್ಕಾರು ಸೇರಿರುತ್ತವೆ. ಕಥಾ ಸಂವಿಧಾನ, ಸಂಭಾಷಣ ವರ್ಣನೆ, ಶಬ್ದಸೌಂದರ್ಯ, ಪದ್ಯದ ಧಾಟಿ - ಇವೆಲ್ಲ ಸ್ವಾರಸ್ಯಗಳೇ. ಈ ಅನೇಕ ಸ್ವಾರಸ್ಯಗಳ ಅನುಭವದಿಂದ ವಾಚಕನ ಮನಸ್ಸಿನಲ್ಲಿ ರಸೋದಯ ವಾಗುತ್ತದೆ. ಇಷ್ಟೂ ಕಾವ್ಯದಲ್ಲಿ ದೊರೆಯುವ. ಇಷ್ಟಫಲಗಳಾದರೂ, ದೊರೆಯುತ್ತದೆ. ಅದು ಮಹತ್ತ್ವದ ದರ್ಶನ. ಮಹಾಕಾವ್ಯದಿಂದ ನಮಗಾಗುವ ಮಹೋಪಕಾರವು ಮಹತ್ತ್ವ ಸಂದರ್ಶನ.

ಮನುಷ್ಯತ್ವದಲ್ಲಿರಬಹುದಾದ ದೊಡ್ಡತನವನ್ನು ಹೃದಯದ ಮೂಲಕ ನಮಗೆ ಅನುಭವಮಾಡಿಸುವುದು ಮಹಾಕಾವ್ಯದ ಕಾರ್ಯ. ಅದು ನಮ್ಮ ಕಣ್ಣಮುಂದೆ ತರುವ ನಾನಾ ಪಾತ್ರಸ್ಥರಲ್ಲಿ ನಾನಾ ತೆರದ ಮಹತ್ತ್ವಗಳನ್ನು ಹೊರಹೊಮ್ಮಿಸುತ್ತದೆ. ಸಾಮಾನ್ಯ ಮನುಷ್ಯರು ಸಾಮಾನ್ಯ ಸಂದರ್ಭಗಳಲ್ಲಿ ಹೇಗೆ ನಡೆದುಕೊಳ್ಳುತ್ತಾರೆಂಬುದನ್ನು ನಾವು ನಮ್ಮ ಸುತ್ತಮುತ್ತಲಿನ ಪ್ರಪಂಚದಲ್ಲಿ ದಿನದಿನವೂ ನೋಡುತ್ತಿರುತ್ತೇವೆ. ಆದರೆ ಒಬ್ಬ ಮಹಾವ್ಯಕ್ತಿ ಒಂದು ವಿಶೇಷ ಸಂದರ್ಭವೊದಗಿದಾಗ, ಹೇಗೆ ನಡೆದುಕೊಂಡಾನು ಎಂಬುದನ್ನು ನಾವು ರಾಮಾಯಣ ಭಾರತಗಳಲ್ಲಿ ಕಾಣುತ್ತೇವೆ. ಅಂಥಾ ಮಹಾವ್ಯಕ್ತಿ ಚಿತ್ರಣವೇ ಮಹಾಕವಿಯ ಕೃತಿ. ಅವನ ಮುಖ್ಯ ರಚನೆ ಕೇವಲ ಭಾಷಾ ಚಮತ್ಕಾರದ್ದಲ್ಲ; ಸಣ್ಣ ಸಣ್ಣ ಭಾವವಿಲಾಸಗಳದ್ದಲ್ಲ; ಅಲಂಕಾರ ಚಿತ್ರಗಳದ್ದಲ್ಲ. ಅದು ಮಹಾವ್ಯಕ್ತಿ ನಿರ್ಮಾಣದ್ದು. ಮನುಷ್ಯಸ್ವಭಾವವನ್ನು ಪರೀಕ್ಷೆಮಾಡುವ ಒಂದು ವಿಶೇಷ ಸನ್ನಿವೇಶವನ್ನು ಕಲ್ಪಿಸಿ, ಅದರಲ್ಲಿ ಮಹಾವ್ಯಕ್ತಿಯನ್ನು ನಿಲ್ಲಿಸಿ, ಅಲ್ಲಿ ಅವನ ಅಥವಾ ಅವಳ ಪ್ರತಿವರ್ತನೆ ಹೇಗಿರುತ್ತದೆ - ಅಲ್ಲಿಯ ಪ್ರಶ್ನೆಗೆ ಅವನ ಪ್ರತ್ಯುತ್ತರವೇನು - ಎಂಬುದನ್ನು ತೋರಿಸುತ್ತಾನೆ ಮಹಾಕವಿ. ಈ ಸ್ವಭಾವಾಭಿವ್ಯಕ್ತಿಯೇ ಕಾವ್ಯವಾಚಕನ

ಸನ್ನಿವೇಶವನ್ನು ಕಲ್ಪಿಸಿ, ಅದರಲ್ಲಿ ಮಹಾವ್ಯಕ್ತಿಯನ್ನು ನಿಲ್ಲಿಸಿ, ಅಲ್ಲಿ ಅವನ ಅಥವಾ ಅವಳ ಪ್ರತಿವರ್ತನೆ ಹೇಗಿರುತ್ತದೆ – ಅಲ್ಲಿಯ ಪ್ರಶ್ನೆಗೆ ಅವನ ಪ್ರತ್ಯುತ್ತರವೇನು – ಎಂಬುದನ್ನು ತೋರಿಸುತ್ತಾನೆ ಮಹಾಕವಿ. ಈ ಸ್ವಭಾವಾಭಿವ್ಯಕ್ತಿಯೇ ಕಾವ್ಯ ವಾಚಕನ ಲಕ್ಷ್ಯದಲ್ಲಿರಬೇಕಾದ ಮುಖ್ಯ ವಿಷಯ. ಸಂದರ್ಭವು ಕೇಳುವ ಪ್ರಶ್ನೆಗೆ ಮನುಷ್ಯ ಕೊಡುವ ಉತ್ತರದಲ್ಲಿ ಅವನ ಶೀಲಸ್ವಭಾವಗಳು – ಅವನ ಚಾಲು ಚಲನ್ನುಗಳು – ಹೊರಪಡುತ್ತವೆ. ಇದನ್ನು ಇಂಗ್ಲಿಷಿನಲ್ಲಿ ''ಕ್ಯಾರೆಕ್ಟರ್ ಸ್ಟಡಿ'' (Character Study) ಎನ್ನುತ್ತಾರೆ. ರಾಮಾಯಣದಲ್ಲಿಯಾಗಲಿ, ಮಹಾಭಾರತದಲ್ಲಿಯಾಗಲಿ, ಷೇಕ್ಸ್‌ಪಿಯರ್ ಕವಿಯ ನಾಟಕಗಳಲ್ಲಿಯಾಗಲಿ, ಡಿಕೆನ್ಸ್, ಜಾರ್ಜ್ ಎಲಿಯೆಟ್ ಮೊದಲಾದವರ ಕಾದಂಬರಿಗಳಲ್ಲಿಯಾಗಲಿ ಹೆಚ್ಚು ಪ್ರಶಸ್ತವಾದ ಲಕ್ಷಣ ಅಲ್ಲಲ್ಲಿಯ ಪಾತ್ರಾಭಿವ್ಯಕ್ತಿ – ಅಲ್ಲಲ್ಲಿ ಪ್ರಕಾಶಕ್ಕೆ ಬರುವ ಶೀಲಸ್ವಭಾವ ಲಕ್ಷಣಗಳು.

ಹೀಗೆ ಮಹಾಕಾವ್ಯವು ಮನುಷ್ಯನ ಸ್ವಭಾವ ಸಂದರ್ಶನ ಶೋಧನೆಗಳಿಗೆ ಒಂದು ಸಮರ್ಥ ಸಾಧಕವಾಗುತ್ತದೆ.

ಶ್ರೀರಾಮಚಂದ್ರನು ರಾಜ್ಯತ್ಯಾಗಕ್ಕೆ ಮನುಸ್ಸು ಮಾಡಿದ್ದಾನೆ. ದಶರಥ ಕೌಸಲ್ಯೆ ಮೊದಲಾದವರು ದುಃಖದಿಂದ ತುಂಬಿದ ಅರೆಮನಸ್ಸಿನಿಂದ ಆ ಅಗಲಿಕೆಗೆ ಸಿದ್ಧರಾಗುತ್ತಿದ್ದಾರೆ. ರಾಮನು ಪ್ರತಿಜ್ಞೆಯಿಂದ ಕದಲತಕ್ಕವನಲ್ಲವೆಂದು ಎಲ್ಲರಿಗೂ ತಿಳಿದಿದೆ. ಕಡೆಗೆ ದಶರಥರಾಯನು ಒಂದು ಸಣ್ಣ ಕೋರಿಕೆಯನ್ನು ತಿಳಿಸುತ್ತಾನೆ: ''ಅಪ್ಪ ನೀನು ದೃಢಪ್ರತಿಜ್ಞನು. ನಿನ್ನನ್ನು ಹಿಂತಿರುಗಿಸುವುದು ಯಾರಿಗೂ ಸಾಧ್ಯವಾಗದು. ಒಳ್ಳೆಯದು. ನಿನ್ನನ್ನು ನಾನು ತಡೆಯುವುದಿಲ್ಲ, ಆದರೆ ಒಂದು ಮಾತು : ನಿನ್ನ ಪ್ರಯಾಣವನ್ನು ಈ ಒಂದು ರಾತ್ರಿ ಮುಂದಕ್ಕೆ ತಳ್ಳು. ಈ ರಾತ್ರಿ ನೀನು ಇಲ್ಲಿದ್ದರೆ, ನಾನೂ ನಿನ್ನ ತಾಯಿಯೂ ಇನ್ನು ಕೊಂಚ ಹೊತ್ತಾದರೂ ನಿನ್ನೊಡನೆ ಇದ್ದಂತಾಗಿ, ನಮಗೆ ಕೊಂಚವಾದರೂ ನೆಮ್ಮದಿ ಬಂದೀತು. ಇಷ್ಟು ಮಾತ್ರಕ್ಕೆ ಒಪ್ಪಿಕೋ.''

ಇದು ದಶರಥರಾಯನ ಕೋರಿಕೆ. ಅದಕ್ಕೆ ಶ್ರೀರಮನು ಹೇಳಿದ ಪ್ರತ್ಯುತ್ತರವೇನು?

ಪ್ರಾಪ್ಸ್ಯಾಮಿ ಯಾನದ್ಯ ಗುಣಾನ್
ಕೋ ಮೇ ಶ್ವಸ್ತಾನ್ ಪ್ರದಾಸ್ಯತಿ।
ಅಪಕ್ರಮಣಮೇವಾತಃ
ಸರ್ವಕಾಮೈರಹಂ ವೃಣೇ ॥

ಸ. ೩೪, ಶ್ಲೋ.೪೦

''ತಂದೆಯೆ, ಈಗ ನನ್ನಲ್ಲಿ ಯಾವ ಗುಣಗಳಿವೆಯೋ - ಯಾವ ಸತ್ಯ ಶ್ರದ್ಧೆ, ಯಾವ ಪಿತೃಗೌರವನಿಷ್ಠೆ, ಯಾವ ತ್ಯಾಗಸಿದ್ಧತೆ ಇವು ಇವೆಯೋ - ಈ ಗುಣಗಳನ್ನು ನಾಳೆ ನನ್ನಲ್ಲಿ ಉಂಟುಮಾಡುವವರು ಯಾರು ? ಬೆಳಗಾದಾಗ ನನ್ನ ಮನಸ್ಸು ಬುದ್ಧಿಗಳು ಬೇರೆಯಾಗಬಹುದು. ಈ ರಾತ್ರಿ ಮತ್ತಾರಾದರೂ ಬಂದು ನನಗೆ ಬೋಧನೆ ಮಾಡಿ ನನ್ನ ಮನಸ್ಸನ್ನು ತಿರುಗಿಸಬಹುದು. ಧರ್ಮಕ್ಕೆ ಅಂಥ ಅಪಾಯಗಳುಂಟು. ಮನುಷ್ಯ ಸ್ವಭಾವವು ಕ್ಷಣದಿಂದ ಕ್ಷಣಕ್ಕೆ ಬದಲಾಯಿಸಬಲ್ಲದ್ದು. ಯಾವ ಕ್ಷಣದಲ್ಲಿ ಮನಸ್ಸಿಗೆ ಧರ್ಮನಿಶ್ಚಯವಾಗುತ್ತದೆಯೋ ಆ ಕ್ಷಣವೇ ಅದನ್ನು ನೆರವೇರಿಸುವುದು ನಿರಪಾಯ ಮಾರ್ಗ. ಆದದ್ದರಿಂದ ಈ ಘಳಿಗೆಯಲ್ಲಿಯೇ ನಾನು ಇಲ್ಲಿಂದ ಹೊರಡಬೇಕಾದದ್ದು. ಅದು ಸರ್ವಪ್ರಕಾರಗಳಿಂದಲೂ ನನಗೆ ಇಷ್ಟವಾಗಿದೆ.''

ಇದು ಶ್ರೀರಾಮನ ಅಂತರಂಗದ ಅಭಿವ್ಯಕ್ತಿ .

ದಶರಥನು ಕೈಕೇಯಿಗೆ ವಾಗ್ದಾನ ಮಾಡಿದ್ದದ್ದು ನಿಜ. ಆದರೆ ಆ ವಾಗ್ದಾನದಲ್ಲಿ ನ್ಯಾಯ ಇದ್ದದ್ದೆಷ್ಟು ? ದಾನ ಮಾಡಿದಾಗ ಮಾಡಿದವನ ಮನಸ್ಸು ಹೇಗಿತ್ತು ? ಅದು ಸಮಾಧಾನದಲ್ಲಿತ್ತೆ ? ಆರ್ಹವಾಗಿತ್ತೆ ? ಭಯ ಮೋಹಗಳಿಂದ ವಿಹ್ವಲವಾಗಿರಲಿಲ್ಲವೆ ? ಆ ವಾಗ್ದಾನ ವಿವೇಕ ಪೂರ್ವವಾದದ್ದೆ ? ಅಥವಾ ಆತುರದ್ದೆ ? ವಿಚಾರಸಿದ್ಧವಲ್ಲದ ವಾಗ್ದಾನಕ್ಕೆ ಬೆಲೆ ಸಲ್ಲದು. ಎರಡನೆಯದಾಗಿ, ಅದರ ಅಕ್ಷರಾರ್ಥವನ್ನು ನೋಡಬೇಕೆ, ಅಥವಾ ತಾತ್ಪರ್ಯವನ್ನೆ ? ದಶರಥನ ಮನಸ್ಸಿನಲ್ಲಿದ್ದ ಆಶಯವೆಂಥಾದ್ದು ? ಜ್ಯೇಷ್ಠ ಪುತ್ರನನ್ನು ರಾಜ್ಯಭ್ರಷ್ಟನನ್ನಾಗಿ ಮಾಡಬೇಕೆಂಬುದೆ ? ಮೂರನೆಯದಾಗಿ, ಕೈಕೇಯಿ ಬೇಡಿದ ಬೇಡಿಕೆ ಕುಲಧರ್ಮ ದೇಶ

ಧರ್ಮಗಳಿಗೆ ಸಮ್ಮತವಾಗಿದ್ದದ್ದೆ? ಆಕೆ ಏನು ಬೇಕೆಂದರೆ ಅದನ್ನು ಕೊಡುವುದು ಧರ್ಮವಾಗುತ್ತಿತ್ತೆ? ''ಕೌಸಲ್ಯೆಯನ್ನು ಪರಿತ್ಯಾಗಮಾಡು'' ಎಂದು ಆಕೆ ಕೇಳಿದ್ದಿದ್ದರೆ ಅದು ಊರ್ಜಿತವಾಗತಕ್ಕದ್ದಿತ್ತೆ?

ಈ ವಿಧವಾದ ತರ್ಕಯುಕ್ತಿಗಳು ಸಂಗತವಾಗುತ್ತವೆ - ಈ ಪ್ರಸಂಗದಲ್ಲಿ. ಆದರೆ ಅವು ರಾಮನಿಗೆ ಬೇಕಾಗಿರಲಿಲ್ಲ. ದಶರಥನ ವಾಗ್ದಾನದ ಯುಕ್ತಾಯುಕ್ತತೆಗಳನ್ನು ವಿಚಾರಿಸುವ ಅವಶ್ಯಕತೆ ರಾಮನಿಗೆ ಇರಲಿಲ್ಲ. ತಾನು ರಾಜ್ಯ ಪಡೆಯಬೇಕೆಂಬ ಇಚ್ಛೆ ಆತನಲ್ಲಿ ಕೊಂಚವಾದರೂ ಇದ್ದಿದ್ದರಲ್ಲವೆ ಆತನು ತಕರಾರಿನ ಕಾರಣಗಳನ್ನು ಹುಡುಕ ಬೇಕಾಗಿದ್ದದ್ದು? ಆತನಿಗೆ ಅಂಥ ಇಚ್ಛೆ ಸರ್ವಥಾ ಇರಲಿಲ್ಲ. ರಾಜ್ಯಕ್ಕಿಂತ ವನವಾಸವೇ ತನಗೆ ಇಷ್ಟವೆಂದು ಆತನು ಅಂತರಂಗದಲ್ಲಿ ಭಾವಿಸಿಕೊಂಡಿದ್ದನೋ ಎನ್ನಿಸುವಷ್ಟು ಮಟ್ಟಿನ ಸಿದ್ಧತೆಯಿಂದಲೂ ಉತ್ಸಾಹದಿಂದಲೂ ಶ್ರೀರಾಮನು ನಡೆದುಕೊಂಡ. ತ್ಯಾಗ ಸಿದ್ಧತೆಯೇ ಅಂದಿನ ಪ್ರಶ್ನೆಗೆ ಆತನ ಪ್ರತ್ಯುತ್ತರವಾಯಿತು.

ಮತ್ತೊಂದು ಉದಾಹರಣೆಯನ್ನು ನೋಡೋಣ : ಶ್ರೀರಾಮನು ಕಾಡಿನಲ್ಲಿದ್ದಾನೆ. ದಶರಥನು ಪುತ್ರವಿರಹದಿಂದ ದುಃಖಿತನಾಗಿ ತನ್ನ ರಾಣಿಯರೊಡನೆ ಪ್ರಲಾಪಿಸುತ್ತಿದ್ದಾನೆ:

ಮನ್ಯೇ ಖಲು ಮಯಾ ಪೂರ್ವಂ
ವಿವತ್ಸಾ ಬಹವಃ ಕೃತಾಃ।
ಪ್ರಾಣಿನೋ ಹಿಂಸಿತಾ ವಾಪಿ
ತಸ್ಮಾದಿದಮುಪಸ್ಥಿತಮ್॥

ಸ. ೩೯. ಶ್ಲೋ. ೪

''ನನಗೆ ಹೀಗೆ ತೋರುತ್ತದೆ. ಹಿಂದೆ ನಾನು ಯಾವಾಗಲೋ ಅನೇಕ ಮಂದಿ ತಂದೆತಾಯಿಯರನ್ನು ಅವರವರ ಮಕ್ಕಳಿಂದ ಅಗಲಿಸಿರಬೇಕು; ಅಥವಾ ಪ್ರಾಣಿಹಿಂಸೆ ಮಾಡಿರಬೇಕು. ಆ ಪಾಪದ ಫಲವಾಗಿ ನನಗೆ ಈಗ ಈ ಸಂಕಟ ಒದಗಿದೆ.''

> ಯದಾಚರತಿ ಕಲ್ಯಾಣಿ
> ಶುಭಂ ವಾ ಯದಿವಾಽಶುಭಮ್ ।
> ತದೇವ ಲಭತೇ ಭದ್ರೇ
> ಕರ್ತಾ ಕರ್ಮಜಮಾತ್ಮನಃ ॥

ಸ. ೬೩. ಶ್ಲೋ. ೬

"ಎಲೌ ಕೌಸಲ್ಯೆ , ಮನುಷ್ಯನು ಶುಭವನ್ನಾಗಲಿ ಅಶುಭವನ್ನಾಗಲಿ ಯಾವುದನ್ನು ಮಾಡುತ್ತಾನೆಯೋ ಅದನ್ನೇ ಹಿಂದಕ್ಕೆ ಪಡೆಯುತ್ತಾನೆ."

ಈ ತತ್ತ್ವಕ್ಕೆ ದೃಷ್ಟಾಂತವಾಗಿ ದಶರಥನು ತನ್ನ ಹಿಂದಿನ ಚರಿತ್ರೆಯೊಂದನ್ನು ಜ್ಞಾಪಕಕ್ಕೆ ತಂದುಕೊಳ್ಳುತ್ತಾನೆ. ಆತನು ಹಿಂದೆ ಎಂದೋ ಬೇಟೆಯಾಟಕ್ಕೆ ಹೋಗಿದ್ದಾಗ ರಾತ್ರಿಯಾಯಿತು. ಆ ಕತ್ತಲಿನಲ್ಲಿ ಅವನಿಗೆ ಒಂದು ಶಬ್ದ ಕೇಳಿ ಬಂತು. ಅದು ನೀರಾಡುತ್ತಿರುವ ಕಾಡಾನೆಯ ಶಬ್ದವೆಂದು ಆತನು ಭ್ರಾಂತಿಪಟ್ಟು ಆ ಕಡೆಗೆ ಬಾಣವನ್ನೆಸೆದ. ಆದರೆ ಆ ಬಾಣ ತಗುಲಿದ್ದು ಒಬ್ಬ ಋಷಿ ಪುತ್ರನಿಗೆ. ಹಾಗೆ ಹುಟ್ಟಿದ ಸದ್ದನ್ನು ದಶರಥನು ಮೃಗದ ಶಬ್ದವೆಂದು ಭ್ರಮಿಸಿ ಬಾಣಪ್ರಯೋಗಮಾಡಿದ. ಋಷಿ ಕುಮಾರನು ಪೆಟ್ಟುತಗುಲಿ ಪ್ರಾಣಬಿಟ್ಟ. ಯೋಚಿಸಿದ್ದು ಒಂದು; ಆದದ್ದು ಇನ್ನೊಂದು.

ದಶರಥನು ಆತುರದ ಮನುಷ್ಯ – ದುಡುಕಿನ ಸ್ವಭಾವದವನು – ಎಂದು ಇದರಿಂದ ತೋರುತ್ತದೆ. ಅವನು ಕೈಕೇಯಿಗೆ ವರಕೊಟ್ಟದ್ದೂ ದುಡುಕಿಯೇ ತಾನೆ ? ಹಿಂದು ಮುಂದು ನೋಡದೆ, ಬೇಡಿದ್ದನ್ನು ಕೊಡುತ್ತೇನೆಂದು ಹೇಳಿದನಲ್ಲವೆ? ವಾಗ್ದಾನ ಮಾಡುವಾಗ ವಸ್ತು ನಿಜವಾಗಿ ನನ್ನದೆ ; ನನ್ನದಾದ ಮೇಲೆ ನಾನು ಸ್ವತಂತ್ರನು, ಮಿಕ್ಕದ್ದನ್ನು ಕೇಳಲಾಗದು – ಎಂದು ನಿಬಂಧನೆ ಮಾಡಿದನೆ? ಇಲ್ಲ. ಈ ಮುನ್ನಾಲೋಚನೆಯೇ ಇಲ್ಲ. ಆಮೇಲೆ ಕೈಕೇಯಿ ಬೇಡಿದಾಗ ಆ ಬೇಡಿಕೆ ಉಚಿತವೆ. ಅನುಚಿತವೇ ಎಂಬ ವಿಚಾರಕ್ಕೆ ಅವನು ಅವಕಾಶವನ್ನುಳಿಸಿಕೊಂಡಿದ್ದನೆ ? ಅಂಥ ಯಾವ ಸಂಭವವನ್ನೂ ಆತನು ಆಲೋಚಿಸಲಿಲ್ಲ. ಮೋಹಿನಿ ಏನನ್ನೋ ಕೇಳಿದಳು ; ಮುಗ್ಧನು "ಅದೇನಾದರೂ ನಿನ್ನದು" ಎಂದ. ದಶರಥನಿಗೆ ಯುದ್ಧಕಾಲದಲ್ಲಿ

ಹೆಂಡತಿಯನ್ನು ಮೆಚ್ಚಿಕೊಳ್ಳುವ ಆತುರ ; ಬೇಟೆಯ ಕಾಲದಲ್ಲಿ ಬುಟ್ಟಿ ತುಂಬಿಸಿಕೊಳ್ಳಬೇಕೆಂಬ ಆತುರ. ಬೇರೆ ಸದ್ಗುಣಗಳು ಸಾವಿರವಿದ್ದರೇನು? ಧೈರ್ಯದಿಂದಲೂ ಔದಾರ್ಯದಿಂದಲೂ ಮೆರೆದ ಆ ಮಹಾರಾಯನಲ್ಲಿ ದುಡುಕು ಬುದ್ಧಿ ಒಂದು ದುರ್ಬಲತೆಯಾಯಿತು. ಪೂರ್ವಾಪರ ವಿಚಾರವಿಲ್ಲದೆ ನಡೆದ ನಡವಳಿಕೆ ಪ್ರಮಾದವಾದೀತು.

ವಾಲ್ಮೀಕಿ ಪ್ರಪಂಚದಲ್ಲಿಯ ಮತ್ತೊಬ್ಬ ಆದರ್ಶ ವ್ಯಕ್ತಿಯೆಂದರೆ, ಭರತ. ಭರತನ ತ್ಯಾಗ ದೊಡ್ಡದೋ ರಾಮನ ತ್ಯಾಗ ದೊಡ್ಡದೋ ನಿರ್ಧರ ಮಾಡುವುದು ಸುಲಭವಲ್ಲ. ವಾಲ್ಮೀಕಿ ಚಿತ್ರಿಸಿರುವ ಜಗತ್ತಿನಲ್ಲಿಯ ರಾಮ, ಸೀತೆ, ಲಕ್ಷ್ಮಣ, ಭರತ, ಆಂಜನೇಯ – ಈ ಐವರೂ ತ್ಯಾಗವೀರರು. ಅವರಲ್ಲಿ ಅತ್ಯುನ್ನತರಾರು ? ನಾವು ಒಂದು ದೊಡ್ಡ ಕಾಡಿನಲ್ಲಿ ನಿಂತು ತಲೆಯೆತ್ತಿ ನೋಡಿದರೆ ವೃಕ್ಷಾಗ್ರಗಳು ಎಲ್ಲೆಲ್ಲೂ ಮುಗಿಲನ್ನು ಮುಟ್ಟುವಂತೆ ಕಾಣುತ್ತವೆ. ಅವುಗಳಲ್ಲಿ ಹೆಚ್ಚು ದೊಡ್ಡದು ಯಾವುದು ? ಅವೆಲ್ಲವೂ ನಮಗಿಂತ ದೊಡ್ಡವೇ. ಒಂದು ಮಟ್ಟದವರೆಗೆ – ನಮ್ಮ ಕೈಗೆ ಎಟುಕುವಷ್ಟು ಎತ್ತರದವರೆಗೆ – ನಾವು ಬೇರೆ ವಸ್ತುವಿನ ಎತ್ತರವನ್ನು ಅಳೆಯಲಾಗುತ್ತದೆ. ಆ ಮಟ್ಟದಿಂದ ಮೇಲೆ ನಾಲ್ಕಾರು ಆಳುದ್ದಕ್ಕಿಂತ ಹೆಚ್ಚಾಗಿ ಮರವೋ ಬೆಟ್ಟವೋ ಬೆಳೆದಿದ್ದರೆ ಆ ಹೆಚ್ಚಿನ ಅಳತೆಯನ್ನು ಗೊತ್ತು ಮಾಡುವುದು ನಮ್ಮ ಬರಿಯ ಕಣ್ಣುಗಳಿಗೆ ಶಕ್ಯವಾಗದು. ಮಹಾಪುರುಷರ ಸ್ವಭಾವದ ಔನ್ನತ್ಯವೂ ಹಾಗೆ ನಮ್ಮ ಅಳತೆಗೋಲಿನ ತಾರತಮ್ಯ ನಿರ್ಣಯಕ್ಕೆ ಸಿಕ್ಕಲಾರದು. ನಾವು ಆ ಎಲ್ಲ ಮೂರ್ತಿಗಳಿಗೂ ದೂರದಿಂದ ತಲೆಬಾಗಿ ಕೈಮುಗಿಯತಕ್ಕವರು.

ರಾಮನಿಗೆ ಕೋಸಲ ರಾಜ್ಯವು ಹಿಂದಿನ ಕುಲಸಂಪ್ರದಾಯದಿಂದ ತಾನಾಗಿ ಬರತಕ್ಕದ್ದಿತ್ತು. ದಶರಥನು ಆ ವಿಚಾರಕ್ಕೆ ಕೈ ಹಾಕದೆ ಇದ್ದಿದ್ದರೆ – ಕೈಕೇಯಿಗೆ ಮಂಥರೆ ಹೇಳಿಕೊಡದೆ ಇದ್ದಿದ್ದರೆ – ಆ ಆತುರ ವಾಗ್ದಾನದ ನಿಮಿತ್ತವಿಲ್ಲದೆ ಹೋಗಿದ್ದಿದ್ದರೆ, – ಕೋಸಲ ರಾಜ್ಯವು ಯಾರ ಪ್ರಯತ್ನವೂ ಇಲ್ಲದೆ, – ಯಾರ ಮಾತೂ ಬೇಕಿಲ್ಲದೆ, – ರಾಮನದಾಗುತ್ತಿತ್ತು . ಹೀಗೆ ದೇಶ ಸಂಪ್ರದಾಯದಿಂದ ತನ್ನದೇ ಆಗಿಬಂದಿದ್ದ ರಾಜ್ಯವನ್ನು ಸತ್ಯಪಾಲನೆಯ ನಿಯಮಕ್ಕೆ ತಾನಾಗಿ ತಲೆಬಾಗಿ ತ್ಯಾಗ ಮಾಡಿದವನು ರಾಮ.

ಭರತನಿಗಾದರೋ ರಾಜ್ಯವು ಎರಡು ಸಾರಿ ಪ್ರದತ್ತವಾಗಿ ಬಂದಿತ್ತು , - ಮೊದಲು ತಾಯಿತಂದೆಯರ ಮಾತಿನಿಂದ; ಬಳಿಕ ರಾಮನ ಸ್ವಂತ ಮಾತಿನಿಂದ. ಹೀಗೆ ಪುನಃ ಪುನಃ ತನ್ನ ಪಾಲಿಗೆ ಬಂದದ್ದನ್ನು ಬಿಟ್ಟುಕೊಟ್ಟವನು ಭರತ. ಅಷ್ಟು ಮಾತ್ರವೇ ಅಲ್ಲ, ಶ್ರೀರಾಮನು ರಾಜ್ಯವನ್ನಂಗೀಕರಿಸದೆ ಅದನ್ನು ಭರತನೇ ಆಳತಕ್ಕದ್ದೆಂದು ಒತ್ತಾಯ ಪಡಿಸಿದಾಗ ಭರತನು ಸಿಂಹಾಸನ್ನವನ್ನೇರಿದನೆ ? ಇಲ್ಲ . ಅವನು ರಾಮಪಾದುಕೆಯನ್ನು ರಾಮ ಲಾಂಛನವಾಗಿ ಗ್ರಹಿಸಿ, ಅದೇ ಪ್ರತ್ಯಕ್ಷ ರಾಮಮೂರ್ತಿ ಎಂಬಂತೆ ಅದನ್ನು ಗೌರವಿಸಿ ಪೂಜಿಸಿ, ತನ್ನ ಆಡಳಿತವನ್ನು ಬೇರೊಬ್ಬ ಯಜಮಾನನಿಗೆ ಒಪ್ಪಿಸುವ ಕಾರಕೂನನಂತೆ ತನ್ನ ರಾಜ್ಯಕಾರ್ಯಗಳನ್ನು ರಾಮಪಾದುಕೆಗೆ ಒಪ್ಪಿಸಿ ರಾಜ್ಯ ನಿರ್ವಾಹ ಮಾಡಿದ. ಅದು ಲೋಕೋತ್ತರವಾದ ಕರ್ತವ್ಯ ನಿಷ್ಠೆಯ ಪ್ರಕರಣ.

ಯದಾ ಹಿ ಯತ್ಕಾರ್ಯಮುಪೈತಿ ಕಿಂಚಿತ್
ಉಪಾಯನಂ ಚೋಪಹೃತಂ ಮಹಾರ್ಹಮ್ ।
ಸ ಪಾದುಕಾಭ್ಯಾಂ ಪ್ರಥಮಂ ನಿವೇದ್ಯ
ಚಕಾರ ಪಶ್ಚಾದ್ಭರತೋ ಯಥಾವತ್ ॥

ರಾಜ್ಯದ ವೈಭವವನ್ನು ತೊರೆದು ರಾಜ್ಯದ ಭಾರವನ್ನು ಮಾತ್ರ ಹೊತ್ತವನು ಭರತ. ಅವನು ತಪಸ್ವಿ ; ಆದರೆ ಕರ್ತವ್ಯನಿಷ್ಠನಾದ ತಪಸ್ವಿ. ಲೋಕವನ್ನೂ ಲೋಕ ವಿರಕ್ತಿಯನ್ನೂ ಸಮನ್ವಯಪಡಿಸಿಕೊಂಡಿದ್ದ ಮಹಾನುಭವ ಭರತ.

ಈಶಾವಾಸ್ಯೋಪನಿಷತ್ತಿನ -
"…….ತೇನ ತ್ಯಕ್ತೇನ ಭುಂಜೀಥಾಃ…………।
ಕುರ್ವನ್ನೇವೇಹ ಕರ್ಮಾಣಿ।
ಜಿಜೀವಿಷೇಚ್ಛತಗ್ ಸಮಾಃ ॥"

ಈ ಉಪದೇಶವನ್ನು ಅನುಸರಿಸಿದವನು ಭರತ. ವೈರಾಗ್ಯ ಮತ್ತು ಇಹಜೀವನ - ಈ ಎರಡರ ಸಮರಸ ಸಮ್ಮೇಳನಾಭ್ಯಾಸವನ್ನು ತೋರಿಸಿದ್ದು ಭರತನ ಅಪೂರ್ವ ಮಹಾತ್ಮೆ.

ಭರತನು ಶ್ರೀರಾಮಪಾದುಕೆಗಳನ್ನು ತಲೆಯ ಮೇಲೆ ಧರಿಸಿ ಅದರ ಕೀರ್ತಿಯನ್ನು ರಾಜ್ಯದಲ್ಲಿ ಘೋಷಿಸಿ, ಶ್ರೀರಾಮನ ಪುನರಾಗಮನದವರೆಗೂ ಯತಿಯಾಗಿ, ಕೃಶನಾಗಿ, ಭಕ್ತನಾಗಿ, ವಿನೀತನಾಗಿ, ಸತ್ಯಧರ್ಮ ನಿಷ್ಠನಾಗಿ ವ್ರತಪರಿಪೂರಣೆ ಮಾಡಿದ ಪ್ರಸಂಗಗಳ ವರ್ಣನೆ ಎಂಥವರಿಗಾದರೂ ಹೃದಯವನ್ನು ಕಲಕಿ ಕರಗಿಸಿ ಜೀವವನ್ನು ಜಾಲಾಡಿಸತಕ್ಕದ್ದಾಗಿದೆ.

೯೯ನೆಯ ಸರ್ಗದಿಂದ ೧೧೯ನೆಯ ಸರ್ಗದವರೆಗಿನ ಗ್ರಂಥವನ್ನು - ಕನ್ನಡ ಅನುವಾದವನ್ನೂ ಸಂಸ್ಕೃತ ಮೂಲವನ್ನೂ ಜೋಡಿಸಿಕೊಂಡು - ಒಂದು ಸಾರಿ ನೋಡಿದವರು ಮತ್ತೆ ಮತ್ತೆ ನೋಡಿಯಾರೆಂದು ನನಗೆ ನಂಬಿಕೆಯಿದೆ. ಅಲ್ಲಿಯ ಸನ್ನಿವೇಶಗಳೂ ಅಲ್ಲಲ್ಲಿಯ ಉಕ್ತಿ ಪ್ರತ್ಯುಕ್ತಿಗಳೂ ಅಷ್ಟು ಸುಂದರಗಳಾಗಿವೆ.

ಅಯೋಧ್ಯಾಕಾಂಡವು ಸೀತಾರಾಮರ ರಸಿಕ ಜೀವನ ಚಿತ್ರದಲ್ಲಿ ಪರಿಸಮಾಪ್ತವಾಗಿ ಮಂಗಳಕರವಾಗಿದೆ. ಅನಸೂಯೆಯು ಸೀತೆಯನ್ನು ಕುರಿತು ಹೇಳಿದಳಂತೆ : ''ದೇವಿ, ರಾತ್ರಿಯು ರಮಣೀಯವಾಗಿದೆ. ಮೃಗಪಕ್ಷಿಗಳು ನಿದ್ದೆ ಹೋಗುವ ಹೊತ್ತು ಇದು. ಬೆಳದಿಂಗಳು ಹರ್ಷಪ್ರದವಾಗಿದೆ. ನೀನು ಶುಭಾಲಂಕಾರಗಳನ್ನು ಧರಿಸಿ ಶ್ರೀರಾಮನ ಬಳಿಯಲ್ಲಿರಲು ಮನಸ್ಸು ಮಾಡು.''

ಪುನಃ ಸೀತೆಯನ್ನು ನೋಡಿ ಹೀಗೆಂದಳು :

ಅಲಂಕುರು ಚ ತಾವತ್ತ್ವಂ
　　ಪ್ರತ್ಯಕ್ಷಂ ಮಮ ಮೈಥಿಲಿ।
ಪ್ರೀತಿಂ ಜನಯ ಮೇ ವತ್ಸೇ
　　ದಿವ್ಯಾಲಂಕಾರ ಶೋಭಿತಾ ॥

ಶ್ರೀ ಸೀತಾರಾಮರ ಅನುಗ್ರಹದಿಂದ ವಾಚಕರು ಶ್ರೇಯೋಭಿವೃದ್ಧಿ ಪಡೆಯಲಿ.

ಡಿ. ವಿ. ಜಿ.

ಶ್ರೀರಾಮಚಂದ್ರ ಸುಪ್ರಭಾತಮ್

ವಿದ್ವಾನ್ ಕೆ.ಎಸ್. ಭಾಸ್ಕರಭಟ್ಟರು

ಕೌಸಲ್ಯಾ ಸುಪ್ರಜಾ ರಾಮ ಪೂರ್ವಾ ಸಂಧ್ಯಾ ಪ್ರವರ್ತತೇ ।
ಉತ್ತಿಷ್ಠ ನರಶಾರ್ದೂಲ ಕರ್ತವ್ಯಂ ದೈವಮಾಹ್ನಿಕಮ್ ॥

(ಇತಿ ಶ್ರೀಮದ್ರಾಮಾಯಣೇ)

ಹೇ ಶ್ರೀರಾಮ, ನಿನಗೆ ಜನ್ಮವಿತ್ತ ಕೌಸಲ್ಯೆ ಧನ್ಯಳು. ಬೆಳಗಾಗುತ್ತ ಬಂದಿದೆ. ಹೇ ಪುರುಷೋತ್ತಮ, ಏಳು, ದೇವತಾಸಂಬಂಧಿಯಾದ ಪ್ರಾತರಾಹ್ನಿಕವನ್ನು ಆಚರಿಸಬೇಕು.

ಉತ್ತಿಷ್ಠ ಕೋಸಲಾಧೀಶ ಕೌಸಲ್ಯಾನಂದವರ್ಧನ ।
ಉತ್ತಿಷ್ಠ ಜಾನಕೀಜಾನೇ ಜಗನ್ಮಂಗಲಮಾತನು ॥ ೧

ಹೇ ಕೋಸಲೇಶ್ವರ, ಕೌಸಲ್ಯಾನಂದವರ್ಧನ, ಜಾನಕೀರಮಣ, ಜಾಗ್ರತನಾಗು. ಜಗತ್ತಿಗೆ ಮಂಗಳವನ್ನುಂಟುಮಾಡು.

ಶ್ವೇತಾಂಬುಜಾತಹಸಿತೇ ಜನಕಾತ್ಮಜಾತೇ
ಸೀತೇ ಪವಿತ್ರಚರಿತೇ ಪತಿದೇವತಾ ತ್ವಮ್ ।
ಪೂತೇ ಶಚೀಪತಿನುತೇ ದಶಕಂಠಕಂಠ –
ವ್ರಾತಚ್ಛಿದಃ ಪ್ರಿಯತಮೇ ತವ ಸುಪ್ರಭಾತಮ್ ॥ ೨

ಹೇ ಜನಕರಾಜತನಯೆ, ಸೀತೆ, ನಿನ್ನ ಮುಗುಳ್ನಗೆ ಬೆಳ್ದಾವರೆಯಂತೆ ಮನೋಹರವಾದದ್ದು. ಹೇ ಪುಣ್ಯಚರಿತೆ, ನೀನು ಪತಿವ್ರತಾಶಿರೋಮಣಿ. ದೇವೇಂದ್ರ ಸನ್ನುತಳಾದ ಪುಣ್ಯಾತ್ಮಳು. ದಶಕಂಠನ ಕಂಠಗಳನ್ನು ಕತ್ತರಿಸಿ ಎಸೆದ ಶ್ರೀರಾಮನ ಪ್ರಿಯತಮೆ. ನಿನಗೆ ಸುಪ್ರಭಾತವಾಗಲಿ!

ಏಷಾ ವಿದೇಹತನಯಾ ಭವದಂತರಂಗಂ
ಶ್ರೀರಾಮ ವಿಶ್ವಜನನೀ ನನು ಪಾದಮೂಲೇ।
ಛಾಯೇವ ತಿಷ್ಠತಿ ವಿಭೋ ತವ ಪಾದಪದ್ಮ –
ನ್ಯಾಸಾನುವೃತ್ತಿಕುಶಲಾ ಹಿ ಕುಶಸ್ಯ ಮಾತಾ ॥ ೩

ಶ್ರೀರಾಮ, ಈ ವಿದೇಹರಾಜಪುತ್ರಿಯು ನಿನ್ನ ಅಂತರಂಗ ಸ್ವರೂಪಳು. ಈ ಜಗನ್ಮಾತೆಯು ನಿನ್ನ ಪಾದಮೂಲದಲ್ಲಿ ನಿನ್ನ ನೆರಳಿನಂತೆ ನಿಂತಿದ್ದಾಳೆ. ಹೇ ಪ್ರಭು, ಕುಶನ ಮಾತೆಯಾದ ಈ ದೇವಿಯು ನಿನ್ನ ಹೆಜ್ಜೆಯನ್ನನುಸರಿಸಿ ನಡೆಯುವುದರಲ್ಲಿ ಪ್ರವೀಣಳು.

ಸಾಧ್ವೀಶಿರೋಮಣಿರಿಯಂ ಭ್ರಮರೀವ ಲೋಲಾ
ದ್ರಷ್ಟುಂ ವಿಕಸ್ವರಮುಖಾಂಬುಜಮಾಶ್ರಿತಶ್ರಿ।
ಕಾಕುತ್ಸ್ಥ ಕಾಂಕ್ಷತಿ ಪುರೋಽರುಣಸಾರಥಿಶ್ಚ
ಸ್ವಾಮಿನ್ ಕೃಪಾಂ ಕುರು ವಿಭೋ ತವ ಸುಪ್ರಭಾತಮ್ ॥ ೪

ಪತಿವ್ರತಾಶಿರೋಮಣಿಯಾದ ಈ ಸೀತಾದೇವಿಯು ಲಕ್ಷ್ಮೀನಿವಾಸವಾದ ನಿನ್ನ ಮುಖಕಮಲವು ಅರಳುವುದನ್ನು ನೋಡುವುದಕ್ಕಾಗಿ ಹೆಣ್ಣು ದುಂಬಿಯಂತೆ ಆಸಕ್ತಿಯಿಂದ ಕಾದಿದ್ದಾಳೆ. ಇತ್ತ ಅರುಣಸಾರಥಿಯಾದ ಸೂರ್ಯನೂ ನಿನ್ನ ಮುಖ ಕಮಲವು ಅರಳುವುದನ್ನು ನಿರೀಕ್ಷಿಸುತ್ತಿದ್ದಾನೆ. ಹೇ ಸ್ವಾಮಿ, ದಯೆದೋರು. ನಿನಗೆ ಸುಪ್ರಭಾತವಾಗಲಿ !

ವ್ಯೋಮಾಂಗಣೇನ ಸವಿತಾ ರಥಮದ್ಯ ನೇತುಂ
ವಿಪ್ರೈಃ ಸಮರ್ಪಿತಮುದಗ್ರಮರ್ಘಮರ್ಘ್ಯಮ್ ।
ಸ್ವೀಕೃತ್ಯ ಪೂರ್ವದಿಶಿ ವಾಂಛತಿ ತೇಽಭ್ಯನುಜ್ಞಾಂ
ಸೀತಾಮನೋಹರ ವಿಭೋ ತವ ಸುಪ್ರಭಾತಮ್ ॥ ೫

ಹೇ ಸ್ವಾಮಿ, ಬ್ರಾಹ್ಮಣರು ಸಮರ್ಪಿಸಿದ ಶ್ರೇಷ್ಠವಾದ ಅರ್ಘ್ಯವನ್ನು ಸೂರ್ಯನು ಸ್ವೀಕರಿಸಿದ್ದಾನೆ. ಆತನು ತನ್ನ ರಥವನ್ನು ಸಜ್ಜುಮಾಡಿಕೊಂಡು ಗಗನ ತಳದಲ್ಲಿ ನಡೆಸಿಕೊಂಡುಹೋಗಲು ನಿನ್ನ ಅನುಮತಿಗೋಸ್ಕರ ಪೂರ್ವದಿಕ್ಕಿನಲ್ಲಿ ಕಾದಿದ್ದಾನೆ. ಹೇ ವಿಭು, ಸೀತಾಮನೋಹರ, ನಿನಗೆ ಸುಪ್ರಭಾತವಾಗಲಿ !

ತ್ವನ್ಮಂತ್ರಜಾಪಮಹಿಮಾನುಭವಾನ್ಮಹಾತ್ಮಾ
ನಿರ್ಮಾಯ ಪುಣ್ಯಚರಿತಂ ತವ ರಾಮಚಂದ್ರ ।
ವಲ್ಮೀಕಭೂರಜನಿ ಸರ್ವಕವೀಂದ್ರಮಾನ್ಯಃ
ಸೀತಾಮನೋಹರ ವಿಭೋ ತವ ಸುಪ್ರಭಾತಮ್ ॥ ೬

ಹೇ ರಾಮಚಂದ್ರ, ನಿನ್ನ ನಾಮಮಂತ್ರವನ್ನು ಜಪಿಸಿದ ಮಹಿಮೆಯ ಬಲದಿಂದ ಮಹಾತ್ಮನಾದ ವಾಲ್ಮೀಕಿಮುನಿಯು ನಿನ್ನ ಪುಣ್ಯಚರಿತ್ರವಾದ ರಾಮಾಯಣವನ್ನು ರಚಿಸಿದನು. ಆದರಿಂದ ಸರ್ವಕವೀಂದ್ರರಿಗೂ ಸಮ್ಮಾನ್ಯನಾದನು. ಹೇ ಸ್ವಾಮಿ, ಸೀತಾ ಮನೋಹರ, ನಿನಗೆ ಸುಪ್ರಭಾತವಾಗಲಿ !

ಬ್ರಹ್ಮರ್ಷಯಃ ಖಲು ಭವಂತಮುದಾರಶೀಲಂ
ಛಂದೋಭಿರೃಕ್‌ಪ್ರಭೃತಿಭಿಃ ಸತತಂ ಸ್ತುವಂತಿ ।
ಶ್ರೀರಾಮಚಂದ್ರ ಗುಣಸಾಂದ್ರ ವಿಪನ್ನ ಬಂಧೋ
ಸೀತಾಮನೋಹರ ವಿಭೋ ತವ ಸುಪ್ರಭಾತಮ್ ॥ ೭

ಹೇ ರಾಮಚಂದ್ರ, ಗುಣನಿಧಿ, ದೀನಬಂಧು, ಉದಾರಶೀಲನಾದ ನಿನ್ನನ್ನು ಬ್ರಹ್ಮರ್ಷಿಗಳು ಋಙ್ಮಂತ್ರವೇ ಮೊದಲಾದ ವೇದವಚನಗಳಿಂದ ನಿರಂತರವಾಗಿ ಸ್ತೋತ್ರ ಮಾಡುತ್ತಿದ್ದಾರೆ. ಹೇ ಸೀತಾಮನೋಹರ, ಸ್ವಾಮಿ, ನಿನಗೆ ಸುಪ್ರಭಾತವಾಗಲಿ !

ದೇವೇಂದ್ರದಾನವಕುಲೇಂದ್ರಕಪೀಂದ್ರಮುಖ್ಯಾ
ಗಾಯಂತಿ ಕೀರ್ತಿಮತುಲಾಂ ಭವತಃ ಕವೀಂದ್ರಾಃ ।
ವಾಲಿಪ್ರಣಾಶನ ದಶಾನನಶಾಸನೇಶ
ಪ್ರಖ್ಯಾತವಿಕ್ರಮ ರಘೋತ್ತಮ ಸುಪ್ರಭಾತಮ್ ॥ ೮

ವಾಲಿಯನ್ನು ಸಂಹರಿಸಿ ರಾವಣನನ್ನು ದಂಡಿಸಿದ ಹೇ ಪರಾಕ್ರಮಿ, ದೇವೇಂದ್ರ ವಿಭೀಷಣ ಸುಗ್ರೀವ ಮೊದಲಾದವರೂ ನಾನಾಕವೀಶ್ವರರೂ ನಿನ್ನ ಅಸದೃಶವಾದ ಕೀರ್ತಿಯನ್ನು ಹೊಗಳಿ ಹಾಡುತ್ತಿದ್ದಾರೆ. ಹೇ ರಾಘವೇಂದ್ರ, ನಿನಗೆ ಸುಪ್ರಭಾತವಾಗಲಿ !

ಶ್ರೇಣೀಮುಖಾ ಜನಪದಪ್ರಮುಖಾಶ್ಚ ಪೌರಾ
ದ್ರೋಣಾಮುಖಾಧಿಪತಯಃ ಸಚಿವಾ ಅಶೇಷಾಃ।
ಅಧ್ಯಾಸತೇ ತವ ಸಭಾಂ ಭವ ಸುಪ್ರಸನ್ನಃ
ಸಾಕೇತನಾಥ ರಘುಪುಂಗವ ಸುಪ್ರಭಾತಮ್ ॥ ೯

ಹೇ ಸಾಕೇತನಾಥ, ನಿನ್ನ ರಾಜಸಭೆಯಲ್ಲಿ ವಣಿಜರೂ ಮುಖ್ಯರಾದ ಪ್ರಜೆಗಳೂ ನಾಗರಿಕರೂ ಸಾಮಂತರಾಜರೂ ಸಕಲಮಂತ್ರಿಗಳೂ ಬಂದು ನೆರೆದಿದ್ದಾರೆ. ಅವರಿಗೆ ಪ್ರಸನ್ನನಾಗು. ಶ್ರೀರಾಮ, ನಿನಗೆ ಸುಪ್ರಭಾತವಾಗಲಿ!

ದಿಗ್ವಾರಣಪ್ರಗುಣಿನಾಂ ಪರವಾರಣಾನಾಂ
ಶ್ರೇಣಿಃ ಸ್ವಲಂಕೃತಿಜುಷಾಂ ನೃಪವಾರಣಾನಾಮ್।
ಆದಾಯ ಪುಷ್ಕರಪುಟೇ ನವಪುಷ್ಕರಾಣಿ
ಪ್ರೇಮ್ಣಾ ಪ್ರದಿತ್ಸತಿ ವಿಭೋ ತವ ಸುಪ್ರಭಾತಮ್ ॥ ೧೦

ಉತ್ತಮವಾದ ಅಲಂಕಾರಗಳನ್ನು ಧರಿಸಿರುವ ಈ ರಾಜಗಜಗಳು ದಿಗ್ಗಜಗಳಿಗಿಂತ ಶ್ರೇಷ್ಠವಾಗಿವೆ. ಇವು ಶತ್ರುಸೈನ್ಯವನ್ನು ಅಡ್ಡಗಟ್ಟಿ ಹೊಡೆದೋಡಿಸಬಲ್ಲವು. ಇವು ತಮ್ಮ ಸೊಂಡಿಲುಗಳಲ್ಲಿ ಹೊಸದಾಗಿ ಅರಳಿದ ತಾವರೆಗಳನ್ನು ಹಿಡಿದುಕೊಂಡು ಪ್ರೇಮದಿಂದ ನಿನಗೆ ಸಮರ್ಪಿಸುವುದಕ್ಕಾಗಿ ಕಾದು ನಿಂತಿವೆ. ಹೇ ಸ್ವಾಮಿ, ನಿನಗೆ ಸುಪ್ರಭಾತವಾಗಲಿ!

ರಥ್ಯೈಶ್ಚತುರ್ಭಿರಥ ಯುಕ್ತಮುದೀರ್ಣವೇಗೈಃ
ಪುಷ್ಯಂ ರಥಂ ಕನಕದಂಡಚಲತ್ಪತಾಕಮ್।
ಅಸ್ಮನ್ಮನೋರಥಶತೇನ ಸಹಾಧಿರೋಹ
ಪ್ರೀತ್ಯಾ ಮಹಾರಥ ವಿಭೋ ತವ ಸುಪ್ರಭಾತಮ್ ॥ ೧೧

ಹೇ ಮಹಾರಥ, ವೇಗಶಾಲಿಗಳಾದ ನಾಲ್ಕು ಕುದುರೆಗಳನ್ನು ಹೂಡಿದ ವಿಹಾರಾರ್ಥವಾದ ಪುಷ್ಯರಥವು ಸಿದ್ಧವಾಗಿದೆ. ಅದರ ಸುವರ್ಣಧ್ವಜದ ಮೇಲೆ ರಾಜಪತಾಕೆಯು ಹಾರಾಡುತ್ತಿದೆ. ನೀನು ಪ್ರೀತಿಯಿಂದ ರಥಾರೋಹಣವನ್ನು ಮಾಡು. ಅದರೊಡನೆ ನಮ್ಮ ನೂರಾರು ಮನೋರಥಗಳೂ ಸಿದ್ಧಿಸಿದವೆಂದು ತಿಳಿಯುತ್ತೇವೆ. ಹೇ ಪ್ರಭು, ನಿನಗೆ ಸುಪ್ರಭಾತವಾಗಲಿ!

ತ್ವನ್ನಾಮಕೀರ್ತನಪರಾಃ ಕಪಯಃ ಪ್ರವೀರಾ
ರೋಮಾಂಚಕಂಚುಕಧರಾ ನತಕಂಧರಾಂಸಾಃ ।
ಸಾನಂದಬಾಷ್ಪನಯನಾ ಹನುಮತ್ಪ್ರಧಾನಾಃ
ಪಾದಾನತಾ ರಘುಪತೇ ತವ ಸುಪ್ರಭಾತಮ್ ॥ ೧೨

ಹೇ ಶ್ರೀರಾಮ, ಹನುಮಂತನೇ ಮೊದಲಾದ ಕಪಿವೀರರು ವಿನಯದಿಂದ ತಮ್ಮ ಕಂಠಗಳನ್ನೂ ಹೆಗಲುಗಳನ್ನೂ ಬಾಗಿಸಿಕೊಂಡು ನಿನ್ನ ನಾಮವನ್ನು ಕೀರ್ತಿಸುತ್ತಿದ್ದಾರೆ. ಭಕ್ತ್ಯತಿಶಯದಿಂದ ಅವರ ದೇಹದಲ್ಲಿ ಕಂಚುಕದಂತೆ ರೋಮಾಂಚವಾಗಿದೆ. ಆನಂದಬಾಷ್ಪವನ್ನು ಸುರಿಸುತ್ತಿದ್ದಾರೆ. ನಿನ್ನ ಪಾದಗಳಿಗೆ ತಲೆಬಾಗಿದ್ದಾರೆ ಹೇ ರಘುನಾಯಕ, ನಿನಗೆ ಸುಪ್ರಭಾತವಾಗಲಿ !

ಪುಷ್ಪೋತ್ಕಿರಃ ಕಮಲರಾಜಿಪರಾಗವಾಹೀ
ಸಹ್ಯಾವನೀಧ್ರಭವನಿರ್ಝರವಾರಿಧಾರೀ ।
ವಾಯುಃ ಶನೈಃ ಪರಿವಹತ್ಯಭಿತೋ ಭವಂತಂ
ಸೀತಾಮನೋಹರ ವಿಭೋ ತವ ಸುಪ್ರಭಾತಮ್ ॥ ೧೩

ಮಂದಮಾರುತವು ಹೂಗಳನ್ನು ಉದುರಿಸುತ್ತ ತಾವರೆಗಳ ಪರಾಗವನ್ನು ಹೊತ್ತು ಬಂದಿದೆ ; ಸಹ್ಯ ಪರ್ವತದ ಚಿಲುಮೆಗಳ ನೀರಿನ ಕಣಗಳನ್ನು ಧರಿಸಿ ಶೀತಲವಾಗಿದೆ. ಈ ಮಾರುತವು ನಿನ್ನ ಬಳಿಯಲ್ಲಿ ಮೆಲ್ಲಗೆ ಸುಳಿದಾಡುತ್ತಿದೆ. ಹೇ ಸೀತಾಮನೋಹರ, ನಿನಗೆ ಸುಪ್ರಭಾತವಾಗಲಿ !

ಗಾಯಂತಿ ಪಂಚಮರವೇಣ ಪಿಕಾಃ ಪ್ರಕಾಮಂ
ಕಾಂತಾಸ್ತಥಾ ಕ್ವಣಿತಚಾರುವಿಪಂಚಿಕಾಭಿಃ ।
ಕಾಕುತ್ಸ್ಥತೇ ವಿಶದಪಂಚವಟೀಪ್ರಪಂಚಂ
ಪಂಚಾನನಾಂಸ ರಘುನಂದನ ಸುಪ್ರಭಾತಮ್ ॥ ೧೪

ಹೇ ಕಾಕುತ್ಸ್ಥ, ಕೋಗಿಲೆಗಳು ಪಂಚಮಸ್ವರದಿಂದ ಗಾನ ಮಾಡುತ್ತಿವೆ. ಅಂಗನೆಯರು ಇಂಪಾಗಿ ಧ್ವನಿಮಾಡುವ ವೀಣೆಗಳಿಂದ ನಿನ್ನ ಪಂಚವಟೀಚರಿತ್ರೆಯನ್ನು ನುಡಿಸುತ್ತಿದ್ದಾರೆ. ಹೇ ಸಿಂಹಸ್ಕಂಧ, ರಘುನಂದನ, ನಿನಗೆ ಸುಪ್ರಭಾತವಾಗಲಿ !

ಸೌವರ್ಣಮಾಸನಮಿದಂ ನನು ಪಾದ್ಯಮೇತ –
ದ್ಗಾಂಗೇಯಮರ್ಘ್ಯಮಿದಮಷ್ಟಕಗಂಧಯುಕ್ತಮ್ ।
ನಾನಾನದೀನದಸಮಾಹೃತಮೇತದಂಭಃ
ಸ್ನಾಹಿ ಪ್ರಭೋ ದಶರಥಾತ್ಮಜ ಸುಪ್ರಭಾತಮ್ ॥ ೧೫

ಹೇ ಸ್ವಾಮಿ, ಇದು ಸುವರ್ಣಾಸನ; ಇದು ಪಾದ್ಯ; ಇದು ಗಂಗಾನದಿಯಿಂದ ತಂದಿರುವ ಅಷ್ಟಕಗಂಧಯುಕ್ತವಾದ ಅರ್ಘ್ಯ. ವಿವಿಧ ನದನದಿಗಳಿಂದ ತಂದ ನೀರು ಇಲ್ಲಿದೆ ; ಸ್ನಾನಮಾಡು. ಹೇ ದಾಶರಥಿ, ನಿನಗೆ ಸುಪ್ರಭಾತವಾಗಲಿ !

ಇಂದಿಂದಿರಾತ್ತಮಕರಂದರಸಾನುಬಂಧಂ
ಮಂದಾರಮಾಲ್ಯಮರವಿಂದಮುದಾರಗಂಧಮ್ ।
ಗಂಧಂ ಪುರಂದರಪುರಾಂಗಣಚಂದನೋತ್ಥಂ
ಪ್ರೀತ್ಯಾಗೃಹಾಣ ರಘುನಂದನ ಸುಪ್ರಭಾತಮ್ ॥ ೧೬

ಇದು ಮಂದಾರಮಾಲೆ ; ಇದು ಪರಿಮಳಯುಕ್ತವಾದ ತಾವರೆ. ದುಂಬಿಗಳು ಇವುಗಳ ಮಕರಂದವನ್ನು ಪಾನಮಾಡುತ್ತ ಮುತ್ತಿಕೊಂಡಿವೆ. ಇದು ನಂದನವನದ ಚಂದನದಿಂದ ರಚಿಸಿದ ಗಂಧ. ಇವೆಲ್ಲವನ್ನೂ ಸ್ವೀಕರಿಸು. ಹೇ ರಾಘವ, ನಿನಗೆ ಸುಪ್ರಭಾತವಾಗಲಿ !

ಮೋಹಾಂಧಕಾರಹರಣಂ ಹೃದಯಾಖ್ಯಪಾತ್ರೇ
ಸ್ನಿಗ್ಧೈರ್ಗುಣೈರನುಸೃತಂ ನನು ಭಕ್ತಿದೀಪಮ್ ।
ತುಭ್ಯಂ ಸಮರ್ಪಯಿತುಮಿಚ್ಛತಿ ಭಕ್ತಲೋಕಃ
ಸೀತಾಮನೋಹರ ವಿಭೋ ತವ ಸುಪ್ರಭಾತಮ್ ॥

ನಿನ್ನ ಈ ಭಕ್ತರು ಭಕ್ತಿಯೆಂಬ ದೀಪವನ್ನು ನಿನಗೆ ಅರ್ಪಿಸ ಬೇಕೆಂದಿದ್ದಾರೆ. ಇದು ಮೋಹವೆಂಬ ಕತ್ತಲೆಯನ್ನು ಹೋಗಲಾಡಿಸತಕ್ಕದ್ದು. ಹೃದಯವೆಂಬ ಹಣತೆಯಲ್ಲಿ ಸ್ನೇಹಯುಕ್ತವಾದ ಶಮದಮಾದಿ ಗುಣಗಳೆಂಬ ಬತ್ತಿಗಳಿಂದ ಕೂಡಿದ್ದು. ಹೇ ಸೀತಾಮನೋಹರ, ಸ್ವಾಮಿ, ನಿನಗೆ ಸುಪ್ರಭಾತವಾಗಲಿ !

ಯಸ್ಮಾದ್ವಿನಾ ದಿನಮಣೇ ರಜನೀಮಣಿಶ್ಚ
ಪ್ರದ್ಯೋತೇ ನ ಹಿ ತಡಿದ್ಭಗಣೋ ದ್ಯುಲೋಕಃ।
ನೀರಾಜನಂ ತವ ಚಿಕೀರ್ಷತಿ ಯೋಗಿವೃಂದಂ
ತೇಜೋನಿಧೇ ರಘುಪತೇ ನೃಪತೇ ಪ್ರಭಾತಮ್ ॥ ೧೮

ಸೂರ್ಯ, ಚಂದ್ರ, ಮಿಂಚು, ನಕ್ಷತ್ರ, ದೇವಲೋಕಗಳು ನಿನ್ನ ಅನುಗ್ರಹವಿಲ್ಲದೆ ಬೆಳಗಲಾರವು. ಅಂಥ ತೇಜೋನಿಧಿಯಾದ ನಿನಗೆ ಈ ಯೋಗಿಗಳು ಮಂಗಳಾರತಿಯನ್ನೆತ್ತಬೇಕೆಂದು ಕಾದಿದ್ದಾರೆ. ಹೇ ರಘುನಾಥ, ಮಹಾರಾಜ, ನಿನಗೆ ಸುಪ್ರಭಾತವಾಗಲಿ !

ವಿಧಿಮುಖವನಭಾಜಾಂ ವೇದವಲ್ಲೀತತೀನಾಂ
ಮಖಶತವಿಟಪಾನಾಂ ಮಂತ್ರಪುಷ್ಪಾಣ್ಯಮೂನಿ।
ಸದಯ ಪರಿಗೃಹಾಣ ಪ್ರಾಂಜಲಿಸ್ತೇಽರ್ಪಯಾಮಿ
ಪ್ರಣತವರದ ಸೀತಾರಾಮ ತೇ ಸುಪ್ರಭಾತಮ್ ॥ ೧೯

ಹೇ ಭಕ್ತರಕ್ಷಕ, ಬ್ರಹ್ಮನ ಮುಖಗಳಿಂದ ಹುಟ್ಟಿದ ವೇದಗಳೆಂಬ ಬಳ್ಳಿಗಳಿಗೆ ನಾನಾಯಜ್ಞಗಳೇ ಕೊಂಬೆಗಳು. ಅವುಗಳಲ್ಲಿ ಬಿಟ್ಟಿರುವ ಈ ಮಂತ್ರ ಪುಷ್ಪಗಳನ್ನು ಬದ್ಧಾಂಜಲಿಯಾಗಿ ನಿನಗೆ ಸಮರ್ಪಿಸುತ್ತಿದ್ದೇನೆ. ಹೇ ದಯಾಶಾಲಿ, ಇವುಗಳನ್ನು ಸ್ವೀಕರಿಸು. ಸೀತಾರಾಮ, ನಿನಗೆ ಸುಪ್ರಭಾತವಾಗಲಿ !

ಇತಿ ರಘುಕುಲಕೇತೋಃ ಪ್ರಾರ್ಥನಾಗೀತಮೇತ –
ನ್ಮೃದುಲಪದವಿಶಿಷ್ಟಂ ಹೃದ್ಯಪದ್ಯಪ್ರಬಂಧಮ್ ।
ಪರಮಪುರುಷ ತೇಽಸ್ತು ಪ್ರೀತಯೇ ಸುಪ್ರಭಾತಂ
ಜಲಜಮಿವ ವಿಭಾತೇ ಭಾಸ್ಕರೇಣೋಪನೀತಮ್ ॥ ೨೦

ಹೇ ರಘುಕುಲತಿಲಕ, ಈ ಪ್ರಾರ್ಥನಾಗೀತವು ಮೃದುಪದಗಳಿಂದ ವಿಶಿಷ್ಟವಾಗಿ ಮನೋಹರವಾದ ಪದ್ಯಗಳಿಂದ ಕೂಡಿದೆ. ಹೇ ಪರಮಾತ್ಮ, ಬೆಳಗಾಗುವಾಗ ಭಾಸ್ಕರನು ಅರಳಿಸಿ ತಂದ ಕಮಲದಂತಿರುವ ಈ ಸುಪ್ರಭಾತವು ನಿನಗೆ ಸಂತೋಷವನ್ನುಂಟುಮಾಡಲಿ ! ಈ ಸುಪ್ರಭಾತವನ್ನು ಭಾಸ್ಕರನು ತಂದಿರುವನು. ಈ 'ಸುಪ್ರಭಾತ'ವೆಂಬ ಕವನವನ್ನು ಭಾಸ್ಕರನೆಂಬ ಕವಿಯು ನಿರ್ಮಿಸಿರುವನು. ಇದರಿಂದ ನಿನಗೆ ಸಂತೋಷವಾಗಲಿ.

ಅನುಕ್ರಮಣಿಕೆ

ಸರ್ಗ	ವಿಷಯ	ಪುಟ
೫೭	ಸುಮಂತ್ರೋಪಾವರ್ತನಮ್ (ಸುಮಂತ್ರನು ಅಯೋಧ್ಯೆಗೆ ಹಿಂದಿರುಗಿ ಬರುವುದು)	೧
೫೮	ರಾಮಂದೇಶಾಖ್ಯಾನಮ್ (ಸುಮಂತ್ರನು ದಶರಥನಿಗೆ ಶ್ರೀರಾಮನ ಸಂದೇಶವನ್ನು ತಿಳಿಸುವುದು)	೭
೫೯	ದಶರಥವಿಲಾಪಃ (ಶ್ರೀರಾಮನ ವೃತ್ತಾಂತವನ್ನು ಕೇಳಿ ದಶರಥನ ವಿಲಾಪ)	೧೪
೬೦	ಕೌಸಲ್ಯಾಸಮಾಶ್ವಾಸನಮ್ (ಕೌಸಲ್ಯೆಗೆ ಸುಮಂತ್ರನು ಸಮಾಧಾನ ಹೇಳುವುದು)	೨೨
೬೧	ಕೌಸಲ್ಯೋಪಾಲಂಭಃ (ಕೌಸಲ್ಯೆಯು ದಶರಥನನ್ನು ಆಕ್ಷೇಪಿಸುವುದು)	೨೭
೬೨	ಕೌಸಲ್ಯಾಪ್ರಸಾದನಮ್ (ಕೌಸಲ್ಯೆಯು ದಶರಥನ ಕ್ಷಮೆಯನ್ನು ಬೇಡುವುದು)	೩೩
೬೩	ಋಷಿಕುಮಾರವಧಾಖ್ಯಾನಮ್ (ಋಷಿಕುಮಾರನನ್ನು ತಾನು ಕೊಂದ ವೃತ್ತಾಂತವನ್ನು ದಶರಥನು ಕೌಸಲ್ಯೆಗೆ ಹೇಳುವುದು)	೩೭
೬೪	ದಶರಥದಿಷ್ಟಾಂತಃ (ದಶರಥನ ಮರಣ)	೪೭
೬೫	ಅಂತಃಪುರಾಕ್ರಂದಃ (ದಶರಥನ ಮರಣಕ್ಕಾಗಿ ರಾಜಪತ್ನಿಯರ ಶೋಕ)	೬೧
೬೬	ತೈಲದ್ರೋಣ್ಯಧಿಶಯನಮ್ (ದಶರಥನ ದೇಹವನ್ನು ಎಣ್ಣೆಯ ಕೊಪ್ಪರಿಗೆಯಲ್ಲಿಡುವುದು)	೬೬
೬೭	ಅರಾಜಕದುರವಸ್ಥಾವರ್ಣನಮ್ (ರಾಜನಿಲ್ಲದ ರಾಷ್ಟ್ರದಲ್ಲಿ ಸಂಭವಿಸುವ ದುರವಸ್ಥೆಯ ವರ್ಣನೆ)	೭೨
೬೮	ದೂತಪ್ರೇಷಣಮ್ (ಭರತನನ್ನು ಕರೆತರುವುದಕ್ಕಾಗಿ ವಸಿಷ್ಠರು ದೂತರನ್ನು ಕಳಿಸುವುದು)	೭೯
೬೯	ಭರತದುಃಸ್ವಪ್ನಃ (ಭರತನಿಗಾದ ದುಃಸ್ವಪ್ನ)	೮೪
೭೦	ಭರತಪ್ರಸ್ಥಾನಮ್ (ಅಯೋಧ್ಯೆಗೆ ಭರತನ ಪ್ರಯಾಣ)	೮೮
೭೧	ಅಯೋಧ್ಯಾಗಮನಮ್ (ಭರತನು ಅಯೋಧ್ಯೆಗೆ ಬಂದು ಸೇರುವುದು)	೯೪

೭೨ ಭರತಸಂತಾಪಃ (ದಶರಥನ ಮರಣವಾರ್ತೆಯನ್ನೂ ಶ್ರೀರಾಮನ ವನಪ್ರಯಾಣವನ್ನೂ ತಿಳಿದು ಭರತನ ದುಃಖ) ೧೧೩

೭೩ ಕೈಕೇಯೀವಿಗರ್ಹಣಮ್ (ಭರತನು ಕೈಕೇಯಿಯನ್ನು ನಿಂದಿಸುವುದು) ೧೧೩

೭೪ ಕೈಕೇಯ್ಯಾಕ್ರೋಶಃ (ಭರತನು ಕೈಕೇಯಿಯನ್ನು ಪುನಃ ನಿಂದಿಸುವುದು) ೧೧೮

೭೫ ಭರತಶಪಥಃ (ತನಗೆ ಏನೂ ಗೊತ್ತಿರಲಿಲ್ಲವೆಂದು ಭರತನು ಕೌಸಲ್ಯೆಯ ಬಳಿಯಲ್ಲಿ ಆಣೆಯಿಡುವುದು) ೧೨೫

೭೬ ದಶರಥೌರ್ಧ್ವದೈಹಿಕಮ್ (ದಶರಥನ ಉತ್ತರಕ್ರಿಯೆ) ೧೩೬

೭೭ ಭರತಶತ್ರುಘ್ನವಿಲಾಪಃ (ಭರತಶತ್ರುಘ್ನರು ತಂದೆಯನ್ನು ನೆನೆಸಿಕೊಂಡು ದುಃಖಿಸುವುದು) ೧೪೦

೭೮ ಕುಬ್ಜಾವಿಕ್ಷೇಪಃ (ಮಂಥರೆಯನ್ನು ಕಂಡು ಶತ್ರುಘ್ನನ ಕೋಪ) ೧೪೬

೭೯ ಸಚಿವಪ್ರಾರ್ಥನಾಪ್ರತಿಷೇಧಃ (ಭರತನು ರಾಜನಾಗಲೆಂಬ ಸಚಿವರ ಪ್ರಾರ್ಥನೆಯನ್ನು ಅವನು ನಿರಾಕರಿಸುವುದು) ೧೫೧

೮೦ ಮಾರ್ಗಸಂಸ್ಕಾರಃ (ಗಂಗಾನದಿಯವರೆಗೆ ಮಾರ್ಗವನ್ನು ಸರಿಪಡಿಸುವುದು) ೧೫೪

೮೧ ಸಭಾಸ್ಥಾನಮ್ (ವಸಿಷ್ಠರು ರಾಜಸಭೆಗೆ ಬಂದು ಭರತನನ್ನು ಕರೆಸುವುದು) ೧೫೯

೮೨ ಸೇನಾಪ್ರಸ್ಥಾನಮ್ (ವನಕ್ಕೆ ಹೊರಡಲು ಸಿದ್ಧವಾಗಬೇಕೆಂದು ಭರತನು ಸೇನೆಗೆ ಆಜ್ಞಾಪಿಸುವುದು) ೧೬೨

೮೩ ಭರತವನಪ್ರಸ್ಥಾನಮ್ (ಭರತನು ಗಂಗಾತೀರವನ್ನು ಸೇರುವುದು) ೧೬೯

೮೪ ಗುಹಾಗಮನಮ್ (ಗುಹನು ಭರತನನ್ನು ಸಂದರ್ಶಿಸುವುದು) ೧೭೪

೮೫ ಗುಹಸಮಾಗಮಃ (ಭರತನು ಗುಹನೊಡನೆ ತನ್ನ ದುಃಖವನ್ನು ಹೇಳಿಕೊಳ್ಳುವುದು) ೧೭೭

೮೬ ಗುಹವಾಕ್ಯಮ್ (ಲಕ್ಷ್ಮಣನು ಆಡಿದ ಮಾತನ್ನು ಗುಹನು ಭರತನಿಗೆ ಹೇಳುವುದು) ೧೮೨

೮೭ ರಾಮಶಯನಾದಿಪ್ರಶ್ನಃ (ಶ್ರೀರಾಮನ ವೃತ್ತಾಂತವನ್ನು ಭರತನು ವಿವರವಾಗಿ ಕೇಳುವುದು) ೧೮೭

೮೮ ಶಯ್ಯಾನುವೀಕ್ಷಣಮ್ (ಶ್ರೀರಾಮನು ಮಲಗಿದ್ದ ಸ್ಥಳವನ್ನು ನೋಡಿ ಭರತನ ದುಃಖ) ೧೯೨

೮೯ ಗಂಗಾತರಣಮ್ (ಭರತನು ಗಂಗಾನದಿಯನ್ನು ದಾಟುವುದು) ೧೯೮

೯೦ ಭರದ್ವಾಜಾಶ್ರಮನಿವಾಸಃ (ಭರದ್ವಾಜರ ದರ್ಶನ; ಆಶ್ರಮದಲ್ಲಿ ವಾಸ) ೨೦೩

೯೧ ಭರದ್ವಾಜಾತಿಥ್ಯಮ್ (ಭರತನ ಸೈನ್ಯಕ್ಕೆ ಭರದ್ವಾಜಮುನಿಗಳ ಔತಣ) ೨೦೮

೯೨ ಭರದ್ವಾಜಾಮಂತ್ರಣಮ್ (ಭರದ್ವಾಜರ ಅನುಜ್ಞೆಯನ್ನು ಪಡೆದು ಚಿತ್ರಕೂಟಕ್ಕೆ ಭರತನ ಪ್ರಯಾಣ) ೨೨೩

೯೩ ಚಿತ್ರಕೂಟವನಪ್ರೇಕ್ಷಣಮ್ (ಚಿತ್ರಕೂಟವನದಲ್ಲಿ ಶ್ರೀರಾಮನ ಅನ್ವೇಷಣೆ) ೨೩೦

೯೪ ಚಿತ್ರಕೂಟವರ್ಣನಾ (ಶ್ರೀರಾಮನು ಸೀತೆಗೆ ಚಿತ್ರಕೂಟವನ್ನು ವರ್ಣಿಸಿ ಹೇಳುವುದು) ೨೩೫

೯೫ ಮಂದಾಕಿನೀವರ್ಣನಾ (ಶ್ರೀರಾಮನು ಸೀತೆಗೆ ಮಂದಾಕಿನೀ ನದಿಯನ್ನು ವರ್ಣಿಸಿ ಹೇಳುವುದು) ೨೪೦

೯೬ ಲಕ್ಷ್ಮಣಕ್ರೋಧಃ (ಭರತನ ಸೇನೆಯನ್ನು ಕಂಡು ಲಕ್ಷ್ಮಣನ ಕೋಪ) ೨೪೪

೯೭ ಭರತಗುಣಪ್ರಶಂಸಾ (ಶ್ರೀರಾಮನು ಲಕ್ಷ್ಮಣನ ಮಾತನ್ನೊಪ್ಪದೆ ಭರತನನ್ನು ಕೊಂಡಾಡುವುದು) ೨೫೦

೯೮ ರಾಮಾನ್ವೇಷಣಮ್ (ಶ್ರೀರಾಮನನ್ನು ಹುಡುಕುತ್ತ ಭರತನು ಆಶ್ರಮದ ಕಡೆಗೆ ಬರುವುದು) ೨೫೬

೯೯ ರಾಮಸಮಾಗಮಃ (ಶ್ರೀರಾಮನ ದರ್ಶನ) ೨೬೦

೧೦೦ ಕಚ್ಚಿತ್ಸರ್ಗಃ (ಭರತನ ಕುಶಲವನ್ನು ವಿಚಾರಿಸುತ್ತ ಶ್ರೀರಾಮನು ರಾಜನೀತಿಯನ್ನು ಉಪದೇಶಿಸುವುದು) ೨೬೮

೧೦೧ ಪಿತೃದಿಷ್ಟಾಂತಶ್ರವಣಮ್ (ಭರತನು ಶ್ರೀರಾಮನಿಗೆ ತಂದೆಯ ಮರಣವಾರ್ತೆಯನ್ನು ತಿಳಿಸುವುದು) ೨೮೪

೧೦೨ ನಿವಾಪದಾನಮ್ (ಶ್ರೀರಾಮನು ತಂದೆಗೆ ತರ್ಪಣವನ್ನು ಕೊಡುವುದು) ೨೮೬

೧೦೩ ಮಾತೃದರ್ಶನಮ್ (ಕೌಸಲ್ಯೆ ಮೊದಲಾದವರು ಶ್ರೀರಾಮನನ್ನು ಕಂಡು ಶೋಕಿಸುವುದು) ೨೯೫

೧೦೪ ರಾಮಭರತಸಂವಾದಃ (ರಾಜ್ಯವನ್ನು ಸ್ವೀಕರಿಸಬೇಕೆಂದು ಭರತನ ಪ್ರಾರ್ಥನೆ; ಶ್ರೀರಾಮನ ಸಮಾಧಾನ) ೩೦೧

೧೦೫ ರಾಮವಾಕ್ಯಮ್ (ಭರತನಿಗೆ ಶ್ರೀರಾಮನ ಉತ್ತರ) ೩೦೭

೧೦೬ ಭರತವಚನಮ್ (ಪುನಃ ಭರತನ ಪ್ರಾರ್ಥನೆ) ೩೧೬

೧೦೭ ರಾಮಪ್ರತಿವಚನಮ್ (ರಾಜ್ಯವನ್ನು ಸ್ವೀಕರಿಸಲಾರೆನೆಂದು ಶ್ರೀರಾಮನ ಉತ್ತರ) ೩೨೩

೧೦೮ ಜಾಬಾಲಿವಾಕ್ಯಮ್ (ನಾಸ್ತಿಕವಾದವನ್ನವಲಂಬಿಸಿ ಜಾಬಾಲಿಗಳ ಮಾತು) ೩೨೭

೧೦೯ ಸತ್ಯಪ್ರಶಂಸಾ (ಶ್ರೀರಾಮನು ನಾಸ್ತಿಕವಾದವನ್ನು ನಿರಾಕರಿಸಿ ಸತ್ಯವನ್ನು ಪ್ರಶಂಸಿಸುವುದು) ೩೩೧

೧೧೦ ಇಕ್ಷ್ವಾಕುವಂಶಕೀರ್ತನಮ್ (ಇಕ್ಷ್ವಾಕುವಂಶದ ಪದ್ಧತಿಯನ್ನು ವಸಿಷ್ಠರು ವಿವರಿಸುವುದು) ೩೪೦

೧೧೧ ಭರತಾನುಶಾಸನಮ್ (ಶ್ರೀರಾಮನು ಭರತನಿಗೆ ಬುದ್ಧಿವಾದವನ್ನು ಹೇಳುವುದು) ೩೪೭

೧೧೨ ಪಾದುಕಾಪ್ರದಾನಮ್ (ಶ್ರೀರಾಮನು ಭರತನಿಗೆ ತನ್ನ ಪಾದುಕೆಗಳನ್ನು ಕೊಡುವುದು) ೩೫೩

೧೧೩ ಪಾದುಕಾಗ್ರಹಣಮ್ (ಪಾದುಕೆಗಳನ್ನು ಸ್ವೀಕರಿಸಿ ಅಯೋಧ್ಯೆಗೆ ಭರತನ ಪ್ರಯಾಣ) ೩೬೦

೧೧೪ ಅಯೋಧ್ಯಾಪ್ರವೇಶಃ (ಭರತನು ಅಯೋಧ್ಯೆಯನ್ನು ಪ್ರವೇಶಿಸಿ ಅದರ ದುಃಸ್ಥಿತಿಯನ್ನು ಕಂಡು ಮರುಗುವುದು) ೩೬೪

೧೧೫ ನಂದಿಗ್ರಾಮನಿವಾಸಃ (ಪಾದುಕಾಪಟ್ಟಾಭಿಷೇಕ; ನಂದಿಗ್ರಾಮದಲ್ಲಿ ಭರತನ ವಾಸ) ೩೭೧

೧೧೬ ಖರವಿಪ್ರಕಣಕಥನಮ್ (ಖರಾದಿ ರಾಕ್ಷಸರಿಂದಾಗುವ ಬಾಧೆಯನ್ನು ಋಷಿಗಳು ಶ್ರೀರಾಮನಿಗೆ ಹೇಳುವುದು) ೩೭೬

೧೧೭ ಸೀತಾಪಾತಿವ್ರತ್ಯಪ್ರಶಂಸಾ (ಅನಸೂಯೆಯು ಸೀತೆಯ ಪಾತಿವ್ರತ್ಯವನ್ನು ಕೊಂಡಾಡುವುದು) ೩೮೨

೧೧೮ ದಿವ್ಯಾಲಂಕಾರಗ್ರಹಣಮ್ (ಅನುಸೂಯೆಯು ಕೊಟ್ಟ ಅಲಂಕಾರಗಳನ್ನು ಸೀತೆಯು ಸ್ವೀಕರಿಸುವುದು) ೩೮೮

೧೧೯ ದಂಡಕಾರಣ್ಯಪ್ರವೇಶಃ (ಶ್ರೀರಾಮನು ಸೀತಾಲಕ್ಷ್ಮಣರೊಡನೆ ದಂಡಕಾರಣ್ಯವನ್ನು ಪ್ರವೇಶಿಸುವುದು) ೩೯೮

ಅನುಬಂಧ ೪೦೩

॥ ಶ್ರೀ ॥

ಶ್ರೀ ಮದ್ವಾಲ್ಮೀಕಿ ರಾಮಾಯಾಣಮ್

ಅಯೋಧ್ಯಾಕಾಂಡಃ

ಉತ್ತರಾರ್ಧಃ

ಸಪ್ತಪಂಚಾಶಃ ಸರ್ಗಃ

ಸಮಂತ್ರೋಪಾವರ್ತನಮ್

ಕಥಯಿತ್ವಾ ಸುದುಃಖಾರ್ತಃ ಸುಮಂತ್ರೇಣ ಚಿರಂ ಸಹ ।
ರಾಮೇ ದಕ್ಷಿಣಕೂಲಸ್ಥೇ ಜಗಾಮ ಸ್ವಗೃಹಂ ಗುಹಃ ॥ ೧

ಭರದ್ವಾಜಾಭಿಗಮನಂ ಪ್ರಯಾಗೇ ಚ ಸಭಾಜನಮ್ ।
ಆ ಗಿರೇರ್ಗಮನಂ ತೇಷಾಂ ತತ್ರಸ್ಥೈರಭಿಲಕ್ಷಿತಮ್ ॥ ೨

ಅನುಜ್ಞಾತಃ ಸುಮಂತ್ರೋಽಥ ಯೋಜಯಿತ್ವಾಹಯೋತ್ತಮಾನ್
ಅಯೋಧ್ಯಾಮೇವ ನಗರೀಂ ಪ್ರಯಯೌ ಗಾಢದುರ್ಮನಾಃ ॥ ೩

ಸರ್ಗ ೫೭

ಸುಮಂತ್ರನು ಅಯೋಧ್ಯೆಗೆ ಹಿಂತಿರುಗಿಬಂದು ದಶರಥನಿಗೆ ಶ್ರೀರಾಮನ ವೃತ್ತಾಂತವನ್ನು ತಿಳಿಸುವುದು. ದಶರಥನ ದುಃಖ.

ಶ್ರೀರಾಮನು ಗಂಗಾನದಿಯ ದಕ್ಷಿಣತೀರವನ್ನು ಸೇರಿದ ಮೇಲೆ, ಗುಹನು ಅತ್ಯಂತ ದುಃಖದಿಂದ ಸುಮಂತ್ರನೊಡನೆ ಬಹಳ ಹೊತ್ತು ಮಾತನಾಡಿ (ಅವನನ್ನು ಕರೆದುಕೊಂಡು) ತನ್ನ ಗೃಹಕ್ಕೆ ಹೋದನು. (೧). ಶ್ರೀರಾಮಾದಿಗಳು ಪ್ರಯಾಗಕ್ಷೇತ್ರದಲ್ಲಿ ಭರದ್ವಾಜಮುನಿಗಳ ಬಳಿಗೆ ಹೋದದ್ದು, ಅಲ್ಲಿ ಭರದ್ವಾಜರು ನೀಡಿದ ಸತ್ಕಾರ, ಅಲ್ಲಿಂದ ಚಿತ್ರಕೂಟಗಿರಿಗೆ ಪ್ರಯಾಣ - ಇವೆಲ್ಲವನ್ನೂ ಅಲ್ಲಿದ್ದ ಗುಹನ ದೂತರು ಕಂಡು ತಿಳಿಸಿದರು (೨). ಅನಂತರ ಸುಮಂತ್ರನು ಗುಹನಿಂದ ಅನುಜ್ಞೆಯನ್ನು

ಸ ವನಾನಿ ಸುಗಂಧೀನಿ ಸರಿತಶ್ಚ ಸರಾಂಸಿ ಚ ।
ಪಶ್ಯನ್ನತಿಯಯೌ ಶೀಘ್ರಂ ಗ್ರಾಮಾಣಿ ನಗರಾಣಿ ಚ ॥ ೪
ತತಃ ಸಾಯಾಹ್ನಸಮಯೇ ದ್ವಿತೀಯೇಽಹನಿ ಸಾರಥಿಃ ।
ಅಯೋಧ್ಯಾಂ ಸಮನುಪ್ರಾಪ್ಯ ನಿರಾನಂದಾಂ ದದರ್ಶ ಹ ॥ ೫
ಸ ಶೂನ್ಯಾಮಿವ ನಿಃಶಬ್ದಾಂ ದೃಷ್ಟ್ವಾ ಪರಮದುರ್ಮನಾಃ ।
ಸುಮಂತ್ರಶ್ಚಿಂತಯಾಮಾಸ ಶೋಕವೇಗಸಮಾಹತಃ ॥ ೬
ಕಚ್ಚಿನ್ನ ಸಗಜಾ ಸಾಶ್ವಾ ಸಜನಾ ಸಜನಾಧಿಪಾ ।
ರಾಮಸಂತಾಪದುಃಖೇನ ದಗ್ಧಾ ಶೋಕಾಗ್ನಿನಾ ಪುರೀ ॥ ೭
ಇತಿ ಚಿಂತಾಪರಃ ಸೂತೋ ವಾಜಿಭಿಃ ಶೀಘ್ರಪಾತಿಭಿಃ ।
ನಗರದ್ವಾರಮಾಸಾದ್ಯ ತ್ವರಿತಃ ಪ್ರವಿವೇಶ ಹ ॥ ೮
ಸುಮಂತ್ರಮಭಿಯಾಂತಂ ತಂ ಶತಶೋಽಥ ಸಹಸ್ರಶಃ ।
ಕ್ವ ರಾಮ ಇತಿ ಪೃಚ್ಛಂತಃ ಸೂತಮಭ್ಯದ್ರವನ್ನರಾಃ ॥ ೯

ಪಡೆದು ಅಶ್ವಗಳನ್ನು ರಥಕ್ಕೆ ಹೂಡಿ ಬಹಳ ವ್ಯಥೆಪಡುತ್ತ ಅಯೋಧ್ಯಾನಗರಿಯ ಕಡೆಗೆ ಹೊರಟನು. ಅವನು ದಾರಿಯಲ್ಲಿ ಸುಗಂಧಭರಿತವಾದ ವನನದೀ ಸರೋವರಗಳನ್ನೂ ನಾನಾಗ್ರಾಮ ನಗರಗಳನ್ನೂ ನೋಡುತ್ತ ಎಲ್ಲಿಯೂ ನಿಲ್ಲದೆ ತ್ವರೆಯಿಂದ ಪ್ರಯಾಣ ಮಾಡಿದನು (೩-೪). ಆ ಸಾರಥಿಯು ಮರುದಿನ ಸಂಜೆಯ ಹೊತ್ತಿಗೆ ಅಯೋಧ್ಯೆಯನ್ನು ತಲುಪಿ ಸಂತೋಷವಿಲ್ಲದೆ ಸಪ್ಪೆಯಾಗಿದ್ದ ಆ ಪಟ್ಟಣವನ್ನು ಕಂಡನು. ಜನಶೂನ್ಯವಾದಂತೆ ನಿಶ್ಯಬ್ದವಾಗಿದ್ದ ಪಟ್ಟಣವನ್ನು ಕಂಡು ಸುಮಂತ್ರನ ದುಃಖವು ಉಮ್ಮಳಿಸಿತು. ಶೋಕಾವೇಶದಿಂದ ಚಿಂತೆಯು ಆವರಿಸಿತು (೫-೬). ಅವನು ''ರಾಮನ ವಿರಹಸಂತಾಪದಿಂದ ಹುಟ್ಟಿದ ಶೋಕಾಗ್ನಿಯು ಈ ನಗರವನ್ನು ಸುಟ್ಟುಹಾಕಿರಬಹುದೆ? ಇಲ್ಲಿದ್ದ ಆನೆ ಕುದುರೆ ಜನ ಮಹಾರಾಜ ಇವರೆಲ್ಲರೂ ಸುಟ್ಟುಹೋಗಿಲ್ಲವಷ್ಟೆ?'' ಎಂದು ಚಿಂತಿಸುತ್ತ ನಗರದ್ವಾರಕ್ಕೆ ಬಂದು ಕುದುರೆಗಳನ್ನೋಡಿಸುತ್ತ ಒಳಕ್ಕೆ ಪ್ರವೇಶಿಸಿದನು (೭-೮). ಸುಮಂತ್ರನು ಬಂದುದನ್ನು ಕಂಡಕೂಡಲೆ ರಾಮನೆಲ್ಲಿ? ಎಂದು ಕೇಳುತ್ತ ಸಾವಿರಾರು ಜನರು ಓಡುತ್ತ ಬಂದು ಅವನನ್ನು ಮುತ್ತಿದರು. ಸುಮಂತ್ರನು ಅವರಿಗೆ ''ನಾನು ಗಂಗಾತೀರದಲ್ಲಿ

ತೇಷಾಂ ಶಶಂಸ ಗಂಗಾಯಾಮಹಮಾಪೃಚ್ಛ್ಯ ರಾಘವಮ್ ।
ಅನುಜ್ಞಾತೋ ನಿವೃತ್ತೋಽಸ್ಮಿ ಧಾರ್ಮಿಕೇಣ ಮಹಾತ್ಮನಾ ॥ ೧೦

ತೇ ತೀರ್ಣಾ ಇತಿ ವಿಜ್ಞಾಯ ಬಾಷ್ಪಪೂರ್ಣಮುಖಾ ಜನಾಃ ।
ಅಹೋ ಧಿಗಿತಿ ನಿಃಶ್ವಸ್ಯ ಹಾ ರಾಮೇತಿ ಚ ಚುಕ್ರುಶುಃ ॥ ೧೧

ಶುಶ್ರಾವ ಚ ವಚಸ್ತೇಷಾಂ ವೃಂದಂ ವೃಂದಂ ಚ ತಿಷ್ಠತಾಮ್ ।
ಹತಾಃ ಸ್ಮ ಖಲು ಯೇ ನೇಹ ಪಶ್ಯಾಮ ಇತಿ ರಾಘವಮ್ ॥ ೧೨

ದಾನಯಜ್ಞವಿವಾಹೇಷು ಸಮಾಜೇಷು ಮಹತ್ಸು ಚ ।
ನ ದ್ರಕ್ಷ್ಯಾಮಃ ಪುನರ್ಜಾತು ಧಾರ್ಮಿಕಂ ರಾಮಮಂತರಾ ॥ ೧೩

ಕಿಂ ಸಮರ್ಥಂ ಜನಸ್ಯಾಸ್ಯ ಕಿಂ ಪ್ರಿಯಂ ಕಿಂ ಸುಖಾವಹಮ್ ।
ಇತಿ ರಾಮೇಣ ನಗರಂ ಪಿತೃವತ್ ಪರಿಪಾಲಿತಮ್ । ೧೪

ವಾತಾಯನಗತಾನಾಂ ಚ ಸ್ತ್ರೀಣಾಮನ್ವಂತರಾಪಣಮ್ ।
ರಾಮಶೋಕಾಭಿತಪ್ತಾನಾಂ ಶುಶ್ರಾವ ಪರಿದೇವನಮ್ ॥ ೧೫

ಶ್ರೀರಾಮನನ್ನು ಬೀಳ್ಕೊಂಡೆನು. ಆ ಮಹಾತ್ಮನ ಆಜ್ಞೆಯಂತೆ ಹಿಂದಿರುಗಿದೆನು. ಅವರು ಗಂಗಾನದಿಯನ್ನು ದಾಟಿದರು'' ಎಂದು ತಿಳಿಸಿದನು (೯-೧೦). 'ಗಂಗಾನದಿಯನ್ನು ದಾಟಿದರು' ಎಂದು ತಿಳಿದೊಡನೆ, ಆ ಪ್ರಜೆಗಳು ಅಯ್ಯೋ! ಕಷ್ಟವೆ! ಎಂದು ಉದ್ಗರಿಸಿ ನಿಟ್ಟುಸಿರುಬಿಟ್ಟು ಕಣ್ಣೀರುಸುರಿಸುತ್ತ 'ಹಾ! ರಾಮ!' ಎಂದು ಕೂಗಿ ಗೋಳಾಡಲಾರಂಭಿಸಿದರು (೧೧). ಅವರು ಬೀದಿಯಲ್ಲಿ ಗುಂಪುಗುಂಪಾಗಿ ನಿಂತು ''ಅಯ್ಯೋ! ನಾವು ಕೆಟ್ಟೆವು! ನಾವು ರಾಮನನ್ನು ನೋಡದಂತಾಯಿತು. ದಾನ ಯಜ್ಞ ವಿವಾಹ ಸಮಾರಂಭಗಳಲ್ಲಿಯೂ ಮಹಾಸಭೆಗಳಲ್ಲಿಯೂ ಧರ್ಮಾತ್ಮನಾದ ಶ್ರೀರಾಮನನ್ನು ಪುನಃ ನೋಡದಂತಾಯಿತಲ್ಲ!'' ಎಂದು ಶೋಕಿಸುವುದು ಸುಮಂತ್ರನಿಗೆ ಕೇಳಿಸಿತು (೧೨-೧೩). ಜನರು ''ಈ ಪ್ರಜೆಗಳಿಗೆ ಬೇಕಾದದ್ದು ಯಾವುದು? ಇವರಿಗೆ ಪ್ರಿಯವಾದದ್ದು ಯಾವುದು ? ಯಾವುದರಿಂದ ಇವರಿಗೆ ಸುಖವಾದೀತು? ಎಂದು ವಿಚಾರಿಸಿ ತಂದೆಯಂತೆ ರಾಮನು ಈ ನಗರವನ್ನು ಪಾಲಿಸುತ್ತಿದ್ದನು'' ಎಂದು ಹೇಳಿಕೊಳ್ಳುತ್ತಿದ್ದರು (೧೪). ಅಂಗಡಿಸಾಲುಗಳ ಮಧ್ಯದಲ್ಲಿ ಹೋಗುತ್ತಿರುವಾಗ ಕಿಟಕಿಗಳ ಬಳಿಯಲ್ಲಿ ನಿಂತು ಅಳುತ್ತಿದ್ದ ಸ್ತ್ರೀಯರ ರೋದನಧ್ವನಿಯು ಸುಮಂತ್ರನಿಗೆ

ಸ ರಾಜಮಾರ್ಗಮಧ್ಯೇನ ಸುಮಂತ್ರಃ ಪಿಹಿತಾನನಃ ।
ಯತ್ರ ರಾಜಾ ದಶರಥಸ್ತದೇವೋಪಯಯೌ ಗೃಹಮ್ ॥ ೧೬

ಸೋಽವತೀರ್ಯ ರಥಾಚ್ಛೀಘ್ರಂ ರಾಜವೇಶ್ಮ ಪ್ರವಿಶ್ಯ ಚ ।
ಕಕ್ಷ್ಯಾಃ ಸಪ್ತಾಭಿಚಕ್ರಾಮ ಮಹಾಜನಸಮಾಕುಲಾಃ ॥ ೧೭

ಹರ್ಮ್ಯೈರ್ವಿಮಾನೈಃ ಪ್ರಾಸಾದೈರವೇಕ್ಷ್ಯಾಥ ಸಮಾಗತಮ್ ।
ಹಾಹಾಕಾರಕೃತಾ ನಾರ್ಯೋ ರಾಮಾದರ್ಶನಕರ್ಶಿತಾಃ ॥ ೧೮

ಆಯತೈರ್ವಿಮಲೈರ್ನೇತ್ರೈರಶ್ರುವೇಗಪರಿಪ್ಲುತೈಃ ।
ಅನ್ಯೋನ್ಯಮಭಿವೀಕ್ಷಂತೇಽವ್ಯಕ್ತಮಾರ್ತತರಾಃ ಸ್ತ್ರಿಯಃ ॥ ೧೯

ತತೋ ದಶರಥಸ್ತ್ರೀಣಾಂ ಪ್ರಾಸಾದೇಭ್ಯಸ್ತತಸ್ತತಃ ।
ರಾಮಶೋಕಾಭಿತಪ್ತಾನಾಂ ಮಂದಂ ಶುಶ್ರಾವ ಜಲ್ಪಿತಮ್ ॥ ೨೦

ಸಹ ರಾಮೇಣ ನಿರ್ಯಾತೋ ವಿನಾ ರಾಮಮಿಹಾಗತಃ ।
ಸೂತಃ ಕಿಂ ನಾಮ ಕೌಸಲ್ಯಾಂ ಕ್ರೋಶಂತೀಂ ಪ್ರತಿ ವಕ್ಷ್ಯತಿ ॥ ೨೧

ಕೇಳಿಸುತ್ತಿತ್ತು (೧೫). ಆತನು ರಾಜಬೀದಿಯಲ್ಲಿ ಜನರಿಗೆ ಮುಖವನ್ನು ತೋರಿಸಲಾರದೆ ಮುಚ್ಚಿಕೊಂಡು ನೇರವಾಗಿ ದಶರಥನಿದ್ದ ಅರಮನೆಗೆ ತ್ವರೆಯಿಂದ ಹೋದನು. ಗೃಹದ್ವಾರದಲ್ಲಿ ರಥದಿಂದಿಳಿದು ಜನನಿಬಿಡವಾದ ಅರಮನೆಯ ಏಳು ಕಕ್ಷ್ಯಗಳನ್ನು ದಾಟುತ್ತ ಒಳಗೆ ಹೋದನು (೧೬-೧೭). ಹರ್ಮ್ಯ ವಿಮಾನ ಪ್ರಾಸಾದಗಳೆಂಬ ವಿವಿಧಗೃಹಗಳಲ್ಲಿದ್ದ ಸ್ತ್ರೀಯರು ರಾಮನಿಲ್ಲದೆ ಬಂದ ಸುಮಂತ್ರನನ್ನು ಕಂಡು ದುಃಖದಿಂದ ಹಾಹಾಕಾರಮಾಡತೊಡಗಿದರು. ಶೋಕಾರ್ತರಾದ ಆ ಸ್ತ್ರೀಯರು ವಿಶಾಲವಾದ ಸ್ವಚ್ಛನೇತ್ರಗಳಿಂದ ಕಣ್ಣೀರನ್ನು ಬಳಬಳನೆ ಸುರಿಸುತ್ತ ಶೂನ್ಯದೃಷ್ಟಿಯಿಂದ ಒಬ್ಬರನ್ನೊಬ್ಬರು ನೋಡುತ್ತಿದ್ದರು (೧೮-೧೯). ಅನಂತರ ರಾಮನಿಲ್ಲದ ಶೋಕದಿಂದ ಸಂತಪ್ತರಾದ ದಶರಥನ ಅಂತಃಪುರಸ್ತ್ರೀಯರು ಅರಮನೆಯಲ್ಲಿ ಅಲ್ಲಲ್ಲಿ ನಿಂತು ಮೆಲ್ಲಗೆ ಮಾತನಾಡಿಕೊಳ್ಳುವುದು ಸುಮಂತ್ರನಿಗೆ ಕೇಳಿಸಿತು (೨೦). ಅವರು "ಸುಮಂತ್ರನು ಆಗ ರಾಮನೊಡನೆ ಹೊರಟನು! ಈಗ ರಾಮನಿಲ್ಲದೆ ಒಬ್ಬನೇ ಬಂದಿದ್ದಾನೆ. ಗೋಳಾಡುತ್ತಿರುವ ಕೌಸಲ್ಯೆಗೆ ಇವನು ಏನೆಂದು ಉತ್ತರ ಹೇಳುತ್ತಾನೆ? (೨೧). ಈಗ

ಯಥಾ ಚ ಮನ್ಯೇ ದುರ್ಜೀವಮೇವಂ ನ ಸುಕರಂ ಧ್ರುವಮ್ ।
ಆಚ್ಛಿದ್ಯ ಪುತ್ರೇ ನಿರ್ಯಾತೇ ಕೌಸಲ್ಯಾ ಯತ್ರ ಜೀವತಿ ॥ ೨೨

ಸತ್ಯರೂಪಂ ತು ತದ್ವಾಕ್ಯಂ ರಾಜ್ಞಃ ಸ್ತ್ರೀಣಾಂ ನಿಶಾಮಯನ್ ।
ಪ್ರದೀಪ್ತಮಿವ ಶೋಕೇನ ವಿವೇಶ ಸಹಸಾ ಗೃಹಮ್ ॥ ೨೩

ಸ ಪ್ರವಿಶ್ಯಾಷ್ಟಮೀಂ ಕಕ್ಷ್ಯಾಂ ರಾಜಾನಂ ದೀನಮಾತುರಮ್ ।
ಪುತ್ರಶೋಕಪರಿದ್ಯೂನಮಪಶ್ಯತ್ ಪಾಂಡರೇ ಗೃಹೇ ॥ ೨೪

ಅಭಿಗಮ್ಯ ತಮಾಸೀನಂ ನರೇಂದ್ರಮಭಿವಾದ್ಯ ಚ ।
ಸುಮಂತ್ರೋ ರಾಮವಚನಂ ಯಥೋಕ್ತಂ ಪ್ರತ್ಯವೇದಯತ್ ॥ ೨೫

ಸ ತೂಷ್ಣೀಮೇವ ತಚ್ಛ್ರುತ್ವಾ ರಾಜಾ ವಿಭ್ರಾಂತಚೇತನಃ ।
ಮೂರ್ಛಿತೋ ನ್ಯಪತದ್ಭೂಮೌ ರಾಮಶೋಕಾಭಿಪೀಡಿತಃ ॥ ೨೬

ತತೋಽಂತಃಪುರಮಾವಿದ್ಧಂ ಮೂರ್ಛಿತೇ ಪೃಥಿವೀಪತೌ ।
ಉಚ್ಛ್ರಿತ್ಯ ಬಾಹೂ ಚುಕ್ರೋಶ ನೃಪತೌ ಪತಿತೇ ಕ್ಷಿತೌ ॥ ೨೭

ನಾವು ಬದುಕಿರುವುದೇ ಕಷ್ಟವಾಗಿ ತೋರುತ್ತದೆ. ಹೀಗಿರಲು ಅಂಥ ಮಗನು ಕೈದಪ್ಪಿಹೋಗಲು, ಕೌಸಲ್ಯೆಯು ಜೀವಹಿಡಿದಿರುವುದು ಎಂದಿಗೂ ಸುಲಭವಲ್ಲ'' ಎಂದು ಹೇಳಿಕೊಳ್ಳುತ್ತಿದ್ದರು (೨೨). ಸತ್ಯವಾದ ಆ ವಾಕ್ಯವನ್ನು ಕೇಳುತ್ತ ಸುಮಂತ್ರನು ಶೋಕದಿಂದ ಬೆಂದುಹೋಗಿದ್ದ ಅರಮನೆಯನ್ನು ನೆಟ್ಟಗೆ ಪ್ರವೇಶಿಸಿದನು. ಅವನು ಎಂಟನೆಯ ಕಕ್ಷ್ಯೆಯನ್ನು ಹೊಕ್ಕು (ಕಾಂತಿಹೀನವಾಗಿ) ಬಿಳಿಚಿಕೊಂಡಂತಿದ್ದ ಒಂದು ಗೃಹದಲ್ಲಿ ದಶರಥರಾಜನನ್ನು ನೋಡಿದನು. ದಥರಥನು ಪುತ್ರಶೋಕದಿಂದ ಬಳಲಿ ಬಾಡಿ ಬೆಂಡಾಗಿ ದೈನ್ಯದಿಂದ ತಳಮಳಿಸುತ್ತಿದ್ದನು (೨೩-೨೪). ಸುಮಂತ್ರನು ರಾಜನ ಬಳಿಗೆ ಹೋಗಿ ನಮಸ್ಕರಿಸಿ, ಶ್ರೀರಾಮನು ಹೇಳಿ ಕಳಿಸಿದ ಮಾತನ್ನು ಯಥಾರ್ಥವಾಗಿ ನಿವೇದಿಸಿದನು. ದಶರಥನು ಯಾವ ಮಾತನ್ನೂ ಆಡದೆ ಸುಮಂತ್ರನ ಹೇಳಿಕೆಯನ್ನು ಸುಮ್ಮನೆ ಆಲಿಸಿ, ಹಾಗೆಯೇ ಚೈತನ್ಯಗುಂದಿ ಎಚ್ಚರದಪ್ಪಿ ಬಿದ್ದನು (೨೫-೨೬). ರಾಜನು ಮೂರ್ಛಿತನಾಗಿ ನೆಲದಮೇಲೆ ಬೀಳಲು ಅಂತಃಪುರದವರೆಲ್ಲರೂ ಕೈಯೆತ್ತಿ 'ಹೋ' ಎಂದು ಅಳತೊಡಗಿದರು. ಒಡನೆಯೇ ಕೌಸಲ್ಯೆಯು ಸುಮಿತ್ರೆಯೊಡನೆ ಓಡಿಬಂದು

ಸುಮಿತ್ರಯಾ ತು ಸಹಿತಾ ಕೌಸಲ್ಯಾ ಪತಿತಂ ಪತಿಮ್ ।
ಉತ್ಥಾಪಯಾಮಾಸ ತದಾ ವಚನಂ ಚೇದಮಬ್ರವೀತ್ ॥ ೨೮

ಇಮಂ ತಸ್ಯ ಮಹಾಭಾಗ ದೂತಂ ದುಷ್ಕರಕಾರಿಣಃ ।
ವನವಾಸಾದನುಪ್ರಾಪ್ತಂ ಕಸ್ಮಾನ್ನ ಪ್ರತಿಭಾಷಸೇ ॥ ೨೯

ಅದ್ಯೇಮಮನಯಂ ಕೃತ್ವಾ ವ್ಯಪತ್ರಪಸಿ ರಾಘವ ।
ಉತ್ತಿಷ್ಠ ಸುಕೃತಂ ತೇಽಸ್ತು ಶೋಕೇ ನ ಸ್ಯಾತ್ ಸಹಾಯತಾ ॥ ೩೦

ದೇವ ಯಸ್ಯಾ ಭಯಾದ್ರಾಮಂ ನಾನುಪೃಚ್ಛಸಿ ಸಾರಥಿಮ್ ।
ನೇಹ ತಿಷ್ಠತಿ ಕೈಕೇಯೀ ವಿಸ್ರಬ್ಧಂ ಪ್ರತಿಭಾಷ್ಯತಾಮ್ ॥ ೩೧

ಸಾ ತಥೋಕ್ತ್ವಾ ಮಹಾರಾಜಂ ಕೌಸಲ್ಯಾ ಶೋಕಲಾಲಸಾ ।
ಧರಣ್ಯಾಂ ನಿಪಪಾತಾಶು ಬಾಷ್ಪವಿಪ್ಲುತಭಾಷಿಣೀ ॥ ೩೨

ವಿಲಪಂತೀಂ ತಥಾ ದೃಷ್ಟ್ವಾ ಕೌಸಲ್ಯಾಂ ಪತಿತಾಂ ಭುವಿ ।
ಪತಿಂ ಚಾವೇಕ್ಷ್ಯ ತಾಃ ಸರ್ವಾಃ ಸಮಂತಾದ್ರುರುದುಃ ಸ್ತ್ರಿಯಃ ॥ ೩೩

ಪತಿಯನ್ನು ಎತ್ತಿ ಕುಳ್ಳಿರಿಸಿ, ಅವನು ಚೇತರಿಸಿಕೊಂಡಮೇಲೆ ಹೀಗೆಂದಳು (೨೭-೨೮). "ಮಹಾರಾಜ, ಕಷ್ಟದ ಕೆಲಸಕ್ಕೆ ಕೈಹಾಕಿದ ಆತನ ದೂತನು ವನದಿಂದ ಬಂದಿದ್ದಾನೆ. ಅವನೊಡನೆ ಮಾತನಾಡಲಾರೆ ಏಕೆ? ನೀನು ರಘುವಂಶೋತ್ಪನ್ನನಾಗಿ ಇಂಥ ಅನೀತಿಯನ್ನಾಚರಿಸಿ ಈಗ ನಾಚಿಕೆಪಡುತ್ತೀಯಾ? ಒಳ್ಳೆಯದು, ಮೇಲಕ್ಕೇಳು. ಹೀಗೆ ಶೋಕಿಸಿದರೆ ಯಾವ ಪ್ರಯೋಜನವೂ ಇಲ್ಲ (೨೯-೩೦). ಈ ಸಾರಥಿಯೊಡನೆ ರಾಮನ ವೃತ್ತಾಂತವನ್ನು ಕೇಳುವುದಕ್ಕೆ ನೀನು ಹೆದರಬೇಕಾಗಿಲ್ಲ. ಆ ಕೈಕೇಯಿ ಇಲ್ಲಿಲ್ಲ! ಯಥೇಚ್ಛವಾಗಿ ಮಾತನಾಡು" ಎಂದಳು (೩೧). ದಶರಥನಿಗೆ ಈ ರೀತಿ ಹೇಳುವಾಗ ಶೋಕಾರ್ತಳಾದ ಕೌಸಲ್ಯೆಯ ಕಣ್ಣುಗಳಿಂದ ಬಾಷ್ಪವು ತುಳುಕುತ್ತಿತ್ತು. ಮಾತು ತೊಡರುತ್ತಿತ್ತು. ಒಡನೆಯೇ ಅವಳು ನೆಲದಮೇಲೆ ಕುಸಿದು ಹೋದಳು (೩೨). ಕೌಸಲ್ಯೆಯು ನೆಲದ ಮೇಲೆ ವಿಲಾಪಿಸುವುದನ್ನೂ ದೀನನಾಗಿ ಕುಳಿತಿದ್ದ ಪತಿಯನ್ನೂ ನೋಡಿ, ಅಲ್ಲಿದ್ದ ಹೆಂಗಸರೆಲ್ಲರೂ ಅಳುತ್ತಿದ್ದರು. ಹೀಗೆ ಅರಮನೆಯಲ್ಲಿ ಜನಿಸಿದ ರೋದನಧ್ವನಿಯನ್ನು ಕೇಳಿ ಮುದುಕರು, ಯುವಕರು, ಹೆಣ್ಣುಮಕ್ಕಳು – ಎಲ್ಲರೂ

ತತಸ್ತಮಂತಃಪುರನಾದಮುತ್ಥಿತಂ
ಸಮೀಕ್ಷ್ಯ ವೃದ್ಧಾಸ್ತರುಣಾಶ್ಚ ಮಾನವಾಃ ।
ಸ್ತ್ರಿಯಶ್ಚ ಸರ್ವಾ ರುರುದುಃ ಸಮಂತತಃ
ಪುರಂ ತದಾಸೀತ್ ಪುನರೇವ ಸಂಕುಲಮ್ ॥ ೩೪

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತಪಂಚಾಶಃ ಸರ್ಗಃ

ಅಷ್ಟಪಂಚಾಶಃ ಸರ್ಗಃ

ರಾಮಸಂದೇಶಾಖ್ಯಾನಮ್

ಪ್ರತ್ಯಾಶ್ವಸ್ತೋ ಯದಾ ರಾಜಾ ಮೋಹಾತ್ ಪ್ರತ್ಯಾಗತಸ್ಮೃತಿಃ ।
ಅಥಾಜುಹಾವ ತಂ ಸೂತಂ ರಾಮವೃತ್ತಾಂತಕಾರಣಾತ್ ॥ ೧

ಅಥ ಸೂತೋ ಮಹಾರಾಜಂ ಕೃತಾಂಜಲಿರುಪಸ್ಥಿತಃ ।
ರಾಮಮೇವಾನುಶೋಚಂತಂ ದುಃಖಶೋಕಸಮನ್ವಿತಮ್ ॥ ೨

ಗಟ್ಟಿಯಾಗಿ ಅಳತೊಡಗಿದರು. ಅಯೋಧ್ಯಾನಗರವು ಮತ್ತೆ ದುಃಖದಿಂದ ತುಂಬಿಹೋಯಿತು (೩೩-೩೪).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಐವತ್ತೇಳನೆಯ ಸರ್ಗ

ಸರ್ಗ ೫೮

ದಶರಥನು ಶ್ರೀರಾಮಾದಿಗಳ ವೃತ್ತಾಂತವನ್ನು ವಿಚಾರಿಸಲು
ಸುಮಂತ್ರನು ಅದನ್ನು ತಿಳಿಸುವುದು.

ದಶರಥನು ಮೂರ್ಛೆಯಿಂದ ಚೇತರಿಸಿಕೊಂಡಮೇಲೆ ರಾಮವೃತ್ತಾಂತವನ್ನು ಕೇಳುವುದಕ್ಕಾಗಿ ಸುಮಂತ್ರನನ್ನು ಸಮೀಪಕ್ಕೆ ಕರೆದನು. ಆಗ ಸುಮಂತ್ರನು ಕೈಮುಗಿದುಕೊಂಡು ಮಹಾರಾಜನ ಬಳಿಗೆ ಬಂದು ನಿಂತನು. ದಶರಥನು ರಾಮನನ್ನೇ ಚಿಂತಿಸುತ್ತ ಶೋಕದಿಂದ ಬಸವಳಿದಿದ್ದನು (೧-೨).

ವೃದ್ಧಂ ಪರಮಸಂತಪ್ತಂ ನವಗ್ರಹಮಿವ ದ್ವಿಪಮ್ ।
ವಿನಿಃಶ್ವಸಂತಂ ಧ್ಯಾಯಂತಮಸ್ವಸ್ಥಮಿವ ಕುಂಜರಮ್ ॥ ೩

ರಾಜಾ ತು ರಜಸಾ ಸೂತಂ ಧ್ವಸ್ತಾಂಗಂ ಸಮುಪಸ್ಥಿತಮ್ ।
ಅಶ್ರುಪೂರ್ಣಮುಖಂ ದೀನಮುವಾಚ ಪರಮಾರ್ತವತ್ ॥ ೪

ಕ್ವನು ವತ್ಸ್ಯತಿ ಧರ್ಮಾತ್ಮಾ ವೃಕ್ಷಮೂಲಮುಪಾಶ್ರಿತಃ ।
ಸೋಽತ್ಯಂತಸುಖಿತಃ ಸೂತ ಕಿಮಶಿಷ್ಯತಿ ರಾಘವಃ ॥ ೫

ದುಃಖಸ್ಯಾನುಚಿತೋ ದುಃಖಂ ಸುಮಂತ್ರ ಶಯನೋಚಿತಃ ।
ಭೂಮಿಪಾಲಾತ್ಮಜೋ ಭೂಮೌ ಶೇತೇ ಕಥಮನಾಥವತ್ ॥ ೬

ಯಂ ಯಾಂತಮನುಯಾಂತಿ ಸ್ಮ ಪದಾತಿರಥಕುಂಜರಾಃ ।
ಸ ವತ್ಸ್ಯತಿ ಕಥಂ ರಾಮೋ ವಿಜನಂ ವನಮಾಶ್ರಿತಃ ॥ ೭

ವ್ಯಾಲೈರ್ಮೃಗೈರಾಚರಿತಂ ಕೃಷ್ಣಸರ್ಪನಿಷೇವಿತಮ್ ।
ಕಥಂ ಕುಮಾರೌ ವೈದೇಹ್ಯಾ ಸಾರ್ಧಂ ವನಮುಪಸ್ಥಿತೌ ॥ ೮

ಆ ವೃದ್ಧನು ಹೊಸದಾಗಿ ಹಿಡಿದ ಸಲಗದಂತೆ ಸಂಕಟಪಡುತ್ತ ನಿಟ್ಟುಸಿರು ಬಿಡುತ್ತ ಏನನ್ನೋ ಧ್ಯಾನಿಸುತ್ತಲಿದ್ದನು. ಆರೋಗ್ಯವಿಲ್ಲದ ಆನೆಯಂತೆ ಚಡಪಡಿಸುತ್ತಿದ್ದನು (೩). ಅವನೆದುರಿಗೆ ಬಂದು ನಿಂತ ಸುಮಂತ್ರನ ಮೈಯೆಲ್ಲವೂ ಧೂಳಿಯಿಂದ ಮುಸುಕಿತ್ತು. ಅವನು ಕಣ್ಣೀರು ಸುರಿಸುತ್ತ ದೈನ್ಯದಿಂದ ನಿಂತಿದ್ದನು. ರಾಜನು ಆ ಸಾರಥಿಯನ್ನು ಕುರಿತು ಅಳುತ್ತ ಪ್ರಶ್ನೆ ಮಾಡಿದನು (೪). "ಸೂತ, ಆ ಧರ್ಮಾತ್ಮನು ಎಲ್ಲಿ ವಾಸಮಾಡುವನು? ಯಾವ ಮರದ ಬುಡವನ್ನು ಆಶ್ರಯಿಸಿದ್ದಾನೆ? ಸುಖವಾಗಿ ಬಾಳಿದ ರಾಮನು ಈಗ ಏನನ್ನು ತಿನ್ನುವನು? ಸುಮಂತ್ರ, ದುಃಖವನ್ನು ಕಂಡರಿಯದ ರಾಮನು ಮೃದುವಾದ ಹಾಸಿಗೆಯಲ್ಲಿ ಮಲಗುತ್ತಿದ್ದನು. ಆ ರಾಜ ಕುಮಾರನು ಈಗ ದಿಕ್ಕಿಲ್ಲದವನಂತೆ ನೆಲದ ಮೇಲೆ ಕಷ್ಟಪಡುತ್ತ ಮಲಗುವುದಾದರೂ ಹೇಗೆ? (೫-೬). ರಾಮನು ಹೊರಟನೆಂದರೆ ಗಜರಥ ಪದಾತಿಗಳು ಹಿಮ್ಮೇಳವಾಗಿ ಹೊರಡುತ್ತಿದ್ದವು. ಅಂಥ ರಾಜಪುತ್ರನು ನಿರ್ಜನವಾದ ಕಾಡಿನಲ್ಲಿ ಹೇಗೆ ವಾಸವಾಗಿದ್ದಾನು? ಕ್ರೂರಮೃಗಗಳಿಂದಲೂ ಕೃಷ್ಣಸರ್ಪಗಳಿಂದಲೂ ತುಂಬಿದ ಅರಣ್ಯಕ್ಕೆ ರಾಮಲಕ್ಷ್ಮಣರು ಸೀತೆಯೊಡನೆ ಹೇಗೆ ಪ್ರವೇಶಿಸಿದ್ದಾರು? (೭-೮).

ಸುಕುಮಾರ್ಯಾ ತಪಸ್ವಿನ್ಯಾ ಸುಮಂತ್ರ ಸಹ ಸೀತಯಾ ।
ರಾಜಪುತ್ರೌ ಕಥಂ ಪಾದೈರವರುಹ್ಯ ರಥಾದ್ಗತೌ ॥ ೯

ಸಿದ್ಧಾರ್ಥಃ ಖಲು ಸೂತ ತ್ವಂ ಯೇನ ದೃಷ್ಟೌ ಮಮಾತ್ಮಜೌ ।
ವನಾಂತಂ ಪ್ರವಿಶಂತೌ ತಾವಶ್ವಿನಾವಿವ ಮಂದರಮ್ ॥ ೧೦

ಕಿಮುವಾಚ ವಚೋ ರಾಮಃ ಕಿಮುವಾಚ ಚ ಲಕ್ಷ್ಮಣಃ ।
ಸುಮಂತ್ರ ವನಮಾಸಾದ್ಯ ಕಿಮುವಾಚ ಚ ಮೈಥಿಲೀ ॥ ೧೧

ಆಸಿತಂ ಶಯಿತಂ ಭುಕ್ತಂ ಸೂತ ರಾಮಸ್ಯ ಕೀರ್ತಯ ।
ಜೀವಿಷ್ಯಾಮ್ಯಹಮೇತೇನ ಯಯಾತಿರಿವ ಸಾಧುಷು ॥ ೧೨

ಇತಿ ಸೂತೋ ನರೇಂದ್ರೇಣ ಚೋದಿತಃ ಸಜ್ಜಮಾನಯಾ ।
ಉವಾಚ ವಾಚಾ ರಾಜಾನಂ ಸ ಬಾಷ್ಪಪರಿರಬ್ಧಯಾ ॥ ೧೩

ಅಬ್ರವೀನ್ಮಾಂ ಮಹಾರಾಜ ಧರ್ಮಮೇವಾನುಪಾಲಯನ್ ।
ಅಂಜಲಿಂ ರಾಘವಃ ಕೃತ್ವಾ ಶಿರಸಾಭಿಪ್ರಣಮ್ಯ ಚ ॥ ೧೪

ಸುಮಂತ್ರ, ಆ ರಾಜಪುತ್ರರು ಅಂಥ ಸುಕುಮಾರಿಯೂ ಸಾಧ್ವಿಯೂ ಆದ ಸೀತೆಯೊಡನೆ ರಥದಿಂದಿಳಿದು ಕಾಲ್ನಡಿಗೆಯಿಂದ ಹೇಗೆ ಹೋದರು? (೯). ಸುಮಂತ್ರ, ನೀನೇ ಧನ್ಯ. ಅಶ್ವಿನೀ ದೇವತೆಗಳು ಮಂದರ ಪರ್ವತದ ಗುಹೆಯನ್ನು ಪ್ರವೇಶಿಸುವಂತೆ, ನನ್ನ ಮಕ್ಕಳು ಅರಣ್ಯದೊಳಗೆ ಹೋಗುವವರೆಗೂ ನೀನು ಅವರನ್ನು ಕಣ್ಣಾರೆ ನೋಡಿದೆ! (೧೦). ಸುಮಂತ್ರ, ರಾಮನು ಏನು ಹೇಳಿದನು? ಲಕ್ಷ್ಮಣನು ಏನು ಹೇಳಿದನು? ಕಾಡಿಗೆ ಹೋಗಿ ಮೈಥಿಲಿ ಏನು ಹೇಳಿದಳು? ಸಾರಥಿ, ರಾಮನು ಎಲ್ಲಿ ಕುಳಿತ? ಎಲ್ಲಿ ಮಲಗಿದ? ಎಲ್ಲಿ ಏನು ತಿಂದ? ಎಲ್ಲವನ್ನೂ ಹೇಳು. ಅದನ್ನು ಕೇಳುತ್ತಲಾದರೂ ಪ್ರಾಣಹಿಡಿದೇನು! ಸಜ್ಜನರ ಸಹವಾಸದಲ್ಲಿ ಯಯಾತಿ* ಇದ್ದಂತೆ ಇದ್ದೇನು!'' ಎಂದನು (೧೧-೧೨). ಆಗ ಸುಮಂತ್ರನು ಕಣ್ಣೀರಿಡುತ್ತ ಗದ್ಗದಸ್ವರದಿಂದ ತೊದಲುತ್ತ ಹೇಳಿದನು: ''ಮಹಾರಾಜ, ಶ್ರೀರಾಮನು ಧರ್ಮದಲ್ಲಿಯೇ ದೃಷ್ಟಿ ಇಟ್ಟು

---

* ಯಯಾತಿರಾಜನು ಸ್ವರ್ಗಚ್ಯುತನಾಗುವಾಗ 'ನನ್ನನ್ನು ಸಜ್ಜನರ ಮಧ್ಯದಲ್ಲಿ ಬೀಳುವಂತೆ ಮಾಡು' ಎಂದು ಇಂದ್ರನನ್ನು ಬೇಡಿಕೊಂಡನು. ಆದರಂತೆ ಸಜ್ಜನರ ಸಹವಾಸದಲ್ಲಿದ್ದು ಸತ್ಕಥಾಶ್ರವಣ ತತ್ತ್ವ ವಿಚಾರಗಳಿಂದ ಸುಖಿಯಾದನು.

ಸೂತ ಮದ್ವಚನಾತ್ತಸ್ಯ ತಾತಸ್ಯ ವಿದಿತಾತ್ಮನಃ ।
ಶಿರಸಾ ವಂದನೀಯಸ್ಯ ವಂದ್ಯೌ ಪಾದೌ ಪುನಃ ಪುನಃ ॥ ೧೫

ಸರ್ವಮಂತಃಪುರಂ ವಾಚ್ಯಂ ಸೂತ ಮದ್ವಚನಾತ್ತ್ವಯಾ ।
ಆರೋಗ್ಯಮವಿಶೇಷೇಣ ಯಥಾರ್ಹಮಭಿವಾದನಮ್ ॥ ೧೬

ಮಾತಾ ಚ ಮಮ ಕೌಸಲ್ಯಾ ಕುಶಲಂ ಚಾಭಿವಾದನಮ್ ।
ಅಪ್ರಮಾದಂ ಚ ವಕ್ತವ್ಯಾ ಬ್ರೂಯಾಶ್ಚೈನಾಮಿದಂ ವಚಃ ॥ ೧೭

ಧರ್ಮನಿತ್ಯಾ ಯಥಾಕಾಲಮಗ್ನ್ಯಾಗಾರಪರಾ ಭವ ।
ದೇವಿ ದೇವಸ್ಯ ಪಾದೌ ಚ ದೇವವತ್ ಪರಿಪಾಲಯ ॥ ೧೮

ಅಭಿಮಾನಂ ಚ ಮಾನಂ ಚ ತ್ಯಕ್ತ್ವಾ ವರ್ತಸ್ವ ಮಾತೃಷು ।
ಅನು ರಾಜಾನಮಾರ್ಯಾಂ ಚ ಕೈಕೇಯೀಮಂಬ ಕಾರಯ ॥ ೧೯

ಕುಮಾರೇ ಭರತೇ ವೃತ್ತಿರ್ವರ್ತಿತವ್ಯಾ ಚ ರಾಜವತ್ ।
ಅರ್ಥಜ್ಯೇಷ್ಠಾ ಹಿ ರಾಜಾನೋ ರಾಜಧರ್ಮಮನುಸ್ಮರ ॥ ೨೦

ನಿನಗೆ ತಲೆಬಾಗಿ ನಿಂತು ಕೈಮುಗಿದು ಹೀಗೆ ಹೇಳಿದ್ದಾನೆ (೧೩-೧೪). ''ಸೂತ, ಪ್ರಾಜ್ಞನೂ ಪೂಜ್ಯನೂ ಆದ ತಂದೆಯ ಪಾದಗಳಿಗೆ ನಾನು ಮತ್ತೆ ಮತ್ತೆ ತಲೆಬಾಗಿ ವಂದಿಸಿದ್ದೇನೆಂದು ತಿಳಿಸು. ಅಂತಃಪುರದ ಮಾತೆಯರೆಲ್ಲರಿಗೂ ನಾನು ಆರೋಗ್ಯವನ್ನು ವಿಚಾರಿಸಿದ್ದೇನೆಂದು ಹೇಳಿ, ಯಥಾಯೋಗ್ಯವಾಗಿ ನನ್ನ ವಂದನೆಗಳನ್ನು ತಿಳಿಸು (೧೫-೧೬). ನನ್ನ ತಾಯಿಯಾದ ಕೌಸಲ್ಯಾ ದೇವಿಗೆ ನನ್ನ ಕುಶಲವನ್ನು ತಿಳಿಸಿ, ನಾನು ಅಭಿವಾದನೆಗಳನ್ನು ಮಾಡಿದೆನೆಂದು ಹೇಳು ಮತ್ತು ಧರ್ಮದ ವಿಷಯದಲ್ಲಿ ಪ್ರಮಾದವಾಗದಂತೆ ಇರಬೇಕೆಂದು ಈ ಮಾತನ್ನು ಅರಿಕೆಮಾಡು (೧೭). 'ದೇವಿ, ನೀನು ಧರ್ಮನಿರತಳಾಗಿ ಯುಕ್ತಕಾಲದಲ್ಲಿ ಅಗ್ನಿಹೋತ್ರದ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿರು. ಮಹಾರಾಜನನ್ನು ದೇವತೆಯೆಂದು ಭಾವಿಸಿ ಅವನ ಪಾದಗಳನ್ನು ಸೇವಿಸುತ್ತಿರು (೧೮). ಹಿರಿಯಳೆಂಬ ಅಭಿಮಾನವನ್ನೂ ಇತರರಲ್ಲಿ ಅಸಮಾಧಾನವನ್ನೂ ತೊರೆದು ನನ್ನ ಎಲ್ಲ ಮಾತೆಯರಲ್ಲಿಯೂ ಹೊಂದಿಕೊಂಡಿರು. ಅಮ್ಮ, ಮಹಾರಾಜನನ್ನೂ ಪೂಜ್ಯಳಾದ ಕೈಕೇಯಿಯನ್ನೂ ಅನುಸರಿಕೊಂಡಿರಬೇಕು (೧೯). ಭರತನು ಕುಮಾರನಾದರೂ ಅವನಲ್ಲಿ ರಾಜನೆಂಬ ಗೌರವದಿಂದ

ಭರತಃ ಕುಶಲಂ ವಾಚ್ಯೋ ವಾಚ್ಯೋ ಮದ್ವಚನೇನ ಚ ।
ಸರ್ವಾಸ್ವೇವ ಯಥಾನ್ಯಾಯಂ ವೃತ್ತಿಂ ವರ್ತಸ್ವ ಮಾತೃಷು ॥ ೨೧

ವಕ್ತವ್ಯಶ್ಚ ಮಹಾಬಾಹುರಿಕ್ಷ್ವಾಕುಕುಲನಂದನಃ ।
ಪಿತರಂ ಯೌವರಾಜ್ಯಸ್ಥೋ ರಾಜ್ಯಸ್ಥಮನುಪಾಲಯ ॥ ೨೨

ಅತಿಕ್ರಾಂತವಯಾ ರಾಜಾ ಮಾ ಸ್ಮೈನಂ ವ್ಯಪರೋರುಧಃ ।
ಕುಮಾರರಾಜ್ಯೇ ಜೀವ ತ್ವಂ ತಸ್ಯೈವಾಜ್ಞಾಪ್ರವರ್ತನಾತ್ ॥ ೨೩

ಅಬ್ರವೀಚ್ಚಾಪಿ ಮಾಂ ಭೂಯೋ ಭೃಶಮಶ್ರೂಣಿ ವರ್ತಯನ್ ।
ಮಾತೇವ ಮಮ ಮಾತಾ ತೇ ದ್ರಷ್ಟವ್ಯಾ ಪುತ್ರಗರ್ಧಿನೀ ॥ ೨೪

ಇತ್ಯೇವಂ ಮಾಂ ಮಹಾರಾಜ ಬ್ರುವನ್ನೇವ ಮಹಾಯಶಾಃ ।
ರಾಮೋ ರಾಜೀವತಾಮ್ರಾಕ್ಷೋ ಭೃಶಮಶ್ರೂಣ್ಯವರ್ತಯತ್ ॥ ೨೫

ನಡೆದುಕೊಳ್ಳಬೇಕು. ಏಕೆಂದರೆ, ಐಶ್ವರ್ಯಪ್ರಯುಕ್ತವಾಗಿ ರಾಜರು ಯಾವಾಗಲೂ ದೊಡ್ಡವರೇ. ಈ ರಾಜನೀತಿಯು ನೆನಪಿನಲ್ಲಿರಲಿ' ಎಂದು ನನ್ನ ತಾಯಿಗೆ ಹೇಳು (೨೦). ಸುಮಂತ್ರ, ಭರತನಿಗೆ ನಾನು ಕ್ಷೇಮವಾಗಿದ್ದೇನೆಂದು ತಿಳಿಸು. ನಾನು ಹೇಳಿದ್ದೇನೆಂದು ಈ ಮಾತನ್ನು ಅವನಿಗೆ ಹೇಳು : 'ಭರತ, ನಮ್ಮ ಎಲ್ಲ ಮಾತೆಯರಲ್ಲಿಯೂ ಪಕ್ಷಪಾತವಿಲ್ಲದೆ ನ್ಯಾಯವಾಗಿ ನಡೆದುಕೋ' ಎಂದು ಹೇಳಿ ಮಹಾಬಾಹುವೂ ಇಕ್ಷ್ವಾಕುವಂಶನಂದನನೂ ಆದ ಭರತನಿಗೆ ಇನ್ನೊಂದು ವಿಷಯವನ್ನು ತಿಳಿಸು : 'ಭರತ, ನೀನು ಯುವರಾಜಪದವಿಯನ್ನು ಸ್ವೀಕರಿಸಿ ಮಹಾರಾಜನಾದ ತಂದೆಯ ಯೋಗಕ್ಷೇಮಗಳನ್ನು ಸರಿಯಾಗಿ ನೋಡಿಕೊಳ್ಳಬೇಕು (೨೧-೨೨). ಆತನು ಬಹಳ ವೃದ್ಧನಾಗಿದ್ದಾನೆ. ಅವನ ಇಚ್ಛೆಗೆ ವಿರೋಧವಾಗಿ ನಡೆಯಬೇಡ. ತಂದೆಯ ಆಜ್ಞೆಯನ್ನೇ ನಡೆಸುತ್ತ ಯುವರಾಜಪದವಿಯಲ್ಲಿ ಸುಖವಾಗಿರು' ಎಂದು ಶ್ರೀರಾಮನು ಹೇಳಿದನು (೨೩). ಪುನಃ ಧಾರೆಧಾರೆಯಾಗಿ ಕಣ್ಣೀರು ಸುರಿಸುತ್ತ ನನ್ನನ್ನು ನೋಡಿ 'ಸುಮಂತ್ರ, ಮಗನಿಗಾಗಿ ಹಾತೊರೆಯುವ ನನ್ನ ತಾಯಿಯನ್ನು ನಿನ್ನ ತಾಯಿಯಂತೆ ನೋಡಿಕೊ' ಎಂದು ನುಡಿದನು. ಮಹಾರಾಜ, ಮಹಾಭಾಗನಾದ ಶ್ರೀರಾಮನು ಈ ರೀತಿಯಲ್ಲಿ ನನಗೆ ಹೇಳಿದನು. ಆ ಪದ್ಮನೇತ್ರನು

ಲಕ್ಷ್ಮಣಸ್ತು ಸುಸಂಕ್ರುದ್ಧೋ ನಿಃಶ್ವಸನ್ ವಾಕ್ಯಮಬ್ರವೀತ್ ।
ಕೇನಾಯಮಪರಾಧೇನ ರಾಜಪುತ್ರೋ ವಿವಾಸಿತಃ ॥ ೨೬

ರಾಜ್ಞಾ ತು ಖಲು ಕೈಕೇಯ್ಯಾ ಲಘು ತ್ವಾಶ್ರಿತ್ಯ ಶಾಸನಮ್ ।
ಕೃತಂ ಕಾರ್ಯಮಕಾರ್ಯಂ ವಾ ವಯಂ ಯೇನಾಭಿಪೀಡಿತಾಃ ॥ ೨೭

ಯದಿ ಪ್ರವ್ರಾಜಿತೋ ರಾಮೋ ಲೋಭಕಾರಣಕಾರಿತಮ್ ।
ವರದಾನನಿಮಿತ್ತಂ ವಾ ಸರ್ವಥಾ ದುಷ್ಕೃತಂ ಕೃತಮ್ ॥ ೨೮

ಇದಂ ತಾವದ್ಯಥಾಕಾಮಮೀಶ್ವರಸ್ಯ ಕೃತೇ ಕೃತಮ್ ।
ರಾಮಸ್ಯ ತು ಪರಿತ್ಯಾಗೇ ನ ಹೇತುಮುಪಲಕ್ಷಯೇ ॥ ೨೯

ಅಸಮೀಕ್ಷ್ಯ ಸಮಾರಾಬ್ಧಂ ವಿರುದ್ಧಂ ಬುದ್ಧಿಲಾಘವಾತ್ ।
ಜನಯಿಷ್ಯತಿ ಸಂಕ್ರೋಶಂ ರಾಘವಸ್ಯ ವಿವಾಸನಮ್ ॥ ೩೦

ಮಾತನಾಡುವಾಗ ಧಾರಾಕಾರವಾಗಿ ಕಂಬನಿ ಸುರಿಯುತ್ತಿತ್ತು (೨೪-೨೫). ಲಕ್ಷ್ಮಣನು ಮಾತ್ರ ಸಿಟ್ಟಿನಿಂದ ಉರಿದುಬಿದ್ದನು. ಅವನು ಬುಸುಗುಟ್ಟುತ್ತ ಹೀಗೆಂದನು : 'ಸುಮಂತ್ರ, ಈ ರಾಜಪುತ್ರನನ್ನು ದೇಶಭ್ರಷ್ಟನನ್ನಾಗಿ ಹೊರಡಿಸಿದ್ದು ಯಾವ ತಪ್ಪಿಗಾಗಿ? ಕೈಕೇಯಿಯ ತುಚ್ಛವಾದ ಆಜ್ಞೆಯನ್ನು ಮನ್ನಿಸಿ ರಾಜನು ಇಂಥ ಅಕಾರ್ಯವನ್ನು ಮಾಡಿದನಲ್ಲ! ಒಟ್ಟಿನಲ್ಲಿ ನಾವು ಕಷ್ಟಕ್ಕೆ ಸಿಕ್ಕಿದೆವು (೨೬-೨೭). ರಾಮನನ್ನು ವನಕ್ಕೆ ಕಳಿಸಿದ್ದು ಕೈಕೇಯಿಯ ದುರಾಸೆಯಿಂದಲೊ, ರಾಜನು ವರವನ್ನು ಕೊಟ್ಟಿದ್ದರಿಂದಲೊ-ಹೇಗಿದ್ದರೂ ಇದು ಮಾಡಬಾರದ ಅನುಚಿತಕಾರ್ಯ. ತಾನು ಪ್ರಭುವೆಂಬ ಮದದಿಂದ ಸ್ವೇಚ್ಛೆಯಾಗಿ ಮಾಡಿದ ಕೆಲಸವಿದು. ರಾಮನ ಪರಿತ್ಯಾಗಕ್ಕೆ ಇನ್ನು ಯಾವ ನಿಮಿತ್ತವೂ ನನಗೆ ಕಾಣವುದಿಲ್ಲ* (೨೮-೨೯). ಇದು ವಿವೇಕವಿಲ್ಲದೆ ಬುದ್ಧಿಮಾಂದ್ಯದಿಂದ ಮಾಡಿದ ಲೋಕಶಾಸ್ತ್ರವಿರುದ್ಧವಾದ ಕಾರ್ಯ. ಇದು ರಾಜನಿಗೆ

---

* ೨೯ನೆಯ ಶ್ಲೋಕಕ್ಕೆ ಇನ್ನೊಂದು ಅರ್ಥವೂ ಸ್ವರಸವಾಗಿ ಕೊಡುತ್ತದೆ : ''ರಾಜನು ಪ್ರಭುವಾದ್ದರಿಂದ ತನಗೆ ಇಷ್ಟಬಂದಂತೆ ಭರತನಿಗೆ ರಾಜ್ಯವನ್ನು ಕೊಟ್ಟರೆ ಕೊಡಲಿ, ಆದರೆ ರಾಮನನ್ನು ವನಕ್ಕೆ ಕಳಿಸಲು ಕಾರಣವೇನೂ ಇಲ್ಲ.''

ಅಹಂ ತಾವನ್ಮಹಾರಾಜೇ ಪಿತೃತ್ವಂ ನೋಪಲಕ್ಷಯೇ ।
ಭ್ರಾತಾ ಭರ್ತಾ ಚ ಬಂಧುಶ್ಚ ಪಿತಾ ಚ ಮಮ ರಾಘವಃ ॥ ೩೧

ಸರ್ವಲೋಕಪ್ರಿಯಂ ತ್ಯಕ್ತ್ವಾ ಸರ್ವಲೋಕಹಿತೇ ರತಮ್ ।
ಸರ್ವಲೋಕೋಽನುರಜ್ಯೇತ ಕಥಂ ಚಾನೇನ ಕರ್ಮಣಾ ॥ ೩೨

ಸರ್ವಪ್ರಜಾಭಿರಾಮಂ ಹಿ ರಾಮಂ ಪ್ರವ್ರಾಜ್ಯ ಧಾರ್ಮಿಕಮ್ ।
ಸರ್ವಲೋಕಂ ವಿರುಧ್ಯೇಮಂ ಕಥಂ ರಾಜಾ ಭವಿಷ್ಯಸಿ ॥ ೩೩

ಜಾನಕೀ ತು ಮಹಾರಾಜ ನಿಃಶ್ವಸಂತೀ ತಪಸ್ವಿನೀ ।
ಭೂತೋಪಹತಚಿತ್ತೇವ ವಿಷ್ಠಿತಾ ವಿಸ್ಮಿತಾ ಸ್ಥಿತಾ ॥ ೩೪

ಅದೃಷ್ಟಪೂರ್ವವ್ಯಸನಾ ರಾಜಪುತ್ರೀ ಯಶಸ್ವಿನೀ ।
ತೇನ ದುಃಖೇನ ರುದತೀ ನೈವ ಮಾಂ ಕಿಂಚಿದಬ್ರವೀತ್ ॥ ೩೫

ಉದ್ವೀಕ್ಷಮಾಣಾ ಭರ್ತಾರಂ ಮುಖೇನ ಪರಿಶುಷ್ಯತಾ ।
ಮುಮೋಚ ಸಹಸಾ ಬಾಷ್ಪಂ ಮಾಂ ಪ್ರಯಾಂತಮುದೀಕ್ಷ್ಯ ಸಾ ॥ ೩೬

ಕೆಟ್ಟ ಹೆಸರನ್ನು ತರುವುದು. ಮಹಾರಾಜನಲ್ಲಿ ನನಗೆ ತಂದೆಯೆಂಬ ಭಾವನೆ ಇಲ್ಲ. ಶ್ರೀರಾಮನೇ ನನಗೆ ತಂದೆ, ಅಣ್ಣ, ಪ್ರಭು, ಬಂಧು – ಎಲ್ಲವೂ ನನಗೆ ಶ್ರೀರಾಮನೇ (೩೦–೩೧). ಸಮಸ್ತಜನರಿಗೂ ಪ್ರಿಯನಾಗಿ ಸಮಸ್ತ ಜನರ ಹಿತದಲ್ಲಿಯೂ ಆಸಕ್ತನಾದ ಈ ಮಹಾಪುರುಷನನ್ನು ಪರಿತ್ಯಜಿಸಿದ ಮೇಲೆ, ಆ ರಾಜನಲ್ಲಿ ಯಾವ ಮನುಷ್ಯನು ಅನುರಾಗವನ್ನಿಟ್ಟಾನು? (೩೨). ಸಕಲ ಪ್ರಜೆಗಳಿಗೆ ಆನಂದದಾಯಕನೂ ಧಾರ್ಮಿಕನೂ ಆದ ರಾಮನನ್ನು ಕಾಡಿಗೆ ಅಟ್ಟಿ ಸಕಲ ಪ್ರಜೆಗಳಿಗೂ ಕೆಡಕನ್ನು ಮಾಡಿ, ನೀನು ಹೇಗೆ ರಾಜನೆನ್ನಿಸಿಕೊಳ್ಳುತ್ತೀಯೆ? (ಎಂದು ದಶರಥನನ್ನು ಕೇಳು) ಎಂಬುದಾಗಿ ಲಕ್ಷ್ಮಣನು ಹೇಳಿದನು (೩೩). ಮಹಾರಾಜ, ಸಾಧ್ವಿಯಾದ ಜನಕಪುತ್ರಿಯಾದರೊ ನಿಟ್ಟುಸಿರುಬಿಡುತ್ತ ಸುಮ್ಮನೆ ನಿಂತಿದ್ದಳು. ಭೂತಾವಿಷ್ಟಳಂತೆ ದಿಗ್ಭ್ರಾಂತಳಾಗಿ ನಿಂತಿದ್ದಳು. ಕೀರ್ತಿಶಾಲಿನಿಯಾದ ಆ ರಾಜಕುಮಾರಿಯು ಅಂಥ ಕಷ್ಟವನ್ನು ಹಿಂದೆ ಕಂಡವಳಲ್ಲ. ಅವಳು ಒಂದೇ ಸಮನಾಗಿ ಅಳುತ್ತಿದ್ದಳೇ ಹೊರತು ನನ್ನೊಡನೆ ಏನನ್ನೂ ಹೇಳಲಿಲ್ಲ (೩೪–೩೫). ನಾನು ಹೊರಟದ್ದನ್ನು ಕಂಡು ಆ ದೇವಿಯು ಬಾಡಿದ ಮುಖವನ್ನು ಮೇಲೆತ್ತಿ ತನ್ನ ಪತಿಯನ್ನು ನೋಡುತ್ತ, ಬಳಬಳನೆ ಕಣ್ಣೀರುಸುರಿಸಿದಳು (೩೬). ಆಗ

ತಥೈವ ರಾಮೋಽಶ್ರುಮುಖಃ ಕೃತಾಂಜಲಿಃ ।
ಸ್ಥಿತೋಽಭವಲ್ಲಕ್ಷ್ಮಣಬಾಹುಪಾಲಿತಃ ।
ತಥೈವ ಸೀತಾ ರುದತೀ ತಪಸ್ವಿನೀ
ನಿರೀಕ್ಷತೇ ರಾಜರಥಂ ತಥೈವ ಮಾಮ್ ॥ ೩೭

ಇತಿ ಶ್ರೀಮದ್ರಾಮಯಣೇ ಅಯೋಧ್ಯಾಕಾಂಡೇ ಅಷ್ಟಪಂಚಾಶಃ ಸರ್ಗಃ

ಏಕೋನಷಷ್ಟಿತಮಃ ಸರ್ಗಃ

ದಶರಥವಿಲಾಪಃ

ಇತಿ ಬ್ರುವಂತಂ ತಂ ಸೂತಂ ಸುಮಂತ್ರಂ ಮಂತ್ರಿಸತ್ತಮಮ್ ।
ಬ್ರೂಹಿ ಶೇಷಂ ಪುನರಿತಿ ರಾಜಾ ವಚನಮಬ್ರವೀತ್ ॥ ೧

ತಸ್ಯ ತದ್ವಚನಂ ಶ್ರುತ್ವಾ ಸುಮಂತ್ರೋ ಬಾಷ್ಪವಿಕ್ಲವಃ ।
ಕಥಯಾಮಾಸ ಭೂಯೋಽಪಿ ರಾಮಸಂದೇಶವಿಸ್ತರಮ್ ॥ ೨

ಶ್ರೀರಾಮನ ಮುಖದಮೇಲೆ ಬಾಷ್ಪವು ಹರಿಯುತ್ತಿತ್ತು. ಅವನು ಕೈ ಮುಗಿದು ನಿಂತಿದ್ದನು. ಲಕ್ಷ್ಮಣನು ತನ್ನ ಬಾಹುಗಳಿಂದ ಅವನನ್ನು ಆಸರೆಯಾಗಿ ಹಿಡಿದುಕೊಂಡಿದ್ದನು. ಸಾಧ್ವಿಯಾದ ಸೀತೆಯು ರೋದಿಸುತ್ತ ನಮ್ಮ ರಾಜರಥವನ್ನೂ ನನ್ನನ್ನೂ ನೋಡುತ್ತಿದ್ದಳು ಎಂದು ಸುಮಂತ್ರನು ಹೇಳಿದನು (೩೭).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಐವತ್ತೆಂಟನೆಯ ಸರ್ಗ

ಸರ್ಗ ೫೯

ದಶರಥನ ಕೋರಿಕೆಯಂತೆ ಸುಮಂತ್ರನು ಶ್ರೀರಾಮನ ಮುಂದಿನ
ವೃತ್ತಾಂತವನ್ನು ಹೇಳುವುದು. ದಶರಥನ ವಿಲಾಪ.

ಹೀಗೆ ಸಚಿವೋತ್ತಮನಾದ ಸುಮಂತ್ರನು ಹೇಳಲಾಗಿ, ದಶರಥನು "ಸುಮಂತ್ರ, ಮಿಕ್ಕ ಎಲ್ಲ ವಿಷಯವನ್ನೂ ಹೇಳು" ಎಂದನು. ಆಗ ಸುಮಂತ್ರನು

ಜಟಾಃ ಕೃತ್ವಾ ಮಹಾರಾಜ ಚೀರವಲ್ಕಲಧಾರಿಣೌ ।
ಗಂಗಾಮುತ್ತೀರ್ಯ ತೌ ವೀರೌ ಪ್ರಯಾಗಾಭಿಮುಖೌ ಗತೌ ॥ ೩

ಅಗ್ರತೋ ಲಕ್ಷ್ಮಣೋ ಯಾತಿ ಪಾಲಯನ್ ರಘುನಂದನಮ್ ।
ಅನಂತರಂ ಚ ಸೀತಾಥ ರಾಘವೋ ರಘುನಂದನಃ ॥ ೪

ತಾಂಸ್ತಥಾ ಗಚ್ಛತೋ ದೃಷ್ಟ್ವಾ ನಿವೃತ್ತೋಽಸ್ಮ್ಯ ವಶಸ್ತದಾ ।
ಮಮ ತ್ವಶ್ವಾ ನಿವೃತ್ತಸ್ಯ ನ ಪ್ರಾವರ್ತಂತ ವರ್ತ್ಮನಿ ॥ ೫

ಉಷ್ಣಮಶ್ರು ಪ್ರಮುಂಚಂತೋ ರಾಮೇ ಸಂಪ್ರಸ್ಥಿತೇ ವನಮ್ ।
ಉಭಾಭ್ಯಾಂ ರಾಜಪುತ್ರಾಭ್ಯಾಮಥ ಕೃತ್ವಾಹಮಂಜಲಿಮ್ ॥ ೬

ಪ್ರಸ್ಥಿತೋ ರಥಮಾಸ್ಥಾಯ ತದ್ದುಃಖಮಪಿ ಧಾರಯನ್ ।
ಗುಹೇನ ಸಾರ್ಧಂ ತತ್ರೈವ ಸ್ಥಿತೋಽಸ್ಮಿ ದಿವಸಾನ್ ಬಹೂನ್ ॥ ೭

ಆಶಯಾ ಯದಿ ಮಾಂ ರಾಮಃ ಪುನಃ ಶಬ್ದಾಪಯೇದಿತಿ ।
ವಿಷಯೇ ತೇ ಮಹಾರಾಜ ರಾಮವ್ಯಸನಕರ್ಶಿತಾಃ ॥ ೮

ಕಂಬನಿಗರೆಯುತ್ತ ಮುಂದಿನ ವೃತ್ತಾಂತವನ್ನು ಈ ರೀತಿಯಲ್ಲಿ ತಿಳಿಸಿದನು (೧-೨). ''ಮಹಾರಾಜ, ನಾರುಬಟ್ಟೆಗಳನ್ನುಟ್ಟಿದ್ದ ಆ ವೀರರು ಜಟೆಗಳನ್ನು ಧರಿಸಿ ಗಂಗಾನದಿಯನ್ನು ದಾಟಿ ಪ್ರಯಾಗಕ್ಕೆ ಅಭಿಮುಖವಾಗಿ ಹೊರಟರು. ಲಕ್ಷ್ಮಣನು ಶ್ರೀರಾಮನ ರಕ್ಷಣೆಗಾಗಿ ಮುಂದುಗಡೆ ಹೋಗುತ್ತಿದ್ದನು. ಅವನ ಹಿಂದೆ ಸೀತೆಯೂ ಅವಳ ಹಿಂದೆ ರಾಘವನೂ ಹೊರಟರು (೩-೪). ಅವರು ಹಾಗೆ ಹೋದುದನ್ನು ನೋಡಿ ನಾನು ಬೇರೆ ಮಾರ್ಗವಿಲ್ಲದೆ ಹಿಂದಿರುಗಬೇಕಾಯಿತು. ನನ್ನ ಕುದುರೆಗಳು ದಾರಿಯನ್ನು ಕೂಡದೆ ಮೊಂಡುಹಿಡಿದವು. ರಾಮನು ಕಾಡನ್ನು ಪ್ರವೇಶಿಸಲು, ಅವು ಬಿಸಿಯಾದ ಕಂಬನಿಯನ್ನು ಸುರಿಸುತ್ತಿದ್ದವು. ನಾನು ಆ ರಾಜಪುತ್ರರಿಗೆ ಬದ್ಧಾಂಜಲಿಯಾಗಿ ಪ್ರಣಾಮವನ್ನರ್ಪಿಸಿ, ಆ ದುಃಖವನ್ನು ಹೊತ್ತು ರಥವನ್ನು ಹತ್ತಿದೆನು (೫-೬). ಮಹಾರಾಜ, ನಾನು ಗುಹನ ಜೊತೆಗೆ ಅಲ್ಲಿ ಕೆಲವು ದಿವಸ ಉಳಿದುಕೊಂಡೆ. ರಾಮನೇನಾದರೂ ಪುನಃ ಹೇಳಿಕಳಿಸಬಹುದೆಂದು ನನಗೆ ಆಸೆ ಇತ್ತು. ಪ್ರಭು, ನಿನ್ನ

ಅಪಿ ವೃಕ್ಷಃ ಪರಿಮ್ಲಾನಾಃ ಸಪುಷ್ಪಾಂಕುರಕೋರಕಾಃ ।
ಉಪತಪ್ತೋದಕಾ ನದ್ಯಃ ಪಲ್ವಲಾನಿ ಸರಾಂಸಿ ಚ ॥ ೯

ಪರಿಶುಷ್ಕಪಲಾಶಾನಿ ವನಾನ್ಯುಪವನಾನಿ ಚ ।
ನ ಚ ಸರ್ಪಂತಿ ಸತ್ತ್ವಾನಿ ವ್ಯಾಲಾ ನ ಪ್ರಚರಂತಿ ಚ ॥ ೧೦

ರಾಮಶೋಕಾಭಿಭೂತಂ ತನ್ನಿಷ್ಕೂಜಮಭವದ್ವನಮ್ ।
ಲೀನಪುಷ್ಕರಪತ್ರಾಶ್ಚ ನರೇಂದ್ರ ಕಲುಷೋದಕಾಃ ॥ ೧೧

ಸಂತಪ್ತಪದ್ಮಾಃ ಪದ್ಮಿನ್ಯೋ ಲೀನಮೀನವಿಹಂಗಮಾಃ ।
ಜಲಜಾನಿ ಚ ಪುಷ್ಪಾಣಿ ಮಾಲ್ಯಾನಿ ಸ್ಥಲಜಾನಿ ಚ ॥ ೧೨

ನಾದ್ಯ ಭಾಂತ್ಯಲ್ಪಗಂಧೀನಿ ಫಲಾನಿ ಚ ಯಥಾಪುರಮ್ ।
ಅತ್ರೋದ್ಯಾನಾನಿ ಶೂನ್ಯಾನಿ ಪ್ರಲೀನವಿಹಗಾನಿ ಚ ॥ ೧೩

ನ ಚಾಭಿರಾಮಾನಾರಾಮಾನ್ ಪಶ್ಯಾಮಿ ಮನುಜರ್ಷಭ ।
ಪ್ರವಿಶಂತಮಯೋಧ್ಯಾಂ ಮಾಂ ನ ಕಶ್ಚಿದಭಿನಂದತಿ ॥ ೧೪

ರಾಜ್ಯದಲ್ಲಿ ರಾಮನಿಲ್ಲದ ವ್ಯಸನದಿಂದ ಸಕಲರೂ ಖಿನ್ನರಾಗಿದ್ದಾರೆ (೭-೮). ಹೂ ಚಿಗುರು ಮೊಗ್ಗುಗಳಿಂದ ಕಂಗೊಳಿಸುತ್ತಿದ್ದ ಮರಗಳೂ ಸಹ ಬಾಡಿಹೋಗಿವೆ. ಹೊಳೆ ಹೊಂಡ ಕೆರೆಗಳ ನೀರು ಕಾದು ಬಿಸಿಯಾಗಿದೆ. ವನ ಉಪವನಗಳಲ್ಲಿ ಎಲೆಗಳು ಒಣಗಿವೆ. ಪ್ರಾಣಿಗಳು ತಮ್ಮ ಸ್ಥಳದಿಂದ ಕದಲುವುದಿಲ್ಲ. ಕ್ರೂರಮೃಗಗಳೂ ಕೂಡ ಸಂಚಾರವನ್ನು ನಿಲ್ಲಿಸಿವೆ (೯-೧೦). ಶ್ರೀರಾಮನ ವಿರಹಶೋಕದಿಂದ ಅರಣ್ಯವು ನಿಶ್ಶಬ್ದವಾಗಿತ್ತು. ಸರೋವರಗಳಲ್ಲಿ ತಾವರೆಯ ಎಲೆಗಳು ನೀರಿನಲ್ಲಿ ಮುಳುಗಿಕೊಂಡಿವೆ. ನೀರು ಕೊಚ್ಚೆಯಾಗಿದೆ. ತಾವರೆ ಹೂಗಳು ಒಣಗಿಹೋಗಿವೆ. ಅಲ್ಲಿ ಮೀನುಗಳಾಗಲಿ ಜಲಚರಪಕ್ಷಿಗಳಾಗಲಿ ಕಾಣಿಸುವುದಿಲ್ಲ (೧೧-೧೨). ಜಲದಲ್ಲಿ-ನೆಲದಲ್ಲಿ ಬೆಳೆಯುವ ಹೂಗಳೂ ಹಣ್ಣುಗಳೂ ಸುವಾಸನೆಯನ್ನು ಬೀರುತ್ತಿಲ್ಲ. ಅವು ಮೊದಲಿನಂತೆ ಶೋಭಿಸುವುದೇ ಇಲ್ಲ. ಉದ್ಯಾನವನಗಳು ನಿರ್ಜನವಾಗಿವೆ. ಹಕ್ಕಿಗಳು ಗೂಡಿನಲ್ಲಿಯೇ ಸೇರಿಕೊಂಡಿವೆ (೧೩). ಹೂವಿನ

ನರಾ ರಾಮಮಪಶ್ಯಂತೋ ನಿಃಶ್ವಸಂತಿ ಮುಹುರ್ಮುಹುಃ ।
ದೇವ ರಾಜರಥಂ ದೃಷ್ಟ್ವಾ ವಿನಾ ರಾಮಮಿಹಾಗತಮ್ ॥ ೧೫

ದುಃಖಾದಶ್ರುಮುಖಃ ಸರ್ವೋ ರಾಜಮಾರ್ಗಗತೋ ಜನಃ ।
ಹರ್ಮ್ಯೈರ್ವಿಮಾನೈಃ ಪ್ರಾಸಾದೈರವೇಕ್ಷ್ಯ ರಥಮಾಗತಮ್ ॥ ೧೬

ಹಾಹಾಕಾರಕೃತಾ ನಾರ್ಯೋ ರಾಮದರ್ಶನಕರ್ಶಿತಾಃ ।
ಆಯತ್ತೈರ್ವಿಮಲೈರ್ನೇತ್ರೈರಶ್ರುವೇಗಪರಿಪ್ಲುತೈಃ ॥ ೧೭

ಅನ್ಯೋನ್ಯಮಭಿವೀಕ್ಷಂತೇಽವ್ಯಕ್ತಮಾರ್ತತರಾಃ ಸ್ತ್ರಿಯಃ ।
ನಾಮಿತ್ರಾಣಾಂ ನ ಮಿತ್ರಾಣಾಮುದಾಸೀನಜನಸ್ಯ ಚ ॥ ೧೮

ಅಹಮಾರ್ತತಯಾ ಕಿಂಚಿದ್ವಿಶೇಷಮುಪಲಕ್ಷಯೇ ।
ಅಪ್ರಹೃಷ್ಟಮನುಷ್ಯಾ ಚ ದೀನನಾಗತುರಂಗಮಾ ॥ ೧೯

ಆರ್ತಸ್ವರಪರಿಗ್ಲಾನಾ ವಿನಿಃಶ್ವಸಿತನಿಃಸ್ವನಾ ।
ನಿರಾನಂದಾ ಮಹಾರಾಜ ರಾಮಪ್ರವ್ರಾಜನಾತುರಾ ॥ ೨೦

ತೋಟಗಳಲ್ಲಿ ಕಾಂತಿಯೇ ಇಲ್ಲ. ಮಹಾರಾಜ ನಾನು ಅಯೋಧ್ಯೆಗೆ ಬಂದಾಗ ಒಬ್ಬರೂ ನನ್ನನ್ನು ಅಭಿನಂದಿಸಲಿಲ್ಲ. ದೇವ, ರಾಮನಿಲ್ಲದೆ ಇಲ್ಲಿಗೆ ಬಂದ ರಾಜರಥವನ್ನು ನೋಡಿ, ರಾಮನನ್ನು ಕಾಣದೆ ಜನರು ಮೇಲಿಂದ ಮೇಲೆ ನಿಟ್ಟುಸಿರು ಬಿಡುತ್ತಿದ್ದರು (೧೪-೧೫). ರಾಜಮಾರ್ಗದಲ್ಲಿ ಜನರೆಲ್ಲರೂ ಶೋಕದಿಂದ ಕಂಬನಿಯನ್ನು ಮಿಡಿಯುತ್ತಿದ್ದರು. ರಥವು ಶೂನ್ಯವಾಗಿ ಬಂದುದನ್ನು ಕಂಡು ಹರ್ಮ್ಯ ವಿಮಾನ ಪ್ರಾಸಾದಗಳಲ್ಲಿದ್ದ ಹೆಂಗಸರು ಹಾಹಾಕಾರ ಮಾಡಿದರು. ಅವರ ವಿಶಾಲವಾದ ಸ್ವಚ್ಛನೇತ್ರಗಳು ಕಂಬನಿಯಿಂದ ಒದ್ದೆಯಾದವು (೧೬-೧೭). ದುಃಖಾರ್ತರಾದ ಆ ಸ್ತ್ರೀಯರು ಮಾಸಿದ ಕಣ್ಣುಗಳಿಂದ ಒಬ್ಬರನ್ನೊಬ್ಬರು ನೋಡುತ್ತಿದ್ದರು. ಶ್ರೀರಾಮನಿಗೆ ಮಿತ್ರರು ಯಾರು? ಅಮಿತ್ರರು ಯಾರು? ತಟಸ್ಥರು ಯಾರು? - ಎಂಬ ವ್ಯತ್ಯಾಸವು ಸ್ವಲ್ಪವೂ ನನಗೆ ಗೋಚರಿಸಲಿಲ್ಲ. ಎಲ್ಲರೂ ಒಂದೇ ರೀತಿಯಾಗಿ ಶೋಕಿಸುತ್ತಿದ್ದಾರೆ

ಕೌಸಲ್ಯಾ ಪುತ್ರಹೀನೇವ ಅಯೋಧ್ಯಾ ಪ್ರತಿಭಾತಿ ಮಾ ।
ಸೂತಸ್ಯ ವಚನಂ ಶ್ರುತ್ವಾ ರಾಜಾ ಪರಮದೀನಯಾ ॥ ೨೧

ಬಾಷ್ಪೋಪಹತಯಾ ವಾಚಾ ತಂ ಸೂತಮಿದಮಬ್ರವೀತ್ ।
ಕೈಕೇಯ್ಯಾ ಹಿ ನಿಯುಕ್ತೇನ ಪಾಪಾಭಿಜನಭಾವಯಾ ॥ ೨೨

ನ ಮಯಾ ಮಂತ್ರಕುಶಲೈರ್ವೃದ್ಧೈಃ ಸಹ ಸಮರ್ಥಿತಮ್ ।
ನ ಸುಹೃದ್ಭಿರ್ನ ಚಾಮಾತ್ಯೈರ್ಮಂತ್ರಯಿತ್ವಾ ನ ನೈಗಮೈಃ ॥ ೨೩

ಮಯಾಯಮರ್ಥಃ ಸಂಮೋಹಾತ್ ಸ್ತ್ರೀಹೇತೋಃ ಸಹಸಾ ಕೃತಃ ।
ಭವಿತವ್ಯತಯಾ ನೂನಮಿದಂ ವಾ ವ್ಯಸನಂ ಮಹತ್ ॥ ೨೪

ಕುಲಸ್ಯಾಸ್ಯ ವಿನಶಾಯ ಪ್ರಾಪ್ತಂ ಸೂತ ಯದೃಚ್ಛಯಾ ।
ಸೂತ ಯದ್ಯಸ್ತಿ ತೇ ಕಿಂಚಿತ್ ಮಯಾ ತು ಸುಕೃತಂ ಕೃತಮ್ ॥ ೨೫

(೧೮-೧೯). ಮಹಾರಾಜ, ಅಯೋಧ್ಯೆಯಲ್ಲಿ ಯಾವ ಮನುಷ್ಯನಿಗೂ ಹರ್ಷವಿಲ್ಲ. ಆನೆ ಕುದುರೆಗಳು ಖಿನ್ನವಾಗಿವೆ. ಹಾಹಾಕಾರದಿಂದ ನಗರಿಯು ಕಾಂತಿಹೀನವಾಗಿದೆ. ನಿಟ್ಟುಸಿರಿನ ಶಬ್ದ ಒಂದೇ ಕೇಳಿಬರುತ್ತಿದೆ. ಹೀಗೆ ಶ್ರೀರಾಮನ ನಿರ್ಗಮನದಿಂದ ಆನಂದದ ಸೊಲ್ಲೇ ಇಲ್ಲದೆ ಸಂಕಟಪಡುತ್ತಿರುವ ಅಯೋಧ್ಯೆಯು ಪುತ್ರಹೀನೆಯಾದ ಕೌಸಲ್ಯಾದೇವಿಯಂತೆ ನನಗೆ ಕಾಣುತ್ತಿದೆ' ಎಂದು ಸುಮಂತ್ರನು ಅರಿಕೆಮಾಡಿದನು (೨೦-೨೧). ಅವನ ಮಾತನ್ನು ಕೇಳಿ ದಶರಥನು ಕಣ್ಣೀರಿನೊಡನೆ ಬಿಕ್ಕುತ್ತ ಕುಗ್ಗಿದ ಸ್ವರದಿಂದ ಹೀಗೆಂದನು: ''ಆ ಕೈಕೇಯಿ ತನ್ನ ಕುಲಕ್ಕೆ ತಕ್ಕ ಪಾಪಬುದ್ಧಿಯವಳು. ಅವಳ ಒತ್ತಾಯಕ್ಕೆ ನಾನು ಸಿಕ್ಕಿದೆ (೨೨). ಮಂತ್ರಾಲೋಚನೆಯಲ್ಲಿ ಕುಶಲರಾದ ವೃದ್ಧರೊಡನಾಗಲಿ ಸ್ನೇಹಿತರೊಡನಾಗಲಿ ನಾನು ಆಲೋಚಿಸಲಿಲ್ಲ. ಮಂತ್ರಿಗಳನ್ನು ಕೇಳಲಿಲ್ಲ. ನಗರದಲ್ಲಿರುವ ಪ್ರಜೆಗಳ ಅಭಿಪ್ರಾಯವನ್ನೂ ತಿಳಿಯಲಿಲ್ಲ. ಒಬ್ಬ ಹೆಂಗಸಿಗೋಸ್ಕರ ವಿವೇಕವಿಲ್ಲದೆ ಭ್ರಾಂತಿಯಿಂದ ಹೀಗೆ ಮಾಡಿಬಿಟ್ಟೆನು. ನನ್ನ ದುರದೃಷ್ಟದಿಂದಲೇ ಹೀಗಾಯಿತು (೨೩-೨೪). ಸುಮಂತ್ರ ಈ ವಂಶದ ವಿನಾಶಕ್ಕಾಗಿ

ತ್ವಂ ಪ್ರಾಪಯಾಶು ಮಾಂ ರಾಮಂ ಪ್ರಾಣಾಃ ಸಂತ್ವರಯಂತಿ ಮಾಮ್ ।
ಯದ್ಯದ್ಯಾಪಿ ಮಮೈವಾಜ್ಞಾ ನಿವರ್ತಯತು ರಾಘವಮ್ ॥ ೨೬

ನ ಶಕ್ಷ್ಯಾಮಿ ವಿನಾ ರಾಮಂ ಮುಹೂರ್ತಮಪಿ ಜೀವಿತುಮ್ ।
ಅಥವಾಪಿ ಮಹಾಬಾಹುರ್ಗತೋ ದೂರಂ ಭವಿಷ್ಯತಿ ॥ ೨೭

ಮಾಮೇವ ರಥಮಾರೋಪ್ಯ ಶೀಘ್ರಂ ರಾಮಾಯ ದರ್ಶಯ ।
ವೃತ್ತದಂಷ್ಟ್ರೋ ಮಹೇಷ್ವಾಸಃ ಕ್ವಾಸೌ ಲಕ್ಷ್ಮಣಪೂರ್ವಜಃ ॥ ೨೮

ಯದಿ ಜೀವಾಮಿ ಸಾಧ್ವೇನಂ ಪಶ್ಯೇಯಂ ಸೀತಯಾ ಸಹ ।
ಲೋಹಿತಾಕ್ಷಂ ಮಹಾಬಾಹುಮಾಮುಕ್ತ ಮಣಿಕುಂಡಲಮ್ ॥ ೨೯

ರಾಮಂ ಯದಿ ನ ಪಶ್ಯೇಯಂ ಗಮಿಷ್ಯಾಮಿ ಯಮಕ್ಷಯಮ್ ।
ಅತೋ ನ ಕಿಂ ದುಃಖತರಂ ಯೋಽಹಮಿಕ್ಷ್ವಾಕುನಂದನಮ್ ॥ ೩೦

ಇಮಾಮವಸ್ಥಾಮಾಪನ್ನೋ ನೇಹ ಪಶ್ಯಾಮಿ ರಾಘವಮ್ ।
ಹಾ ರಾಮ ರಾಮಾನುಜ ಹಾ ಹಾ ವೈದೇಹಿ ತಪಸ್ವಿನಿ ॥ ೩೧

ಮಹಾವ್ಯಸನವು ಪ್ರಾಪ್ತವಾಯಿತು. ಇದು ದೈವೇಚ್ಛೆ. ಸೂತ, ನಿನಗೆ ನಾನು ಏನಾದರೂ ಉಪಕಾರವನ್ನು ಮಾಡಿದ್ದರೆ, ಈಗಲೇ ನನ್ನನ್ನು ರಾಮನಿದ್ದಲ್ಲಿಗೆ ಕರೆದುಕೊಂಡು ಹೋಗು. ಪ್ರಾಣವು ನನ್ನನ್ನು ತ್ವರೆಪಡಿಸುತ್ತಿದೆ ಈಗಲೂ ನನ್ನ ಆಜ್ಞೆಯೇ ನಡೆಯುವುದು ನಿಜವಾದರೆ, ರಾಮನನ್ನು ಹಿಂದಕ್ಕೆ ಕರೆದುಕೊಂಡುಬಾ (೨೫-೨೬). ರಾಮನಿಲ್ಲದೆ ಇನ್ನು ಒಂದು ಮುಹೂರ್ತಕಾಲವೂ ನಾನು ಜೀವಿಸಲಾರೆ. ಒಂದು ವೇಳೆ ಆ ವೀರನು ಬಹುದೂರ ಹೋಗಿಬಿಟ್ಟಿದ್ದರೆ, ನನ್ನನ್ನೇ ರಥದಲ್ಲಿ ಕರೆದೊಯ್ದು ಬೇಗನೆ ರಾಮನಿಗೆ ತೋರಿಸು. (ಮಲ್ಲಿಗೆಯ ಮೊಗ್ಗುಗಳಂತೆ) ಗುಂಡಾದ ಹಲ್ಲುಗಳಿರುವ ನನ್ನ ರಾಮನೆಲ್ಲಿದ್ದಾನೆ? ಧನುರ್ಧಾರಿಯಾದ ಆ ಲಕ್ಷ್ಮಣಾಗ್ರಜನೆಲ್ಲಿದ್ದಾನೆ? (೨೭-೨೮). ಸೀತಾಸಮೇತನಾದ ರಾಮನನ್ನು ಕಣ್ಣಾರೆ ನೋಡಿದರೆ ಮಾತ್ರ ನಾನು ಜೀವಿಸಬಹುದು. ಪದ್ಮತಾಮ್ರಾಕ್ಷನೂ ರತ್ನಕುಂಡಲಧಾರಿಯೂ ಆಜಾನುಬಾಹುವೂ ಆದ ರಾಮನನ್ನು ನಾನು ನೋಡಬೇಕು (೨೯). ರಾಮನನ್ನು ಕಾಣದಿದ್ದರೆ ನಾನು ಯಮನ

ನ ಮಾಂ ಜಾನೀತ ದುಃಖೇನ ಮ್ರಿಯಮಾಣಮನಾಥವತ್ ।
ಸ ತೇನ ರಾಜಾ ದುಃಖೇನ ಭೃಶಮರ್ಪಿತಚೇತನಃ ॥ ೩೨

ಅವಗಾಢಃ ಸುದುಷ್ಪಾರಂ ಶೋಕಸಾಗರಮಬ್ರವೀತ್ ।
ರಾಮಶೋಕಮಹಾವೇಗಃ ಸೀತಾವಿರಹಪಾರಗಃ ॥ ೩೩

ಶ್ವಸಿತೋರ್ಮಿಮಹಾವರ್ತೋ ಬಾಷ್ಪಫೇನಜಲಾವಿಲಃ ।
ಬಾಹುವಿಕ್ಷೇಪಮೀನೌಘೋ ವಿಕ್ರಂದಿತಮಹಾಸ್ವನಃ ॥ ೩೪

ಪ್ರಕೀರ್ಣಕೇಶಶೈವಾಲಃ ಕೈಕೇಯೀ ಬಡಬಾಮುಖಃ ।
ಮಮಾಶ್ರುವೇಗಪ್ರಭವಃ ಕುಬ್ಜಾವಾಕ್ಯಮಹಾಗ್ರಹಃ ॥ ೩೫

ವರವೇಲೋ ನೃಶಂಸಾಯಾ ರಾಮಪ್ರವ್ರಾಜನಾಯಾತಃ ।
ಯಸ್ಮಿನ್ ಬತ ನಿಮಗ್ನೋಽಹಂ ಕೌಸಲ್ಯೇ ರಾಘವಂ ವಿನಾ ॥ ೩೬

ದುಸ್ತರೋ ಜೀವಿತಾ ದೇವಿ ಮಾಯಾಯಂ ಶೋಕಸಾಗರಃ ॥ ೩೭

ಮಂದಿರವನ್ನು ಸೇರುವುದು ನಿಶ್ಚಯ. ಇಂಥ ದುರವಸ್ಥೆಗೆ ಸಿಕ್ಕಿ ನಾನು ನರಳುತ್ತಿದ್ದರೂ ನನ್ನ ಬಳಿ ರಾಮನಿಲ್ಲ - ರಾಮನು ನನಗೆ ಕಾಣಿಸುತ್ತಿಲ್ಲ. ಇದಕ್ಕಿಂತಲೂ ಕಷ್ಟ ಇನ್ನಾವುದಿದ್ದೀತು? ಹಾ ರಾಮಾ! ಲಕ್ಷ್ಮಣಾ! ಹಾ ಸೀತೆ! ಹಾ ತಪಸ್ವಿನಿ! (೩೦-೩೧). ದಿಕ್ಕಿಲ್ಲದೆ ಸಂಕಟಪಡುತ್ತ ನಾನು ಸಾಯುತ್ತಿರುವುದು ನಿಮಗೆ ಕಾಣದು'' ಎಂಬುದಾಗಿ ಆ ರಾಜನು ಗೋಳಿಡುತ್ತ ದುಃಖದಿಂದ ಚೈತನ್ಯಗುಂದಿದನು. ಅಪಾರವಾದ ಶೋಕಸಮುದ್ರದಲ್ಲಿ ಮುಳುಗಿಹೋದನು. ಬಳಿಕ ಈ ರೀತಿಯಲ್ಲಿ ಹಲುಬಿದನು (೩೨-೩೩) : ''ಕೌಸಲ್ಯೆ, ಈ ದುಃಖಸಾಗರವನ್ನು ನಾನು ದಾಟಲಾರೆ. ಇಲ್ಲಿ ರಾಮನ ವಿರಹಶೋಕವು ಅಲೆಯಲೆಯಾಗಿ ವೇಗದಿಂದ ಬಂದು ಅಪ್ಪಳಿಸುತ್ತಿದೆ. ಸೀತಾವಿಯೋಗದುಃಖವೇ ಇದರ ದಡ. ನಿಟ್ಟುಸಿರುಗಳೇ ಅಲೆಗಳು. ದೊಡ್ಡ ಸುಳಿಗಳು. ಕಣ್ಣೀರು ನೊರೆಯಾಗಿ ಉಕ್ಕುತ್ತಿದೆ. (ಅಳುತ್ತ) ಕೈಬೀಸುವುದು ಮೀನುಗಳ ರಾಶಿ. ಹಾಹಾಕಾರವೇ ಸಮುದ್ರಘೋಷ (೩೪). ನನ್ನ ಕೆದರಿದ ತಲೆಗೂದಲು ಇಲ್ಲಿರುವ ಪಾಚಿ. ಕೈಕೇಯಿಯೇ ಬಡಬಾಗ್ನಿ. ನನ್ನ ಅಶ್ರುವೇಗಕ್ಕೆ ಇದೇ ಮೂಲಕಾರಣ. ಕುಬ್ಜೆಯ ಚಾಡಿಮಾತು ಇಲ್ಲಿರುವ ದೊಡ್ಡ ಮೊಸಳೆ (೩೫). ಆ ಪಾಪಿಷ್ಠಳು ಕೇಳಿದ ವರವೇ ಈ

ಅಶೋಭನಂ ಯೋಽಹಮಿಹಾದ್ಯ ರಾಘವಂ
ದಿದೃಕ್ಷಮಾಣೋ ನ ಲಭೇ ಸಲಕ್ಷ್ಮಣಮ್ ।
ಇತೀವ ರಾಜಾ ವಿಲಪನ್ ಮಹಾಯಶಾಃ
ಪಪಾತ ತೂರ್ಣಂ ಶಯನೇ ಸ ಮೂರ್ಛಿತಃ ॥ ೩೮

ಇತಿ ವಿಲಪತಿ ಪಾರ್ಥಿವೇ ಪ್ರನಷ್ಟೇ
ಕರುಣತರಂ ದ್ವಿಗುಣಂ ಚ ರಾಮಹೇತೋಃ ।
ವಚನಮನುನಿಶಮ್ಯ ತಸ್ಯ ದೇವೀ
ಭಯಮಗಮತ್ ಪುನರೇವ ರಾಮಮಾತಾ ॥ ೩೯

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕೋನಷಷ್ಟಿತಮಃ ಸರ್ಗಃ

❋❋❋

ಸಮುದ್ರದ ಗಡಿ. ರಾಮನ ವನವಾಸಕಾಲವೇ ಇದರ ವಿಸ್ತಾರ. ಕೌಸಲ್ಯೆ, ಈ ಸಮುದ್ರದಲ್ಲಿ ನಾನು ಮುಳುಗಿಹೋದೆ. ದೇವಿ, ನಾನು ಬದುಕಿ ಈ ಶೋಕಸಾಗರವನ್ನು ದಾಟಲಾರೆ (೩೬-೩೭). ಈಗ ನಾನು ರಾಮನನ್ನೂ ಲಕ್ಷ್ಮಣನನ್ನೂ ನೋಡಬೇಕೆಂದು ಎಷ್ಟು ಹಂಬಲಿಸಿದರೂ ಅವರು ದೊರೆಯರು. ಇದು ನನ್ನ ಪಾಪಕರ್ಮದ ಫಲ" ಎಂದು ಹಲುಬುತ್ತ ಕೀರ್ತಿಶಾಲಿಯಾದ ಆ ರಾಜನು ಮೂರ್ಛಿತನಾಗಿ ಹಾಸಿಗೆಯ ಮೇಲೆ ಉರುಳಿದನು (೩೮). ಹೀಗೆ ದಶರಥನು ಶ್ರೀರಾಮನಿಗೋಸ್ಕರ ಕರುಳು ಕೊರೆಯುವಂತೆ ವಿಲಪಿಸಿ ಎಚ್ಚರದಪ್ಪಿ ಬಿದ್ದನು. ಅವನ ವಿಲಾಪವನ್ನು ಕೇಳುತ್ತಿದ್ದ ಕೌಸಲ್ಯಾದೇವಿಯು, ತನ್ನ ಪತಿಯ ದುಃಖವು ದ್ವಿಗುಣವಾಗಿ ಹೆಚ್ಚುತ್ತಿರುವುದನ್ನು ಕಂಡು, ಮುಂದೆ ಅವನ ಗತಿ ಏನಾಗುವುದೋ ಎಂದು ಭಯಾವಿಷ್ಟಳಾದಳು (೩೯).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಐವತ್ತೊಂಬತ್ತನೆಯ ಸರ್ಗ

❋❋❋

ಷಷ್ಟಿತಮಃ ಸರ್ಗಃ

ಕೌಸಲ್ಯಾಸಮಾಶ್ವಾಸನಮ್

ತತೋ ಭೂತೋಪಸೃಷ್ಟೇವ ವೇಪಮಾನಾ ಪುನಃ ಪುನಃ ।
ಧರಣ್ಯಾಂ ಗತಸತ್ತ್ವೇವ ಕೌಸಲ್ಯಾ ಸೂತಮಬ್ರವೀತ್ ॥ ೧

ನಯ ಮಾಂ ಯತ್ರ ಕಾಕುತ್ಸ್ಥಃ ಸೀತಾ ಯತ್ರ ಚ ಲಕ್ಷ್ಮಣಃ ।
ತಾನ್ ವಿನಾ ಕ್ಷಣಮಪ್ಯತ್ರ ಜೀವಿತುಂ ನೋತ್ಸಹೇ ಹ್ಯಹಮ್ ॥ ೨

ನಿವರ್ತಯ ರಥಂ ಶೀಘ್ರಂ ದಂಡಕಾನ್ನಯ ಮಾಮಪಿ ।
ಅಥ ತಾನ್ನಾನುಗಚ್ಛಾಮಿ ಗಮಿಷ್ಯಾಮಿ ಯಮಕ್ಷಯಮ್ ॥ ೩

ಬಾಷ್ಪವೇಗೋಪಹತಯಾ ಸ ವಾಚಾ ಸಜ್ಜಮಾನಯಾ ।
ಇದಮಾಶ್ವಾಸಯನ್ ದೇವೀಂ ಸೂತಃ ಪ್ರಾಂಜಲಿರಬ್ರವೀತ್ ॥ ೪

ತ್ಯಜ ಶೋಕಂ ಚ ಮೋಹಂ ಚ ಸಂಭ್ರಮಂ ದುಃಖಜಂ ತಥಾ ।
ವ್ಯವಧೂಯ ಚ ಸಂತಾಪಂ ವನೇ ವತ್ಸ್ಯತಿ ರಾಘವಃ ॥ ೫

ಸರ್ಗ ೬೦

ಕೌಸಲ್ಯೆಯ ಶೋಕ. ಸುಮಂತ್ರನ ಸಮಾಶ್ವಾಸನೆ

ಆಗ ಕೌಸಲ್ಯೆಯು ಪ್ರಾಣರಹಿತಳಂತೆ ನೆಲದ ಮೇಲೆ ಕುಸಿದಿದ್ದಳು. ಭೂತ ಹಿಡಿದವಳಂತೆ ನಡುನಡುವೆ ನಡುಗುತ್ತಿದ್ದ ಅವಳು ಸುಮಂತ್ರನನ್ನು ಕುರಿತು "ಸುಮಂತ್ರ, ರಾಮ ಸೀತೆ ಲಕ್ಷ್ಮಣ - ಇವರಿದ್ದಲ್ಲಿಗೆ ನನ್ನನ್ನು ಕರೆದುಕೊಂಡು ಹೋಗು. ಅವರನ್ನು ಬಿಟ್ಟು ಒಂದು ಕ್ಷಣವೂ ಬದುಕಿರುವ ಇಚ್ಛೆ ನನಗಿಲ್ಲ(೧-೨). ರಥವನ್ನು ಮತ್ತೆ ತಿರುಗಿಸು. ನನ್ನನ್ನು ದಂಡಕಾರಣ್ಯಕ್ಕೆ ಒಯ್ದುಬಿಡು! ಅವರ ಬಳಿಗೆ ನಾನು ಹೋಗದಿದ್ದರೆ ಯಮನ ಮನೆಗೆ ಹೊರಡುವೆನು" ಎಂದಳು. ಆಗ ಸುಮಂತ್ರನು ಕೈಮುಗಿದು ಬಾಷ್ಪವೇಗದಿಂದ ಗದ್ಗದಿಸುತ್ತ ಈ ರೀತಿಯಲ್ಲಿ ಸಮಾಧಾನ ಹೇಳಿದನು (೩-೪) : "ದೇವಿ, ಹೀಗೆ ಶೋಕಿಸಬೇಡ. ಕಳವಳವನ್ನು ಬಿಡು. ದುಃಖದ ಆ ವೇಗವನ್ನು ತ್ಯಜಿಸು. ಶ್ರೀರಾಮನು ಯಾವ ಕಷ್ಟವೂ ಇಲ್ಲದೆ ವನದಲ್ಲಿ ವಾಸವಾಗಿರುವನು. ಧರ್ಮಜ್ಞನೂ

ಲಕ್ಷ್ಮಣಶ್ಚಾಪಿ ರಾಮಸ್ಯ ಪಾದೌ ಪರಿಚರನ್ ವನೇ ।
ಆರಾಧಯತಿ ಧರ್ಮಜ್ಞಃ ಪರಲೋಕಂ ಜಿತೇಂದ್ರಿಯಃ ॥ ೬

ವಿಜನೇಽಪಿ ವನೇ ಸೀತಾ ವಾಸಂ ಪ್ರಾಪ್ಯ ಗೃಹೇಷ್ವಿವ ।
ವಿಸ್ರಬ್ಧಂ ಲಭತೇಽಭೀತಾ ರಾಮೇ ವಿನ್ಯಸ್ತಮಾನಸಾ ॥ ೭

ನಾಸ್ಯಾ ದೈನ್ಯಂ ಕೃತಂ ಕಿಂಚಿತ್ ಸುಸೂಕ್ಷ್ಮಮಪಿ ಲಕ್ಷ್ಯತೇ ।
ಉಚಿತೇವ ಪ್ರವಾಸಾನಾಂ ವೈದೇಹೀ ಪ್ರತಿಭಾತಿ ಮೇ ॥ ೮

ನಗರೋಪವನಂ ಗತ್ವಾ ಯಥಾ ಸ್ಮ ರಮತೇ ಪುರಾ ।
ತಥೈವ ರಮತೇ ಸೀತಾ ನಿರ್ಜನೇಷು ವನೇಷ್ವಪಿ ॥ ೯

ಬಾಲೇವ ರಮತೇ ಸೀತಾಽಬಾಲಚಂದ್ರ ನಿಭಾನನಾ ।
ರಾಮಾ ರಾಮೇ ಹ್ಯಧೀನಾತ್ಮಾ ವಿಜನೇಽಪಿ ವನೇ ಸತೀ ॥ ೧೦

ತದ್ಗತಂ ಹೃದಯಂ ಹ್ಯಸ್ಯಾಸ್ತದಧೀನಂ ಚ ಜೀವಿತಮ್ ।
ಅಯೋಧ್ಯಾಪಿ ಭವೇತ್ತಸ್ಯಾ ರಾಮಹೀನಾ ತಥಾ ವನಮ್ ॥ ೧೧

ಜಿತೇಂದ್ರಿಯನೂ ಆದ ಲಕ್ಷ್ಮಣನು ಶ್ರೀರಾಮನ ಪಾದಸೇವೆಯನ್ನು ಮಾಡುತ್ತ ಶ್ರೇಯಸ್ಸನ್ನು ಸಾಧಿಸಿಕೊಳ್ಳುತ್ತಿದ್ದಾನೆ (೫-೬). ನಿರ್ಜನವಾದ ವನದಲ್ಲಿಯೂ ಸೀತಾದೇವಿಯು ಮನೆಯಲ್ಲಿರುವಂತೆ ಭಯವಿಲ್ಲದೆ ಸುಖವಾಗಿರುವಳು. ಅವಳ ಮನಸ್ಸು ಪ್ರಣಯಪೂರ್ವಕವಾಗಿ ಶ್ರೀರಾಮನಲ್ಲಿ ನೆಟ್ಟಿರುವುದು. ಆಕೆಯಲ್ಲಿ ದೈನ್ಯದ ಲೇಶವೂ ಕಂಡುಬರಲಿಲ್ಲ. ವೈದೇಹಿಯು ವನದಲ್ಲಿ ಪ್ರವಾಸ ಮಾಡಲು ಸಮರ್ಥಳೆಂದೇ ನನಗೆ ತೋರುತ್ತದೆ (೭-೮). ಈ ನಗರದ ಉಪವನದಲ್ಲಿ ಅವಳು ಹಿಂದೆ ಹೇಗೆ ವಿಹರಿಸುತ್ತಿದ್ದಳೊ ಹಾಗೆಯೇ ನಿರ್ಜನವಾದ ಅರಣ್ಯಗಳಲ್ಲಿಯೂ ವಿಹರಿಸುತ್ತ ವಿನೋದದಿಂದ ಇರಬಲ್ಲಳು. ಪೂರ್ಣಚಂದ್ರನನೆಯಾದ ಸೀತೆಯ ಚಿತ್ತವು ರಾಮನಿಗೆ ಪೂರ್ತಿಯಾಗಿ ವಶವಾಗಿದೆ. ಆದ್ದರಿಂದ ಅವಳು ನಿರ್ಜನವನದಲ್ಲಿಯೂ ಚಿಕ್ಕ ಬಾಲಿಕೆಯಂತೆ ಕ್ರೀಡಿಸುತ್ತ ಇರಬಲ್ಲಳು (೯-೧೦). ಆಕೆಯ ಹೃದಯವು ರಾಮನಲ್ಲಿ ನೆಟ್ಟುಹೋಗಿದೆ. ತನ್ನ ಪ್ರಾಣವನ್ನೇ ರಾಮನಿಗೆ ಒಪ್ಪಿಸಿದ್ದಾಳೆ. ರಾಮನಿಲ್ಲದಿದ್ದರೆ ಅವಳಿಗೆ ಅಯೋಧ್ಯೆಯೂ ಅಡವಿಯಾಗಿ ಪರಿಣಮಿಸುತ್ತದೆ (೧೧).

ಪಥಿ ಪೃಚ್ಛತಿ ವೈದೇಹೀ ಗ್ರಾಮಾಂಶ್ಚ ನಗರಾಣಿ ಚ ।
ಗತಿಂ ದೃಷ್ಟ್ವಾ ನದೀನಾಂ ಚ ಪಾದಪಾನ್ ವಿವಿಧಾನಪಿ ॥ ೧೨

ರಾಮಂ ವಾ ಲಕ್ಷ್ಮಣಂ ವಾಪಿ ದೃಷ್ಟ್ವಾ ಜಾನಾತಿ ಜಾನಕೀ ।
ಅಯೋಧ್ಯಾಕ್ರೋಶಮಾತ್ರೇ ತು ವಿಹಾರಮಿವ ಸಂಶ್ರಿತಾ ॥ ೧೩

ಇದಮೇವ ಸ್ಮ ರಾಮ್ಯಸ್ಯಾಃ ಸಹಸೈವೋಪಜಲ್ಪಿತಮ್ ।
ಕೈಕೇಯೀಸಂಶ್ರಿತಂ ವಾಕ್ಯಂ ನೇದಾನೀಂ ಪ್ರತಿಭಾತಿ ಮಾಮ್ ॥ ೧೪

ಧ್ವಂಸಯಿತ್ವಾ ತು ತದ್ವಾಕ್ಯಂ ಪ್ರಮಾದಾತ್ ಪರ್ಯುಪಸ್ಥಿತಮ್ ।
ಹ್ಲಾದನಂ ವಚನಂ ಸೂತೋ ದೇವ್ಯಾ ಮಧುರಮಬ್ರವೀತ್ ॥ ೧೫

ಸೀತೆಯ ದಾರಿಯಲ್ಲಿ ಸಿಗುವ ಹಳ್ಳಿಪಟ್ಟಣಗಳ ವಿಷಯವನ್ನು ವಿಚಾರಿಸುತ್ತಾಳೆ. ನದಿಗಳು ಹರಿಯುವುದನ್ನೂ ಬಗೆಬಗೆಯ ಮರಗಳನ್ನೂ ಕಂಡಾಗ, ರಾಮನನ್ನೋ ಲಕ್ಷ್ಮಣನನ್ನೋ ಕೇಳಿ ಅವುಗಳ ಹೆಸರು ಮೊದಲಾದ್ದನ್ನು ತಿಳಿದುಕೊಳ್ಳುತ್ತಾಳೆ. ಅಯೋಧ್ಯೆಗೆ ಒಂದು ಹರದಾರಿಯಲ್ಲಿರುವ ಕ್ರೀಡೋದ್ಯಾನಕ್ಕೆ ಹೋದಂತೆ ಅವಳು ಭಾವಿಸಿದ್ದಾಳೆ (೧೨-೧೩). ಕೈಕೇಯಿಯ ವಿಷಯದಲ್ಲಿ ಒಂದು ಸಲ ಮಾತ್ರ ಅವಳ ಬಾಯಿಯಿಂದ ಥಟ್ಟನೆ ಒಂದು ಮಾತು ಬಂದಿತೆಂದು ನನ್ನ ಸ್ಮರಣೆಯಲ್ಲಿದೆ. ಆದರೆ ಏನು ಹೇಳಿದಳೆಂಬುದು ನನಗೆ ನೆನಪಿಲ್ಲ'' ಎಂದನು (೧೪). ಹೀಗೆ ಸುಮಂತ್ರನು ಸೀತೆಯಾಡಿದ ಮಾತನ್ನು ಪ್ರಮಾದದಿಂದ ಪ್ರಸ್ತಾವಿಸಿ, ಕೂಡಲೆ ತನ್ನ ತಪ್ಪನ್ನು ತಿಳಿದುಕೊಂಡು 'ನೆನಪಿಲ್ಲ' ಎಂದು ಹೇಳಿ ಉಪಾಯದಿಂದ ಆ ವಿಷಯವನ್ನು ಮುಗಿಸಿದನು.★ ಅನಂತರ ಕೌಸಲ್ಯೆಯನ್ನು ಸಂತೈಸುವುದಕ್ಕಾಗಿ ಅವಳಿಗೆ ಹಿತಕರವಾದ ಒಳ್ಳೆಯ ಮಾತನ್ನೇ ಹೀಗೆ ನುಡಿದನು (೧೫) : 'ದೇವಿ, ಕಾಡುದಾರಿಯಲ್ಲಿ ನಡೆದರೂ

★ ಕೌಸಲ್ಯೆಗೆ ದುಃಖವು ಹೆಚ್ಚುವುದೆಂದು ತಿಳಿದು ಸುಮಂತ್ರನು ಸೀತೆಯ ವಾಕ್ಯವನ್ನು ಹೇಳಲಿಲ್ಲ. ಮುಂದೆ ಅರಣ್ಯಕಾಂಡ ಯುದ್ಧಕಾಂಡಗಳಲ್ಲಿ ಸೀತೆಯೂ ರಾಮನೂ ಪ್ರಸಂಗವಶದಿಂದ ಆಡಿದ ಮಾತುಗಳನ್ನು ಆಧರಿಸಿ ಸೀತೆಯ ವಾಕ್ಯವು ಹೀಗಿರಬಹುದೆಂದು ವ್ಯಾಖ್ಯಾನಕಾರರು ಊಹಿಸುತ್ತಾರೆ. ''ಭರತನಿಗೆ ರಾಜ್ಯವನ್ನು ಬೇಕಾದರೆ ಕೊಡಿಸಲಿ. ನಮ್ಮನ್ನು ಕಾಡಿಗೆ ಕಳಿಸಿದ್ದೇಕೆ ? ನಾವು ಕಾಡಿನಲ್ಲಿ ನರಳಿ ನರಳಿ ಸಾಯಲಿ ಎಂಬುದೇ ಉದ್ದೇಶ.''

ಅಧ್ವಾನಾ ವಾತವೇಗೇನ ಸಂಭ್ರಮೇಣಾತಪೇನ ಚ ।
ನಿ ವಿಗಚ್ಛತಿ ವೈದೇಹ್ಯಾಶ್ಚಂದ್ರಾಂಶುಸದೃಶೀ ಪ್ರಭಾ ॥ ೧೬

ಸದೃಶಂ ಶತಪತ್ರಸ್ಯ ಪೂರ್ಣಚಂದ್ರೋಪಮಪ್ರಭಮ್ ।
ವದನಂ ತದ್ವದಾನ್ಯಾಯಾ ವೈದೇಹ್ಯಾ ನ ವಿಕಂಪತೇ ॥ ೧೭

ಅಲಕ್ತ ರಸರಕ್ತಾಭಾವಲಕ್ತರಸವರ್ಜಿತೌ ।
ಅದ್ಯಾಪಿ ಚರಣೌ ತಸ್ಯಾಃ ಪದ್ಮಕೋಶಸಮಪ್ರಭೌ ॥ ೧೮

ನೂಪುರೋದ್ಘುಷಟಹೇಲೇವ ಖೇಲಂ ಗಚ್ಛತಿ ಭಾಮಿನೀ ।
ಇದಾನೀಮಪಿ ವೈದೇಹೀ ತದ್ರಾಗಾನ್ನ್ಯಸ್ತಭೂಷಣಾ ॥ ೧೯

ಗಜಂ ವಾ ವೀಕ್ಷ್ಯ ಸಿಂಹಂ ವಾ ವ್ಯಾಘ್ರಂ ವಾ ವನಮಾಶ್ರಿತಾ ।
ನಾಹಾರಯತಿ ಸಂತ್ರಾಸಂ ಬಾಹೂ ರಾಮಸ್ಯ ಸಂಶ್ರಿತಾ ॥ ೨೦

ನ ಶೋಚ್ಯಾಸ್ತೇ ನ ಚಾತ್ಮಾ ತೇ ಶೋಚ್ಯೋ ನಾಪಿ ಜನಾಧಿಪಃ ।
ಇದಂ ಹಿ ಚರಿತಂ ಲೋಕ ಪ್ರತಿಷ್ಠಾಸ್ಯತಿ ಶಾಶ್ವತಮ್ ॥ ೨೧

ಬಿರುಗಾಳಿ ಬೀಸಿದರೂ ಭಯದ ಸಂದರ್ಭ ಒದಗಿದರೂ ಬಿಸಿಲು ಕಾದರೂ ಸೀತಾದೇವಿಯು ಜಗ್ಗುವುದಿಲ್ಲ. ಬೆಳದಿಂಗಳಿನಂತಹ ಅವಳ ಕಾಂತಿಯು ಕುಗ್ಗುವುದಿಲ್ಲ. ತಾವರೆಯಂತೆ ಅರಳಿ ಪೂರ್ಣಚಂದ್ರನಂತೆ ರಂಜಿಸುವ ದೇವಿಯ ಮುಖವು ಕಂದುವುದಿಲ್ಲ. ಯಾವಾಗಲೂ ಮಧುರವಾಗಿ ಮಾತನಾಡುತ್ತಿರುವಳು (೧೬-೧೭). ಅರಗಿನ ರಸವನ್ನು ಹಚ್ಚದಿದ್ದರೂ ಅರಗಿನ ರಸದಂತೆ ಕೆಂಪಗಿರುವ ಆಕೆಯ ಪಾದಗಳು ಈಗಲೂ ತಾವರೆಯ ಮೊಗ್ಗುಗಳಂತೆ ಶೋಭಿಸುತ್ತಿವೆ. ಕಾಲಂದಿಗೆಗಳ ಕುಲುಕುಲು ಧ್ವನಿಗೆ ಅನುಗುಣವಾಗಿ ಹೆಜ್ಜೆಯಿಡುತ್ತ ದೇವಿಯು ವಿಲಾಸದಿಂದ ನಡೆದು ಹೋಗುತ್ತಿದ್ದಾಳೆ. ವೈದೇಹಿಯು ಪತಿಯಲ್ಲಿರುವ ಪ್ರೇಮದಿಂದ (ಅವನ ಸಂತೋಷಕ್ಕಾಗಿ) ಈಗಲೂ ಒಡವೆಗಳನ್ನು ಧರಿಸಿದ್ದಾಳೆ (೧೮-೧೯). ಅವಳು ಕಾಡಿನಲ್ಲಿ ಆನೆ ಸಿಂಹ ಹುಲಿಗಳನ್ನು ಕಂಡರೂ ಅಂಜುವುದಿಲ್ಲ. ಶ್ರೀರಾಮನ ಭುಜಗಳನ್ನು ಆಶ್ರಯಿಸಿದ ಸೀತೆಗೆ ಭೀತಿಯೇ ಇಲ್ಲ. ಆದ್ದರಿಂದ, ಕೌಸಲ್ಯಾದೇವಿ, ಸೀತಾ ಲಕ್ಷ್ಮಣರಿಗಾಗಿ ಚಿಂತಿಸಬೇಕಾದ್ದಿಲ್ಲ. ನಿನ್ನನ್ನು ಹಳಿದುಕೊಳ್ಳುವುದೂ ಸರಿಯಲ್ಲ.

ವಿಧೂಯ ಶೋಕಂ ಪರಿಹೃಷ್ಟಮಾನಸಾ
 ಮಹರ್ಷಿಯಾತೇ ಪಥಿ ಸುವ್ಯವಸ್ಥಿತಾಃ ।
ವನೇ ರತಾ ವನ್ಯಫಲಾಶನಾಃ ಪಿತುಃ
 ಶುಭಾಂ ಪ್ರತಿಜ್ಞಾಂ ಪರಿಪಾಲಯಂತಿ ತೇ ॥ ೨೨

ತಥಾಪಿ ಸೂತೇನ ಸುಯುಕ್ತವಾದಿನಾ
 ನಿವಾರ್ಯಮಾಣಾ ಸುತಶೋಕಕರ್ಶಿತಾ ।
ನ ಚೈವ ದೇವೀ ವಿರರಾಮ ಕೂಜಿತಾತ್ ।
 ಪ್ರಿಯೇತಿ ಪುತ್ರೇತಿ ಚ ರಾಘವೇತಿ ಚ ॥ ೨೩

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡ ಷಷ್ಟಿತಮಃ ಸರ್ಗಃ

***

ಮಹಾರಾಜನಿಗೋಸ್ಕರವೂ ಯೋಚಿಸಬೇಡ. ಈ ರಾಮಚರಿತೆಯು ಲೋಕದಲ್ಲಿ ಪ್ರತಿಷ್ಠೆಯನ್ನು ಪಡೆದು ಶಾಶ್ವತವಾಗಿ ನಿಲ್ಲುವುದು (೨೦-೨೧). ಅವರು ವನದಲ್ಲಿ ಕಷ್ಟವನ್ನೆಣಿಸದೆ ಸಂತುಷ್ಟಚಿತ್ತರಾಗಿದ್ದಾರೆ. ಫಲಮೂಲಾದಿಗಳನ್ನು ಸೇವಿಸುತ್ತ ಮಹರ್ಷಿಗಳು ತುಳಿದ ಮಾರ್ಗದಲ್ಲಿ ದೃಢನಿಷ್ಠೆಯಿಂದಿದ್ದಾರೆ. ತಂದೆಯ ಪವಿತ್ರವಾದ ಆಜ್ಞೆಯನ್ನು ಪರಿಪಾಲಿಸುತ್ತಿದ್ದಾರೆ '' ಎಂದು ಸುಮಂತ್ರನು ಸಮಾಧಾನವನ್ನು ಹೇಳಿದನು (೨೨). ಹೀಗೆ ಕಾಲೋಚಿತವಾದ ಮಾತಿನಿಂದ ಆತನು ಸಂತೈಸುತ್ತಿದ್ದರೂ ಕೌಸಲ್ಯೆಯು ಅಳುವುದನ್ನು ನಿಲ್ಲಿಸಲಿಲ್ಲ. ಪುತ್ರಶೋಕವು ಅವಳನ್ನು ಕಿತ್ತೆಳೆಯುತ್ತಿತ್ತು. ''ಅಪ್ಪಾ! ಮಗನೆ! ರಾಮಾ!'' ಎಂದು ಕೂಗುತ್ತ ರೋದಿಸುತ್ತಲೇ ಇದ್ದಳು. (೨೩).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಆರುವತ್ತನೆಯ ಸರ್ಗ.

***

ಏಕಷಷ್ಟಿತಮಃ ಸರ್ಗಃ

ಕೌಸಲ್ಯೋಪಾಲಂಭಃ

ವನಂ ಗತೇ ಧರ್ಮರತೇ ರಾಮೇ ರಮಯತಾಂ ವರೇ ।
ಕೌಸಲ್ಯಾ ರುದತೀ ಸ್ವಾರ್ತಾ ಭರ್ತಾರಮಿದಮಬ್ರವೀತ್ ॥ ೧

ಯದ್ಯಪಿ ತ್ರಿಷು ಲೋಕೇಷು ಪ್ರಥಿತಂ ತೇ ಮಹದ್ಯಶಃ ।
ಸಾನುಕ್ರೋಶೋ ವದಾನ್ಯಶ್ಚ ಪ್ರಿಯವಾದೀ ಚ ರಾಘವಃ ॥ ೨

ಕಥಂ ನರವರಶ್ರೇಷ್ಠ ಪುತ್ರೌ ತೌ ಸಹ ಸೀತಯಾ ।
ದುಃಖಿತೌ ಸುಖಸಂವೃದ್ಧೌ ವನೇ ದುಃಖಂ ಸಹಿಷ್ಯತಃ ॥ ೩

ಸಾ ನೂನಂ ತರುಣೀ ಶ್ಯಾಮಾ ಸುಕುಮಾರೀ ಸುಖೋಚಿತಾ ।
ಕಥಮುಷ್ಣಂ ಚ ಶೀತಂ ಚ ಮೈಥಿಲೀ ಪ್ರಸಹಿಷ್ಯತೇ ॥ ೪

ಸರ್ಗ ೬೧

ಶ್ರೀರಾಮನನ್ನು ಕಾಡಿಗೆ ಕಳಿಸಿದ್ದಕ್ಕಾಗಿ ಕೌಸಲ್ಯೆಯು ದಶರಥನನ್ನು ಆಕ್ಷೇಪಿಸುವುದು.

ಆಮೇಲೆ ಕೌಸಲ್ಯೆಯು, ಧರ್ಮನಿಷ್ಠನೂ ಪ್ರಜಾರಂಜನತತ್ಪರನೂ ಆದ ಶ್ರೀರಾಮನು ಕಾಡುಪಾಲಾಗಿ ಹೋದನೆಂದು ದುಃಖಾರ್ತಳಾಗಿ ಅಳುತ್ತ ತನ್ನ ಪತಿಯನ್ನು ಕುರಿತು ಈ ರೀತಿಯಲ್ಲಿ ಹೇಳಿದಳು (೧) : "ಮಹಾರಾಜ, ಮೂರು ಲೋಕಗಳಲ್ಲಿಯೂ ನಿನ್ನ ಕೀರ್ತಿ ವಿಸ್ತರಿಸಿದೆ. ರಘುಕುಲೋತ್ಪನ್ನನಾದ ನೀನು ದಯಾಳುವೆಂದೂ ಉದಾರಿಯೆಂದೂ ಪ್ರಿಯಂವದನೆಂದೂ ಯಶಸ್ಸು ಹರಡಿದೆ (ಆದರೂ ನೀನು ಇಂಥ ಕೆಲಸವನ್ನು ಮಾಡಬಹುದೆ?) (೨). ನಿನ್ನ ಇಬ್ಬರು ಮಕ್ಕಳೂ ಸೀತೆಯೂ ಸುಖವಾಗಿ ಬೆಳೆದವರು. ಅವರು ವನವಾಸದ ಕಷ್ಟವನ್ನು ಹೇಗೆ ಸಹಿಸಿಕೊಂಡಾರು? ಸೀತೆಯಾದರೊ ಚಿಕ್ಕವಯಸ್ಸಿನವಳು. ಸುಖದಲ್ಲಿ ಇರಬೇಕಾದವಳು. ಆ ಸುಕುಮಾರಿಯು ಆ ಸೆಕೆಯನ್ನೂ ಚಳಿಯನ್ನೂ ಹೇಗೆ

ಭುಕ್ತ್ವಾಶನಂ ವಿಶಾಲಾಕ್ಷೀ ಸೂಪದಂಶಾನ್ವಿತಂ ಶುಭಮ್ ।
ವನ್ಯಂ ನೈವಾರಮಾಹಾರಂ ಕಥಂ ಸೀತೋಪಭೋಕ್ಷ್ಯತೇ ॥ ೫

ಗೀತವಾದಿತ್ರನಿರ್ಘೋಷಂ ಶ್ರುತ್ವಾಶುಭಮನಿಂದಿತಾ ।
ಕಥಂ ಕ್ರವ್ಯಾದಸಿಂಹಾನಾಂ ಶಬ್ದಂ ಶ್ರೋಷ್ಯತ್ಯಶೋಭನಮ್ ॥ ೬

ಮಹೇಂದ್ರಧ್ವಜಸಂಕಾಶಃ ಕ್ವನು ಶೇತೇ ಮಹಾಭುಜಃ ।
ಭುಜಂ ಪರಿಘಸಂಕಾಶಮುಪಧಾಯ ಮಹಾಬಲಃ ॥ ೭

ಪದ್ಮವರ್ಣಂ ಸುಕೇಶಾಂತಂ ಪದ್ಮನಿಃಶ್ವಾಸಮುತ್ತಮಮ್ ।
ಕದಾ ದ್ರಕ್ಷ್ಯಾಮಿ ರಾಮಸ್ಯ ವದನಂ ಪುಷ್ಕರೇಕ್ಷಣಮ್ ॥ ೮

ವಜ್ರಸಾರಮಯಂ ನೂನಂ ಹೃದಯಂ ಮೇ ನ ಸಂಶಯಃ ।
ಅಪಶ್ಯಂತ್ಯಾ ನ ತಂ ಯದ್ವೈ ಫಲತೀದಂ ಸಹಸ್ರಧಾ ॥ ೯

ಯತ್ತ್ವಯಾ ಕರುಣಂ ಕರ್ಮ ವ್ಯಪೋಹ್ಯ ಮಮ ಬಾಂಧವಾಃ ।
ನಿರಸ್ತಾಃ ಪರಿಧಾವಂತಿ ಸುಖಾರ್ಹಾಃ ಕೃಪಣಾ ವನೇ ॥ ೧೦

ತಡೆದುಕೊಂಡಾಳು? (೩-೪). ಉತ್ತಮವಾದ ವ್ಯಂಜನಗಳಿಂದ ಕೂಡಿದ ಮೃಷ್ಟಾನ್ನವನ್ನು ಭುಂಜಿಸುತ್ತಿದ್ದ ಆ ವಿಶಾಲಾಕ್ಷಿಯು, ಬಿದಿರಕ್ಕಿಯೇ ಮೊದಲಾದ ವನ್ಯಾಹಾರವನ್ನು ಹೇಗೆ ತಿನ್ನುವಳು? ಸಂಗೀತ ವಾದ್ಯಗಳ ಮಂಗಳಧ್ವನಿಯನ್ನು ಕೇಳಿ ನಲಿಯುತ್ತಿದ್ದ ಆ ಶುಭಾಂಗಿ, ಮಾಂಸಾಹಾರಿಗಳಾದ ಸಿಂಹಗಳ ಕಠೋರ ಗರ್ಜನೆಯನ್ನು ಹೇಗೆ ಕೇಳಿಕೊಂಡಿದ್ದಾಳು? (೫-೬). ಇಂದ್ರಧ್ವಜದಂತೆ ಆನಂದದಾಯಕನೂ ಆಜಾನುಬಾಹುವೂ ಆದ ಶ್ರೀರಾಮನು ಪರಿಘದಂತಿರುವ ತನ್ನ ತೋಳನ್ನೇ ತಲೆದಿಂಬಾಗಿ ಮಾಡಿಕೊಂಡು ಎಲ್ಲಿ ಮಲಗುವನೊ! (೭). ಪದ್ಮದಂತೆ ಹೊಂಬಣ್ಣವುಳ್ಳ ರಾಮನ ಸುಂದರವದನವನ್ನು ಎಂದಿಗೆ ನೋಡುವೆನೊ! ಅಂದವಾದ ಮುಂಗುರುಳಿನಿಂದಲೂ ಕಮಲದ ಸುವಾಸನೆಯಿಂದಲೂ ಕೂಡಿದ ಚೆಲುವಾದ ಆ ಮುಖವನ್ನು ಎಂದಿಗೆ ಕಾಣುವೆನೊ ! ತಾವರೆಯ ಎಸಳಿನಂತಿರುವ ಕಣ್ಣುಗಳನ್ನು ಎಂದಿಗೆ ವೀಕ್ಷಿಸುವೆನೊ! (೮). ನಿಸ್ಸಂದೇಹವಾಗಿ ನನ್ನ ಎದೆ ವಜ್ರಸಾರದಿಂದ ನಿರ್ಮಿತವಾಗಿರಬೇಕು. ಅವನು ಕಣ್ಣೆದುರಿಗೆ ಇಲ್ಲದಂತದಾರೂ ಈ ಎದೆ ಸಾವಿರ

ಯದಿ ಪಂಚದಶೇ ವರ್ಷೇ ರಾಘವಃ ಪುನರೇಷ್ಯತಿ ।
ಜಹ್ಯಾದ್ರಾಜ್ಯಂ ಚ ಕೋಶಂ ಚ ಭರತೋ ನೋಪಲಕ್ಷ್ಯತೇ ॥ ೧೧

ಭೋಜಯಂತಿ ಕಿಲ ಶ್ರಾದ್ಧೇ ಕೇಚಿತ್ ಸ್ವಾನೇವ ಬಾಂಧವಾನ್ ।
ತತಃ ಪಶ್ಚಾತ್ ಸಮೀಕ್ಷಂತೇ ಕೃತಕಾರ್ಯಾ ದ್ವಿಜರ್ಷಭಾನ್ ॥ ೧೨

ತತ್ರ ಯೇ ಗುಣವಂತಶ್ಚ ವಿದ್ವಾಂಸಶ್ಚ ದ್ವಿಜಾತಯಃ ।
ನ ಪಶ್ಚಾತ್ತೇಽನುಮನ್ಯಂತೇ ಸುಧಾಮಪಿ ಸುರೋತ್ತಮಾಃ ॥ ೧೩

ಬ್ರಾಹ್ಮಣೇಷ್ವಪಿ ತೃಪ್ತೇಷು ಭುಕ್ತಶೇಷಂ ದ್ವಿಜರ್ಷಭಾಃ ।
ನಾಭ್ಯುಪೈತುಮಲಂ ಪ್ರಾಜ್ಞಾಃ ಶೃಂಗಚ್ಛೇದಮಿವರ್ಷಭಾಃ ॥ ೧೪

ಏವಂ ಕನೀಯಸಾ ಭ್ರಾತ್ರಾ ಭುಕ್ತಂ ರಾಜ್ಯಂ ವಿಶಾಂಪತೇ ।
ಭ್ರಾತಾ ಜ್ಯೇಷ್ಠೋ ವರಿಷ್ಠಶ್ಚ ಕಿಮರ್ಥಂ ನಾವಮಂಸ್ಯತೇ ॥ ೧೫

ಚೂರಾಗಿ ಒಡೆದುಹೋಗುವುದಿಲ್ಲ. ಹೇ ಮಹಾರಾಜ, ನಿಷ್ಕರುಣೆಯಿಂದ ನನ್ನ ಮೂವರು ಬಾಂಧವರನ್ನೂ ಕಾಡಿಗೆ ಓಡಿಸಿಬಿಟ್ಟೆಯಲ್ಲ! ನಿರ್ಗತಿಕರಾಗಿ ಅವರು ಕಾಡಿನಲ್ಲಿ ಅಲೆಯುತ್ತಿದ್ದಾರಲ್ಲ! (೯-೧೦). ರಾಮನು ಹದಿನೈದನೆಯ ವರ್ಷದಲ್ಲಿ ಹಿಂದಿರುಗಿ ಬಂದರೂ ಭರತನು ಈ ರಾಜ್ಯವನ್ನೂ ಬೊಕ್ಕಸವನ್ನೂ ಅವನಿಗೆ ಬಿಟ್ಟುಕೊಡುವನೆಂದು ತೋರುವುದಿಲ್ಲ. ಕೆಲವರು ಶ್ರಾದ್ಧದಲ್ಲಿ ತಮಗೆ ಬೇಕಾದ ಬಂಧುಗಳನ್ನೇ ಪೂರ್ವಪಂಕ್ತಿಯಲ್ಲಿ ಕುಳ್ಳಿರಿಸಿ ಭೋಜನ ಮಾಡಿಸುತ್ತಾರೆ. ಅವರಿಗೆ (ಬೇಕಾದಷ್ಟು ದಕ್ಷಿಣೆಗಳನ್ನು ಕೊಟ್ಟು) ತಮ್ಮ ಉದ್ದಿಷ್ಟಕಾರ್ಯವು ನೆರವೇರಿದ ಮೇಲೆ (ಅವರಿಗಿಂತ ಶ್ರೇಷ್ಠರಾದ) ಬ್ರಾಹ್ಮಣೋತ್ತಮರನ್ನು ಇಷ್ಟಪಂಕ್ತಿಯಲ್ಲಿ ಭೋಜನಮಾಡಿಸಲು ಬಯಸುತ್ತಾರೆ (೧೧-೧೨). ಅಂಥ ಸಂದರ್ಭದಲ್ಲಿ ಆಚಾರವಂತರೂ ವಿದ್ವಾಂಸರೂ ದೇವತಾಸದೃಶರೂ ಆದ ಬ್ರಾಹ್ಮಣರು ಅಮೃತವನ್ನೇ ಬಡಿಸಿದರೂ ಇಷ್ಟಪಂಕ್ತಿಯಲ್ಲಿ ಸೇರಿ ಭೋಜನಮಾಡಲು ಒಪ್ಪುವುದಿಲ್ಲ. ಮೊದಲು ಭೋಜನ ಮಾಡಿದವರು ದ್ವಿಜರೇ ಆಗಿದ್ದರೂ ದ್ವಿಜೋತ್ತಮರು ಭುಕ್ತಶೇಷವನ್ನು ಸ್ವೀಕರಿಸಲಾರರು. ಎತ್ತುಗಳಿಗೆ ಕೊಂಬುಗಳನ್ನು ಕತ್ತರಿಸಿದ ಹಾಗೆ, ಭುಕ್ತಶೇಷಸ್ವೀಕಾರವು ತಮಗೆ ಅಪಮಾನಕರವೆಂದು ಪ್ರಾಜ್ಞರಾದವರು ಭಾವಿಸುವರು (೧೩-೧೪). ಮಹಾರಾಜ, ಆದರಂತೆಯೇ ತಮ್ಮನು ಮೊದಲು ಅನುಭವಿಸಿದ ರಾಜ್ಯವನ್ನು

ನಾಪರೇಣಾಹೃತಂ ಭಕ್ಷ್ಯಂ ವ್ಯಾಘ್ರಃ ಖಾದಿತುಮಿಚ್ಛತಿ ।
ಏವಮೇವ ನರವ್ಯಾಘ್ರಃ ಪರಲೀಢಂ ನ ಮಂಸ್ಯತೇ ॥ ೧೬

ಹವಿರಾಜ್ಯಂ ಪುರೋಡಶಾಃ ಕುಶಾ ಯೂಪಾಶ್ಚ ಖಾದಿರಾಃ ।
ನೈತಾನಿ ಯಾತಯಾಮಾನಿ ಕುರ್ವಂತಿ ಪುನರಧ್ವರೇ ॥ ೧೭

ತಥಾಹ್ಯಾತ್ತಮಿದಂ ರಾಜ್ಯಂ ಹೃತಸಾರಾಂ ಸುರಾಮಿವ ।
ನಾಭಿಮಂತುಮಲಂ ರಾಮೋ ನಷ್ಟಸೋಮಮಿವಾಧ್ವರಮ್ ॥ ೧೮

ನೈವಂವಿಧಮಸತ್ಕಾರಂ ರಾಘವೋ ಮರ್ಷಯಿಷ್ಯತಿ ।
ಬಲವಾನಿನ ಶಾರ್ದೂಲೋ ವಾಲಧೇರಭಿಮರ್ಶನಮ್ ॥ ೧೯

ನೈತಸ್ಯ ಸಹಿತಾ ಲೋಕಾ ಭಯಂ ಕುರ್ಯುರ್ಮಹಾಮೃಧೇ ।
ಅಧರ್ಮಂ ತ್ವಿಹ ಧರ್ಮಾತ್ಮಾ ಲೋಕಂ ಧರ್ಮೇಣ ಯೋಜಯೇತ್ ॥
ನನ್ವಸೌ ಕಾಂಚನೈರ್ಬಾಣೈರ್ಮಹಾವೀರ್ಯೋ ಮಹಾಭುಜಃ ।
ಯುಗಾಂತ ಇವ ಭೂತಾನಿ ಸಾಗರಾನಪಿ ನಿರ್ದಹೇತ್ ॥ ೨೦

ಹಿರಿಯನೂ ಗುಣಶ್ರೇಷ್ಠನೂ ಆದ ರಾಮನು ಹೇಗೆ ನಿರಾಕರಿಸದೆ ಇದ್ದಾನು? ಇನ್ನೊಂದು ಪ್ರಾಣಿಯು ತಿಂದುಬಿಟ್ಟ ಆಹಾರವನ್ನು ಹುಲಿಯು ತಿನ್ನುವುದಿಲ್ಲ. ಪುರುಷಶ್ರೇಷ್ಠನಾದ ರಾಮನು ಇನ್ನೊಬ್ಬನು ಅನುಭವಿಸಿದ ರಾಜ್ಯವನ್ನು ಮುಟ್ಟುವುದಿಲ್ಲ (೧೫-೧೬). ಹವಿಸ್ಸು, ಘೃತ, ಪುರೋಡಾಶ, ದರ್ಭೆ, ಖದಿರ ವೃಕ್ಷದ ಯೂಪಸ್ತಂಭ ಮುಂತಾದವುಗಳನ್ನು ಒಂದು ಯಾಗದಲ್ಲಿ ಉಪಯೋಗಿಸಿದ ಮೇಲೆ ಅವುಗಳನ್ನೇ ಇನ್ನೊಂದು ಯಾಗದಲ್ಲಿ ಯಾರೂ ಉಪಯೋಗಿಸುವುದಿಲ್ಲ (೧೭). ಹಾಗೆ ಸಾರವನ್ನು ಹೀರಿದ ಸುರೆಯಂತೆಯೂ ಸೋಮರಸವನ್ನು ಕುಡಿದುಳಿದ ಯಾಗದ ಹವಿಸ್ಸಿನಂತೆಯೂ ಇನ್ನೊಬ್ಬನು ಭೋಗಿಸಿದ ಈ ರಾಜ್ಯವನ್ನು ರಾಮನು ಅಂಗೀಕರಿಸುವುದಿಲ್ಲ. ಇಂಥ ಅಪಮಾನವನ್ನು ರಾಘವನು ಎಂದಿಗೂ ಸಹಿಸಿಕೊಂಡು ಇರಲಾರನು. ಬಲಾಢ್ಯವಾದ ಹುಲಿಯ ಬಾಲವನ್ನು ಹಿಡಿದೆಳೆದರೆ ಅದು ಸುಮ್ಮನಿದ್ದೀತೆ? (೧೮-೧೯). ಸಮಸ್ತ ಲೋಕಗಳೂ ಒಟ್ಟುಗೂಡಿ ರಣರಂಗಕ್ಕೆ ಧುಮುಕಿ ಎದುರಿಸಿದರೂ ರಾಮನಿಗೆ ಭಯವಿಲ್ಲ. ಅಧರ್ಮ ಮಾರ್ಗಕ್ಕಿಳಿಯುವ ಈ ಲೋಕವನ್ನು ಆ ಧರ್ಮಾತ್ಮನು ಧರ್ಮಮಾರ್ಗದಲ್ಲಿ ನಡೆಯುವಂತೆ ನಿಯಮಿಸಬಲ್ಲನು (೨೦). ಆಜಾನುಬಾಹುವಾದ ಆ ವೀರಾಗ್ರಣಿಯು ಮನಸ್ಸು

ಸ ತಾದೃಶಃ ಸಿಂಹಬಲೋ ವೃಷಭಾಕ್ಷೋ ನರರ್ಷಭಃ ।
ಸ್ವಯಮೇವ ಹತಃ ಪಿತ್ರಾ ಜಲಜೇನಾತ್ಮಜೋ ಯಥಾ ॥ ೨೨

ದ್ವಿಜಾತಿಚರಿತೋ ಧರ್ಮಃ ಶಾಸ್ತ್ರದೃಷ್ಟಃ ಸನಾತನಃ ।
ಯದಿ ತೇ ಧರ್ಮನಿರತೇ ತ್ವಯಾ ಪುತ್ರೇ ವಿವಾಸಿತೇ ॥ ೨೩

ಗತಿರೇಕಾ ಪತಿರ್ನಾರ್ಯಾ ದ್ವಿತೀಯಾ ಗತಿರಾತ್ಮಜಃ ।
ತೃತೀಯಾ ಜ್ಞಾತಯೋ ರಾಜಂಶ್ಚತುರ್ಥೀ ನೇಹ ವಿದ್ಯತೇ ॥ ೨೪

ತತ್ರ ತ್ವಂ ಚೈವ ಮೇ ನಾಸಿ ರಾಮಶ್ಚ ವನಮಾಶ್ರಿತಃ ।
ನ ವನಂ ಗಂತುಮಿಚ್ಛಾಮಿ ಸರ್ವಥಾ ನಿಹತಾ ತ್ವಯಾ ॥ ೨೫

ಹತಂ ತ್ವಯಾ ರಾಜ್ಯಮಿದಂ ಸರಾಷ್ಟ್ರಂ
　ಹತಸ್ತಥಾತ್ಮಾ ಸಹ ಮಂತ್ರಿಭಿಶ್ಚ ।

ಮಾಡಿದರೆ ಸುವರ್ಣಪುಂಖಗಳುಳ್ಳ ತನ್ನ ಬಾಣಗಳಿಂದ ಪ್ರಳಯಕಾಲದ ರುದ್ರನಂತೆ ಪ್ರಾಣಿವರ್ಗವನ್ನೇ ನಿರ್ನಾಮಗೊಳಿಸಬಲ್ಲನು; ಸಮುದ್ರಗಳನ್ನೇ ಒಣಗಿಸಬಲ್ಲನು. ಅಂಥ ಸಿಂಹಪರಾಕ್ರಮಿಯೂ ವೃಷಭದಂತೆ ವಿಶಾಲನೇತ್ರನೂ ಆದ ಆ ಪುರುಷಶ್ರೇಷ್ಠನು ತನ್ನ ತಂದೆಯಿಂದಲೇ ತಾನು ಕಷ್ಟಕ್ಕೆ ಸಿಕ್ಕಿದನು. ಮೀನು ತನ್ನ ಮರಿಮೀನನ್ನು ನುಂಗಿದಂತಾಯಿತು! (೨೧-೨೨). ಧರ್ಮಪರಾಯಣನಾದ ಮಗನನ್ನು ಕಾಡಿಗೆ ಅಟ್ಟಿದೆಯಲ್ಲ! ಇದು ನಿನಗೆ ದ್ವಿಜರು ಆಚರಿಸುವ ಶಾಸ್ತ್ರವಿಹಿತವಾದ ಸನಾತನ ಧರ್ಮವಾಯಿತಲ್ಲವೆ? ಮಹಾರಾಜ, ಹೆಂಗಸಿಗೆ ಗಂಡನೊಬ್ಬನೇ ದೇವತೆ-ಗತಿ. ಅವನನ್ನು ಬಿಟ್ಟರೆ ಮಗನು ಎರಡನೆಯ ಗತಿ. ಬಂಧುಗಳು ಮೂರನೆಯವರು ಅವಳಿಗೆ ನಾಲ್ಕನೆಯ ಮಾರ್ಗವಿಲ್ಲ (೨೩-೨೪). ಇದರಲ್ಲಿ ನನ್ನ ಪಾಲಿಗೆ ನೀನು ಇಲ್ಲದಂತೆಯೇ. ರಾಮನು ವನಕ್ಕೆ ಹೊರಟು ಹೋದನು. (ಬಂಧುಗಳು ಎಲ್ಲಿರುವರೋ!) ನಿನ್ನನ್ನು ತ್ಯಜಿಸಿ ವನಕ್ಕೆ ಹೋಗಲು ನನಗೆ ಇಷ್ಟವಿಲ್ಲ. ಒಟ್ಟಿನಲ್ಲಿ ನಿನ್ನಿಂದ ನಾನು ಹಾಳಾದೆನು (೨೫). ನಿನ್ನಿಂದ ಈ ಕೋಸಲರಾಜ್ಯವು ಹಾಳಾಯಿತು. ಮಿತ್ರರಾಷ್ಟ್ರಗಳೂ ಹಾಳಾದವು. ನೀನೂ ಕೆಟ್ಟು ನಿನ್ನ ಮಂತ್ರಿಗಳನ್ನೂ ಕೆಡಿಸಿದೆ. ನನ್ನ ಮಗನೂ ನಾನು ನಿರ್ಗತಿಕರಾದೆವು. ಪ್ರಜೆಗಳು ಅನಾಥರಾದರು. ನಿನ್ನ

ಹತಾ ಸುಪುತ್ರಾಸ್ಮಿ ಹತಾಶ್ಚ ಪೌರಾಃ
ಸುತಶ್ಚ ಭಾರ್ಯಾ ಚ ತವ ಪ್ರಹೃಷ್ಟೌ॥ ೨೬

ಇಮಾಂ ಗಿರಂ ದಾರುಣಶಬ್ದ ಸಂಶ್ರಿತಾಂ
ನಿಶಮ್ಯ ರಾಜಾ ವಿಮುಮೋಹ ದುಃಖಿತಃ।
ತತಃ ಸ ಶೋಕಂ ಪ್ರವಿವೇಶ ಪಾರ್ಥಿವಃ
ಸ್ವದುಷ್ಕೃತಂ ಚಾಪಿ ಪುನಸ್ತದಾ ಸ್ಮರನ್ ॥ ೨೭

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕಷಷ್ಟಿತಮಃ ಸರ್ಗಃ

ಒಬ್ಬ ಮಗನೂ ಆ ಹೆಂಡತಿಯೂ ಸಂತೋಷದಿಂದ ನಲಿಯುವಂತಾಯಿತು!'' ಎಂದು ಕೌಸಲ್ಯೆಯು ಹಲುಬಿದಳು (೨೬). ಹೀಗೆ ಮರ್ಮಭೇದಕವಾದ ಕೌಸಲ್ಯೆಯ ಕ್ರೂರವಾಕ್ಯಗಳನ್ನು ಕೇಳಿ ದಶರಥರಾಜನು ದುಃಖದಿಂದ ಮೂರ್ಛೆಹೋದನು. ಸ್ವಲ್ಪಹೊತ್ತಿನ ಮೇಲೆ ಚೇತರಿಸಿಕೊಳ್ಳಲು, ಆತನಿಗೆ ತಾನು ಹಿಂದೆ ಮಾಡಿದ ಒಂದು ದುಷ್ಕೃತ್ಯವು ಸ್ಮರಣೆಗೆ ಬಂದಿತು. ಆಗ ರಾಜನು ಮತ್ತೆ ಶೋಕಾಕ್ರಾಂತನಾದನು. (೨೭).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಅರುವತ್ತೊಂದನೆಯ ಸರ್ಗ

ದ್ವಿಷಷ್ಟಿತಮಃ ಸರ್ಗಃ

ಕೌಸಲ್ಯಾಪ್ರಸಾದನಮ್

ಏವಂ ತು ಕ್ರುದ್ಧಯಾ ರಾಜಾ ರಾಮಮಾತ್ರಾ ಸಶೋಕಯಾ ।
ಶ್ರಾವಿತಃ ಪರುಷಂ ವಾಕ್ಯಂ ಚಿಂತಯಾಮಾಸ ದುಃಖಿತಃ ॥ ೧

ಚಿಂತಯಿತ್ವಾ ಸ ಚ ನೃಪೋ ಮುಮೋಹ ವ್ಯಾಕುಲೇಂದ್ರಿಯಃ ।
ಅಥ ದೀರ್ಘೇಣ ಕಾಲೇನ ಸಂಜ್ಞಾಮಾಪ ಪರಂತಪಃ ॥ ೨

ಸ ಸಂಜ್ಞಾಮುಪಲಭ್ಯೈವ ದೀರ್ಘಮುಷ್ಣಂ ಚ ನಿಃಶ್ವಸನ್ ।
ಕೌಸಲ್ಯಾಂ ಪಾರ್ಶ್ವತೋ ದೃಷ್ಟ್ವಾ ಪುನಶ್ಚಿಂತಾಮುಪಾಗಮತ್ ॥ ೩

ತಸ್ಯ ಚಿಂತಯಮಾನಸ್ಯ ಪ್ರತ್ಯಭಾತ್ ಕರ್ಮ ದುಷ್ಕೃತಮ್ ।
ಯದನೇನ ಕೃತಂ ಪೂರ್ವಮಜ್ಞಾನಾಚ್ಛಬ್ದವೇಧಿನಾ ॥ ೪

ವಿಮನಾಸ್ತೇನ ಶೋಕೇನ ರಾಮಶೋಕೇನ ಚ ಪ್ರಭುಃ ।
ದ್ವಾಭ್ಯಾಮಪಿ ಮಹಾರಾಜಃ ಶೋಕಾಭ್ಯಾಮನ್ವತಪ್ಯತ ॥ ೫

ಸರ್ಗ ೬೨

ಕೌಸಲ್ಯೆಯು ದಶರಥನಿಗೆ ಸಮಾಧಾನವನ್ನು ಹೇಳಿ, ತಾನು ಆಡಿದ
ಕ್ರೂರವಾಕ್ಯಗಳಿಗೋಸ್ಕರ ಆತನ ಕ್ಷಮೆಯನ್ನು ಬೇಡುವುದು.

ಹೀಗೆ ರಾಮಮಾತೆಯು ಶೋಕಸಂತಪ್ತಳಾಗಿ ಕೋಪದಿಂದ ಆಡಿದ ಕಠೋರ ವಾಕ್ಯವನ್ನು ಕೇಳಿ ದಶರಥಮಹಾರಾಜನು ದುಃಖಿತನಾದನು. ಅವನಿಗೆ ಚಿಂತೆಯು ಆವರಿಸಿತು. ಚಿಂತಿಸಿ ಚಿಂತಿಸಿ ಇಂದ್ರಿಯಗಳು ಬಸವಳಿಯಲು ರಾಜನು ಮತ್ತೆ ಎಚ್ಚರದಪ್ಪಿದನು. ಬಹಳ ಹೊತ್ತಿನ ಮೇಲೆ ಆ ವೀರನಿಗೆ ಎಚ್ಚರವಾಯಿತು (೧-೨). ಆತನು ಎಚ್ಚೆತ್ತು ಬಿಸುಸುಯ್ಯುತ್ತ ಬಳಿಯಲ್ಲಿದ್ದ ಕೌಸಲ್ಯೆಯನ್ನು ನೋಡಿದನು. ಅವನಿಗೆ ಪುನಃ ಚಿಂತೆಯು ಕವಿಯಿತು. ಹಾಗೆಯೇ ಅವನಿಗೆ ತಾನು ಹಿಂದೆ ಮಾಡಿದ್ದ ಒಂದು ಘೋರಕೃತ್ಯವು ಸ್ಮರಣೆಗೆ ಬಂದಿತು. ಶಬ್ದವನ್ನು ಕೇಳಿ ಗುರಿಹೊಡೆಯಬಲ್ಲ ದಶರಥನು ಅಜ್ಞಾನದಿಂದ ಆ ಕೃತ್ಯವನ್ನು ಮಾಡಿದ್ದನು (೩-೪). ಶ್ರೀರಾಮನ ವಿರಹಶೋಕದಿಂದ

ದಹ್ಯಮಾನಃ ಸ ಶೋಕಾಭ್ಯಾಂ ಕೌಸಲ್ಯಾಮಾಹ ಭೂಪತಿಃ ।
ವೇಪಮಾನೋಽಂಜಲಿಂ ಕೃತ್ವಾ ಪ್ರಸಾದಾರ್ಥಮವಾಙ್ಮುಖಃ ॥ ೬

ಪ್ರಸಾದಯೇ ತ್ವಾಂ ಕೌಸಲ್ಯೇ ರಚಿತೋಽಯಂ ಮಯಾಂಜಲಿಃ ।
ವತ್ಸಲಾ ಚಾನೃಶಂಸಾ ಚ ತ್ವಂ ಹಿ ನಿತ್ಯಂ ಪರೇಷ್ವಪಿ ॥ ೭

ಭರ್ತಾ ತು ಖಲು ನಾರೀಣಾಂ ಗುಣವಾನ್ನಿರ್ಗುಣೋಽಪಿ ವಾ ।
ಧರ್ಮಂ ವಿಮೃಶಮಾನಾನಾಂ ಪ್ರತ್ಯಕ್ಷಂ ದೇವಿ ದೈವತಮ್ ॥ ೮

ಸಾ ತ್ವಂ ಧರ್ಮಪರಾ ನಿತ್ಯಂ ದೃಷ್ಟಲೋಕಪರಾವರಾ ।
ನಾರ್ಹಸೇ ವಿಪ್ರಿಯಂ ವಕ್ತುಂ ದುಃಖಿತಾಪಿ ಸುದುಃಖಿತಮ್ ॥ ೯

ತದ್ವಾಕ್ಯಂ ಕರುಣಂ ರಾಜ್ಞಃ ಶ್ರುತ್ವಾ ದೀನಸ್ಯ ಭಾಷಿತಮ್ ।
ಕೌಸಲ್ಯಾ ವ್ಯಸೃಜದ್ಬಾಷ್ಪಂ ಪ್ರಣಾಲೀವ ನವೋದಕಮ್ ॥ ೧೦

ಸಾ ಮೂರ್ಧ್ನಿ ಬದ್ಧ್ವಾ ರುದತೀ ರಾಜ್ಞಃ ಪದ್ಮಮಿವಾಂಜಲಿಮ್ ।
ಸಂಭ್ರಮಾದಬ್ರವೀತ್ ತ್ರಸ್ತಾ ತ್ವರಮಾಣಾಕ್ಷರಂ ವಚಃ ॥ ೧೧

ಕಂಗೆಟ್ಟಿದ್ದ ಮಹಾರಾಜನಿಗೆ ಆ ಇನ್ನೊಂದು ಶೋಕವೂ ಸೇರಲು, ಅವೆರಡರಿಂದ ಅವನು ಬೆಂದುಹೋದನು. ಆ ಭೂಪಾಲನು ನಡುಗುತ್ತ ಕೌಸಲ್ಯೆಗೆ ಕೈಮುಗಿದು ತಲೆಯನ್ನು ತಗ್ಗಿಸಿ, ಅವಳ ಮನ್ನಣೆಯನ್ನು ಬೇಡುತ್ತ ಹೀಗೆಂದನು : ''ಕೌಸಲ್ಯೆ, ನಿನ್ನನ್ನು ಬೇಡಿಕೊಳ್ಳುತ್ತೇನೆ; ಮನ್ನಿಸು. ಕೈಮುಗಿದು ಕೇಳಿಕೊಳ್ಳುತ್ತೇನೆ. ನೀನು ಯಾವಾಗಲೂ ದಯಾಳು. ಪರರಲ್ಲಿಯೂ ಕ್ರೂರವಾಗಿ ನಡೆದುಕೊಳ್ಳತಕ್ಕವಳಲ್ಲ (೫-೭). ದೇವಿ, ಪತಿಯು ಗುಣವಂತನಾಗಲಿ ಗುಣಹೀನನಾಗಲಿ - ಧರ್ಮದೃಷ್ಟಿಯುಳ್ಳ ಸ್ತ್ರೀಯರಿಗೆ ಅವನು ಪ್ರತ್ಯಕ್ಷದೇವತೆಯಲ್ಲವೆ? ಸರ್ವದಾ ಧರ್ಮಪರಾಯಣಳೂ ಜನರ ನ್ಯೂನಾತಿರೇಕಗಳನ್ನು ಬಲ್ಲವಳೂ ಆದ ನೀನು ಎಷ್ಟೇ ದುಃಖದಲ್ಲಿದ್ದರೂ ಅತ್ಯಂತದುಃಖಿತನಾದ ನನಗೆ ಕಠೋರವಾಗಿ ಈ ರೀತಿ ನುಡಿಯುವುದು ಸರಿಯಲ್ಲ'' ಎಂದನು (೮-೯). ಹೀಗೆ ಮನಕರಗುವಂತೆ ದೈನ್ಯದಿಂದ ನುಡಿದ ರಾಜನ ಮಾತನ್ನು ಕೇಳಿ, (ಮನೆಯ ಸೂರಿನ) ದೋಣಿಯು ಮಳೆಯ ನೀರನ್ನು ಹರಿಸುವಂತೆ ಕೌಸಲ್ಯೆಯು ಕಣ್ಣೀರನ್ನು ಬಳಬಳನೆ ಹರಿಸಿದಳು. ಅವಳು ಥಟ್ಟನೆ ಭಯಗೊಂಡು ಅಳುತ್ತ, ದಶರಥರಾಜನ ಎರಡು ಕೈಗಳನ್ನೂ ಪದ್ಮದಂತೆ ತನ್ನ ತಲೆಯಮೇಲಿಟ್ಟುಕೊಂಡಳು;

ಪ್ರಸೀದ ಶಿರಸಾ ಯಾಚೇ ಭೂಮೌ ನಿಪತಿತಾಸ್ಮಿ ತೇ ।
ಯಾಚಿತಾಸ್ಮಿ ಹತಾ ದೇವ ಹಂತವ್ಯಾಹಂ ನ ಹಿ ತ್ವಯಾ ॥ ೧೨

ನೈಷಾ ಹಿ ಸಾ ಸ್ತ್ರೀ ಭವತಿ ಶ್ಲಾಘನೀಯೇನ ಧೀಮತಾ ।
ಉಭಯೋರ್ಲೋಕಯೋರ್ವೀರ ಪತ್ಯಾ ಯಾ ಸಂಪ್ರಸಾದ್ಯತೇ ॥ ೧೩

ಜಾನಾಮಿ ಧರ್ಮಂ ಧರ್ಮಜ್ಞ ತ್ವಾಂ ಜಾನೇ ಸತ್ಯವಾದಿನಮ್ ।
ಪುತ್ರಶೋಕಾರ್ತಯಾ ತತ್ತು ಮಯಾ ಕಿಮಪಿ ಭಾಷಿತಮ್ ॥ ೧೪

ಶೋಕೋ ನಾಶಯತೇ ಧೈರ್ಯಂ ಶೋಕೋ ನಾಶಯತೇ ಶ್ರುತಮ್ ।
ಶೋಕೋ ನಾಶಯತೇ ಸರ್ವಂ ನಾಸ್ತಿ ಶೋಕಸಮೋ ರಿಪುಃ ॥ ೧೫

ಶಕ್ಯಮಾಪತಿತಃ ಸೋಢುಂ ಪ್ರಹಾರೋ ರಿಪುಹಸ್ತತಃ ।
ಸೋಢುಮಾಪತಿತಃ ಶೋಕಃ ಸುಸೂಕ್ಷ್ಮೋಽಪಿ ನ ಶಕ್ಯತೇ ॥ ೧೬

ವನವಾಸಾಯ ರಾಮಸ್ಯ ಪಂಚರಾತ್ರೋಽದ್ಯ ಗಣ್ಯತೇ ।
ಯಃ ಶೋಕಹತಹರ್ಷಾಯಾಃ ಪಂಚವರ್ಷೋಪಮೋ ಮಮ ॥ ೧೭

ತೊದಲುತ್ತ ರಾಜನನ್ನು ಕುರಿತು ಆದರದಿಂದ ಹೀಗೆಂದಳು (೧೦-೧೧) : "ಪ್ರಭು, ಪ್ರಸನ್ನನಾಗು. ತಲೆಬಾಗಿ ಬೇಡುವೆನು. ನೆಲದಮೇಲೆ ಬಿದ್ದು ಬೇಡಿಕೊಳ್ಳುವೆನು. ನಿನ್ನಿಂದ ಯಾಚನೆ ಮಾಡಿಸಿಕೊಂಡಮೇಲೆ ನಾನು ಹಾಳಾಗಿ ಹೋದೆ. ನೀನು ನನ್ನನ್ನು ಅಧೋಗತಿಗೆ ತಳ್ಳಬಾರದು (೧೨). ಭೂಲೋಕ ದೇವಲೋಕಗಳಲ್ಲಿಯೂ ಕೀರ್ತಿಶಾಲಿಯಾಗಿ ಧೀಮಂತನಾಗಿರುವ ಪತಿಯು ತನ್ನಲ್ಲಿ ಯಾಚಿಸಿಕೊಳ್ಳುವಂತೆ ಮಾಡುವ ಹೆಂಗಸು ಕುಲಸ್ತ್ರೀಯೇ ಅಲ್ಲ. ಹೇ ಧರ್ಮಜ್ಞ, ನಿನ್ನ ಧರ್ಮನಿಷ್ಠೆಯನ್ನು ನಾನು ಬಲ್ಲೆ. ನೀನು ಸತ್ಯಸಂಧನೆಂಬುದನ್ನು ಬಲ್ಲೆನು. ನಾನು ಪುತ್ರಶೋಕದಿಂದ ಕಂಗೆಟ್ಟು ಏನನ್ನೋ ಆಡಿಬಿಟ್ಟೆನು (೧೩-೧೪). ಶೋಕವು ಧೈರ್ಯವನ್ನು ಕೆಡಿಸುವುದು; ವಿವೇಕವನ್ನು ಕೆಡಿಸುವುದು. ಶೋಕವು ಸಮಸ್ತವನ್ನೂ ಹಾಳುಮಾಡುವುದು. ಶೋಕದಂಥ ಶತ್ರು ಇನ್ನೊಂದಿಲ್ಲ. ಇನ್ನೊಬ್ಬ ವೈರಿಯು ಕೈಯಿಂದ ಹೊಡೆದರೂ ತಡೆದುಕೊಳ್ಳಬಹುದು. ಆದರೆ ಚಿಕ್ಕದಾದರೂ ಶೋಕದ ಹೊಡೆತವನ್ನು ತಡೆದುಕೊಳ್ಳಲು ಸಾಧ್ಯವಿಲ್ಲ (೧೫-೧೬). ರಾಮನು ಕಾಡಿಗೆ ಹೋಗಿ ಐದು ರಾತ್ರಿಗಳಾದವು. *ಶೋಕದಲ್ಲಿ ಮುಳುಗಿದ ನನಗೆ ಐದು ವರ್ಷಗಳಾದಂತೆ ಕಾಣುತ್ತದೆ.

---

* ಅನುಬಂಧವನ್ನು ನೋಡಿ.

ತಂ ಹಿ ಚಿಂತಯಮಾನಾಯಾಃ ಶೋಕೋಽಯಂ ಹೃದಿ ವರ್ಧತೇ ।
ನದೀನಾಮಿವ ವೇಗೇನ ಸಮುದರಸಲಿಲಂ ಮಹತ್ ॥ ೧೮

ಏವಂ ಹಿ ಕಥಯಂತ್ಯಾಸ್ತು ಕೌಸಲ್ಯಾಯಾಃ ಶುಭಂ ವಚಃ ।
ಮಂದರಶ್ಮಿರಭೂತ್ ಸೂರ್ಯೋ ರಜನೀ ಚಾಭ್ಯವರ್ತತ ॥ ೧೯

ಅಥ ಪ್ರಸಾದಿತೋ ವಾಕ್ಯೈರ್ದೇವ್ಯಾ ಕೌಸಲ್ಯಯಾ ನೃಪಃ ।
ಶೋಕೇನ ಚ ಸಮಾಕ್ರಾಂತೋ ನಿದ್ರಾಯ ವಶಮೇಯಿವಾನ್ ॥ ೨೦

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದ್ವಿಷಷ್ಟಿತಮಃ ಸರ್ಗಃ

ಅವನನ್ನು ನೆನೆಸಿಕೊಂಡು ನನ್ನ ದುಃಖವು ಹೆಚ್ಚುತ್ತಲೇ ಇದೆ. ನದಿಗಳ ಪ್ರವಾಹವೇಗದಿಂದ ಸಮುದ್ರದ ಜಲರಾಶಿಯು ಉಕ್ಕುವಂತೆ ನನ್ನ ಸಂಕಟವು ಹೃದಯದಲ್ಲಿ ಉಕ್ಕುತ್ತಿದೆ" ಎಂದಳು (೧೭-೧೮). ಹೀಗೆ ಕೌಸಲ್ಯಾದೇವಿಯು ಒಳ್ಳೆಯ ಮಾತನ್ನು ಹೇಳುತ್ತಿರುವಾಗ ಸೂರ್ಯನು ಕಾಂತಿಗುಂದಿದನು. ರಾತ್ರಿಯಾಯಿತು. ಕೌಸಲ್ಯೆಯ ಸಾಂತ್ವನವಾಕ್ಯಗಳಿಂದ ದಶರಥನಿಗೆ ಸಮಾಧಾನವೆನಿಸಿತು. ಆದರೆ ಶೋಕಾಕ್ರಾಂತನಾಗಿದ್ದ ರಾಜನು ಬಳಲಿ ಹಾಗೆಯೇ ನಿದ್ರಾಧೀನನಾದನು (೧೯-೨೦).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಅರುವತ್ತೆರಡನೆಯ ಸರ್ಗ

ತ್ರಿಷಷ್ಟಿತಮಃ ಸರ್ಗಃ

ಋಷಿಕುಮಾರವಧಾಖ್ಯಾನಮ್

ಪ್ರತಿಬುದ್ಧೋ ಮುಹೂರ್ತೇನ ಶೋಕೋಪಹತಚೇತನಃ ।
ಅಥ ರಾಜಾ ದಶರಥಶ್ಚಿಂತಾಮಭ್ಯವಪದ್ಯತ ॥ ೧

ರಾಮಲಕ್ಷ್ಮಣಯೋಶ್ಚೈವ ವಿವಾಸಾದ್ವಾಸವೋಪಮಮ್ ।
ಆವಿವೇಶೋಪಸರ್ಗಸ್ತಂ ತಮಃ ಸೂರ್ಯಮಿವಾಸುರಮ್ ॥ ೨

ಸಭಾರ್ಯೇ ನಿರ್ಗತೇ ರಾಮೇ ಕೌಸಲ್ಯಾಂ ಕೋಸಲೇಶ್ವರಃ ।
ವಿವಕ್ಷುರಸಿತಾಪಾಂಗೀಂ ಸ್ಮೃತ್ವಾ ದುಷ್ಕೃತಮಾತ್ಮನಃ ॥ ೩

ಸ ರಾಜಾ ರಜನೀಂ ಷಷ್ಠೀಂ ರಾಮೇ ಪ್ರವ್ರಾಜಿತೇ ವನಮ್ ।
ಅರ್ಧರಾತ್ರೇ ದಶರಥಃ ಸಂಸ್ಮರನ್ ದುಷ್ಕೃತಂ ಕೃತಮ್ ॥ ೪

ಸ ರಾಜಾ ಪುತ್ರಶೋಕಾರ್ತಃ ಸ್ಮೃತ್ವಾ ದುಷ್ಕೃತಮಾತ್ಮನಃ ।
ಕೌಸಲ್ಯಾಂ ಪುತ್ರಶೋಕಾರ್ತಾಮಿದಂ ವಚನಮಬ್ರವೀತ್ ॥ ೫

ಸರ್ಗ ೬೩

ಋಷಿಕುಮಾರನನ್ನು ತಾನು ಕೊಂದ ವೃತ್ತಾಂತವನ್ನು ದಶರಥನು ಕೌಸಲ್ಯೆಗೆ ಹೇಳುವುದು.

ಸ್ವಲ್ಪಹೊತ್ತಿನಲ್ಲಿಯೇ ದಶರಥರಾಜನಿಗೆ ಎಚ್ಚರವಾಯಿತು. ಶೋಕಸಂತಪ್ತನಾದ ರಾಜನಿಗೆ ಮತ್ತೆ ಚಿಂತೆ ಕವಿಯಿತು. ರಾಕ್ಷಸ ವಂಶದ ರಾಹುವು ಸೂರ್ಯನನ್ನು ಆವರಿಸುವಂತೆ, ರಾಮಲಕ್ಷ್ಮಣರ ವಿರಹದುಃಖವು ದೇವೇಂದ್ರ ಸದೃಶನಾದ ದಶರಥನನ್ನು ಆವರಿಸಿತು (೧-೨). ಶ್ರೀರಾಮನು ಪತ್ನೀಸಮೇತನಾಗಿ ಹೊರಟು ಹೋದುದನ್ನೇ ಚಿಂತಿಸುತ್ತಿದ್ದ ಕೋಸಲೇಶ್ವರನಿಗೆ ತನ್ನ ಒಂದು ದುಷ್ಕೃತ್ಯದ ನೆನಪಾಯಿತು. ತನ್ನನ್ನು ಪ್ರಸನ್ನ ದೃಷ್ಟಿಯಿಂದ ನೋಡುತ್ತಿದ್ದ ಕೌಸಲ್ಯೆಗೆ ಆ ವೃತ್ತಾಂತವನ್ನು ಹೇಳಲಿಚ್ಛಿಸಿದನು (೩). ಶ್ರೀರಾಮನು ವನಕ್ಕೆ ಹೋಗಿ ಐದು ರಾತ್ರಿಗಳು ಕಳೆದಿದ್ದವು. ಆರನೆಯ ದಿನ ಅರ್ಧ ರಾತ್ರಿಯಲ್ಲಿ ದಶರಥನಿಗೆ ತನ್ನ ದುಷ್ಕಾರ್ಯದ ಸ್ಮರಣೆಯಾಯಿತು. ಅವನು ಪುತ್ರಶೋಕದಿಂದ ಕೊರಗುತ್ತಿದ್ದ ಕೌಸಲ್ಯೆಯನ್ನು ಕುರಿತು

ಯದಾಚರತಿ ಕಲ್ಯಾಣಿ ಶುಭಂ ವಾ ಯದಿ ವಾಽಶುಭಮ್ ।
ತದೇವ ಲಭತೇ ಭದ್ರೇ ಕರ್ತಾ ಕರ್ಮಜಮಾತ್ಮನಃ ॥ ೬

ಗುರುಲಾಘವಮರ್ಥಾನಾಮಾರಂಭೇ ಕರ್ಮಣಾಂ ಫಲಮ್ ।
ದೋಷಂ ವಾ ಯೋ ನ ಜಾನಾತಿ ಸ ಬಾಲ ಇತಿ ಹೋಚ್ಯತೇ ॥ ೭

ಕಶ್ಚಿದಾಮ್ರವಣಂ ಛಿತ್ತ್ವಾ ಪಲಾಶಾಂಶ್ಚ ನಿಷಿಂಚತಿ ।
ಪುಷ್ಪಂ ದೃಷ್ಟ್ವಾ ಫಲೇ ಗೃಧ್ನುಃ ಸ ಶೋಚತಿ ಫಲಾಗಮೇ ॥ ೮

ಅವಿಜ್ಞಾಯ ಫಲಂ ಯೋ ಹಿ ಕರ್ಮ ತ್ವೇವಾನುಧಾವತಿ ।
ಸ ಶೋಚೇತ್ ಫಲವೇಲಾಯಾಂ ಯಥಾ ಕಿಂಶುಕಸೇಚಕಃ ॥ ೯

ಸೋಽಹಮಾಮ್ರವಣಂ ಛಿತ್ತ್ವಾ ಪಾಲಾಶಾಂಶ್ಚ ನ್ಯಷೇಚಯಮ್ ।
ರಾಮಂ ಫಲಾಗಮೇ ತ್ಯಕ್ತ್ವಾ ಪಶ್ಚಾಚ್ಛೋಚಾಮಿ ದುರ್ಮತಿಃ ॥ ೧೦

ಲಬ್ಧಶಬ್ದೇನ ಕೌಸಲ್ಯೇ ಕುಮಾರೇಣ ಧನುಷ್ಮತಾ ।
ಕುಮಾರಃ ಶಬ್ದವೇಧೀತಿ ಮಯಾ ಪಾಪಮಿದಂ ಕೃತಮ್ ॥ ೧೧

ಹೀಗೆಂದನು : ''ಮಂಗಳಾಂಗಿ-ಕೌಸಲ್ಯೆ, ಮನುಷ್ಯನು ಒಳ್ಳೆಯದನ್ನು ಮಾಡಲಿ ಕೆಟ್ಟುದನ್ನು ಮಾಡಲಿ – ತನ್ನ ಕರ್ಮಕ್ಕೆ ತಕ್ಕ ಫಲವನ್ನೇ ಪಡೆಯುತ್ತಾನೆ (೪-೬). ಕಾರ್ಯವನ್ನು ಆರಂಭಿಸುವಾಗ ಫಲದ ಹೆಚ್ಚು ಕಡಿಮೆಗಳನ್ನೂ ಗುಣ ದೋಷಗಳನ್ನೂ ಯಾವನು ವಿಚಾರಿಸುವುದಿಲ್ಲವೊ ಅವನು ಮೂಢನೆನಿಸುತ್ತಾನೆ. ಹೂವಿನ ಆಡಂಬರವನ್ನು ಕಂಡು ಒಳ್ಳೆಯ ಹಣ್ಣು ದೊರೆಯುವುದೆಂಬ ಆಸೆಯಿಂದ ಮುತ್ತುಗದ ಮರಗಳಿಗೆ ನೀರೆರೆದು ಪೋಷಿಸಿ ಮಾವಿನ ತೋಪನ್ನು ಕಡಿದುಹಾಕಿದರೆ ಏನಾಗುವುದು? ಫಲ ಪ್ರಾಪ್ತಿಯ ಕಾಲದಲ್ಲಿ ಹಣ್ಣುಗಳಿಲ್ಲವೆಂದು ವ್ಯಸನ ಪಡಬೇಕಾಗುವುದು (೭-೮). ಯಾವನು ಫಲದ ಸ್ವರೂಪವನ್ನು ವಿಮರ್ಶಿಸದೆ ಕಾರ್ಯವನ್ನಾರಂಭಿಸುವನೊ, ಅವನು ಮುತ್ತುಗದ ಮರವನ್ನು ಬೆಳೆಸಿದವನಂತೆ ಫಲಕಾಲದಲ್ಲಿ ವ್ಯಥೆಪಡಬೇಕಾಗುವುದು. ನಾನು ಮಾವಿನತೋಟವನ್ನು ಕಡಿದು ಮುತ್ತುಗದ ಮರಗಳಿಗೆ ನೀರೆರೆದು ಪೋಷಿಸಿದೆನು. ಬುದ್ಧಿಹೀನನಾದ ನಾನು ರಾಮನನ್ನು ತ್ಯಜಿಸಿ ಈಗ ಫಲಕಾಲದಲ್ಲಿ ಪಶ್ಚಾತ್ತಾಪದಿಂದ ಸಂಕಟಪಡುತ್ತಿದ್ದೇನೆ

ತದಿದಂ ಮೇಽನುಸಂಪ್ರಾಪ್ತಂ ದೇವಿ ದುಃಖಂ ಸ್ವಯಂ ಕೃತಮ್ ।
ಸಂಮೋಹಾದಿವ ಬಾಲೇನ ಯದಾ ಸ್ಯಾದ್ಭಕ್ಷಿತಂ ವಿಷಮ್ ॥ ೧೨

ಯಥಾನ್ಯಃ ಪುರುಷಃ ಕಶ್ಚಿತ್ ಪಲಾಶೈರ್ಮೋಹಿತೋ ಭವೇತ್ ।
ಏವಂ ಮಯಾಪ್ಯವಿಜ್ಞಾತಂ ಶಬ್ದವೇಧ್ಯಮಯಂ ಫಲಮ್ ॥ ೧೩

ದೇವ್ಯನೂಢಾ ತ್ವಮಭವೋ ಯುವರಾಜೋ ಭವಾಮ್ಯಹಮ್ ।
ತತಃ ಪ್ರಾವೃಡನುಪ್ರಾಪ್ತಾ ಮಮ ಕಾಮವಿವರ್ಧಿನೀ ॥ ೧೪

ಉಪಾಸ್ಯ ಹಿ ರಸಾನ್ ಭೌಮಾಂಸ್ತಪ್ತ್ವಾ ಚ ಜಗದಂಶುಭಿಃ ।
ಪರೇತಾಚರಿತಾಂ ಭೀಮಾಂ ರವಿರಾವಿಶತೇ ದಿಶಮ್ ॥ ೧೫

ಉಷ್ಣಮಂತರ್ದಧೇ ಸದ್ಯಃ ಸ್ನಿಗ್ಧಾ ದದೃಶಿರೇ ಘನಾಃ ।
ತತೋ ಜಹೃಷಿರೇ ಸರ್ವೇ ಭೇಕಸಾರಂಗಬರ್ಹಿಣಃ ॥ ೧೬

ಕ್ಲಿನ್ನಪಕ್ಷೋತ್ತರಾಃ ಸ್ನಾತಾಃ ಕೃಚ್ಛ್ರಾದಿವ ಪತತ್ತ್ರಿಣಃ ।
ವೃಷ್ಟಿವಾತಾವಧೂತಾಗ್ರಾನ್ ಪಾದಪಾನಭಿಪೇದಿರೇ ॥ ೧೭

(೯-೧೦). ಕೌಸಲ್ಯೆ, ನಾನು ಚಿಕ್ಕವನಾಗಿದ್ದಾಗ 'ರಾಜಕುಮಾರನು ಶಬ್ದವೇಧಿ' ಎಂದು ಖ್ಯಾತಿಯನ್ನು ಗಳಿಸಿದ್ದೆನು. ಆಗ ಧನುರ್ಧಾರಿಯಾದ ನಾನು ಒಂದು ಪಾಪಕೃತ್ಯವನ್ನು ಮಾಡಿದೆನು. ದೇವಿ, ಸ್ವಯಂಕೃತವಾದ ಅಪರಾಧವು ನನಗೆ ಈ ದುಃಖವನ್ನು ತಂದೊಡ್ಡಿತು. ಬಾಲಕನು ಅಜ್ಞಾನದಿಂದ ವಿಷವನ್ನು ತಿಂದಂತಾಯಿತು (೧೧-೧೨). ಮುತ್ತುಗದ ಹೂಗಳಿಂದ ಮೋಸಹೋದ ಮನುಷ್ಯನಂತಾದೆನು. ನನ್ನ ಶಬ್ದವೇಧಿತ್ವದ ಫಲವು ಈಗ ದೊರಕಿತು. ದೇವಿ, ಆಗ ಇನ್ನೂ ನಿನ್ನನ್ನು ಮದುವೆಯಾಗಿರಲಿಲ್ಲ, ನಾನು ಯುವರಾಜನಾಗಿದ್ದೆ. ಒಂದು ಸಲ ಕಾಮೋತ್ತೇಜಕವಾದ ಮಳೆಗಾಲವು ಬಂದಿತು (೧೩-೧೪). ಸೂರ್ಯನು ಭೂಮಿಯಮೇಲಿದ್ದ ನೀರನ್ನು ಹೀರಿ ತನ್ನ ಕಿರಣಗಳಿಂದ ಜಗತ್ತನ್ನು ಸಂತಾಪಗೊಳಿಸಿದ್ದನು. ಪ್ರೇತಗಳಿಗೆ ಆವಾಸಸ್ಥಾನವಾಗಿ ಭಯಂಕರವಾದ ದಕ್ಷಿಣ ದಿಕ್ಕನ್ನು ಸೇರಿದ್ದನು (೧೫). ಮಳೆಗಾಲವು ಬಂದೊಡನೆ ನೆಲದ ಮೇಲಿನ ಕಾವು ಆರಿತು. ನೀರು ತುಂಬಿದ ಕಾರ್ಮುಗಿಲುಗಳು ಗೋಚರಿಸಿದವು. ಕಪ್ಪೆ ಚಾತಕಪಕ್ಷಿ ನವಿಲುಗಳು ಉಲ್ಲಾಸಗೊಂಡವು. ರೆಕ್ಕೆಗಳು ನೆನೆದು ಹಕ್ಕಿಗಳೆಲ್ಲವೂ ಸ್ನಾನಮಾಡಿದಂತೆ

ಪತಿತೇನಾಂಭಸಾ ಛನ್ನಃ ಪತಮಾನೇನ ಚಾಸಕೃತ್ ।
ಆಬಭೌ ಮತ್ತಸಾರಂಗಸ್ತೋಯರಾಶಿರಿವಾಚಲಃ ॥ ೧೮

ಪಾಂಡರಾರುಣವರ್ಣಾನಿ ಸ್ರೋತಾಂಸಿ ವಿಮಲಾನ್ಯಪಿ ।
ಸುಸ್ರುವುರ್ಗಿರಿಧಾತುಭ್ಯಃ ಸಭಸ್ಮಾನಿ ಭುಜಂಗವತ್ ॥ ೧೯

ತಸ್ಮಿನ್ನತಿಸುಖೇ ಕಾಲೇ ಧನುಷ್ಮಾನಿಷುಮಾನ್ ರಥೀ ।
ವ್ಯಾಯಾಮಕೃತಸಂಕಲ್ಪಃ ಸರಯೂಮನ್ವಗಾಂ ನದೀಮ್ ॥ ೨೦

ನಿಪಾನೇ ಮಹಿಷಂ ರಾತ್ರೌ ಗಜಂ ವಾಭ್ಯಾಗತಂ ನದೀಮ್ ।
ವನ್ಯಂ ವಾ ಶ್ವಾಪದಂ ಕಂಚಿಜ್ಜಿಘಾಂಸುರಜಿತೇಂದ್ರಿಯಃ ॥ ೨೧

ಅಥಾಂಧಕಾರೇ ತ್ವಶ್ರೌಷಂ ಜಲೇ ಕುಂಭಸ್ಯ ಪೂರ್ಯತಃ ।
ಅಚಕ್ಷುರ್ವಿಷಯೇ ಘೋಷಂ ವಾರಣಸ್ಯೇವ ನರ್ದತಃ ॥ ೨೨

ಕಾಣುತ್ತಿದ್ದವು. ಮಳೆಗಾಳಿಯಿಂದ ತೂಗಾಡುತ್ತಿದ್ದ ಮರದ ಕೊಂಬೆಗಳನ್ನು ಅವು ಕಷ್ಟದಿಂದ ಅಡರುತ್ತಿದ್ದವು (೧೬-೧೭). ಒಂದೇ ಸಮನೆ ಸುರಿಯುತ್ತಿದ್ದ ಮಳೆಯ ನೀರಿನಿಂದ ಬೆಟ್ಟವು ಆವೃತವಾಗಿತ್ತು. ಮದಿಸಿದ ಚಾತಕಪಕ್ಷಿಗಳು ಹಾರಾಡುತ್ತಿದ್ದವು. ಅಂಥ ಬೆಟ್ಟವನ್ನು ನೋಡಿದರೆ ಅಲ್ಲಾಡದಿರುವ ಸಮುದ್ರವೋ ಎಂದು ತೋರುತ್ತಿತ್ತು (೧೮). ಜಲಪ್ರವಾಹಗಳು ಸ್ವಚ್ಛವಾಗಿದ್ದರೂ ಗೈರಿಕಧಾತುಗಳೊಡನೆಯೂ ಬೂದಿಯೊಡನೆಯೂ ಕಲೆತು ಬೆಳ್ಳಗೂ ಕೆಂಪಗೂ ಕಾಣುತ್ತ ಬಣ್ಣಬಣ್ಣವಾಗಿ ಹಾವುಗಳಂತೆ ಹರಿದುಬರುತ್ತಿದ್ದವು (೧೯). ಸುಖವಾಗಿ ಇರಬಹುದಾದ ಆ ವರ್ಷಾಕಾಲದ ರಾತ್ರಿಯಲ್ಲಿ ನನಗೆ ಬೇಟೆಯಾಡಲು ಅಪೇಕ್ಷೆಯಾಯಿತು. ನಾನು ಧನುರ್ಬಾಣಗಳನ್ನು ಹಿಡಿದು ರಥಾರೂಢನಾಗಿ ಸರಯೂನದಿಯ ಕಡೆಗೆ ಹೊರಟೆನು. (ಬೇಟೆಯು ದುರ್ವ್ಯಸನವಾದರೂ) ಇಂದ್ರಿಯಗಳನ್ನು ತಡೆಹಿಡಿಯುವ ಮನೋದಾರ್ಢ್ಯವು ನನಗಿರಲಿಲ್ಲ, ಆ ರಾತ್ರಿ ನದಿಯಲ್ಲಿ ನೀರು ಕುಡಿಯುವ ಸ್ಥಳಕ್ಕೆ ಬರುವ ಕಾಡುಕೋಣ, ಆನೆ ಅಥವಾ ಯಾವುದಾದರೂ ವನ್ಯಮೃಗವನ್ನು ಕೊಲ್ಲಬೇಕೆಂದು ಉದ್ದೇಶಿಸಿದ್ದೆನು (೨೦-೨೧). ಹೀಗಿರುವಾಗ ಕತ್ತಲೆಯಲ್ಲಿ ಯಾರೋ ಗಡಿಗೆಯನ್ನು ನೀರಿನಲ್ಲಿ ಮುಳುಗಿಸಿ ತುಂಬಿಕೊಳ್ಳುತ್ತಿರಲು, ಆ ಶಬ್ದವು ನನಗೆ ಕೇಳಿಸಿತು. ಕಣ್ಣಿಗೆ ಎಟುಕುತ್ತಿರಲಿಲ್ಲವಾದ್ದರಿಂದ ಆ ಶಬ್ದವು ಆನೆಯ ಘೀಂಕಾರದಂತೆ ನನಗೆ

ತತೋಽಹಂ ಶರಮುದ್ಧೃತ್ಯ ದೀಪ್ತಮಾಶೀವಿಷೋಪಮಮ್ ।
ಶಬ್ದಂ ಪ್ರತಿ ಗಜಪ್ರೇಪ್ಸುರಭಿಲಕ್ಷ್ಯ ತ್ವಪಾತಯಮ್ ॥ ೨೩

ಅಮುಂಚಂ ನಿಶಿತಂ ಬಾಣಮಹಮಾಶೀವಿಷೋಪಮಮ್ ।
ತತ್ರವಾಗುಷಸಿ ವ್ಯಕ್ತಾ ಪ್ರಾದುರಾಸೀದ್ವನೌಕಸಃ ॥ ೨೪

ಹಾ ಹೇತಿ ಪತತಸ್ತೋಯೇ ಬಾಣಾಭಿಹತಮರ್ಮಣಃ ।
ತಸ್ಮಿನ್ನಿಪತಿತೇ ಬಾಣೇ ವಾಗಭೂತ್ತತ್ರ ಮಾನುಷೀ ॥ ೨೫

ಕಥಮಸ್ಮದ್ವಿಧೇ ಶಸ್ತ್ರಂ ನಿಪತೇತ್ತು ತಪಸ್ವಿನಿ ।
ಪ್ರವಿವಿಕ್ತಾಂ ನದೀಂ ರಾತ್ರಾವುದಾಹಾರೋಽಹಮಾಗತಃ ॥ ೨೬

ಇಷುಣಾಭಿಹತಃ ಕೇನ ಕಸ್ಯ ವಾ ಕಿಂ ಕೃತಂ ಮಯಾ ।
ಋಷೇರ್ಹಿ ನ್ಯಸ್ತದಂಡಸ್ಯ ವನೇ ವನ್ಯೇನ ಜೀವಿತಃ ॥ ೨೭

ಕಥಂ ನು ಶಸ್ತ್ರೇಣ ವಧೋ ಮದ್ವಿಧಸ್ಯ ವಿಧೀಯತೇ ।
ಜಟಾಬಾರಧರಸ್ಯೈವ ವಲ್ಕಲಾಜಿನವಾಸಸಃ ॥ ೨೮

ತೋರಿತು. ಅಲ್ಲಿ ಆನೆ ಇದೆಯೆಂದು ಭಾವಿಸಿ ನಾನು ಸರ್ಪದಂತೆ ಘೋರವಾದ ಒಂದು ಬಾಣವನ್ನು ಸೆಳೆದು ಶಬ್ದವು ಬಂದ ಕಡೆಗೆ ಗುರಿಯಿಟ್ಟು ಅದನ್ನು ಹೊಡೆದೆನು (೨೨-೨೩). ಸರ್ಪದಂತಿದ್ದ ಹರಿತವಾದ ಬಾಣವನ್ನು ಪ್ರಯೋಗಿಸಿದ ಕೂಡಲೆ, ಮಬ್ಬುಗತ್ತಲೆಯಲ್ಲಿ ಶಬ್ದವು ಬಂದ ಕಡೆ ಒಂದು ವನವಾಸಿಯ ಧ್ವನಿಯು ಕೇಳಿಸಿತು. ನನ್ನ ಬಾಣದಿಂದ ಮರ್ಮಸ್ಥಳದಲ್ಲಿ ಗಾಯಗೊಂಡು ನೀರಿನಲ್ಲಿ ಉರುಳಿದ ವ್ಯಕ್ತಿಯು ಹಾ ಹಾ ಎಂದು ಕೂಗಿಕೊಂಡಿತು. ಅದು ಮನುಷ್ಯನ ಧ್ವನಿಯಾಗಿತ್ತು (೨೪-೨೫). ಆ ಮನುಷ್ಯನು ಅಯ್ಯೋ! ನನ್ನಂಥ ತಪಸ್ವಿಯ ಮೇಲೂ ಹೀಗೆ ಶಸ್ತ್ರವು ಬಂದು ಎರಗಬಹುದೆ! ಈ ರಾತ್ರಿಯಲ್ಲಿ ನೀರನ್ನು ಒಯ್ಯುವುದಕ್ಕಾಗಿ ನಿರ್ಜನವಾದ ನದಿಗೆ ನಾನು ಬಂದೆನು. ನನ್ನನ್ನು ಯಾರು ಬಾಣದಿಂದ ಹೊಡೆದಿರಬಹುದು? ಯಾರಿಗೆ ನಾನು ಯಾವ ತಪ್ಪನ್ನು ಮಾಡಿದೆನು? ಯಾರಿಗೂ ಹಿಂಸೆಯನ್ನು ಕೊಡದೆ ಕಾಡಿನಲ್ಲಿ ವನ್ಯಾಹಾರದಿಂದ ಜೀವಿಸುವ ನನ್ನಂಥ ಋಷಿಗೆ ಶಸ್ತ್ರದಿಂದ ವಧೆಯೆಂಬುದುಂಟೆ? (೨೬-೨೭). ಜಟೆಯನ್ನು ಹೊತ್ತು ನಾರುಬಟ್ಟೆ ಚರ್ಮಗಳನ್ನು ಧರಿಸಿರುವ ನನ್ನನ್ನು

ಕೋ ವಧೇನ ಮಮಾರ್ಥೀ ಸ್ಯಾತ್ಕಿಂ ವಾಸ್ಯಾಪಕೃತಂ ಮಯಾ ।
ಏವಂ ನಿಷ್ಫಲಮಾರಬ್ಧಂ ಕೇವಲಾನರ್ಥಸಂಹಿತಮ್ ॥ ೨೯

ನ ಕಶ್ಚಿತ್ಸಾಧು ಮನ್ಯೇತ ಯಥೈವ ಗುರುತಲ್ಪಗಮ್ ।
ನಾಹಂ ತಥಾನುಶೋಚಾಮಿ ಜೀವಿತಕ್ಷಯಮಾತ್ಮನಃ ॥ ೩೦

ಮಾತರಂ ಪಿತರಂ ಚೋಭಾವನುಶೋಚಾಮಿ ಮದ್ವಧೇ ।
ತದೇತನ್ಮಿಥುನಂ ವೃದ್ಧಂ ಚಿರಕಾಲಭೃತಂ ಮಯಾ ॥ ೩೧

ಮಯಿ ಪಂಚತ್ವಮಾಪನ್ನೇ ಕಾಂ ವೃತ್ತಿಂ ವರ್ತಯಿಷ್ಯತಿ ।
ವೃದ್ಧೌ ಚ ಮಾತಾಪಿತರಾವಹಂ ಚೈಕೇಷುಣಾ ಹತಃ ॥ ೩೨

ಕೇನ ಸ್ಮ ನಿಹತಾಃ ಸರ್ವೇ ಸುಬಾಲೇನಾಕೃತಾತ್ಮನಾ ।
ತಾಂ ಗಿರಂ ಕರುಣಾಂ ಶ್ರುತ್ವಾ ಮಮ ಧರ್ಮಾನುಕಾಂಕ್ಷಿಣಃ ॥ ೩೩

ಕರಾಭ್ಯಾಂ ಸಶರಂ ಚಾಪಂ ವ್ಯಥಿತಸ್ಯಾಪತದ್ಭುವಿ ।
ತಸ್ಯಾಹಂ ಕರುಣಂ ಶ್ರುತ್ವಾ ನಿಶಿ ಲಾಲಪತೋ ಬಹು ॥ ೩೪

ಕೊಂದರೆ ಯಾರಿಗೆ ಯಾರಿಗೆ ಪ್ರಯೋಜನವಿರಬಹುದು? ಆತನಿಗೆ ನಾನು ಮಾಡಿದ ಅಪಕಾರವಾದರೂ ಏನು? ಆತನು ನಿಷ್ಫಲವಾಗಿ ಅನರ್ಥವನ್ನೇ ಮಾಡಿದನಲ್ಲ! (೨೮-೨೯). ಗುರುಪತ್ನೀಗಾಮಿಯಂತಿರುವ ಆತನನ್ನು ಯಾವನೂ ಮೆಚ್ಚಲಾರ. ನನ್ನ ಸಾವಿಗಾಗಿ ನಾನು ಅಷ್ಟಾಗಿ ದುಃಖಿಸುವುದಿಲ್ಲ. ನನ್ನ ತಾಯಿತಂದೆಯರಿಬ್ಬರಿಗಾಗಿ ದುಃಖಪಡುತ್ತಿದ್ದೇನೆ. ಮುದುಕರಾದ ಅವರಿಬ್ಬರನ್ನೂ ನಾನು ಬಹುಕಾಲದಿಂದ ಪೋಷಿಸಿಕೊಂಡುಬಂದೆ (೩೦-೩೧). ನಾನು ಸತ್ತುಹೋದ ಮೇಲೆ ಅವರು ಜೀವಿಸುವ ಬಗೆಯೇನು? ವೃದ್ಧರಾದ ಮಾತಾಪಿತೃಗಳೂ ನಾನು ಈ ಒಂದು ಬಾಣದಿಂದ ಹತರಾದೆವು. ಅವಿವೇಕಿಯಾದ ಯಾವ ಮೂರ್ಖನು ನಮ್ಮೆಲ್ಲರನ್ನೂ ಕೊಂದಿರಬಹುದು? ಎಂದು ವಿಲಪಿಸಿದನು (೩೨-೩೩). ಕರುಣಾಜನಕವಾದ ಆ ಮಾತನ್ನು ಕೇಳಿ ನನಗೆ ಬಹಳ ವ್ಯಥೆಯಾಯಿತು. ಧರ್ಮಕಾಂಕ್ಷಿಯಾದ ನನ್ನ ಕೈಗಳಿಂದ ಧನುರ್ಬಾಣಗಳು ಜಾರಿಬಿದ್ದವು. ರಾತ್ರಿಯಲ್ಲಿ ಹೀಗೆ ಬಹುವಿಧವಾಗಿ ಗೋಳಿಡುತ್ತಿದ್ದ ಆತನ ದೀನಶಬ್ದವನ್ನು ಕೇಳಿ ನಾನು ಗಾಬರಿಗೊಂಡೆನು. ಅತಿಯಾದ ಶೋಕವು ಆವರಿಸಿತು. ದಿಙ್ಮೂಢನಾದೆನು. ಕೊನೆಗೆ ಆರ್ತಧ್ವನಿಯು ಬಂದ ಸ್ಥಳಕ್ಕೆ ವಿಷಣ್ಣನಾಗಿ

ಸಂಭ್ರಾಂತಃ ಶೋಕವೇಗೇನ ಭೃಶಮಾಸಂ ವಿಚೇತನಃ ।
ತಂ ದೇಶಮಹಮಾಗಮ್ಯ ದೀನಸತ್ತ್ವಃ ಸುದುರ್ಮನಾಃ ॥ ೩೫

ಅಪಶ್ಯಮಿಷುಣಾ ತೀರೇ ಸರಯ್ವಾಸ್ತಾಪಸಂ ಹತಮ್ ।
ಅವಕೀರ್ಣಜಟಾಭರಂ ಪ್ರವಿದ್ಧಕಲಶೋದಕಮ್ ॥ ೩೬

ಪಾಂಸುಶೋಣಿತದಿಗ್ಧಾಂಗಂ ಶಯಾನಂ ಶರಪೀಡಿತಮ್ ।
ಸ ಮಾಮುದ್ವೀಕ್ಷ್ಯ ನೇತ್ರಾಭ್ಯಾಂ ತ್ರಸ್ತಮಸ್ವಸ್ಥಚೇತಸಮ್ ॥ ೩೭

ಇತ್ಯುವಾಚ ವಚಃ ಕ್ರೂರಂ ದಿಧಕ್ಷನ್ನಿವ ತೇಜಸಾ ।
ಕಿಂ ತವಾಪಕೃತಂ ರಾಜನ್ ವನೇ ನಿವಸತಾ ಮಯಾ ॥ ೩೮

ಜಿಹೀರ್ಷುರಂಭೋ ಗುರ್ವರ್ಥಂ ಯದಹಂ ತಾಡಿತಸ್ತ್ವಯಾ ।
ಏಕೇನ ಖಲು ಬಾಣೇನ ಮರ್ಮಣ್ಯಭಿಹತೇ ಮಯಿ ॥ ೩೯

ದ್ವಾವಂಧೌ ನಿಹತೌ ವೃದ್ಧೌ ಮಾತಾ ಜನಯಿತಾ ಚ ಮೇ ।
ತೌ ಕಥಂ ದುರ್ಬಲಾವಂಧೌ ಮತ್ಪ್ರತೀಕ್ಷೌ ಪಿಪಾಸಿತೌ ॥ ೪೦

ದೈನ್ಯದಿಂದ ಹೋದೆನು (೩೪-೩೫). ಅಸ್ಸಿ ನನ್ನ ಬಾಣದಿಂದ ಹೊಡೆಯಲ್ಪಟ್ಟು ಸರಯೂತೀರದಲ್ಲಿ ಮಲಗಿದ್ದ ಒಬ್ಬ ತಾಪಸನನ್ನು ಕಂಡೆನು. ಅವನ ಜಟೆಯು ಬಿಚ್ಚಿ ಹರಡಿತ್ತು. ಕಲಶದ ನೀರು ಚೆಲ್ಲಿಹೋಗಿತ್ತು (೩೬). ಅವನ ದೇಹವು ರಕ್ತಮಯವಾಗಿ ಧೂಳಿಯಿಂದ ಮುಸುಕಿತ್ತು. ಬಾಣವು ಮೈಯಲ್ಲಿ ನಾಟಿ ನೆಲದ ಮೇಲೆ ಉರುಳಿದ್ದನು. ನಾನು ದಿಗಿಲುಪಡುತ್ತ ವಿಷಣ್ಣನಾಗಿರುವುದನ್ನು ಅವನು ನೋಡಿದನು (೩೭). ತನ್ನ ತಪೋಮಹಿಮೆಯಿಂದ ನನ್ನನ್ನು ಸುಟ್ಟುಬಿಡುವನೋ ಎಂಬಂತೆ ಕಣ್ಣುಗಳಿಂದ ದುರದುರನೆ ನೋಡುತ್ತ ಕ್ರೂರವಾದ ಮಾತನ್ನಾಡಿದನು : 'ಎಲೈ ರಾಜ, ವನದಲ್ಲಿ ವಾಸಮಾಡಿಕೊಂಡಿರುವ ನಾನು ನಿನಗೆ ಯಾವ ಅಪಕಾರವನ್ನು ಮಾಡಿದೆನು? ನನ್ನ ತಂದೆತಾಯಿಗಳಿಗೋಸ್ಕರ ನೀರನ್ನು ತೆಗೆದುಕೊಂಡು ಹೋಗಲು ಬಂದ ನನ್ನನ್ನು ಹೊಡೆದುಬಿಟ್ಟೆಯಲ್ಲ! ಒಂದು ಬಾಣದಿಂದ ನನ್ನ ಮರ್ಮಸ್ಥಳದಲ್ಲಿ ಹೊಡೆದದ್ದು ಮಾತ್ರವೇ ಅಲ್ಲ (೩೮-೩೯); ಕುರುಡರೂ ವೃದ್ಧರೂ ಆದ ನನ್ನ ತಾಯಿತಂದೆಗಳಿಬ್ಬರನ್ನೂ ಸಹ ನೀನು ಕೊಂದಂತಾಯಿತು. ಅವರು ದೇಹದಲ್ಲಿ ಬಲವಿಲ್ಲದವರು; ಕಣ್ಣುಕಾಣದವರು. ಬಾಯಾರಿಕೆಯಿಂದ ನೀರಿಗಾಗಿ ನನಗೋಸ್ಕರ

ಚಿರಮಾಶಾಕೃತಾಂ ತೃಷ್ಣಾಂ ಕಷ್ಟಾಂ ಸಂಧಾರಯಿಷ್ಯತಃ ।
ನ ನೂನಂ ತಪಸೋ ವಾಸ್ತಿ ಫಲಯೋಗಃ ಶ್ರುತಸ್ಯ ವಾ ॥ ೪೧

ಪಿತಾ ಯನ್ಮಾಂ ನ ಜಾನಾತಿ ಶಯಾನಂ ಪತಿತಂ ಭುವಿ ।
ಜಾನನ್ನಪಿ ಚ ಕಿಂ ಕುರ್ಯಾದಶಕ್ತಿರಪರಿಕ್ರಮಃ ॥ ೪೨

ಭಿದ್ಯಮಾನಮಿವಾಶಕ್ತಸ್ತ್ರಾತುಮನ್ಯೋ ನಗೋ ನಗಮ್ ।
ಪಿತುಸ್ತ್ವಮೇವ ಮೇ ಗತ್ವಾ ಶೀಘ್ರಮಾಚಕ್ಷ್ವ ರಾಘವ ॥ ೪೩

ನ ತ್ವಾಮನುದಹೇತ್ಕ್ರುದ್ಧೋ ವನಂ ವಹ್ನಿರಿವೈಧಿತಃ ।
ಇಯಮೇಕಪದೀ ರಾಜನ್ ಯತೋ ಮೇ ಪಿತುರಾಶ್ರಮಃ ॥ ೪೪

ತಂ ಪ್ರಸಾದಯ ಗತ್ವಾ ತ್ವಂ ನ ತ್ವಾಂ ಸ ಕುಪಿತಃ ಶಪೇತ್ ।
ವಿಶಲ್ಯಂ ಕುರು ಮಾಂ ರಾಜನ್ ಮರ್ಮ ಮೇ ನಿಶಿತಃ ಶರಃ ॥ ೪೫

ಕಾಯುತ್ತಿದ್ದಾರೆ (೪೦). ಮಗನು ನೀರು ತರುವನೆಂದು ಬಹಳ ಹೊತ್ತಿನಿಂದ ದುಃಸಹವಾದ ಬಾಯಾರಿಕೆಯನ್ನು ತಡೆದುಕೊಂಡಿದ್ದಾರೆ. ಎಷ್ಟು ತಪಸ್ಸು ಮಾಡಿದರೇನು? ಎಷ್ಟು ವಿದ್ಯೆಯನ್ನು ಕಲಿತರೇನು? ಎಲ್ಲವೂ ವ್ಯರ್ಥವೆಂದು ತೋರುತ್ತದೆ. ನಾನು ಇಲ್ಲಿ ನೆಲದ ಮೇಲೆ ಮರಣಾವಸ್ಥೆಯಲ್ಲಿ ಬಿದ್ದಿದ್ದೇನೆ. ನನ್ನ ಈ ವೃತ್ತಾಂತವು ತಂದೆಗೆ ತಿಳಿಯದಲ್ಲ! ತಿಳಿದರೂ ಅವನು ಏನು ಮಾಡಿಯಾನು? ದೇಹದಲ್ಲಿ ಅವನಿಗೆ ಶಕ್ತಿಯಿಲ್ಲ; ನಡೆಯಲಾರ (೪೧-೪೨). ಮರವನ್ನು ಕಡಿದುಹಾಕುವಾಗ ಪಕ್ಕದಲ್ಲಿರುವ ಇನ್ನೊಂದು ಮರವು ಅದನ್ನು ಉಳಿಸಬಲ್ಲುದೆ? ಈಗ ನೀನೇ ಶೀಘ್ರದಲ್ಲಿ ಹೋಗಿ ನನ್ನ ತಂದೆಗೆ ಈ ವಿಷಯವನ್ನು ತಿಳಿಸು. ಇಲ್ಲದಿದ್ದರೆ ಅವನು ಕಾಳ್ಗಿಚ್ಚಿನಂತೆ ಭುಗಿಲೆದ್ದು ವನವನ್ನು ಸುಡುವಂತೆ ನಿನ್ನನ್ನು ದಹಿಸಿಬಿಟ್ಟಾನು ರಾಜ, ಕಾಲುದಾರಿಯಲ್ಲಿ ಹೋದರೆ ನನ್ನ ತಂದೆಯ ಆಶ್ರಮವು ಸಿಗುವುದು (೪೩-೪೪). ನೀನು ಹೋಗಿ ಆತನ ಕ್ಷಮೆಯನ್ನು ಬೇಡಿಕೊ. ಕೋಪಗೊಂಡು ಶಪಿಸದಂತೆ ಕೇಳಿಕೊ. ರಾಜ, ನನ್ನ ದೇಹದಲ್ಲಿ ನಾಟಿರುವ ಈ ಬಾಣವನ್ನು ಮೊದಲು ಕಿತ್ತುಬಿಡು. ವೇಗದಿಂದ ಹರಿಯುವ ನೀರು ಉನ್ನತವಾದ ಮರಳಿನ ತೀರವನ್ನು ಭೇದಿಸಿ ನುಗ್ಗುವಂತೆ, ಹರಿತವಾದ

ರುಣದ್ಧಿ ಮೃದು ಸೋತ್ಸೇಧಂ ತೀರಮಂಬುರಯೋ ಯಥಾ ।
ಸಶಲ್ಯಃ ಕ್ಲಿಶ್ಯತೇ ಪ್ರಾಣೈರ್ವಿಶಲ್ಯೋ ವಿನಶಿಷ್ಯತಿ ॥ ೪೬

ಇತಿ ಮಾಮವಿಶಚ್ಚಿಂತಾ ತಸ್ಯ ಶಲ್ಯಾಪಕರ್ಷಣೇ ।
ದುಃಖಿತಸ್ಯ ಚ ದೀನಸ್ಯ ಮಮ ಶೋಕಾತುರಸ್ಯ ಚ ॥ ೪೭

ಲಕ್ಷಯಾಮಾಸ ಹೃದಯೇ ಚಿಂತಾಂ ಮುನಿಸುತಸ್ತದಾ ।
ತಾಮ್ಯಮಾನಂ ಸ ಮಾಂ ಕೃಚ್ಛ್ರಾದುವಾಚ ಪರಮಾರ್ತವತ್ ॥ ೪೮

ಸೀದಮಾನೋ ವಿವೃತ್ತಾಂಗೋ ವೇಷ್ಟಮಾನೋ ಗತಃ ಕ್ಷಯಮ್ ।
ಸಂಸ್ತಭ್ಯ ಶೋಕಂ ಧೈರ್ಯೇಣ ಸ್ಥಿರಚಿತ್ತೋ ಭವಾಮ್ಯಹಮ್ ॥ ೪೯

ಬ್ರಹ್ಮಹತ್ಯಾಕೃತಂ ಪಾಪಂ ಹೃದಯಾದಪನೀಯತಾಮ್ ।
ನ ದ್ವಿಜಾತಿರಹಂ ರಾಜನ್ ಮಾ ಭೂತ್ತೇ ಮನಸೋ ವ್ಯಥಾ ॥ ೫೦

ಶೂದ್ರಾಯಾಮಸ್ಮಿ ವೈಶ್ಯೇನ ಜಾತೋ ಜನಪದಾಧಿಪ ।
ಇತ್ಯೇವಂ ವದತಃ ಕೃಚ್ಛ್ರಾದ್ಬಾಣಾಭಿಹತಮರ್ಮಣಃ ॥ ೫೧

ಈ ಬಾಣವು ಮೃದುವಾದ ನನ್ನ ದೇಹದಲ್ಲಿ ನುಗ್ಗಿ ಮರ್ಮ ಭೇದಕವಾಗಿದೆ' ಎಂದು ಹೇಳಿದನು (೪೫-೪೬). 'ಬಾಣವನ್ನು ಕೀಳಲೆ? ಬೇಡವೆ? ಎಂದು ನನಗೆ ಚಿಂತೆಯಾಯಿತು. ಬಾಣವು ದೇಹದಲ್ಲಿದ್ದರೆ ನೋವಿನಿಂದ ಸಂಕಟಪಡುವನು. ಬಾಣವನ್ನು ಕಿತ್ತರೆ ಅವನು ಪ್ರಾಣವನ್ನೇ ಬಿಡುವನು' ಹೀಗೆ ನಾನು ದುಃಖಿತನಾಗಿ ಚಿಂತಿಸುತ್ತ ದೈನ್ಯದಿಂದ ನಿಂತಿದ್ದೆನು (೪೭). ಆ ಮುನಿಕುಮಾರನು ನನ್ನ ಮನಸ್ಸಿನಲ್ಲಿದ್ದ ಚಿಂತೆಯೇನೆಂಬುದನ್ನು ಗಮನಿಸಿದನು. ನಾನು ದಿಕ್ಕುಗಾಣದೆ ತತ್ತರಿಸುತ್ತಿದ್ದೆನು. ಅವನು ನರಳುತ್ತ ಹೊರಳುತ್ತ ಉತ್ಕ್ರಮಣಾವಸ್ಥೆಯಲ್ಲಿದ್ದನು. ಆತನು ನನ್ನನ್ನು ಕುರಿತು ಬಹುಪ್ರಯಾಸದಿಂದ 'ರಾಜ, ನಾನು ಸಾಯುವೆನೆಂದು ಶೋಕಿಸುವುದಿಲ್ಲ, ಧೈರ್ಯದಿಂದ ಮನಸ್ಸನ್ನು ಗಟ್ಟಿಮಾಡಿಕೊಂಡಿದ್ದೇನೆ (೪೮-೪೯). ಬ್ರಹ್ಮಹತ್ಯಾದೋಷವು ಬರುವುದೆಂದು ಮನಸ್ಸಿನಲ್ಲೆಣಿಸದಿರು. ನಾನು ಬ್ರಾಹ್ಮಣನಲ್ಲ, ಹೆದರಬೇಡ. ನಾನು ಶೂದ್ರಸ್ತ್ರೀಯಲ್ಲಿ ವೈಶ್ಯನಿಂದ ಹುಟ್ಟಿರುವೆನು' ಎಂದು ಹೇಳಿದನು (೫೦-೫೧). ಹೀಗೆ ಕಷ್ಟದಿಂದ ನುಡಿದು ನೆಲದಮೇಲೆ ಒಮ್ಮೆ ಹೊರಳುತ್ತ ಒಮ್ಮೆ

ವಿಘೂರ್ಣತೋ ವಿಚೇಷ್ಟಸ್ಯ ವೇಪಮಾನಸ್ಯ ಭೂತಲೇ ।
ತಸ್ಯ ತ್ವಾತಮ್ಯಮಾನಸ್ಯ ತಂ ಬಾಣಮಹಮುದ್ಧರಮ್ ॥ ೫೨

ಸ ಮಾಮುದ್ವೀಕ್ಷ್ಯ ಸಂತ್ರಸ್ತೋ ಜಹೌ ಪ್ರಾಣಾಂಸ್ತಪೋಧನಃ ॥
ಜಲಾರ್ದ್ರಗಾತ್ರಂ ತು ವಿಲಪ್ಯ ಕೃಚ್ಛ್ರಾತ್
ಮರ್ಮವ್ರಣಂ ಸಂತತಮುಚ್ಛ್ವಸಂತಮ್ ।
ತತಃ ಸರಯ್ವಾಂ ತಮಹಂ ಶಯಾನಂ
ಸಮೀಕ್ಷ್ಯ ಭದ್ರೇಽಸ್ಮಿ ಭೃಶಂ ವಿಷಣ್ಣಃ ॥ ೫೩

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತ್ರಿಷಷ್ಟಿತಮಃ ಸರ್ಗಃ

❋❋❋

ನಿಶ್ಚೇಷ್ಟನಾಗಿರುತ್ತ, ಒಮ್ಮೆ ಕೈಕಾಲು ಬಡಿಯುತ್ತ ಅತ್ಯಂತ ಯಾತನೆಯಿಂದ ಕುಸಿದುಹೋಗುತ್ತಿದ್ದ ಅವನ ದೇಹದಿಂದ ನಾನು ಬಾಣವನ್ನು ಕಿತ್ತು ಬಿಟ್ಟೆನು. ಆ ಮುನಿಪುತ್ರನು ಭಯದಿಂದ ಒಂದುಸಲ ನನ್ನನ್ನು ನೋಡಿ ಹಾಗೆಯೇ ಪ್ರಾಣವನ್ನು ಬಿಟ್ಟನು (೫೨). ಹೀಗೆ ವಿಲಪಿಸಿ, ದೇಹವೆಲ್ಲ ಒದ್ದೆಯಾಗಿ, ಗಾಯಗೊಂಡು, ಕಷ್ಟದಿಂದ ಒಂದೇಸಮನೆ ಮೇಲುಸಿರು ಬಿಡುತ್ತ, ಸರಯೂತೀರದಲ್ಲಿ ಪ್ರಾಣವನ್ನು ಬಿಟ್ಟ ಆ ಮುನಿಕುಮಾರನನ್ನು ನೋಡಿ, ಕೌಸಲ್ಯೆ, ನನಗೆ ತಡೆಯಲಾರದಷ್ಟು ದುಃಖ ಬಂದಿತು'' ಎಂದನು (೫೩).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಅರುವತ್ತುಮೂರನೆಯ ಸರ್ಗ

❋❋❋

ಚತುಃಷಷ್ಟಿತಮಃ ಸರ್ಗಃ

ದಶರಥದಿಷ್ಟಾಂತಃ

ವಧಮಪ್ರತಿರೂಪಂ ತು ಮಹರ್ಷೇಸ್ತಸ್ಯ ರಾಘವಃ
ವಿಲಪನ್ನೇವ ಧರ್ಮಾತ್ಮಾ ಕೌಸಲ್ಯಾಂ ಪುನರಬ್ರವೀತ್ ॥ ೧

ತದಜ್ಞಾನಾನ್ಮಹತ್ ಪಾಪಂ ಕೃತ್ವಾ ಸಂಕುಲಿತೇಂದ್ರಿಯಃ ।
ಏಕಸ್ತ್ವಚಿಂತಯಂ ಬುದ್ಧ್ಯಾ ಕಥಂ ನು ಸುಕೃತಂ ಭವೇತ್ ॥ ೨

ತತಸ್ತಂ ಘಟಮಾದಾಯ ಪೂರ್ಣಂ ಪರಮವಾರಿಣಾ ।
ಆಶ್ರಮಂ ತಮಹಂ ಪ್ರಾಪ್ಯ ಯಥಾಖ್ಯಾತಪಥಂ ಗತಃ ॥ ೩

ತತ್ರಾಹಂ ದುರ್ಬಲಾವಂಧೌ ವೃದ್ಧಾವಪರಿಣಾಯಕೌ ।
ಅಪಶ್ಯಂ ತಸ್ಯ ಪಿತರೌ ಲೂನಪಕ್ಷಾವಿವ ದ್ವಿಜೌ ॥ ೪

ತನ್ನಿಮಿತ್ತಾಭಿರಾಸೀನೌ ಕಥಾಭಿರಪರಿಕ್ರಮೌ ।
ತಾಮಾಶಾಂ ಮತ್ಕೃತೇ ಹೀನಾವುದಾಸೀನಾವನಾಥವತ್ ॥ ೫

ಸರ್ಗ ೬೪

ವೈಶ್ಯಮುನಿಯಿಂದ ದಶರಥನಿಗೆ ಬಂದ ಶಾಪವೃತ್ತಾಂತ.

ದಶರಥನ ಮರಣ

ಹೀಗೆ ಧರ್ಮಾತ್ಮನಾದ ದಶರಥನು ಆ ಋಷಿಕುಮಾರನಿಗೆ ಸಂಭವಿಸಿದ ಅನುಚಿತವಾದ ಸಾವನ್ನು ನೆನೆಸಿಕೊಂಡು ಅಳುತ್ತಲೇ ಕೌಸಲ್ಯೆಯನ್ನು ಕುರಿತು ಮತ್ತೆ ಹೇಳಿದನು (೧): "ಕೌಸಲ್ಯೆ, ಅಜ್ಞಾನದಿಂದ ಮಹತ್ತರವಾದ ಒಂದು ಪಾಪಕೃತ್ಯವನ್ನು ಮಾಡಿದೆನು. ನನ್ನ ಮನಸ್ಸು ತಳಮಳಗೊಂಡಿತು. ಏಕಾಕಿಯಾಗಿದ್ದ ನಾನು ಹೇಗೆ ಮಾಡುವುದು ಒಳ್ಳೆಯದೆಂದು ಯೋಚಿಸಿದೆನು. ಕೊನೆಗೆ ಆ ಕಲಶದಲ್ಲಿ ನೀರನ್ನು ತುಂಬಿಕೊಂಡು ಋಷಿಕುಮಾರನು ಹೇಳಿದ್ದ ಕಾಲುದಾರಿಯನ್ನು ಹಿಡಿದು ಅವನ ಆಶ್ರಮಕ್ಕೆ ಹೋದೆನು (೨-೩). ಅಲ್ಲಿ ನಾನು ಕೈಲಾಗದ ಮುದುಕರೂ ಕುರುಡರೂ ಆದ ಆ ತಾಯಿತಂದೆಗಳನ್ನು ಕಂಡೆನು. ಅಸಹಾಯಕರಾಗಿದ್ದ ಅವರು ರೆಕ್ಕೆಗಳನ್ನು ಕತ್ತರಿಸಿದ ಹಕ್ಕಿಗಳಂತೆ ಕುಳಿತಿದ್ದರು. ಆ ದಂಪತಿಗಳು ನಿಶ್ಶೇಷರಾಗಿ ಮಗನ ವಿಷಯವಾಗಿ

ಶೋಕೋಪಹತಚಿತ್ತಶ್ಚ ಭಯಸಂತ್ರಸ್ತಚೇತನಃ।
ತಚ್ಚಾಶ್ರಮುಪದಂ ಗತ್ವಾ ಭೂಯಃ ಶೋಕಮಹಂ ಗತಃ॥ ೬

ಪದಶಬ್ದಂ ತು ಮೇ ಶ್ರುತ್ವಾ ಮುನಿರ್ವಾಕ್ಯಮಭಾಷತ।
ಕಿಂ ಚಿರಾಯಸಿ ಮೇ ಪುತ್ರ ಪಾನೀಯಂ ಕ್ಷಿಪ್ರಮಾನಯ॥ ೭

ಯನ್ನಿಮಿತ್ತ ಮಿದಂ ತಾತ ಸಲಿಲೇ ಕ್ರೀಡಿತಂ ತ್ವಯಾ।
ಉತ್ಕಂಠಿತಾ ತೇ ಮಾತೇಯಂ ಪ್ರವಿಶ ಕ್ಷಿಪ್ರಮಾಶ್ರಮಮ್॥ ೮

ಯದ್ವ್ಯಲೀಕಂ ಕೃತಂ ಪುತ್ರ ಮಾತ್ರಾ ತೇ ಯದಿ ವಾ ಮಯಾ।
ನ ತನ್ಮನಸಿ ಕರ್ತವ್ಯಂ ತ್ವಯಾ ತಾತ ತಪಸ್ವಿನಾ॥ ೯

ಗತಿಸ್ತ್ವಮಗತೀನಾಂ ಚ ಚಕ್ಷುಸ್ತ್ವಂ ಹೀನಚಕ್ಷುಷಾಮ್।
ಸಮಾಸಕ್ತಾಸ್ತ್ವಯಿ ಪ್ರಾಣಾಃ ಕಿಂ ತ್ವಂ ನೋ ನಾಭಿಭಾಷಸೇ॥ ೧೦

ಮುನಿಮವ್ಯಕ್ತಯಾ ವಾಚಾ ತಮಹಂ ಸಜ್ಜಮಾನಯಾ।
ಹೀನವ್ಯಂಜನಯಾ ಪ್ರೇಕ್ಷ್ಯ ಭೀತಭೀತ ಇವಾಬ್ರವಮ್॥ ೧೧

ಮಾತನಾಡುತ್ತಲಿದ್ದರು. ಅವನು ಬರುವನೆಂಬ ಆಸೆ ನನ್ನಿಂದ ಇಲ್ಲವಾಗಿತ್ತು. (ನೀರಿನ ಆಸೆಯನ್ನು ತ್ಯಜಿಸಿ) ಉದಾಸೀನರಾಗಿ ಅನಾಥರಂತಿದ್ದರು (೪-೫). ನನ್ನ ಮನಸ್ಸನ್ನು ಶೋಕವು ಆವರಿಸಿತ್ತು. ಭಯದಿಂದ ಚೈತನ್ಯವು ಉಡುಗಿತ್ತು. ಆಶ್ರಮಕ್ಕೆ ಹೋದಮೇಲೆ ನನ್ನ ಸಂಕಟ ಉಲ್ಬಣಿಸಿತು. ಆ ಮುನಿಯು ನನ್ನ ಹೆಜ್ಜೆಯ ಶಬ್ದವನ್ನು ಕೇಳಿ ಮಗು, ಏಕೆ ತಡವಾಯಿತು? ಬೇಗನೆ ನೀರನ್ನು ಕೊಡು (೬-೭). ಇಷ್ಟು ಹೊತ್ತು ನೀರಿನಲ್ಲಿ ಆಟವಾಡುತ್ತಿದ್ದೆಯೆಂದು ಕಾಣುತ್ತದೆ. ಮಗು, ನಿನ್ನ ತಾಯಿ ನಿನಗೋಸ್ಕರ ಹಾತೊರೆಯುತ್ತಿದ್ದಾಳೆ. ಬೇಗನೆ ಆಶ್ರಮದೊಳಗೆ ಬಾ. ಮಗನೆ, ನಾನಾಗಲಿ ನಿನ್ನ ತಾಯಿಯಾಗಲಿ ನಿನಗೆ ಏನಾದರೂ ಬೇಸರವಾಗುವಂತೆ ಮಾಡಿದ್ದರೆ, ಅದನ್ನು ಮನಸ್ಸಿನಲ್ಲಿಡಬೇಡ. ನೀನು ತಪಸ್ವಿ (೮-೯). ನಿರ್ಗತಿಕರಾದ ನಮಗೆ ನೀನೇ ಗತಿ. ಕಣ್ಣಿಲ್ಲದ ನಮಗೆ ನೀನೇ ಕಣ್ಣು. ನಮ್ಮಿಬ್ಬರ ಪ್ರಾಣವೂ ನಿನ್ನ ಕೈಯಲ್ಲಿದೆ. ನಮ್ಮೊಡನೆ ನೀನು ಮಾತನ್ನೇ ಆಡುವುದಿಲ್ಲವೇಕೆ? ಎಂದು ನುಡಿದನು (೧೦). ನಾನು ಆ ಮುನಿಯನ್ನು ನೋಡಿ ಹೆದರುತ್ತ ತಡವರಿಸುತ್ತ ಅಕ್ಷರಗಳನ್ನು ನುಂಗುತ್ತ ಅಸ್ಫುಟವಾಗಿ

ಮನಸಃ ಕರ್ಮ ಚೇಷ್ಟಾಭಿರಭಿಸಂಸ್ತಭ್ಯ ವಾಗ್ಬಲಮ್ ।
ಆಚಚಕ್ಷೇ ತ್ವಹಂ ತಸ್ಮೈ ಪುತ್ರ ವ್ಯಸನಜಂ ಭಯಮ್ ॥ ೧೨

ಕ್ಷತ್ರಿಯೋಽಹಂ ದಶರಥೋ ನಾಹಂ ಪುತ್ರೋ ಮಹಾತ್ಮನಃ ।
ಸಜ್ಜನಾವಮತಂ ದುಃಖಮಿದಂ ಪ್ರಾಪ್ತಂ ಸ್ವಕರ್ಮಜಮ್ ॥ ೧೩

ಭಗವಂಶ್ಚಾಪಹಸ್ತೋಽಹಂ ಸರಯೂತೀರಮಾಗತಃ ।
ಜಿಘಾಂಸುಃ ಶ್ವಾಪದಂ ಕಂಚಿನ್ನಿಪಾನೇ ಚಾಗತಂ ಗಜಮ್ ॥ ೧೪

ತತ್ರ ಶ್ರುತೋ ಮಯಾ ಶಬ್ದೋ ಜಲೇ ಕುಂಭಸ್ಯ ಪೂರ್ಯತಃ ।
ದ್ವಿಪೋಽಯಮಿತಿ ಮತ್ವಾಯಂ ಬಾಣೇನಾಭಿಹತೋ ಮಯಾ ॥ ೧೫

ಗತ್ವಾ ನದ್ಯಾಸ್ತತಸ್ತೀರಮಪಶ್ಯಮಿಷುಣಾ ಹೃದಿ ।
ವಿನಿರ್ಭಿನ್ನಂ ಗತಪ್ರಾಣಂ ಶಯಾನಂ ಭುವಿ ತಾಪಸಮ್ ॥ ೧೬

ತತಸ್ತಸ್ಯೈವ ವಚನಾದುಪೇತ್ಯ ಪರಿತಪ್ಯತಃ ।
ಸ ಮಯಾ ಸಹಸಾ ಬಾಣ ಉದ್ಧೃತೋ ಮರ್ಮಣಸ್ತದಾ ॥ ೧೭

ಮಾತನಾಡಿದೆನು. ಮನಸ್ಸನ್ನು ಬಿಗಿಹಿಡಿದು ಶ್ರಮದಿಂದ ಅಕ್ಷರವನ್ನು ಉಚ್ಚರಿಸಿ ಪುತ್ರವಿಯೋಗದ ಭಯಂಕರ ವಾರ್ತೆಯನ್ನು ತಿಳಿಸಿದೆನು (೧೧-೧೨); "ಮಹಾತ್ಮರೆ, ನಾನು ಕ್ಷತ್ರಿಯ; ದಶರಥನೆಂದು ನನ್ನ ಹೆಸರು. ನಾನು ತಮ್ಮ ಪುತ್ರನಲ್ಲ, ಸಜ್ಜನಗರ್ಹಿತವಾದ ಒಂದು ಹೇಯಕೃತ್ಯವನ್ನು ನಾನೇ ಮಾಡಿ ದುಃಖಕ್ಕೆ ಸಿಕ್ಕಿದೆ. ಭಗವನ್, ನಾನು ಧನುರ್ಧಾರಿಯಾಗಿ ಸರಯೂತೀರಕ್ಕೆ ಬಂದಿದ್ದೆನು. ನೀರು ಕುಡಿಯುವುದಕ್ಕೆ ಅಲ್ಲಿ ಬರುವ ಆನೆಯನ್ನೋ ಇನ್ನು ಯಾವುದಾದರೂ ವನ್ಯಮೃಗವನ್ನೋ ಕೊಲ್ಲಬೇಕೆಂದಿದ್ದೆನು (೧೩-೧೪). ಆಗ ನೀರಿನಲ್ಲಿ ತುಂಬಿಕೊಳ್ಳುತ್ತಿದ್ದ ಒಂದು ಗಡಿಗೆಯ ಶಬ್ದ ಕೇಳಿಸಿತು. ಅದು ಆನೆಯದಾಗಿರಬೇಕೆಂದು ಭ್ರಮಿಸಿ ನಾನು ಬಾಣದಿಂದ ಹೊಡೆದೆನು. ಆಮೇಲೆ ನದಿಯ ತೀರಕ್ಕೆ ಹೋಗಲು, ಅಲ್ಲಿ ಒಬ್ಬ ತಾಪಸನು ಎದೆಯಲ್ಲಿ ಬಾಣವು ನಾಟಿ ಪ್ರಾಣಹೋಗುವ ಸ್ಥಿತಿಯಲ್ಲಿ ನೆಲದ ಮೇಲೆ ಮಲಗಿರುವುದನ್ನು ಕಂಡೆನು (೧೫-೧೬). ಆಮೇಲೆ ಸಂಕಟಪಡುತ್ತಿದ್ದ ಅವನ ಮಾತಿನಂತೆ, ನಾನು ಸಮೀಪಕ್ಕೆ ಹೋಗಿ ಆ ಬಾಣವನ್ನು ಮರ್ಮಸ್ಥಳದಿಂದ ಕಿತ್ತೆನು. ನಾನು ಬಾಣವನ್ನು ಕಿತ್ತೊಡನೆ ಅವನು ಸ್ವರ್ಗಸ್ಥನಾದನು. ಆ ಸಮಯದಲ್ಲಿಯೂ

ಸ ಚೋದ್ಧೃತೇನ ಬಾಣೇನ ಸಹಸಾ ಸ್ವರ್ಗಮಾಸ್ಥಿತಃ ।
ಭವಂತೌ ಪಿತರೌ ಶೋಚನ್ನಂಧಾಮಿತಿ ವಿಲಪ್ಯ ಚ ॥ ೧೮

ಅಜ್ಞಾನಾದ್ಭವತಃ ಪುತ್ರಃ ಸಹಸಾಭಿಹತೋ ಮಯಾ ।
ಶೇಷಮೇವಂ ಗತೇ ಯತ್ ಸ್ಯಾತ್ತತ್ ಪ್ರಸೀದತು ಮೇ ಮುನಿಃ ॥ ೧೯

ಸ ತಚ್ಛ್ರುತ್ವಾ ವಚಃ ಕ್ರೂರಂ ಮಯೋಕ್ತ ಮಘಶಂಸಿನಾ ।
ನಾಶಕತ್ತೀವ್ರಮಾಯಾಸಮಕರ್ತುಂ ಭಗವಾನ್ ಮುನಿಃ ॥ ೨೦

ಸ ಬಾಷ್ಪಪೂರ್ಣನಯನೋ ನಿಃಶ್ವಸನ್ ಶೋಕಕರ್ಶಿತಃ ।
ಮಾಮುವಾಚ ಮಹಾತೇಜಾಃ ಕೃತಾಂಜಲಿಮುಪಸ್ಥಿತಮ್ ॥ ೨೧

ಯದ್ಯೇತದಶುಭಂ ಕರ್ಮ ನ ತ್ವಂ ಮೇ ಕಥಯೇಃ ಸ್ವಯಮ್ ।
ಫಲೇನ್ಮೂರ್ಧಾ ಸ್ಮ ತೇ ರಾಜನ್ ಸದ್ಯಃ ಶತಸಹಸ್ರಧಾ ॥ ೨೨

ಕ್ಷತ್ರಿಯೇಣ ವಧೋ ರಾಜನ್ ವಾನಪ್ರಸ್ಥೇ ವಿಶೇಷತಃ ।
ಜ್ಞಾನಪೂರ್ವಂ ಕೃತಃ ಸ್ಥಾನಾಚ್ಚ್ಯಾವಯೇದಪಿ ವಜ್ರಿಣಮ್ ॥ ೨೩

ತಂದೆತಾಯಿಗಳಾದ ನಿಮ್ಮಿಬ್ಬರ ಗತಿಯೇನೆಂದು ಚಿಂತಿಸುತ್ತ ನೀವು ಅಂಧರೆಂದು ಗೋಳಿಡುತ್ತ ಪ್ರಾಣವನ್ನು ಬಿಟ್ಟನು (೧೬-೧೮). ಮುನಿಗಳೆ, ನಿಮ್ಮ ಪುತ್ರನನ್ನು ಅಜ್ಞಾನದಿಂದ ದುಡುಕಿ ನಾನು ಕೊಂದೆನು. ಹೀಗೆ ಪ್ರಮಾದವು ನಡೆದುಹೋಯಿತು. ಈಗ ನಿಮ್ಮ ಚಿತ್ತಕ್ಕೆ ಬಂದಂತೆ ನನಗೆ ಆಜ್ಞಾಪಿಸಬೇಕು'' ಎಂದು ಹೇಳಿದನು (೧೯). ಹೀಗೆ ನಾನು ದುಃಖವಾರ್ತೆಯನ್ನು ತಿಳಿಸಲು ಆ ಮಹರ್ಷಿಯು ತೀವ್ರವಾದ ಸಂಕಟವನ್ನು ತಡೆದುಕೊಳ್ಳಲಾರದೆ ಹೋದನು. ಅವನ ಕಣ್ಣುಗಳಲ್ಲಿ ಕಂಬನಿ ಉಕ್ಕಿತು. ದುಃಖದಿಂದ ನಿಡಿದಾಗಿ ಉಸಿರುಬಿಟ್ಟನು. ನಾನು ಕೈಮುಗಿದುಕೊಂಡು ನಿಂತಿದ್ದೆ. ಆ ತೇಜೋರಾಶಿಯು ನನ್ನನ್ನು ಉದ್ದೇಶಿಸಿ ಹೇಳಿದನು (೨೦-೨೧) : ''ರಾಜ, ಈ ದುಷ್ಕೃತ್ಯವನ್ನು ನೀನೇ ಬಂದು ನನಗೆ ಹೇಳದಿದ್ದರೆ, ನಿನ್ನ ತಲೆಯು ಲಕ್ಷ ಚೂರುಗಳಾಗಿ ಸೀಳಿಹೋಗುತ್ತಿತ್ತು! ಕ್ಷತ್ರಿಯನೂ ತಿಳಿದೂ ತಿಳಿದು ಒಬ್ಬ ಮುನಿಯನ್ನು ಕೊಂದನಾದರೆ, ಅವನು ದೇವೇಂದ್ರನಾದರೂ ಕೆಳಗೆ ಉರುಳುವನು (೨೨-೨೩). ಅಂಥ

ಸಪ್ತಧಾ ತು ಫಲೇನ್ಮೂರ್ಧಾ ಮುನೌ ತಪಸಿ ತಿಷ್ಠತಿ ।
ಜ್ಞಾನಾದ್ವಿಸೃಜತಃ ಶಸ್ತ್ರಂ ತಾದೃಶೇ ಬ್ರಹ್ಮವಾದಿನಿ ॥ ೨೪

ಅಜ್ಞಾನಾದ್ಧಿ ಕೃತಂ ಯಸ್ಮಾದಿದಂ ತೇನೈವ ಜೀವಸಿ ।
ಅಪಿ ಹ್ಯದ್ಯ ಕುಲಂ ನ ಸ್ಯಾದಿಕ್ಷ್ವಾಕೂಣಾಂ ಕುತೋ ಭವಾನ್ ॥ ೨೫

ನಯ ನೌ ನೃಪ ತಂ ದೇಶಮಿತಿ ಮಾಂ ಚಾಭ್ಯಭಾಷತ ।
ಅದ್ಯ ತಂ ದ್ರಷ್ಟುಮಿಚ್ಛಾವಃ ಪುತ್ರಂ ಪಶ್ಚಿಮದರ್ಶನಮ್ ॥ ೨೬

ರುಧಿರೇಣಾನುಲಿಪ್ತಾಂಗಂ ಪ್ರಕೀರ್ಣಾಜಿನವಾಸಸಮ್ ।
ಶಯಾನಂ ಭುವಿ ನಿಸ್ಸಂಜ್ಞಂ ಧರ್ಮರಾಜವಶಂ ಗತಮ್ ॥ ೨೭

ಅಥಾಹಮೇಕಸ್ತಂ ದೇಶಂ ನೀತ್ವಾ ತೌ ಭೃಶದುಃಖಿತೌ ।
ಅಸ್ಪರ್ಶಯಮಹಂ ಪುತ್ರಂ ತಂ ಮುನಿಂ ಸಹ ಭಾರ್ಯಯಾ ॥ ೨೮

ತೌ ಪುತ್ರಮಾತ್ಮನಃ ಸ್ಪೃಷ್ಟ್ವಾ ತಮಾಸಾದ್ಯ ತಪಸ್ವಿನೌ ।
ನಿಪೇತತುಃ ಶರೀರೇಽಸ್ಯ ಪಿತಾ ಚಾಸ್ಯೇದಮಬ್ರವೀತ್ ॥ ೨೯

ಬ್ರಹ್ಮವಾದಿಯಾದ ತಪಸ್ವಿಯ ಮೇಲೆ ಬುದ್ಧಿಪೂರ್ವಕವಾಗಿ ಬಾಣವನ್ನು ಪ್ರಯೋಗಿಸಿದ್ದರೆ, ಅಲ್ಲಿಯೇ ನಿನ್ನ ಶಿರಸ್ಸು ಏಳು ಭಾಗವಾಗಿ ಒಡೆದುಹೋಗುತ್ತಿತ್ತು! ಗೊತ್ತಿಲ್ಲದೆ ಅಜ್ಞಾನದಿಂದ ಈ ಕೃತ್ಯವನ್ನು ಮಾಡಿದೆಯಾದ್ದರಿಂದ ಇನ್ನೂ ಬದುಕಿದ್ದೀಯೆ! ನಿನ್ನ ಇಕ್ಷ್ವಾಕುವಂಶವೇ ಅಳಿಸಿಹೋಗುತ್ತಿತ್ತು! ನೀನೆಲ್ಲಿ ಉಳಿಯುತ್ತಿದ್ದೆ? (೨೪-೨೫). ಎಲೈ ನೃಪಾಲ, ನಮ್ಮಿರ್ವರನ್ನೂ ಆ ಸ್ಥಳಕ್ಕೆ ಕರೆದುಕೊಂಡುಹೋಗು. ನಮ್ಮ ಪುತ್ರನನ್ನು ಕೊನೆಯಸಾರಿ ನೋಡಬೇಕೆಂದು ಇಚ್ಛೆಯಾಗಿದೆ. ಅವನು ರಕ್ತದಿಂದ ತೊಯ್ದುಹೋಗಿರಬಹುದು. ಕೃಷ್ಣಾಜಿನವು ಕಿತ್ತುಬಿದ್ದಿರಬಹುದು. ಯಮಧರ್ಮರಾಜನಿಗೆ ವಶನಾಗಿ ಪ್ರಾಣವನ್ನು ಬಿಟ್ಟು ನೆಲದ ಮೇಲೆ ಮಲಗಿರುವ ಅವನನ್ನು ಕೊನೆಯಸಾರಿ ನೋಡಲು ನಮಗೆ ಇಚ್ಛೆಯಾಗಿದೆ' ಎಂದನು (೨೬-೨೭). ಆಗ ಪರಮದುಃಖಿತರಾದ ಆ ದಂಪತಿಗಳನ್ನು ನಾನು ಕರೆದುಕೊಂಡು ಹೋಗಿ ಅವರಿಬ್ಬರಿಂದಲೂ ಮುನಿಕುಮಾರನ ದೇಹವನ್ನು ಮುಟ್ಟಿಸಿದೆನು. ಆ ತಪಸ್ವಿಗಳು ತಮ್ಮ ಮಗನನ್ನು ಕೈಯಿಂದ ಸವರಿ, ಅವನ ಮೈಮೇಲೆ ಬಿದ್ದು ಗೋಳಾಡಿದರು. ಆ ತಂದೆಯು

ನಾಭಿವಾದಯಸೇ ಮಾದ್ಯ ನ ಚ ಮಾಮಭಿಭಾಷಸೇ ।
ಕಿಂ ನು ಶೇಷೇಽದ್ಯ ಭೂಮೌ ತ್ವಂ ವತ್ಸ ಕಿಂ ಕುಪಿತೋಽಹ್ಯಸಿ ॥ ೩೦

ನ ತ್ವಹಂ ತೇ ಪ್ರಿಯಃ ಪುತ್ರ ಮಾತರಂ ಪಶ್ಯ ಧಾರ್ಮಿಕ ।
ಕಿಂ ನು ನಾಲಿಂಗಸೇ ಪುತ್ರ ಸುಕುಮಾರಂ ವಚೋ ವದ ॥ ೩೧

ಕಸ್ಯ ವಾಪರರಾತ್ರೇಽಹಂ ಶ್ರೋಷ್ಯಾಮಿ ಹೃದಯಂಗಮಮ್ ।
ಅಧೀಯಾನಸ್ಯ ಮಧುರಂ ಶಾಸ್ತ್ರಂ ವಾನ್ಯದ್ವಿಶೇಷತಃ ॥ ೩೨

ಕೋ ಮಾಂ ಸಂಧ್ಯಾ ಮುಪಾಸ್ಯೈವ ಸ್ನಾತ್ವಾ ಹುತಹುತಾಶನಃ ।
ಶ್ಲಾಘಯಿಷ್ಯತ್ಯುಪಾಸೀನಃ ಪುತ್ರಶೋಕಭಯಾರ್ದಿತಮ್ ॥ ೩೩

ಕಂದಮೂಲಫಲಂ ಹೃತ್ವಾ ಕೋ ಮಾಂ ಪ್ರಿಯಮಿವಾತಿಥಿಮ್ ।
ಭೋಜಯಿಷ್ಯತ್ಯಕರ್ಮಣ್ಯಮಪ್ರಗ್ರಹಮನಾಯಕಮ್ ॥ ೩೪

ಮೃತಪುತ್ರನನ್ನುದ್ದೇಶಿಸಿ ಹಲುಬಿದನು (೨೮-೨೯) : ''ಅಯ್ಯೋ ಮಗನೆ! ನಾನು ಬಂದರೂ ನೀನು ಅಭಿವಾದನೆ ಮಾಡುವುದಿಲ್ಲವಲ್ಲ; ಮಾತನ್ನೂ ಆಡುವುದಿಲ್ಲ. ಏಕೆ ಹೀಗೆ ನೆಲದಮೇಲೆ ಮಲಗಿರುವೆ? ನಿನಗೆ ಕೋಪ ಬಂದಿದೆಯೆ? (೩೦). ನಿನಗೆ ನಾನು ಬೇಡವಾದವನಲ್ಲವಷ್ಟೆ? ನಿನ್ನತಾಯಿಯನ್ನಾದರೂ ನೋಡು. ನೀನು ಧರ್ಮನಿಷ್ಠನಾದವನು. ಮಗು, ನಮ್ಮನ್ನು ಏಕೆ ಆಲಿಂಗಿಸಿಕೊಳ್ಳುವುದಿಲ್ಲ? ನಿನ್ನ ಇಂಪಾದ ಮಾತನ್ನು ಒಂದು ಸಲವಾದರೂ ನುಡಿ (೩೧). ಬೆಳಗಿನ ಜಾವದಲ್ಲಿ ಶಾಸ್ತ್ರಪುರಾಣಾದಿಗಳನ್ನು ಹೃದಯಂಗಮವಾಗಿ ಓದಿ ಅಭ್ಯಾಸ ಮಾಡುತ್ತಿದ್ದೆಯಲ್ಲ! ಇಂಪಾದ ಆ ಶಬ್ದವನ್ನು ಇನ್ನು ಯಾರ ಬಾಯಿಂದ ಕೇಳಲಿ? (೩೨). ಸ್ನಾನ ಸಂಧ್ಯಾವಂದನೆಗಳನ್ನು ಮಾಡಿ ಅಗ್ನಿಕಾರ್ಯವನ್ನು ಮುಗಿಸಿ* ಸಮೀಪಕ್ಕೆ ಬಂದು ಇನ್ನುಮೇಲೆ ನನ್ನನ್ನು ಉಪಚರಿಸುವವರಾರು? ಪುತ್ರಶೋಕದಿಂದ ಕಂಗೆಟ್ಟುಹೋದೆನಲ್ಲ! (೩೩). ಪ್ರಿಯನಾದ ಅತಿಥಿಯನ್ನು ಕಂಡಂತೆ ನನ್ನನ್ನು ಆದರಿಸಿ, ಕಂದಮೂಲಫಲಗಳನ್ನು ತಂದು ನನಗೆ ಭೋಜನಮಾಡಿಸುವವರಾರು? ನನಗೆ ಕೆಲಸ ಮಾಡಲು ಶಕ್ತಿಯಿಲ್ಲ. ಧಾನ್ಯಸಂಗ್ರಹವು ಮೊದಲೇ ಇಲ್ಲ. ಅನಾಥನಾದೆನಲ್ಲ! (೩೪).

---

* ಅನುಬಂಧವನ್ನು ನೋಡಿ.

ಇಮಾಮಂಧಾಂ ಚ ವೃದ್ಧಾಂ ಚ ಮಾತರಂ ತೇ ತಪಸ್ವಿನೀಮ್ ।
ಕಥಂ ವತ್ಸ ಭರಿಷ್ಯಾಮಿ ಕೃಪಣಾಂ ಪುತ್ರಗರ್ಧಿನೀಮ್ ॥ ೩೫

ತಿಷ್ಠ ಮಾ ಮಾ ಗಮಃ ಪುತ್ರ ಯಮಸ್ಯ ಸದನಂ ಪ್ರತಿ ।
ಶ್ವೋ ಮಯಾ ಸಹ ಗಂತಾಸಿ ಜನನ್ಯಾ ಚ ಸಮೇಧಿತಃ ॥ ೩೬

ಉಭಾವಪಿ ಚ ಶೋಕಾರ್ತಾವನಾಥೌ ಕೃಪಣೌ ವನೇ ।
ಕ್ಷಿಪ್ರಮೇವ ಗಮಿಷ್ಯಾವಸ್ತ್ವಯಾ ಸಹ ಯಮಕ್ಷಯಮ್ ॥ ೩೭

ತತೋ ವೈವಸ್ವತಂ ದೃಷ್ಟ್ವಾ ತ್ವಂ ಪ್ರವಕ್ಷ್ಯಾಮಿ ಭಾರತೀಮ್ ।
ಕ್ಷಮತಾಂ ಧರ್ಮರಾಜೋ ಮೇ ಬಿಭೃಯಾತ್ ಪಿತರಾವಯಮ್ ॥೩೮

ದಾತುಮರ್ಹತಿ ಧರ್ಮಾತ್ಮಾ ಲೋಕಪಾಲೋ ಮಹಾಯಶಾಃ ।
ಈದೃಶಸ್ಯ ಮಮಾಕ್ಷಯ್ಯಾಮೇಕಾಮಭಯದಕ್ಷಿಣಾಮ್ ॥ ೩೯

ಅಪಾಪೋಽಸಿ ಯದಾ ಪುತ್ರ ನಿಹತಃ ಪಾಪಕರ್ಮಣಾ ।
ತೇನ ಸತ್ಯೇನ ಗಚ್ಛಾಶು ಯೇ ಲೋಕಾಃ ಶಸ್ತ್ರಯೋಧಿನಾಮ್ ॥ ೪೦

ವತ್ಸ, ವೃದ್ಧಳಾಗಿ ಕಣ್ಣು ಕಾಣದಿರುವ ತಪಸ್ವಿನಿಯಾದ ನಿನ್ನ ತಾಯಿ ಶೋಚನೀಯಳಾದಳು. ಮಗನಿಗಾಗಿ ಸಂಕಟಪಡುವ ಅವಳನ್ನು ನಾನು ಹೇಗೆ ಹಿಡಿಯಲಿ? ಹೇಗೆ ಪೋಷಿಸಲಿ? (೩೫). ಮಗು, ನಿಲ್ಲು, ಹೋಗಬೇಡ, ಹೋಗಬೇಡ. ಯಮನ ಮನೆಗೆ ಹೋಗುವುದಾದರೆ ನಾಳೆ ನನ್ನನ್ನೂ ನಿನ್ನ ತಾಯಿಯನ್ನೂ ಕರೆದುಕೊಂಡು ಒಟ್ಟಿಗೆ ಹೋಗಬಹುದು. ಶೋಕಾರ್ತರಾಗಿ ಶೋಚನೀಯರಾದ ನಾವಿಬ್ಬರೂ ಈ ಕಾಡಿನಲ್ಲಿ ಅನಾಥರಾದೆವು. ನಾವು ಶೀಘ್ರದಲ್ಲಿಯೇ ನಿನ್ನೊಡನೆ ಯಮಲೋಕಕ್ಕೆ ಬರುವೆವು (೩೬-೩೭). ನಾನು ಯಮನನ್ನು ಕುರಿತು 'ಧರ್ಮರಾಜ, ಈ ಬಾಲಕನನ್ನು ಕ್ಷಮಿಸು, ತಂದೆತಾಯಿಗಳನ್ನು ಪೋಷಿಸುವುದಕ್ಕೆ ಅವಕಾಶವನ್ನು ಕಲ್ಪಿಸು' ಎಂದು ಬೇಡಿಕೊಳ್ಳುವೆನು. ಆ ಧರ್ಮರಾಜನು ಲೋಕಪಾಲಕ; ಮಹಾಕೀರ್ತಿಶಾಲಿ. ಈ ಕಷ್ಟದಲ್ಲಿರುವ ನನಗೆ ಅನಿವಾರ್ಯವಾಗಿ ಇದೊಂದು ಅಭಯವನ್ನು ಕೊಟ್ಟು ನಿನ್ನನ್ನು ಬದುಕಿಸುವನು (೩೮-೩೯). ಮಗನೆ, ನೀನು ಒಂದು ಪಾಪಕೃತ್ಯವನ್ನೂ ಮಾಡಿದವನಲ್ಲ. ಆದರೂ ಈ ಪಾಪಿಯು ನಿನ್ನನ್ನು ಶಸ್ತ್ರದಿಂದ ಕೊಂದಿದ್ದಾನೆ. ಇದು ಸತ್ಯವಾದ್ದರಿಂದ ಶಸ್ತ್ರವನ್ನು

ಯಾಂ ಹಿ ಶೂರಾ ಗತಿಂ ಯಾಂತಿ ಸಂಗ್ರಾಮೇಷ್ವನಿವರ್ತಿನಃ ।
ಹತಾಸ್ತ್ವಭಿಮುಖಾಃ ಪುತ್ರ ಗತಿಂ ತಾಂ ಪರಮಾಂ ವ್ರಜ ॥ ೪೧

ಯಾಂ ಗತಿಂ ಸಗರಃ ಶೈಬ್ಯೋ ದಿಲೀಪೋ ಜನಮೇಜಯಃ ।
ನಹುಷೋ ಧುಂಧುಮಾರಶ್ಚ ಪ್ರಾಪ್ತಾಸ್ತಾಂ ಗಚ್ಛ ಪುತ್ರಕ ॥ ೪೨

ಯಾ ಗತಿಃ ಸರ್ವಸಾಧೂನಾಂ ಸ್ವಾಧ್ಯಾಯಾತ್ತಪಸಶ್ಚ ಯಾ ।
ಯಾ ಭೂಮಿದಸ್ಯಾಹಿತಾಗ್ನೇರೇಕಪತ್ನೀವ್ರತಸ್ಯ ಚ ॥ ೪೩

ಗೋಸಹಸ್ರಪ್ರದಾತ್ೄಣಾಂ ಗುರುಸೇವಾಭೃತಾಮಪಿ ।
ದೇಹನ್ಯಾಸಕೃತಾಂ ಯಾ ಚ ತಾಂ ಗತಿಂ ಗಚ್ಛ ಪುತ್ರಕ ॥ ೪೪

ನ ಹಿ ತ್ವಸ್ಮತ್ಕುಲೇ ಜಾತೋ ಗಚ್ಛತ್ಯಕುಶಲಾಂ ಗತಿಮ್ ।
ಸ ತು ಯಾಸ್ಯತಿ ಯೇನ ತ್ವಂ ನಿಹತೋ ಮಮ ಬಾಂಧವಃ ॥ ೪೫

ಹಿಡಿದು ಯುದ್ಧಮಾಡುವ ವೀರರಿಗೆ ದೊರೆವ ಸದ್ಗತಿ ನಿನಗಾಗಲಿ ! ಮಗು, ಸಂಗ್ರಾಮದಲ್ಲಿ ಹಿಮ್ಮೆಟ್ಟದೆ ಮುಂದೆ ನುಗ್ಗಿ ಹತರಾಗುವ ವೀರಯೋಧರು ಯಾವ ಪರಮಗತಿಯನ್ನು ಪಡೆಯುವರೋ ಆ ಗತಿ ನಿನಗೆ ದೊರೆಯಲಿ! (೪೦-೪೧). ಕಂದ, ಸಗರ ಶೈಬ್ಯ ದಿಲೀಪ ಜನಮೇಜಯ ನಹುಷ ಧುಂಧುಮಾರ - ಮುಂತಾದವರು ಯಾವ ಸದ್ಗತಿಯನ್ನು ಪಡೆದರೊ, ಆ ಸದ್ಗತಿಯು ನಿನಗೆ ಪ್ರಾಪ್ತವಾಗಲಿ! (೪೨). ಸಮಸ್ತ ಸಾಧುಪುರುಷರಿಗೆ ದೊರೆಯುವ ಸದ್ಗತಿ ನಿನಗಾಗಲಿ! ವೇದಾಧ್ಯಯನದಿಂದಲೂ ತಪಸ್ಸಿನಿಂದಲೂ ಲಭಿಸುವ ಪುಣ್ಯಗತಿಯು ನಿನಗೆ ಲಭಿಸಲಿ! ಭೂದಾನವನ್ನು ಮಾಡಿದವನಿಗೂ ಆಹಿತಾಗ್ನಿಗೂ ಏಕಪತ್ನೀವ್ರತನಿಷ್ಠನಿಗೂ ದೊರೆಯುವ ಸದ್ಗತಿ ನಿನಗೆ ದೊರೆಯಲಿ! (೪೩). ಸಹಸ್ರ ಗೋದಾನಕರ್ತರಿಗೂ ಗುರು ಸೇವಕರಿಗೂ ಮಹಾಪ್ರಸ್ಥಾನಾದಿಗಳಿಂದ ಪುಣ್ಯ ಸ್ಥಳದಲ್ಲಿ ದೇಹತ್ಯಾಗ ಮಾಡತಕ್ಕವರಿಗೂ ಆಗುವ ಸದ್ಗತಿ ನಿನಗಾಗಲಿ! ನಮ್ಮ ಕುಲದಲ್ಲಿ ಹುಟ್ಟಿದವರಾರೂ ದುರ್ಗತಿಯನ್ನು ಪಡೆಯುವುದಿಲ್ಲ. ನನ್ನ ಮಗನನ್ನು ಕೊಂದವನಿಗೇ ದುರ್ಗತಿಯಾಗುವುದು'' ಎಂದು ವಿಲಪಿಸಿದನು (೪೪-೪೫). ಹೀಗೆ ಆ ಮುನಿಯು ಪುನಃಪುನಃ ಕರುಣಾಪೂರ್ಣವಾಗಿ

ಏವಂ ಸ ಕೃಪಣಂ ತತ್ರ ಪರ್ಯದೇವಯತಾಸಕೃತ್ ।
ತತೋಽಸ್ಮೈ ಕರ್ತುಮುದಕಂ ಪ್ರವೃತ್ತಃ ಸಹ ಭಾರ್ಯಯಾ ॥ ೪೬

ಸ ತು ದಿವ್ಯೇನ ರೂಪೇಣ ಮುನಿಪುತ್ರಃ ಸ್ವಕರ್ಮಭಿಃ ।
ಸ್ವರ್ಗಮಧ್ಯಾರುಹತ್ ಕ್ಷಿಪ್ರಂ ಶಕ್ರೇಣ ಸಹ ಧರ್ಮವಿತ್ ॥ ೪೭

ಆಬಭಾಷೇ ಚ ತೌ ವೃದ್ಧೌ ಶಕ್ರೇಣ ಸಹ ತಾಪಸಃ ।
ಆಶ್ವಾಸ್ಯ ಚ ಮುಹೂರ್ತಂ ತು ಪಿತರೌ ವಾಕ್ಯಮಬ್ರವೀತ್ ॥ ೪೮

ಸ್ಥಾನಮಸ್ಮಿ ಮಹತ್ ಪ್ರಾಪ್ತೋ ಭವತೋಃ ಪರಿಚಾರಣಾತ್ ।
ಭವಂತಾವಪಿ ಚ ಕ್ಷಿಪ್ರಂ ಮಮ ಮೂಲಮುಪೈಷ್ಯತಃ ॥ ೪೯

ಏವಮುಕ್ತ್ವಾ ತು ದಿವ್ಯೇನ ವಿಮಾನೇನ ವಪುಷ್ಮತಾ ।
ಆರುರೋಹ ದಿವಂ ಕ್ಷಿಪ್ರಂ ಮುನಿಪುತ್ರೋ ಜಿತೇಂದ್ರಿಯಃ ॥ ೫೦

ಸ ಕೃತ್ವಾತೂದಕಂ ತೂರ್ಣಂ ತಾಪಸಃ ಸಹ ಭಾರ್ಯಯಾ ।
ಮಾಮುವಾಚ ಮಹಾತೇಜಾಃ ಕೃತಾಂಜಲಿಮುಪಸ್ಥಿತಮ್ ॥ ೫೧

ಹಲುಬಿ, ಕಡೆಗೆ ತನ್ನ ಹೆಂಡತಿಯೊಡನೆ ಮಗನ ಉತ್ತರಕ್ರಿಯೆಯನ್ನಾರಂಭಿಸಿದನು. ಧರ್ಮಜ್ಞನಾದ ಆ ಮುನಿಪುತ್ರನಿಗೆ ಅವನ ಪುಣ್ಯಕರ್ಮಬಲದಿಂದ ದಿವ್ಯರೂಪವುಂಟಾಯಿತು. ಅವನು ದೇವೇಂದ್ರನೊಡನೆ ಸ್ವರ್ಗವನ್ನಾರೋಹಿಸಲು ಸಿದ್ಧನಾದನು. ಅವನೂ ದೇವೇಂದ್ರನೂ ಆ ವೃದ್ಧದಂಪತಿಗಳಿಗೆ ಸ್ವಲ್ಪ ಹೊತ್ತು ಸಮಾಧಾನ ಹೇಳಿದರು (೪೬-೪೮). ಆ ಋಷಿಕುಮಾರನು ತನ್ನ ತಾಯಿತಂದೆಗಳನ್ನು ನೋಡಿ "ನಿಮ್ಮೀರ್ವರ ಶುಶ್ರೂಷೆಯನ್ನು ಆಚರಿಸಿದ್ದರಿಂದ ನನಗೆ ಉತ್ತಮಗತಿಯು ಪ್ರಾಪ್ತವಾಯಿತು. ನೀವೂ ಶೀಘ್ರದಲ್ಲಿ ನಾನಿರುವ ಸ್ಥಳಕ್ಕೆ ಬರುವಿರಿ!" ಎಂದನು. ಹೀಗೆ ಹೇಳಿ ಜಿತೇಂದ್ರಿಯನಾದ ಆ ಮುನಿಪುತ್ರನು ದಿವ್ಯವಾದ ಸುಂದರಾಕೃತಿಯ ಒಂದು ವಿಮಾನವನ್ನೇರಿ ಸ್ವರ್ಗಲೋಕಕ್ಕೆ ಹೊರಟುಹೋದನು (೪೯-೫೦). ಇತ್ತ ಆ ವೃದ್ಧತಾಪಸನು ತನ್ನ ಹೆಂಡತಿಯೊಡನೆ ಮಗನ ಉದಕಕ್ರಿಯೆಯನ್ನು ಆಚರಿಸಿ ನನ್ನನ್ನು ಕರೆದು ಹೇಳಿದನು. ನಾನು ಕೈಜೋಡಿಸಿ ಕೇಳುತ್ತಿದ್ದೆನು. ಆತನು "ಎಲೈ ರಾಜ, ನನ್ನನ್ನು ಈಗಲೇ ಕೊಂದುಬಿಡು. ಸಾವಿಗೆ ನಾನು

ಅದ್ಯೈವ ಜಹಿ ಮಾಂ ರಾಜನ್ ಮರಣೇ ನಾಸ್ತಿ ಮೇ ವ್ಯಥಾ ।
ಯಚ್ಛರೇಣೈಕಪುತ್ರಂ ಮಾಂ ತ್ವಮಕಾರ್ಷೀರಪುತ್ರಕಮ್ ॥ ೫೨

ತ್ವಯಾ ತು ಯದವಿಜ್ಞಾನಾನ್ನಿಹತೋ ಮೇ ಸುತಃ ಶುಚಿಃ ।
ತೇನ ತ್ವಾಮಭಿಶಪ್ಸ್ಯಾಮಿ ಸುದುಃಖಮತಿದಾರುಣಮ್ ॥ ೫೩

ಪುತ್ರವ್ಯಸನಜಂ ದುಃಖಂ ಯದೇತನ್ಮಮ ಸಾಂಪ್ರತಮ್ ।
ಏವಂ ತ್ವಂ ಪುತ್ರಶೋಕೇನ ರಾಜನ್ ಕಾಲಂ ಗಮಿಷ್ಯಸಿ ॥ ೫೪

ಅಜ್ಞಾನಾತ್ತು ಹತೋ ಯಸ್ಮಾತ್ ಕ್ಷತ್ರಿಯೇಣ ತ್ವಯಾ ಮುನಿಃ ।
ತಸ್ಮಾತ್ತ್ವಾಂ ನಾವಿಶತ್ಯಾಶು ಬ್ರಹ್ಮಹತ್ಯಾ ನರಾಧಿಪ ॥ ೫೫

ತ್ವಾಮಪ್ಯೇತಾದೃಶೋ ಭಾವಃ ಕ್ಷಿಪ್ರಮೇವ ಗಮಿಷ್ಯತಿ ।
ಜೀವಿತಾಂತಕರೋ ಘೋರೋ ದಾತಾರಮಿವ ದಕ್ಷಿಣಾ ॥ ೫೬

ಏವಂ ಶಾಪಂ ಮಯಿ ನ್ಯಸ್ಯ ವಿಲಪ್ಯ ಕರುಣಂ ಬಹು ।
ಚಿತಾಮಾರೋಪ್ಯ ದೇಹಂ ತನ್ಮಿಥುನಂ ಸ್ವರ್ಗಮಭ್ಯಯಾತ್ ॥ ೫೭

ವ್ಯಥೆಪಡುವುದಿಲ್ಲ (ಸತ್ತಮೇಲೆ ನನಗೆ ಈ ಸಂಕಟವಿರುವುದಿಲ್ಲ). ಏಕಪುತ್ರನಾದ ನನ್ನ ಮಗನನ್ನು ಕೊಂದು ಪುತ್ರಹೀನನನ್ನಾಗಿ ಮಾಡಿದೆಯಲ್ಲ! (೫೧-೫೨). ನಿರ್ದೋಷನಾದ ನನ್ನ ಮಗನನ್ನು ನೀನು ಅಜ್ಞಾನದಿಂದ ಕೊಂದಿದ್ದೀಯೆ. ಆದ್ದರಿಂದ ನಿನಗೆ ದುಃಖವನ್ನು ತಂದಿಡುವ ಒಂದು ಕ್ರೂರವಾದ ಶಾಪವನ್ನು ಕೊಡುವೆನು. ನನಗೆ ಪುತ್ರವಿಯೋಗದಿಂದ ಮರಣಾಂತವಾದ ದುಃಖವು ನಿನ್ನಿಂದ ಬಂದಿತು. ಎಲೈ ರಾಜ, 'ನೀನು ಪುತ್ರಶೋಕದಿಂದಲೇ ಮರಣವನ್ನು ಹೊಂದು!' (೫೩-೫೪). ಕ್ಷತ್ರಿಯನಾದ ನೀನು ಅಜ್ಞಾನದಿಂದ ತಪಸ್ವಿಯನ್ನು ವಧಿಸಿದೆಯಾದ್ದರಿಂದ, ನಿನಗೆ ಬ್ರಹ್ಮಹತ್ಯಾಸಮಾನವಾದ ಪಾಪವು ಬರುವುದಿಲ್ಲ. ನನಗೆ ಬಂದಂತೆ ಪ್ರಾಣಾಂತಕರವಾದ ವಿಪತ್ತು ಶೀಘ್ರದಲ್ಲಿ ನಿನಗೂ ಬರುವುದು. ದಕ್ಷಿಣೆಗೆ ತಕ್ಕ ಫಲ ದಾತೃವಿಗೆ ಬರುವಂತೆ ಪುತ್ರಶೋಕವು ನಿನಗೆ ತಪ್ಪದೆ ಬರುವುದು'' ಎಂದನು (೫೫-೫೬). ಹೀಗೆ ಆ ಮುನಿಯು ನನಗೆ ಶಾಪವನ್ನಿತ್ತನು. ಅನಂತರ ಆ ದಂಪತಿಗಳು

ತದೇಚಚ್ಚಿಂತಯಾನೇನ ಸ್ಮೃತಂ ಪಾಪಂ ಮಯಾ ಸ್ವಯಮ್ ।
ತದಾ ಬಾಲ್ಯಾತ್ ಕೃತಂ ದೇವಿ ಶಬ್ದವೇಧ್ಯನುಕರ್ಷಿಣಾ ॥ ೫೮

ತಸ್ಯಾಯಂ ಕರ್ಮಣೋ ದೇವಿ ವಿಪಾಕಃ ಸಮುಪಸ್ಥಿತಃ ।
ಅಪಥ್ಯೈಃ ಸಹ ಸಂಭುಕ್ತೋ ವ್ಯಾಧಿಮನ್ನರಸೋ ಯಥಾ ॥ ೫೯

ತಸ್ಮಾನ್ಮಾಮಾಗತಂ ಭದ್ರೇ ತಸ್ಯೋದಾರಸ್ಯ ತದ್ವಚಃ ।
ಯದಹಂ ಪುತ್ರಶೋಕೇನ ಸಂತ್ಯಕ್ಷ್ಯಾಮ್ಯದ್ಯ ಜೀವಿತಮ್ ॥ ೬೦

ಚಕ್ಷುರ್ಭ್ಯಾಂ ತ್ವಾಂ ನ ಪಶ್ಯಾಮಿ ಕೌಸಲ್ಯೇ ಸಾಧು ಮಾಂ ಸ್ಪೃಶ ।
ಇತ್ಯುಕ್ತ್ವಾ ಸ ರುದಂಸ್ತ್ರಸ್ತೋ ಭಾರ್ಯಾಮಾಹ ಚ ಭೂಮಿಪಃ ॥ ೬೧

ಯಮಕ್ಷಯಮನುಪ್ರಾಪ್ತಾ ದ್ರಕ್ಷ್ಯಂತಿ ನ ಹಿ ಮಾನವಾಃ ।
ಯದಿ ಮಾಂ ಸಂಸ್ಪೃಶೇದ್ರಾಮಃ ಸಕೃದದ್ಯ ಲಭೇತ ವಾ ॥ ೬೨

ಧನಂ ವಾ ಯೌವರಾಜ್ಯಂ ವಾ ಜೀವೇಯಮಿತಿ ಮೇ ಮತಿಃ ।
ಏತನ್ಮೇ ಸದೃಶಂ ದೇವಿ ಯನ್ಮಯಾ ರಾಘವೇ ಕೃತಮ್ ॥ ೬೩

ಬಹಳ ಹೊತ್ತು ರೋದಿಸಿ ಚಿತೆಯನ್ನೇರಿ ಸ್ವರ್ಗಸ್ಥರಾದರು. ಕೌಸಲ್ಯೆ, ಚಿಂತಾತುರನಾದ ನನಗೆ ಬಾಲ್ಯದಲ್ಲಿ ಮಾಡಿದ ಈ ಪಾಪಕೃತ್ಯವು ಈಗ ಸ್ಮರಣೆಗೆ ಬಂದಿತು. 'ಶಬ್ದವೇಧಿ' ಎಂಬ ಖ್ಯಾತಿಯಿಂದ ಗರ್ವಿಸಿ ಈ ಕೃತ್ಯವನ್ನು ಮಾಡಿದ್ದೆನು (೫೭-೫೮). ದೇವಿ, ನನ್ನ ಕರ್ಮದ ವಿಪಾಕವು ಈಗ ಉದ್ಭವಿಸಿತು. ಅಪಥ್ಯ ವಸ್ತುಗಳೊಡನೆ ತಿಂದ ಅನ್ನವು ವ್ಯಾಧಿಯನ್ನು ತರುವಂತೆ ನನ್ನ ಕರ್ಮವು ಈ ಫಲವನ್ನು ತಂದಿತು (೫೯). ಭದ್ರೆ, ಮಹಾತ್ಮನಾದ ಆ ಋಷಿಯ ಶಾಪದ ಫಲವು ಈಗ ನನಗೆ ತಟ್ಟಿತು. ಪುತ್ರಶೋಕದಿಂದ ನಾನು ಪ್ರಾಣವನ್ನು ಬಿಡುವೆನು. ಕೌಸಲ್ಯೆ, ನನ್ನ ಕಣ್ಣಿಗೆ ನೀನು ಕಾಣಿಸುವುದೇ ಇಲ್ಲ. ನೀನಾದರೂ ನನ್ನನ್ನು ಸರಿಯಾಗಿ ಮುಟ್ಟಿ ಮೈಸವರು'' ಎಂದು ಆ ಭೂಪಾಲನು ಅಳುತ್ತ ತನ್ನ ಪತ್ನಿಗೆ ಹೇಳಿದನು (೬೦-೬೧). ಪುನಃ ಕೌಸಲ್ಯೆಯನ್ನು ಕುರಿತು ಹೀಗೆಂದನು : ''ದೇವಿ, ಯಮಲೋಕಕ್ಕೆ ಹೊರಟ ಜನರಿಗೆ ದೃಷ್ಟಿಶಕ್ತಿ ಹೋಗಿಬಿಡುವುದು. ರಾಮನು ಬಂದು ಒಂದು ಸಲ ಮುಟ್ಟಿದರೆ ಬದುಕಿಕೊಳ್ಳುವೆನೋ ಏನೋ! ಅವನಿಗೆ ಧನವಾಗಲಿ ಯಾವ ರಾಜ್ಯವಾಗಲಿ ಇಂದು ಲಭಿಸಿದರೆ ನಾನು ಜೀವದಿಂದ ಉಳಿದೇನು. ಕೌಸಲ್ಯೆ,

ಸದೃಶಂ ತತ್ತು ತಸ್ಯೈವ ಯದನೇನ ಕೃತಂ ಮಯಿ ।
ದುರ್ವೃತ್ತಮಪಿ ಕಃ ಪುತ್ರಂ ತ್ಯಜೇದ್ಭುವಿ ವಿಚಕ್ಷಣಃ ॥ ೬೪

ಕಶ್ಚ ಪ್ರವ್ರಾಜ್ಯಮಾನೋ ವಾ ನಾಸೂಯೇತ್ ಪಿತರಂ ಸುತಃ ।
ಚಕ್ಷುಷಾ ತ್ವಾಂ ನ ಪಶ್ಯಾಮಿ ಸ್ಮೃತಿರ್ಮಮ ವಿಲುಪ್ಯತೇ ॥ ೬೫

ದೂತಾ ವೈವಸ್ವತಸ್ಯೈತೇ ಕೌಸಲ್ಯೇ ತ್ವರಯಂತಿ ಮಾಮ್ ।
ಅತಸ್ತು ಕಿಂ ದುಃಖತರಂ ಯದಹಂ ಜೀವಿತಕ್ಷಯೇ ॥ ೬೬

ನ ಹಿ ಪಶ್ಯಾಮಿ ಧರ್ಮಜ್ಞಂ ರಾಮಂ ಸತ್ಯಪರಾಕ್ರಮಮ್ ।
ತಸ್ಯಾದರ್ಶನಜಃ ಶೋಕಃ ಸುತಸ್ಯಾಪ್ರತಿಕರ್ಮಣಃ ॥ ೬೭

ಉಚ್ಛೋಷಯತಿ ಮೇ ಪ್ರಾಣಾನ್ ವಾರಿ ಸ್ತೋಕಮಿವಾತಪಃ ।
ನ ತೇ ಮನುಷ್ಯಾ ದೇವಾಸ್ತೇ ಯೇ ಚಾರುಶುಭಕುಂಡಲಮ್ ॥ ೬೮

ನಾನು ರಾಮನ ವಿಷಯದಲ್ಲಿ ಮಾಡಿದ ಕೃತ್ಯವು ಪಾಪಿಯಾದ ನಾನು ಮಾತ್ರವೇ ಮಾಡುವಂತಹದು (೬೨-೬೩). ರಾಮನು ನನ್ನ ವಿಷಯದಲ್ಲಿ ನಡೆದುಕೊಂಡ ರೀತಿ ಮಹಾತ್ಮನಾದ ಅವನೊಬ್ಬನಿಗೆ ಮಾತ್ರವೇ ಸಾಧ್ಯವಾಗುವಂತಹದು. ಹೊಟ್ಟೆಯಲ್ಲಿ ಹುಟ್ಟಿದ ಮಗನು ಒಂದು ವೇಳೆ ದುಷ್ಟನಾದರೂ ಬುದ್ಧಿಯಿರುವ ಯಾವಾತನು ಅವನನ್ನು ಕೈಬಿಟ್ಟಾನು? (೬೪). ಕಾಡಿಗೆ ಅಟ್ಟಿದರೆ ಯಾವ ಮಗನು ತಾನೆ ತಂದೆಯ ಮೇಲೆ ಕೋಪಿಸಿಕೊಳ್ಳದೆ ಇದ್ದಾನು? ದೇವಿ, ನನ್ನ ಕಣ್ಣಿಗೆ ನೀನು ಕಾಣಿಸುವುದೇ ಇಲ್ಲ, ಸ್ಮರಣಶಕ್ತಿಯು ಮಂಕಾಗುತ್ತಿದೆ (೬೫). ಕೌಸಲ್ಯೆ, ಇಗೋ ಯಮದೂತರು ನನ್ನನ್ನು ತ್ವರೆಪಡಿಸುತ್ತಿದ್ದಾರೆ. ಸಾಯುವ ಕಾಲದಲ್ಲಿ ಸತ್ಯಸಂಧನೂ ಧರ್ಮನಿಷ್ಠನೂ ಆದ ನನ್ನ ರಾಮನನ್ನು ನೋಡಲಾರದೆ ಹೋದೆನಲ್ಲ! ಇದಕ್ಕಿಂತಲೂ ಹೆಚ್ಚಿನ ಕಷ್ಟ ಇನ್ನಾವುದು? ಅಸದೃಶವಾದ ಕಾರ್ಯವನ್ನು ಮಾಡಿರತಕ್ಕ ಆ ಪುತ್ರನನ್ನು ಕಾಣದೆ ಹುಟ್ಟಿರುವ ಈ ಶೋಕವು ನನ್ನ ಪ್ರಾಣವನ್ನು ಹೀರುತ್ತಿದೆ; ಪ್ರಖರವಾದ ಬಿಸಿಲು ತೊಟ್ಟು ನೀರನ್ನು ಒಣಗಿಸುವಂತೆ ನನ್ನ ಪ್ರಾಣವನ್ನು ಹಿಂಡುತ್ತಿದೆ (೬೬-೬೭). ಇನ್ನು ಹದಿನೈದನೆಯ ವರ್ಷದಲ್ಲಿ ಬರುವ ರಾಮನ ಕರ್ಣಕುಂಡಲಾಲಂಕೃತವಾದ ಸುಂದರ ಮುಖವನ್ನು ನೋಡತಕ್ಕವರು ಮನುಷ್ಯರಲ್ಲ, ಅವರು ಭಾಗ್ಯಶಾಲಿಗಳಾದ ದೇವತೆಗಳೇ ಸರಿ! (೬೮).

ಮುಖಂ ದ್ರಕ್ಷ್ಯಂತಿ ರಾಮಸ್ಯ ವರ್ಷೇ ಪಂಚದಶೇ ಪುನಃ ।
ಪದ್ಮ ಪ್ರತ್ಯೇಕ್ಷಣಂ ಸುಭ್ರು ಸುದಂಷ್ಟ್ರಂ ಚಾರುನಾಸಿಕಮ್ ॥ ೬೯

ಧನ್ಯಾ ದ್ರಕ್ಷ್ಯಂತಿ ರಾಮಸ್ಯ ತಾರಾಧಿಪನಿಭಂ ಮುಖಮ್ ।
ಸದೃಶಂ ಶಾರದಸ್ಯೇಂದೋಃ ಫುಲ್ಲಸ್ಯ ಕಮಲಸ್ಯ ಚ ॥ ೭೦

ಸುಗಂಧಿ ಮಮ ರಾಮಸ್ಯ ಧನ್ಯಾ ದ್ರಕ್ಷ್ಯಂತಿ ತನ್ಮುಖಮ್ ।
ನಿವೃತ್ತವನವಾಸಂ ತಮಯೋಧ್ಯಾಂ ಪುನರಾಗತಮ್ ॥ ೭೧

ದ್ರಕ್ಷ್ಯಂತಿ ಸುಖಿನೋ ರಾಮಂ ಶುಕ್ರಂ ಮಾರ್ಗಗತಂ ಯಥಾ ।
ಕೌಸಲ್ಯೇ ಚಿತ್ತಮೋಹೇನ ಹೃದಯಂ ಸೀದತೀವ ಮೇ ॥ ೭೨

ವೇದಯೇ ನ ಚ ಸಂಯುಕ್ತಾನ್ ಶಬ್ದಸ್ಪರ್ಶರಸಾನಹಮ್ ।
ಚಿತ್ತನಾಶಾದ್ವಿಪದ್ಯಂತೇ ಸರ್ವಾಣ್ಯೇವೇಂದ್ರಿಯಾಣಿ ಮೇ ॥ ೭೩

ಕ್ಷೀಣಸ್ನೇಹಸ್ಯ ದೀಪಸ್ಯ ಸಂಸಕ್ತಾ ರಶ್ಮಯೋ ಯಥಾ ।
ಅಯಮಾತ್ಮಭವಃ ಶೋಕೋ ಮಾಮನಾಥಮಚೇತಸಮ್ ॥ ೭೪

ತಾವರೆಯ ದಳದಂತಿರುವ ಕಣ್ಣು, ತೀಡಿದ ಹುಬ್ಬು, ಸುಂದರವಾದ ದಂತಪಂಕ್ತಿ, ಚೆಲುವಾದ ಮೂಗು – ಚಂದ್ರನಂತೆ ರಮಣೀಯವಾದ ರಾಮನ ಆ ಮುಖವನ್ನು ನೋಡುವವರೇ ಧನ್ಯರು. ಶರತ್ಕಾಲದ ಪೂರ್ಣ ಚಂದ್ರನಂತೆ – ಅರಳಿದ ತಾವರೆಯಂತೆ ಮನೋಹರವಾಗಿ, ಸುಗಂಧವನ್ನು ಬೀರುವ ನನ್ನ ರಾಮನ ಆ ಮುಖವನ್ನು ಭಾಗ್ಯವಂತರು ಪುನಃ ನೋಡುವರು! (೬೯-೭೦). ವನವಾಸವನ್ನು ಮುಗಿಸಿ ಅಯೋಧ್ಯೆಗೆ ಹಿಂತಿರುಗಿ ಬಂದ ರಾಮನನ್ನು ನೋಡುವವರೇ ಸುಖಿಗಳು. ಅಸ್ತಕಾಲವನ್ನು ಕಳೆದು ಸ್ವಸ್ಥಾನಕ್ಕೆ ಬಂದು ಶುಕ್ರನಕ್ಷತ್ರದಂತೆ ಬೆಳಗುವ ರಾಮನನ್ನು ಪುಣ್ಯಾತ್ಮರು ವೀಕ್ಷಿಸುವರು. ಕೌಸಲ್ಯೆ, ನನ್ನ ಬುದ್ಧಿಗೆ ಮಂಕು ಕವಿಯಿತು. ಎದೆಯು ಸೀಳಿಹೋಗುವಂತಿದೆ (೭೧-೭೨). ಶಬ್ದಸ್ಪರ್ಶರಸಗಳೊಂದೂ ನನಗೆ ತಿಳಿಯದು. ಮನಃಶಕ್ತಿಯು ಕುಸಿಯಿತು. ಎಣ್ಣೆಯಿಲ್ಲದ ದೀಪರಶ್ಮಿಯಂತೆ ನನ್ನ ಸಕಲೇಂದ್ರಿಯಗಳೂ ಕುಗ್ಗಿದವು. ನದೀಪ್ರವಾಹವು ನದಿಯ ತೀರವನ್ನು ಉರುಳಿಸುವಂತೆ ನಾನೇ ತಂದುಕೊಂಡ ಶೋಕವು ನನ್ನನ್ನು ಕೊಚ್ಚಿಕೊಂಡು ಹೋಗುತ್ತಿದೆ. ಅನಾಥನಾದೆನು, ಚೈತನ್ಯ ಉಡುಗಿತು (೭೩-೭೪). ಹಾ ರಾಮಾ ! ಮಹಾಬಾಹೂ !

ಸಂಸಾದಯತಿ ವೇಗೇನ ಯಥಾ ಕೂಲಂ ನದೀರಯಃ ।
ಹಾ ರಾಘವ ಮಹಾಬಾಹೋ ಹಾ ಮಮಾಯಾಸನಾಶನ ॥ ೭೫

ಹಾ ಪಿತೃಪ್ರಿಯ ಮೇ ನಾಥ ಹಾದ್ಯ ಕ್ವಾಸಿ ಗತಃ ಸುತ ।
ಹಾ ಕೌಸಲ್ಯೇ ವಿನಶ್ಯಾಮಿ ಹಾ ಸುಮಿತ್ರೇ ತಪಸ್ವಿನಿ ॥ ೭೬

ಹಾ ನೃಶಂಸೇ ಮಮಾಮಿತ್ರೇ ಕೈಕೇಯಿ ಕುಲಪಾಂಸನಿ ।
ಇತಿ ರಾಮಸ್ಯ ಮಾತುಶ್ಚ ಸುಮಿತ್ರಾಯಾಶ್ಚ ಸಂನಿಧೌ ॥ ೭೭

ರಾಜಾ ದಶರಥಃ ಶೋಚನ್ ಜೀವಿತಾಂತಮುಪಾಗಮತ್ ।
ತಥಾ ತು ದೀನಂ ಕಥಯನ್ನರಾಧಿಪಃ
ಪ್ರಿಯಸ್ಯ ಪುತ್ರಸ್ಯ ವಿವಾಸನಾತುರಃ ।
ಗತೇಽರ್ಧರಾತ್ರೇ ಭೃಶದುಃಖಪೀಡಿತ-
ಸ್ತದಾ ಜಹೌ ಪ್ರಾಣಮುದಾರದರ್ಶನಃ ॥

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತುಃಷಷ್ಟಿತಮಃ ಸರ್ಗಃ

***

ಶಾಂತಿದಾಯಕ! ನನ್ನನ್ನು ಎಷ್ಟು ಪ್ರೀತಿಸುತ್ತಿದ್ದೆ! ಹಾ ನನ್ನೊಡೆಯ! ಎಲ್ಲಿಗೆ ಹೋದೆ! ಮಗನೆ !ಹಾ ಕೌಸಲ್ಯೆ ! ಸಾಯುತ್ತಿದ್ದೇನೆ. ಹಾ ಸುಮಿತ್ರೆ ! ನಿನಗೆ ಏನೂ ತಿಳಿಯದು (೭೫-೭೬). ಎಲೇ ಕೈಕೇಯಿ, ಘಾತುಕಿ, ನನ್ನ ವೈರಿ! ಕುಲಗೇಡಿ!'' ಎಂದು ರಾಮಮಾತೆಯಾದ ಕೌಸಲ್ಯೆ ಮತ್ತು ಸುಮಿತ್ರೆಯರೆದುರಿಗೆ ಶೋಕಿಸುತ್ತ ದಶರಥ ಮಹಾರಾಜನು ಮರಣವನ್ನು ಹೊಂದಿದನು (೭೭). ಆ ರೀತಿಯಲ್ಲಿ ಉದಾರಸ್ವಭಾವದ ಭೂಪಾಲನು, ತನ್ನ ಪ್ರಿಯಕುಮಾರನು ಅರಣ್ಯಕ್ಕೆ ಹೋದನೆಂದು ವಿಷಣ್ಣನಾಗಿ ಅತ್ಯಂತ ದುಃಖದಿಂದ ನರಳುತ್ತ ದೈನ್ಯದಿಂದ ಗೋಳಿಡುತ್ತ ಅರ್ಧರಾತ್ರಿಯ ಸಮಯದಲ್ಲಿ ಪ್ರಾಣವನ್ನು ಬಿಟ್ಟನು (೭೮).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಅರವತ್ತು ನಾಲ್ಕನೆಯ ಸರ್ಗ

***

ಪಂಚಷಷ್ಟಿತಮಃ ಸರ್ಗಃ

ಅಂತಃಪುರಾಕ್ರಂದಃ

ಅಥ ರಾತ್ರ್ಯಾಂ ವ್ಯತೀತಾಯಾಂ ಪ್ರಾತರೇವಾಪರೇಽಹನಿ ।
ವಂದಿನಃ ಪರ್ಯುಪಾತಿಷ್ಠಂಸ್ತತ್ಪಾರ್ಥಿವನಿವೇಶನಮ್ ॥ ೧

ಸೂತಾಃ ಪರಮಸಂಸ್ಕಾರಾ ಮಾಗಧಾಶ್ಚೋತ್ತಮಶ್ರುತಾಃ ।
ಗಾಯನಾಃ ಸ್ತುತಿಶೀಲಾಶ್ಚ ನಿಗದಂತಃ ಪೃಥಕ್ ಪೃಥಕ್ ॥ ೨

ರಾಜಾನಂ ಸ್ತುವತಾಂ ತೇಷಾಮುದಾತ್ತಾಭಿಹಿತಾಶಿಷಾಮ್ ।
ಪ್ರಾಸಾದಾಭೋಗವಿಸ್ತೀರ್ಣಃ ಸ್ತುತಿಶಬ್ದೋ ವ್ಯಜೃಂಭತ ॥ ೩

ತತಸ್ತು ಸ್ತುವತಾಂ ತೇಷಾಂ ಸೂತಾನಾಂ ಪಾಣಿವಾದಕಾಃ ।
ಅಪದಾನಾನ್ಯುದಾಹೃತ್ಯ ಪಾಣಿವಾದಾನವಾದಯನ್ ॥ ೪

ತೇನ ಶಬ್ದೇನ ವಿಹಗಾಃ ಪ್ರತಿಬುದ್ಧಾ ವಿಸಸ್ವನುಃ ।
ಶಾಖಾಸ್ಥಾಃ ಪಂಜರಸ್ಥಾಶ್ಚ ಯೇ ರಾಜಕುಲಗೋಚರಾಃ ॥ ೫

ಸರ್ಗ ೬೫

ದಶರಥನ ಮರಣಕ್ಕಾಗಿ ರಾಜಪತ್ನಿಯರ ಶೋಕ

ಆ ರಾತ್ರಿಯು ಕಳೆಯಿತು. ಮಾರನೆಯ ದಿನ ಪ್ರಾತಃಕಾಲವಾಗುತ್ತಿರುವಾಗ ಎಂದಿನಂತೆ ವಂದಿಗಳು ಸೇವಾರ್ಥವಾಗಿ ಅರಮನೆಗೆ ಬಂದರು. ವೇಷಭೂಷಣಗಳನ್ನು ತೊಟ್ಟ ಸೂತರೂ ವಂಶಪರಂಪರೆಯನ್ನು ಬಲ್ಲ ಮಾಗದರೂ ಗಾಯಕರೂ ಬಂದರು. ಅವರೆಲ್ಲರೂ ಬೇರೆಬೇರೆಯಾಗಿ ರಾಜನನ್ನು ಸ್ತುತಿಸುತ್ತ ಸುಪ್ರಭಾತವನ್ನು ಹೇಳತೊಡಗಿದರು (೧-೨). ಉಚ್ಚ ಸ್ವರದಿಂದ ಆಶೀರ್ವಾದವಚನಗಳನ್ನು ಹಾಡುತ್ತಿದ್ದ ಅವರ ಸ್ತುತಿಶಬ್ದವು ವಿಶಾಲವಾದ ಅರಮನೆಯನ್ನು ವ್ಯಾಪಿಸಿತು. ಆಗ ಹಸ್ತವಾದ್ಯಗಳನ್ನು ನುಡಿಸತಕ್ಕವರು ರಾಜನ ಪೂರ್ವಚರಿತ್ರವನ್ನು ವಾದ್ಯದಲ್ಲಿ ನುಡಿಸುತ್ತಿದ್ದರು (೩-೪). ಆ ಧ್ವನಿಯಿಂದ ಅರಮನೆಯ ಆವರಣದಲ್ಲಿದ್ದ ಮರದ ಕೊಂಬೆಗಳಲ್ಲಿಯೂ ಪೆಂಜರಗಳಲ್ಲಿಯೂ ಹಕ್ಕಿಗಳು ಎಚ್ಚೆತ್ತು ಚಿಲಿಪಿಲಿಗುಟ್ಟ

ವ್ಯಾಹೃತಾಃ ಪುಣ್ಯಶಬ್ದಾಶ್ಚ ವೀಣಾನಾಂ ಚಾಪಿ ನಿಃಸ್ವನಾಃ ।
ಆಶೀರ್ಗೇಯಂ ಚ ಗಾಥಾನಾಂ ಪೂರಯಾಮಾಸ ವೇಶ್ಮ ತತ್ ॥ ೬
ತತಃ ಶುಚಿಸಮಾಚಾರಾಃ ಪರ್ಯುಪಸ್ಥಾನಕೋವಿದಾಃ ।
ಸ್ತ್ರೀವರ್ಷವರಭೂಯಿಷ್ಠಾ ಉಪತಸ್ಥುರ್ಯಥಾಪುರಮ್ ॥ ೭
ಹರಿಚಂದನಸಂಪೃಕ್ತಮುದಕಂ ಕಾಂಚನೈರ್ಘಟೈಃ ।
ಆನಿನ್ಯುಃ ಸ್ನಾನಶಿಕ್ಷಾಜ್ಞಾ ಯಥಾಕಾಲಂ ಯಥಾವಿಧಿ ॥ ೮
ಮಂಗಲಾಲಂಭನೀಯಾನಿ ಪ್ರಾಶನೀಯಾನುಪಸ್ಕರಾನ್ ।
ಉಪಾನಿನ್ಯುಸ್ತಥಾಪ್ಯನ್ಯಾಃ ಕುಮಾರೀಬಹುಲಾಃ ಸ್ತ್ರಿಯಃ ॥ ೯
ಸರ್ವಲಕ್ಷಣಸಂಪನ್ನಂ ಸರ್ವಂ ವಿಧಿವದರ್ಚಿತಮ್ ।
ಸರ್ವಂ ಸುಗುಣಲಕ್ಷ್ಮೀವತ್ತದ್ಬಭೂವಾಭಿಹಾರಿಕಮ್ ॥ ೧೦
ತತ್ತು ಸೂರ್ಯೋದಯಂ ಯಾವತ್ ಸರ್ವಂ ಪರಿಸಮುತ್ಸುಕಮ್ ।
ತಸ್ಥಾವನುಪಸಂಪ್ರಾಪ್ತಂ ಕಿಂಸ್ವಿದಿತ್ಯುಪಶಂಕಿತಮ್ ॥ ೧೧

ಲಾರಂಭಿಸಿದವು. ಜನರ ಹೇಳಿಕೊಳ್ಳುವ 'ಕಾಶೀ ಗಂಗಾ' ಮುಂತಾದ ಪುಣ್ಯಶಬ್ದಗಳೂ ವೀಣಾಧ್ವನಿಗಳೂ ಸ್ತೋತ್ರಪಾಠಗಳೂ ಅರಮನೆಯಲ್ಲಿ ಹರಡಿದವು (೫-೬). ಅಷ್ಟರಲ್ಲಿ ಸದಾಚಾರಶೀಲರೂ ಸೇವಾಚತುರರೂ ಆದ ಸ್ತ್ರೀಯರೂ ನಪುಂಸಕರೂ ಎಂದಿನಂತೆ ಅಂತಃಪುರದ್ವಾರದಲ್ಲಿ ಬಂದು ನಿಂತರು. ಸ್ನಾನವಿಧಿಯನ್ನು ಬಲ್ಲ ಭೃತ್ಯರು ಹರಿಚಂದನ ಸಮ್ಮಿಶ್ರವಾದ ಜಲವನ್ನು ಚಿನ್ನದ ಕಲಶಗಳಲ್ಲಿ ತುಂಬಿ ಸಕಾಲದಲ್ಲಿ ತಂದಿಟ್ಟರು (೭-೮). ಕೆಲವು ಕನ್ಯಕೆಯರು ಮಂಗಳದ್ರವ್ಯ, ಪ್ರಾತಃಕಾಲದ ಪೇಯ ಮತ್ತು ಅಲಂಕಾರ ಸಾಮಗ್ರಿಗಳನ್ನು ತಂದಿರಿಸಿದರು. ಹೀಗೆ ಪ್ರಾತಃಕಾಲದಲ್ಲಿ ರಾಜನಿಗೋಸ್ಕರ ನಡೆಯಬೇಕಾದ ಸಕಲಸಿದ್ಧತೆಯೂ ವಿಧಿಪೂರ್ವಕವಾಗಿ ವೈಭವದಿಂದ ನಡೆಯಿತು (೯-೧೦). ಸೂರ್ಯೋದಯವಾಗುವವರೆಗೂ ರಾಜನು ಹೊರಗೆ ಬಂದಾನೆಂದು ಎಲ್ಲರೂ ಸಂಭ್ರಮದಿಂದ ಕಾದಿದ್ದರು. ಅನಂತರ, ಇದೇನಿರಬಹುದು ?- ಎಂದು ಎಲ್ಲರಿಗೂ ಶಂಕೆಯುಂಟಾಯಿತು. ಅಷ್ಟರಲ್ಲಿ

ಅಥ ಯಾಃ ಕೋಸಲೇಂದ್ರಸ್ಯ ಶಯನಂ ಪ್ರತ್ಯನಂತರಾಃ ।
ತಾಃ ಸ್ತ್ರಿಯಸ್ತು ಸಮಾಗಮ್ಯ ಭರ್ತಾರಂ ಪ್ರತ್ಯಬೋಧಯನ್ ॥ ೧೨

ತಥಾಪ್ಯುಚಿತವೃತ್ತಾಸ್ತಾ ವಿನಯೇನ ನಯೇನ ಚ ।
ನ ಹ್ಯಸ್ಯ ಶಯನಂ ಸ್ಪೃಷ್ಟ್ವಾ ಕಿಂಚಿದಪ್ಯುಪಲೇಭಿರೇ ॥ ೧೩

ತಾಃ ಸ್ತ್ರಿಯಃ ಸ್ವಪ್ನಶೀಲಜ್ಞಾಶ್ಚೇಷ್ಟಾಸಂಚಲನಾದಿಷು ।
ತಾ ವೇಪಥುಪರೀತಾಶ್ಚ ರಾಜ್ಞಃ ಪ್ರಾಣೇಷು ಶಂಕಿತಾಃ ॥ ೧೪

ಪ್ರತಿಸ್ರೋತಸ್ತೃಣಾಗ್ರಾಣಾಂ ಸದೃಶಂ ಸಂಚಕಂಪಿರೇ ।
ಅಥ ಸಂದೇಹಮಾನಾನಾಂ ಸ್ತ್ರೀಣಾಂ ದೃಷ್ಟ್ವಾ ಚ ಪಾರ್ಥಿವಮ್ ॥ ೧೫

ಯತ್ತದಾಶಂಕಿತಂ ಪಾಪಂ ತಸ್ಯ ಜಜ್ಞೇ ವಿನಿಶ್ಚಯಃ ।
ಕೌಸಲ್ಯಾ ಚ ಸುಮಿತ್ರಾ ಚ ಪುತ್ರಶೋಕಪರಾಜಿತೇ ॥ ೧೬

ಪ್ರಸುಪ್ತೇ ನ ಪ್ರಬುದ್ಧ್ಯೇತೇ ಯಥಾ ಕಾಲಸಮನ್ವಿತೇ ।
ನಿಷ್ಪ್ರಭಾ ಚ ವಿವರ್ಣಾ ಚ ಸನ್ನಾ ಶೋಕೇನ ಸಂನತಾ ॥ ೧೭

ಕೋಸಲೇಂದ್ರನ ಕೆಲವು ಅಂತಃಪುರಸ್ತ್ರೀಯರು ಹಾಸಿಗೆಯ ಬಳಿಗೆ ಹೋಗಿ ರಾಜನನ್ನು ಮೆಲ್ಲಗೆ ಎಬ್ಬಿಸಲು ಪ್ರಯತ್ನಿಸಿದರು. (೧೧-೧೨). ಔಚಿತ್ಯವನ್ನರಿತ ಆ ಸ್ತ್ರೀಯರು ವಿನಯದಿಂದಲೂ ಉಪಾಯದಿಂದಲೂ ಮಾತನಾಡಿಸುತ್ತ ಅವನ ಹಾಸಿಗೆಯನ್ನು ಮುಟ್ಟಿ ಪರೀಕ್ಷಿಸಲು ನಿದ್ರೆಯ ಚಿಹ್ನೆಯೊಂದೂ ಗೋಚರಿಸಲಿಲ್ಲ. (೧೩). ನಿದ್ರೆಯ ಸ್ವರೂಪವನ್ನು ಬಲ್ಲ ಆ ಸ್ತ್ರೀಯರು ಕೈಕಾಲುಗಳ ಚಲನವನ್ನೂ ಉಸಿರಾಡುವುದನ್ನೂ ಗಮನಿಸಿ ನೋಡಿದಾಗ ಯಾವುದೂ ಕಾಣಲಿಲ್ಲ. ಅವರಿಗೆ ಮೈಯಲ್ಲಿ ನಡುಕ ಹುಟ್ಟಿತು. ರಾಜನಿಗೆ ಪ್ರಾಣವಿದೆಯೆ ಎಂದು ಸಂದೇಹವಾಯಿತು (೧೪). ಪ್ರವಾಹಕ್ಕೆ ಎದುರಾಗಿರುವ ಜೊಂಡುಹುಲ್ಲಿನಂತೆ ಆ ಹೆಂಗಸರು ಗಡಗಡನೆ ನಡುಗಿದರು. ಸಂದೇಹಿಸುತ್ತಲೇ ಅವರು ರಾಜನನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದರು. ಊಹಿಸಿದ ಕೇಡು ನಿಶ್ಚಿತವಾಯಿತು. ರಾಜನು ಮೃತನಾಗಿರುವನೆಂದು ಗೊತ್ತಾಯಿತು (೧೫). ಕೌಸಲ್ಯಾಸುಮಿತ್ರೆಯರು ಪುತ್ರಶೋಕದಿಂದ ಕಂಗೆಟ್ಟು ಪ್ರಜ್ಞೆಯಿಲ್ಲದೆ ಸತ್ತವರಂತೆ ಮಲಗಿದ್ದರು. ಕೌಸಲ್ಯೆಯು ಅತ್ತು ಅತ್ತು ಕಂದಿ ಕುಗ್ಗಿ ಕಾಂತಿಹೀನಳಾಗಿ ಉತ್ಪಾತಕಾಲದಲ್ಲಿ ಕತ್ತಲೆ ಮುಸುಕಿದ ತಾರೆಯಂತೆ ಕಾಣುತ್ತಿದ್ದಳು. ಮೃತನಾದ ದಶರಥನಿಗೂ ಪ್ರಜ್ಞೆಯಿಲ್ಲದೆ

ನ ವ್ಯರಾಜತ ಕೌಸಲ್ಯಾ ತಾರೇವ ತಿಮಿರಾವೃತಾ ।
ಕೌಸಲ್ಯಾನಂತರಂ ರಾಜ್ಞಃ ಸುಮಿತ್ರಾ ತದನಂತರಮ್ ॥ ೧೮

ನ ಸ್ಮ ವಿಭ್ರಾಜತೇ ದೇವೀ ಶೋಕಾಶ್ರುಲುಲಿತಾನನಾ ।
ತೇ ಚ ದೃಷ್ಟ್ವಾ ತಥಾ ಸುಪ್ತೇ ಉಭೇ ದೇವ್ಯೌ ಚ ತಂ ನೃಪಮ್ ॥ ೧೯

ಸುಪ್ತಮೇವೋದ್ಗತಪ್ರಾಣಮಂತಃಪುರಮದೃಶ್ಯತ ।
ತತಃ ಪ್ರಚುಕ್ರುಶುರ್ದೀನಾಃ ಸಸ್ವರಂ ತಾ ವರಾಂಗನಾಃ ॥ ೨೦

ಕರೇಣವ ಇವಾರಣ್ಯೇ ಸ್ಥಾನಪ್ರಚ್ಯುತಯೂಥಪಾಃ ।
ತಾಸಾಮಾಕ್ರಂದಶಬ್ದೇನ ಸಹಸೋದ್ಗತಚೇತನೇ ॥ ೨೧

ಕೌಸಲ್ಯಾ ಚ ಸುಮಿತ್ರಾ ಚ ತ್ಯಕ್ತನಿದ್ರೇ ಬಭೂವತುಃ ।
ಕೌಸಲ್ಯಾ ಚ ಸುಮಿತ್ರಾ ಚ ದೃಷ್ಟ್ವಾ ಸ್ಪೃಷ್ಟ್ವಾ ಚ ಪಾರ್ಥಿವಮ್ ॥ ೨೨

ಹಾ ನಾಥೇತಿ ಪರಿಕ್ರುಶ್ಯ ಪೇತತುರ್ಧರಣೀತಲೇ ।
ಸಾ ಕೋಸಲೇಂದ್ರದುಹಿತಾ ವೇಷ್ಟಮಾನಾ ಮಹೀತಲೇ ॥ ೨೩

ಮಲಗಿದ್ದ ಕೌಸಲ್ಯಾಸುಮಿತ್ರೆಯರಿಗೂ ವ್ಯತ್ಯಾಸವೇ ಕಾಣಲಿಲ್ಲ (೧೬-೧೮). ಸುಮಿತ್ರೆಯ ಮುಖದ ಮೇಲೆ ಕಣ್ಣೀರು ಧಾರೆಯಾಗಿ ಹರಿದಿತ್ತು. ಹೀಗೆ ಮಲಗಿದ್ದ ಆ ದೇವಿಯರಿಬ್ಬರನ್ನೂ ಮಲಗಿದ್ದಲ್ಲಿಯೇ ಪ್ರಾಣವನ್ನು ಬಿಟ್ಟಿದ್ದ ದಶರಥ ರಾಜನನ್ನೂ ಅಂತಃಪುರಸ್ತ್ರೀಯರೂ ನೋಡಿದರು. ಹಾಗೆಯೇ ಆ ವನಿತೆಯರು ದೈನ್ಯದಿಂದ ಗಟ್ಟಿಯಾಗಿ ಅಳತೊಡಗಿದರು (೧೯-೨೦). ಸಲಗವನ್ನು ಕಳೆದುಕೊಂಡ ಹೆಣ್ಣಾನೆಗಳಂತೆ ಗೋಳಿಡುತ್ತಿದ್ದ ಅವರ ರೋದನ ಧ್ವನಿಯಿಂದ ಕೌಸಲ್ಯಾಸುಮಿತ್ರೆಯರಿಗೆ ಥಟ್ಟನೆ ಎಚ್ಚರವಾಯಿತು. ಅವರಿಬ್ಬರೂ ಕೂಡಲೆ ರಾಜನನ್ನು ಮುಟ್ಟಿನೋಡಿ 'ಹಾ ನಾಥ' ಎಂದು ಕೂಗುತ್ತ ನೆಲದಮೇಲೆ ಕುಸಿದುಬಿದ್ದರು. ಕೌಸಲ್ಯಾದೇವಿಯು ನೆಲದಮೇಲೆ ಹೊರಳಾಡತೊಡಗಿದಳು (೨೧-೨೨). ಮಲಿನಶರೀರೆಯಾದ ಆ ದೇವಿಯು ಗಗನದಿಂದ ಬಿದ್ದ ನಕ್ಷತ್ರದಂತೆ ಕಾಂತಿಹೀನಳಾಗಿದ್ದಳು. ದಶರಥನ ಜೀವನಕ್ರಿಯೆಯೆಲ್ಲವೂ ಶಾಂತವಾಗಿರಲು,

ನ ಬಭ್ರಾಜ ರಜೋಧ್ವಸ್ತಾ ತಾರೇವ ಗಗನಾಚ್ಚ್ಯುತಾ ।
ನೃಪೇ ಶಾಂತಗುಣೇ ಜಾತೇ ಕೌಸಲ್ಯಾಂ ಪತಿತಾಂ ಭುವಿ ॥ ೨೪

ಅಪಶ್ಯಂಸ್ತಾಃ ಸ್ತ್ರಿಯಃ ಸರ್ವಾ ಹತಾಂ ನಾಗವಧೂಮಿವ ।
ತತಃ ಸರ್ವಾ ನರೇಂದ್ರಸ್ಯ ಕೈಕೈಯೀಪ್ರಮುಖಾಃ ಸ್ತ್ರಿಯಃ ॥ ೨೫

ರುದಂತ್ಯಃ ಶೋಕಸಂತಪ್ತಾ ನಿಪೇತುರ್ಗತಚೇತನಾಃ ।
ತಾಭಿಃ ಸ ಬಲವಾನ್ನಾದಃ ಕ್ರೋಶಂತೀಭಿರನುದ್ರುತಃ ॥ ೨೬

ಯೇನ ಸ್ಥಿರೀಕೃತಂ ಭೂಯಸ್ತದ್ಗೃಹಂ ಸಮನಾದಯತ್ ।
ತತ್ಪರಿತ್ರಸ್ತಸಂಭ್ರಾಂತಂ ಪರ್ಯುತ್ಸುಕಜನಾಕುಲಮ್ ॥ ೨೭

ಸರ್ವತಸ್ತು ಮುಲಾಕ್ರಂದಂ ಪರಿತಾಪಪಾರ್ತಬಾಂಧವಮ್ ।
ಸದ್ಯೋ ನಿಪತಿತಾನಂದಂ ದೀನವಿಕ್ಲವದರ್ಶನಮ್ ॥ ೨೮

ಬಭೂವ ನರದೇವಸ್ಯ ಸದ್ಮ ದಿಷ್ಟಾಂತಮೀಯುಷಃ ।
ಅತೀತಮಾಜ್ಞಾಯ ತು ಪಾರ್ಥಿವರ್ಷಭಂ
ಯಶಸ್ವಿನಂ ಸಂಪರಿವಾರ್ಯ ಪತ್ನಯಃ ।

ಶಸ್ತ್ರಹತವಾದ ಹೆಣ್ಣಾನೆಯಂತೆ ಕೌಸಲ್ಯೆಯು ಬಿದ್ದುದನ್ನು ಆ ಸ್ತ್ರೀಯರು ನೋಡಿದರು. ಅನಂತರ ಕೈಕೇಯಿ ಮೊದಲಾದ ರಾಜಸ್ತ್ರೀಯರೆಲ್ಲರೂ ಶೋಕಾರ್ತರಾಗಿ ಅಳುತ್ತ ಪ್ರಜ್ಞೆತಪ್ಪಿದರು (೨೩-೨೫). ಹೀಗೆ ಆ ಸ್ತ್ರೀಯರೆಲ್ಲರೂ ಗಟ್ಟಿಯಾಗಿ ರೋದಿಸುತ್ತಿರಲು, ಆಕ್ರಂದನಧ್ವನಿಯು ಶಾಂತವಾಗಿದ್ದ ಅರಮನೆಯನ್ನು ಮತ್ತೆ ವ್ಯಾಪಿಸಿ ಮೊಳಗಿತು. ಜನರೆಲ್ಲರೂ ಹೆದರಿ ದಿಗ್ಭ್ರಾಂತರಾದರು. ಏನಾಯಿತೆಂದು ಗಾಬರಿಯಿಂದ ಜನರು ತುಂಬಿದರು. ಎಲ್ಲೆಲ್ಲಿಯೂ ಆರ್ತಧ್ವನಿಯು ಹರಡಿತು. ಬಂಧುವರ್ಗದವರು ವ್ಯಸನದಿಂದ ತತ್ತರಿಸಿದರು. ಸ್ವರ್ಗಸ್ಥನಾದ ಮಹಾರಾಜನ ಅರಮನೆಯಲ್ಲಿ ಹರ್ಷದ ಸೊಲ್ಲೂ ಇಲ್ಲದೆ ದೈನ್ಯವೂ ಖೇದವೂ ಎದ್ದು ಕಾಣಿಸಿದವು (೨೬-೨೮). ಕೀರ್ತಿಶಾಲಿಯೂ ರಾಜಾಧಿರಾಜನೂ ಆದ ದಶರಥನು ಗತಿಸಿಹೋದನೆಂದು ತಿಳಿದು ಅವನ ಪತ್ನಿಯರೆಲ್ಲರೂ ಹಾಸಿಗೆಯ ಸುತ್ತಲೂ ಬಂದು ನಿಂತರು. ಆ ಸ್ತ್ರೀಯರು ಅತ್ಯಂತ ದುಃಖಿತರಾಗಿ ಕರುಣಾಪೂರ್ಣವಾಗಿ ಅಳುತ್ತ ಒಬ್ಬರೊಬ್ಬರ ಕೈಗಳನ್ನು ಹಿಡಿದುಕೊಂಡು

ಭೃಶಂ ರುದಂತ್ಯಃ ಕರುಣಂ ಸುದುಃಖಿತಾಃ ।
ಪ್ರಗೃಹ್ಯ ಬಾಹೂ ವ್ಯಲಪನ್ನನಾಥವತ್ ॥ ೨೮

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಪಂಚಷಷ್ಟಿತಮಃ ಸರ್ಗಃ

ಷಟ್‌ಷಷ್ಟಿತಮಃ ಸರ್ಗಃ

ತೈಲದ್ರೋಣ್ಯಧಿಶಯನಮ್

ತಮಗ್ನಿಮಿವ ಸಂಶಾಂತಮಂಬುಹೀನಮಿವಾರ್ಣವಮ್ ।
ಹತಪ್ರಭಮಿವಾದಿತ್ಯಂ ಸ್ವರ್ಗಸ್ಥಂ ಪ್ರೇಕ್ಷ್ಯ ಪಾರ್ಥಿವಮ್ ॥ ೧

ಕೌಸಲ್ಯಾ ಬಾಷ್ಪಪೂರ್ಣಾಕ್ಷೀ ವಿವಿಧಂ ಶೋಕಕರ್ಶಿತಾ ।
ಉಪಗೃಹ್ಯ ಶಿರೋ ರಾಜ್ಞಃ ಕೈಕೇಯೀಂ ಪ್ರತ್ಯಭಾಷತ ॥ ೨

ಸಕಾಮಾ ಭವ ಕೈಕೇಯಿ ಭುಂಕ್ಷ್ವ ರಾಜ್ಯಮಕಂಟಕಮ್ ।
ತ್ಯಕ್ತ್ವಾ ರಾಜಾನಮೇಕಾಗ್ರಾ ನೃಶಂಸೇ ದುಷ್ಟಚಾರಿಣಿ ॥ ೩

ಅನಾಥರಂತೆ ಗೋಳಾಡಿದರು (೨೮).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಅರುವತ್ತೈದನೆಯ ಸರ್ಗ

ಸರ್ಗ ೬೬

ಕೌಸಲ್ಯೆ ಮೊದಲಾದ ರಾಜಸ್ತ್ರೀಯರ ದುಃಖ, ದಶರಥನ ದೇಹವನ್ನು ಎಣ್ಣೆಯ ಕೊಪ್ಪರಿಗೆಯಲ್ಲಿಡುವುದು.

ಹೀಗೆ ಸ್ವರ್ಗಸ್ಥನಾದ ದಶರಥ ರಾಜನು ಆರಿದ ಅಗ್ನಿಯಂತೆಯೂ ನೀರಿಲ್ಲದ ಸಮುದ್ರದಂತೆಯೂ ಪ್ರಭೆಯನ್ನು ಬೀರದ ಸೂರ್ಯನಂತೆಯೂ ಕಾಣುತ್ತಿದ್ದನು. ಶೋಕಾರ್ತಳಾದ ಕೌಸಲ್ಯೆಯು ಅವನ ತಲೆಯನ್ನು ತನ್ನ ತೊಡೆಯಮೇಲಿರಿಸಿಕೊಂಡು ಕಂಬನಿದುಂಬಿ ಕೈಕೇಯಿಯನ್ನು ಉದ್ದೇಶಿಸಿ ಹೀಗೆಂದಳು (೧-೨) : ''ಕೈಕೇಯಿ, ನಿನ್ನ ಇಷ್ಟ ಕೈಗೂಡಿತೆ ? ಇನ್ನು ನಿರಾತಂಕವಾಗಿ ರಾಜ್ಯವಾಳು. ಘಾತುಕಿ ! ದುಷ್ಟೆ !

ವಿಹಾಯ ಮಾಂ ಗತೋ ರಾಮೋ ಭರ್ತಾ ಚ ಸ್ವರ್ಗತೋ ಮಮ ।
ವಿಪಥೇ ಸಾರ್ಥಹೀನೇವ ನಾಹಂ ಜೀವಿತುಮುತ್ಸಹೇ ॥ ೪

ಭರ್ತಾರಂ ತಂ ಪರಿತ್ಯಜ್ಯ ಕಾ ಸ್ತ್ರೀ ದೈವತಮಾತ್ಮನಃ ।
ಇಚ್ಛೇಜ್ಜೀವಿತುಮನ್ಯತ್ರ ಕೈಕೇಯ್ಯಾಸ್ತ್ಯಕ್ತಧರ್ಮಣಃ ॥ ೫

ನ ಲುಬ್ಧೋ ಬುಧ್ಯತೇ ದೋಷಾನ್ ಕಿಂಪಾಕಮಿವ ಭಕ್ಷಯನ್ ।
ಕುಬ್ಜಾನಿಮಿತ್ತಂ ಕೈಕೇಯ್ಯಾ ರಾಘವಾಣಾಂ ಕುಲಂ ಹತಮ್ ॥ ೬

ಅನಿಯೋಗೇ ನಿಯುಕ್ತೇನ ರಾಜ್ಞಾ ರಾಮಂ ವಿವಾಸಿತಮ್ ।
ಸಭಾರ್ಯಂ ಜನಕಃ ಶ್ರುತ್ವಾ ಪರಿತಪ್ಸ್ಯತ್ಯಹಂ ಯಥಾ ॥ ೭

ಸ ಮಾಮನಾಥಾಂ ವಿಧವಾಂ ನಾದ್ಯ ಜಾನಾತಿ ಧಾರ್ಮಿಕಃ ।
ರಾಮಃ ಕಮಲಪತ್ರಾಕ್ಷೋ ಜೀವನಾಶಮಿತೋ ಗತಃ ॥ ೮

ಮಹಾರಾಜನನ್ನು ತ್ಯಜಿಸಿ ಇನ್ನು ನೀನೊಬ್ಬಳೇ ನೆಮ್ಮದಿಯಾಗಿರಬಹುದು. ನನ್ನ ಮಗನು ನನ್ನನ್ನು ಬಿಟ್ಟುಹೋದನು. ನನ್ನ ಪತಿಯು ಸ್ವರ್ಗಸ್ಥನಾದನು. ಕಾಡುದಾರಿಯಲ್ಲಿ ನಾನು ಸಂಗಡಿಗರಿಲ್ಲದಂತಾದೆನು. ಇನ್ನು ನನಗೆ ಬದುಕಿರಲು ಇಚ್ಛೆಯಿಲ್ಲ (೩-೪). ತನಗೆ ಪರದೇವತೆಯಾದ ಪತಿಯನ್ನು ಬಿಟ್ಟು ಯಾವ ಹೆಂಗಸು ತಾನೆ, ಧರ್ಮಭ್ರಷ್ಟಳಾದ ಕೈಕೇಯಿಯೊಬ್ಬಳನ್ನು ಹೊರತಾಗಿ, ಬದುಕಲು ಬಯಸಿಯಾಳು? (೫). ಲೋಭಿಯು ಹಣದ ಆಸೆಯಿಂದ ವಿಷಮಿಶ್ರವಾದ ಪಾಕವನ್ನಾದರೂ ತಿನ್ನುವನು. ಮುಂದೆ ಸಂಭವಿಸುವ ಕಷ್ಟಗಳನ್ನು ಲೆಕ್ಕಿಸುವುದಿಲ್ಲ. ಗೂನಿಯ ಮಾತಿನಿಂದ ಕೈಕೇಯಿಯು ರಘುಕುಲವನ್ನೇ ಹಾಳುಮಾಡಿದಳು (೬). ಮಾಡಬಾರದ ಕೆಲಸಕ್ಕೆ ಮಹಾರಾಜನನ್ನು ಪ್ರೇರಿಸಿ ಅವನಿಂದ ರಾಮನನ್ನು ಕಾಡಿಗೆ ಕಳಿಸಿದ್ದಾಯಿತು. ಪತ್ನೀಸಮೇತನಾಗಿ ಅವನು ಕಾಡಿಗೆ ಹೋದನೆಂಬುದನ್ನು ಕೇಳಿ ಜನಕರಾಜನು ನನ್ನಂತೆ ಎಷ್ಟು ಗೋಳಾಡುವನೊ! (೭). ನಾನು ವಿಧವೆಯಾದೆ, ಅನಾಥಳಾದೆ ಎಂಬುದು ಧಾರ್ಮಿಕನಾದ ರಾಮನಿಗೆ ತಿಳಿಯದು. ಆ ಕಮಲನೇತ್ರನು (ನನ್ನ ಪಾಲಿಗೆ ಇಲ್ಲದಂತೆ) ಜೀವಿಸಿರುವಾಗಲೆ ಕಣ್ಣಿಗೆ ಕಾಣದಂತೆ ಇಲ್ಲಿಂದ ಹೊರಟುಹೋದನು (೮). ಹಾಗೆಯೇ ಜನಕರಾಜನ ಪುತ್ರಿಯೂ

ವಿದೇಹರಾಜಸ್ಯ ಸುತಾ ತಥಾ ಸೀತಾ ತಪಸ್ವಿನೀ ।
ದುಃಖಸ್ಯಾನುಚಿತಾ ದುಃಖಂ ವನೇ ಪರ್ಯುದ್ವಿಜಿಷ್ಯತೇ ॥ ೯

ನದತಾಂ ಭೀಮಘೋಷಾಣಾಂ ನಿಶಾಸು ಮಗಪಕ್ಷಿಣಾಮ್ ।
ನಿಶಮ್ಯ ನೂನಂ ಸಂತ್ರಸ್ತಾ ರಾಘವಂ ಸಂಶ್ರಯಿಷ್ಯತಿ ॥ ೧೦

ವೃದ್ಧಶ್ಚೈವಾಲ್ಪಪುತ್ರಶ್ಚ ವೈದೇಹೀಮನುಚಿಂತಯನ್ ।
ಸೋಽಪಿ ಶೋಕಸಮಾವಿಷ್ಟೋ ನನು ತ್ಯಕ್ಷ್ಯತಿ ಜೀವಿತಮ್ ॥ ೧೧

ಸಾಹಮದ್ಯೈವ ದಿಷ್ಟಾಂತಂ ಗಮಿಷ್ಯಾಮಿ ಪತಿವ್ರತಾ ।
ಇದಂ ಶರೀರಮಾಲಿಂಗ್ಯ ಪ್ರವೇಕ್ಷ್ಯಾಮಿ ಹುತಾಶನಮ್ ॥ ೧೨

ತಾಂ ತತಃ ಸಂಪರಿಷ್ವಜ್ಯ ವಿಲಪಂತೀಂ ತಪಸ್ವಿನೀಮ್ ।
ವ್ಯಪನಿನ್ಯುಃ ಸುದುಃಖಾರ್ತಾಂ ಕೌಸಲ್ಯಾಂ ವ್ಯಾವಹಾರಿಕಾಃ ॥ ೧೩

ತೈಲದ್ರೋಣ್ಯಾಮಥಾಮಾತ್ಯಾಃ ಸಂವೇಶ್ಯ ಜಗತೀಪತಿಮ್ ।
ರಾಜ್ಞಃ ಸರ್ವಾಣ್ಯಥಾದಿಷ್ಟಾಶ್ಚಕ್ರುಃ ಕರ್ಮಾಣ್ಯನಂತರಮ್ ॥ ೧೪

ಹೊರಟುಹೋದಳು. ಏನನ್ನೂ ತಿಳಿಯದ ಕಷ್ಟವನ್ನರಿಯದ ಸೀತೆಯು ವನದಲ್ಲಿ ದುಃಖದಿಂದ ನೊಂದುಹೋಗುವಳು. ರಾತ್ರಿಯ ಹೊತ್ತು ಭಯಂಕರವಾಗಿ ಕೂಗುವ ಮೃಗಪಕ್ಷಿಗಳ ಶಬ್ದವನ್ನು ಕೇಳಿ ಅವಳು ಎಷ್ಟು ಹೆದರುವಳೊ! ಹೆದರಿ ರಾಮನನ್ನು ಬಿಡದಂತೆ ಹಿಡಿದುಕೊಳ್ಳುವಳು (೯-೧೦). ಜನಕರಾಜನಾದರೊ ವಯಸ್ಸಾದವನು. ಗಂಡು ಸಂತತಿಯಿಲ್ಲದವನು. ಅವನು ಜಾನಕಿಯನ್ನೇ ನೆನೆಸಿಕೊಂಡು ಶೋಕದಲ್ಲಿ ಮುಳುಗಿ ಪ್ರಾಣವನ್ನು ಬಿಡದಿರುವನೆ? ಪತ್ನಿಯನ್ನೇ ನಂಬಿರುವ ನಾನು ಈಗಲೇ ಶರೀರವನ್ನು ಬಿಡುವೆನು. ಪತಿಯ ದೇಹವನ್ನಾಲಿಂಗಿಸಿಕೊಂಡು ಅಗ್ನಿಯಲ್ಲಿ ಬೀಳುವೆನು'' ಎಂದು ಗೋಳಾಡುತ್ತಿದ್ದಳು (೧೧-೧೨). ಹೀಗೆ ಪತಿಯ ದೇಹವನ್ನು ಆಲಿಂಗಿಸಿಕೊಂಡು ರೋದಿಸುತ್ತಿದ್ದ ಶೋಚನೀಯಳಾದ ಕೌಸಲ್ಯೆಗೆ ವ್ಯವಹಾರದಕ್ಷರಾದ ಅಮಾತ್ಯರು ಸಮಾಧಾನವನ್ನು ಹೇಳುತ್ತ ರಾಜನ ದೇಹವನ್ನು ಅವಳಿಂದ ಬಿಡಿಸಿಕೊಂಡರು. ಅವರು ಆ ದೇಹವನ್ನು ಎಣ್ಣೆಯ ಕೊಪ್ಪರಿಗೆಯಲ್ಲಿ ಮಲಗಿಸಿದರು. ಅನಂತರ ನಡೆಸಬೇಕಾದ ರಾಜಕಾರ್ಯವನ್ನು ವಸಿಷ್ಠಾದಿ ಮುನಿಗಳ

ನ ತು ಸಂಕಾಲನಂ ರಾಜ್ಞೋ ವಿನಾ ಪುತ್ರೇಣ ಮಂತ್ರಿಣಃ ।
ಸರ್ವಜ್ಞಾಃ ಕರ್ತುಮೀಷುಸ್ತೇ ತತೋ ರಕ್ಷಂತಿ ಭೂಮಿಪಮ್ ॥ ೧೫

ತೈಲದ್ರೋಣ್ಯಾಂ ತು ಸಚಿವೈಃ ಶಾಯಿತಂ ತಂ ನರಾಧಿಪಮ್ ।
ಹಾ ಮೃತೋಽಯಮಿತಿ ಜ್ಞಾತ್ವಾ ಸ್ತ್ರಿಯಸ್ತಾಃ ಪರ್ಯವಾರಯನ್ ॥೧೬

ಬಾಹೂನುದ್ಯಮ್ಯ ಕೃಪಣಾ ನೇತ್ರ ಪ್ರಸ್ರವಣೈರ್ಮುಖೈಃ ।
ರುದಂತ್ಯಃ ಶೋಕಸಂತಪ್ತಾಃ ಕರುಣಂ ಪರ್ಯದೇವಯನ್ ॥ ೧೭

ಹಾ ಮಹಾರಾಜ ರಾಮೇಣ ಸತತಂ ಪ್ರಿಯವಾದಿನಾ ।
ವಿಹೀನಾಃ ಸತ್ಯಸಂಧೇನ ಕಿಮರ್ಥಂ ವಿಜಹಾಸಿ ನಃ ॥ ೧೮

ಕೈಕೇಯ್ಯಾ ದುಷ್ಟಭಾವಾಯಾ ರಾಘವೇಣ ವಿಯೋಜಿತಾಃ ।
ಕಥಂ ಪತಿಘ್ನ್ಯಾ ವತ್ಸ್ಯಾಮಃ ಸಮೀಪೇ ವಿಧವಾ ವಯಮ್ ॥ ೧೯

ಸ ಹಿ ನಾಥಃ ಸದಾಸ್ಮಾಕಂ ತವ ಚ ಪ್ರಭುರಾತ್ಮವಾನ್ ।
ವನಂ ರಾಮೋ ಗತಃ ಶ್ರೀಮಾನ್ ವಿಹಾಯ ನೃಪತಿಶ್ರಿಯಮ್ ॥ ೨೦

ಸೂಚನೆಯಂತೆ ನಿರ್ವಹಿಸಿದರು (೧೩-೧೪). ಆ ಮಂತ್ರಿಗಳು ಸರ್ವಧರ್ಮವನ್ನೂ ತಿಳಿದವರಾದ್ದರಿಂದ ಪುತ್ರನಿಲ್ಲದೆ ಮಹಾರಾಜನ ಅಪರ ಸಂಸ್ಕಾರವನ್ನು ನಡೆಸಬಾರದೆಂದು ನಿಶ್ಚಯಿಸಿ ರಾಜನ ಶರೀರವನ್ನು ಕೆಡದಂತೆ ರಕ್ಷಿಸಿಟ್ಟರು (೧೫). ಮಂತ್ರಿಗಳು ದಶರಥನನ್ನು ಎಣ್ಣೆಯ ಕೊಪ್ಪರಿಗೆಯಲ್ಲಿ ಮಲಗಿಸಲು, ಅದನ್ನು ತಿಳಿದು ಸ್ತ್ರೀಯರ ದುಃಖವು ಮರುಕಳಿಸಿ 'ಅಯ್ಯೋ!' ಮಹಾರಾಜನು ಸತ್ತುಹೋದನಲ್ಲ! ಎಂದು ಅಳುತ್ತ ಆ ತೈಲದ್ರೋಣಿಯನ್ನು ಸುತ್ತುಗಟ್ಟಿದರು. ಅವರ ಕಣ್ಣುಗಳಿಂದ ಕಂಬನಿಯು ನದಿಯಂತೆ ಧುಮುಕಿ ಮುಖದ ಮೇಲೆ ಹರಿಯುತ್ತಿತ್ತು. ದುಃಖದಿಂದ ಬೆಂದುಹೋದ ಆ ಸ್ತ್ರೀಯರು ಕೈಗಳನ್ನು ಮೇಲಕ್ಕೆತ್ತಿ ಕರುಣಾಪೂರ್ಣವಾಗಿ ಗೋಳಾಡಿದರು (೧೬-೧೭) : "ಹಾ ಮಹಾರಾಜ! ಸದಾ ಪ್ರಿಯಂವದನೂ ಸತ್ಯಸಂಧನೂ ಆದ ರಾಮನು ನಮ್ಮನ್ನು ಮೊದಲೇ ತೊರೆದುಹೋದನು. ಈಗ ನೀನೂ ನಮ್ಮನ್ನು ಏಕೆ ತೊರೆದುಬಿಡುವೆ? ವಿಧವೆಯರಾದ ನಾವು ರಾಮ ನಿಲ್ಲದಾಗ ಇಲ್ಲಿ ಇರಲು ಸಾಧ್ಯವೆ? ಕೆಟ್ಟಬುದ್ಧಿಯವಳೂ ಪತಿಘಾತುಕಿಯೂ ಆದ ಕೈಕೇಯಿಯ ಸಮೀಪದಲ್ಲಿ ನಮಗೆ ಬಾಳಲು ಸಾಧ್ಯವೇ? (೧೮-೧೯). ಧೀರನೂ

ತ್ವಯಾ ತೇನ ಚ ವೀರೇಣ ವಿನಾ ವ್ಯಸನಮೋಹಿತಾಃ ।
ಕಥಂ ವಯಂ ನಿವತ್ಸ್ಯಾಮಃ ಕೈಕೇಯ್ಯಾ ಚ ವಿಧೂಷಿತಾಃ ॥ ೨೧

ಯಯಾ ತು ರಾಜಾ ರಾಮಶ್ಚ ಲಕ್ಷ್ಮಣಶ್ಚ ಮಹಾಬಲಃ ।
ಸೀತಯಾ ಸಹ ಸಂತ್ಯಕ್ತಾಃ ಸಾ ಕಮನ್ಯಂ ನ ಹಾಸ್ಯತಿ ॥ ೨೨

ತಾ ಬಾಷ್ಪೇಣ ಚ ಸಂವೀತಾಃ ಶೋಕೇನ ವಿಪುಲೇನ ಚ ।
ವ್ಯವೇಷ್ಟಂತ ನಿರಾನಂದಾ ರಾಘವಸ್ಯ ವರಸ್ತ್ರಿಯಃ ॥ ೨೩

ನಿಶಾ ಚಂದ್ರ ವಿಹೀನೇವ ಸ್ತ್ರೀವ ಭರ್ತೃವಿವರ್ಜಿತಾ ।
ಪುರೀ ನಾರಾಜತಾಯೋಧ್ಯಾ ವಿನಾ ರಾಜ್ಞಾ ಮಹಾತ್ಮನಾ ॥ ೨೪

ಬಾಷ್ಪಪರ್ಯಾಕುಲಜನಾ ಹಾಹಾಭೂತಕುಲಾಂಗನಾ ।
ಶೂನ್ಯಚತ್ವರವೇಶ್ಮಾಂತಾ ನ ಬಭ್ರಾಜ ಯಥಾಪುರಮ್ ॥ ೨೫

ಪ್ರಭಾವಶಾಲಿಯೂ ಆದ ರಾಮನು ನಿನಗೂ ನಮ್ಮೆಲ್ಲರಿಗೂ ದಿಕ್ಕಾಗಿದ್ದನು. ಆ ತೇಜಸ್ವಿಯು ರಾಜಲಕ್ಷ್ಮಿಯನ್ನು ತ್ಯಜಿಸಿ ಅರಣ್ಯಕ್ಕೆ ಹೋಗಿಬಿಟ್ಟನು! ವೀರನಾದ ಅವನಿಲ್ಲದಾಗ ನೀನೂ ಬಿಟ್ಟುಹೋದರೆ ಕಷ್ಟಕ್ಕೆ ಸಿಕ್ಕಿದ ನಾವು ಕೈಕೇಯಿಯ ತಿರಸ್ಕಾರಕ್ಕೆ ಒಳಗಾಗಿ ಬಾಳಬಲ್ಲೆವೆ? (೨೦-೨೧). ಅವಳು ಪತಿಯಾದ ಮಹಾರಾಜನನ್ನು ಧಿಕ್ಕರಿಸಿದಳು. ಮಹಾಬಲಶಾಲಿಗಳಾದ ರಾಮಲಕ್ಷ್ಮಣರನ್ನೂ ಸೀತೆಯನ್ನೂ ಕಾಡಿಗೆ ಕಳುಹಿಸಿದಳು. ಅಂಥವಳು ಇತರರನ್ನು ಕಾಡದೆ ಬಿಡುವಳೆ ?'' ಎಂದು ವಿಲಪಿಸಿದರು (೨೨). ಹೀಗೆ ದಶರಥನ ಪತ್ನಿಯರು ವಿಪುಲವಾದ ಶೋಕದಿಂದ ಕಂಗೆಟ್ಟು ಕಂಬನಿಯನ್ನು ಮಿಡಿಯುತ್ತ ನೆಲದಲ್ಲಿ ಹೊರಳಾಡಿದರು. ಮಹಾಭಾಗನಾದ ದಶರಥ ಭೂಪಾಲನು ಮೃತನಾದ್ದರಿಂದ ಅಯೋಧ್ಯಾನಗರಿಯು ತನ್ನ ಶೋಭೆಯನ್ನು ಕಳೆದು ಕೊಂಡಿತು. ಚಂದ್ರನಿಲ್ಲದ ರಾತ್ರಿಯಂತಾಯಿತು. ಗಂಡನಿಲ್ಲದ ಹೆಂಗಸಿನಂತಾಯಿತು (೨೩-೨೪). ಪೌರಜನರು ಕಣ್ಣೀರು ಸುರಿಸುತ್ತಿದ್ದರು. ಸ್ತ್ರೀಯರು ಹಾಹಾಕಾರ ಮಾಡಿ ರೋದಿಸುತ್ತಿದ್ದರು. ಮನೆಯ ಅಂಗಳವನ್ನು ಗುಡಿಸಲಿಲ್ಲ, ಬಾಗಿಲನ್ನು ಬಳಿಯಲಿಲ್ಲ, ಮೊದಲಿನಂತೆ ಅಯೋಧ್ಯೆಯು ಕಂಗೊಳಿಸಲಿಲ್ಲ (೨೫).

ಗತೇ ತು ಶೋಕಾತ್ ತ್ರಿದಿವಂ ನರಾಧಿಪೇ
ಮಹೀತಲಸ್ಥಾಸು ನೃಪಾಂಗನಾಸು ಚ ।
ನಿವೃತ್ತಚಾರಃ ಸಹಸಾ ಗತೋ ರವಿಃ
ಪ್ರವೃತ್ತಚಾರಾ ರಜನೀ ಹ್ಯುಪಸ್ಥಿತಾ ॥ ೨೬

ಋತೇ ತು ಪುತ್ರಾದ್ದಹನಂ ಮಹೀಪತೇ -
ರ್ನ ರೋಚಯಂತೇ ಸುಹೃದಃ ಸಮಾಗತಾಃ ।
ಇತೀವ ತಸ್ಮಿನ್ ಶಯನೇ ನ್ಯವೇಶಯನ್
ವಿಚಿಂತ್ಯ ರಾಜಾನಮಚಿಂತ್ಯದರ್ಶನಮ್ ॥ ೨೭

ಗತಪ್ರಭಾ ದ್ಯೌರಿವ ಭಾಸ್ಕರಂ ವಿನಾ
ವ್ಯಪೇತನಕ್ಷತ್ರಗಣೇವ ಶರ್ವರೀ ।
ಪುರೀ ಬಭಾಸೇ ರಹಿತಾ ಮಹಾತ್ಮನಾ
ನ ಚಾಸ್ರಕಂಠಾಕುಲಮಾರ್ಗಚತ್ವರಾ ॥ ೨೮

ನರಾಶ್ಚ ನಾರ್ಯಶ್ಚ ಸಮೇತ್ಯ ಸಂಘಶೋ
ವಿಗರ್ಹಮಾಣಾ ಭರತಸ್ಯ ಮಾತರಮ್ ।

ದಶರಥನೃಪಾಲನು ಪುತ್ರಶೋಕದಿಂದ ಸ್ವರ್ಗಸ್ಥನಾಗಿದ್ದನು. ರಾಜಸ್ತ್ರೀಯರು ಶೋಕದಿಂದ ನೆಲದ ಮೇಲೆ ಹೊರಳಾಡುತ್ತಿದ್ದರು. ಸೂರ್ಯನು ತನ್ನ ಸಂಚಾರವನ್ನು ಮುಗಿಸಿ ಅಸ್ತಂಗತನಾದನು. ರಜನಿಯು ಬಂದು ತನ್ನ ಸಂಚಾರವನ್ನಾರಂಭಿಸಿದಳು (೨೬). ರಾಜನ ಬಂಧುಮಿತ್ರರು ಬಂದು ಪುತ್ರನೊಬ್ಬನೂ ಇಲ್ಲದೆ ಇರುವಾಗ ದಶರಥನಿಗೆ ಅಪರಸಂಸ್ಕಾರವನ್ನು ಮಾಡುವುದು ಸರಿಯಲ್ಲವೆಂದು ನಿಶ್ಚಯಿಸಿ, ಆ ದೇಹವನ್ನು ತೈಲದ್ರೋಣಿಯಲ್ಲಿಯೇ ಇರಿಸಿದರು (೨೭). ಪೌರಜನರು ರಾಜಮಾರ್ಗಗಳಲ್ಲಿಯೂ ಚೌಕಗಳಲ್ಲಿಯೂ ಗುಂಪುಗೂಡಿ ಕಣ್ಣೀರಿನಿಂದ ತೊದಲುತ್ತ ಮಾತನಾಡುತ್ತಿದ್ದರು. ಮಹಾತ್ಮನಾದ ದಶರಥನಿಲ್ಲದ್ದರಿಂದ ಆ ನಗರಿಯು ಸೂರ್ಯನಿಲ್ಲದ ಗಗನದಂತೆಯೂ ತಾರಾಪುಂಜವಿಲ್ಲದ ರಜನಿಯಂತೆಯೂ ಕಾಂತಿಹೀನವಾಯಿತು. (೨೮). ಆ ಪಟ್ಟಣದಲ್ಲಿ ಗಂಡಸರೂ ಹೆಂಗಸರೂ ಅಲ್ಲಲ್ಲಿ

ತದಾ ನಗರ್ಯಾಂ ನರದೇವಸಂಕ್ಷಯೇ
ಬಭೂವುರಾರ್ತಾ ನ ಚ ಶರ್ಮ ಲೇಭಿರೇ ॥ ೨೯

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಷಟ್‌ಷಷ್ಟಿತಮಃ ಸರ್ಗಃ

ಸಪ್ತಷಷ್ಟಿತಮಃ ಸರ್ಗಃ

ಅರಾಜಕದುರವಸ್ಥಾವರ್ಣನಮ್

ಆಕ್ರಂದಿತನಿರಾನಂದಾ ಸಾಶ್ರುಕಂಠಜನಾಕುಲಾ ।
ಅಯೋಧ್ಯಾಯಾಮವತತಾ ಸಾ ವ್ಯತೀಯಾಯ ಶರ್ವರೀ ॥ ೧

ವ್ಯತೀತಾಯಾಂ ತು ಶರ್ವರ್ಯಾಮಾದಿತ್ಯಸ್ಯೋದಯೇ ತತಃ ।
ಸಮೇತ್ಯ ರಾಜಕರ್ತಾರಃ ಸಭಾಮೀಯುರ್ದ್ವಿಜಾತಯಃ ॥ ೨

ಮಾರ್ಕಂಡೇಯೋಽಥ ಮೌದ್ಗಲ್ಯೋ ವಾಮದೇವಶ್ಚ ಕಾಶ್ಯಪಃ ।
ಕಾತ್ಯಾಯನೋ ಗೌತಮಶ್ಚ ಜಾಬಾಲಿಶ್ಚ ಮಹಾಯಶಾಃ ॥ ೩

ಗುಂಪಾಗಿ ಸೇರಿ ಭರತನ ತಾಯಿಯನ್ನು ಬಯ್ಯುತ್ತಿದ್ದರು. ದಶರಥನು ಮೃತನಾದನೆಂದು ಪ್ರಜೆಗಳೆಲ್ಲರೂ ದುಃಖಿತರಾದರು. ಯಾರ ಮನಸ್ಸಿನಲ್ಲಿಯೂ ಸಂತೋಷದ ಸುಳಿವೇ ಇರಲಿಲ್ಲ (೨೯).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಅರುವತ್ತಾರನೆಯ ಸರ್ಗ

ಸರ್ಗ ೬೭

ರಾಜನಿಲ್ಲದ ರಾಷ್ಟ್ರದಲ್ಲಿ ಸಂಭವಿಸುವ ದುರವಸ್ಥೆಯ ವರ್ಣನೆ.

ಅಯೋಧ್ಯೆಯಲ್ಲಿ ರೋದನ ಧ್ವನಿಯು ವ್ಯಾಪಿಸಿತ್ತು. ಜನರು ವಿಷಾದದಿಂದ ಕಣ್ಣೀರು ಬಿಡುತ್ತ ಗದ್ಗದ ಸ್ವರದಿಂದ ಮಾತನಾಡಿಕೊಳ್ಳುತ್ತಿದ್ದರು. ಬಹುದೀರ್ಘ ಕಾಲದಂತಿದ್ದ ಆ ರಾತ್ರಿಯು ಹೇಗೋ ಕಳೆಯಿತು. ಸೂರ್ಯೋದಯವೂ ಆಯಿತು. ರಾಜ್ಯಕ್ಕೆ ಮುಂದಿನ ರಾಜನನ್ನು ಗೊತ್ತು ಮಾಡುವ ಉದ್ದೇಶದಿಂದ ಪ್ರಮುಖರಾದ ಬ್ರಾಹ್ಮಣರು ಸಭೆ ಸೇರಿದರು (೧-೨).

ಏತೇ ದ್ವಿಜಾಃ ಸಹಾಮಾತ್ಯೈಃ ಪೃಥಗ್ವಾಚಮುದೈರಯನ್ ।
ವಸಿಷ್ಠಮೇವಾಭಿಮುಖಾಃ ಶ್ರೇಷ್ಠಂ ರಾಜಪುರೋಹಿತಮ್ ॥ ೪

ಅತೀತಾ ಶರ್ವರೀ ದುಃಖಾದ್ಯಾ ನೋ ವರ್ಷ ಶತೋಪಮಾ ।
ಅಸ್ಮಿನ್ ಪಂಚತ್ವಮಾಪನ್ನೇ ಪುತ್ರಶೋಕೇನ ಪಾರ್ಥಿವೇ ॥ ೫

ಸ್ವರ್ಗತಶ್ಚ ಮಹಾರಾಜೋ ರಾಮಶ್ಚಾರಣ್ಯಮಾಶ್ರಿತಃ ।
ಲಕ್ಷ್ಮಣಶ್ಚಾಪಿ ತೇಜಸ್ವೀ ರಾಮೇಣೈವ ಗತಃ ಸಹ ॥ ೬

ಉಭೌ ಭರತಶತ್ರುಘ್ನೌ ಕೇಕಯೇಷು ಪರಂತಪೌ ।
ಪುರೇ ರಾಜಗೃಹೇ ರಮ್ಯೇ ಮಾತಾಮಹನಿವೇಶನೇ ॥ ೭

ಇಕ್ಷ್ವಾಕೂಣಾಮಿಹಾದ್ಯೈವ ರಾಜಾ ಕಶ್ಚಿದ್ವಿಧೀಯತಾಮ್ ।
ಅರಾಜಕಂ ಹಿ ನೋ ರಾಷ್ಟ್ರಂ ವಿನಾಶಂ ಸಮುವಾಪ್ನುಯಾತ್ ॥ ೮

ನಾರಾಜಕೇ ಜನಪದೇ ವಿದ್ಯುನ್ಮಾಲೀ ಮಹಾಸ್ವನಃ ।
ಅಭಿವರ್ಷತಿ ಪರ್ಜನ್ಯೋ ಮಹೀಂ ದಿವ್ಯೇನ ವಾರಿಣಾ ॥ ೯

ರಾಜಪುರೋಹಿತರೂ ಸರ್ವಶ್ರೇಷ್ಠರೂ ಆದ ವಸಿಷ್ಠಮಹರ್ಷಿಗಳು ಅಗ್ರಸ್ಥಾನದಲ್ಲಿದ್ದರು. ಅವರನ್ನುದ್ದೇಶಿಸಿ ಮಾರ್ಕಂಡೇಯ, ಮೌದ್ಗಲ್ಯ, ವಾಮದೇವ, ಕಾಶ್ಯಪ, ಕಾತ್ಯಾಯನ, ಗೌತಮ, ಜಾಬಾಲಿ ಎಂಬ ದ್ವಿಜೋತ್ತಮರೂ ಮಂತ್ರಿಗಳೂ ತಮ್ಮ ಅಭಿಪ್ರಾಯಗಳನ್ನು ಹೇಳಿದರು (೩-೪). ಅವರೆಲ್ಲರ ಅಭಿಪ್ರಾಯವು ಹೀಗಿತ್ತು : ''ವಸಿಷ್ಠ ಮಹರ್ಷಿಗಳೆ, ದಶರಥಮಹಾರಾಜನು ಪುತ್ರಶೋಕದಿಂದ ಸ್ವರ್ಗಸ್ಥನಾದನು. ನಿನ್ನೆಯ ರಾತ್ರಿಯನ್ನು ನೂರು ವರ್ಷಗಳನ್ನು ಕಳೆದಂತೆ ದುಃಖದಿಂದ ಕಳೆದೆವು. ಇತ್ತ ಮಹಾರಾಜನು ದಿವಂಗತನಾದನು. ಅತ್ತ ಶ್ರೀರಾಮನು ಅರಣ್ಯಕ್ಕೆ ಹೋದನು. ತೇಜಸ್ವಿಯಾದ ಲಕ್ಷ್ಮಣನೂ ರಾಮನೊಡನೆ ಹೊರಟುಹೋದನು (೫-೬). ವೀರಾಗ್ರಣಿಗಳಾದ ಭರತಶತ್ರುಘ್ನರಿಬ್ಬರೂ ಕೇಕಯ ದೇಶದಲ್ಲಿರುವ ರಮ್ಯವಾದ ರಾಜಗೃಹಕ್ಕೆ ಹೋಗಿ ಮಾತಾಮಹನ ಮನೆಯಲ್ಲಿ ಇದ್ದುಬಿಟ್ಟಿದ್ದಾರೆ. ಇಕ್ಷ್ವಾಕುವಂಶದಲ್ಲಿ ಜನಿಸಿದ ಒಬ್ಬನನ್ನು ರಾಜ್ಯಾಧಿಪತಿಯೆಂದು ಈಗಲೇ ಗೊತ್ತುಮಾಡಬೇಕು. ಇಲ್ಲದಿದ್ದರೆ ನಮ್ಮ ರಾಷ್ಟ್ರವು ಅರಾಜಕವಾಗಿ ನಾಶವಾದೀತು (೭-೮). ರಾಷ್ಟ್ರವು ಅರಾಜಕವಾದರೆ ಮೇಘವು ಮಿಂಚದು, ಗುಡುಗದು, ಮಳೆಯನ್ನುಸುರಿಸದು. ಬಿತ್ತನೆಯ ಕೆಲಸವು ನಡೆಯದು.

ನಾರಾಜಕೇ ಜನಪದೇ ಬೀಜಮುಷ್ಟಿಃ ಪ್ರಕೀರ್ಯತೇ ।
ನಾರಜಕೇ ಪಿತುಃ ಪುತ್ರೋ ಭಾರ್ಯಾ ವಾ ವರ್ತತೇ ವಶೇ ॥ ೧೦

ನಾರಾಜಕ ಧನಂ ನಾಸ್ತಿ ನಾಸ್ತಿ ಭಾರ್ಯಾಪ್ಯರಾಜಕೇ ।
ಇದಮತ್ಯಾಹಿತಂ ಚಾನ್ಯತ್ ಕುತಃ ಸತ್ಯಮರಾಜಕೇ ॥ ೧೧

ನಾರಜಕೇ ಜನಪದೇ ಪ್ರವಿಶಂತಿ ಸಭಾಂ ನರಾಃ ।
ಉದ್ಯಾನಾನಿ ಚ ರಮ್ಯಾಣಿ ಹೃಷ್ಟಾಃ ಪುಣ್ಯಗ್ರಹಾಣಿ ಚ ॥ ೧೨

ನಾರಜಕೇ ಜನಪದೇ ಯಜ್ಞಶೀಲಾ ದ್ವಿಜಾತಯಃ ।
ಸತ್ರಾಣ್ಯನ್ವಾಸತೇ ದಾಂತಾ ಬ್ರಾಹ್ಮಣಾಃ ಸಂಶಿತವ್ರತಾಃ ॥ ೧೩

ನಾರಾಜಕೇ ಜನಪದೇ ಮಹಾಯಜ್ಞೇಷು ಯಜ್ವನಃ ।
ಬ್ರಾಹ್ಮಣಾ ವಸುಸಂಪನ್ನಾ ವಿಸೃಜಂತ್ಯಾಪ್ತದಕ್ಷಿಣಾಃ ॥ ೧೪

ನಾರಾಜಕೇ ಜನಪದೇ ಪ್ರಹೃಷ್ಟನಟವರ್ತಕಾಃ ।
ಉತ್ಸವಾಶ್ಚ ಸಮಾಜಾಶ್ಚ ವರ್ಧಂತೇ ರಾಷ್ಟ್ರವರ್ಧನಾಃ ॥ ೧೫

ಅಂಥ ದೇಶದಲ್ಲಿ ತಂದೆಯ ಮಾತನ್ನು ಮಗನು ಕೇಳುವುದಿಲ್ಲ. ಗಂಡನ ಮಾತನ್ನು ಹೆಂಡತಿ ಕೇಳುವುದಿಲ್ಲ (೯-೧೦). ಅರಾಜಕವಾದ ದೇಶದಲ್ಲಿ ಧನಸಮೃದ್ಧಿ ಇರುವುದಿಲ್ಲ. ಹೆಂಡತಿಯನ್ನು ಪೋಷಿಸುವುದೇ ಅಶಕ್ಯ. ಇನ್ನೊಂದು ಮಹಾಭಯವೇನೆಂದರೆ - ಅಲ್ಲಿ ಕ್ರಯವಿಕ್ರಯಾದಿ ವ್ಯವಹಾರಗಳು ಸತ್ಯಮಾರ್ಗದಲ್ಲಿ ನಡೆಯುವುದಿಲ್ಲ. ನ್ಯಾಯಾಲಯವು ನಡೆಯುವುದಿಲ್ಲ. ಭಯದಿಂದ ಉದ್ಯಾನವನಗಳಲ್ಲಿಯೂ ಜನರು ಸಂಚರಿಸುವುದಿಲ್ಲ. ದೇವಾಲಯಗಳೇ ಮೊದಲಾದ ಪುಣ್ಯಗೃಹಗಳನ್ನು ಯಾರೂ ನಿರ್ಮಿಸುವುದಿಲ್ಲ (೧೧-೧೨). ರಾಜನಿಲ್ಲದಿದ್ದರೆ ನಿಷ್ಠರಾದ ದ್ವಿಜರೂ ಸಹ ದುಷ್ಟರ ಭಯದಿಂದ ಯಾಗಗಳನ್ನು ಆಚರಿಸುವುದಿಲ್ಲ. ಧನಿಕರೂ ಕೂಡ ಮಹಾಯಜ್ಞಗಳಲ್ಲಿ ಋತ್ವಿಜರಿಗೆ ಬಹಳ ದಕ್ಷಿಣೆಯನ್ನು ಕೊಡುವುದಿಲ್ಲ. ನಟನರ್ತಕರಿಗೂ ಸಂತೋಷವಿರುವುದಿಲ್ಲ. ರಾಷ್ಟ್ರಕ್ಕೆ ಹಿತಕರವಾದ

ನಾರಾಜಕೇ ಜನಪದೇ ಸಿದ್ಧಾರ್ಥಾ ವ್ಯವಹಾರಿಣಃ ।
ಕಥಾಭಿರನುರಜ್ಯಂತೇ ಕಥಾಶೀಲಾಃ ಕಥಾಪ್ರಿಯೈಃ ॥ ೧೬

ನಾರಾಜಕೇ ಜನಪದೇ ಉದ್ಯಾನಾನಿ ಸಮಾಗತಾಃ ।
ಸಾಯಾಹ್ನೇ ಕ್ರೀಡಿತುಂ ಯಾಂತಿ ಕುಮಾರ್ಯೋ ಹೇಮಭೂಷಿತಾಃ ॥ ೧೭

ನಾರಾಜಕೇ ಜನಪದೇ ವಾಹನೈಃ ಶೀಘ್ರಗಾಮಿಭಿಃ ।
ನರಾ ನಿರ್ಯಾಂತ್ಯರಣ್ಯಾನಿ ನಾರೀಭಿಃ ಸಹ ಕಾಮಿನಃ ॥ ೧೮

ನಾರಾಜಕೇ ಜನಪದೇ ಧನವಂತಃ ಸುರಕ್ಷಿತಾಃ ।
ಶೇರತೇ ವಿವೃತದ್ವಾರಾಃ ಕೃಷಿಗೋರಕ್ಷ ಜೀವಿನಃ ॥ ೧೯

ನಾರಾಜಕೇ ಜನಪದೇ ಬದ್ಧಘಂಟಾ ವಿಷಾಣಿನಃ ।
ಅಟಂತಿ ರಾಜಮಾರ್ಗೇಷು ಕುಂಜರಾಃ ಷಷ್ಟಿಹಾಯನಾಃ ॥ ೨೦

ನಾರಾಜಕೇ ಜನಪದೇ ಶರಾನ್ ಸಂತತಮಸ್ಯತಾಮ್ ।
ಶ್ರೂಯತೇ ತಲನಿರ್ಘೋಷ ಇಷ್ವಸ್ತ್ರಾಣಾಮುಪಾಸನೇ ॥ ೨೧

ನಾರಾಜಕೇ ಜನಪದೇ ವಣಿಜೋ ದೂರಗಾಮಿನಃ ।
ಗಚ್ಛಂತಿ ಕ್ಷೇಮಮಧ್ವಾನಂ ಬಹುಪಣ್ಯಸಮಾಚಿತಾಃ ॥ ೨೨

ವಿನೋದಗೋಷ್ಠಿಗಳು ನಡೆಯುವುದಿಲ್ಲ (೧೪-೧೫). ವಾಣಿಜ್ಯೋದ್ಯಮಿಗಳ ವ್ಯವಹಾರವು ಫಲಿಸುವುದಿಲ್ಲ. ಪುರಾಣಾದಿ ಸತ್ಕಥಾ ವಿನೋದಿಗಳು ಶ್ರೋತೃಗಳಿಲ್ಲದೆ ಬೇಸರಪಡುತ್ತಾರೆ. ರಾಜನಿಲ್ಲದ ರಾಷ್ಟ್ರದಲ್ಲಿ ಕುಮಾರಿಯರು ಅಲಂಕರಿಸಿಕೊಂಡು ಸಾಯಂಕಾಲದ ಹೊತ್ತು ಹೂದೋಟಗಳಿಗೆ ಹೋಗಲು ಅಂಜುವರು (೧೬-೧೭). ಕಾಮಿಗಳಾದ ಯುವಕರು ತಮ್ಮ ವನಿತೆಯೊಡನೆ ವಾಹನಾರೂಢರಾಗಿ ಹೊರಟು ವನದಲ್ಲಿ ಕ್ರೀಡಿಸಲು ಭಯಪಡುವರು. ಧನಿಕರಿಗೆ ರಕ್ಷಣೆ ಇರುವುದಿಲ್ಲ. ಅವರು ನಿದ್ರಿಸುವುದೇ ಕಷ್ಟವಾಗುವುದು. ಕೃಷಿಕರೂ ಗೋಪಾಲಕರೂ ಬಾಗಿಲನ್ನು ತೆರೆದು ಮಲಗಲಾರರು (೧೮-೧೯). ರಾಜನಿಲ್ಲದ ರಾಜ್ಯದಲ್ಲಿ ಕೋರೆಯ ಹಲ್ಲುಗಳು ಬೆಳೆದಿರುವ ಅರುವತ್ತು ವರ್ಷದ ಆನೆಗಳು ಕೊರಳಿನ ಘಂಟೆಯನ್ನು ಅಲ್ಲಾಡಿಸುತ್ತ ರಾಜಮಾರ್ಗದಲ್ಲಿ ಸಂಚರಿಸಲಾರವು. ಸತತವೂ ಬಾಣಗಳನ್ನೆಸೆದು ಧನುರ್ವಿದ್ಯೆಯನ್ನು ಕಲಿಯುವ ಯೋಧರ ಧನುಷ್ಟಂಕಾರಗಳು ಕೇಳಿಸುವುದೇ ಇಲ್ಲ (೨೦-೨೧). ದೂರ

ನಾರಾಜಕೇ ಜನಪದೇ ಚರತ್ಯೇಕಚರೋ ವಶೀ ।
ಭಾವಯನ್ನಾತ್ಮನಾತ್ಮಾನಂ ಯತ್ರ ಸಾಯಂಗೃಹೋ ಮುನಿಃ ॥ ೨೩

ನಾರಾಜಕೇ ಜನಪದೇ ಯೋಗಕ್ಷೇಮಃ ಪ್ರವರ್ತತೇ ।
ನ ಚಾಪ್ಯರಾಜಕೇ ಸೇನಾ ಶತ್ರೂನ್ ವಿಷಹತೇ ಯುಧಿ ॥ ೨೪

ನಾರಾಜಕೇ ಜನಪದೇ ಹೃಷ್ಟೈಃ ಪರಮವಾಜಿಭಿಃ ।
ನರಾಃ ಸಂಯಾಂತಿ ಸಹಸಾ ರಥೈಶ್ಚ ಪರಿಮಂಡಿತಾಃ ॥ ೨೫

ನಾರಾಜಕೇ ಜನಪದೇ ನರಾಃ ಶಾಸ್ತ್ರವಿಶಾರದಾಃ ।
ಸಂವಾದಂತೋಽವತಿಷ್ಠಂತೇ ವನೇಷೂಪವನೇಷು ಚ ॥ ೨೬

ನಾರಾಜಕೇ ಜನಪದೇ ಮಾಲ್ಯಮೋದಕದಕ್ಷಿಣಾಃ ।
ದೇವತಾಭ್ಯರ್ಚನಾರ್ಥಾಯ ಕಲ್ಪ್ಯಂತೇ ನಿಯತೈರ್ಜನೈಃ ॥ ೨೭

ನಾರಾಜಕೇ ಜನಪದೇ ಚಂದನಾಗರುರೂಷಿತಾಃ ।
ರಾಜಪುತ್ರಾ ವಿರಾಜಂತೇ ವಸಂತ ಇವ ಶಾಖಿನಃ ॥ ೨೮

ಹೋಗಬೇಕಾದ ವರ್ತಕರು ವಿಕ್ರಯವಸ್ತುಗಳನ್ನು ತೆಗೆದುಕೊಂಡು ದಾರಿಯಲ್ಲಿ ಕ್ಷೇಮವಾಗಿ ಹೋಗಲಾಗುವುದಿಲ್ಲ. ಹೊತ್ತು ಮುಳುಗಿದಲ್ಲಿಯೇ ಮನೆಯೆಂದು ಭಾವಿಸುವ ಜಿತೇಂದ್ರಿಯನಾದ ಯತಿಯೂ ಸಹ ಭಗವಂತನನ್ನು ಧ್ಯಾನಿಸುತ್ತ ಏಕಾಕಿಯಾಗಿ ಸಂಚರಿಸಲು ಸಾಧ್ಯವಾಗುವುದಿಲ್ಲ (೨೨-೨೩). ಜನರ ಯೋಗಕ್ಷೇಮಗಳು ಸರಿಯಾಗಿ ನಡೆಯುವುದಿಲ್ಲ. (ನಿಯಾಮಕನೇ ಇಲ್ಲದ್ದರಿಂದ) ಸೇನೆಯು ಯುದ್ಧದಲ್ಲಿ ಶತ್ರುಗಳನ್ನು ಎದುರಿಸಿ ಹೋರಾಡುವುದಿಲ್ಲ. ರಾಜನಿಲ್ಲದಿದ್ದರೆ ಜನರು ಕುದುರೆಗಳ ಮೇಲೂ ರಥಗಳಲ್ಲಿಯೂ ಅಲಂಕೃತರಾಗಿ ಸಂಚರಿಸುವುದನ್ನೇ ಬಿಡುವರು (೨೪-೨೫). ಶಾಸ್ತ್ರಜ್ಞರಾದ ವಿದ್ವಾಂಸರು ಆಶ್ರಮಗಳಲ್ಲಿಯೂ ಉಪವನಗಳಲ್ಲಿಯೂ ಶಾಸ್ತ್ರೀಯ ವಿಷಯವನ್ನು ಕುರಿತು ನೆಮ್ಮದಿಯಿಂದ ಉಪನ್ಯಾಸ ಮಾಡುವುದಿಲ್ಲ. ಅರಾಜಕವಾದ ರಾಜ್ಯದಲ್ಲಿ ದೇವತಾರ್ಚನೆಗೋಸ್ಕರ ಹೂಮಾಲೆಗಳನ್ನೂ ಭಕ್ಷ್ಯಗಳನ್ನೂ ದಕ್ಷಿಣೆಗಳನ್ನೂ ಸಿದ್ಧಪಡಿಸಲು ಜನರು ಹಿಂಜರಿಯುವರು (೨೬-೨೭). ರಾಜಕುಮಾರರು ಚಂದನಾಗರುಗಳಿಂದ ಭೂಷಿತರಾಗಿ ವಸಂತಕಾಲದ ವೃಕ್ಷಗಳಂತೆ ಉಲ್ಲಾಸವನ್ನುಂಟು ಮಾಡುವುದಿಲ್ಲ.

ಯಥಾಹ್ಯನುದಕಾ ನದ್ಯೋ ಯಥಾ ವಾಪ್ಯತೃಣಂ ವನಮ್ ।
ಅಗೋಪಾಲಾ ಯಥಾ ಗಾವಸ್ತಥಾ ರಾಷ್ಟ್ರಮರಾಜಕಮ್ ॥ ೨೯

ಧ್ವಜೋ ರಥಸ್ಯ ಪ್ರಜ್ಞಾನಂ ಧೂಮೋ ಜ್ಞಾನಂ ವಿಭಾವಸೋಃ ।
ತೇಷಾಂ ಯೋ ನೋ ಧ್ವಜೋ ರಾಜಾ ಸ ದೇವತ್ವಮಿತೋ ಗತಃ ॥ ೩೦

ನಾರಾಜಕೇ ಜನಪದೇ ಸ್ವಕಂ ಭವತಿ ಕಸ್ಯಚಿತ್ ।
ಮತ್ಸ್ಯಾ ಇವ ನರಾ ನಿತ್ಯಂ ಭಕ್ಷಯಂತಿ ಪರಸ್ಪರಮ್ ॥ ೩೧

ಯೇ ಹಿ ಸಂಭಿನ್ನಮರ್ಯಾದಾ ನಾಸ್ತಿಕಾಶ್ಛಿನ್ನಸಂಶಯಾಃ ।
ತೇಽಪಿ ಭಾವಾಯ ಕಲ್ಪಂತೇ ರಾಜದಂಡನಿಪೀಡಿತಾಃ ॥ ೩೨

ಯಥಾದೃಷ್ಟಿಃ ಶರೀರಸ್ಯ ನಿತ್ಯಮೇವ ಪ್ರವರ್ತತೇ ।
ತಥಾ ನರೇಂದ್ರೋ ರಾಷ್ಟ್ರಸ್ಯ ಪ್ರಭವಃ ಸತ್ಯಧರ್ಮಯೋಃ ॥ ೩೩

ರಾಜಾ ಸತ್ಯಂ ಚ ಧರ್ಮಶ್ಚ ರಾಜಾ ಕುಲವತಾಂ ಕುಲಮ್ ।
ರಾಜಾ ಮಾತಾ ಪಿತಾ ಚೈವ ರಾಜಾ ಹಿತಕರೋ ನೃಣಾಮ್ ॥ ೩೪

ರಾಜನಿಲ್ಲದ ರಾಷ್ಟ್ರವು ನೀರಿಲ್ಲದ ನದಿಯಂತೆ ಆಗುವುದು. ಅದು ಹುಲ್ಲಿಲ್ಲದ ಕಾಡಿನಂತೆ, ಕಾವಲಿಲ್ಲದ ದನಗಳ ಮಂದೆಯಂತೆ (೨೮-೨೯). ರಥಕ್ಕೆ ಧ್ವಜವು ಹೆಗ್ಗುರುತು. ಅಗ್ನಿಗೆ ಧೂಮವು ಹೆಗ್ಗುರುತು. ಹಾಗೆ ಸುಖಕರವಾದ ನಮ್ಮ ರಾಜ್ಯನಿರ್ವಹಣೆಗೆ ಧ್ವಜದಂತೆ ಹೆಗ್ಗುರುತಾಗಿದ್ದ ಮಹಾರಾಜನು ಈಗ ಸ್ವರ್ಗಸ್ಥನಾಗಿದ್ದಾನೆ (೩೦). ರಾಜನಿಲ್ಲದಿದ್ದರೆ ಯಾರ ಸ್ವತ್ತು ಯಾವುದು ಎಂಬ ನಿರ್ಧಾರವೇ ಇರುವುದಿಲ್ಲ. ದೊಡ್ಡಮೀನು ಸಣ್ಣಮೀನನ್ನು ನುಂಗಿದಂತೆ ಜನರು ಒಬ್ಬರನ್ನೊಬ್ಬರು ತಿಂದುಬಿಡುತ್ತಾರೆ (೩೧). ಅಕೃತ್ಯವನ್ನು ಮಾಡಲು ಹಿಂದುಮುಂದು ನೋಡದೆ ನಿಯಮವನ್ನು ಉಲ್ಲಂಘಿಸುವ ನಾಸ್ತಿಕರೂ ಕೂಡ ರಾಜದಂಡದ ಭಯವಿದ್ದರೆ ದಾರಿಗೆ ಬರುತ್ತಾರೆ. ರಾಜನು ದೇಹಕ್ಕೆ ಕಣ್ಣು ಇದ್ದಂತೆ. ಅವನು ರಾಷ್ಟ್ರದ ಹಿತಾಹಿತಗಳನ್ನು ನೋಡಿಕೊಳ್ಳುತ್ತಾನೆ. ಸತ್ಯಧರ್ಮಗಳಿಗೆ ಅವನು ಮೂಲಕಾರಣ (೩೨-೩೩). ಪ್ರಜೆಗಳು ಸತ್ಯವಂತರಾಗಿ ಧರ್ಮಮಾರ್ಗದಲ್ಲಿ ನಡೆಯಲು ರಾಜನೇ ಕಾರಣ. ಕುಲಾಚಾರಗಳನ್ನು ನಡೆಸಲು ಅವನೇ ಸಮರ್ಥ. ತಾಯಿಯಂತೆ - ತಂದೆಯಂತೆ ಪ್ರಜೆಗಳಿಗೆ ಹಿತವನ್ನು ಮಾಡತಕ್ಕವನು ರಾಜನೇ ಸರಿ (೩೪). (ಯಮನು ದುಷ್ಟರನ್ನು ದಂಡಿಸಬಲ್ಲನು.

ಯಮೋ ವೈಶ್ರವಣಃ ಶಕ್ರೋ ವರುಣಶ್ಚ ಮಹಾಬಲಃ ।
ವಿಶೇಷ್ಯಂತೇ ನರೇಂದ್ರೇಣ ವೃತ್ತೇನ ಮಹತಾ ತತಃ ॥ ೩೫

ಅಹೋ ತಮ ಇವೇದಂ ಸ್ಯಾನ್ನ ಪ್ರಜ್ಞಾಯೇತ ಕಿಂಚನ ।
ರಾಜಾ ಚೇನ್ನ ಭವೇಲ್ಲೋಕೇ ವಿಭಜನ್ ಸಾಧ್ವಸಾಧುನೀ ॥ ೩೬
ಜೀವತ್ಯಪಿ ಮಹಾರಾಜೇ ತವೈವ ವಚನಂ ವಯಮ್ ।
ನಾತಿಕ್ರಮಾಮಹೇ ಸರ್ವೇ ವೇಲಾಂ ಪ್ರಾಪ್ಯೇವ ಸಾಗರಃ ॥ ೩೭

ಸ ನಃ ಸಮೀಕ್ಷ್ಯ ದ್ವಿಜವರ್ಯ ವೃತ್ತಂ
ನೃಪಂ ವಿನಾ ರಾಜ್ಯಮರಣ್ಯಭೂತಮ್ ।
ಕುಮಾರಮಿಕ್ಷ್ವಾಕುಸುತಂ ತಥಾನ್ಯಂ
ತ್ವಮೇವ ರಾಜಾನಮಿಹಾಭಿಷಿಂಚ ॥ ೩೮

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತಷಷ್ಟಿತಮಃ ಸರ್ಗಃ

ಕುಬೇರನು ಐಶ್ವರ್ಯವನ್ನು ಕೊಡಬಲ್ಲನು. ಇಂದ್ರನು ಶತ್ರುಗಳಿಂದ ರಕ್ಷಿಸಬಲ್ಲನು. ವರುಣನು ಸದಾಚಾರದಲ್ಲಿ ನಿಯಮಿಸಬಲ್ಲನು. ಆದರೆ ರಾಜನೊಬ್ಬನಲ್ಲಿಯೇ ಇವರೆಲ್ಲರ ಸಾಮರ್ಥ್ಯಗಳೂ ಇವೆ.) ಆದ್ದರಿಂದ ಸದಾಚಾರಸಂಪನ್ನನೂ ಕರ್ತವ್ಯನಿರತನೂ ಆದ ರಾಜನು ಯಮನೇ ಮೊದಲಾದ ದಿಕ್ಪಾಲರಿಗಿಂತ ಹೆಚ್ಚಿನವನು (೩೫). ಸರಿತಪ್ಪುಗಳನ್ನು ವಿಂಗಡಿಸಿ ನಿಯಮಿಸತಕ್ಕ ರಾಜನು ಇಲ್ಲದಿದ್ದರೆ ಏನು ಹೇಳೋಣ! ಕತ್ತಲೆ ಕವಿದಂತಾಗಿ ಯಾವುದು ಏನೆಂದು ತಿಳಿಯದೆ ಹೋದೀತು! ವಸಿಷ್ಠಮುನಿಗಳೆ, ಮಹಾರಾಜನು ಬದುಕಿರುವಾಗಲೂ ನಾವು ನಿಮ್ಮ ಮಾತನ್ನು ಮೀರಿ ನಡೆಯುತ್ತಿರಲಿಲ್ಲ. ಸಮುದ್ರವು ಎಲ್ಲೆಯನ್ನು ಅತಿಕ್ರಮಿಸದಂತೆ ನಿಮ್ಮ ಮಾತನ್ನು ಅತಿಕ್ರಮಿಸಲಾರೆವು (೩೬-೩೭). ಈಗ ಭೂಪಾಲನಿಲ್ಲದೆ ಈ ರಾಷ್ಟ್ರವು ಅರಣ್ಯದಂತಾಯಿತು. ನೀವು ನಿಮ್ಮ ಅಭಿಪ್ರಾಯವನ್ನು ಪರ್ಯಾಲೋಚಿಸಿ ಇಕ್ಷ್ವಾಕುವಂಶದಲ್ಲಿ ಜನಿಸಿದ ರಾಜಕುಮಾರನೊಬ್ಬನನ್ನು ಕರೆಸಿ ಪಟ್ಟಾಭಿಷೇಕವನ್ನು ನಡೆಸಬೇಕು'' ಎಂದು ಹೇಳಿದರು (೩೮).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಅರುವತ್ತೇಳನೆಯ ಸರ್ಗ

ಅಷ್ಟಷಷ್ಟಿತಮಃ ಸರ್ಗಃ

ದೂತಪ್ರೇಷಣಮ್

ಶೇಷಾಂ ತದ್ವಚನಂ ಶ್ರುತ್ವಾವಸಿಷ್ಠಃ ಪ್ರತ್ಯುವಾಚ ಹ ।
ಮಿತ್ರಾಮಾತ್ಯಗಣಾನ್ ಸರ್ವಾನ್ ಬ್ರಾಹ್ಮಣಾಂಸ್ತಾನಿದಂ ವಚಃ ॥ ೧

ಯದಸೌ ಮಾತುಲಕುಲೇ ದತ್ತರಾಜ್ಯಃ ಪರಂ ಸುಖೀ ।
ಭರತೋ ವಸತಿ ಭ್ರಾತ್ರಾ ಶತ್ರುಘ್ನೇನ ಸಮನ್ವಿತಃ ॥ ೨

ತಚ್ಛೀಘ್ರಂ ಜವನಾ ದೂತಾ ಗಚ್ಛಂತು ತ್ವರಿತೈರ್ಹಯೈಃ ।
ಆನೇತುಂ ಭ್ರಾತರೌ ವೀರೌ ಕಿಂ ಸಮೀಕ್ಷಾಮಹೇ ವಯಮ್ ॥ ೩

ಗಚ್ಛಂತ್ವಿತಿ ತತಃ ಸರ್ವೇ ವಸಿಷ್ಠಂ ವಾಕ್ಯಮಬ್ರುವನ್ ।
ತೇಷಾಂ ತು ವಚನಂ ಶ್ರುತ್ವಾವಸಿಷ್ಠೋ ವಾಕ್ಯಮಬ್ರವೀತ್ ॥ ೪

ಏಹಿ ಸಿದ್ಧಾರ್ಥ ವಿಜಯ ಜಯಂತಾಶೋಕ ನಂದನ ।
ಶ್ರೂಯತಾಮಿತಿಕರ್ತವ್ಯಂ ಸರ್ವಾನೇವ ಬ್ರವೀಮಿ ವಃ ॥ ೫

ಸರ್ಗ ೬೮

ಭರತನನ್ನು ಕರೆತರುವುದಕ್ಕಾಗಿ ವಸಿಷ್ಠರು ದೂತರನ್ನು ಕಳಿಸುವುದು.

ವಸಿಷ್ಠರು ಅವರೆಲ್ಲರ ಮಾತುಗಳನ್ನು ಆಲಿಸಿದರು. ಅನಂತರ ಅಲ್ಲಿದ್ದ ಬ್ರಾಹ್ಮಣೋತ್ತಮರನ್ನೂ ಮಿತ್ರರನ್ನೂ ಮಂತ್ರಿಗಳನ್ನೂ ಉದ್ದೇಶಿಸಿ ''ಮಾನ್ಯರೇ, ಈಗ ಭರತನಿಗೆ ರಾಜ್ಯವು ಪ್ರಾಪ್ತವಾಗಿದೆ. ಅವನು ಶತ್ರುಘ್ನನೊಡನೆ ತನ್ನ ಸೋದರಮಾವನ ಮನೆಯಲ್ಲಿ ಏನನ್ನೂ ಅರಿಯದೆ ಸುಖವಾಗಿದ್ದಾನೆ (೧-೨). ಆದ್ದರಿಂದ ಪರಾಕ್ರಮಿಗಳಾದ ಆ ಇಬ್ಬರು ಅಣ್ಣತಮ್ಮಂದಿರನ್ನು ಈಗ ಕರೆಸಬೇಕು. ಅದಕ್ಕಾಗಿ ದೂತರು ವೇಗಶಾಲಿಗಳಾದ ಕುದುರೆಗಳನ್ನೇರಿ ತ್ವರೆಯಿಂದ ಹೋಗಲಿ. ನಾವು ಪರ್ಯಾಲೋಚಿಸಬೇಕಾದದ್ದು ಏನಿದೆ?'' ಎಂದು ಹೇಳಿದರು (೩). ಅಲ್ಲಿದ್ದವರೆಲ್ಲರೂ ವಸಿಷ್ಠರ ಮಾತನ್ನು ಒಪ್ಪಿ ಆದೇಪ್ರಕಾರ 'ದೂತರು ಹೋಗಲಿ' ಎಂದು ನುಡಿದರು. ಆಗ ವಸಿಷ್ಠರು ಸಿದ್ಧಾರ್ಥ, ವಿಜಯ, ಜಯಂತ, ಅಶೋಕ ಮತ್ತು ನಂದನ

ಪುರಂ ರಾಜಗೃಹಂ ಗತ್ವಾ ಶೀಘ್ರಂ ಶೀಘ್ರಜವೈರ್ಹಯೈಃ ।
ತ್ಯಕ್ತಶೋಕೈರಿದಂ ವಾಚ್ಯಃ ಶಾಸನಾದ್ಭರತೋ ಮಮ ॥ ೬
ಪುರೋಹಿತಸ್ತ್ವಾಂ ಕುಶಲಂ ಪ್ರಾಹ ಸರ್ವೇ ಚ ಮಂತ್ರಿಣಃ ।
ತ್ವರಮಾಣಶ್ಚ ನಿರ್ಯಾಹಿ ಕೃತ್ಯಮಾತ್ಯಯಿಕಂ ತ್ವಯಾ ॥ ೭
ಮಾ ಚಾಸ್ಮೈ ಪ್ರೋಷಿತಂ ರಾಮಂ ಮಾ ಚಾಸ್ಮೈ ಪಿತರಂ ಮೃತಮ್ ।
ಭವಂತಃ ಶಂಸಿಷುರ್ಗತ್ವಾ ರಾಘವಾಣಾಮಿಮಂ ಕ್ಷಯಮ್ ॥ ೮
ಕೌಶೇಯಾನಿ ಚ ವಸ್ತ್ರಾಣಿ ಭೂಷಣಾನಿ ವರಾಣಿ ಚ ।
ಕ್ಷಿಪ್ರಮಾದಾಯ ರಾಜ್ಞಶ್ಚ ಭರತಸ್ಯ ಚ ಗಚ್ಛತ ॥ ೯
ದತ್ತಪಥ್ಯಶನಾ ದೂತಾ ಜಗ್ಮುಃ ಸ್ವಂ ಸ್ವಂ ನಿವೇಶನಮ್ ।
ಕೇಕಯಾಂಸ್ತೇ ಗಮಿಷ್ಯಂತೋ ಹಯಾನಾರುಹ್ಯ ಸಂಮತಾನ್ ॥ ೧೦

ಎಂಬ ಐವರನ್ನು ಹತ್ತಿರಕ್ಕೆ ಕರೆದು ''ನೀವೆಲ್ಲರೂ ಕೇಳಿರಿ. ಈಗ ನೀವು ಮಾಡಬೇಕಾದ ಒಂದು ಕಾರ್ಯವುಂಟು (೪-೫). ಅತಿವೇಗದಲ್ಲಿ ಓಡಬಲ್ಲ ಅಶ್ವಗಳನ್ನೇರಿ ಕೂಡಲೆ ಕೇಕಯದೇಶದ ರಾಜಧಾನಿಯಾದ ರಾಜಗೃಹಕ್ಕೆ ನೀವು ಹೋಗಬೇಕು. ಅಲ್ಲಿ ನಿಮ್ಮ ದುಃಖವನ್ನು ತೋರಿಸಿಕೊಳ್ಳದೆ ಭರತನಿಗೆ ಈ ಮಾತನ್ನು ಹೇಳಿರಿ. ಇದು ನನ್ನ ಆಜ್ಞೆ (೬). ಏನೆಂದರೆ, ''ರಾಜಕುಮಾರ, ಪುರೋಹಿತರೂ ಸಕಲಮಂತ್ರಿಗಳೂ ನಿನ್ನ ಕುಶಲವನ್ನು ವಿಚಾರಿಸಿದ್ದಾರೆ. ನೀನು ಈಗಲೇ ಅಯೋಧ್ಯೆಗೆ ಹೊರಟುಬರಬೇಕು. ಕಾಲವಿಳಂಬವಿಲ್ಲದೆ ನೀನು ಮಾಡಬೇಕಾದ ಒಂದು ಕಾರ್ಯವಿದೆ' ಎಂದು ತಿಳಿಸಿರಿ (೭). ರಾಮನು ಕಾಡಿಗೆ ಹೋದ ಸುದ್ದಿಯನ್ನಾಗಲಿ ತಂದೆಯು ಮೃತನಾಗಿರುವ ವಿಷಯವನ್ನಾಗಲಿ ಅವನಿಗೆ ನೀವು ಹೇಳಕೂಡದು. ಅಲ್ಲಿ ಹೋಗಿ ರಘುವಂಶಕ್ಕೆ ಬಂದ ಈ ವಿಪತ್ತನ್ನು ತಿಳಿಸಕೂಡದು. (ಈ ಸಂದರ್ಭವನ್ನು ಮರೆಮಾಚುವುದಕ್ಕಾಗಿ) ಕೇಕಯರಾಜನಿಗೂ ಭರತನಿಗೂ ಕೊಡುವುದಕ್ಕೆ ಉಚಿತವಾದ ರೇಶ್ಮೆಯ ವಸ್ತುಗಳನ್ನೂ ಶ್ರೇಷ್ಠವಾದ ಆಭರಣಗಳನ್ನೂ ತೆಗೆದುಕೊಂಡು ಕೂಡಲೆ ನೀವು ಹೊರಡಿರಿ'' ಎಂದು ಆದೇಶವನ್ನಿತ್ತರು (೮-೯). ಒಡನೆಯೇ ದಾರಿಯ ವೆಚ್ಚಕ್ಕೆ ಬೇಕಾದಷ್ಟು ದ್ರವ್ಯವನ್ನು ತರಿಸಿಕೊಡಲು, ಆ ಐವರೂ ತಮ್ಮ ಮನೆಗಳಿಗೆ ಹೋಗಿ ಪ್ರಯಾಣಸನ್ನದ್ಧರಾದರು. ಕೇಕಯ ದೇಶಕ್ಕೆ ಹೋಗಲು ಉತ್ತಮವಾದ ಕುದುರೆಗಳನ್ನೇರಿ ಬಂದರು (೧೦).

ತತಃ ಪ್ರಾಸ್ಥಾನಿಂ ಕೃತ್ವಾ ಕಾರ್ಯಶೇಷಮನಂತರಮ್ ।
ವಸಿಷ್ಠೇನಾಭ್ಯನುಜ್ಞಾತಾ ದೂತಾಃ ಸಂತ್ವರಿತಾ ಯಯುಃ ॥ ೧೧

ನ್ಯಂತೇನಾಪರತಾಲಸ್ಯ ಪ್ರಲಂಬಸ್ಯೋತ್ತರಂ ಪ್ರತಿ ।
ನಿಷೇವಮಾಣಾಸ್ತೇ ಜಗ್ಮುರ್ನದೀಂ ಮಧ್ಯೇನ ಮಾಲಿನೀಮ್ ॥ ೧೨

ತೇ ಹಾಸ್ತಿನಪುರೇ ಗಂಗಾಂ ತೀರ್ತ್ವಾ ಪ್ರತ್ಯಙ್ಮುಖಾ ಯಯುಃ ।
ಪಾಂಚಾಲದೇಶಾನಾಸಾದ್ಯ ಮಧ್ಯೇನ ಕುರುಜಾಂಗಲಮ್ ॥ ೧೩

ಸರಾಂಸಿ ಚ ಸುಪೂರ್ಣಾನಿ ನದೀಶ್ಚ ವಿಮಲೋದಕಾಃ ।
ನಿರೀಕ್ಷಮಾಣಾಸ್ತೇ ಜಗ್ಮುರ್ದೂತಾಃ ಕಾರ್ಯವಶಾದ್ದ್ರುತಮ್ ॥ ೧೪

ತೇ ಪ್ರಸನ್ನೋದಕಾಂ ದಿವ್ಯಾಂ ನಾನಾವಿಹಗಸೇವಿತಾಮ್ ।
ಅತೀತ್ಯ ಜಗ್ಮುರ್ವೇಗೇನ ಶರದಂಡಾಂ ಜನಾಕುಲಾಮ್ ॥ ೧೫

ನಿಕೂಲವೃಕ್ಷಮಾಸಾದ್ಯ ದಿವ್ಯಂ ಸತ್ಯೋಪಯಾಚನಮ್ ।
ಅಭಿಗಮ್ಯಾಭಿವಾದ್ಯಂ ತಂ ಕುಲಿಂಗಾಂ ಪ್ರಾವಿಶನ್ ಪುರೀಮ್ ॥ ೧೬

ಅನಂತರ ಉಳಿದ ಪ್ರಯಾಣ ಸನ್ನಾಹಗಳನ್ನು ಮಾಡಿಕೊಂಡು ವಸಿಷ್ಠರ ಅನುಮತಿಯನ್ನು ಪಡೆದು ಆ ದೂತರು ವೇಗದಿಂದ ಹೊರಟರು. ಅವರು ಅಯೋಧ್ಯೆಯಿಂದ ಪಶ್ಚಿಮಾಭಿಮುಖವಾಗಿ ಹೊರಟು ಅಪರತಾಲವೆಂಬ ಬೆಟ್ಟದ ಪಶ್ಚಿಮದಿಕ್ಕಿನಲ್ಲಿ ಹರಿಯುವ ಮಾಲಿನೀನದಿಯ ತೀರದಲ್ಲಿ ಹೋಗುತ್ತ ಪ್ರಲಂಬಗಿರಿಯ ಉತ್ತರ ಭಾಗವನ್ನು ಸೇರಿದರು (೧೧-೧೨). ಅನಂತರ ಹಸ್ತಿನಾಪುರದ ಸಮೀಪದಲ್ಲಿ ಗಂಗಾನದಿಯನ್ನು ದಾಟಿ ಪಶ್ಚಿಮಾಭಿಮುಖವಾಗಿ ಪ್ರಯಾಣ ಮಾಡಿದರು. ಅವರು ಕುರುಜಾಂಗಲದೇಶದ ಮಧ್ಯದಲ್ಲಿ ಸಾಗುತ್ತ ಪಾಂಚಾಲದೇಶವನ್ನು ತಲುಪಿದರು. ಆ ದೂತರು ಅಲ್ಲಿ ತುಂಬಿದ ಸರೋವರಗಳನ್ನೂ ತಿಳಿನೀರಿನ ಹೊಳೆಗಳನ್ನೂ ವೀಕ್ಷಿಸುತ್ತ ಕಾರ್ಯವಶರಾಗಿ ವೇಗದಿಂದ ಪ್ರಯಾಣ ಮಾಡುತ್ತಿದ್ದರು (೧೩-೧೪). ದಾರಿಯಲ್ಲಿ ತಿಳಿನೀರಿನಿಂದ ತುಂಬಿ ಹರಿಯುತ್ತಿದ್ದ ದಿವ್ಯವಾದ ಶರದಂಡಾನದಿಯನ್ನು ಕಂಡರು. ನಾನಾಬಗೆಯ ನೀರು ಹಕ್ಕಿಗಳು ಅದರಲ್ಲಿ ವಿಹರಿಸುತ್ತಿದ್ದವು. (ಸ್ನಾನ ಪಾನಾರ್ಥವಾಗಿ) ಜನರು ತುಂಬಿದ್ದರು. ದೂತರು ಆ ನದಿಯನ್ನು ನೋಡುತ್ತ ಎಲ್ಲಿಯೂ ನಿಲ್ಲದೆ ಮುಂದೆ ಹೋದರು (೧೫). ಆ ನದಿಯ ಪಶ್ಚಿಮ ತೀರದಲ್ಲಿ ಭಕ್ತರ ಕೋರಿಕೆಗಳನ್ನು ತಪ್ಪದೆ

ಅಭಿಕಾಲಂ ತತಃ ಪ್ರಾಪ್ಯ ತೇಜೋಽಭಿಭವನಾಚ್ಚ್ಯುತಾಃ ।
ಪಿತೃಪೈತಾಮಹೀಂ ಪುಣ್ಯಾಂ ತೇರುರಿಕ್ಷುಮತೀಂ ನದೀಮ್ ॥ ೧೭

ಅವೇಕ್ಷ್ಯಾಂಜಲಿಪಾನಾಂಶ್ಚ ಬ್ರಾಹ್ಮಣಾನ್ ವೇದಪಾರಗಾನ್ ।
ಯಯುರ್ಮಧ್ಯೇನ ಬಾಹ್ಲೀಕಾನ್ ಸುದಾಮಾನಂ ಚ ಪರ್ವತಮ್ ॥
ವಿಷ್ಣೋಃ ಪದಂ ಪ್ರೇಕ್ಷಮಾಣಾ ವಿಪಾಶಾಂ ಚಾಪಿ ಶಾಲ್ಮಲೀಮ್ ।
ನದೀರ್ವಾಪೀಸ್ತಟಾಕಾನಿ ಪಲ್ವಲಾನಿ ಸರಾಂಸಿ ಚ ॥ ೧೯

ಪಶ್ಯಂತೋ ವಿವಿಧಾಂಶ್ಚಾಪಿ ಸಿಂಹವ್ಯಾಘ್ರಮೃಗದ್ವಿಪಾನ್ ।
ಯಯುಃ ಪಥಾತಿಮಹತಾ ಶಾಸನಂ ಭರ್ತುರೀಪ್ಸವಃ ॥ ೨೦

ಈಡೇರಿಸತಕ್ಕ ದೇವತಾಶ್ರಯವಾದ ಒಂದು ಪುಣ್ಯವೃಕ್ಷವಿತ್ತು. ಈ ದೂತರು ವಂದನಾರ್ಹವಾದ ಆ ವೃಕ್ಷಕ್ಕೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ ಕುಲಿಂಗಾನಗರವನ್ನು ಸೇರಿದರು (೧೬). ಅನಂತರ ಅಭಿಕಾಲವೆಂಬ ಗ್ರಾಮವನ್ನು ಹಾಯ್ದು ತೇಜೋಭಿಭವನವೆಂಬ ಹಳ್ಳಿಯನ್ನು ದಾಟಿ ಇಕ್ಷುಮತಿಯನ್ನು ಸೇರಿದರು. ಆ ದೂತರು ರಘುವಂಶದ ಪೂರ್ವಜರಿಂದ ಸೇವಿತವಾದ ಆ ಪುಣ್ಯನದಿಯನ್ನು ದಾಟಿ ಬಾಹ್ಲೀಕ ದೇಶವನ್ನು ಸೇರಿದರು. ಅಲ್ಲಿ ವೇದಪಾರಂಗತರಾದ ಬ್ರಾಹ್ಮಣರು ಬೊಗಸೆಯಲ್ಲಿ ನೀರು ಕುಡಿಯುವುದನ್ನು* ನೋಡುತ್ತ ಆ ದೇಶವನ್ನು ದಾಟಿ ಸುದಾಮಪರ್ವತದ ಬಳಿಗೆ ಹೋದರು (೧೭-೧೮). ಅವರು ಆ ಪರ್ವತದಲ್ಲಿ ವಿಷ್ಣುಪಾದದ ಚಿಹ್ನೆಯನ್ನು ದರ್ಶನ ಮಾಡಿ ವಿಪಾಶಾ ಮತ್ತು ಶಾಲ್ಮಲೀ ನದಿಗಳನ್ನು ದಾಟಿಹೋದರು. ಹೀಗೆಯೇ ಆ ದೂತರು ದಾರಿಯಲ್ಲಿ ಅನೇಕ ನದಿ ಬಾವಿ ಕೆರೆಕಟ್ಟೆ ಕೊಳಗಳನ್ನು ನೋಡುತ್ತ, ನಾನಾ ಬಗೆಯ ಸಿಂಹ ಹುಲಿ ಜಿಂಕೆ ಆನೆ ಮುಂತಾದ ಮೃಗಗಳನ್ನು ಕಾಣುತ್ತ, ತಮ್ಮ ಪ್ರಭುವಿನ ಆಜ್ಞೆಯನ್ನು ಪಾಲಿಸುವುದಕ್ಕಾಗಿ ಬಹುದೂರದವರೆಗೆ ನಿಲ್ಲದೆ ಪ್ರಯಾಣ ಮಾಡಿದರು (೧೯-೨೦). ಬಹಳ ದೂರದ ದಾರಿಯಾದ್ದರಿಂದ ಕುದುರೆಗಳು ಬಳಲಿಹೋದವು.

---

* ಬೊಗಸೆಯಲ್ಲಿ ನೀರು ಕುಡಿಯುವುದು ಅನಾಚಾರ. ಬಾಹ್ಲೀಕದೇಶದವರು ಆಚಾರ ಹೀನರೆಂದು ಇಲ್ಲಿ ಧ್ವನಿತವಾಗಿದೆ. ಭಾರತದ ಕರ್ಣಪರ್ವದಲ್ಲಿ 'ಬಾಹ್ಲೀಕಾ ನಾಮ ತೇ ದೇಶಾ ನ ತತ್ರ ದಿವಸಂ ವಸೇತ್' ಎಂದು ಹೇಳಿದೆ. ಬೊಗಸೆ ನೀರನ್ನು ಮಾತ್ರ ಕುಡಿದು ತಪಸ್ಸು ಮಾಡುವ ಮಹಾತ್ಮರ ದೇಶ ಎಂದು ಕೆಲವರ ಅಭಿಪ್ರಾಯವಾಗಿದೆ.

ತೇ ಶ್ರಾಂತವಾಹನಾ ದೂತಾ ವಿಕೃಷ್ಟೇನ ಪಥಾ ತತಃ ।
ಗಿರಿವ್ರಜಂ ಪುರವರಂ ಶೀಘ್ರಮಾಸೇದುರಂಜಸಾ ॥ ೨೧

ಭರ್ತುಃ ಪ್ರಿಯಾರ್ಥಂ ಕುಲರಕ್ಷಣಾರ್ಥಂ
ಭರ್ತುಶ್ಚ ವಂಶಸ್ಯ ಪರಿಗ್ರಹಾರ್ಥಮ್ ।
ಅಹೇಡಮಾನಾಸ್ತ್ವರಯಾ ಸ್ಮ ದೂತಾ
ರಾತ್ರ್ಯಾಂ ತು ತೇ ತತ್ಪುರಮೇವ ಯಾತಾಃ ॥ ೨೨

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಅಷ್ಟಷಷ್ಟಿತಮಃ ಸರ್ಗಃ

***

ಆದರೂ ದೂತರು ಗಿರಿವ್ರಜವೆಂಬ* ಆ ರಾಜಧಾನಿಗೆ ಶೀಘ್ರವಾಗಿ ಯೋಗ್ಯವೇಳೆಯಲ್ಲಿ ಬಂದು ಸೇರಿದರು (೨೧). ಅವರು ತಮ್ಮ ಪ್ರಭುವಿಗೆ ಸಂತೃಪ್ತಿಯಾಗಲೆಂಬ ರಾಜಭಕ್ತಿಯಿಂದಲೂ ಪ್ರಜೆಗಳ ರಕ್ಷಣೆಯಾಗಲೆಂಬ ಉದ್ದೇಶದಿಂದಲೂ ರಾಜವಂಶೀಯನಿಗೇ ರಾಜ್ಯವು ದೊರಕಲೆಂಬ ಆಶಯದಿಂದಲೂ ತ್ವರೆಯಿಂದ ಪ್ರಯಾಣ ಮಾಡಿ ಬಂದರು. ಸ್ವಲ್ಪವೂ ಅಸಡ್ಡೆಯಿಲ್ಲದೆ ಬಂದು ರಾತ್ರಿಯಲ್ಲಿಯೇ ಆ ನಗರವನ್ನು ಪ್ರವೇಶಿಸಿದರು (೨೨).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಅರುವತ್ತೆಂಟನೆಯ ಸರ್ಗ

***

* ಕೇಕಯದೇಶದ ರಾಜಧಾನಿಯಾದ ರಾಜಗೃಹಕ್ಕೆ ಗಿರಿವ್ರಜವೆಂದು ಇನ್ನೊಂದು ಹೆಸರು.

ಏಕೋನಸಪ್ತತಿತಮಃ ಸರ್ಗಃ

ಭರತದುಃಸ್ವಪ್ನಃ

ಯಾಮೇವ ರಾತ್ರಿಂ ತೇ ದೂತಾಃ ಪ್ರವಿಶಂತಿ ಸ್ಮ ತಾಂ ಪುರೀಮ್ ।
ಭರತೇನಾಪಿ ತಾಂ ರಾತ್ರಿಂ ಸ್ವಪ್ನೋ ದೃಷ್ಟೋಽಯಮಪ್ರಿಯಃ ॥ ೧

ವ್ಯುಷ್ಟಾಮೇವ ತು ತಾಂ ರಾತ್ರಿಂ ದೃಷ್ಟ್ವಾ ತಂ ಸ್ವಪ್ನಮಪ್ರಿಯಮ್ ।
ಪುತ್ರೋ ರಾಜಾಧಿರಾಜಸ್ಯ ಸುಭೃಶಂ ಪರ್ಯತಪ್ಯತ ॥ ೨

ತಪ್ಯಮಾನಂ ಸಮಾಜ್ಞಾಯ ವಯಸ್ಯಾಃ ಪ್ರಿಯವಾದಿನಃ ।
ಆಯಾಸಂ ಹಿ ವಿನೇಷ್ಯಂತಃ ಸಭಾಯಾಂ ಚಕ್ರಿರೇ ಕಥಾಃ ॥ ೩

ವಾದಯಂತಿ ತಥಾ ಶಾಂತಿಂ ಲಾಸಯಂತ್ಯಪಿ ಚಾಪರೇ ।
ನಾಟಕಾನ್ಯಪರೇ ಪ್ರಾಹುರ್ಹಾಸ್ಯಾನಿ ವಿವಿಧಾನಿ ಚ ॥ ೪

ಸರ್ಗ ೬೯

ಭರತನು ತನ್ನ ದುಃಸ್ವಪ್ನದ ವೃತ್ತಾಂತವನ್ನು ಮಿತ್ರರಿಗೆ ಹೇಳುವುದು

ಯಾವ ರಾತ್ರಿ ದೂತರು ಗಿರಿವ್ರಜವನ್ನು ಸೇರಿದರೊ, ಆ ರಾತ್ರಿಯಲ್ಲಿ ಭರತನಿಗೆ ಒಂದು ಕೆಟ್ಟ ಕನಸು ಕಾಣಿಸಿತು. ಬೆಳಗಿನ ಜಾವದಲ್ಲಿ* ಆ ದುಃಸ್ವಪ್ನವು ಕಾಣಿಸಿದ್ದರಿಂದ ಆ ರಾಜಕುಮಾರನು ಬಹಳ ವ್ಯಥೆಪಟ್ಟನು (೧-೨). (ಮೂರನೆಯ ದಿನ) ಭರತನು ಚಿಂತಾಮಗ್ನನಾಗಿರುವುದನ್ನು ಕಂಡು ಅವನ ಪ್ರಿಯಮಿತ್ರರು ಆತನ ದುಃಖವನ್ನು ಹೋಗಲಾಡಿಸುವುದಕ್ಕಾಗಿ ವಿನೋದಗೋಷ್ಠಿಯನ್ನೇರ್ಪಡಿಸಿ ಬಗೆಬಗೆಯ ಕಥೆಗಳನ್ನು ಹೇಳುತ್ತಿದ್ದರು (೩). ಅವನ ಮನಸ್ಸಿಗೆ ಶಾಂತಿಯು ಲಭಿಸಲೆಂದು ಕೆಲವರು ವಾದ್ಯವನ್ನು ನುಡಿಸುತ್ತಿದ್ದರು. ಕೆಲವರು ನೃತ್ಯವನ್ನು ಏರ್ಪಡಿಸಿದರು. ಹಾಗೆಯೇ ನಾಟಕಗಳನ್ನೇರ್ಪಡಿಸಿದ್ದಲ್ಲದೆ ನಾನಾ ಬಗೆಯ ಹಾಸ್ಯದ ಮಾತುಗಳನ್ನಾಡುತ್ತಿದ್ದರು.

---

* ಬೆಳಗಿನ ಜಾವದಲ್ಲಿ ಕಂಡ ಕನಸು ಶೀಘ್ರದಲ್ಲಿ ಫಲವನ್ನು ಕೊಡುವುದೆಂದು ಸ್ವಪ್ನಶಾಸ್ತ್ರದಲ್ಲಿದೆ.

ಸ ತೈರ್ಮಹಾತ್ಮಾ ಭರತಃ ಸಖಿಭಿಃ ಪ್ರಿಯವಾದಿಭಿಃ ।
ಗೋಷ್ಠೀಹಾಸ್ಯಾನಿ ಕುರ್ವದ್ಭಿರ್ನ ಪ್ರಾಹೃಷ್ಯತ ರಾಘವಃ ॥ ೫

ತಮಬ್ರವೀತ್ ಪ್ರಿಯಸಖೋ ಭರತಂ ಸಖಿಭಿರ್ವೃತಮ್ ।
ಸುಹೃದ್ಭಿಃ ಪರ್ಯುಪಾಸೀನಃ ಕಿಂ ಸಖೇ ನಾನುಮೋದಸೇ ॥ ೬

ಏವಂ ಬ್ರುವಾಣಂ ಸುಹೃದಂ ಭರತಃ ಪ್ರತ್ಯುವಾಚ ತಮ್ ।
ಶೃಣು ತ್ವಂ ಯನ್ನಿಮಿತ್ತಂ ಮೇ ದೈನ್ಯಮೇತದುಪಾಗತಮ್ ॥ ೭

ಸ್ವಪ್ನೇ ಪಿತರಮುದ್ರಾಕ್ಷಂ ಮಲಿನಂ ಮುಕ್ತಮೂರ್ಧಜಮ್ ।
ಪತಂತಮದ್ರಿಶಿಖರಾತ್ ಕಲುಷೇ ಗೋಮಯಹ್ರದೇ ॥ ೮

ಪ್ಲವಮಾನಶ್ಚ ಮೇ ದೃಷ್ಟಃ ಸ ತಸ್ಮಿನ್ ಗೋಮಯಹ್ರದೇ ।
ಪಿಬನ್ನಂಜಲಿನಾ ತೈಲಂ ಹಸನ್ನಿವ ಮುಹುರ್ಮುಹುಃ ॥ ೯

ತತಸ್ತಿಲೌದನಂ ಭುಕ್ತ್ವಾ ಪುನಃ ಪುನರಧಶ್ಶಿರಾಃ ।
ತೈಲೇನಾಭ್ಯಕ್ತಸರ್ವಾಂಗಸ್ತೈಲಮೇವಾನ್ವಗಾಹತ ॥ ೧೦

ಅವನ ಗೆಳೆಯರು ಪ್ರಿಯವಾದ ಮಾತುಗಳನ್ನು ನುಡಿಯುತ್ತ ವಿನೋದಗೋಷ್ಠಿಯಲ್ಲಿ ಹಾಸ್ಯ ಮಾಡುತ್ತಿದ್ದರೂ ಮಹಾತ್ಮನಾದ ಭರತನಿಗೆ ಹರ್ಷವಾಗಲಿಲ್ಲ (೪-೫). ಆಗ ಭರತನ ಪ್ರಿಯವಯಸ್ಯನೊಬ್ಬನು ಅವನನ್ನು ಕುರಿತು ''ಮಿತ್ರ, ಸ್ನೇಹಿತರೆಲ್ಲರೂ ಹೀಗೆ ವಿನೋದಗೊಳಿಸುತ್ತಿದ್ದರೂ ನೀನು ಮೆಚ್ಚುವುದಿಲ್ಲವೇಕೆ?'' ಎಂದು ಕೇಳಿದನು. ಆಗ ಭರತನು ಅವನಿಗೆ ಈ ರೀತಿ ಹೇಳಿದನು : ''ವಯಸ್ಯ, ನನಗೆ ಬಹಳ ಚಿಂತೆ ಹುಟ್ಟಿದೆ. ಅದಕ್ಕೆ ಕಾರಣವನ್ನು ಕೇಳು (೬-೭) : ನನಗೆ ಒಂದು ಕನಸು ಬಿದ್ದಿತು. ಅದರಲ್ಲಿ ನನ್ನ ತಂದೆಯು ಕೊಳೆಯ ಬಟ್ಟೆಯನ್ನುಟ್ಟು ತಲೆಯನ್ನು ಕೆದರಿಕೊಂಡು ಒಂದು ಬೆಟ್ಟದ ತುದಿಯಿಂದ ಕಶ್ಮಲವಾದ ಗೋಮಯದ ಗುಂಡಿಯಲ್ಲಿ ಬೀಳುವಂತೆ ಕಂಡೆನು (೮). ಆ ಗೋಮಯದ ಗುಂಡಿಯಲ್ಲಿ ಅವನು ಈಜುತ್ತ ಮತ್ತೆ ಮತ್ತೆ ನಗುತ್ತ ಬೊಗಸೆಯಿಂದ ಎಣ್ಣೆಯನ್ನು ಕುಡಿಯುವಂತೆ ಕಂಡೆನು. ಅನಂತರ ನನ್ನ ತಂದೆಯು ತಲೆಯನ್ನು ತಗ್ಗಿಸಿ ಅನೇಕ ಸಲ ಎಳ್ಳನ್ನವನ್ನು ತಿಂದು ಮೈಗೆಲ್ಲ ಎಣ್ಣೆಯನ್ನು ಪೂಸಿಕೊಂಡು ಎಣ್ಣೆಯಲ್ಲಿ

ಸ್ವಪ್ನೇऽಪಿ ಸಾಗರಂ ಶುಷ್ಕಂ ಚಂದ್ರಂ ಚ ಪತಿತಂ ಭುವಿ ।
ಉಪರುದ್ಧಾಂ ಚ ಜಗತೀಂ ತಮಸೇವ ಸಮಾವೃತಾಮ್ ॥ ೧೧

ಔಪವಾಹ್ಯಸ್ಯ ನಾಗಸ್ಯ ವಿಷಾಣಂ ಶಕಲೀಕೃತಮ್ ।
ಸಹಸಾ ಚಾಪಿ ಸಂಶಾಂತಂ ಜ್ವಲಿತಂ ಜಾತವೇದಸಮ್ ॥ ೧೨

ಅವತೀರ್ಣಾಂ ಚ ಪೃಥಿವೀಂ ಶುಷ್ಕಾಂಶ್ಚ ವಿವಿಧಾನ್ ದ್ರುಮಾನ್ ।
ಅಹಂ ಪಶ್ಯಾಮಿ ವಿಧ್ವಸ್ತಾನ್ ಸಧೂಮಾಂಶ್ಚಾಪಿ ಪರ್ವತಾನ್ ॥ ೧೩

ಪೀಠೇ ಕಾರ್ಷ್ಣಾಯಸೇ ಚೈನಂ ನಿಷಣ್ಣಂ ಕೃಷ್ಣವಾಸಸಮ್ ।
ಪ್ರಹಸಂತಿ ಸ್ಮ ರಾಜಾನಂ ಪ್ರಮದಾಃ ಕೃಷ್ಣಪಿಂಗಲಾಃ ॥ ೧೪

ತ್ವರಮಾಣಶ್ಚ ಧರ್ಮಾತ್ಮಾ ರಕ್ತಮಾಲ್ಯಾನುಲೇಪನಃ ।
ರಥೇನ ಖರಯುಕ್ತೇನ ಪ್ರಯಾತೋ ದಕ್ಷಿಣಾಮುಖಃ ॥ ೧೫

ಪ್ರಹಸಂತೀವ ರಾಜಾನಂ ಪ್ರಮದಾ ರಕ್ತವಾಸಿನೀ ।
ಪ್ರಕರ್ಷಂತೀ ಮಯಾ ದೃಷ್ಟಾ ರಾಕ್ಷಸೀ ವಿಕೃತಾನನಾ ॥ ೧೬

ಧುಮುಕಿದಂತೆ ಕನಸಾಯಿತು (೯-೧೦). ಕನಸಿನಲ್ಲಿ ಸಮುದ್ರವು ಒಣಗಿದಂತೆಯೂ ಚಂದ್ರನು ಭೂಮಿಗೆ ಬಿದ್ದಂತೆಯೂ ಜಗತ್ತು ಕತ್ತಲೆಯಿಂದ ಮುಚ್ಚಿಹೋಗಿ ಕಷ್ಟಕ್ಕೆ ಸಿಕ್ಕಿದಂತೆಯೂ ಕಾಣಿಸಿತು. ನಮ್ಮ ಪಟ್ಟದಾನೆಯ ದಂತವು ಪುಡಿ ಪುಡಿಯಾಯಿತು. ಉರಿಯುವ ಅಗ್ನಿ ಥಟ್ಟನೆ ಆರಿಹೋಯಿತು (೧೧-೧೨). ಭೂಮಿಯು ಕೆಳಗೆ ಇಳಿದುಹೋದಂತೆಯೂ ಮರಗಳು ಒಣಗಿ ಹೋದಂತೆಯೂ ಪರ್ವತಗಳು ಸುಟ್ಟು ಹೊಗೆಯಾಡುವಂತೆಯೂ ಕಂಡೆನು. ತನ್ನ ತಂದೆಯಾದ ಮಹಾರಾಜನು ಕಬ್ಬಿಣದ ಪೀಠದಲ್ಲಿ ಕಪ್ಪು ಬಟ್ಟೆಯನ್ನು ಹೊದೆದು ಕುಳಿತಂತೆ ಕಾಣಿಸಿತು. ಅವನನ್ನು ನೋಡಿ ಕಪ್ಪು ಮತ್ತು ಕಂದುಬಣ್ಣದ ಕೆಲವು ಹೆಂಗಸರು ನಗುತ್ತಿದ್ದರು (೧೩-೧೪). ಆಮೇಲೆ ಧರ್ಮಾತ್ಮನಾದ ತನ್ನ ತಂದೆಯು ಕೆಂಪುಬಣ್ಣದ ಹೂಮಾಲೆಯನ್ನು ಧರಿಸಿ ಕೆಂಪು ಗಂಧವನ್ನು ಬಳಿದುಕೊಂಡು ಕತ್ತೆಗಳನ್ನು ಹೂಡಿದ ರಥವನ್ನೇರಿ ದಕ್ಷಿಣ ದಿಕ್ಕಿಗೆ ಹೋದಂತೆ ಕಾಣಿಸಿತು. ವಿಕಾರವಾದ ಮುಖವುಳ್ಳ ಒಬ್ಬ ರಾಕ್ಷಸಿಯು ಕೆಂಪುಸೀರೆಯನ್ನುಟ್ಟುಕೊಂಡು ತನ್ನ ತಂದೆಯನ್ನು ನೋಡಿ ನಗುವ ಹಾಗೂ ಅವನನ್ನು

ಏವಮೇತನ್ಮಯಾ ದೃಷ್ಟಮಿಮಾಂ ರಾತ್ರಿಂ ಭಯಾವಹಾಮ್ ।
ಅಹಂ ರಾಮೋಽಥವಾ ರಾಜಾ ಲಕ್ಷ್ಮಣೋ ವಾ ಮರಿಷ್ಯತಿ ॥ ೧೭

ನರೋ ಯಾನೇನ ಯಃ ಸ್ವಪ್ನೇ ಖರಯುಕ್ತೇನ ಯಾತಿ ಹಿ ।
ಅಚಿರಾತ್ತಸ್ಯ ಧೂಮಾಗ್ರಂ ಚಿತಾಯಾಂ ಸಂಪ್ರದೃಶ್ಯತೇ ॥ ೧೮

ಏತನ್ನಿಮಿತ್ತಂ ದೀನೋಽಹಂ ತನ್ನ ವಃ ಪ್ರತಿಪೂಜಯೇ ।
ಶುಷ್ಯತೀವ ಚ ಮೇ ಕಂಠೋ ನ ಸ್ವಸ್ಥಮಿವ ಮೇ ಮನಃ ॥ ೧೯

ನ ಪಶ್ಯಾಮಿ ಭಯಸ್ಥಾನಂ ಭಯಂ ಚೈವೋಪಧಾರಯೇ ।
ಭ್ರಷ್ಟಶ್ಚ ಸ್ವರಯೋಗೋ ಮೇ ಛಾಯಾ ಚೋಪಹತಾ ಮಮ ॥ ೨೦

ಜುಗುಪ್ಸನ್ನಿವ ಚಾತ್ಮಾನಂ ನ ಚ ಪಶ್ಯಾಮಿ ಕಾರಣಮ್ ।
ಇಮಾಂ ಹಿ ದುಃಖಪ್ರಗತಿಂ ನಿಶಮ್ಯ ತಾಂ
ಅನೇಕರೂಪಾಮವಿತರ್ಕಿತಾಂ ಪುರಾ ।

ಹಿಡಿದು ಎಳೆಯುವ ಹಾಗೂ ಕಂಡೆನು (೧೫-೧೬). ಮಿತ್ರ, ಹೀಗೆ ಭಯಂಕರವಾದ ರಾತ್ರಿಯಲ್ಲಿ ಸ್ವಪ್ನವು ಕಾಣಿಸಿತು. ಇದರ ಫಲವಾಗಿ ನನಗೋ ರಾಮನಿಗೋ ಮಹಾರಾಜನಿಗೋ ಅಥವಾ ಲಕ್ಷ್ಮಣನಿಗೋ ಮರಣವಾಗುವುದು. ಸ್ವಪ್ನದಲ್ಲಿ ಯಾವ ಮನುಷ್ಯನು ಕತ್ತೆಯನ್ನು ಹೂಡಿದ ರಥದಲ್ಲಿ ಕುಳಿತು ಹೋಗುವಂತೆ ಕಾಣುವುದೋ, ಆ ಮನುಷ್ಯನು ಸ್ವಲ್ಪಕಾಲದಲ್ಲಿಯೇ ಚಿತೆಯಲ್ಲಿ ಮಲಗಬೇಕಾಗುವುದು. ಆ ಮನುಷ್ಯನ ಹೊಗೆಯು ಚಿತೆಯಿಂದ ಮೇಲಕ್ಕೇಳುವುದು ಕಂಡುಬರುತ್ತದೆ (೧೭-೧೮). ಈ ಕಾರಣದಿಂದ ನಾನು ವಿಷಣ್ಣನಾಗಿದ್ದೇನೆ. ನಿಮ್ಮ ವಿನೋದವನ್ನು ಮೆಚ್ಚಿ ಸಂತೋಷಿಸಲಾರದವ ನಾಗಿದ್ದೇನೆ. ನನ್ನ ಗಂಟಲು ಒಣಗುತ್ತಿದೆ. ಮನಸ್ಸಿಗೆ ಉಲ್ಲಾಸವಿಲ್ಲ. ಏಕೆ ಭಯವೋ ತಿಳಿಯದು. ಭಯವಂತೂ ಆಗುತ್ತಿದೆ. ನನ್ನ ಧ್ವನಿಯು ಕುಗ್ಗಿದೆ. ದೇಹಕಾಂತಿಯು ಕಂದಿದೆ. ನನ್ನನ್ನೇ ನಾನು ಬೈದುಕೊಳ್ಳಬೇಕೆಂದು ಅನ್ನಿಸುತ್ತಿದೆ. ಕಾರಣವೇನೋ ತಿಳಿಯದು (೧೯-೨೦). ಈ ಪ್ರಕಾರ ದುಃಸ್ವಪ್ನವು ನಾನಾ ರೂಪದಲ್ಲಿ ಕಾಣಿಸಿತು. ನನಗೆ ಹಿಂದೆ ಯಾವಾಗಲೂ ಇಂಥ ದುಃಸ್ವಪ್ನವು ಬಿದ್ದುದೇ ಇಲ್ಲ. ಮಹತ್ತರವಾದ ಭಯವು ನನ್ನ ಮನಸ್ಸಿನಲ್ಲಿ ನಾಟಿದೆ. ಈಗಲೇ ಮಹಾರಾಜನನ್ನು

ಭಯಂ ಮಹತ್ತದ್ಧೃದಯಾನ್ನ ಯಾತಿ ಮೇ
ವಿಚಿಂತ್ಯ ರಾಜಾನಮಚಿಂತ್ಯದರ್ಶನಮ್ ॥ ೨೧

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕೋನಸಪ್ತತಿತಮಃ ಸರ್ಗಃ

ಸಪ್ತತಿತಮಃ ಸರ್ಗಃ

ಭರತಪ್ರಸ್ಥಾನಮ್

ಭರತೇ ಬ್ರುವತಿ ಸ್ವಪ್ನಂ ದೂತಾಸ್ತೇ ಕ್ಲಾಂತವಾಹನಾಃ ।
ಪ್ರವಿಶ್ಯಾಸಹ್ಯಪರಿಖಂ ರಮ್ಯಂ ರಾಜಗೃಹಂ ಪುರಮ್ ॥ ೧

ಸಮಾಗಮ್ಯ ಚ ರಾಜ್ಞಾ ಚ ರಾಜಪುತ್ರೇಣ ಚಾರ್ಚಿತಾಃ ।
ರಾಜ್ಞಃ ಪಾದೌ ಗೃಹೀತ್ವಾತು ತಮೂಚುರ್ಭರತಂ ವಚಃ ॥ ೨

ನೋಡಿಬಿಡೋಣವೆಂದರೂ ಸಾಧ್ಯವಿಲ್ಲ. ಆದ್ದರಿಂದ (ಸ್ವಪ್ನದಲ್ಲಿ ಕಂಡ ಆತನ ಸ್ಥಿತಿಯನ್ನು ನೆನೆಸಿಕೊಂಡರೆ) ನನ್ನ ಭಯ ಹೋಗುವುದೇ ಇಲ್ಲ'' ಎಂದು ಹೇಳಿದನು (೨೧).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಅರುವತ್ತೊಂಬತ್ತನೆಯ ಸರ್ಗ

ಸರ್ಗ ೭೦

ಅಯೋಧ್ಯೆಗೆ ಭರತನ ಪ್ರಯಾಣ

ಇತ್ತ ಅಯೋಧ್ಯೆಯಿಂದ ಬಂದ ದೂತರು ರಮಣೀಯ ನಗರವಾದ ರಾಜಗೃಹವನ್ನು ಪ್ರವೇಶಿಸಿದರು. ಅಶ್ವಗಳು ಬಳಲಿದ್ದವು. ಆ ನಗರದ ಸುತ್ತಲೂ ಇದ್ದ ಕಂದಕವು ಶತ್ರುಗಳಿಗೆ ಪ್ರವೇಶಿಸಲು ಅಶಕ್ಯವಾಗಿತ್ತು. ಆ ದೂತರು ರಾಜನಾದ ಅಶ್ವಪತಿಯನ್ನೂ ರಾಜಪುತ್ರನಾದ ಯುಧಾಜಿತನನ್ನೂ ಸಂದರ್ಶಿಸಿ ಅವರ ಸತ್ಕಾರವನ್ನು ಸ್ವೀಕರಿಸಿದರು. ಭರತನು ತನ್ನ ಸ್ವಪ್ನವೃತ್ತಾಂತವನ್ನು ಹೇಳಿ ಮುಗಿಸುವ ಹೊತ್ತಿಗೆ ಆ ದೂತರು ಅವನಿದ್ದಲ್ಲಿಗೆ ಬಂದರು. ಭರತನ ಪಾದಗಳಿಗೆ ವಂದಿಸಿ ಅವರು ಹೀಗೆಂದರು

ಪುರೋಹಿತಸ್ತ್ವಾಂ ಕುಶಲಂ ಪ್ರಾಹ ಸರ್ವೇ ಚ ಮಂತ್ರಿಣಃ ।
ತ್ವರಮಾಣಶ್ಚ ನಿರ್ಯಾಹಿ ಕೃತ್ಯಮಾತ್ಯಯಿಕಂ ತ್ವಯಾ ॥ ೩

ಇಮಾನಿ ಚ ಮಹಾರ್ಹಾಣಿ ವಸ್ತ್ರಾಣ್ಯಾಭರಣಾನಿ ಚ ।
ಪ್ರತಿಗೃಹ್ಯ ವಿಶಾಲಾಕ್ಷ ಮಾತುಲಸ್ಯ ಚ ದಾಪಯ ॥ ೪

ಅತ್ರ ವಿಂಶತಿಕೋಟ್ಯಸ್ತು ನೃಪತೇರ್ಮಾತುಲಸ್ಯ ತೇ ।
ದಶ ಕೋಟ್ಯಸ್ತು ಸಂಪೂರ್ಣಾಸ್ತಥೈವ ಚ ನೃಪಾತ್ಮಜ ॥ ೫

ಪ್ರತಿಗೃಹ್ಯ ತು ತತ್ಸರ್ವಂ ಸ್ವನುರಕ್ತಃ ಸುಹೃಜ್ಜನೇ ।
ದೂತಾನುವಾಚ ಭರತಃ ಕಾಮೈಃ ಸಂಪ್ರತಿಪೂಜ್ಯ ತಾನ್ ॥ ೬

ಕಚ್ಚಿತ್ ಸ ಕುಶಲೀ ರಾಜಾ ಪಿತಾ ದಶರಥೋ ಮಮ ।
ಕಚ್ಚಿಚ್ಚಾರೋಗತಾ ರಾಮೇ ಲಕ್ಷ್ಮಣೇ ವಾ ಮಹಾತ್ಮನಿ ॥ ೭

(೧-೨) : "ರಾಜಪುತ್ರ, ಪುರೋಹಿತರೂ ಸಕಲ ಮಂತ್ರಿಗಳೂ ನಿನ್ನ ಕುಶಲವನ್ನು ವಿಚಾರಿಸಿದ್ದಾರೆ. ನೀನು ಈಗಲೇ ಅಯೋಧ್ಯೆಗೆ ಹೊರಟುಬರಬೇಕು. ಕಾಲವಿಳಂಬವಿಲ್ಲದೆ ನೀನು ಮಾಡಬೇಕಾದ ಒಂದು ಕಾರ್ಯವಿದೆ (೩). ಬೆಲೆಬಾಳುವ ವಸ್ತ್ರಗಳನ್ನೂ ಆಭರಣಗಳನ್ನೂ ಕಾಣಿಕೆಯಾಗಿ ತಂದಿದ್ದೇವೆ. ಇವುಗಳನ್ನು ಕೆಲವನ್ನು ನಿನ್ನ ಅಜ್ಜನಿಗೂ ಸೋದರಮಾವನಿಗೂ ಕೊಡಿಸು. ಇವುಗಳಲ್ಲಿ ಸ್ವೀಕರಿಸಿ ಇಪ್ಪತ್ತು ಕೋಟಿ ರೂಪಾಯಿಗಳ ವಸ್ತುಗಳನ್ನು ಅಶ್ವಪತಿರಾಜನಿಗೂ ಹತ್ತುಕೋಟಿ ರೂಪಾಯಿಗಳ ವಸ್ತುಗಳನ್ನು ಸೋದರಮಾವನಾದ ಯುಧಾಜಿತನಿಗೂ ಸಲ್ಲಿಸಬೇಕು" ಎಂದು ಹೇಳಿದರು (೪-೫). ಭರತನು ಆ ಕಾಣಿಕೆಗಳನ್ನು ಸ್ವೀಕರಿಸಿ ಅಜ್ಜನಿಗೂ ಸೋದರಮಾವನಿಗೂ ಪ್ರೀತಿಯಿಂದ ಅವುಗಳನ್ನು ಕೊಡಿಸಿದನು. ಅನಂತರ ಆ ದೂತರಿಗೆ ಬೇಕಾದ ವಸ್ತುಗಳನ್ನು ಕೊಡಿಸಿ ಸತ್ಕರಿಸಿ ಅವರನ್ನು ಕುರಿತು ಹೀಗೆಂದನು (೬). "ಸೌಮ್ಯರೆ, ನನ್ನ ತಂದೆಯಾದ ದಶರಥಮಹಾರಾಜನು ಕುಶಲದಿಂದಿರುವನೆ? ಮಹಾತ್ಮರಾದ ರಾಮಲಕ್ಷ್ಮಣರು ಆರೋಗ್ಯವಾಗಿರುವರೆ? ಪೂಜ್ಯಳೂ ಧರ್ಮಾನುಷ್ಠಾನತತ್ಪರಳೂ ಧರ್ಮಜ್ಞಳೂ ಗುಣಗ್ರಾಹಿಣಿಯೂ ಧೀಮಂತನಾದ

ಆರ್ಯಾ ಚ ಧರ್ಮನಿರತಾ ಧರ್ಮಜ್ಞಾ ಧರ್ಮದರ್ಶಿನೀ ।
ಆರೋಗಾ ಚಾಪಿ ಕೌಸಲ್ಯಾ ಮಾತಾ ರಾಮಸ್ಯ ಧೀಮತಃ ॥ ೮

ಕಚ್ಚಿತ್ ಸುಮಿತ್ರಾ ಧರ್ಮಜ್ಞಾ ಜನನೀ ಲಕ್ಷ್ಮಣಸ್ಯ ಯಾ ।
ಶತ್ರುಘ್ನಸ್ಯ ಚ ವೀರಸ್ಯ ಸಾರೋಗಾ ಚಾಪಿ ಮಧ್ಯಮಾ ॥ ೯

ಆತ್ಮಕಾಮಾ ಸದಾ ಚಂಡೀ ಕ್ರೋಧನಾ ಪ್ರಾಜ್ಞಮಾನಿನೀ ।
ಅರೋಗಾ ಚಾಪಿ ಮೇ ಮಾತಾ ಕೈಕೇಯೀ ಕಿಮುವಾಚ ಹ ॥ ೧೦

ಏವಮುಕ್ತಾಸ್ತು ತೇ ದೂತಾ ಭರತೇನ ಮಹಾತ್ಮನಾ ।
ಊಚುಃ ಸಪ್ರಶ್ರಯಂ ವಾಕ್ಯಮಿದಂ ತಂ ಭರತಂ ತದಾ ॥ ೧೧

ಕುಶಲಾಸ್ತೇ ನರವ್ಯಾಘ್ರ ಯೇಷಾಂ ಕುಶಲಮಿಚ್ಛಸಿ ।
ಶ್ರೀಶ್ಚ ತ್ವಾಂ ವೃಣುತೇ ಪದ್ಮಾ ಯುಜ್ಯತಾಂ ಚಾಪಿ ತೇ ರಥಃ ॥ ೧೨

ಭರತಶ್ಚಾಪಿ ತಾನ್ ದೂತಾನೇವಮುಕ್ತೋಽಭ್ಯಭಾಷತ ।
ಆಪೃಚ್ಛೇಽಹಂ ಮಹಾರಾಜಂ ದೂತಾಃ ಸಂತ್ವರಯಂತಿ ಮಾಮ್ ॥ ೧೩

ಏವಮುಕ್ತ್ವಾ ತು ತಾನ್ ದೂತಾನ್ ಭರತಃ ಪಾರ್ಥಿವಾತ್ಮಜಃ ।
ದೂತೈಃ ಸಂಚೋದಿತೋ ವಾಕ್ಯಂ ಮಾತಾಮಹಮುವಾಚ ಹ ॥ ೧೪

ಶ್ರೀರಾಮನ ಮಾತೆಯೂ ಆದ ಕೌಸಲ್ಯಾದೇವಿಯು ಆರೋಗ್ಯವಾಗಿ ಇದ್ದಾಳೆಯೇ? (೭-೮). ಧರ್ಮಜ್ಞಳೂ ವೀರರಾದ ಲಕ್ಷ್ಮಣಶತ್ರುಘ್ನರಿಗೆ ಜನನಿಯೂ ಆದ ಸುಮಿತ್ರಾದೇವಿಯು ಕುಶಲದಿಂದಿರುವಳೆ? ನನ್ನ ತಾಯಿ ಕೈಕೇಯಿಗೆ ಕ್ಷೇಮವೆ? ಅವಳು ಸ್ವಾರ್ಥಿ, ಹಠಮಾರಿ, ಕೋಪಿಷ್ಠೆ. ತಾನೇ ಬುದ್ಧಿಶಾಲಿಯೆಂದು ತಿಳಿದು ಕೊಂಡಿದ್ದಾಳೆ. ಅವಳು ಏನು ಹೇಳಿಕಳಿಸಿದ್ದಾಳೆ?'' ಎಂದು ಕೇಳಿದನು (೯-೧೦). ಆಗ ದೂತರು ವಿನಯ ಪೂರ್ವಕವಾಗಿ ''ಹೇ ವೀರಾಗ್ರಣಿ, ನೀನು ಯಾರಿಗೆ ಕುಶಲವನ್ನು ಬಯಸುವೆಯೊ ಅವರೆಲ್ಲರಿಗೂ ಕುಶಲವೇ ಸರಿ. ಪದ್ಮಹಸ್ತೆಯಾದ ಲಕ್ಷ್ಮಿಯು ನಿನಗೆ ಒಲಿಯಲಿ! ಈಗ ನಿನ್ನ ರಥವು ಸಿದ್ಧವಾಗಲಿ'' ಎಂದರು (೧೧-೧೨). ಭರತನು ದೂತರನ್ನು ಕುರಿತು ''ನಾನು ಕೇಕಯರಾಜನ ಬಳಿಗೆ ಹೋಗಿ ನೀವು ತ್ವರೆಪಡಿಸುವುದನ್ನು ತಿಳಿಸಿ, ಹೊರಡಲು ಅವನ ಅನುಜ್ಞೆಯನ್ನು ಪಡೆದು ಬರುವೆನು''

ರಾಜನ್ ಪಿತುರ್ಗಮಿಷ್ಯಾಮಿ ಸಕಾಶಂ ದೂತಚೋದಿತಃ ।
ಪುನರಪ್ಯಹಮೇಷ್ಯಾಮಿ ಯದಾ ಮೇ ತ್ವಂ ಸ್ಮರಿಷ್ಯಸಿ ॥ ೧೫

ಭರತೇನೈವಮುಕ್ತಸ್ತು ನೃಪೋ ಮಾತಾಮಹಸ್ತದಾ ।
ತಮುವಾಚ ಶುಭಂ ವಾಕ್ಯಂ ಶಿರಸ್ಯಾಘ್ರಾಯ ರಾಘವಮ್ ॥ ೧೬

ಗಚ್ಛತಾತಾನುಜಾನೇ ತ್ವಾಂ ಕೈಕೇಯೀ ಸುಪ್ರಜಾಸ್ತ್ವಯಾ ।
ಮಾತರಂ ಕುಶಲಂ ಬ್ರೂಯಾಃ ಪಿತರಂ ಚ ಪರಂತಪ ॥ ೧೭

ಪುರೋಹಿತಂ ಚ ಕುಶಲಂ ಯೇ ಚಾನ್ಯೇ ದ್ವಿಜಸತ್ತಮಾಃ ।
ತೌ ಚ ತಾತ ಮಹೇಷ್ವಾಸೌ ಭ್ರಾತರೌ ರಾಮಲಕ್ಷ್ಮಣೌ ॥ ೧೮

ತಸ್ಮೈ ಹಸ್ತ್ಯುತ್ತಮಾಂಶ್ಚಿತ್ರಾನ್ ಕಂಬಲಾನಜಿನಾನಿ ಚ ।
ಅಭಿಸತ್ಕೃತ್ಯ ಕೈಕೇಯೋ ಭರತಾಯ ಧನಂ ದದೌ ॥ ೧೯

ರುಕ್ಮನಿಷ್ಕಸಹಸ್ರೇ ದ್ವೇ ಷೋಡಶಾಶ್ವಶತಾನಿ ಚ ।
ಸತ್ಕೃತ್ಯ ಕೈಕಯೀಪುತ್ರಂ ಕೇಕಯೋ ಧನಮಾದಿಶತ್ ॥ ೨೦

ಎಂದು ಹೇಳಿ ಅಜ್ಜನಾದ ಅಶ್ವಪತಿಯ ಸಮೀಪಕ್ಕೆ ಹೋದನು (೧೩-೧೪). ಆತನನ್ನು ಕುರಿತು "ಮಹಾರಾಜ, ನನ್ನ ತಂದೆಯ ಕಡೆಯಿಂದ ದೂತರು ಬಂದು ನನ್ನನ್ನು ತ್ವರೆಪಡಿಸುತ್ತಿದ್ದಾರೆ. ನಾನು ಈಗಲೇ ಹೊರಡುತ್ತೇನೆ. ಪುನಃ ಯಾವಾಗ ಬರಬೇಕೆಂದು ಬಯಸುವೆಯೋ ಆಗ ಮತ್ತೆ ಬರುತ್ತೇನೆ' ಎಂದನು (೧೫). ಆಗ ಅಶ್ವಪತಿಯು ಭರತನ ಮಾತನ್ನು ಲಾಲಿಸಿ ಪ್ರೀತಿಯಿಂದ ಅವನ ಶಿರಸ್ಸನ್ನು ಆಘ್ರಾಣಿಸಿ ಮಗು, ಹೋಗಿಬಾ. ಕೈಕೇಯಿಯು ನಿನ್ನನ್ನು ಪಡೆದು ಧನ್ಯಳಾದಳು. ನಿನ್ನ ತಾಯಿಗೂ ತಂದೆಗೂ ನಾನು ಕುಶಲವನ್ನು ವಿಚಾರಿಸಿದ್ದೇನೆಂದು ತಿಳಿಸು (೧೬-೧೭). ನಿಮ್ಮ ಪುರೋಹಿತರಿಗೂ ಇತರ ಬ್ರಾಹ್ಮಣೋತ್ತಮರಿಗೂ ನನ್ನ ಕ್ಷೇಮವಾರ್ತೆಯನ್ನು ಹೇಳು. ನಿನ್ನ ಭ್ರಾತೃಗಳೂ ಮಹಾವೀರರೂ ಆದ ರಾಮಲಕ್ಷ್ಮಣರ ಕುಶಲವನ್ನು ನಾನು ವಿಚಾರಿಸಿದ್ದೇನೆಂದು ಅವರಿಗೆ ಹೇಳು" ಎಂದನು (೧೮). ಹೀಗೆ ಹೇಳಿ ಕೇಕಯ ರಾಜನು ಉತ್ತಮ ಜಾತಿಯ ಕೆಲವು ಆನೆಗಳನ್ನೂ ಚಿತ್ರವರ್ಣದ ಉಣ್ಣೆಯ ವಸ್ತ್ರಗಳನ್ನೂ ಒಳ್ಳೆಯ ಕೆಲವು ಚರ್ಮಗಳನ್ನೂ ಭರತನಿಗೆ ಪಾರಿತೋಷಕವೆಂದು ಕೊಟ್ಟನು. ಅಲ್ಲದೆ

ತಥಾಮಾತ್ಯಾನಭಿಪ್ರೇತಾನ್ ವಿಶ್ವಾಸ್ಯಾಂಶ್ಚ ಗುಣಾನ್ವಿತಾನ್ ।
ದದಾವಶ್ವಪತಿಃ ಕ್ಷಿಪ್ರಂ ಭರತಾಯಾನುಯಾಯಿನಃ ॥ ೨೧

ಐರಾವತಾನೈಂದ್ರಶಿರಾನ್ನಾಗಾಂಶ್ಚ ಪ್ರಿಯದರ್ಶನಾನ್ ।
ಖರಾನ್ ಶೀಘ್ರಾನ್ ಸುಸಂಯುಕ್ತಾನ್ ಮಾತುಲೋಽಸ್ಮೈ ಧನಂ ದದೌ
ಅಂತಃಪುರೇಽತಿಸಂವೃದ್ಧಾನ್ ವ್ಯಾಘ್ರವೀರ್ಯಬಲಾನ್ವಿತಾನ್ ।
ದಂಷ್ಟ್ರಾಯುಧಾನ್ ಮಹಾಕಾಯಾನ್ ಶುನಶ್ಚೋಪಾಯನಂ ದದೌ ॥

ಸ ದತ್ತಂ ಕೇಕಯೇಂದ್ರೇಣ ಧನಂ ತನ್ನಾಭ್ಯನಂದತ ।
ಭರತಃ ಕೈಕಯೀಪುತ್ರೋ ಗಮನತ್ವರಯಾ ತದಾ ॥ ೨೪

ಬಭೂವ ಹ್ಯಸ್ಯ ಹೃದಯೇ ಚಿಂತಾ ಸುಮಹತೀ ತದಾ ।
ತ್ವರಯಾ ಚಾಪಿ ದೂತಾನಾಂ ಸ್ವಪ್ನಸ್ಯಾಪಿ ಚ ದರ್ಶನಾತ್ ॥ ೨೫

ಸ ಸ್ವವೇಶ್ಮ ವ್ಯತಿಕ್ರಮ್ಯ ನರನಾಗಾಶ್ವಸಂವೃತಮ್ ।
ಪ್ರಪೇದೇ ಸುಮಹಚ್ಛ್ರೀಮಾನ್ ರಾಜಮಾರ್ಗಮನುತ್ತಮಮ್ ॥ ೨೬

ಎರಡು ಸಾವಿರ ಚಿನ್ನದ ನಾಣ್ಯಗಳನ್ನೂ ಒಂದು ಸಾವಿರದ ಆರುನೂರು ಕುದುರೆಗಳನ್ನೂ ಭರತನಿಗೆ ಸತ್ಕಾರಪೂರ್ವಕವಾಗಿ ಕೊಟ್ಟನು (೧೯-೨೦). ಮತ್ತು ಗುಣಶಾಲಿಗಳೂ ವಿಶ್ವಾಸಯೋಗ್ಯರೂ ಪ್ರೀತಿಪಾತ್ರರೂ ಆದ ಕೆಲವು ಮಂದಿ ಪರಿಜನರನ್ನು ಭರತನ ಜೊತೆಯಲ್ಲಿ ಹೋಗುವಂತೆ ನಿಯಮಿಸಿದನು (೨೧). ಸೋದರಮಾವನಾದ ಯುಧಾಜಿತನು ಇರಾವಂತ, ಇಂದ್ರಶಿರ ಎಂಬ ಪರ್ವತಗಳಲ್ಲಿ ಹುಟ್ಟಿದ ಸುಂದರಾಕೃತಿಯ ಕೆಲವು ಆನೆಗಳನ್ನೂ ಸುಶಿಕ್ಷಿತವಾದ ಹೇಸರಕತ್ತೆಗಳನ್ನೂ ದೊಡ್ಡ ದೊಡ್ಡ ನಾಯಿಗಳನ್ನೂ ಭರತನಿಗೆ ಬಹುಮಾನವಾಗಿ ಕೊಟ್ಟನು. ಆ ನಾಯಿಗಳು ಅರಮನೆಯಲ್ಲಿ ಚೆನ್ನಾಗಿ ಬೆಳೆದು ಕೊಬ್ಬಿ ಹುಲಿಗಳಂತೆ ಬಲಪರಾಕ್ರಮಗಳಿಂದ ಮೆರೆಯುತ್ತಿದ್ದವು. ಅವುಗಳ ಹಲ್ಲು ಆಯುಧಗಳಂತೆ ತೀಕ್ಷ್ಣವಾಗಿತ್ತು (೨೨-೨೩). ಆದರೆ ಅಯೋಧ್ಯೆಗೆ ಹೋಗಬೇಕೆಂಬ ಅವಸರದಲ್ಲಿದ್ದ ಭರತನಿಗೆ ಅದು ಯಾವುದೂ ಬೇಕಾಗಲಿಲ್ಲ. ಕೆಟ್ಟ ಸ್ವಪ್ನವನ್ನು ಕಂಡದ್ದು, ಅದಕ್ಕೆ ಸರಿಯಾಗಿ ದೂತರು ತ್ವರೆಪಡಿಸುವುದು – ಇವೆರಡೂ ಸೇರಿ ಅವನ ಹೃದಯದಲ್ಲಿ ಮಹತ್ತರವಾದ ಚಿಂತೆ ಎದ್ದಿತ್ತು (೨೪-೨೫). ಅವನು ತನ್ನ ನಿವಾಸದಿಂದ ಹೊರಟು ಜನರಿಂದಲೂ ಆನೆ

ಅಭ್ಯತೀತ್ಯ ತತೋಽಪಶ್ಯದಂತಃಪುರಮನುತ್ತಮಮ್ ।
ತತಸ್ತದ್ಭರತಃ ಶ್ರೀಮಾನಾವಿವೇಶಾನಿವಾರಿತಃ ॥ ೨೭

ಸ ಮಾತಾಮಹಮಾಪೃಚ್ಛ್ಯ ಮಾತುಲಂ ಚ ಯುಧಾಜಿತಮ್ ।
ರಥಮಾರುಹ್ಯ ಭರತಃ ಶತ್ರುಘ್ನಸಹಿತೋ ಯಯೌ ॥ ೨೮

ರಥಾನ್ ಮಂಡಲಚಕ್ರಾಂಶ್ಚ ಯೋಜಯಿತ್ವಾ ಪರಶ್ಶತಮ್ ।
ಉಷ್ಟ್ರಗೋಽಶ್ವಖರೈರ್ಭೃತ್ಯಾ ಭರತಂ ಯಾಂತಮನ್ವಯುಃ ॥ ೨೯

ಬಲೇನ ಗುಪ್ತೋ ಭರತೋ ಮಹಾತ್ಮಾ
ಸಹಾರ್ಯಕಸ್ಯಾತ್ಮಸಮೈರಮಾತ್ಯೈಃ ।
ಆದಾಯ ಶತ್ರುಘ್ನಮಪೇತಶತ್ರುಃ
ಗೃಹಾದ್ಯಯೌ ಸಿದ್ಧ ಇವೇಂದ್ರ ಲೋಕಾತ್ ॥ ೩೦

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತತಿತಮಃ ಸರ್ಗಃ

❂❂❂

ಕುದುರೆಗಳಿಂದಲೂ ತುಂಬಿದ ವಿಶಾಲವಾದ ರಾಜಮಾರ್ಗವನ್ನು ದಾಟಿ ಅರಮನೆಗೆ ಹೋದನು. ನೇರವಾಗಿ ಒಳಕ್ಕೆ ಹೋಗಿ ತನ್ನ ಮಾತಾಮಹನಿಗೂ ಮಾತುಲನಿಗೂ ಹೋಗಿಬರುವನೆಂದು ಹೇಳಿ ಶತ್ರುಘ್ನನೊಡನೆ ರಥವನ್ನು ಹತ್ತಿ ಹೊರಟುಬಿಟ್ಟನು (೨೭-೨೮). ಆನಂತರ ಭೃತ್ಯರು ಮಂಡಲಾಕಾರದ ಚಕ್ರಗಳಿರುವ ನೂರಾರು ರಥಗಳನ್ನೂ ಒಂಟೆ ಎತ್ತು ಕುದುರೆ ಹೇಸರಕತ್ತೆಗಳನ್ನೂ ತೆಗೆದುಕೊಂಡು ಭರತನ ಹಿಂದೆ ಹೋದರು (೨೯). ಅಜ್ಜನಾದ ಅಶ್ವಪತಿಯು ಭರತನ ರಕ್ಷಣೆಗಾಗಿ ಸೈನ್ಯವನ್ನು ಕಳಿಸಿದ್ದನು. ವಿಶ್ವಾಸಪಾತ್ರರಾದ ಪರಿಜನರು ಅವನ ಜೊತೆಗೆ ಬಂದಿದ್ದರು. ಹೀಗೆ ಭರತನು ಶತ್ರುಘ್ನಸಮೇತನಾಗಿ, ಇಂದ್ರಲೋಕದಿಂದ ಸಿದ್ಧಪುರುಷನು ಹೊರಡುವಂತೆ ಹೊರಟು, ಯಾವ ಅಡ್ಡಿಯೂ ಇಲ್ಲದೆ ಪ್ರಯಾಣಮಾಡಿದನು (೩೦).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಎಪ್ಪತ್ತನೆಯ ಸರ್ಗ

❂❂❂

ಏಕಸಪ್ತತಿತಮಃ ಸರ್ಗಃ

ಅಯೋಧ್ಯಾಗಮನಮ್

ಸ ಪ್ರಾಙ್ಮುಖೋ ರಾಜಗೃಹಾದಭಿನಿರ್ಯಾಯ ರಾಘವಃ ।
ತತಃ ಸುದಾಮಾಂ ದ್ಯುತಿಮಾನ್ ಸಂತೀರ್ಯಾವೇಕ್ಷ್ಯ ತಾಂ ನದೀಮ್ ॥

ಹ್ರಾದಿನೀಂ ದೂರಪಾರಾಂ ಚ ಪ್ರತ್ಯಕ್ಸ್ರೋತಸ್ತರಂಗಿಣೀಮ್ ।
ಶತದ್ರೂಮತರಚ್ಛ್ರೀಮಾನ್ನದೀಮಿಕ್ಷ್ವಾಕುನಂದನಃ ॥ ೨

ಏಲಾಧಾನೇ ನದೀಂ ತೀರ್ತ್ವಾ ಪ್ರಾಪ್ಯ ಚಾಪರಪರ್ಪಟಾನ್ ।
ಶಿಲಾಮಾಕುರ್ವತೀಂ ತೀರ್ತ್ವಾ ಹ್ಯಾಗ್ನೇಯಂ ಶಲ್ಯಕರ್ತನಮ್ ॥ ೩

ಸತ್ಯಸಂಧಃ ಶುಚಿಃ ಶ್ರೀಮಾನ್ ಪ್ರೇಕ್ಷಮಾಣಃ ಶಿಲಾವಹಾಮ್ ।
ಅತ್ಯಯಾತ್ ಸ ಮಹಾಶೈಲಾನ್ ವನಂ ಚೈತ್ರರಥಂ ಪ್ರತಿ ॥ ೪

ಸರ್ಗ ೭೧

ಭರತನು ಅಯೋಧ್ಯೆಗೆ ಬಂದು ಸೇರುವುದು

ರಘುಕುಲೋತ್ಪನ್ನನೂ ತೇಜಸ್ವಿಯೂ ಆದ ಭರತನು ರಾಜಗೃಹದಿಂದ ಪೂರ್ವಾಭಿಮುಖವಾಗಿ ಹೊರಟನು. ಅವನು ಸುದಾಮಾ ನದಿಯನ್ನು ದಾಟಿ ವಿಶಾಲವಾಗಿಯೂ ಪಶ್ಚಿಮಾಭಿಮುಖವಾಗಿಯೂ ಹರಿಯುವ ಹ್ರಾದಿನಿಯನ್ನು ಹಾಯ್ದುಹೋಗಿ ಶತದ್ರೂ ನದಿಯನ್ನು ದಾಟಿದನು* (೧-೨). ಅನಂತರ ಏಲಾಧಾನವೆಂಬ ಗ್ರಾಮದ ಬಳಿ ಇನ್ನೊಂದು ಹೊಳೆಯನ್ನು ದಾಟಿ ಅಪರಪರ್ಪಟ ದೇಶದಲ್ಲಿ ಪ್ರವಾಹವೇಗದಿಂದ ಬಂಡೆಗಳನ್ನು ಸೆಳೆಯುವ ಶಿಲಾವಹಾ ಎಂಬ ನದಿಯನ್ನು ಆಗ್ನೇಯ ದಿಕ್ಕಿನಲ್ಲಿರುವ ಶಲ್ಯಕರ್ತನೆಂಬ ಗ್ರಾಮದ ಸಮೀಪದಲ್ಲಿ ದಾಟಿದನು. ಅಲ್ಲಿ ಸ್ನಾನಾದಿಗಳನ್ನು ಮುಗಿಸಿಕೊಂಡು ಶುಚಿಯಾಗಿ ಶಿಲಾವಹಾ

---

* ಅಯೋಧ್ಯೆಯಿಂದ ದೂತರು ಹತ್ತಿರವೂ ದುರ್ಗಮವೂ ಆದ ದಾರಿಯನ್ನು ಹಿಡಿದು ಬಂದಿದ್ದರು. ಈಗ ಭರತನೊಡನೆ ಚತುರಂಗಬಲವಿದ್ದುದರಿಂದ ಅವನು ವಿಶಾಲವೂ ದೂರವೂ ಆದ ಇನ್ನೊಂದು ದಾರಿಯನ್ನು ಹಿಡಿದು ಅಯೋಧ್ಯೆಗೆ ಹೊರಟನು.

ಸರಸ್ವತೀಂ ಚ ಗಂಗಾಂ ಚ ಯುಗ್ಮೇನ ಪ್ರತ್ಯಪದ್ಯತ ।
ಉತ್ತರಾನ್ ವೀರಮತ್ಸ್ಯಾನಾಂ ಭಾರುಂಡಂ ಪ್ರಾವಿಶದ್ವನಮ್ ॥ ೫
ವೇಗಿನೀಂ ಚ ಕುಲಿಂಗಾಖ್ಯಾಂ ಹ್ರಾದಿನೀಂ ಪರ್ವತಾವೃತಾಮ್ ।
ಯಮುನಾಂ ಪ್ರಾಪ್ಯ ಸಂತೀರ್ಣೋ ಬಲಮಾಶ್ವಾಸಯತ್ತದಾ ॥ ೬
ಶೀತೀಕೃತ್ಯ ತು ಗಾತ್ರಾಣಿ ಕ್ಲಾನ್ತಾನಾಶ್ವಾಸ್ಯ ವಾಜಿನಃ ।
ತತ್ರ ಸ್ನಾತ್ವಾ ಚ ಪೀತ್ವಾ ಚ ಪ್ರಾಯಾದಾದಾಯ ಚೋದಕಮ್ ॥ ೭
ರಾಜಪುತ್ರೋ ಮಹಾರಾಣ್ಯಮನಭೀಕ್ಷ್ಣೋಪಸೇವಿತಮ್ ।
ಭದ್ರೋ ಭದ್ರೇಣ ಯಾನೇನ ಮಾರುತಃ ಖಮಿವಾತ್ಯಯಾತ್ ॥ ೮
ಭಾಗೀರಥೀಂ ದುಷ್ಪ್ರತರಾಮಂಶುಧಾನೇ ಮಹಾನದೀಮ್ ।
ಉಪಾಯಾದ್ರಾಘವಸ್ತೂರ್ಣಂ ಪ್ರಾಗ್ವಟೇ ವಿಶ್ರುತೇ ಪುರೇ ॥ ೯

ನದಿಯನ್ನು ನೋಡುತ್ತ ಆದರ ತೀರದಲ್ಲಿ ಅನೇಕ ಪರ್ವತಗಳನ್ನು ದಾಟಿ ಚೈತ್ರರಥವೆಂಬ ವನಕ್ಕೆ ಬಂದನು (೩-೪). ಭರತನು ಅಲ್ಲಿಂದ ಹೊರಟು ಸರಸ್ವತಿ ಗಂಗಾ ಎಂಬ (ಪಶ್ಚಿಮಾಭಿಮುಖವಾಗಿ ಕವಲೊಡೆದು ಹರಿಯುವ) ಎರಡು ನದಿಗಳ ಸಂಗಮಸ್ಥಳವನ್ನು ಸೇರಿ, ಆಮೇಲೆ ವೀರಮತ್ಸ್ಯದೇಶದ ಉತ್ತರಭಾಗದಲ್ಲಿರುವ ಭಾರುಂಡವನಕ್ಕೆ ಬಂದನು (೫). ಭರತನು ಅಲ್ಲಿಂದ ಮುಂದೆ ಹೋಗಿ, ಪರ್ವತ ಮಧ್ಯದಲ್ಲಿ ಶಬ್ದಮಾಡುತ್ತ ವೇಗದಿಂದ ಹರಿಯುವ ಕುಲಿಂಗಾ ನದಿಯನ್ನು ದಾಟಿ ಯಮುನಾ ನದಿಯ ತೀರಕ್ಕೆ ಬಂದು ಸ್ವಲ್ಪ ಹೊತ್ತು ಸೈನ್ಯಕ್ಕೆ ವಿಶ್ರಾಂತಿಯನ್ನು ಕೊಟ್ಟನು. ಬಳಲಿದ್ದ ಕುದುರೆಗಳನ್ನು ಆ ನದಿಯಲ್ಲಿ ಸ್ನಾನ ಮಾಡಿಸಿ ಬಳಲಿಕೆಯನ್ನಾರಿಸುವಂತೆ ಮಾಡಿದನು. ತಾನೂ ಸ್ನಾನಮಾಡಿ ನೀರು ಕುಡಿದು ದಾರಿಯಲ್ಲಿ ಬೇಕಾಗುವುದೆಂದು ಪಾತ್ರೆಗಳಲ್ಲಿ ನೀರನ್ನು ಸಂಗ್ರಹಿಸಿ ಮುಂದೆ ಹೊರಟನು (೬-೭). ಅನಂತರ ಆ ರಾಜಪುತ್ರನು ಭದ್ರಜಾತಿಯ ಒಂದು ಗಜವನ್ನೇರಿ, ಜನಸಂಚಾರವಿಲ್ಲದ ಒಂದು ಮಹಾರಣ್ಯವನ್ನು, ಗಾಳಿಯು ಗಗನದಲ್ಲಿ ಬೀಸುವಂತೆ, ವೇಗದಿಂದ ದಾಟಿ ಹೋದನು (೮). ಅನಂತರ ಅಂಶುಧಾನವೆಂಬ ನಗರಕ್ಕೆ ಬರಲು ಭಾಗೀರಥೀ ನದಿಯು ಕಾಣಿಸಿತು. ಅಲ್ಲಿ ಅದನ್ನು ದಾಟುವುದು ಕಷ್ಟವೆಂದು ತಿಳಿದು ಪ್ರಾಗ್ವಟ ಎಂಬ ಪಟ್ಟಣದ ಸಮೀಪಕ್ಕೆ

ಸ ಗಂಗಾಂ ಪ್ರಾಗ್ವಟೇ ತೀರ್ತ್ವಾ ಸಮಾಯಾತ್ ಕುಟಿಕೋಷ್ಠಿಕಾಮ್
ಸಬಲಸ್ತಾಂ ಸ ತೀರ್ತ್ವಾಥ ಸಮಾಯಾದ್ಧರ್ಮವರ್ಧನಮ್ ॥ ೧೦

ತೋರಣಂ ದಕ್ಷಿಣಾರ್ಧೇನ ಜಂಬೂಪ್ರಸ್ಥಮುಪಾಗಮತ್ ।
ವರೂಥಂ ಚ ಯಯೌ ರಮ್ಯಂ ಗ್ರಾಮಂ ದಶರಥಾತ್ಮಜಃ ॥ ೧೧

ತತ್ರ ರಮ್ಯೇ ವನೇ ವಾಸಂ ಕೃತ್ವಾಸೌ ಪ್ರಾಙ್ಮುಖೋ ಯಯೌ ।
ಉದ್ಯಾನಮುಜ್ಜಿಹಾನಾಯಾಃ ಪ್ರಿಯಕಾ ಯತ್ರ ಪಾದಪಾಃ ॥ ೧೨

ಸಾಲಾಂಸ್ತು ಪ್ರಿಯಕಾನ್ ಪ್ರಾಪ್ಯ ಶೀಘ್ರಾನಾಸ್ಥಾಯ ವಾಜಿನಃ ।
ಅನುಜ್ಞಾಪ್ಯಾಥ ಭರತೋ ವಾಹಿನೀಂ ತ್ವರಿತೋ ಯಯೌ ॥ ೧೩

ವಾಸಂ ಕೃತ್ವಾ ಸರ್ವತೀರ್ಥೇ ತೀರ್ತ್ವಾ ಚೋತ್ತಾನಿಕಾಂ ನದೀಮ್ ।
ಅನ್ಯಾ ನದೀಶ್ಚ ವಿವಿಧಾಃ ಪಾರ್ವತೀಯೈಸ್ತುರಂಗಮೈಃ ॥ ೧೪

ಹಸ್ತಿಪೃಷ್ಠಕಮಾಸಾದ್ಯ ಕುಟಿಕಾಮತ್ಯವರ್ತತ ।
ತತಾರ ಚ ನರವ್ಯಾಘ್ರೋ ಲೌಹಿತ್ಯೇ ಸಿಕತಾವತೀಮ್ ॥ ೧೫

ಹೋಗಿ ಆ ಗಂಗಾನದಿಯನ್ನು ದಾಟಿದನು. ಅವನು ಸೈನ್ಯಸಮೇತನಾಗಿ ಮುಂದೆ ಕುಟಿಕೋಷ್ಠಿಕಾ ಎಂಬ ನದಿಯನ್ನು ಹಾಯ್ದು ಧರ್ಮವರ್ಧನವೆಂಬ ಗ್ರಾಮಕ್ಕೆ ಬಂದನು (೯-೧೦). ಆ ದಶರಥಪುತ್ರನು ಅಲ್ಲಿಂದ ತೋರಣ ಎಂಬ ಊರಿಗೆ ಹೋಗಿ ಅದರ ದಕ್ಷಿಣಕ್ಕಿರುವ ಜಂಬೂಪ್ರಸ್ಥವೆಂಬ ಗ್ರಾಮದ ಮೂಲಕ ವರೂಥವೆಂಬ ಸುಂದರವಾದ ಹಳ್ಳಿಗೆ ಬಂದನು. ಅದರ ಬಳಿಯಲ್ಲಿದ್ದ ವನದಲ್ಲಿ ಸ್ವಲ್ಪಕಾಲ ವಿಶ್ರಮಿಸಿ ಪೂರ್ವಾಭಿಮುಖವಾಗಿ ಹೊರಟು ಉಜ್ಜಿಹಾನವೆಂಬ ನಗರದ ಬಳಿಯಿದ್ದ ಉದ್ಯಾನವನಕ್ಕೆ ಬಂದನು. ಅಲ್ಲಿ ಕದಂಬವೃಕ್ಷಗಳೇ ಹೆಚ್ಚಾಗಿದ್ದವು (೧೧-೧೨). ಅನಂತರ ಭರತನು ಶೀಘ್ರಗಾಮಿಗಳಾದ ಕುದುರೆಗಳನ್ನು ತನ್ನ ರಥಕ್ಕೆ ಕಟ್ಟಿಸಿ ಹಿಂದಿನಿಂದ ಬರುವಂತೆ ಪರಿವಾರದವರಿಗೆ ತಿಳಿಸಿ ಅವರನ್ನು ಬಿಟ್ಟು ತಾನು ತ್ವರೆಯಿಂದ ಮುಂದೆ ಹೊರಟನು (೧೩). ಮುಂದೆ ಸರ್ವತೀರ್ಥವೆಂಬ ಗ್ರಾಮದಲ್ಲಿ ಒಂದು ರಾತ್ರಿಯಿದ್ದು ಮರುದಿನ ಉತ್ತನಿಕಾ ನದಿಯನ್ನೂ ಇನ್ನೂ ಕೆಲವು ನದಿಗಳನ್ನೂ ಪರ್ವತ ಪ್ರದೇಶದಲ್ಲಿ ಹುಟ್ಟಿ ಬೆಳೆದ ತನ್ನ ರಥಾಶ್ವಗಳಿಂದಲೇ ದಾಟಿಹೋದನು (೧೪). ಆ ವೀರನು

ಏಕಸಾಲೇ ಸ್ಥಾಣುಮತೀಂ ವಿನತೇ ಗೋಮತೀಂ ನದೀಮ್ ।
ಕಲಿಂಗನಗರೇ ಚಾಪಿ ಪ್ರಾಪ್ಯ ಸಾಲವನಂ ತದಾ ॥ ೧೬

ಭರತಃ ಕ್ಷಿಪ್ರಮಾಗಚ್ಛತ್ ಸುಪರಿಶ್ರಾಂತವಾಹನಃ ।
ವನಂ ಚ ಸಮತೀತ್ಯಾಶು ಶರ್ವರ್ಯಾಮರುಣೋದಯೇ ॥ ೧೭

ಅಯೋಧ್ಯಾಂ ಮನುನಾ ರಾಜ್ಞಾ ನಿರ್ಮಿತಾಂ ಸಂದದರ್ಶ ಹ ।
ತಾಂ ಪುರೀ ಪುರುಷವ್ಯಾಘ್ರಃ ಸಪ್ತರಾತ್ರೋಷಿತಃ ಪಥಿ ॥ ೧೮

ಅಯೋಧ್ಯಾಮಗ್ರತೋ ದೃಷ್ಟ್ವಾ ಸಾರಥಿಂ ವಾಕ್ಯಮಬ್ರವೀತ್ ।
ಏಷಾ ನಾತಿಪ್ರತೀತಾ ಮೇ ಪುಣ್ಯೋದ್ಯಾನಾ ಯಶಸ್ವಿನೀ ॥ ೧೯

ಅಯೋಧ್ಯಾ ದೃಶ್ಯತೇ ದೂರಾತ್ ಸಾರಥೇ ಪಾಂಡುಮೃತ್ತಿಕಾ ।
ಯಜ್ವಭಿರ್ಗುಣಸಂಪನ್ನೈರ್ಬ್ರಾಹ್ಮಣೈರ್ವೇದಪಾರಗೈಃ ॥ ೨೦

ಭೂಯಿಷ್ಠಮೃದ್ಧೈರಾಕೀರ್ಣಾ ರಾಜರ್ಷಿ ಪರಿಪಾಲಿತಾ ।
ಅಯೋಧ್ಯಾಯಾಂ ಪುರಾ ಶಬ್ದಃ ಶ್ರೂಯತೇ ತುಮುಲೋ ಮಹಾನ್

ಹಸ್ತಿಪೃಷ್ಠಕವೆಂಬ ಗ್ರಾಮಕ್ಕೆ ಹೋಗಿ ಕುಟಿಕಾ ನದಿಯನ್ನು ದಾಟಿ ಲೌಹಿತ್ಯವೆಂಬ ಊರಿನ ಬಳಿ ಸಿಕತಾವತಿಯನ್ನು ಹಾಯ್ದನು. ಭರತನು ಏಕಸಾಲದಲ್ಲಿ ಸ್ಥಾಣುಮತಿಯನ್ನೂ ವಿನತದಲ್ಲಿ ಗೋಮತೀ ನದಿಯನ್ನೂ ದಾಟಿ ಕಳಿಂಗ ನಗರದ ಸಮೀಪದಲ್ಲಿದ್ದ ಸಾಲವನಕ್ಕೆ ಬಂದನು (೧೫-೧೬). ಅಷ್ಟರಲ್ಲಿ ರಾತ್ರಿಯಾಯಿತು. ರಥಾಶ್ವಗಳು ಬಳಲಿದ್ದವು. ಆದರೂ ಭರತನು ರಾತ್ರಿಯೇ ಪ್ರಯಾಣ ಮಾಡಿ ಸಾಲವನವನ್ನು ದಾಟಿ ವೇಗದಿಂದ ಹೋಗುತ್ತ ಅರುಣೋದಯ ಕಾಲದಲ್ಲಿ, ಮನುರಾಜನಿಂದ ನಿರ್ಮಿತವಾದ ಅಯೋಧ್ಯಾನಗರಿಯನ್ನು ಕಂಡನು! ಭರತನು ರಾಜಗೃಹದಿಂದ ಹೊರಟಮೇಲೆ ಮಾರ್ಗದಲ್ಲಿ ಏಳು ರಾತ್ರಿಗಳು ಕಳೆದಿದ್ದವು (೧೭-೧೮). ಭರತನು ಎದುರಿಗೆ ದೂರದಲ್ಲಿದ್ದ ಅಯೋಧ್ಯೆಯನ್ನು ನೋಡುತ್ತ ಸಾರಥಿಯನ್ನು ಕುರಿತು ಹೀಗೆಂದನು : ''ಸಾರಥಿ, ಬಿಳಿಯ ಜೇಡಿಯಮಣ್ಣಿನಿಂದ ಲಿಪ್ತವಾದ ಅಯೋಧ್ಯಾನಗರವು ದೂರದಿಂದ ಕಾಣಿಸುತ್ತಿದೆ. ಪುಣ್ಯೋದ್ಯಾನಗಳಿಂದ ರಂಜಿಸುವ ಈ ನಗರವು ಪ್ರಖ್ಯಾತವಾದದ್ದು. ಆದರೆ ಇದು ಮೊದಲಿನಂತೆ ಉಲ್ಲಾಸಯುಕ್ತವಾಗಿ ನನಗೆ ಕಾಣುವುದಿಲ್ಲ(೧೯-೨೦). ಈ ನಗರದಲ್ಲಿ ಅನೇಕ ಯಾಗಗಳನ್ನು ಮಾಡಿರತಕ್ಕ

ಸಮಂತಾನ್ನರನಾರೀಣಾಂ ತಮದ್ಯ ನ ಶೃಣೋಮ್ಯಹಮ್ ।
ಉದ್ಯಾನಾನಿ ಹಿ ಸಾಯಾಹ್ನೇ ಕ್ರೀಡಿತ್ವೋಪರತೈರ್ನರೈಃ ॥ ೨೨
ಸಮಂತಾದ್ವಿಪ್ರಧಾವದ್ಭಿಃ ಪ್ರಕಾಶಂತೇ ಮಮಾನ್ಯಥಾ ।
ತಾನ್ಯದ್ಯಾನುರುದಂತೀವ ಪರಿತ್ಯಕ್ತಾನಿ ಕಾಮಿಭಿಃ ॥ ೨೩
ಅರಣ್ಯಭೂತೇವ ಪುರೀ ಸಾರಥೇ ಪ್ರತಿಭಾತಿ ಮೇ ।
ನ ಹ್ಯತ್ರ ಯಾನೈರ್ದೃಶ್ಯಂತೇ ನ ಗಜೈರ್ನ ಚ ವಾಜಿಭಿಃ ॥ ೨೪
ನಿರ್ಯಾಂತೋ ವಾಭಿಯಾಂತೋ ವಾ ನರಮುಖ್ಯಾ ಯಥಾಪುರಮ್
ಉದ್ಯಾನಾನಿ ಪುರಾ ಭಾಂತಿ ಮತ್ತಪ್ರಮುದಿತಾನಿ ಚ ॥ ೨೫
ಜನಾನಾಂ ರತಿಸಂಯೋಗೇಷ್ವತ್ಯಂತಂ ಗುಣವಂತಿ ಚ ।
ತಾನ್ಯೇತಾನ್ಯದ್ಯ ಪಶ್ಯಾಮಿ ನಿರಾನಂದಾನಿ ಸರ್ವಶಃ ॥ ೨೬
ಸ್ರಸ್ತಪರ್ಣೈರನುಪಥಂ ವಿಕ್ರೋಶದ್ಭಿರಿವ ದ್ರುಮೈಃ ।
ನಾದ್ಯಾಪಿ ಶ್ರೂಯತೇ ಶಬ್ದೋ ಮತ್ತಾನಾಂ ಮೃಗಪಕ್ಷಿಣಾಮ್ ॥ ೨೭

ಗುಣವಂತರೂ ವೇದಪಾರಂಗತರೂ ಆದ ಬ್ರಾಹ್ಮಣರೂ ಶ್ರೀಮಂತರೂ ತುಂಬಿದ್ದಾರೆ. ರಾಜರ್ಷಿಯೆನಿಸಿದ ನಮ್ಮ ತಂದೆಯು ಪರಿಪಾಲಿಸುತ್ತಿದ್ದಾನೆ. ಇಂಥ ಅಯೋಧ್ಯೆಯಲ್ಲಿ ಹಿಂದೆ ಸ್ತ್ರೀಪುರುಷರ ದೊಡ್ಡ ಕಲಕಲ ಶಬ್ದವು ದೂರದವರೆಗೆ ಕೇಳಿಸುತ್ತಿತ್ತು (೨೧). ಆ ಶಬ್ದವು ಇಂದು ನನಗೆ ಕೇಳಿಸುತ್ತಿಲ್ಲ. (ಊರ ಹೊರಗಿರುವ) ಈ ಉದ್ಯಾನ ವನಗಳಿಗೆ ಸಾಯಂಕಾಲದ ಹೊತ್ತು ಜನರು ಬಂದು ವಿಹರಿಸಿ ಎಲ್ಲೆಡೆಯೂ ಓಡಾಡುತ್ತಿದ್ದರು. ಆಗ ಉದ್ಯಾನವನಗಳು ಮನೋಹರವಾಗಿದ್ದವು. ಈಗ ವಿಹಾರಿಗಳು ಇಲ್ಲಿಗೆ ಬರುವುದನ್ನೇ ಬಿಟ್ಟಿರಬೇಕು. ಇವು ಹಾಳುಬಿದ್ದು ಅಳುತ್ತಿರುವ ಹಾಗೆ ಕಾಣುತ್ತವೆ (೨೨-೨೩). ಸಾರಥಿ, ಈ ಪಟ್ಟಣವು ಅರಣ್ಯದಂತೆ ತೋರುತ್ತಿದೆ. ಹಿಂದೆ ಇದ್ದಂತೆ ವಾಹನಗಳಲ್ಲಿ ಜನರ ಓಡಾಟವಿಲ್ಲ. ಆನೆಗಳಲ್ಲಾಗಲಿ ಕುದುರೆಗಳಲ್ಲಾಗಲಿ ಜನರು ಸಂಚರಿಸುವುದನ್ನೇ ಕಾಣೆನು. ಈ ಹೂದೋಟಗಳು ಮದಿಸಿ ನಲಿಯುವ ಹಕ್ಕಿಗಳಿಂದಲೂ ಚಿಗುರುಗಳಿಂದಲೂ ಚೆಲುವಾಗಿದ್ದವು. ಜನರ ಪ್ರೇಮವಿಹಾರಕ್ಕೆ ಹಿತಕರವಾಗಿದ್ದವು. ಆ ತೋಟಗಳಲ್ಲಿಯೇ ಈಗ ಯಾವ ಉಲ್ಲಾಸವನ್ನೂ ಕಾಣೆನು (೨೪-೨೬). ಎಲೆಗಳು ಉದುರಿಹೋಗಿರುವ ಈ ಸಾಲುಮರಗಳನ್ನು ನೋಡಿದರೆ

ಸಂರಕ್ತಾ ಮಧುರಾಂ ವಾಣೀಂ ಕಲಂ ವ್ಯಾಹರತಾಂ ಬಹು ।
ಚಂದನಾಗರುಸಂಪೃಕ್ತೋ ಧೂಪಸಂಮೂರ್ಛಿತೋಽತುಲಃ ॥ ೨೮

ಪ್ರವಾತಿ ಪವನಃ ಶ್ರೀಮಾನ್ ಕಿಂ ನು ನಾದ್ಯ ಯಥಾಪುರಮ್ ।
ಭೇರೀಮೃದಂಗವೀಣಾನಾಂ ಕೋಣಸಂಘಟ್ಟಿತಃ ಪುನಃ ॥ ೨೯

ಕಿಮದ್ಯ ಶಬ್ದೋ ವಿರತಃ ಸದಾಽದೀನಗತಿಃ ಪುರಾ ।
ಅನಿಷ್ಟಾನಿ ಚ ಪಾಪಾನಿ ಪಶ್ಯಾಮಿ ವಿವಿಧಾನಿ ಚ ॥ ೩೦

ನಿಮಿತ್ತಾನ್ಯಮನೋಜ್ಞಾನಿ ತೇನ ಸೀದತಿ ಮೇ ಮನಃ ।
ಸರ್ವಥಾ ಕುಶಲಂ ಸೂತ ದುರ್ಲಭಂ ಮಮ ಬಂಧುಷು ॥ ೩೧

ತಥಾ ಹ್ಯಸತಿ ಸಂಮೋಹೇ ಹೃದಯಂ ಸೀದತೀವ ಮೇ ।
ವಿಷಣ್ಣಃ ಶ್ರಾಂತಹೃದಯಸ್ತ್ರಸ್ತಃ ಸಂಲುಲಿತೇಂದ್ರಿಯಃ ॥ ೩೨

ಭರತಃ ಪ್ರವಿವೇಶಾಶು ಪುರೀಮಿಕ್ಷ್ವಾಕುಪಾಲಿತಾಮ್ ।
ದ್ವಾರೇಣ ವೈಜಯಂತೇನ ಪ್ರಾವಿಶ್ಯಾಂತವಾಹನಃ ॥ ೩೩

ಅಳುತ್ತಿರುವಂತೆ ಭಾಸವಾಗುತ್ತದೆ. ಸೂರ್ಯೋದಯವಾಗಿದ್ದರೂ ಮದಿಸಿದ ಮೃಗಗಳಾಗಲಿ ಹಕ್ಕಿಗಳಾಗಲಿ ಕೂಗುವುದು ಕೇಳಿಸುವುದಿಲ್ಲ (೨೭). ಇಷ್ಟು ಹೊತ್ತಿಗೆ ಹಕ್ಕಿಗಳು ಆನಂದದಿಂದ ಇಂಪಾಗಿ ಬೇಕಾದ ಹಾಗೆ ಕಲಕಲಧ್ವನಿಯನ್ನು ಮಾಡಬೇಕಾಗಿತ್ತು. ಚಂದನ ಅಗರುಧೂಪಗಳಿಂದ ಸಮ್ಮಿಶ್ರವಾಗಿ ಸುಗಂಧಿಯಾದ ಗಾಳಿಯು ಯಥೇಷ್ಟವಾಗಿ ಬೀಸಬೇಕಾಗಿತ್ತು. ಮೊದಲಿನಂತೆ ಈಗ ಏಕೆ ಬೀಸದಿರಬಹುದು? ಭೇರೀ ಮೃದಂಗ ವೀಣೆಗಳನ್ನು ಸಾಧನಗಳಿಂದ ಬಾರಿಸಿದಾಗ ಸದಾ ಕೇಳಿಬರುತ್ತಿದ್ದ ಗಂಭೀರನಾದವು ಈಗ ಏಕೆ ನಿಂತುಹೋಗಿರಬಹುದು? (೨೮-೩೦). ಅನಿಷ್ಟಸೂಚಕವಾಗಿ ಮನಸ್ಸಿಗೆ ಖೇದವನ್ನುಂಟುಮಾಡುವ ಕೆಲವು ದುಶ್ಶಕುನಗಳನ್ನು ಕಾಣುತ್ತಿದ್ದೇನೆ. ನನ್ನ ಹೃದಯವು ಕುಸಿದುಹೋಗುತ್ತಿದೆ. ಸೂತ, ನನ್ನ ಬಂಧುಗಳು ಕುಶಲದಲ್ಲಿರುವುದು ಅಸಂಭವ. ಕಾರಣವೇ ತಿಳಿಯದೆ ಹೃದಯವು ಬಿರಿದು ಹೋಗುವಂತೆ ಆಗುತ್ತಿದೆ'' ಎಂದನು. ಭರತನು ವಿಷಣ್ಣನಾಗಿದ್ದನು. ಬುದ್ಧಿಯು ಆಯಾಸಗೊಂಡಿತ್ತು. ಯಾವುದೋ ಭಯವು ಆವರಿಸಿತ್ತು. ಇಂದ್ರಿಯಗಳು ತಳಮಳಿಸುತ್ತಿದ್ದವು (೩೧-೩೨). ರಥದ ಅಶ್ವಗಳು ಬಳಲಿದ್ದವು. ಆದರೂ ಭರತನು

ದ್ವಾಃಸ್ಥೈರುತ್ಥಾಯ ವಿಜಯಂ ಪೃಷ್ಟಸ್ತೈಃ ಸಹಿತೋ ಯಯೌ ।
ಸ ತ್ವನೇಕಾಗ್ರಹೃದಯೋ ದ್ವಾಃಸ್ಥಂ ಪ್ರತ್ಯರ್ಚ್ಯ ತಂ ಜನಮ್ ॥ ೩೪

ಸೂತಮಶ್ವಪತೇಃ ಕ್ಲಾಂತಮಬ್ರವೀತ್ತತ್ರ ರಾಘವಃ ।
ಕಿಮಹಂ ತ್ವರಯಾನೀತಃ ಕಾರಣೇನ ವಿನಾನಘ ॥ ೩೫

ಅಶುಭಾಶಂಕಿ ಹೃದಯಂ ಶೀಲಂ ಚ ಪತತೀವ ಮೇ ।
ಶ್ರುತಾ ನೋ ಯಾದೃಶಃ ಪೂರ್ವಂ ನೃಪತೀನಾಂ ವಿನಾಶನೇ ॥ ೩೬

ಆಕಾರಾಂಸ್ತಾನಹಂ ಸರ್ವಾನಿಹ ಪಶ್ಯಾಮಿ ಸಾರಥೇ ।
ಸಂಮಾರ್ಜನವಿಹೀನಾನಿ ಪರುಷಾಣ್ಯುಪಲಕ್ಷಯೇ ॥ ೩೭

ಅಸಂಯತಕವಾಟಾನಿ ಶ್ರೀವಿಹೀನಾನಿ ಸರ್ವಶಃ ।
ಬಲಿಕರ್ಮವಿಹೀನಾನಿ ಧೂಪಸಸಂಮೋದನೇನ ಚ ॥ ೩೮

ತ್ವರೆಪಡಿಸುತ್ತ ವೈಜಯಂತವೆಂಬ ಮಹಾದ್ವಾರದ ಮೂಲಕ ಅಯೋಧ್ಯಾನಗರವನ್ನು ಪ್ರವೇಶಿಸಿದನು. ದ್ವಾರಪಾಲಕರು ಎದ್ದುನಿಂತು 'ವಿಜಯವಾಗಲಿ!' ಎಂದು ನುಡಿದು ಭರತನ ರಥವನ್ನು ಹಿಂಬಾಲಿಸಿ ಹೊರಟರು. ವ್ಯಥೆಯಲ್ಲಿದ್ದ ಭರತನು ಮೃದುವಾಕ್ಯದಿಂದ ಅವರನ್ನು ಹಿಂದಕ್ಕೆ ಕಳಿಸಿದನು (೩೩-೩೪). ಆಯಾಸಗೊಂಡಿದ್ದ ಅಶ್ವಪತಿಯು ಸಾರಥಿಯನ್ನು ಕುರಿತು ಅವನು ಹೀಗೆಂದನು: ''ಸೌಮ್ಯ, ಕಾರಣವನ್ನೇ ತಿಳಿಸದೆ ಇಷ್ಟು ತ್ವರೆಯಿಂದ ನನ್ನನ್ನು ಕರೆಸಿದ್ದೇಕೆ? ಯಾವುದೋ ಅನರ್ಥವು ಸಂಭವಿಸಿರಬೇಕೆಂದು ನನ್ನ ಹೃದಯವು ಶಂಕಿಸುತ್ತಿದೆ ನನ್ನ ಧೈರ್ಯವು ಕುಸಿಯುತ್ತಿದೆ. ಪೂರ್ವಕಾಲದಲ್ಲಿ ರಾಜ್ಯಾಧಿಪತಿಗಳಿಗೆ ಮಹಾವಿಪತ್ತು ಸಂಭವಿಸಿದಾಗ ಯಾವ ಉತ್ಪಾತಚಿಹ್ನೆಗಳು ಆಗುತ್ತಿದ್ದವೆಂದು ಹೇಳುವರೊ ಅಂಥ ಚಿಹ್ನೆಗಳು ನನಗೆ ಕಾಣಿಸುತ್ತಿವೆ (೩೫-೩೬). ಸಾರಥಿ, ಇಲ್ಲಿ ಗೃಹಸ್ಥರ ಮನೆಗಳನ್ನು ಕಸಗುಡಿಸಿ ಸ್ವಚ್ಛಮಾಡಿಲ್ಲ, ಅವು ಅಮಂಗಳಕರವಾಗಿ ಕಾಣುತ್ತಿವೆ. ಬಾಗಿಲುಗಳನ್ನು ಸರಿಯಾಗಿ ತೆರೆದು ನಿಲ್ಲಿಸಿಲ್ಲ, (ಗಾಳಿಗೆ ಹಾರಾಡುತ್ತಿವೆ). ಒಂದು ಮನೆಯೂ ಅಂದವಾಗಿ ಕಂಗೊಳಿಸುತ್ತಿಲ್ಲ, ಅರಿಸಿಣ ಕುಂಕುಮಾದಿಗಳಿಂದ ಹೊಸ್ತಿಲನ್ನು ಅರ್ಚಿಸಿಲ್ಲ, ಧೂಪದ ಸುಗಂಧವು ಬರುತ್ತಿಲ್ಲ

ಅನಾಶಿತಕುಟುಂಬಾನಿ ಪ್ರಭಾಹೀನಜನಾನಿ ಚ।
ಆಲಕ್ಷ್ಮೀಕಾನಿ ಪಶ್ಯಾಮಿ ಕುಟುಂಬಿಭವನಾನ್ಯಹಮ್ ॥ ೩೯

ಅಪೇತಮಾಲ್ಯಶೋಭಾನ್ಯಪ್ಯಸಂಮೃಷ್ಟಾಜಿರಾಣಿ ಚ।
ದೇವಾಗಾರಾಣಿ ಶೂನ್ಯಾನಿ ನ ಚಾಭಾಂತಿ ಯಥಾಪುರಮ್ ॥ ೪೦

ದೇವತಾರ್ಚಾಃ ಪ್ರವಿದ್ಧಾಶ್ಚ ಯಜ್ಞಗೋಷ್ಠ್ಯಸ್ತಥಾವಿಧಾಃ।
ಮಾಲ್ಯಾಪಣೇಷು ರಾಜಂತೇ ನಾದ್ಯ ಪಣ್ಯಾನಿ ವೈ ತಥಾ ॥ ೪೧

ದೃಶ್ಯಂತೇ ವಣಿಜೋಽಪ್ಯದ್ಯ ನ ಯಥಾಪೂರ್ವಮತ್ರ ವೈ।
ಧ್ಯಾನಸಂವಿಗ್ನಹೃದಯಾ ನಷ್ಟವ್ಯಾಪಾರಯಂತ್ರಿತಾಃ ॥ ೪೨

ದೇವಾಯತನಚೈತ್ಯೇಷು ದೀನಾಃ ಪಕ್ಷಿಗಣಾಸ್ತಥಾ।
ಮಲಿನಂ ಚಾಶ್ರುಪೂರ್ಣಾಕ್ಷಂ ದೀನಂ ಧ್ಯಾನಪರಂ ಕೃಶಮ್ ॥ ೪೩

ಸಸ್ತ್ರೀಪುಂಸಂ ಚ ಪಶ್ಯಾಮಿ ಜನಮುತ್ಕಂಠಿತಂ ಪುರೇ।
ಇತ್ಯೇವಮುಕ್ತ್ವಾ ಭರತಃ ಸೂತಂ ತಂ ದೀನಮಾನಸಃ ॥ ೪೪

(೩೭-೩೮). ಕುಟುಂಬದ ಜನರು ಸರಿಯಾಗಿ ಭೋಜನ ಮಾಡಿದಂತೆಯೇ ಕಾಣುವುದಿಲ್ಲ. ಜನರ ಮುಖದಲ್ಲಿ ಕಾಂತಿಯಿಲ್ಲ. ಮನೆಗಳೆಲ್ಲವೂ ಕಳೆಯಿಲ್ಲದೆ ಹಾಳುಬಿದ್ದಂತೆ ಕಾಣಿಸುತ್ತವೆ. ದೇವಾಲಯಗಳನ್ನು ಪುಷ್ಪಹಾರಗಳಿಂದ ಅಲಂಕರಿಸಿಲ್ಲ. ಅಂಗಳವನ್ನು ಬಳಿದು ಸ್ವಚ್ಛಗೊಳಿಸಿಲ್ಲ. ಜನಸಂಚಾರವು ಶೂನ್ಯವಾಗಿದೆ. ಈ ದೇವಸ್ಥಾನಗಳು ಹಿಂದಿನಂತೆ ಶೋಭಿಸುತ್ತಿಲ್ಲ (೩೯-೪೦). ದೇವತಾರ್ಚನೆಯು ನಿಂತುಹೋದಂತಿದೆ. ಯಜ್ಞಸಮಾರಂಭದ ಸುದ್ದಿಯೇ ಇಲ್ಲ. ಹೂವಿನ ಅಂಗಡಿಗಳಲ್ಲಿ ಮೊದಲಿನಂತೆ ಮಾರಾಟದ ವಸ್ತುಗಳು ಕಂಗೊಳಿಸುವುದಿಲ್ಲ. ವರ್ತಕರು ಚಿಂತಾಮಗ್ನರಾಗಿ ಕುಳಿತಿದ್ದಾರೆ. ವ್ಯಾಪಾರವೇ ನಡೆಯುತ್ತಿಲ್ಲ (೪೧-೪೨). ದೇವಾಲಯಗಳಲ್ಲಿಯೂ ಚೌಕಗಳಲ್ಲಿಯೂ ಪಕ್ಷಿಗಳೂ ಸಹ ದೈನ್ಯದಿಂದ ಕುಳಿತಿವೆ. ಈ ಪಟ್ಟಣದಲ್ಲಿ ಸ್ತ್ರೀಪುರುಷರೆಲ್ಲರೂ ಮಲಿನರಾಗಿದ್ದಾರೆ. ಕಣ್ಣಲ್ಲಿ ನೀರು ತುಂಬಿದೆ. ದೈನ್ಯದಿಂದ ಚಿಂತಿಸುತ್ತಿದ್ದಾರೆ. ದೇಹದಲ್ಲಿ ಕೃಶರಾಗಿದ್ದಾರೆ'' ಎಂದು ಹೇಳುತ್ತ

ತಾನ್ಯರಿಷ್ಟಾನ್ಯಯೋಧ್ಯಾಯಾಂ ಪ್ರೇಕ್ಷ್ಯ ರಾಜಗೃಹಂ ಯಯೌ ॥
ತಾಂ ಶೂನ್ಯಶೃಂಗಾಟಕವೇಶ್ಮರಥ್ಯಾಂ
ರಜೋಽರುಣದ್ವಾರಕಪಾಟಯಂತ್ರಾಮ್ ।
ದೃಷ್ಟ್ವಾ ಪುರೀಮಿಂದ್ರಪುರಪ್ರಕಾಶಾಂ
ದುಃಖೇನ ಸಂಪೂರ್ಣತರೋ ಬಭೂವ ॥ ೪೫

ಬಹೂನಿ ಪಶ್ಯನ್ ಮನಸೋಽಪ್ರಿಯಾಣಿ
ಯಾನ್ಯನ್ಯದಾ ನಾತ್ರ ಪುರೇ ಬಭೂವುಃ ।
ಅವಾಕ್ಶಿರಾ ದೀನಮನಾ ನಹೃಷ್ಟಃ
ಪಿತುರ್ಮಹಾತ್ಮಾ ಪ್ರವಿವೇಶ ವೇಶ್ಮ ॥ ೪೬

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕಸಪ್ತತಿತಮಃ ಸರ್ಗಃ

❀❀❀

ಅಶುಭಚಿಹ್ನೆಗಳನ್ನು ನೋಡುತ್ತ ಭರತನು ಅರಮನೆಗೆ ಹೋದನು (೪೩-೪೪). ಆ ನಗರದಲ್ಲಿ ಹೋಗುವಾಗ ಚೌಕಗಳೂ ಗೃಹಗಳೂ ಬೀದಿಗಳೂ ಶೂನ್ಯವಾಗಿದ್ದವು. ಮನೆಯ ದ್ವಾರಪ್ರದೇಶಗಳೂ ಬಾಗಿಲುಗಳೂ ಧೂಳಿಯಿಂದ ಮಾಸಲಾಗಿದ್ದವು. ಅಮರಾವತಿಯಂತೆ ವಿರಾಜಿಸುತ್ತಿದ್ದ ಅಯೋಧ್ಯೆಯು ಹಾಗಾಗಿರುವುದನ್ನು ನೋಡಿ ಭರತನಿಗೆ ದುಃಖವು ಉಕ್ಕಿತು (೪೫). ಹಿಂದೆ ಆ ನಗರಿಯಲ್ಲಿ ಎಂದೂ ಕಾಣದಿದ್ದ ಖೇದವನ್ನುಂಟುಮಾಡುವ ಅವಲಕ್ಷಣಗಳನ್ನು ನೋಡುತ್ತ ಮಹಾತ್ಮನಾದ ಭರತನು ಉತ್ಸಾಹರಹಿತನಾಗಿ ತಲೆತಗ್ಗಿಸಿ ದೈನ್ಯದಿಂದ ತಂದೆಯ ಅರಮನೆಯನ್ನು ಪ್ರವೇಶಿಸಿದನು (೪೬).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಎಪ್ಪತ್ತೊಂದನೆಯ ಸರ್ಗ

❀❀❀

ದ್ವಿಸಪ್ತತಿತಮಃ ಸರ್ಗಃ

ಭರತಸಂತಾಪಃ

ಅಪಶ್ಯಂಸ್ತು ತತಸ್ತತ್ರ ಪಿತರಂ ಪಿತುರಾಲಯೇ ।
ಜಗಾಮ ಭರತೋ ದ್ರಷ್ಟುಂ ಮಾತರಂ ಮಾತುರಾಲಯೇ ॥ ೧

ಅನುಪ್ರಾಪ್ತಂ ತು ತಂ ದೃಷ್ಟ್ವಾ ಕೈಕೇಯೀ ಪ್ರೋಷಿತಂ ಸುತಮ್ ।
ಉತ್ಪಪಾತ ತದಾ ಹೃಷ್ಟಾ ತ್ಯಕ್ತ್ವಾ ಸೌವರ್ಣಮಾಸನಮ್ ॥ ೨

ಸ ಪ್ರವಿಶ್ಯೈವ ಧರ್ಮಾತ್ಮಾ ಸ್ವಗೃಹಂ ಶ್ರೀವಿವರ್ಜಿತಮ್ ।
ಭರತಃ ಪ್ರತಿಜಗ್ರಾಹ ಜನನ್ಯಾಶ್ಚರಣೌ ಶುಭೌ ॥ ೩

ಸಾ ತಂ ಮೂರ್ಧನ್ಯುಪಾಘ್ರಾಯ ಪರಿಷ್ವಜ್ಯ ಯಶಸ್ವಿನಮ್ ।
ಅಂಕೇ ಭರತಮಾರೋಪ್ಯ ಪ್ರಷ್ಟುಂ ಸಮುಪಚಕ್ರಮೇ ॥ ೪

ಅದ್ಯ ತೇ ಕತಿಚಿದ್ರಾತ್ರ್ಯಶ್ಚ್ಯುತಸ್ಯಾರ್ಯಕವೇಶ್ಮನಃ ।
ಅಪಿ ನಾಧ್ವಶ್ರಮಃ ಶೀಘ್ರಂ ರಥೇನಾಪತತಸ್ತವ ॥ ೫

ಸರ್ಗ ೭೨

ದಶರಥನ ಮರಣವಾರ್ತೆಯನ್ನೂ ಶ್ರೀರಾಮನ ವನಪ್ರಯಾಣವನ್ನೂ ತಿಳಿದು ಭರತನ ದುಃಖ

ಭರತನು ತಂದೆಯ ಅರಮನೆಯಲ್ಲಿ ತಂದೆಯನ್ನು ಕಾಣದೆ, ತಾಯಿಯನ್ನು ನೋಡಲು ಕೈಕೇಯಿಯ ಅಂತಃಪುರಕ್ಕೆ ಬಂದನು. ಪರಸ್ಥಳಕ್ಕೆ ಹೋಗಿದ್ದ ಮಗನು ಬಂದುದನ್ನು ಕಂಡು ಕೈಕೇಯಿಯು ಹರ್ಷಭರಿತಳಾಗಿ, ತಾನು ಕುಳಿತಿದ್ದ ಸುವರ್ಣಪೀಠದಿಂದ ಥಟ್ಟನೆ ಎದ್ದು ಬಂದಳು (೧-೨). ಧರ್ಮಾತ್ಮನಾದ ಭರತನು ಕಾಂತಿಹೀನವಾದ ಆ ಗೃಹವನ್ನು ಪ್ರವೇಶಿಸಿ ತಾಯಿಯ ಪಾದಗಳನ್ನು ಮುಟ್ಟಿ ನಮಸ್ಕರಿಸಿದನು. ಅವಳು ಭರತನನ್ನು ಆಲಿಂಗಿಸಿ ಶಿರಸ್ಸನ್ನು ಆಘ್ರಾಣಿಸಿ ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಕುಶಲ ಪ್ರಶ್ನೆಯನ್ನು ಕೇಳಿದಳು (೩-೪) : ''ಮಗು, ಅಜ್ಜನ ಮನೆಯಿಂದ ಹೊರಟು ಎಷ್ಟು ರಾತ್ರಿಗಳಾದವು? ಶೀಘ್ರವಾಗಿ ರಥದಲ್ಲಿ ಬಂದುದರಿಂದ

ಆರ್ಯಕಸ್ತೆ ಸುಕುಶಲೀ ಯುಧಾಜಿನ್ಮಾತುಲಸ್ತವ।
ಪ್ರವಾಸಾಚ್ಚ ಸುಖಂ ಪುತ್ರ ಸರ್ವಂ ಮೇ ವಕ್ತುಮರ್ಹಸಿ॥ ೬
ಏವಂ ಪೃಷ್ಟಸ್ತು ಕೈಕೇಯ್ಯಾ ಪ್ರಿಯಂ ಪಾರ್ಥಿವನಂದನಃ।
ಅಚಷ್ಟ ಭರತಃ ಸರ್ವಂ ಮಾತ್ರೇ ರಾಜೀವಲೋಚನಃ॥ ೭
ಅದ್ಯ ಮೇ ಸಪ್ತಮೀ ರಾತ್ರಿಶ್ಚ್ಯುತಸ್ಯಾರ್ಯಕವೇಶ್ಮನಃ।
ಅಂಬಾಯಾಃ ಕುಶಲೀ ತಾತೋ ಯುಧಾಜಿನ್ಮಾತುಲಶ್ಚ ಮೇ॥ ೮
ಯನ್ಮೇ ಧನಂ ಚ ರತ್ನಂ ಚ ದದೌ ರಾಜಾ ಪರಂತಪಃ।
ಪರಿಶ್ರಾಂತಂ ಪಥ್ಯಭವತ್ತತೋಽಹಂ ಪೂರ್ವಮಾಗತಃ॥ ೯
ರಾಜವಾಕ್ಯಹರೈರ್ದೂತೈಸ್ತ್ವರ್ಯಮಾಣೋಽಹಮಾಗತಃ।
ಯದಹಂ ಪ್ರಷ್ಟುಮಿಚ್ಛಾಮಿ ತದಂಬಾ ವಕ್ತುಮರ್ಹತಿ॥ ೧೦
ಶೂನ್ಯೋಽಯಂ ಶಯನೀಯಸ್ತೇ ಪರ್ಯಂಕೋ ಹೇಮಭೂಷಿತಃ।
ನ ಚಾಯಮಿಕ್ಷ್ವಾಕುಜನಃ ಪ್ರಹೃಷ್ಟಃ ಪ್ರತಿಭಾತಿ ಮೇ॥ ೧೧

ನಿನಗೆ ಮಾರ್ಗಾಯಾಸವಾಗಲಿಲ್ಲವೆ ? ನಿನ್ನ ಅಜ್ಜನೂ ಮಾವನೂ ಕ್ಷೇಮವಾಗಿದ್ದಾರೆಯೆ? ಇಲ್ಲಿಂದ ನೀನು ಹೋದಮೇಲೆ ಸುಖವಾಗಿದ್ದೆಯಾ? ಎಲ್ಲವನ್ನೂ ವಿಶದವಾಗಿ ತಿಳಿಸು'' ಎಂದಳು (೫-೬). ಆಗ ಕಮಲನೇತ್ರನಾದ ಆ ರಾಜಪುತ್ರನು ತಾಯಿಗೆ ಎಲ್ಲವನ್ನೂ ತಿಳಿಸಿದನು. ಅವನು ''ಅಮ್ಮ, ನಾನು ಅಜ್ಜನ ಮನೆಯಿಂದ ಹೊರಟು ಇಂದಿಗೆ ಏಳು ರಾತ್ರಿಗಳಾದವು. ನಿನ್ನ ತಂದೆಯೂ ನನ್ನ ಮಾವನಾದ ಯುದಾಜಿತನೂ ಕ್ಷೇಮವಾಗಿದ್ದಾರೆ (೭-೮). ಮಹಾರಾಜನು ನನಗೆ ಬಹಳ ಧನವನ್ನೂ ಬೆಲೆಬಾಳುವ ಉತ್ತಮ ವಸ್ತುಗಳನ್ನೂ ಕೊಟ್ಟಿದ್ದಾನೆ. ಅವನ್ನುತರುವ ವಾಹನಗಳು ಮಾರ್ಗಾಯಾಸದಿಂದ ಹಿಂದುಳಿದವು. ನಾನು ಅವಸರದಿಂದ ಮುಂದೆ ಬಂದೆನು. ರಾಜಾಜ್ಞೆಯನ್ನು ತಂದ ದೂತರು ತ್ವರೆಪಡಿಸಿದ್ದರಿಂದ ನಾನು ಬೇಗನೆ ಬಂದೆನು. ಈಗ ನಾನು ಒಂದು ವಿಷಯವನ್ನು ಕೇಳಬೇಕಾಗಿದೆ. ಅಮ್ಮ, ಅದನ್ನು ಹೇಳು (೯-೧೦). ನೀನು ಮಲಗತಕ್ಕ ಸುವರ್ಣಾಲಂಕೃತವಾದ ಈ ಮಂಚವು ಶೂನ್ಯವಾಗಿದೆಯಲ್ಲ? ನಮ್ಮ ತಂದೆಯ ಸೇವಕರೊಬ್ಬರೂ ಹರ್ಷ ಪೂರ್ಣರಾಗಿರುವಂತೆ ನನಗೆ ತೋರುವುದಿಲ್ಲ, ಅಮ್ಮ, ನಿನ್ನ ಅಂತಃಪುರದಲ್ಲಿಯೇ

ರಾಜಾ ಭವತಿ ಭೂಯಿಷ್ಠಮಿಹಾಂಬಾಯಾ ನಿವೇಶನೇ ।
ತಮಹಂ ನಾದ್ಯ ಪಶ್ಯಾಮಿ ದ್ರಷ್ಟುಮಿಚ್ಛನ್ನಿಹಾಗತಃ ॥ ೧೨

ಪಿತುರ್ಗ್ರಹೀಷ್ಯೇ ಚರಣೌ ತಂ ಮಮಾಖ್ಯಾಹಿ ಪೃಚ್ಛತಃ ।
ಆಹೋಸ್ವಿದಂಬ ಜ್ಯೇಷ್ಠಾಯಾಃ ಕೌಸಲ್ಯಾಯಾ ನಿವೇಶನೇ ॥ ೧೩

ತಂ ಪ್ರತ್ಯುವಾಚ ಕೈಕೇಯೀ ಪ್ರಿಯವದ್ಘೋರಮಪ್ರಿಯಮ್ ।
ಅಜಾನಂತಂ ಪ್ರಜಾನಂತೀ ರಾಜ್ಯಲೋಭೇನ ಮೋಹಿತಾ ॥ ೧೪

ಯಾ ಗತಿಃ ಸರ್ವಭೂತಾನಾಂ ತಾಂ ಗತಿಂ ತೇ ಪಿತಾ ಗತಃ ।
ರಾಜಾ ಮಹಾತ್ಮಾ ತೇಜಸ್ವೀ ಯಾಯಜೂಕಃ ಸತಾಂ ಗತಿಃ ॥ ೧೫

ತಚ್ಛ್ರುತ್ವಾ ಭರತೋ ವಾಕ್ಯಂ ಧರ್ಮಾಭಿಜನವಾನ್ ಶುಚಿಃ ।
ಪಪಾತ ಸಹಸಾ ಭೂಮೌ ಪಿತೃಶೋಕಬಲಾರ್ದಿತಃ ॥ ೧೬

ಹಾ ಹತೋಽಸ್ಮೀತಿ ಕೃಪಣಾಂ ದೀನಾಂ ವಾಚಮುದೀರಯನ್ ।
ನಿಪಪಾತ ಮಹಾಬಾಹುರ್ಬಾಹೂ ವಿಕ್ಷಿಪ್ಯ ವೀರ್ಯವಾನ್ ॥ ೧೭

ಮಹಾರಾಜನು ಹೆಚ್ಚಾಗಿ ಇರುತ್ತಿದ್ದನು. ಈಗ ಅವನು ಕಾಣಿಸುವುದಿಲ್ಲ. ತಂದೆಯನ್ನು ನೋಡುವ ಉದ್ದೇಶದಿಂದ ನಾನು ಇಲ್ಲಿಗೆ ಬಂದೆ (೧೧-೧೨). ತಂದೆಯ ಪಾದಗಳಿಗೆ ಮೊದಲು ನಾನು ನಮಸ್ಕರಿಸಬೇಕು. ಅವನು ಎಲ್ಲಿದ್ದಾನೆಂದು ಹೇಳು. ಅಥವಾ-ಅಮ್ಮ, ದೊಡ್ಡಮ್ಮನಾದ ಕೌಸಲ್ಯಾದೇವಿಯ ಅಂತಃಪುರದಲ್ಲಿರಬಹುದೆ?'' ಎಂದು ಕೇಳಿದನು. ಆಗ ರಾಜ್ಯಲೋಭದಿಂದ ಬುದ್ಧಿಗೆಟ್ಟ ಕೈಕೇಯಿಯು ಘೋರವೂ ಶೋಕಜನಕವೂ ಆದ ವೃತ್ತಾಂತವನ್ನು, ಏನೂ ಅರಿಯದ ಭರತನಿಗೆ ಹೇಳಿದಳು. ಅದು ಭರತನಿಗೆ ಪ್ರಿಯವಾದದ್ದೆಂದು ಅವಳು ಭ್ರಮಿಸಿದಳು (೧೩-೧೪). ಕೈಕೇಯಿಯು ''ವತ್ಸ ಮಹಾರಾಜನು ಮಹಾತ್ಮನೂ ತೇಜಸ್ವಿಯೂ ಆಗಿದ್ದನು. ಅನೇಕ ಯಾಗಗಳನ್ನು ಮಾಡಿದನು. ಸಜ್ಜನರಿಗೆ ದಿಕ್ಕಾಗಿದ್ದನು. ಸಮಸ್ತ ಪ್ರಾಣಿಗಳಿಗೂ ಅನಿವಾರ್ಯವಾದ ಯಾವ ಗತಿಯುಂಟೋ, ಆ ಗತಿಯು ನಿನ್ನ ತಂದೆಗೆ ಪ್ರಾಪ್ತವಾಯಿತು'' ಎಂದಳು (೧೫). ಆ ಮಾತನ್ನು ಕೇಳಿದೊಡನೆ ಧರ್ಮಿಷ್ಠನೂ ಉತ್ತಮ ಕುಲಸಂಜಾತನೂ ಶುದ್ಧಚಾರಿತ್ರನೂ ಆದ ಭರತನು ಪಿತೃಶೋಕದಿಂದ ಕಂಗೆಟ್ಟು ದೊಪ್ಪನೆ ನೆಲದಮೇಲೆ ಬಿದ್ದನು. ಅಜಾನುಬಾಹುವಾದ ಆ ವೀರನು ಎರಡು ತೋಳುಗಳನ್ನೂ ಮೇಲೆತ್ತಿ

ತತಃ ಶೋಕೇನ ಸಂವಿಗ್ನಃ ಪಿತುರ್ಮರಣದುಃಖಿತಃ ।
ವಿಲಲಾಪ ಮಹಾತೇಜಾ ಭ್ರಾಂತಾಕುಲಿತಚೇತನಃ ॥ ೧೮

ಏತತ್ ಸುರುಚಿರಂ ಭಾತಿ ಪಿತುರ್ಮೇ ಶಯನಂ ಪುರಾ ।
ಶಶಿನೇವಾಮಲಂ ರಾತ್ರೌ ಗಗನಂ ತೋಯದಾತ್ಯಯೇ ॥ ೧೯

ತದಿದಂ ನ ವಿಭಾತ್ಯದ್ಯ ವಿಹೀನಂ ತೇನ ಧೀಮತಾ ।
ವ್ಯೋಮೇವ ಶಶಿನಾ ಹೀನಂ ವಿಶುಷ್ಕ ಇವ ಸಾಗರಃ ॥ ೨೦

ಬಾಷ್ಪಮುತ್ಸೃಜ್ಯ ಕಂಠೇನ ಸ್ವಾರ್ತಃ ಪರಮಪೀಡಿತಃ ।
ಪ್ರಚ್ಛಾದ್ಯ ವದನಂ ಶ್ರೀಮದ್ವಸ್ತ್ರೇಣ ಜಯತಾಂ ವರಃ ॥ ೨೧

ತಮಾರ್ತಂ ದೇವಸಂಕಾಶಂ ಸಮೀಕ್ಷ್ಯ ಪತಿತಂ ಭುವಿ ।
ನಿಕೃತ್ತಮಿವ ಸಾಲಸ್ಯ ಸ್ಕಂಧಂ ಪರಶುನಾ ವನೇ ॥ ೨೨

ಮಾತಾ ಮಾತಂಗಸಂಕಾಶಂ ಚಂದ್ರಾರ್ಕಸದೃಶಂ ಭುವಃ ।
ಉತ್ಥಾಪಯಿತ್ವಾ ಶೋಕಾರ್ತಂ ವಚನಂ ಚೇದಮಬ್ರವೀತ್ ॥ ೨೩

ಅಯ್ಯೋ! ಕೆಟ್ಟೆನು! ಎಂದು ಎದೆಕರಗುವಂತೆ ದೈನ್ಯದಿಂದ ಕೂಗಿಕೊಂಡನು (೧೬-೧೭). ಆ ತೇಜಸ್ವಿಯು ತಂದೆಯ ಮರಣ ದುಃಖದಿಂದ ಸಂತಪ್ತನಾದನು. ಬುದ್ಧಿಯು ಕಳವಳಿಸಿ ಗಿರ್ರೆಂದಿತು. ಅವನು ಗೋಳಾಡಲಾರಂಭಿಸಿದನು : "ನನ್ನ ತಂದೆಯು ಕುಳಿತುಕೊಂಡಾಗ ಈ ಹಾಸಿಗೆಯು ಎಷ್ಟು ರಮಣೀಯವಾಗಿ ಕಾಣಿಸುತ್ತಿತ್ತು! ಶರತ್ಕಾಲದ ರಾತ್ರಿಯಲ್ಲಿ ಚಂದ್ರನಿಂದ ರಂಜಿಸುವ ನಿರ್ಮಲವಾದ ಗಗನದಂತೆ ಶೋಭಿಸುತ್ತಿತ್ತು (೧೮-೧೯). ಈಗ ಆ ಧೀಮಂತನಿಲ್ಲದೆ ಶೂನ್ಯವಾದ ಈ ಹಾಸಿಗೆ ಚಂದ್ರನಿಲ್ಲದ ಆಕಾಶದಂತಾಗಿದೆ. ನೀರಿಲ್ಲದ ಸಮುದ್ರದಂತಾಗಿದೆ" ಎಂದು ರೋದಿಸಿದನು. ನೇತ್ರಗಳಿಂದ ಕಂಬನಿ ಹರಿಯಿತು. ಕಂಠಸ್ವರವು ಕುಗ್ಗಿತು. ಭರತನು ವಸ್ತ್ರದಿಂದ ತನ್ನ ಸುಂದರವಾದ ಮುಖವನ್ನು ಮುಚ್ಚಿಕೊಂಡು ದುಃಖಾರ್ತನಾಗಿ ಅತ್ತನು (೨೦-೨೧). ಹೀಗೆ ಭೂಮಿಯ ಮೇಲೆ ಶೋಕಸಂತಪ್ತರಾಗಿ ಬಿದ್ದ ದೇವಪುರುಷನಂತೆಯೂ ಕಾಡಿನಲ್ಲಿ ಕೊಡಲಿಯಿಂದ ಕಡಿದುಬಿದ್ದ ಮರದ ತುಂಡಿನಂತೆಯೂ ಇದ್ದ ಭರತನನ್ನು ಅವನ ತಾಯಿ ನೋಡಿದಳು (೨೨). ಆನೆಯಂತೆ ಗಂಭೀರ ಸ್ವಭಾವದವನೂ ಸೂರ್ಯಚಂದ್ರರಂತೆ ತೇಜಸ್ವಿಯೂ

ಉತ್ತುಷ್ಠೋತ್ತಿಷ್ಠ ಕಿಂ ಶೇಷೇ ರಾಜಪುತ್ರ ಮಹಾಯಶಃ ।
ತ್ವದ್ವಿಧಾ ನ ಹಿ ಶೋಚಂತಿ ಸಂತಃ ಸದಸಿ ಸಂಮತಾಃ ॥ ೨೪

ದಾನಯಜ್ಞಾಧಿಕಾರಾ ಹಿ ಶೀಲಶ್ರುತಿವಚೋಽನುಗಾ ।
ಬುದ್ಧಿಸ್ತೇ ಬುದ್ಧಿಸಂಪನ್ನ ಪ್ರಭೇವಾರ್ಕಸ್ಯ ಮಂದರೇ ॥ ೨೫

ಸ ರುದಿತ್ವಾ ಚಿರಂ ಕಾಲಂ ಭೂಮೌ ವಿಪರಿವೃತ್ಯ ಚ ।
ಜನನೀಂ ಪ್ರತ್ಯುವಾಚೇದಂ ಶೋಕೈರ್ಬಹುಭಿರಾವೃತಃ ॥ ೨೬

ಅಭಿಷೇಕ್ಷ್ಯತಿ ರಾಮಂ ನು ರಾಜಾ ಯಜ್ಞಂ ನು ಯಕ್ಷ್ಯತೇ ।
ಇತ್ಯಹಂ ಕೃತಸಂಕಲ್ಪೋ ಹೃಷ್ಟೋ ಯಾತ್ರಾಮಯಾಸಿಷಮ್ ॥ ೨೭

ತದಿದಂ ಹ್ಯನ್ಯಥಾಭೂತಂ ವ್ಯವದೀರ್ಣಂ ಮನೋ ಮಮ ।
ಪಿತರಂ ಯೋ ನ ಪಶ್ಯಾಮಿ ನಿತ್ಯಂ ಪ್ರಿಯಹಿತೇ ರತಮ್ ॥ ೨೮

ಅಂಬ ಕೇನಾತ್ಯಗಾದ್ರಾಜಾ ವ್ಯಾಧಿನಾ ಮಯ್ಯನಾಗತೇ ।
ಧನ್ಯಾ ರಾಮಾದಯಃ ಸರ್ವೇ ಯೈಃ ಪಿತಾ ಸಂಸ್ಕೃತಃ ಸ್ವಯಮ್ ॥ ೨೯

ಆದ ಭರತನನ್ನು ಕೈಕೇಯಿಯು ಎಬ್ಬಿಸುತ್ತ ''ಇದೇಕೆ ಹೀಗೆ ಮಲಗಿದೆ? ಏಳು ಏಳು. ರಾಜಪುತ್ರ, ನೀನು ಮಹಾಕೀರ್ತಿಶಾಲಿಯಾದವನು. ನಿನ್ನಂಥ ಸಜ್ಜನರೂ ಸಭಾಮಾನ್ಯರೂ ಹೀಗೆ ಶೋಕಿಸಬಾರದು (೨೩-೨೪). ನೀನು ಬುದ್ಧಿವಂತ. ನಿನ್ನ ಬುದ್ಧಿಯು ದಾನಯಜ್ಞಗಳಲ್ಲಿ ಪ್ರವರ್ತಿಸುವಂತಹದು. ಸದಾಚಾರದಲ್ಲಿ ತೊಡಗುವಂತಹದು. ವೇದವಚನವನ್ನು ಪಾಲಿಸುವಂತಹುದು. ಮಂದರಗಿರಿಯಲ್ಲಿರುವ ಸೂರ್ಯಪ್ರಭೆಯಂತೆ ನಿಶ್ಚಲವಾದುದು'' ಎಂದಳು (೨೫). ಆದರೂ ಭರತನು ನೆಲದಮೇಲೆ ಬಹಳ ಹೊತ್ತು ಹೊರಳುತ್ತ ಅಳುತ್ತ ನಾನಾ ಚಿಂತೆಗಳಿಂದ ನರಳುತ್ತ ಕಡೆಯಲ್ಲಿ ತಾಯಿಯನ್ನು ಕುರಿತು ಹೀಗೆಂದನು : ''ಮಹಾರಾಜನು ರಾಮನಿಗೆ ಪಟ್ಟಾಭಿಷೇಕ ಮಾಡಬಹುದು, ಅಥವಾ ಯಾವುದಾದರೊಂದು ಯಾಗದಲ್ಲಿ ಉದ್ಯುಕ್ತನಾಗಿರಬಹುದು - ಎಂದು ನಾನು ನಿರೀಕ್ಷಿಸುತ್ತ, ಬರುವಾಗ ಎಷ್ಟೋ ಸಂತೋಷದಲ್ಲಿದ್ದೆನು (೨೬-೨೭). ನನ್ನ ನಿರೀಕ್ಷಣೆಗೆ ವಿರುದ್ಧವಾಗಿ ಇನ್ನೊಂದಾಯಿತು. ನನ್ನ ಹೃದಯ ಸೀಳಿಹೋಯಿತು. ವಾತ್ಸಲ್ಯದಿಂದ ಕಾಪಾಡುತ್ತಿದ್ದ ತಂದೆಯನ್ನು ನೋಡುವ ಭಾಗ್ಯ ಇಲ್ಲದೆ ಹೋಯಿತು. ಅಮ್ಮ, ನಾನು

ನ ನೂನಂ ಮಾಂ ಮಹಾರಾಜಃ ಪ್ರಾಪ್ತಂ ಜಾನಾತಿ ಕೀರ್ತಿಮಾನ್ ।
ಉಪಜಿಘ್ರೇದ್ಧಿ ಮಾಂ ಮೂರ್ಧ್ನಿ ತಾತಃ ಸಂಯಮ್ಯ ಸತ್ವರಮ್ ॥ ೩೦

ಕ್ವ ಸ ಪಾಣಿಃ ಸುಖಸ್ಪರ್ಶಸ್ತಾತಸ್ಯಾಕ್ಲಿಷ್ಟಕರ್ಮಣಃ ।
ಯೇನ ಮಾಂ ರಜಸಾ ಧ್ವಸ್ತಮಭೀಕ್ಷ್ಣಂ ಪರಿಮಾರ್ಜತಿ ॥ ೩೧

ಯೋ ಮೇ ಭ್ರಾತಾ ಪಿತಾ ಬಂಧುರ್ಯಸ್ಯ ದಾಸೋಽಸ್ಮಿ ಧೀಮತಃ ।
ತಸ್ಯ ಮಾಂ ಶೀಘ್ರಮಾಖ್ಯಾಹಿ ರಾಮಸ್ಯಾಕ್ಲಿಷ್ಟಕರ್ಮಣಃ ॥ ೩೨

ಪಿತಾ ಹಿ ಭವತಿ ಜ್ಯೇಷ್ಠೋ ಧರ್ಮಮಾರ್ಯಸ್ಯ ಜಾನತಃ ।
ತಸ್ಯ ಪಾದೌ ಗ್ರಹಿಷ್ಯಾಮಿ ಸ ಹೀದಾನೀಂ ಗತಿರ್ಮಮ ॥ ೩೩

ಧರ್ಮವಿದ್ಧರ್ಮನಿತ್ಯಶ್ಚ ಸತ್ಯಸಂಧೋ ದೃಢವ್ರತಃ ।
ಆರ್ಯಃ ಕಿಮಬ್ರವೀದ್ರಾಜಾ ಪಿತಾ ಮೇ ಸತ್ಯವಿಕ್ರಮಃ ॥ ೩೪

ಬರುವುದರೊಳಗೆ ಮಹಾರಾಜನು ಹೊರಟುಹೋದನಲ್ಲ. ಅವನಿಗೆ ಒದಗಿದ ವ್ಯಾಧಿ ಯಾವುದು? ಎದುರಿಗಿದ್ದು ತಂದೆಗೆ ಅಂತ್ಯಸಂಸ್ಕಾರ ಮಾಡಿದ ರಾಮಲಕ್ಷ್ಮಣರೇ ಧನ್ಯರು! ಕಡೆಯಕಾಲದಲ್ಲಿ ಅವನನ್ನು ಉಪಚರಿಸಿದವರೇ ಭಾಗ್ಯವಂತರು (೨೮-೨೯). (ಈಗ ತಿಳಿಯಿತು) ಕೀರ್ತಿಶಾಲಿಯಾದ ಮಹಾರಾಜನಿಗೆ ನಾನು ಬಂದದ್ದು ಗೊತ್ತಾಗಲಿಲ್ಲ! ಇಲ್ಲದಿದ್ದರೆ ನನ್ನ ತಂದೆ ತ್ವರೆಯಿಂದ ಬಂದು ನನ್ನ ತಲೆಕೂದಲನ್ನು ನೇವರಿಸಿ ಶಿರಸ್ಸನ್ನು ಆಘ್ರಾಣಿಸುತ್ತಿದ್ದನು (೩೦). ತಾನೇ ಬಂದು ತನ್ನ ಕೈಯಿಂದ ಮತ್ತೆ ಮತ್ತೆ ಮೈಧೂಳಿಯನ್ನು ಒರಸುತ್ತಿದ್ದನು. ಸರಳಸ್ವಭಾವದ ಆ ತಂದೆಯ ಅಪ್ಯಾಯನಕರವಾದ ಆ ಪಾಣಿಸ್ಪರ್ಶವು ಪುನಃ ಲಭಿಸೀತೆ? ಇನ್ನು ಮೇಲೆ ಅಣ್ಣನಾದ ರಾಮನೇ ನನಗೆ ತಂದೆ. ಅವನೇ ಬಂಧು. ಆ ಧೀಮಂತನಿಗೆ ನಾನು ದಾಸ. ಆ ಸರಳಶೀಲನಿಗೆ ನಾನು ಬಂದಿರುವ ಸಂಗತಿಯನ್ನು ಬೇಗನೆ ಹೇಳಿಕಳಿಸು (೩೧-೩೨). ಧರ್ಮಜ್ಞನಾದ ಶಿಷ್ಟಪುರುಷನಿಗೆ ಅಣ್ಣನು ತಂದೆ ಇದ್ದಂತೆ ನಾನು ರಾಮನ ಪಾದಗಳನ್ನು ಹಿಡಿದುಕೊಳ್ಳುವೆನು. ಈಗ ಅವನೇ ನನಗೆ ಗತಿ (೩೩). ಅಮ್ಮ, ಧರ್ಮಜ್ಞನೂ ಧರ್ಮನಿರತನೂ ಸತ್ಯಸಂಧನೂ ದೃಡವ್ರತನೂ ಆದ ಮಹಾರಾಜನು ಏನು ಹೇಳಿದನು? ಪೂಜ್ಯನಾದ ನನ್ನ ತಂದೆ ಅವಸಾನಕಾಲದಲ್ಲಿ ಏನು ಹೇಳಿದನು? ಅವನ

ಪಶ್ಚಿಮಂ ಸಾಧುಸಂದೇಶಮಿಚ್ಛಾಮಿ ಶ್ರೋತುಮಾತ್ಮನಃ ।
ಇತಿ ಪೃಷ್ಟಾ ಯಥಾತತ್ತ್ವಂ ಕೈಕೇಯೀ ವಾಕ್ಯಮಬ್ರವೀತ್ ॥ ೩೫
ರಾಮೇತಿ ರಾಜಾ ವಿಲಪನ್ ಹಾ ಸೀತೇ ಲಕ್ಷ್ಮಣೇತಿ ಚ ।
ಸ ಮಹಾತ್ಮಾ ಪರಂ ಲೋಕಂ ಗತೋ ಗತಿಮತಾಂ ವರಃ ॥ ೩೬
ಇಮಾಂ ತು ಪಶ್ಚಿಮಾಂ ವಾಚಂ ವ್ಯಾಜಹಾರ ಪಿತಾ ತವ ।
ಕಾಲಧರ್ಮಪರಿಕ್ಷಿಪ್ತಃ ಪಾಶೈರಿವ ಮಹಾಗಜಃ ॥ ೩೭
ಸಿದ್ಧಾರ್ಥಾಸ್ತೇ ನರಾ ರಾಮಮಾಗತಂ ಸೀತಯಾ ಸಹ ।
ಲಕ್ಷ್ಮಣಂ ಚ ಮಹಾಬಾಹುಂ ದ್ರಕ್ಷ್ಯಂತಿ ಪುನರಾಗತಮ್ ॥ ೩೮
ತಚ್ಛ್ರುತ್ವಾ ವಿಷಸಾದೈವ ದ್ವಿತೀಯಾಪ್ರಿಯಶಂಸನಾತ್ ।
ವಿಷಣ್ಣವದನೋ ಭೂತ್ವಾ ಭೂಯಃ ಪಪ್ರಚ್ಛ ಮಾತರಮ್ ॥ ೩೯
ಕ್ವ ಚೇದಾನೀಂ ಸ ಧರ್ಮಾತ್ಮಾ ಕೌಸಲ್ಯಾನಂದವರ್ಧನಃ ।
ಲಕ್ಷ್ಮಣೇನ ಸಹ ಭ್ರಾತ್ರಾ ಸೀತಯಾ ಚ ಸಮಂ ಗತಃ ॥ ೪೦

ಚರಮಸಂದೇಶವನ್ನಾದರೂ ಚೆನ್ನಾಗಿ ಆಲಿಸುವೆನು'' ಎಂದು ಕೇಳಿದನು. ಆಗ ಕೈಕೇಯಿಯು ಇದ್ದಸಂಗತಿಯನ್ನು ಹೇಳಿದಳು (೩೪-೩೫).''ಭರತ, ಮಹಾರಾಜನು ಹಾ ರಾಮ! ಸೀತೇ! ಲಕ್ಷ್ಮಣ! ಎಂದು ಕೂಗುತ್ತ ಪರಲೋಕವನ್ನು ಸೇರಿದನು. ಹಗ್ಗಗಳಿಂದ ಬಿಗಿಯಲ್ಪಟ್ಟ ಮಹಾಗಜದಂತೆ ಕಾಲಧರ್ಮಕ್ಕೆ ಒಳಗಾದನು. ನಿನ್ನ ತಂದೆ ಹೀಗೆ ಹೇಳಿದನು: 'ಸೀತೆಯೊಡನೆ ಹಿಂದಿರುಗಿ ಬರುವ ರಾಮನನ್ನೂ ಮಹಾಬಾಹುವಾದ ಲಕ್ಷ್ಮಣನನ್ನೂ ಪುನಃ ಯಾರು ನೋಡುವರೊ ಅವರೇ ಧನ್ಯರು!' ಇದು ಆತನ ಚರಮ ಸಂದೇಶ!'' ಎಂದಳು (೩೬-೩೮). (ದಶರಥನ ಮರಣಕಾಲದಲ್ಲಿ ರಾಮ ಲಕ್ಷ್ಮಣರಿಬ್ಬರೂ ಇರಲಿಲ್ಲವೆಂಬ ಮತ್ತೊಂದು ಕೆಟ್ಟಸುದ್ದಿಯನ್ನು ಹೇಳಿದ್ದರಿಂದ ಭರತನು ಮತ್ತಷ್ಟು ವಿಷಣ್ಣನಾದನು. ಮುಖವು ಇನ್ನೂ ಬಾಡಿತು. ಅವನು ತಾಯಿಯನ್ನು ಕುರಿತು ''ಆ ಧರ್ಮಾತ್ಮನು ಈಗ ಎಲ್ಲಿದ್ದಾನೆ? ಕೌಸಲ್ಯಾನಂದನನು ಸೀತಾಲಕ್ಷ್ಮಣರೊಡನೆ ಎಲ್ಲಿಗೆ ಹೋಗಿದ್ದಾನೆ?'' ಎಂದು ಕೇಳಿದನು (೩೯-೪೦). ಆಗ

ತಥಾ ಪೃಷ್ಟಾ ಯಥಾ ತತ್ತ್ವಮಾಖ್ಯಾತುಮುಪಚಕ್ರಮೇ ।
ಮಾತಾಸ್ಯ ಯುಗಪದ್ವಾಕ್ಯಂ ವಿಪ್ರಿಯಂ ಪ್ರಿಯಂಶಂಕಯಾ ॥ ೪೧

ಸ ಹಿ ರಾಜಸುತಃ ಪುತ್ರ ಚೀರವಾಸಾ ಮಹಾವನಮ್ ।
ದಂಡಕಾನ್ ಸಹ ವೈದೇಹ್ಯಾ ಲಕ್ಷ್ಮಣಾನುಚರೋ ಗತಃ ॥ ೪೨

ತಚ್ಛ್ರುತ್ವಾ ಭರತಸ್ತ್ರಸ್ತೋ ಭ್ರಾತುಶ್ಚಾರಿತ್ರಶಂಕಯಾ ।
ಸ್ವಸ್ಯ ವಂಶಸ್ಯ ಮಾಹಾತ್ಮ್ಯಾತ್ ಪ್ರಷ್ಟುಂ ಸಮುಪಚಕ್ರಮೇ ॥ ೪೩

ಕಚ್ಚಿನ್ನ ಬ್ರಾಹ್ಮಣಧನಂ ಹೃತಂ ರಾಮೇಣ ಕಸ್ಯಚಿತ್ ।
ಕಚ್ಚಿನ್ನಾಢ್ಯೋ ದರಿದ್ರೋ ವಾ ತೇನಾಪಾಪೋ ವಿಹಿಂಸಿತಃ ॥ ೪೪

ಕಚ್ಚಿನ್ನ ಪರದಾರಾನ್ ವಾ ರಾಜಪುತ್ರೋಽಭಿಮನ್ಯತೇ ।
ಕಸ್ಮಾತ್ ಸ ದಂಡಕಾರಣ್ಯೇ ಭ್ರೂಣಹೇವ ವಿವಾಸಿತಃ ॥ ೪೫

ಅಥಾಸ್ಯ ಚಪಲಾ ಮಾತಾ ತತ್ ಸ್ವಕರ್ಮ ಯಥಾತಥಮ್ ।
ತೇನೈವ ಸ್ತ್ರೀಸ್ವಭಾವೇನ ವ್ಯಾಹರ್ತುಮುಪಚಕ್ರಮೇ ॥ ೪೬

ಅವನ ತಾಯಿಯು ದಶರಥನ ಮರಣದ ಜೊತೆಗೆ ಇನ್ನೊಂದು ಅಪ್ರಿಯವಾದ ವಿಷಯವನ್ನು ತಿಳಿಸಿದಳು. ಆದಾದರೂ ಭರತನಿಗೆ ಸಂತೋಷಕರವಾದೀತೆಂದು ಭ್ರಮಿಸಿದಳು (೪೧). ಅವಳು ''ವತ್ಸ ಆ ರಾಜಪುತ್ರನು ನಾರುಬಟ್ಟೆಯನ್ನುಟ್ಟು ಸೀತಾಲಕ್ಷ್ಮಣರೊಡನೆ ದಂಡಕಾರಣ್ಯಕ್ಕೆ ಹೊರಟುಹೋದನು'' ಎಂದಳು. ಅದನ್ನು ಕೇಳಿ ಭರತನು ಹೆದರಿದನು. ''ಪರಿಶುದ್ಧವಾದ ನಡತೆಗೆ ನಮ್ಮ ವಂಶ ಹೆಸರಾದದ್ದು. ಅಣ್ಣನ ನಡತೆಯಲ್ಲಿ ಅಂಥ ಕಳಂಕ ಕಂಡಿರಬಹುದೆ?'' ಎಂದು ಶಂಕಿಸುತ್ತ ಅವನು ಕೇಳಿದನು (೪೨-೪೩): ''ರಾಮನು ಯಾವ ಬ್ರಹ್ಮಸ್ವವನ್ನೂ ಅಪಹರಿಸಲಿಲ್ಲವಷ್ಟೆ? ನಿರಪರಾಧಿಯಾದ ಹಣವಂತನನ್ನೋ ಬಡವನನ್ನೋ ಕೊಂದಿಲ್ಲವಷ್ಟೆ? ಯಾವ ಪರಸ್ತ್ರೀಯನ್ನೂ ಬಯಸಲಿಲ್ಲ ತಾನೆ? ಭ್ರೂಣ* ಹತ್ಯೆ ಮಾಡಿದನೋ ಎಂಬಂತೆ ಅವನನ್ನು ಕಾಡಿಗೆ ದೂಡಲು ಕಾರಣವೇನು?'' ಎಂದನು (೪೪-೪೫). ಆಗ ಚಪಲಸ್ವಭಾವದ

---

* ಭ್ರೂಣ - ವೇದಾಧ್ಯಯನ ಮಾಡಿರುವ ನಿಷ್ಠಾವಂತನಾದ ಬ್ರಾಹ್ಮಣ ಅಥವಾ ಗರ್ಭ.

ಏವಮುಕ್ತಾ ತು ಕೈಕೇಯೀ ಭರತೇನ ಮಹಾತ್ಮನಾ ।
ಉವಾಚ ವಚನಂ ಹೃಷ್ಟಾ ಮೂಢಾ ಪಂಡಿತಮಾನಿನೀ ॥ ೪೭

ನ ಬ್ರಾಹ್ಮಣಧನಂ ಕಿಂಚಿದ್ಧೃತಂ ರಾಮೇಣ ಧೀಮತಾ ।
ಕಚ್ಚಿನ್ನಾಢ್ಯೋ ದರಿದ್ರೋ ವಾ ತೇನಾಪಾಪೋ ವಿಹಿಂಸಿತಃ ॥ ೪೮

ನ ರಾಮಃ ಪರದಾರಾಂಶ್ಚ ಚಕ್ಷುರ್ಭ್ಯಾಮಪಿ ಪಶ್ಯತಿ ।
ಮಯಾ ತು ಪುತ್ರ ಶ್ರುತ್ವೈವಂ ರಾಮಸ್ಯೈವಾಭಿಷೇಚನಮ್ ॥ ೪೯

ಯಾಚಿತಸ್ತೇ ಪಿತಾ ರಾಜ್ಯಂ ರಾಮಸ್ಯ ಚ ವಿವಾಸನಮ್ ।
ಸ ಸ್ವವೃತ್ತಿಂ ಸಮಾಸ್ಥಾಯ ಪಿತಾ ತೇ ತತ್ತಥಾಕರೋತ್ ॥ ೫೦

ರಾಮಶ್ಚ ಸಹಸೌಮಿತ್ರಿಃ ಪ್ರೇಷಿತಃ ಸಹ ಸೀತಯಾ ।
ತಮಪಶ್ಯನ್ ಪ್ರಿಯಂ ಪುತ್ರಂ ಮಹೀಪಾಲೋ ಮಹಾಯಶಾಃ ॥ ೫೧

ಪುತ್ರಶೋಕಪರಿದ್ಯೂನಃ ಪಂಚತ್ವಮುಪಪೇದಿವಾನ್ ।
ತ್ವಯಾ ತ್ವಿದಾನೀಂ ಧರ್ಮಜ್ಞ ರಾಜತ್ವಮವಲಂಬ್ಯತಾಮ್ ॥ ೫೨

ಕೈಕೇಯಿಯು ಸ್ತ್ರೀಸಹಜವಾದ ದುರಾಸೆಯಿಂದ ತಾನು ನಡೆಸಿದ ಕಾರ್ಯತಂತ್ರವನ್ನು ಹೇಳತೊಡಗಿದಳು. ತಾನು ಬುದ್ಧಿಶಾಲಿಯೆಂದು ಹೆಮ್ಮೆಯಿಂದ ಬೀಗುತ್ತಿದ್ದ ಆ ಮೂಢಾತ್ಮಳು ಮಹಾಪುರುಷನಾದ ಭರತನನ್ನು ಕುರಿತು ಹೀಗೆಂದಳು (೪೬-೪೭): "ರಾಮನು ಯಾವ ಬ್ರಹ್ಮಸ್ವವನ್ನೂ ಅಪಹರಿಸಲಿಲ್ಲ. ಅವನು ಬುದ್ಧಿಶಾಲಿ. ನಿರಪರಾಧಿಯಾದ ಯಾವ ಹಣವಂತನನ್ನೂ ಬಡವನನ್ನೂ ಕೊಲ್ಲಲಿಲ್ಲ. ರಾಮನು ಪರಸ್ತ್ರೀಯರನ್ನು ಕಣ್ಣೆತ್ತಿಯೂ ನೋಡತಕ್ಕವನಲ್ಲ. ಆದರೆ, ಮಗನೆ, ರಾಮನಿಗೆ ಪಟ್ಟಾಭಿಷೇಕದ ಏರ್ಪಾಡು ನಡೆದಿದೆಯೆಂದು ನಾನು ಕೇಳಿದೆ (೪೮-೪೯). ಆಗ ನಾನು ರಾಜ್ಯವನ್ನು ನಿನಗೆ ಕೊಡಬೇಕೆಂದೂ ರಾಮನನ್ನು ರಾಜ್ಯದ ಹೊರಗೆ ಕಳಿಸಬೇಕೆಂದೂ ನಿನ್ನ ತಂದೆಯಲ್ಲಿ ಪ್ರಾರ್ಥಿಸಿಕೊಂಡೆನು. ನಿನ್ನ ತಂದೆ ನನಗೆ ಸಹಜವಾದ ಸತ್ಯಮಾರ್ಗವನ್ನಾಶ್ರಯಿಸಿ ಹಾಗೆಯೇ ಮಾಡಿದನು (೫೦). ರಾಮನನ್ನು ಲಕ್ಷ್ಮಣನೊಡನೆ ಕಳಿಸಿದ್ದಾಯಿತು. ಜೊತೆಗೆ ಸೀತೆಯೂ ಹೋದಳು. ಕೀರ್ತಿಶಾಲಿಯಾದ ಮಹಾರಾಜನು ತನ್ನ ಮುದ್ದುಮಗನನ್ನು ಕಾಣದೆ ಪುತ್ರಶೋಕದಿಂದ ನೊಂದು ಸ್ವರ್ಗಸ್ಥನಾದನು. ಭರತ, ನೀನು ರಾಜಧರ್ಮವನ್ನು ಬಲ್ಲವನು. ಈಗ ನೀನು

ತ್ವತ್ಕೃತೇ ಹೀ ಮಯಾ ಸರ್ವಮಿದಮೇವಂವಿಧಂ ಕೃತಮ್ ।
ಮಾ ಶೋಕಂ ಮಾ ಚ ಸಂತಾಪಂ ಧೈರ್ಯಮಾಶ್ರಯ ಪುತ್ರಕ ॥ ೫೩

ತ್ವದಧೀನಾ ಹಿ ನಗರೀ ರಾಜ್ಯಂ ಚೈತದನಾಯಕಮ್ ॥
ತತ್ ಪುತ್ರ ಶೀಘ್ರಂ ವಿಧಿನಾ ವಿಧಿಜ್ಞೈ
ರ್ವಸಿಷ್ಠಮುಖ್ಯೈಃ ಸಹಿತೋ ದ್ವಿಜೇಂದ್ರೈಃ ।
ಸಂಕಾಲ್ಯ ರಾಜಾನಮದೀನಸತ್ತ್ವ
ಮಾತ್ಮಾನಮುರ್ವ್ಯಾಮಭಿಷೇಚಯಸ್ವ॥ ೫೪

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದ್ವಿಸಪ್ತತಿಮಃ ಸರ್ಗಃ

ರಾಜಪದವಿಯನ್ನು ಸ್ವೀಕರಿಸು. ಮಗು, ನಿನಗೋಸ್ಕರವೇ ಈ ಕಾರ್ಯತಂತ್ರವೆಲ್ಲವನ್ನೂ ನಾನು ಹೂಡಿದೆ. ಶೋಕಿಸಬೇಡ. ವ್ಯಥೆಪಡಬೇಡ. ಧೈರ್ಯವನ್ನವಲಂಬಿಸು. ಅನಾಯಕವಾದ ರಾಜ್ಯವೂ ಈ ನಗರವೂ ನಿನ್ನ ಕೈಸೇರಿತು (೫೧-೫೩). ಮಗು, ಈಗ ವಸಿಷ್ಠರೇ ಮೊದಲಾದ ಶಾಸ್ತ್ರಜ್ಞರಾದ ಬ್ರಾಹ್ಮಣೋತ್ತಮರ ನೆರವಿನಿಂದ ಮಹಾರಾಜನಿಗೆ ಉತ್ತರ ಕ್ರಿಯೆಯನ್ನು ಮಾಡು. ವಿಧಿಪೂರ್ವಕವಾಗಿ ಆ ಕಾರ್ಯವನ್ನು ನಡೆಸಿ, ಧೀರನಾದ ನೀನು ಈ ರಾಜ್ಯಕ್ಕೆ ಅಧಿಪತಿಯೆಂದು ಬೇಗನೆ ಪಟ್ಟಾಭಿಷೇಕವನ್ನು ಮಾಡಿಸಿಕೊ'' ಎಂದು ಹೇಳಿದಳು (೫೪).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಎಪ್ಪತ್ತೆರಡನೆಯ ಸರ್ಗ

ತ್ರಿಸಪ್ತತಿತಮಃ ಸರ್ಗಃ

ಕೈಕೇಯೀವಿಗರ್ಹಣಮ್

ಶ್ರುತ್ವಾ ತು ಪಿತರಂ ವೃತ್ತಂ ಭ್ರಾತರೌ ಚ ವಿವಾಸಿತೌ ।
ಭರತೋ ದುಃಖಸಂತಪ್ತ ಇದಂ ವಚನಮಬ್ರವೀತ್ ॥ ೧

ಕಿಂ ನು ಕಾರ್ಯಂ ಹತಸ್ಯೇಹ ಮಮ ರಾಜ್ಯೇನ ಶೋಚತಃ ।
ವಿಹೀನಸ್ಯಾಥ ಪಿತ್ರಾ ಚ ಭ್ರಾತ್ರಾ ಪಿತೃಸಮೇನ ಚ ॥ ೨

ದುಃಖೇ ಮೇ ದುಃಖಮಕರೋರ್ವ್ರಣೇ ಕ್ಷಾರಮಿವಾದಧಾಃ ।
ರಾಜಾನಂ ಪ್ರೇತಭಾವಸ್ಥಂ ಕೃತ್ವಾ ರಾಮಂ ಚ ತಾಪಸಮ್ ॥ ೩

ಕುಲಸ್ಯ ತ್ವಮಭಾವಾಯ ಕಾಲರಾತ್ರಿರಿವಾಗತಾ ।
ಅಂಗಾರಮುಪಗೂಹ್ಯ ತ್ವಾಂ ಪಿತಾ ಮೇ ನಾವಬುದ್ಧವಾನ್ ॥ ೪

ಮೃತ್ಯುಮಾಪಾದಿತೋ ರಾಜಾ ತ್ವಯಾ ಮೇ ಪಾಪದರ್ಶಿನಿ ।
ಸುಖಂ ಪರಿಹೃತಂ ಮೋಹಾತ್ ಕುಲೇಽಸ್ಮಿನ್ ಕುಲಪಾಂಸನಿ ॥ ೫

ಸರ್ಗ ೭೩

ಭರತನು ಕೈಕೇಯಿಯನ್ನು ನಿಂದಿಸುವುದು.

ಹೀಗೆ ತಂದೆಯು ಗತಿಸಿದನೆಂಬುದನ್ನೂ ಒಡಹುಟ್ಟಿದವರು ಕಾಡಿಗೆ ಹೋದರೆಂಬುದನ್ನೂ ಕೇಳಿ ಭರತನು ದುಃಖದಿಂದ ಬೆಂದುಹೋದನು. ಅವನು ವಿಲಪಿಸುತ್ತ ಈ ಪ್ರಕಾರ ಹೇಳಿದನು : "ಈ ಪರಿಯಲ್ಲಿ ದುರ್ಭಾಗ್ಯಹತನಾಗಿ ಪರಿತಪಿಸುವ ನನಗೆ ರಾಜ್ಯವನ್ನು ಕಟ್ಟಿಕೊಂಡೇನಾಗಬೇಕು? ತಂದೆಯಿಲ್ಲ, ತಂದೆಗೆ ಸಮನಾದ ಅಣ್ಣನಿಲ್ಲ(೧-೨). ನನಗೆ ದುಃಖದ ಮೇಲೆ ದುಃಖವನ್ನು ತಂದೊಡ್ಡಿದೆ. ಗಾಯದ ಮೇಲೆ ಉಪ್ಪು ಸುರಿದಂತೆ ಮಾಡಿದೆ. ಮಹಾರಾಜನನ್ನು ಪ್ರೇತಭಾವಕ್ಕೆ ತಳ್ಳಿ ರಾಮನು ತಾಪಸನಾಗಿರುವಂತೆ ಮಾಡಿದ್ದೀಯೆ. ಈ ವಂಶವನ್ನು ನಾಶಪಡಿಸುವುದಕ್ಕಾಗಿ ಕಾಳರಾತ್ರಿಯಂತೆ ನೀನು ಬಂದು ಸೇರಿದೆ ! ನನ್ನ ತಂದೆಗೆ ನೀನು ಇಂಥವಳೆಂದು ತಿಳಿಯದೆಹೋಯಿತು. ಬೆಂಕಿಯ ಕೆಂಡವನ್ನೇ ಅವನು ಆಲಂಗಿಸಿಕೊಂಡನು (೩-೪). ಎಲೆ ಪಾಪಿಷ್ಠೆ ನನ್ನ ತಂದೆಗೆ ನೀನೇ ಮೃತ್ಯುವನ್ನು ತಂದೆ. ಈ ರಘುಕುಲದಲ್ಲಿ ಇನ್ನು

ತ್ವಾಂ ಪ್ರಾಪ್ಯ ಹಿ ಪಿತಾ ಮೇಽದ್ಯ ಸತ್ಯಸಂಧೋ ಮಹಾಯಶಾಃ ।
ತೀವ್ರದುಃಖಾಭಿಸಂತಪ್ತೋ ವೃತ್ತೋ ದಶರಥೋ ನೃಪಃ ॥ ೬

ವಿನಾಶಿತೋ ಮಹಾರಾಜಃ ಪಿತಾ ಮೇ ಧರ್ಮವತ್ಸಲಃ ।
ಕಸ್ಮಾತ್ ಪ್ರವ್ರಾಜಿತೋ ರಾಮಃ ಕಸ್ಮಾದೇವ ವನಂ ಗತಃ ॥ ೭

ಕೌಸಲ್ಯಾ ಚ ಸುಮಿತ್ರಾ ಚ ಪುತ್ರಶೋಕಾಭಿಪೀಡಿತೇ ।
ದುಷ್ಕರಂ ಯದಿ ಜೀವೇತಾಂ ಪ್ರಾಪ್ಯ ತ್ವಾಂ ಜನನೀಂ ಮಮ ॥ ೮

ನನು ತ್ವಾರ್ಯೋಽಪಿ ಧರ್ಮಾತ್ಮಾ ತ್ವಯಿ ವೃತ್ತಿಮನುತ್ತಮಾಮ್ ।
ವರ್ತತೇ ಗುರುವೃತ್ತಿಜ್ಞೋ ಯಥಾ ಮಾತರಿ ವರ್ತತೇ ॥ ೯

ತಥಾ ಜ್ಯೇಷ್ಠಾ ಹಿ ಮೇ ಮಾತಾ ಕೌಸಲ್ಯಾ ದೀರ್ಘದರ್ಶಿನೀ ।
ತ್ವಯಿ ಧರ್ಮಂ ಸಮಾಸ್ಥಾಯ ಭಗಿನ್ಯಾಮಿವ ವರ್ತತೇ ॥ ೧೦

ತಸ್ಯಾಃ ಪುತ್ರಂ ಮಹಾತ್ಮಾನಂ ಚೀರವಲ್ಕಲವಾಸಸಮ್ ।
ಪ್ರಸ್ಥಾಪ್ಯ ವನವಾಸಾಯ ಕಥಂ ಪಾಪೇ ನ ಶೋಚಸಿ ॥ ೧೧

ಸುಖದ ಲೇಶವೂ ಉಳಿಯದಂತೆ ತೊಳೆದುಹಾಕಿದೆ. ನೀನು ಕುಲಘಾತುಕಿ! ಸತ್ಯಸಂಧನೂ ಮಹಾಕೀರ್ತಿಶಾಲಿಯೂ ಆದ ನನ್ನ ತಂದೆ ನಿನ್ನ ಕೈಹಿಡಿದಿದ್ದರಿಂದಲೇ ಈಗ ಮೃತಿಹೊಂದಿದನು ದಶರಥಮಹಾರಾಜನು ದುಃಖದಿಂದ ಬೆಂದು ಬಳಲಿ ಸಾಯುವಂತಾಯಿತಲ್ಲ! (೫-೬). ಧರ್ಮನಿಷ್ಠನಾದ ನನ್ನ ತಂದೆಯನ್ನು ನೀನು ಕೊಂದದ್ದೇಕೆ? ರಾಮನನ್ನು ರಾಜ್ಯದಿಂದ ಹೊರಗೆ ಕಳಿಸಿದ್ದೇಕೆ? ಅವನು ಕಾಡಿಗೆ ಹೋಗಲು ಕಾರಣವೇನು? ಕೌಸಲ್ಯಾ ಸುಮಿತ್ರೆಯರಿಬ್ಬರೂ ಪುತ್ರಶೋಕದಿಂದ ಕಂಗೆಟ್ಟು ಹೋದರು. ಅವರೇನು ಜೀವಹಿಡಿದಿದ್ದಾರೋ ಇಲ್ಲವೋ! ಇದೆಲ್ಲವೂ ನನ್ನ ಹಡೆದಮ್ಮನಾದ ನಿನ್ನನ್ನು ಈ ಮನೆಗೆ ಸೇರಿಸಿಕೊಂಡಿದ್ದರಿಂದ! (೭-೮). ನನ್ನ ಅಣ್ಣ ಧರ್ಮಜ್ಞ. ಗುರುಹಿರಿಯರಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದನ್ನು ಚೆನ್ನಾಗಿ ಬಲ್ಲನು. ತನ್ನ ತಾಯಿಯಲ್ಲಿ ನಡೆದುಕೊಂಡಂತೆ, ಅಷ್ಟು ವಿನಯದಿಂದ ಅಷ್ಟು ಪ್ರೀತಿಯಿಂದ, ನಿನ್ನಲ್ಲಿ ನಡೆದುಕೊಳ್ಳುತ್ತಿದ್ದನಲ್ಲ! ಹಾಗೆಯೇ ನನ್ನ ದೊಡ್ಡಮ್ಮನಾದ ಕೌಸಲ್ಯಾದೇವಿ ವಿಶಾಲದೃಷ್ಟಿಯವಳು. ಧರ್ಮಮಾರ್ಗದಲ್ಲಿ ನಡೆಯತಕ್ಕವಳು. ತನ್ನ ತಂಗಿಯಂತೆ ನಿನ್ನನ್ನು ನೋಡಿಕೊಂಡಿದ್ದಾಳೆ (೯-೧೦). ಅವಳ ಮಗನಿಗೆ - ಆ ಮಹಾಭಾಗನಿಗೆ

ಅಪಾಪದರ್ಶನಂ ಶೂರಂ ಕೃತಾತ್ಮಾನಂ ಯಶಸ್ವಿನಮ್ ।
ಪ್ರವ್ರಾಜ್ಯ ಚೀರವಸನಂ ಕಿಂ ನು ಪಶ್ಯಸಿ ಕಾರಣಮ್ ॥ ೧೨

ಲುಬ್ಧಾಯಾ ವಿದಿತೋ ಮನ್ಯೇ ನ ತೇಽಹಂ ರಾಘವಂ ಪ್ರತಿ ।
ತಥಾ ಹ್ಯನರ್ಥೋ ರಾಜ್ಯಾರ್ಥಂ ತ್ವಯಾನೀತೋ ಮಹಾನಯಮ್ ॥

ಅಹಂ ಹಿ ಪುರುಷವ್ಯಾಘ್ರಾವಪಶ್ಯನ್ ರಾಮಲಕ್ಷ್ಮಣೌ ।
ಕೇನ ಶಕ್ತಿ ಪ್ರಭಾವೇಣ ರಾಜ್ಯಂ ರಕ್ಷಿತುಮುತ್ಸಹೇ ॥ ೧೪

ತಂ ಹಿ ನಿತ್ಯಂ ಮಹಾರಾಜೋ ಬಲವಂತಂ ಮಹಾಬಲಃ ।
ಉಪಾಶ್ರಿತೋಽಭೂದ್ಧರ್ಮಾತ್ಮಾ ಮೇರುರ್ಮೇರುವನಂ ಯಥಾ ॥೧೫

ಸೋಽಹಂ ಕಥಮಿಮಂ ಭಾರಂ ಮಹಾಧುರ್ಯಸಮುದ್ಧೃತಮ್ ।
ದಮ್ಯೋ ಧುರಮಿವಾಸಾದ್ಯ ವಹೇಯಂ ಕೇನ ಚೌಜಸಾ ॥ ೧೬

ನಾರುಬಟ್ಟೆಯುಡಿಸಿ ವನವಾಸ ಮಾಡಲು ಕಳಿಸಿದೆಯಾ? ಎಲೆ ಪಾಪಿ, ನಿನಗೆ ವ್ಯಥೆಯಾಗಲಿಲ್ಲವೆ? ಪಾಪವನ್ನೇ ಕಂಡರಿಯದ ಆ ವೀರನನ್ನು ರಾಜ್ಯದಿಂದ ಅಟ್ಟಿದೆಯಲ್ಲ! ಧೀಮಂತನಾದ ಆ ಕೀರ್ತಿಶಾಲಿಗೆ ನಾರುಬಟ್ಟೆಯುಡಿಸಿದರೆ ನಿನಗೆ ಯಾವ ಭಾಗ್ಯ ಬರುವುದೆಂದು ತಿಳಿದಿದ್ದೀಯೆ? (೧೧-೧೨). ಶ್ರೀರಾಮನ ವಿಷಯದಲ್ಲಿ ನಾನು ಯಾವ ಭಾವನೆಯನ್ನಿಟ್ಟುಕೊಂಡಿದ್ದೇನೆಂಬುದು ದುರಾಸೆ ಹಿಡಿದ ನಿನಗೆ ಗೊತ್ತಿಲ್ಲವೆಂದು ತೋರುತ್ತದೆ. ಆದುದರಿಂದಲೇ ರಾಜ್ಯಲೋಭದಿಂದ ಮಹತ್ತರವಾದ ಈ ಅನರ್ಥವನ್ನು ನೀನು ತಂದಿಟ್ಟೆ (೧೩). ಪುರುಷಶ್ರೇಷ್ಠರಾದ ರಾಮಲಕ್ಷ್ಮಣರನ್ನು ಬಿಟ್ಟು ಯಾವಶಕ್ತಿಯ ಪ್ರಭಾವದಿಂದ ನಾನು ರಾಜ್ಯವನ್ನು ರಕ್ಷಿಸಲಿ? (೧೪). ಮಹಾಪರಾಕ್ರಮಿಯಾದ ಮಹಾರಾಜನೂ ಕೂಡ ಬಲಾಢ್ಯನಾದ ಶ್ರೀರಾಮನನ್ನು ಸದಾ ನಂಬಿಕೊಂಡು ರಾಜ್ಯಭಾರವನ್ನು ನಡೆಸಿದನು. ಮೇರುಪರ್ವತದಲ್ಲಿರುವ ಅರಣ್ಯವು ಮೇರುವನ್ನು ರಕ್ಷಿಸುವಂತೆ ಅವನು ತಂದೆಗೆ ರಕ್ಷಕನಾಗಿದ್ದನು (೧೫). ಹೀಗಿರುವಾಗ ಯಾವ ಸಾಮರ್ಥ್ಯವಿದೆಯೆಂದು ನಾನು ರಾಜ್ಯಭಾರದ ಹೊಣೆಯನ್ನು ವಹಿಸಲಿ? ಮಹಾವೃಷಭವು ಎಳೆಯಬಲ್ಲ ಭಾರವನ್ನು ಕರು ಎಳೆದೀತೆ? ಒಂದುವೇಳೆ ನನಗೆ ಸಾಮರ್ಥ್ಯವಿದ್ದೀತು.

ಅಥವಾ ಮೇ ಭವೇಚ್ಛಕ್ತಿರ್ಯೋಗೈರ್ಬುದ್ಧಿಬಲೇನ ವಾ ।
ಸಕಾಮಾಂ ನ ಕರಿಷ್ಯಾಮಿ ತ್ವಾಮಹಂ ಪುತ್ರಗರ್ಧಿನೀಮ್ ॥ ೧೭

ನ ಮೇ ವಿಕಾಂಕ್ಷಾ ಜಾಯೇತ ತ್ಯಕ್ತುಂ ತ್ವಾಂ ಪಾಪನಿಶ್ಚಯಾಮ್ ।
ಯದಿ ರಾಮಸ್ಯ ನಾಪೇಕ್ಷಾ ತ್ವಯಿ ಸ್ಯಾನ್ಮಾತೃವತ್ಸದಾ ॥ ೧೮

ಉತ್ಪನ್ನಾ ತು ಕಥಂ ಬುದ್ಧಿಸ್ತವೇಯಂ ಪಾಪದರ್ಶಿನಿ ।
ಸಾಧುಚಾರಿತ್ರವಿಭ್ರಷ್ಟೇ ಪೂರ್ವೇಷಾಂ ನೋ ವಿಗರ್ಹಿತಾ ॥ ೧೯

ಅಸ್ಮಿನ್ ಕುಲೇ ಹಿ ಪೂರ್ವೇಷಾಂ ಜ್ಯೇಷ್ಠೋ ರಾಜ್ಯೇಽಭಿಷಿಚ್ಯತೇ ।
ಅಪರೇ ಭ್ರಾತರಸ್ತಸ್ಮಿನ್ ಪ್ರವರ್ತಂತೇ ಸಮಾಹಿತಾಃ ॥ ೨೦

ನ ಹಿ ಮನ್ಯೇ ನೃಶಂಸೇ ತ್ವಂ ರಾಜಧರ್ಮಮವೇಕ್ಷಸೇ ।
ಗತಿಂ ವಾ ನ ವಿಜಾನಾಸಿ ರಾಜವೃತ್ತಸ್ಯ ಶಾಶ್ವತೀಮ್ ॥ ೨೧

ಸತತಂ ರಾಜವೃತ್ತೇ ಹಿ ಜ್ಯೇಷ್ಠೋ ರಾಜ್ಯೇಽಭಿಷಿಚ್ಯತೇ ।
ರಾಜ್ಞಾಮೇತತ್ ಸಮಂ ತತ್ ಸ್ಯಾದಿಕ್ಷ್ವಾಕೂಣಾಂ ವಿಶೇಷತಃ ॥ ೨೨

ಸಾಮಾದ್ಯುಪಾಯಗಳಿಂದಲೂ ನನ್ನ ಬುದ್ಧಿಬಲದಿಂದಲೂ ರಾಜ್ಯಭಾರವನ್ನು ನಿರ್ವಹಿಸಬಲ್ಲೆ. ಆದರೆ ಮಗನಿಗಾಗಿ ಇಷ್ಟು ದುರಾಸೆಯನ್ನು ತೋರಿಸಿದ ನಿನ್ನ ಆಸೆಯನ್ನು ಮಾತ್ರ ನಾನು ನಡೆಸುವುದಿಲ್ಲ! (೧೬-೧೭). ರಾಮನು ನಿನ್ನಲ್ಲಿ ತಾಯಿಯಂತೆ ಭಕ್ತಿಗೌರವಗಳನ್ನಿಟ್ಟಿರುವುದರಿಂದ ನಾನು ಸುಮ್ಮನಿರಬೇಕಾಗಿದೆ. ಇಲ್ಲದಿದ್ದರೆ ಪಾಪಿಯಾದ ನಿನ್ನನ್ನು ಇಲ್ಲಿಂದ ಹೊರಡಿಸದೆ ಬಿಡುತ್ತಿರಲಿಲ್ಲ. ಶೀಲಭ್ರಷ್ಟೆ, ನಮ್ಮ ವಂಶಕ್ಕೇ ಸಲ್ಲದ ಈ ಕೆಟ್ಟ ಬುದ್ಧಿ ನಿನಗೆ ಹೇಗೆ ಹುಟ್ಟಿರಬಹುದು? (೧೮-೧೯). ಈ ರಘುಕುಲದಲ್ಲಿ ಪೂರ್ವಿಕರು ಜ್ಯೇಷ್ಠಪುತ್ರನಿಗೆ ರಾಜ್ಯದಲ್ಲಿ ಪಟ್ಟಾಭಿಷೇಕ ಮಾಡುತ್ತ ಬಂದಿದ್ದಾರೆ. ಉಳಿದ ಸೋದರರು ಅವನಲ್ಲಿ ವಿನಯದಿಂದ ನಡೆದುಕೊಳ್ಳುತ್ತಿದ್ದಾರೆ (೨೦). ಘಾತುಕಿ, ಈ ರಾಜಧರ್ಮವನ್ನು ನೀನು ಆದರಿಸುವಂತೆ ನನಗೆ ತೋರುವುದಿಲ್ಲ. ಈ ರಾಜಧರ್ಮವು ಶಾಶ್ವತವಾಗಿ ನಡೆದುಬಂದಿದೆ ಯೆಂಬುದು ನಿನಗೆ ಗೊತ್ತಿಲ್ಲವೋ ಹೇಗೆ? ಜ್ಯೇಷ್ಠಪುತ್ರನಿಗೆ ರಾಜ್ಯಾಭಿಷೇಕ ಮಾಡುವುದು ಯಾವಾಗಲೂ ರಾಜಧರ್ಮ. ಸಕಲ ರಾಜವಂಶದಲ್ಲಿಯೂ ಈ ಪದ್ಧತಿ ಇದೆ. ಇಕ್ಷ್ವಾಕುವಂಶದವರು ಈ ಪದ್ಧತಿಯನ್ನು ವಿಶೇಷವಾಗಿ ಆದರಿಸಿದ್ದಾರೆ (೨೧-೨೨).

ತೇಷಾಂ ಧರ್ಮೈಕರಕ್ಷಾಣಾಂ ಕುಲಚಾರಿತ್ರಶೋಭಿತಾಮ್ ।
ಅತ್ರ ಚಾರಿತ್ರಶೌಂಡೀರ್ಯಂ ತ್ವಾಂ ಪ್ರಾಪ್ಯ ವಿನಿವರ್ತಿತಮ್ ॥ ೨೩

ತವಾಪಿ ಸುಮಹಾಭಾಗಾ ಜನೇಂದ್ರಾಃ ಕುಲಪೂರ್ವಗಾಃ ।
ಬುದ್ಧೇರ್ಮೋಹಃ ಕಥಮಯಂ ಸಂಭೂತಸ್ತ್ವಯಿ ಗರ್ಹಿತಃ ॥ ೨೪

ನ ತು ಕಾಮಂ ಕರಿಷ್ಯಾಮಿ ತವಾಹಂ ಪಾಪನಿಶ್ಚಯೇ ।
ಯಯಾ ವ್ಯಸನಮಾರಬ್ಧಂ ಜೀವಿತಾಂತಕರಂ ಮಮ ॥ ೨೫

ಏಷ ತ್ವಿದಾನೀಮೇವಾಹಮಪ್ರಿಯಾರ್ಥಂ ತವಾನಘಮ್ ।
ನಿವರ್ತಯಿಷ್ಯಾಮಿ ವನದ್ಭ್ರಾತರಂ ಸ್ವಜನಪ್ರಿಯಮ್ ॥ ೨೬

ನಿವರ್ತಯಿತ್ವಾ ರಾಮಂ ಚ ತಸ್ಯಾಹಂ ದೀಪ್ತತೇಜಸಃ ।
ದಾಸಭೂತೋ ಭಮಿಷ್ಯಾಮಿ ಸುಸ್ಥಿತೇನಾಂತರಾತ್ಮನಾ ॥ ೨೭

ಇತ್ಯೇವಮುಕ್ತ್ವಾ ಭರತೋ ಮಹಾತ್ಮಾ
ಪ್ರಿಯೇತರೈರ್ವಾಕ್ಯಗಣೈಸ್ತುದಂಸ್ತಾಮ್ ।

ಧರ್ಮವನ್ನೇ ಪಾಲಿಸುತ್ತ, ಪರಂಪರೆಯಿಂದ ಬಂದ ಸದಾಚಾರವನ್ನು ಕಾಪಾಡುವುದು ಈ ಮನೆತನದ ಹೆಚ್ಚುಗಾರಿಕೆ. ಈ ಹೆಚ್ಚುಗಾರಿಕೆಯ ಹೆಮ್ಮೆ ನಿನ್ನಿಂದ ಉರುಳಿತು. ನಿನ್ನ ತಂದೆಯ ವಂಶದಲ್ಲಿ ರಾಜರೆಲ್ಲರೂ ದೊಡ್ಡನಡತೆಯವರು; ಮಹಾನುಭಾವರು. ಅವರೂ ಹಿರಿಯ ಮಗನಿಗೆ ಪಟ್ಟಾಭಿಷೇಕ ಮಾಡುತ್ತ ಬಂದಿದ್ದಾರೆ. ನಿನಗೆ ಈ ತುಚ್ಛವಾದ ದುರ್ಬುದ್ಧಿ ಹೇಗೆ ಹುಟ್ಟಿರಬಹುದು? (೨೩-೨೪). ಎಲೆ ಪಾಪಿ, ನಿನ್ನ ಆಸೆಯನ್ನು ಎಂದಿಗೂ ನಾನು ನಡೆಸುವುದಿಲ್ಲ. ನನಗೆ ಮರಣ ಸಂಕಟವನ್ನು ತಂದೊಡ್ಡಿದೆಯಲ್ಲ! ಈಗಲೇ ನಾನು ಹೋಗಿ ನಿರ್ದೋಷಿಯೂ ಬಂಧುಪ್ರಿಯನೂ ಆದ ಅಣ್ಣನನ್ನು ವನದಿಂದ ಕರೆತರುತ್ತೇನೆ. ನಿನಗೆ ಸಂಕಟವಾಗಲೆಂದೇ ಹೀಗೆ ಮಾಡುತ್ತೇನೆ! ರಾಮನನ್ನು ಕರೆತಂದು ಆ ತೇಜಸ್ವಿಗೆ ನಾನು ದಾಸನಂತೆ ನಡೆದುಕೊಳ್ಳುತ್ತೇನೆ. ಆಗ ನನ್ನ ಮನಸ್ಸಿಗೆ ನೆಮ್ಮದಿಯಾಗುವುದು'' ಎಂದನು (೨೫-೨೭). ಹೀಗೆ ಮಹಾನುಭಾವನಾದ ಭರತನು ಚುಚ್ಚುಮಾತುಗಳಿಂದ ಕೈಕೇಯಿಯನ್ನು ನೋಯಿಸಿದನು. ಶೋಕಾತುರನಾದ ಭರತನು ಉದ್ವೇಗದಿಂದ

ಶೋಕಾತುರಶ್ಚಾಪಿ ನನಾದ ಭೂಯಃ
ಸಿಂಹೋ ಯಥಾ ಮಂದರಕಂದರಸ್ಥಃ ॥ ೨೮

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತ್ರಿಸಪ್ತತಿತಮಃ ಸರ್ಗಃ

ಚತುಃಸಪ್ತತಿತಮಃ ಸರ್ಗಃ

ಕೈಕೇಯ್ಯಾಕ್ರೋಶಃ

ತಾಂ ತಥಾ ಗರ್ಹಯಿತ್ವಾ ತು ಮಾತರಂ ಭರತಸ್ತಥಾ ।
ರೋಷೇಣ ಮಹತಾವಿಷ್ಟಃ ಪುನರೇವಾಬ್ರವೀದ್ವಚಃ ॥ ೧

ರಾಜ್ಯಾದ್ಭ್ರಂಶಸ್ವ ಕೈಕೇಯಿ ನೃಶಂಸೇ ದುಷ್ಟಚಾರಿಣಿ ।
ಪರಿತ್ಯಕ್ತಾ ಚ ಧರ್ಮೇಣ ಮಾ ಮೃತಂ ರುದತೀ ಭವ ॥ ೨

ತಡೆಯಲಾರದೆ ಗಟ್ಟಿಯಾಗಿ ಕೂಗಿಕೊಳ್ಳುತ್ತಿದ್ದನು. ಆಗ ಮಂದರಗಿರಿಯ ಗುಹೆಯಲ್ಲಿ ಸಿಂಹವು ಗರ್ಜಿಸಿದಂತಾಗಿ ಅವನ ಧ್ವನಿಯು ಅರಮನೆಯಲ್ಲಿ ಮೊಳಗುತ್ತಿತ್ತು (೨೮).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಎಪ್ಪತ್ತುಮೂರನೆಯ ಸರ್ಗ

ಸರ್ಗ ೭೪

ಭರತನು ಕೈಕೇಯಿಯನ್ನು ಪುನಃ ನಿಂದಿಸಿ ಶೋಕಾವೇಶದಿಂದ ಮೂರ್ಛಿತನಾಗುವುದು.

ಭರತನು ಈ ರೀತಿಯಲ್ಲಿ ಕೈಕೇಯಿಯನ್ನು ನಿಂದಿಸಿ ರೋಷಾವಿಷ್ಟನಾಗಿ ಪುನಃ ಹೇಳಿದನು : ''ಈ ರಾಜ್ಯವನ್ನು ಬಿಟ್ಟು ಹಾಳಾಗಿಹೋಗು, ಕೈಕೇಯಿ; ಘಾತುಕೀ; ದುಷ್ಟೆ! ಧರ್ಮದೃಷ್ಟಿಯಿಂದ ಮಹಾರಾಜನು ನಿನ್ನನ್ನು ತ್ಯಜಿಸಿದಂತೆಯೇ ಆಯಿತು. ಅವನು ಮೃತನಾದನೆಂದು ನೀನು ಅಳಬೇಕಾದ್ದಿಲ್ಲ! (೧-೨). ಮಹಾರಾಜನಾಗಲಿ,

ಕಿಂ ನು ತೇಽದೂಷಯದ್ರಾಜಾ ರಾಮೋ ವಾ ಭೃಶಧಾರ್ಮಿಕಃ ।
ಯಯೋರ್ಮೃತ್ಯುರ್ವಿನಾಶಶ್ಚ ತ್ವತ್ಕೃತೇ ತುಲ್ಯಮಾಗತೌ ॥ ೩

ಭ್ರೂಣಹತ್ಯಾಮಸಿ ಪ್ರಾಪ್ತಾ ಕುಲಸ್ಯಾಸ್ಯ ವಿನಾಶನಾತ್ ।
ಕೈಕೇಯಿ ನರಕಂ ಗಚ್ಛ ಮಾ ಚ ಭರ್ತುಃ ಸಲೋಕತಾಮ್ ॥ ೪

ಯತ್ತ್ವಯಾ ಹೀದೃಶಂ ಪಾಪಂ ಕೃತಂ ಘೋರೇಣ ಕರ್ಮಣಾ ।
ಸರ್ವಲೋಕಪ್ರಿಯಂ ಹಿತ್ವಾ ಮಮಾಪ್ಯಾಪಾದಿತಂ ಭಯಮ್ ॥ ೫

ತ್ವತ್ಕೃತೇ ಮೇ ಪಿತಾ ವೃತ್ತೋ ರಾಮಶ್ಚಾರಣ್ಯಮಾಶ್ರಿತಃ ।
ಅಯಶೋ ಜೀವಲೋಕೇ ಚ ತ್ವಯಾಹಂ ಪ್ರತಿಪಾದಿತಃ ॥ ೬

ಮಾತೃರೂಪೇ ಮಮಾಮಿತ್ರೇ ನೃಶಂಸೇ ರಾಜ್ಯಕಾಮುಕೇ ।
ನ ತೇಽಹಮಭಿಭಾಷ್ಯೋಽಸ್ಮಿ ದುರ್ವೃತ್ತೇ ಪತಿಘಾತಿನಿ ॥ ೭

ಕೌಸಲ್ಯಾ ಚ ಸುಮಿತ್ರಾ ಚ ಯಾಶ್ಚಾನ್ಯಾ ಮಮ ಮಾತರಃ ।
ದುಃಖೇನ ಮಹತಾವಿಷ್ಟಾಸ್ತ್ವಾಂ ಪ್ರಾಪ್ಯ ಕುಲದೂಷಣೀಮ್ ॥ ೮

ಅತ್ಯಂತ ಧಾರ್ಮಿಕನಾದ ರಾಮನಾಗಲಿ, ನಿನಗೆ ಮಾಡಿದ ಕೆಡುಕೇನು? ಒಬ್ಬನಿಗೆ ಮೃತ್ಯುವೂ ಇನ್ನೊಬ್ಬನಿಗೆ ವನವಾಸವೂ ಒಟ್ಟಿಗೆ ನಿನ್ನ ದೆಸೆಯಿಂದ ಬಂದವು. ಈ ಮನೆತನವನ್ನು ಹಾಳು ಮಾಡಿದ್ದರಿಂದ ನಿನಗೆ ಬ್ರಹ್ಮಹತ್ಯಾದೋಷವೇ ಬಂದಿತು. ನೀನು ನರಕದಲ್ಲಿ ಬೀಳುತ್ತೀಯೆ. ಎಂದಿಗೂ ಪತಿಯ ಸಾಲೋಕ್ಯವು ನಿನಗೆ ದೊರೆಯದು (೩-೪). ಘೋರವಾದ ಸನ್ನಾಹದಿಂದ ಇಂಥ ಪಾಪಕೃತ್ಯವನ್ನು ಮಾಡಿದ್ದೀಯೆ. ಸರ್ವಜನಪ್ರಿಯನಾದ ರಾಮನನ್ನು ಅಗಲಿಸಿ ನನಗೆ ದೊಡ್ಡ ಕುತ್ತನ್ನು ತಂದೆ. ನಿನ್ನ ದೆಸೆಯಿಂದ ನನ್ನ ತಂದೆ ಸಾಯುವಂತಾಯಿತು. ರಾಮನು ಅರಣ್ಯವನ್ನು ಸೇರಿದನು. ಈ ಜಗತ್ತಿನಲ್ಲಿ ಕೆಟ್ಟ ಹೆಸರು ನನಗೆ ಗಂಟುಬಿತ್ತು (೫-೬). ಎಲೇ, ತಾಯಿಯೆಂಬ ಹೆಸರಿನ ನನ್ನ ವೈರಿ! ರಾಜ್ಯದ ಆಸೆಯಿಂದ ಇಂಥ ಕ್ರೂರಕೃತ್ಯವನ್ನು ಮಾಡಿದೆಯಾ? ಕೆಟ್ಟನಡತೆಯವಳೇ! ಗಂಡನನ್ನು ಕೊಂದವಳೇ! ಇನ್ನು ಮೇಲೆ ನನ್ನೊಡನೆ ನೀನು ಮಾತಾಡಕೂಡದು! (೭). ಕುಲಗೇಡಿಯಾದ ನಿನ್ನಿಂದ ಕೌಸಲ್ಯೆ ಸುಮಿತ್ರೆ ಮುಂತಾದ ನನ್ನ ಮಾತೆಯರಿಗೆ ಮಹಾದುಃಖ ಬಂದೊದಗಿತು. ಧೀಮಂತನಾಗಿ

ನ ತ್ವಮಶ್ವಪತೇಃ ಕನ್ಯಾ ಧರ್ಮರಾಜಸ್ಯ ಧೀಮತಃ ।
ರಾಕ್ಷಸೀ ತತ್ರ ಜಾತಾಸಿ ಕುಲಪ್ರಧ್ವಂಸಿನೀ ಪಿತುಃ ॥ ೯

ಯತ್ತ್ವಯಾ ಧಾರ್ಮಿಕೋ ರಾಮೋ ನಿತ್ಯಂ ಸತ್ಯಪರಾಯಣಃ ।
ವನಂ ಪ್ರಸ್ಥಾಪಿತೋ ದುಃಖಾತ್ ಪಿತಾ ಚ ತ್ರಿದಿವಂ ಗತಃ ॥ ೧೦

ಯತ್ಪ್ರಧಾನಾಸಿ ತತ್ಪಾಪಂ ಮಯಿ ಪಿತ್ರಾ ವಿನಾಕೃತೇ ।
ಭ್ರಾತೃಭ್ಯಾಂ ಚ ಪರಿತ್ಯಕ್ತೇ ಸರ್ವಲೋಕಸ್ಯ ಚಾಪ್ರಿಯೇ ॥ ೧೧

ಕೌಸಲ್ಯಾಂ ಧರ್ಮಸಂಯುಕ್ತಾಂ ವಿಯುಕ್ತಾಂ ಪಾಪನಿಶ್ಚಯೇ ।
ಕೃತ್ವಾ ಕಂ ಪ್ರಾಪ್ಸ್ಯಸೇ ತ್ವದ್ಯ ಲೋಕಂ ನಿರಯಗಾಮಿನಿ ॥ ೧೨

ಕಿಂ ನಾವಬುಧ್ಯಸೇ ಕ್ರೂರೇ ನಿಯತಂ ಬಂಧುಸಂಶ್ರಯಮ್ ।
ಜ್ಯೇಷ್ಠಂ ಪಿತೃಸಮಂ ರಾಮಂ ಕೌಸಲ್ಯಾತನುಸಂಭವಮ್ ॥ ೧೩

ಅಂಗಪ್ರತ್ಯಂಗಜಃ ಪುತ್ರೋ ಹೃದಯಾಚ್ಚಾಪಿ ಜಾಯತೇ ।
ತಸ್ಮಾತ್ ಪ್ರಿಯತಮೋ ಮಾತುಃ ಪ್ರಿಯಾ ಏವ ತು ಬಾಂಧವಾಃ ॥ ೧೪

ಧರ್ಮರಾಜನೆನಿಸಿರುವ ಆ ಅಶ್ವಪತಿಮಹಾರಾಜನಿಗೆ ಮಗಳೆನಿಸಿಕೊಳ್ಳುವ ಯೋಗ್ಯತೆ ನಿನಗಿಲ್ಲ. ಕೆಟ್ಟಹೆಸರು ತಂದು ತಂದೆಯ ಕುಲವನ್ನು ಧ್ವಂಸ ಮಾಡಲು ಹುಟ್ಟಿರುವ ರಾಕ್ಷಸಿ ನೀನು (೮-೯). ಸತ್ಯಪರಾಯಣನಾದ ರಾಮನನ್ನು ವನಕ್ಕೆ ಅಟ್ಟಿದೆ. ನಿನ್ನಿಂದಲೇ ಪುತ್ರಶೋಕವನ್ನು ತಡೆಯಲಾರದೆ ನನ್ನ ತಂದೆ ಸ್ವರ್ಗಸ್ಥನಾದನು. ನಿನಗೆ ರಾಜ್ಯವೇ ಮುಖ್ಯವಾಯಿತು. ಅದಕ್ಕಾಗಿ ನೀನು ಮಾಡಿದ ಪಾಪಕೃತ್ಯದ ಫಲ ನನಗೆ ಬಂದಿತು. ನಾನು ತಂದೆಯನ್ನು ಕಳೆದುಕೊಂಡೆ. ಅಣ್ಣತಮ್ಮಂದಿರು ಬಿಟ್ಟುಹೋದರು. ಸಮಸ್ತ ಜನರ ಪ್ರೀತಿಯನ್ನೂ ಕಳೆದುಕೊಂಡೆ (೧೦-೧೧). ಧರ್ಮಶೀಲಳಾದ ಕೌಸಲ್ಯೆದೇವಿಗೆ ಪತಿಪುತ್ರವಿಯೋಗವನ್ನು ತಂದಿಟ್ಟೆಯಲ್ಲ, ಎಲೆ ಪಾಪಿ, ನೀನು ಯಾವ ನರಕಕ್ಕೆ ಹೋದೀಯೆ? ಕಠೋರಬುದ್ಧಿಯವಳೆ, ಕೌಸಲ್ಯಾಪುತ್ರನಾದ ರಾಮನು ಬಂಧುಪ್ರಿಯನೆಂದೂ ಹಿರಿಯನೆಂದೂ ತಂದೆಯಂತೆ ಗುಣಾಢ್ಯನೆಂದೂ ನಿನಗೆ ಗೊತ್ತಿಲ್ಲವೆ? (೧೨-೧೩). ಪುತ್ರನು ಸಕಲ ಅವಯವಗಳ ಸಾರವಾಗಿ ಹೃದಯದ ಅನುರಾಗಕ್ಕೆ ಪ್ರತೀಕವಾಗಿ ಹುಟ್ಟಿರುತ್ತಾನೆ. ಆದ್ದರಿಂದ ತಾಯಿಗೆ ಎಲ್ಲ ಬಂಧುಗಳಿಗಿಂತಲೂ ಪುತ್ರನ ಮೇಲೆ ಪ್ರೀತಿ ಹೆಚ್ಚು (೧೪). ಒಂದು ಸಲ

ಅನ್ಯದಾ ಕಿಲ ಧರ್ಮಜ್ಞಾ ಸುರಭಿಃ ಸುರಸಂಮತಾ ।
ವಹಮಾನೌ ದದರ್ಶೋರ್ವ್ಯಾಂ ಪುತ್ರೌ ವಿಗತಚೇತಸೌ ॥ ೧೫

ತಾವರ್ಧದಿವಸೇ ಶ್ರಾಂತೌ ದೃಷ್ಟ್ವಾ ಪುತ್ರೌ ಮಹೀತಲೇ ।
ರುರೋದ ಪುತ್ರಶೋಕೇನ ಬಾಷ್ಪಪರ್ಯಾಕುಲೇಕ್ಷಣಾ ॥ ೧೬

ಅಧಸ್ತಾದ್ವ್ರಜತಸ್ತಸ್ಯಾಃ ಸುರರಾಜ್ಞೋ ಮಹಾತ್ಮನಃ ।
ಬಿಂದವಃ ಪತಿತಾ ಗಾತ್ರೇ ಸೂಕ್ಷ್ಮಾಃ ಸುರಭಿಗಂಧಿನಃ ॥ ೧೭

ಇಂದ್ರೋಽಪ್ಯಶ್ರುನಿಪಾತಂ ತಂ ಸ್ವಗಾತ್ರೇ ಪುಣ್ಯಗಂಧಿನಮ್ ।
ಸುರಭಿಂ ಮನ್ಯತೇ ದೃಷ್ಟ್ವಾ ಭೂಯಸೀಂ ತಾಂ ಸುರೇಶ್ವರಃ ॥ ೧೮

ನಿರೀಕ್ಷಮಾಣಃ ಶಕ್ರಸ್ತಾಂ ದದರ್ಶ ಸುರಭಿಂ ಸ್ಥಿತಾಮ್ ।
ಆಕಾಶೇ ವಿಷ್ಠಿತಾಂ ದೀನಾಂ ರುದಂತೀಂ ಭೃಶದುಃಖಿತಾಮ್ ॥ ೧೯

ತಾಂ ದೃಷ್ಟ್ವಾ ಶೋಕಸಂತಪ್ತಾಂ ವಜ್ರಪಾಣಿರ್ಯಶಸ್ವಿನೀಮ್ ।
ಇಂದ್ರಃ ಪ್ರಾಂಜಲಿರುದ್ವಿಗ್ನಃ ಸುರರಾಜೋಽಬ್ರವೀದ್ವಚಃ ॥ ೨೦

ಸಕಲಧರ್ಮಗಳನ್ನೂ ಬಲ್ಲ ದೇವಪೂಜ್ಯವಾದ ಕಾಮಧೇನುವು, ತನ್ನ ವಂಶದಲ್ಲಿ ಹುಟ್ಟಿದ ಎರಡು ಎತ್ತುಗಳು ಭೂಲೋಕದಲ್ಲಿ ಗದ್ದೆಯನ್ನುಳುವುದನ್ನು ಕಂಡಳಂತೆ ಅವು ಆಯಾಸದಿಂದ ಕಂಗೆಟ್ಟಿದ್ದವು (೧೫). ಮಧ್ಯಾಹ್ನದ ಬಿಸಿಲಿನಲ್ಲಿ ತೊಳಲುತ್ತಿದ್ದ ಮಕ್ಕಳನ್ನು ನೋಡಿ ಕಾಮಧೇನುವು ಕಣ್ಣೀರಿಡುತ್ತ ರೋದಿಸಿದಳು. ಆ ಸಮಯದಲ್ಲಿ ದೇವೇಂದ್ರನು ಕೆಳಭಾಗದಲ್ಲಿ ಆಕಸ್ಮಾತ್ ಹೋಗುತ್ತಿರಲು, ಕಾಮಧೇನುವಿನ ಕಣ್ಣೀರಿನ ಹನಿಗಳು ಅವನ ಮೈಮೇಲೆ ಬಿದ್ದವು (೧೬-೧೭). ಪುಣ್ಯಗಂಧವುಳ್ಳ ಕಣ್ಣೀರು ತನ್ನ ದೇಹದ ಮೇಲೆ ಬಿದ್ದುದನ್ನು ಕಂಡು ದೇವೇಂದ್ರನು ಇದು ಶ್ರೇಷ್ಠವಾದ ಕಾಮಧೇನುವಿನ ಕಣ್ಣೀರೆಂದು ಊಹಿಸಿ ಮೇಲಕ್ಕೆ ನೋಡಿದನು. ಆಕಾಶದಲ್ಲಿ ಅತ್ಯಂತ ದುಃಖದಿಂದ ರೋದಿಸುತ್ತಿದ್ದ ಕಾಮಧೇನು ಕಾಣಿಸಿದಳು (೧೮-೧೯). ಇಂದ್ರನಿಗೆ ವ್ಯಥೆಯಾಯಿತು ಅವನು ಕೈಮುಗಿದುಕೊಂಡು, ''ಹೇ ದೇವಿ, ನಿನಗೆ ನಮ್ಮ ದೇವತೆಗಳಿಂದ ಯಾವುದಾದರೂ ಕಷ್ಟವು ಸಂಭವಿಸಿತೆ? ನಿನ್ನ ಶೋಕಕ್ಕೆ ಕಾರಣವೇನು? ಸಕಲರ ಹಿತವನ್ನೂ ಬಯಸುವ

ಭಯಂ ಕಚ್ಚಿನ್ನ ಚಾಸ್ಮಾಸು ಕುತಶ್ಚಿದ್ವಿದ್ಯತೇ ಮಹತ್ ।
ಕುತೋನಿಮಿತ್ತಃ ಶೋಕಸ್ತೇ ಬ್ರೂಹಿ ಸರ್ವ ಹಿತೈಷಿಣಿ ॥ ೨೧

ಏವಮುಕ್ತಾ ತು ಸುರಭಿಃ ಸುರರಾಜೇನ ಧೀಮತಾ ।
ಪ್ರತ್ಯುವಾಚ ತತೋ ಧೀರಾ ವಾಕ್ಯಂ ವಾಕ್ಯವಿಶಾರದಾ ॥ ೨೨

ಶಾಂತಂ ಪಾಪಂ ನ ವಃ ಕಿಂಚಿತ್ ಕುತಶ್ಚಿದಮರಾಧಿಪ ।
ಅಹಂ ತು ಮಗ್ನೌ ಶೋಚಾಮಿ ಸ್ವಪುತ್ರೌ ವಿಷಮೇ ಸ್ಥಿತೌ ॥ ೨೩

ಏತೌ ದೃಷ್ಟ್ವಾ ಕೃಶೌ ದೀನೌ ಸೂರ್ಯರಶ್ಮಿಪ್ರತಾಪಿತೌ ।
ಅರ್ದ್ಯಮಾನೌ ಬಲೀವರ್ದೌ ಕರ್ಷಕೇಣ ಸುರಾಧಿಪ ॥ ೨೪

ಮಮ ಕಾಯಾತ್ ಪ್ರಸೂತೌ ಹಿ ದುಃಖಿತೌ ಭಾರಪೀಡಿತೌ ।
ಯೌ ದೃಷ್ಟ್ವಾ ಪರಿತಪ್ಯೇಽಹಂ ನಾಸ್ತಿ ಪುತ್ರ ಸಮಃ ಪ್ರಿಯಃ ॥ ೨೫

ಯಸ್ಯಾಃ ಪುತ್ರಸಹಸ್ರೈಸ್ತು ಕೃತ್ಸ್ನಂ ವ್ಯಾಪ್ತಮಿದಂ ಜಗತ್ ।
ತಾಂ ದೃಷ್ಟ್ವಾ ರುದತೀಂ ಶಕ್ರೋ ನ ಸುತಾನ್ಮನ್ಯತೇ ಪರಮ್ ॥ ೨೬

ಸದಾಪ್ರತಿಮವೃತ್ತಾಯಾ ಲೋಕಧಾರಣಕಾಮಯಾ ।
ಶ್ರೀಮತ್ಯಾ ಗುಣನಿತ್ಯಾಯಾಃ ಸ್ವಭಾವಪರಿಚೇಷ್ಟಯಾ ॥ ೨೭

ನಿನಗೆ ಕಷ್ಟ ಬರಬಹುದೆ?'' ಎಂದನು (೨೦-೨೧). ಆಗ ಕಾಮಧೇನುವು ''ಶಾಂತಂ ಪಾಪಂ. ಇಂದ್ರ, ನಿಮ್ಮಿಂದ ನನಗೆ ಯಾವ ಭಯವೂ ಇಲ್ಲ. ಕಷ್ಟಕ್ಕೆ ಸಿಕ್ಕಿದ ನನ್ನ ಮಕ್ಕಳನ್ನು ನೋಡಿ ಅಳುತ್ತಿದ್ದೇನೆ. ಕೃಶವಾಗಿರುವ ಈ ಎತ್ತುಗಳನ್ನು ನೋಡು! ಬಿಸಿಲಿನ ತಾಪದಲ್ಲಿ ರೈತನ ಹಿಂಸೆಗೆ ಸಿಕ್ಕಿದ ಇವುಗಳನ್ನು ನೋಡಿ ಸಂಕಟಪಡುತ್ತಿದ್ದೇನೆ (೨೨-೨೪). ದೇವೇಂದ್ರ, ಭಾರವನ್ನೆಳೆಯಲಾರದೆ ದುಃಖಿಸುತ್ತಿರುವ ಮಕ್ಕಳನ್ನು ನೋಡಿ ಸಂಕಟವಾಗುತ್ತಿದೆ. ತಾಯಿಗೆ ಪುತ್ರನಷ್ಟು ಪ್ರಿಯನಾದವನು ಇನ್ನೊಬ್ಬನಿಲ್ಲ'' ಎಂದಳು (೨೫). ಆಗ ಇಂದ್ರನು ''ಗುಣಶಾಲಿಯಾದ ಕಾಮಧೇನು ಲೋಕರಕ್ಷಣೆಗೋಸ್ಕರ ಸಹಜರೀತಿಯಲ್ಲಿ ಸಾವಿರಾರು ಮಕ್ಕಳನ್ನು ಪಡೆದಿದ್ದಾಳೆ. ಅವಳ ಮಕ್ಕಳು ಜಗತ್ತನ್ನೇ ವ್ಯಾಪಿಸಿದ್ದಾರೆ. ಹೀಗಿರುವಾಗ ಇಬ್ಬರು ಮಕ್ಕಳಿಗಾಗಿ ಈ ಕಾಮಧೇನು ಅಳುವಳಲ್ಲ! ನಿಜವಾಗಿಯೂ ಪುತ್ರನಿಗಿಂತ ಪ್ರಿಯವಾದ ವಸ್ತು ಇನ್ನೊಂದಿಲ್ಲ!'' ಎಂದು ಕೊಂಡನಂತೆ (೨೬-೨೭). ಹೀಗಿರುವಾಗ ಕೈಕೇಯಿ, ರಾಮನನ್ನು ಬಿಟ್ಟು ಕೌಸಲ್ಯೆಯು

ಯಸ್ಯಾಃ ಪುತ್ರಸಹಸ್ರಾಣಿ ಸಾಪಿ ಶೋಚತಿ ಕಾಮಧುಕ್ ।
ಕಿಂ ಪುನರ್ಯಾ ವಿನಾ ರಾಮಂ ಕೌಸಲ್ಯಾ ವರ್ತಯಿಷ್ಯತಿ ॥ ೨೮

ಏಕಪುತ್ರಾ ಚ ಸಾಧ್ವೀ ಚ ವಿವತ್ಸೇಯಂ ತ್ವಯಾ ಕೃತಾ ।
ತಸ್ಮಾತ್ತ್ವಂ ಸತತಂ ದುಃಖಂ ಪ್ರೇತ್ಯ ಚೇಹ ಚ ಲಪ್ಸ್ಯಸೇ ॥ ೨೯

ಅಹಂ ಹ್ಯಪಚಿತಿಂ ಭ್ರಾತುಃ ಪಿತುಶ್ಚ ಸಕಲಾಮಿಮಾಮ್ ।
ವರ್ಧನಂ ಯಶಸಶ್ಚಾಪಿ ಕರಿಷ್ಯಾಮಿ ನ ಸಂಶಯಃ ॥ ೩೦

ಆನಾಯ್ಯ ಚ ಮಹಾಬಾಹುಂ ಕೌಸಲ್ಯಾಯಾ ಮಹಾಬಲಮ್ ।
ಸ್ವಯಮೇವ ಪ್ರವೇಕ್ಷ್ಯಾಮಿ ವನಂ ಮುನಿನಿಷೇವಿತಮ್ ॥ ೩೧

ನ ಹ್ಯಹಂ ಪಾಪಸಂಕಲ್ಪೇ ಪಾಪೇ ಪಾಪಂ ತ್ವಯಾ ಕೃತಮ್ ।
ಶಕ್ತೋ ಧಾರಯಿತುಂ ಪೌರೈರಶ್ರುಕಂಠೈರ್ನಿರೀಕ್ಷಿತಃ ॥ ೩೨

ಸಾ ತ್ವಮಗ್ನಿಂ ಪ್ರವಿಶ ವಾ ಸ್ವಯಂ ವಾ ದಂಡಕಾನ್ ವಿಶ ।
ರಜ್ಜುಂ ಬಧಾನ ವಾ ಕಂಠೇ ನ ಹಿ ತೇಽನ್ಯತ್ ಪರಾಯಣಮ್ ॥ ೩೩

ಬದುಕಿರುವಳೆ? ಆ ಸಾಧ್ವಿಗೆ ಇರತಕ್ಕವನು ಒಬ್ಬನೇ ಮಗ. ಈಗ ಅವನನ್ನೂ ನೀನು ಅಗಲಿಸಿದೆ. ಇನ್ನು ನೀನು ಬದುಕಿದ್ದರೂ ಸತ್ತರೂ ನಿನಗೆ ನಿರಂತರವಾಗಿ ದುಃಖ ತಪ್ಪಿದ್ದಲ್ಲ(೨೮-೨೯). ನಾನು ಅಣ್ಣನಿಗೆ ಹೇಗೆ ಸಮಾಧಾನ ಹೇಳಬೇಕೋ ಹಾಗೆ ಹೇಳಿ ಅವನನ್ನು ಸತ್ಕರಿಸುವೆನು. ತಂದೆಯ ಉತ್ತರಕ್ರಿಯೆಯನ್ನು ಯೋಗ್ಯರೀತಿಯಲ್ಲಿ ಮಾಡುವೆನು. ಹೇಗಾದರೂ ನನ್ನ ಕೀರ್ತಿ ಉಳಿಯುವಂತೆ ನೋಡಿಕೊಳ್ಳುವೆನು. ಯಾವ ಸಂದೇಹವೂ ಇಲ್ಲ (೩೦). ಆಜಾನುಬಾಹುವೂ ಶೂರನೂ ಆದ ರಾಮನನ್ನು ಕೌಸಲ್ಯೆಯ ಬಳಿಗೆ ಕರೆದುಕೊಂಡು ಬಂದು, ಮುನಿಗಳಿರುವ ಅರಣ್ಯಕ್ಕೆ ನಾನೇ ಹೋಗುವೆನು. ಎಲೆ ಪಾಪಿ, ನೀನು ಮಾಡಿದ ಪಾಪಕೃತ್ಯವನ್ನು ನಾನು ಹೊರಲಾರೆ. ಕಣ್ಣೀರು ಬಿಡುತ್ತ ಪ್ರಜೆಗಳು ನನ್ನನ್ನು ನೋಡುವುದನ್ನು ಸಹಿಸಲಾರೆ (೩೧-೩೨). ನೀನು ಬೆಂಕಿಗಾದರೂ ಬೀಳು. ದಂಡಕಾರಣ್ಯಕ್ಕಾದರೂ ಹೋಗು. ಕೊರಳಿಗೆ ನೇಣನ್ನಾದರೂ ಬಿಗಿದುಕೊ! ಇದನ್ನು ಬಿಟ್ಟರೆ ನಿನಗೆ ಬೇರೆ ಗತಿಯೇನಿದೆ? ಸತ್ಯಸಂಧನಾದ

ಅಹಮಪ್ಯವನಿಂ ಪ್ರಾಪ್ತೇ ರಾಮೇ ಸತ್ಯಪರಾಕ್ರಮೇ ।
ಕೃತಕೃತ್ಯೋ ಭವಿಷ್ಯಾಮಿ ವಿಪ್ರವಾಸಿತಕಲ್ಮಷಃ ॥ ೩೪

ಇತಿ ನಾಗ ಇವಾರಣ್ಯೇ ತೋಮರಾಂಕುಶಚೋದಿತಃ ।
ಪಪಾತ ಭುವಿ ಸಂಕ್ರುದ್ಧೋ ನಿಃಶ್ವಸನ್ನಿವ ಪನ್ನಗಃ ॥ ೩೫

ಸಂರಕ್ತ ನೇತ್ರಃ ಶಿಥಿಲಾಂಬರಸ್ತಥಾ
ವಿಧೂತಸರ್ವಾಭರಣಃ ಪರಂತಪಃ ।
ಬಭೂವ ಭೂಮೌ ಪತಿತೋ ನೃಪಾತ್ಮಜಃ
ಶಚೀಪತೇಃ ಕೇತುರಿವೋತ್ಸವಕ್ಷಯೇ ॥ ೩೬

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತುಃಸಪ್ತತಿಮಃ ಸರ್ಗಃ

❉❉❉

ಶ್ರೀರಾಮನಿಗೆ ಈ ರಾಜ್ಯವನ್ನೊಪ್ಪಿಸಿ ನಾನು ಕೃತಾರ್ಥನಾಗುತ್ತೇನೆ. ಆಗ ಮಾತ್ರ ನನ್ನ ಪಾಪವು ತೊಳೆದುಹೋದೀತು'' ಎಂದು ಕೂಗಾಡಿದನು (೩೩-೩೪). ಹೀಗೆ ಭರತನು ಅರಣ್ಯದಲ್ಲಿ ಅಂಕುಶತೋಮರಗಳಿಂದ ತಿವಿಯಲ್ಪಟ್ಟ ಆನೆಯಂತೆ ಕೆರಳಿ, ರೊಚ್ಚಿಗೆದ್ದ ಸರ್ಪದಂತೆ ಬುಸುಗುಟ್ಟುತ್ತ, ಕೊನೆಗೆ ನೆಲದ ಮೇಲೆ ಬಿದ್ದುಹೋದನು (೩೫). ಅವನ ಕಣ್ಣುಗಳು ಕೆಂಪಾದವು. ಬಟ್ಟೆಗಳು ಸಡಲಿದವು. ತೊಟ್ಟಿದ್ದ ಸಕಲ ಆಭರಣಗಳೂ ಚೆಲ್ಲಾಪಿಲ್ಲಿಯಾದವು. ಆ ರಾಜಕುಮಾರನು ಉತ್ಸವಾಂತದಲ್ಲಿ ಕಾಣುವ ಇಂದ್ರಧ್ವಜನಂತೆ ನೆಲದ ಮೇಲೆ ಬಿದ್ದನು (೩೬).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಎಪ್ಪತ್ತು ನಾಲ್ಕನೆಯ ಸರ್ಗ

❉❉❉

ಪಂಚಸಪ್ತ ತಿತಮಃ ಸರ್ಗಃ

ಭರತಶಪಥಃ

ದೀರ್ಘಕಾಲಾತ್ ಸಮುತ್ಥಾಯ ಸಂಜ್ಞಾಂ ಲಬ್ಧ್ವಾ ಚ ವೀರ್ಯವಾನ್ ।
ನೇತ್ರಾಭ್ಯಾಮಶ್ರುಪೂರ್ಣಾಭ್ಯಾಂ ದೀನಾಮುದ್ವೀಕ್ಷ್ಯ ಮಾತರಮ್ ॥ ೧

ಸೋಽಮಾತ್ಯಮಧ್ಯೇ ಭರತೋ ಜನನೀಮಭ್ಯಕುತ್ಸಯತ್
ರಾಜ್ಯಂ ನ ಕಾಮಯೇ ಜಾತು ಮಂತ್ರಯೇ ನಾಪಿ ಮಾತರಮ್ ॥ ೨

ಅಭಿಷೇಕಂ ನ ಜಾನಾಮಿ ಯೋಽಭೂದ್ರಾಜ್ಞಾ ಸಮೀಕ್ಷಿತಃ ।
ವಿಪ್ರಕೃಷ್ಟೇ ಹ್ಯಹಂ ದೇಶೇ ಶತ್ರುಘ್ನಸಹಿತೋಽವಸಮ್ ॥ ೩

ವನವಾಸಂ ನ ಜಾನಾಮಿ ರಾಮಸ್ಯಾಹಂ ಮಹಾತ್ಮನಃ ।
ವಿವಾಸನಂ ವಾ ಸೌಮಿತ್ರೇಃ ಸೀತಾಯಾಶ್ಚ ಯಥಾಭವತ್ ॥ ೪

ಸರ್ಗ ೭೫

ಭರತಶತ್ರುಘ್ನರು ಕೌಸಲ್ಯೆಯ ಬಳಿಗೆ ಹೋಗುವುದು.
ತನಗೆ ಏನೂ ಗೊತ್ತಿರಲಿಲ್ಲವೆಂದು ಭರತನು ಆಣೆಯಿಡುವುದು.

ಬಹಳ ಹೊತ್ತಿನ ಮೇಲೆ ಭರತನು ಚೇತರಿಸಿಕೊಂಡೆದ್ದನು. ಅವನ ತಾಯಿಯು ತನ್ನ ಇಚ್ಛೆ ನಡೆಯಲಿಲ್ಲವೆಂದು ದೈನ್ಯದಿಂದ ನಿಂತಿದ್ದಳು. ಭರತನ ಕಣ್ಣುಗಳಲ್ಲಿ ಕಂಬನಿ ತುಂಬಿತ್ತು. (ಮಂತ್ರಿಗಳು ಭರತನ ಆಗಮನವೃತ್ತಾಂತವನ್ನು ಕೇಳಿ ಬಂದಿದ್ದರು). ಭರತನು ಮಂತ್ರಿಗಳೆದುರಿಗೆ ತಾಯಿಯನ್ನು ನಿಂದಿಸಿ ''ನಾನು ಎಂದೂ ರಾಜ್ಯವನ್ನು ಅಪೇಕ್ಷಿಸಿದವನಲ್ಲ. ಈ ವಿಷಯವಾಗಿ ತಾಯಿಯೊಡನೆ ಎಂದೂ ಆಲೋಚಿಸಿದವನಲ್ಲ (೧-೨). ಮಹಾರಾಜನು ಸಂಕಲ್ಪಿಸಿದ ಪಟ್ಟಾಭಿಷೇಕದ ವಿಷಯವೂ ನನಗೆ ತಿಳಿಯದು. ನಾನು ಶತ್ರುಘ್ನನೊಡನೆ ದೂರದೇಶದಲ್ಲಿದ್ದೆನು. ಮಹಾತ್ಮನಾದ ಶ್ರೀರಾಮನ ವನವಾಸದ ವಿಚಾರ ಒಂದೂ ನನಗೆ ಗೊತ್ತಿಲ್ಲ. ಅವನೊಡನೆ ಲಕ್ಷ್ಮಣನೂ ಸೀತಾದೇವಿಯೂ ಏಕೆ ಹೋಗಬೇಕಾಯಿತೆಂಬುದೂ ನನಗೆ ಗೊತ್ತಿಲ್ಲ'' ಎಂದನು

ತಥೈವ ಕ್ರೋಶತಸ್ತಸ್ಯ ಭರತಸ್ಯ ಮಹಾತ್ಮನಃ ।
ಕೌಸಲ್ಯಾ ಶಬ್ದಮಾಜ್ಞಾಯ ಸುಮಿತ್ರಾಮಿದಮಬ್ರವೀತ್ ॥ ೫

ಆಗತಃ ಕ್ರೂರಕಾರ್ಯಾಯಾಃ ಕೈಕೇಯ್ಯಾ ಭರತಃ ಸುತಃ ।
ತಮಹಂ ದ್ರಷ್ಟುಮಿಚ್ಛಾಮಿ ಭರತಂ ದೀರ್ಘದರ್ಶಿನಮ್ ॥ ೬

ಏವಮುಕ್ತ್ವಾ ಸುಮಿತ್ರಾಂ ಸಾ ವಿವರ್ಣಾ ಮಲಿನಾ ಕೃಶಾ ।
ಪ್ರತಸ್ಥೇ ಭರತೋ ಯತ್ರ ವೇಪಮಾನಾ ವಿಚೇತನಾ ॥ ೭

ಸ ತು ರಾಮಾನುಜಶ್ಚಾಪಿ ಶತ್ರುಘ್ನಸಹಿತಸ್ತದಾ
ಪ್ರತಸ್ಥೇ ಭರತೋ ಯತ್ರ ಕೌಸಲ್ಯಾಯಾ ನಿವೇಶನಮ್ ॥ ೮

ತತಃ ಶತ್ರುಘ್ನಭರತೌ ಕೌಸಲ್ಯಾಂ ಪ್ರೇಕ್ಷ್ಯ ದುಃಖಿತೌ ।
ಪರ್ಯಷ್ವಜೇತಾಂ ದುಃಖಾರ್ತಾಂ ಪತಿತಾಂ ನಷ್ಟಚೇತನಾಮ್ ॥ ೯

ರುದಂತೌ ರುದತೀಂ ದುಃಖಾತ್ ಸಮೇತ್ಯಾರ್ಯಾಂ ಮನಸ್ವಿನೀಮ್ ।
ಭರತಂ ಪ್ರತ್ಯುವಾಚೇದಂ ಕೌಸಲ್ಯಾ ಭೃಶದುಃಖಿತಾ ॥ ೧೦

(೩-೪). ಈ ರೀತಿಯಲ್ಲಿ ಅಳುತ್ತ ಕೂಗಾಡುತ್ತಿದ್ದ ಭರತನ ಧ್ವನಿಯು ಕೌಸಲ್ಯೆಗೆ ಕೇಳಿಸಿತು. ಅವಳು "ಸುಮಿತ್ರೆಯನ್ನು ಕರೆದು ಸುಮಿತ್ರೆ, ಕ್ರೂರಳಾದ ಕೈಕೇಯಿಯ ಮಗನು ಬಂದಂತೆ ಕಾಣುತ್ತದೆ. ಭರತನು ದೀರ್ಘದರ್ಶಿ - ವಿಚಾರಶೀಲ. ಅವನನ್ನು ನೋಡಬೇಕೆಂದಿದ್ದೇನೆ" ಎಂದಳು (೫-೬). ಕೌಸಲ್ಯೆಯು ಕಂದಿ ಕುಂದಿ ಸೊರಗಿ ಮಲಿನವಾಗಿದ್ದಳು. ನಡೆಯುವ ಚೈತನ್ಯವೂ ಉಡುಗಿತ್ತು. ದೇಹವೂ ನಡುಗುತ್ತಿತ್ತು. ಅವಳು ಭರತನಿದ್ದಲ್ಲಿಗೆ ಹೊರಟಳು. ಅಷ್ಟರಲ್ಲಿ ಭರತನೂ ಸಹ ಶತ್ರುಘ್ನನೊಡನೆ ಕೌಸಲ್ಯೆಯ ಅಂತಃಪುರದ ಕಡೆಗೆ ಬಂದನು (೭-೮). ಆಗ (ಅಂತಃಪುರದಿಂದ ಹೊರಡುತ್ತಿದ್ದ) ಕೌಸಲ್ಯೆಯನ್ನು ಕಂಡು ಭರತಶತ್ರುಘ್ನರು ದುಃಖಾರ್ತರಾದರು. ಅವರನ್ನು ನೋಡಿದಾಗ ಕೌಸಲ್ಯೆಯ ಶೋಕವು ಮರುಕಳಿಸಿತು. ಅವಳು ಚೈತನ್ಯಗುಂದಿ ಅಳುತ್ತ ಹಾಗೆಯೇ ನೆಲದ ಮೇಲೆ ಕುಸಿದಳು. ಅಷ್ಟರಲ್ಲಿ ಭರತಶತ್ರುಘ್ನರು ಅಳುತ್ತ ಓಡಿಹೋಗಿ ಶುದ್ಧಚಿತ್ತಳಾದ ದೊಡ್ಡಮ್ಮನನ್ನು ಅಪ್ಪಿ ಹಿಡಿದುಕೊಂಡರು (೯). ಅನಂತರ ದುಃಖಾರ್ತಳಾದ ಕೌಸಲ್ಯೆಯು ಹೀಗೆಂದಳು (೧೦) : "ಭರತ, ನಿನಗೆ ಬೇಕಾಗಿದ್ದ

ಇದಂ ತೇ ರಾಜ್ಯಕಾಮಸ್ಯ ರಾಜ್ಯಂ ಪ್ರಾಪ್ತ ಮಕಂಟಕಮ್ ।
ಸಂಪ್ರಾಪ್ತಂ ಬತ ಕೈಕೇಯ್ಯಾ ಶೀಘ್ರಂ ಕ್ರೂರೇಣ ಕರ್ಮಣಾ ॥ ೧೧

ಪ್ರಸ್ಥಾಪ್ಯ ಚೀರವಸನಂ ಪುತ್ರಂ ಮೇ ವನವಾಸಿನಮ್ ।
ಕೈಕೇಯೀ ಕಂ ಗುಣಂ ತತ್ರ ಪಶ್ಯತಿ ಕ್ರೂರದರ್ಶಿನೀ ॥ ೧೨

ಕ್ಷಿಪ್ರಂ ಮಾಮಪಿ ಕೈಕೇಯೀ ಪ್ರಸ್ಥಾಪಯಿತುಮರ್ಹತಿ ।
ಹಿರಣ್ಯನಾಭೋ ಯತ್ರಾಸ್ತೇ ಸುತೋ ಮೇ ಸುಮಹಾಯಶಾಃ ॥ ೧೩

ಅಥವಾ ಸ್ವಯಮೇವಾಹಂ ಸುಮಿತ್ರಾನುಚರಾ ಸುಖಮ್ ।
ಅಗ್ನಿಹೋತ್ರಂ ಪುರಸ್ಕೃತ್ಯ ಪ್ರಸ್ಥಾಸ್ಯೇ ಯತ್ರ ರಾಘವಃ ॥ ೧೪

ಕಾಮಂ ವಾ ಸ್ವಯಮೇವಾದ್ಯ ತತ್ರ ಮಾಂ ನೇತುಮರ್ಹಸಿ ।
ಯತ್ರಾಸೌ ಪುರುಷವ್ಯಾಘ್ರಃ ಪುತ್ರೋ ಮೇ ತಪ್ಯತೇ ತಪಃ ॥ ೧೫

ಇದಂ ಹಿ ತವ ವಿಸ್ತೀರ್ಣಂ ಧನಧಾನ್ಯಸಮಾಚಿತಮ್ ।
ಹಸ್ತ್ಯಶ್ವರಥಸಂಪೂರ್ಣಂ ರಾಜ್ಯಂ ನಿರ್ಯಾತಿತಂ ತಯಾ ॥ ೧೬

ರಾಜ್ಯವು ನಿಷ್ಕಂಟಕವಾಗಿ ದೊರಕಿದೆ! ಕೈಕೇಯಿಯ ಕ್ರೂರವಾದ ಕಾರ್ಯತಂತ್ರದಿಂದ ನಿನ್ನ ಬಯಕೆ ಶೀಘ್ರವಾಗಿಯೇ ಕೈಗೂಡಿತು. ಆದರೆ ಅವಳು ಕ್ರೂರದೃಷ್ಟಿಯಿಂದ ನನ್ನ ಮಗನಿಗೆ ನಾರುಬಟ್ಟೆಯುಡಿಸಿ ವನವಾಸಕ್ಕೆ ಕಳಿಸಿದಳಲ್ಲ, ಅದರಿಂದ ಅವಳಿಗೆ ಬಂದ ಲಾಭವೇನು? (೧೧-೧೨). ಚಿನ್ನದಂಥ ಸುಂದರ ನಾಭಿಯುಳ್ಳ ನನ್ನ ಮಗನಿರುವಲ್ಲಿಗೆ, ನನ್ನನ್ನೂ ಸಹ ಅವಳು ಬೇಗನೆ ಕಳುಹಿಸದೆ ಬಿಡುವುದಿಲ್ಲ. ಅಷ್ಟೇಕೆ? ನಾನೇ ಸುಮಿತ್ರೆಯೊಡನೆ ಅಗ್ನಿಹೋತ್ರವನ್ನು* ತೆಗೆದುಕೊಂಡು ರಾಮನಿರುವ ಸ್ಥಳಕ್ಕೆ ಸುಖವಾಗಿ ಹೋಗುವೆನು (೧೩-೧೪). ಅಥವಾ ನನ್ನ ಪುತ್ರನು ತಪಸ್ಸು ಮಾಡುತ್ತಿರುವಲ್ಲಿಗೆ ನೀನಾದರೂ ನನ್ನನ್ನು ಕರೆದುಕೊಂಡು ಹೋಗಿ ಬಿಟ್ಟುಬಿಡು. ಧನಧಾನ್ಯಗಳಿಂದ ಸಮೃದ್ಧವಾಗಿ ಆನೆ ಕುದುರೆ ರಥಗಳಿಂದ ತುಂಬಿರುವ ವಿಶಾಲವಾದ ಈ ರಾಜ್ಯವನ್ನು ಅವಳು ನಿನಗೆ ಕೊಡಿಸಿದ್ದಾಳೆ'' ಎಂದಳು (೧೫-೧೬). ಹೀಗೆ

---

* ಅಗ್ನಿಹೋತ್ರವು ಹಿರಿಯ ಪತ್ನಿಯ ವಶದಲ್ಲಿ ಇರಬೇಕಾದದ್ದು. ಮತ್ತು 'ಕೈಕೇಯಿಯ ತಂತ್ರವು ಭರತನಿಗೆ ಸಮ್ಮತವಾದ್ದರಿಂದ ದಶರಥನ ಸಂಸ್ಕಾರಮಾಡಲು ರಾಜಾಜ್ಞೆಯಂತೆ ಭರತನಿಗೆ ಅಧಿಕಾರವಿಲ್ಲ' ಎಂಬ ಅಭಿಪ್ರಾಯವೂ ಇಲ್ಲಿ ಸೂಚಿತವಾಗಿದೆ.

ಇತ್ಯಾದಿಬಹುಭಿರ್ವಾಕ್ಯೈಃ ಕ್ರೂರೈಃ ಸಂಭರ್ತ್ಸಿತೋಽನಘಃ ।
ವಿವ್ಯಥೇ ಭರತಸ್ತೀವ್ರಂ ವ್ರಣೇ ತುದ್ಯೇವ ಸೂಚಿನಾ ॥ ೧೭

ಪಪಾತ ಚರಣೇ ತಸ್ಯಾಸ್ತದಾ ಸಂಭ್ರಾಂತಚೇತನಃ ।
ವಿಲಪ್ಯ ಬಹುಧಾಽಸಂಜ್ಞೋ ಲಬ್ಧಸಂಜ್ಞಸ್ತತಃ ಸ್ಥಿತಃ ॥ ೧೮

ಏವಂ ವಿಲಪಮಾನಾಂ ತಾಂ ಭರತಃ ಪ್ರಾಂಜಲಿಸ್ತದಾ ।
ಕೌಸಲ್ಯಾಂ ಪ್ರತ್ಯುವಾಚೇದಂ ಶೋಕೈರ್ಬಹುಭಿರಾವೃತಾಮ್ ॥ ೧೯

ಆರ್ಯೇ ಕಸ್ಮಾದಜಾನಂತಂ ಗರ್ಹಸೇ ಮಾಮಕಿಲ್ಬಿಷಮ್ ।
ವಿಪುಲಾಂ ಚ ಮಮ ಪ್ರೀತಿಂ ಸ್ಥಿರಾಂ ಜಾನಾಸಿ ರಾಘವೇ ॥ ೨೦

ಕೃತಾ ಶಾಸ್ತ್ರಾನುಗಾ ಬುದ್ಧಿರ್ಮಾ ಭೂತ್ತಸ್ಯ ಕದಾಚನ ।
ಸತ್ಯಸಂಧಃ ಸತಾಂ ಶ್ರೇಷ್ಠೋ ಯಸ್ಯಾರ್ಯೋಽನುಮತೇ ಗತಃ ॥ ೨೧

ಪ್ರೇಷ್ಯಂ ಪಾಪೀಯಸಾಂ ಯಾತು ಸೂರ್ಯಂ ಚ ಪ್ರತಿ ಮೇಹತು ।
ಹಂತು ಪಾದೇನ ಗಾಂ ಸುಪ್ತಾಂ ಯಸ್ಯಾರ್ಯೋಽನುಮತೇ ಗತಃ ॥ ೨೨

ಕಠೋರವಾದ ವಾಕ್ಯಗಳಿಂದ ಕೌಸಲ್ಯೆಯು ಭರತನನ್ನು ದೂರಿದಳು. ಭರತನ ಮನಸ್ಸಿಗೆ ಬಹಳ ವ್ಯಥೆಯಾಯಿತು. ವ್ರಣವನ್ನು ಸೂಜಿಯಿಂದ ತಿವಿದಂತಾಯಿತು. ಭರತನಿಗೆ ದಿಕ್ಕುತೋರದಂತಾಗಿ ಬುದ್ಧಿ ಗಿರ್‍ರೆಂದಿತು. ಅವನು ಕೌಸಲ್ಯೆಯ ಪಾದಗಳ ಮೇಲೆ ಬಿದ್ದು ಅತ್ತು ಅತ್ತು ಎಚ್ಚರದಪ್ಪಿದನು (೧೭-೧೮). ಅದನ್ನು ಕಂಡು ಕೌಸಲ್ಯೆಯೂ ಗೋಳಾಡಿದಳು. ಕಡೆಗೆ ಭರತನು ಚೇತರಿಸಿಕೊಂಡು ಕೈಜೋಡಿಸಿ, ದುಃಖಾರ್ತಳಾದ ಕೌಸಲ್ಯೆಯನ್ನು ಕುರಿತು ಹೀಗೆ ಹೇಳಿದನು (೧೯). "ಅಮ್ಮ, ಏನನ್ನೂ ತಿಳಿಯದೆ ನಿರಪರಾಧಿಯಾದ ನನ್ನನ್ನು ಏಕೆ ದೂರುತ್ತೀಯೆ? ಅಣ್ಣನಲ್ಲಿ ನನಗೆ ಎಷ್ಟು ದೃಢವಾದ ಪ್ರೀತಿಯಿದೆ ಎಂಬುದು ನಿನಗೆ ಗೊತ್ತಿದೆ. (ಆಣೆಯಿಟ್ಟು ಹೇಳುತ್ತೇನೆ, ಕೇಳು) (೨೦): ಸತ್ಯಸಂಧನೂ ಸಜ್ಜನರಲ್ಲಿ ಶ್ರೇಷ್ಠನೂ ಆದ ಅಣ್ಣನು ಕಾಡಿಗೆ ಹೋದದ್ದು ಯಾವನಿಗೆ ಸಮ್ಮತವೊ, ಅವನಿಗೆ ಗುರೂಪದೇಶದಿಂದ ಬಂದ ಶಾಸ್ತ್ರಾನುಸಾರಿಯಾದ ಜ್ಞಾನವು ನಶಿಸಿಹೋಗಲಿ! (೨೧). ಅಣ್ಣನು ವನವಾಸಕ್ಕೆ ಹೋದುದನ್ನು ಒಪ್ಪುವ ಮನುಷ್ಯನಿಗೆ ಪಾಪಿಗಳ ಸೇವೆಮಾಡುವ ದುರ್ಯೋಗವು ಬರಲಿ! ಸೂರ್ಯನಿಗೆದುರಾಗಿ

ಕಾರಯಿತ್ವಾಮಹತ್ ಕರ್ಮ ಭರ್ತಾ ಭೃತ್ಯಮನರ್ಥಕಮ್ ।
ಅಧರ್ಮೋ ಯೋಽಸ್ಯ ಸೋಽಸ್ಯಾಸ್ತು ಯಸ್ಯಾರ್ಯೋಽನುಮತೇ ಗತಃ

ಪರಿಪಾಲಯಮಾನಸ್ಯ ರಾಜ್ಞೋ ಭೂತಾನಿ ಪುತ್ರವತ್ ।
ತತಸ್ತು ದ್ರುಹ್ಯತಾಂ ಪಾಪಂ ಯಸ್ಯಾಯೋಽನುಮತೇ ಗತಃ ॥ ೨೪

ಬಲಿಷಡ್ಭಾಗಮುದ್ಧೃತ್ಯ ನೃಪಸ್ಯಾರಕ್ಷತಃ ಪ್ರಜಾಃ ।
ಅಧರ್ಮೋ ಯಸ್ತು ಸೋಽಸ್ಯಾಸ್ತು ಯಸ್ಯಾರ್ಯೋಽನುಮತೇ ಗತಃ ॥

ಸಂಶ್ರುತ್ಯ ಚ ತಪಸ್ವಿಭ್ಯಃ ಸತ್ರೇ ವೈ ಯಜ್ಞದಕ್ಷಿಣಾಮ್ ।
ತಾಂ ವಿಪ್ರಲಪತಾಂ ಪಾಪಂ ಯಸ್ಯಾಯೋಽನುಮತೇ ಗತಃ ॥ ೨೬

ಹಸ್ತ್ಯಶ್ವರಥಸಂಬಾಧೇ ಯುದ್ಧೇ ಶಸ್ತ್ರಸಮಾಕುಲೇ ।
ಮಾ ಸ್ಮ ಕಾರ್ಷೀತ್ ಸತಾಂ ಧರ್ಮಂ ಯಸ್ಯಾರ್ಯೋಽನುಮತೇ ಗತಃ ॥

ಮಲಮೂತ್ರ ವಿಸರ್ಜನೆ ಮಾಡಿದ ದೋಷ ಬರಲಿ! ಮಲಗಿದ ಗೋವನ್ನು ಒದ್ದವನ ಗತಿ ಬರಲಿ!* (೨೨). ಶ್ರೀರಾಮನು ಕಾಡಿಗೆ ಹೋಗಲು ನಾನು ಸಮ್ಮತಿಸಿದ್ದರೆ, ಸೇವಕನಿಂದ ಕಷ್ಟದ ಕೆಲಸಗಳನ್ನು ಮಾಡಿಸಿಕೊಂಡು ಅವನಿಗೆ ಹಣವನ್ನು ಕೊಡದಿರುವ ಮನುಷ್ಯನಿಗೆ ಬರುವ ಪಾಪ ನನಗೆ ಬರಲಿ! ಪ್ರಜೆಗಳನ್ನು ಮಕ್ಕಳಂತೆ ಪಾಲಿಸುವ ರಾಜನಿಗೆ ಕೇಡನ್ನೆಣಿಸುವ ರಾಜದ್ರೋಹಿಯ ಪಾಪ ನನಗೆ ಬರಲಿ! (೨೩-೨೪). ಉತ್ಪತ್ತಿಯಲ್ಲಿ ಆರನೆಯ ಒಂದು ಭಾಗವನ್ನು ಕಂದಾಯವಾಗಿ ಸ್ವೀಕರಿಸಿಯೂ ಪ್ರಜೆಗಳನ್ನು ರಕ್ಷಿಸದಿರುವ ಅಯೋಗ್ಯನಿಗೆ ಬರುವ ಅಧರ್ಮ ನನಗೆ ಬರಲಿ ! ಯಜ್ಞದಲ್ಲಿ ಋತ್ವಿಜರಿಗೆ ದಕ್ಷಿಣೆಯನ್ನು ಕೊಡುವೆನೆಂದು ಮಾತುಕೊಟ್ಟು, ಅನಂತರ ಅದನ್ನು ನಿರಾಕರಿಸುವವರಿಗೆ ಬರುವ ದೋಷ ನನಗೆ ಬರಲಿ ! (೨೫-೨೬). ಚತುರಂಗಸೇನೆಯ ಮಧ್ಯದಲ್ಲಿ ಶಸ್ತ್ರವನ್ನು ಹಿಡಿದು ಯುದ್ಧಮಾಡುವಾಗ ಹೆದರಿ ಓಡಿಬರುವ ಹೇಡಿಗೆ ಬರುವ ಪಾಪ ನನಗೆ ಬರಲಿ! ಅಣ್ಣನು ಕಾಡಿಗೆ ಹೋದದ್ದನ್ನು

---

* 'ರಾಮನನ್ನು ಕಾಡಿಗೆ ಕಳಿಸಲು ನಾನು ಒಪ್ಪಿದ ಪಕ್ಷದಲ್ಲಿ ಈ ದೋಷಗಳೆಲ್ಲವೂ ನನಗೆ ಬರಲಿ' ಎಂದು ಭರತನ ಅಭಿಪ್ರಾಯ. ಈ ಬಗೆಯಾದ ಆಣೆಯ ನೆವದಲ್ಲಿ ಧರ್ಮವಿಶೇಷಗಳನ್ನು ವಾಲ್ಮೀಕಿಮುನಿಗಳು ಬೋಧಿಸಿದ್ದಾರೆಂದು ತಿಳಿಯಬೇಕು.

ಉಪದಿಷ್ಟಂ ಸುಸೂಕ್ಷ್ಮಾರ್ಥಂ ಶಾಸ್ತ್ರಂ ಯತ್ನೇನ ಧೀಮತಾ ।
ಸ ನಾಶಯತು ದುಷ್ಟಾತ್ಮಾಯಸ್ಯಾರ್ಯೋಽನುಮತೇ ಗತಃ ॥ ೨೮

ಮಾ ಚ ತಂ ವ್ಯೂಢಬಾಹ್ವಂಸಂ ಚಂದ್ರಾರ್ಕಸಮತೇಜಸಮ್ ।
ದ್ರಾಕ್ಷೀದ್ರಾಜ್ಯಸ್ಥಮಾಸೀನಂ ಯಸ್ಯಾರ್ಯೋಽನುಮತೇ ಗತಃ ॥ ೨೯

ಪಾಯಸಂ ಕೃಸರಂ ಛಾಗಂ ವೃಥಾ ಸೋಽಶ್ನಾತು ನಿರ್ಘೃಣಃ ।
ಗುರೂಂಶ್ಚಾಪ್ಯವಜಾನಾತು ಯಸ್ಯಾರ್ಯೋಽನುಮತೇ ಗತಃ ॥ ೩೦

ಗಾಶ್ಚ ಸ್ಪೃಶತು ಪಾದೇನ ಗುರೂನ್ ಪರಿವದೇತ್ ಸ್ವಯಮ್ ।
ಮಿತ್ರೇ ದ್ರುಹ್ಯೇತ ಸೋಽತ್ಯಂತಂ ಯಸ್ಯಾರ್ಯೋಽನುಮತೇ ಗತಃ ॥

ವಿಶ್ವಾಸಾತ್ ಕಥಿತಂ ಕಿಂಚಿತ್ ಪರಿವಾದಂ ಮಿಥಃ ಕ್ವಚಿತ್ ।
ವಿವೃಣೋತು ಸ ದುಷ್ಟಾತ್ಮಾ ಯಸ್ಯಾರ್ಯೋಽನುಮತೇ ಗತಃ ॥ ೩೨

ಅಕರ್ತಾ ಹ್ಯಕೃತಜ್ಞಶ್ಚ ತ್ಯಕ್ತಾತ್ಮಾ ನಿರಪತ್ರಪಃ ।
ಲೋಕೇ ಭವತು ವಿದ್ವೇಷ್ಯೋ ಯಸ್ಯಾರ್ಯೋಽನುಮತೇ ಗತಃ ॥ ೩೩

ಪುತ್ರೈರ್ದಾರೈಶ್ಚ ಭೃತ್ಯೈಶ್ಚ ಸ್ವಗೃಹೇ ಪರಿವಾರಿತಃ ।
ಸ ಏಕೋ ಮೃಷ್ಟಮಶ್ನಾತು ಯಸ್ಯಾರ್ಯೋಽನುಮತೇ ಗತಃ ॥ ೩೪

ಒಪ್ಪುವ ದುಷ್ಟನಿಗೆ ಗುರೂಪದೇಶದಿಂದ ಲಭಿಸಿದ ಶಾಸ್ತ್ರಾರ್ಥವುಮರೆತುಹೋಗಲಿ! ಆಜಾನುಬಾಹುವೂ ಸೂರ್ಯಚಂದ್ರರಂತೆ ತೇಜಸ್ವಿಯೂ ಆದ ಶ್ರೀರಾಮನು ಸಿಂಹಾಸನದಲ್ಲಿ ಕುಳಿತಿರುವುದನ್ನು ದರ್ಶನಮಾಡುವ ಭಾಗ್ಯವು ಅಂಥವನಿಗೆ ಲಭಿಸದೇ ಹೋಗಲಿ! (೨೭-೨೯). ಪಾಯಸ, ಹುಗ್ಗಿ ಮತ್ತು ಆಡುಗಳನ್ನು ದೇವತೆಗಳಿಗೆ ಅರ್ಪಿಸದೆ ತಿನ್ನುವವನಿಗೂ ಗುರುಗಳಿಗೆ ಅವಮಾನ ಮಾಡತಕ್ಕವನಿಗೂ ಬರುವ ಪಾಪ ಅವನಿಗೆ ಬರಲಿ! ಅಣ್ಣನ ವನವಾಸವನ್ನು ಒಪ್ಪತಕ್ಕವನು ಗೋವುಗಳನ್ನು ಕಾಲಿನಿಂದ ಒದ್ದಂತೆ; ಗುರುಗಳನ್ನು ಬಯ್ದಂತೆ; ಮಿತ್ರರಿಗೆ ದ್ರೋಹವನ್ನು ಮಾಡಿದಂತೆ (೩೦-೩೧). ಅವನು ಆಪ್ತರ ಗುಟ್ಟನ್ನು ರಟ್ಟುಮಾಡಿದ ಪಾಪಿಯಂತೆ; ಪ್ರತ್ಯುಪಕಾರ ಮಾಡದ ಕೃತಘ್ನನಂತೆ; ನಿರ್ಲಜ್ಜವಾದ ಬಹಿಷ್ಕೃತನಂತೆ; ಲೋಕಬಾಹ್ಯನಂತೆ; ಮನೆಯಲ್ಲಿ ಹೆಂಡತಿ ಮಕ್ಕಳು ಸೇವಕರನ್ನು ಬಿಟ್ಟು ತಾನೊಬ್ಬನೇ ಮೃಷ್ಟಾನ್ನವನ್ನು ತಿನ್ನುವ ಅಯೋಗ್ಯನಂತೆ!

ಅಪ್ರಾಪ್ಯ ಸದೃಶಾನ್ ದಾರಾನನಪತ್ಯಃ ಪ್ರಮೀಯತಾಮ್ ।
ಅನವಾಪ್ಯ ಕ್ರಿಯಾಂ ಧರ್ಮ್ಯಾಂ ಯಸ್ಯಾರ್ಯೋಽನುಮತೇ ಗತಃ ॥
ಮಾಽತ್ಮನಃ ಸಂತತಂ ದ್ರಾಕ್ಷೀತ್ ಸ್ವೇಷು ದಾರೇಷು ದುಃಖಿತಃ ।
ಆಯುಃ ಸಮಗ್ರಮಪ್ರಾಪ್ಯ ಯಸ್ಯಾರ್ಯೋಽನುಮತೇ ಗತಃ ॥ ೩೬
ರಾಜಸ್ತ್ರೀಬಾಲವೃದ್ಧಾನಾಂ ವಧೇ ಯತ್ ಪಾಪಮುಚ್ಯತೇ ।
ಭೃತ್ಯತ್ಯಾಗೇ ಚ ಯತ್ ಪಾಪಂ ತತ್ ಪಾಪಂ ಪ್ರತಿಪದ್ಯತಾಮ್ ॥ ೩೭
ಲಾಕ್ಷಯಾ ಮಧುಮಾಂಸೇನ ಲೋಹೇನ ಚ ವಿಷೇಣ ಚ ।
ಸದೈವ ಬಿಭೃಯಾದ್ಭೃತ್ಯಾನ್ ಯಸ್ಯಾರ್ಯೋಽನುಮತೇ ಗತಃ ॥ ೩೮
ಸಂಗ್ರಾಮೇ ಸಮುಪೋಢೇ ತು ಶತ್ರುಪಕ್ಷಭಯಂಕರೇ ।
ಪಲಾಯಮಾನೋ ವಧ್ಯೇತ ಯಸ್ಯಾರ್ಯೋಽನುಮತೇ ಗತಃ ॥ ೩೯
ಕಪಾಲಪಾಣಿಃ ಪೃಥಿವೀಮಟತಾಂ ಚೀರಸಂವೃತಃ ।
ಭಿಕ್ಷಮಾಣೋ ಯಥೋನ್ಮತ್ತೋ ಯಸ್ಯಾರ್ಯೋಽನುಮತೇ ಗತಃ ॥

(೩೨-೩೪). ಅಣ್ಣನು ಕಾಡಿಗೆ ಹೋಗುವುದನ್ನು ಒಪ್ಪುವವನಿಗೆ, ಅನುರೂಪಳಾದ ಹೆಂಡತಿಯು ದೊರಕದೆಹೋಗಲಿ! ಸಂತತಿಯಿಲ್ಲದೆ ಅವನು ಸಾಯಲಿ! ಅವನಿಗೆ ಉತ್ತರಕ್ರಿಯೆ ನಡೆಯದೆ ಹೋಗಲಿ! ಅವನಿಗೆ ಪತ್ನಿಯರಲ್ಲಿ ಸಂತಾನವಿಲ್ಲದೇ ಆಯುಸ್ಸು ಪೂರ್ತಿಯಾಗಿ ಕೊರಗುತ್ತಿರಲಿ! ರಾಜ, ಸ್ತ್ರೀ, ಬಾಲಕ ಮತ್ತು ಮುದುಕರನ್ನು ಕೊಂದರೆ ಯಾವ ಪಾಪ ಬರುವುದೋ ಆ ಪಾಪ ಅವನಿಗೆ ಬರಲಿ! ನಿಷ್ಕಾರಣವಾಗಿ ಸೇವಕರನ್ನು ತ್ಯಜಿಸುವವನಿಗೆ ಬರುವ ಪಾಪ ಅವನಿಗೆ ಬರಲಿ! (೩೫-೩೭). ಅರಗು, ಜೇನು, ಮಾಂಸ, ಕಬ್ಬಿಣ ಮತ್ತು ವಿಷಗಳ* ಮಾರಾಟದಿಂದ ಅವನು ಹೆಂಡತಿ ಮಕ್ಕಳನ್ನು ಸಾಕುವಂತಾಗಲಿ! ಅಣ್ಣನ ವನವಾಸವನ್ನು ಸಮ್ಮತಿಸತಕ್ಕವನು, ಯುದ್ಧದಲ್ಲಿ ಹೆದರಿ ಪಲಾಯನಮಾಡತಕ್ಕವನನ್ನು ಸಂಹರಿಸಿದ ಪಾಪಕ್ಕೆ ಭಾಗಿಯಾಗಲಿ! ಅಂಥವನು ಹರಕುಬಟ್ಟೆಯನ್ನುಟ್ಟು ನರಕಪಾಲವನ್ನು ಹಿಡಿದು ಭಿಕ್ಷೆಬೇಡುತ್ತ ಅಲೆಯುವಂತಾಗಲಿ! (೩೮-೪೦).

---

* ಇವುಗಳ ಮಾರಾಟ ಶಾಸ್ತ್ರನಿಷಿದ್ಧ.

ಮದ್ಯೇ ಪ್ರಸಕ್ತೋ ಭವತು ಸ್ತ್ರೀಷ್ವಕ್ಷೇಷು ಚ ನಿತ್ಯಶಃ ।
ಕಾಮಕ್ರೋಧಾಭಿಭೂತಸ್ತು ಯಸ್ಯಾರ್ಯೋಽನುಮತೇ ಗತಃ ॥ ೪೧

ಮಾ ಸ್ಮ ಧರ್ಮೇ ಮನೋ ಭೂಯಾದಧರ್ಮಂ ಸ ನಿಷೇವತಾಮ್ ।
ಅಪಾತ್ರವರ್ಷೀ ಭವತು ಯಸ್ಯಾರ್ಯೋಽನುಮತೇ ಗತಃ ॥ ೪೨

ಸಂಚಿತಾನ್ಯಸ್ಯ ವಿತ್ತಾನಿ ವಿವಿಧಾನಿ ಸಹಸ್ರಶಃ ।
ದಸ್ಯುಭಿರ್ವಿಪ್ರಲುಪ್ಯಂತಾಂ ಯಸ್ಯಾರ್ಯೋಽನುಮತೇ ಗತಃ ॥ ೪೩

ಉಭೇ ಸಂಧ್ಯೇ ಶಯಾನಸ್ಯ ಯತ್ ಪಾಪಂ ಪರಿಕಲ್ಪ್ಯತೇ ।
ತಚ್ಚ ಪಾಪಂ ಭವೇತ್ತಸ್ಯ ಯಸ್ಯಾರ್ಯೋಽನುಮತೇ ಗತಃ ॥ ೪೪

ಯದಗ್ನಿದಾಯಕೇ ಪಾಪಂ ಯತ್ ಪಾಪಂ ಗುರುತಲ್ಪಗೇ ।
ಮಿತ್ರದ್ರೋಹೇ ಚ ಯತ್ ಪಾಪಂ ತತ್ ಪಾಪಂ ಪ್ರತಿಪದ್ಯತಾಮ್ ॥

ದೇವತಾನಾಂ ಪಿತೄಣಾಂ ಚ ಮಾತಾಪಿತ್ರೋಸ್ತಥೈವ ಚ ।
ಮಾ ಸ್ಮ ಕಾರ್ಷೀತ್ ಸ ಶುಶ್ರೂಷಾಂ ಯಸ್ಯಾರ್ಯೋಽನುಮತೇ ಗತಃ ॥

ಸತಾಂ ಲೋಕಾತ್ ಸತಾಂ ಕೀರ್ತ್ಯಾಃ ಸಜ್ಜುಷ್ಟಾತ್ ಕರ್ಮಣಸ್ತಥಾ ।
ಭ್ರಶ್ಯತು ಕ್ಷಿಪ್ರಮದ್ಯೈವ ಯಸ್ಯಾರ್ಯೋಽನುಮತೇ ಗತಃ ॥ ೪೬

ಶ್ರೀರಾಮನು ದೇಶಭ್ರಷ್ಟನಾಗಲೆಂದು ಹೇಳತಕ್ಕವನು ಹೆಂಡಗುಡುಕ, ಸ್ತ್ರೀಲೋಲ, ಜೂಜುಖೋರ, ಕಾಮಕ್ರೋಧಗಳಿಗೆ ಒಳಗಾದ ಅಯೋಗ್ಯ. ಅಂಥವನು ಧರ್ಮಕಾರ್ಯದಲ್ಲಿ ಮನಸ್ಸಿಲ್ಲದವನು; ಅಧರ್ಮಿ; ಅಪಾತ್ರದಲ್ಲಿ ದಾನಮಾಡತಕ್ಕವನು. ಅವನು ಗಳಿಸಿದ ಹಣವೆಲ್ಲವನ್ನೂ ಕಳ್ಳರು ಕದ್ದುಕೊಂಡು ಹೋಗಲಿ! (೪೧-೪೩). ಸಂಧ್ಯಾಕಾಲದಲ್ಲಿ ಮಲಗಿರತಕ್ಕವನಿಗೆ ಬರುವ ಪಾಪ ಅವನಿಗೆ ಬರಲಿ! ಮನೆಗೆ ಬೆಂಕಿ ಹಚ್ಚತಕ್ಕವನಿಗೆ, ಗುರುಪತ್ನೀಗಾಮಿಗೆ, ಮಿತ್ರದ್ರೋಹಿಗೆ ಲಭಿಸುವ ದುರ್ಗತಿ ಅವನಿಗೆ ಲಭಿಸಲಿ! ದೇವತೆಗಳನ್ನೂ ಪಿತೃದೇವತೆಗಳನ್ನೂ ತಾಯಿತಂದೆಗಳನ್ನೂ ಸೇವೆ ಮಾಡದವನಿಗೆ ಬರುವ ಗತಿ ಅವನಿಗೆ ಬರಲಿ! (೪೪-೪೬). ಅಂಥವನಿಗೆ ಪುಣ್ಯಲೋಕವು ಲಭಿಸದೆ ಹೋಗಲಿ! ಕೆಟ್ಟಹೆಸರು ಬರಲಿ! ಸತ್ಕರ್ಮದಿಂದ ಭ್ರಷ್ಟನಾಗಲಿ! ಅಜಾನುಬಾಹುವೂ ವಿಶಾಲವೃಕ್ಷನೂ ಆದ ಅಣ್ಣನು

ಅಪಾಸ್ಯ ಮಾತೃಶುಶ್ರೂಷಾಮನರ್ಥೇ ಸೋಽವತಿಷ್ಠತಾಮ್ ।
ದೀರ್ಘಬಾಹುರ್ಮಹಾವಕ್ಷಾ ಯಸ್ಯಾರ್ಯೋಽನುಮತೇ ಗತಃ ॥ ೪೮

ಬಹುಪುತ್ರೋ ದರಿದ್ರಶ್ಚ ಜ್ವರರೋಗಸಮನ್ವಿತಃ ।
ಸಮಾಯಾತ್ ಸತತಂ ಕ್ಲೇಶೀ ಯಸ್ಯಾರ್ಯೋಽನುಮತೇ ಗತಃ ॥ ೪೯

ಆಶಾಮಾಶಂಸಮಾನಾನಾಂ ದೀನಾನಾಮೂರ್ಧ್ವಚಕ್ಷುಷಾಮ್ ।
ಅರ್ಥಿನಾಂ ವಿತಥಾಂ ಕುರ್ಯಾದ್ಯಸ್ಯಾರ್ಯೋಽನುಮತೇ ಗತಃ ॥ ೫೦

ಮಾಯಯಾ ರಮತಾಂ ನಿತ್ಯಂ ಪರುಷಃ ಪಿಶುನೋಽಶುಚಿಃ ।
ರಾಜ್ಞೋ ಭೀತಸ್ತ್ವಧರ್ಮಾತ್ಮಾ ಯಸ್ಯಾರ್ಯೋಽನುಮತೇ ಗತಃ ॥ ೫೧

ಋತುಸ್ನಾತಾಂ ಸತೀಂ ಭಾರ್ಯಾಮೃತುಕಾಲಾನುರೋಧಿನೀಮ್ ।
ಅತಿವರ್ತೇತ ದುಷ್ಟಾತ್ಮಾ ಯಸ್ಯಾರ್ಯೋಽನುಮತೇ ಗತಃ ॥ ೫೨

ಧರ್ಮದಾರಾನ್ ಪರಿತ್ಯಜ್ಯ ಪರದಾರಾನ್ನಿಷೇವತಾಮ್ ।
ತ್ಯಕ್ತಧರ್ಮರತಿರ್ಮೂಢೋ ಯಸ್ಯಾರ್ಯೋಽನುಮತೇ ಗತಃ ॥ ೫೩

ವಿಪ್ರಲುಪ್ತಪ್ರಜಾತಸ್ಯ ದುಷ್ಕೃತಂ ಬ್ರಾಹ್ಮಣಸ್ಯ ಯತ್ ।
ತದೇತತ್ ಪ್ರತಿಪದ್ಯೇತ ಯಸ್ಯಾರ್ಯೋಽನುಮತೇ ಗತಃ ॥ ೫೪

ಹೊರಟುಹೋಗಲೆಂದು ಬಯಸಿದವನಿಗೆ ಮಾತೃಸೇವೆಯ ಫಲವು ಲಭಿಸದೆ ಅನರ್ಥದಲ್ಲಿ ಸಿಕ್ಕಿಕೊಳ್ಳಲಿ! ಅವನು ದರಿದ್ರನಾಗಿ ರೋಗಿಯಾಗಿ ಬಹಳ ಮಕ್ಕಳನ್ನು ಪಡೆದು ಸಂಸಾರದ ಕಷ್ಟದಲ್ಲಿ ಮುಳುಗಿ ಹೋಗಲಿ! (೪೭-೪೯). ಮೇಲಕ್ಕೆ ಕಣ್ಣೆತ್ತಿ ದೈನ್ಯದಿಂದ ಬೇಡತಕ್ಕವರ ಆಸೆಗೆ ಕಲ್ಲು ಹಾಕಿದವನ ಗತಿ ಅವನಿಗೆ ಬರಲಿ! ಅಂಥವನು ಸದಾ ಮೋಸಗಾರ, ಕ್ರೂರ, ಚಾಡಿಖೋರ, ಕೊಳಕ. ಅಂಥ ಪಾಪಿಯು ರಾಜನಿಗೆ ಹೆದರುತ್ತ ತಲೆಮರೆಸಿಕೊಂಡು ಅಲೆಯುವಂತಾಗಲಿ! ಋತುಸ್ನಾತಳಾದ ಪತ್ನಿಯನ್ನು ಉಪೇಕ್ಷಿಸತಕ್ಕವನಿಗೆ ಬರುವ ದೋಷ ಅವನಿಗೆ ಬರಲಿ! (೫೦-೫೨). ಶ್ರೀರಾಮನು ವನಕ್ಕೆ ಹೋಗಲು ಸಮ್ಮತಿಸಿದವನು ಧರ್ಮಪತ್ನಿಯನ್ನು ಬಿಟ್ಟು ಪರಸ್ತ್ರೀಯಲ್ಲಿ ಆಸಕ್ತನಾದವನ ಪಾಪಕ್ಕೆ ಹೋಗಲಿ! ಅವನು ಧರ್ಮದಲ್ಲಿ ಅಭಿರುಚಿಯಿಲ್ಲದ ಮೂಢಾತ್ಮನೇ ಸರಿ. ಸಾಯುವ ಮಕ್ಕಳನ್ನು ಪಡೆಯುವ ಬ್ರಾಹ್ಮಣನು ಯಾವ ಪಾಪವನ್ನು ಮಾಡಿರುವನೊ, ಆ ಪಾಪ ಅವನಿಗೆ ಬರಲಿ! ಕುಡಿಯುವ ನೀರನ್ನು ಕೆಡಿಸುವವನಿಗೂ

ಪಾನೀಯದೂಷಕೇ ಪಾಪಂ ತಥೈವ ವಿಷದಾಯಕೇ ।
ಯತ್ತದೇಕಃ ಸ ಲಭತಾಂ ಯಸ್ಯಾರ್ಯೋಽನುಮತೇ ಗತಃ ॥ ೫೫

ಬ್ರಾಹ್ಮಣಾಯೋದ್ಯತಾಂ ಪೂಜಾಂ ವಿಹಂತು ಕಲುಷೇಂದ್ರಿಯಃ ।
ಬಾಲವತ್ಸಾಂ ಚ ಗಾಂ ದೋಗ್ಧು ಯಸ್ಯಾರ್ಯೋಽನುಮತೇ ಗತಃ ॥ ೫೬

ತೃಷಾರ್ತಂ ಸತಿ ಪಾನೀಯೇ ವಿಪ್ರಲಂಭೇನ ಯೋಜಯನ್ ।
ಯತ್ ಪಾಪಂ ಲಭತೇ ತತ್ ಸ್ಯಾತ್ ಯಸ್ಯಾರ್ಯೋಽನುಮತೇ ಗತಃ ॥

ಭಕ್ತ್ಯಾ ವಿವದಮಾನೇಷು ಮಾರ್ಗಮಾಶ್ರಿತ್ಯ ಪಶ್ಯತಃ ।
ತಸ್ಯ ಪಾಪೇನ ಯುಜ್ಯೇತ ಯಸ್ಯಾರ್ಯೋಽನುಮತೇ ಗತಃ ॥ ೫೮

ವಿಹೀನಾಂ ಪತಿಪುತ್ರಾಭ್ಯಾಂ ಕೌಸಲ್ಯಾಂ ಪಾರ್ಥಿವಾತ್ಮಜಃ ।
ಏವಮಾಶ್ವಾಸಯನ್ನೇವ ದುಃಖಾರ್ತೋ ನಿಪಪಾತ ಹ ॥ ೫೯

ತಥಾ ತು ಶಪಥೈಃ ಕಷ್ಟೈಃ ಶಪಮಾನಮಚೇತಸಮ್ ।
ಭರತಂ ಶೋಕಸಂತಪ್ತಂ ಕೌಸಲ್ಯಾ ವಾಕ್ಯಮಬ್ರವೀತ್ ॥ ೬೦

ವಿಷವನ್ನು ಹಾಕತಕ್ಕವನಿಗೂ ಬರುವ ಪಾಪ ಆತನಿಗೆ ಬರಲಿ! (೫೩-೫೫). ಅಣ್ಣನು ಕಾಡಿಗೆ ಹೋಗಲು ನಾನು ಒಪ್ಪಿದರೆ, ಬ್ರಾಹ್ಮಣನಿಗೆ ಸಲ್ಲುವ ಪೂಜೆಯನ್ನು ನಿಲ್ಲಿಸಿದವನ ಪಾಪಕ್ಕೆ ನಾನು ಹೋಗುತ್ತೇನೆ. ಎಳೆಗರುವಿಗೆ ಹಾಲನ್ನುಳಿಸದೆ ಹಸುವನ್ನು ಕರೆಯುವವನ ಪಾಪಕ್ಕೆ ಹೋಗುತ್ತೇನೆ. ನೀರು ಮನೆಯಲ್ಲಿದ್ದರೂ ಬಾಯಾರಿದವನಿಗೆ ಕೊಡದೆ ಮೋಸಮಾಡುವವನ ಗತಿಗೆ ಹೋಗುತ್ತೇನೆ (೫೬-೫೭). ಅಣ್ಣನು ಕಾಡಿಗೆ ಹೋಗಲು ನಾನು ಒಪ್ಪಿದ್ದರೆ, ಜದ್ದಿನಿಂದ ಜನರು ಜಗಳವಾಡುತ್ತಿರುವಾಗ ಪರಿಹಾರ ಸಾಮರ್ಥ್ಯವಿದ್ದರೂ ಸುಮ್ಮನಿರುವ ಕಲಹಪ್ರಿಯನಿಗೆ ಬರುವ ಪಾಪವು ನನಗೆ ಬರಲಿ!" ಎಂಬುದಾಗಿ ಆ ರಾಜಪುತ್ರನು ಆಣೆಯಿಟ್ಟು ಪತಿಪುತ್ರಹೀನೆಯಾದ ಕೌಸಲ್ಯಾದೇವಿಯನ್ನು ಸಂತೈಸುತ್ತ, ಉಮ್ಮಳಿಸುವ ದುಃಖವನ್ನು ತಡೆಯಲಾರದೆ ನೆಲದ ಮೇಲೆ ಉರುಳಿದನು (೫೮-೫೯). ಹೀಗೆ ಕಠೋರವಾದ ಆಣೆಗಳನ್ನು ಹಾಕುತ್ತ ಶೋಕಸಂತಪ್ತನಾಗಿ ಚೈತನ್ಯ ಗುಂದಿದ ಭರತನನ್ನು ಕಂಡು ಕೌಸಲ್ಯೆಯು "ಮಗನೆ, ಹೀಗೆ ನೀನು ಆಣೆ ಹಾಕುತ್ತಿದ್ದರೆ ನನ್ನ ಜೀವಕ್ಕೆ ಸಂಕಟವಾಗುತ್ತದೆ. ನನ್ನ ದುಃಖ

ಮಮ ದುಃಖಮಿದಂ ಪುತ್ರ ಭೂಯಃ ಸಮುಪಜಾಯತೇ ।
ಶಪಥೈಃ ಶಪಮಾನೋ ಹಿ ಪ್ರಾಣಾನುಪರಣತ್ಸಿ ಮೇ ॥ ೬೧

ದಿಷ್ಟ್ಯಾ ನ ಚಲಿತೋ ಧರ್ಮಾದಾತ್ಮಾ ತೇ ಸಹಲಕ್ಷಣಃ ।
ವತ್ಸ ಸತ್ಯಪ್ರತಿಜ್ಞೋ ಹಿ ಸತಾಂ ಲೋಕಾನವಾಪ್ಸ್ಯಸಿ ॥ ೬೨

ಇತ್ಯುಕ್ತ್ವಾ ಚಾಂಕಮಾನೀಯ ಭರತಂ ಭ್ರಾತೃವತ್ಸಲಮ್ ।
ಪರಿಷ್ವಜ್ಯ ಮಹಾಬಾಹುಂ ರುರೋದ ಭೃಶದುಃಖಿತಾ ॥ ೬೩

ಏವಂ ವಿಲಪಮಾನಸ್ಯ ದುಃಖಾರ್ತಸ್ಯ ಮಹಾತ್ಮನಃ ।
ಮೋಹಾಚ್ಚ ಶೋಕಸಂರೋಧಾದ್ಬಭೂವ ಲುಲಿತಂ ಮನಃ ॥ ೬೪

ಲಾಲಪ್ಯಮಾನಸ್ಯ ವಿಚೇತನಸ್ಯ
ಪ್ರನಷ್ಟಬುದ್ಧೇಃ ಪತಿತಸ್ಯ ಭೂಮೌ ।
ಮುಹುರ್ಮುಹುರ್ನಿಃಶ್ವಸತಶ್ಚ ದೀರ್ಘಂ
ಸಾ ತಸ್ಯ ಶೋಕೇನ ಜಗಾಮ ರಾತ್ರಿಃ ॥ ೬೫

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಪಂಚಸಪ್ತತಿತಮಃ ಸರ್ಗಃ

ಹೆಚ್ಚುತ್ತದೆ. ಮಗು, ನೀನು ಧರ್ಮವನ್ನು ಬಿಟ್ಟುಹೋಗಲಿಲ್ಲ, ನಿನ್ನ ಆತ್ಮ ಶುದ್ಧವಾದದ್ದು ಇದು ನಮ್ಮ ಭಾಗ್ಯ. ನೀನು ಸತ್ಯಸಂಧನಾಗಿ ಸದ್ಗತಿಯನ್ನು ಪಡೆ" ಎಂದಳು (೬೦-೬೨). ಹೀಗೆ ಹೇಳುತ್ತ ಕೌಸಲ್ಯೆಯು ಭ್ರಾತೃವತ್ಸಲನಾದ ಭರತನನ್ನು ತನ್ನ ತೊಡೆಯ ಮೇಲೆ ಸೆಳೆದು ಅಪ್ಪಿಕೊಂಡು ಹೋ ಎಂದು ಅತ್ತಳು. ಮಹಾತ್ಮನಾದ ಭರತನು ಶೋಕಾರ್ತನಾಗಿ ಹಲುಬಿದನು. ಮುಂದೆ ಏನು ಮಾಡಬೇಕೆಂದು ತೋರಲಿಲ್ಲ, ಅವನ ಮನಸ್ಸು ಹಿಂಜಿ ಹಿಪ್ಪೆಯಾಯಿತು (೬೩-೬೪). ಪ್ರಜ್ಞೆ ಕುಂಠಿತವಾಯಿತು. ಬುದ್ಧಿ ಮಂಕಾಯಿತು. ಭರತನು ನೆಲದ ಮೇಲೆ ಬಿದ್ದುಕೊಂಡು ಪದೇ ಪದೇ ನಿಟ್ಟುಸಿರು ಬಿಡುತ್ತಿದ್ದನು. ಹೀಗೆ ಶೋಕಿಸುತ್ತಲೇ ರಾತ್ರಿ ಕಳೆಯಿತು (೬೫).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಎಪ್ಪತ್ತೈದನೆಯ ಸರ್ಗ

ಷಟ್‌ಸಪ್ತತಿತಮಃ ಸರ್ಗಃ

ದಶರಥೌರ್ಧ್ವದೈಹಿಕಮ್

ತಮೇವಂ ಶೋಕಸಂತಪ್ತಂ ಭರತಂ ಕೈಕಯೀಸುತಮ್ ।
ಉವಾಚ ವದತಾಂ ಶ್ರೇಷ್ಠೋ ವಸಿಷ್ಠಃ ಶ್ರೇಷ್ಠವಾಗೃಷಿಃ ॥ ೧

ಅಲಂ ಶೋಕೇನ ಭದ್ರಂ ತೇ ರಾಜಪುತ್ರ ಮಹಾಯಶಃ ।
ಪ್ರಾಪ್ತಕಾಲಂ ನರಪತೇಃ ಕುರು ಸಂಯಾನಮುತ್ತಮಮ್ ॥ ೨

ವಸಿಷ್ಠಸ್ಯ ವಚಃ ಶ್ರುತ್ವಾ ಭರತೋ ಧಾರಣಾಂ ಗತಃ ।
ಪ್ರೇತಕಾರ್ಯಾಣಿ ಸರ್ವಾಣಿ ಕಾರಯಾಮಾಸ ಧರ್ಮವಿತ್ ॥ ೩

ಉದ್ಧೃತಂ ತೈಲಸಂಕ್ಲೇದಾತ್ ಸ ತು ಭೂಮೌ ನಿವೇಶಿತಮ್ ।
ಆಪೀತವರ್ಣವದನಂ ಪ್ರಸುಪ್ತಮಿವ ಭೂಪತಿಮ್ ॥ ೪

ಸಂವೇಶ್ಯ ಶಯನೇ ಚಾಗ್ರ್ಯೇ ನಾನಾರತ್ನಪರಿಷ್ಕೃತೇ ।
ತತೋ ದಶರಥಂ ಪುತ್ರೋ ವಿಲಲಾಪ ಸದುಃಖಿತಃ ॥ ೫

ಸರ್ಗ ೭೬

ಭರತನು ದಶರಥನ ಉತ್ತರಕ್ರಿಯೆಯನ್ನು ಮಾಡುವುದು.

ಈ ಪ್ರಕಾರ ದುಃಖದಿಂದ ಬೆಂದುಹೋಗುತ್ತಿದ್ದ ಭರತನ ಬಳಿಗೆ ವಸಿಷ್ಠ ಮುನಿಗಳು ಬಂದರು. ವಾಗ್ಮಿಗಳಾದ ಆ ಮಹರ್ಷಿಗಳು ''ರಾಜಪುತ್ರ, ಶೋಕಿಸಬೇಡ. ನಿನಗೆ ಶುಭವಾಗಲಿ. ಈಗ ಮೊದಲು ಮಾಡಬೇಕಾದದ್ದು ಮಹಾರಾಜನ ಉತ್ತರಕ್ರಿಯೆ. ಅದನ್ನು ನೆರವೇರಿಸು'' ಎಂದರು (೧-೨). ಆಗ ಭರತನು ಮನಸ್ಸಿನಲ್ಲಿ ಧೈರ್ಯವನ್ನು ತಂದುಕೊಂಡು ಮುಂದಿನ ಶವಸಂಸ್ಕಾರಕ್ಕೆ ತಕ್ಕ ಏರ್ಪಾಡನ್ನು ಮಾಡಿಸಿದನು. ಎಣ್ಣೆಯ ಕೊಪ್ಪರಿಗೆಯಿಂದ ದಶರಥನ ದೇಹವನ್ನು ತೆಗೆದು ನೆಲದ ಮೇಲೆ ಮಲಗಿಸಲಾಯಿತು. ಆತನ ಮುಖವು ಹಳದಿಯ ಬಣ್ಣಕ್ಕೆ ತಿರುಗಿತ್ತು; ನಿದ್ರಿಸುವಂತೆ ಕಾಣುತ್ತಿತ್ತು (೩-೪). ಅನಂತರ ನಾನಾ ರತ್ನಗಳಿಂದ ಭೂಷಿತವಾದ ಉತ್ತಮ ಶಯ್ಯೆಯಲ್ಲಿ ದಶರಥನನ್ನು ಮಲಗಿಸಿ, ಭರತನು ದುಃಖವನ್ನು

ಕಿಂ ತೇ ವ್ಯವಸಿತಂ ರಾಜನ್ ಪ್ರೋಷಿತೇ ಮಯ್ಯನಾಗತೇ ।
ವಿವಾಸ್ಯ ರಾಮಂ ಧರ್ಮಜ್ಞಂ ಲಕ್ಷ್ಮಣಂ ಚ ಮಹಾಬಲಮ್ ॥ ೬

ಕ್ವ ಯಾಸ್ಯಸಿ ಮಹಾರಾಜ ಹಿತ್ವೇಮಂ ದುಃಖಿತಂ ಜನಮ್ ।
ಹೀನಂ ಪುರುಷಸಿಂಹೇನ ರಾಮೇಣಾಕ್ಲಿಷ್ಟಕರ್ಮಣಾ ॥ ೭

ಯೋಗಕ್ಷೇಮಂ ತು ತೇ ರಾಜನ್ ಕೋಽಸ್ಮಿನ್ ಕಲ್ಪಯಿತಾ ಪುರೇ ।
ತ್ವಯಿ ಪ್ರಯಾತೇ ಸ್ವಸ್ತಾತ ರಾಮೇ ಚ ವನಮಾಶ್ರಿತೇ ॥ ೮

ವಿಧವಾ ಪೃಥಿವೀ ರಾಜಂಸ್ತ್ವಯಾ ಹೀನಾ ನ ರಾಜತೇ ।
ಹೀನಚಂದ್ರೇವ ರಜನೀ ನಗರೀ ಪ್ರತಿಭಾತಿ ಮಾಮ್ ॥ ೯

ಏವಂ ವಿಲಪಮಾನಂ ತಂ ಭರತಂ ದೀನಮಾನಸಮ್ ।
ಅಬ್ರವೀದ್ವಚನಂ ಭೂಯೋ ವಸಿಷ್ಠಸ್ತು ಮಹಾಮುನಿಃ ॥ ೧೦

ಪ್ರೇತಕಾರ್ಯಾಣಿ ಯಾನ್ಯಸ್ಯ ಕರ್ತವ್ಯಾನಿ ವಿಶಾಂಪತೇಃ ।
ತಾನ್ಯವ್ಯಗ್ರಂ ಮಹಾಬಾಹೋ ಕ್ರಿಯಂತಾಮವಿಚಾರಿತಮ್ ॥ ೧೧

ತಥೇತಿ ಭರತೋ ವಾಕ್ಯಂ ವಸಿಷ್ಠಸ್ಯಾಭಿಪೂಜ್ಯ ತತ್ ।
ಋತ್ವಿಕ್ಪುರೋಹಿತಾಚಾರ್ಯಾಂಸ್ತ್ವರಯಾಮಾಸ ಸರ್ವಶಃ ॥ ೧೨

ತಡೆಯಲಾರದೆ ಗೋಳಾಡಿದನು (೫). "ಮಹಾರಾಜ, ನಾನು ದೇಶಾಂತರಕ್ಕೆ ಹೋದಾಗ, ಬರುವುದರೊಳಗೆ ಏನು ಮಾಡಿಬಿಟ್ಟೆ! ಮಹಾವೀರರಾದ ರಾಮಲಕ್ಷ್ಮಣರನ್ನು ಕಾಡಿಗೆ ಕಳಿಸಿ, ಶೋಕಸಂತಪ್ತನಾದ ನನ್ನನ್ನು ಕೈಬಿಟ್ಟು ಎಲ್ಲಿಗೆ ಹೊರಟಿದ್ದೀಯೆ? ಪುರುಷಸಿಂಹನೂ ಧರ್ಮನಿಷ್ಠನೂ ಆದ ಶ್ರೀರಾಮನೂ ನನ್ನನ್ನು ಬಿಟ್ಟುಹೋದನು (೬-೭). ಅಪ್ಪ! ಶ್ರೀರಾಮನೂ ವನಕ್ಕೆ ಹೋಗಿ ನೀನೂ ಸ್ವರ್ಗವನ್ನು ಸೇರಿಕೊಂಡರೆ, ಈ ನಗರದ ಯೋಗಕ್ಷೇಮಗಳನ್ನು ನೋಡಿಕೊಳ್ಳುವವರಾರು? ನೀನಿಲ್ಲದೆ ಈ ಪೃಥ್ವಿಯು ವಿಧವೆಯಾದಳು. ಮಹಾರಾಜ, ಈ ನಗರವು ಚಂದ್ರನಿಲ್ಲದ ರಾತ್ರಿಯಂತೆ ನನಗೆ ತೋರುತ್ತಿದೆ" ಎಂದು ಹಲುಬಿದನು (೮-೯). ಹೀಗೆ ದೈನ್ಯದಿಂದ ಗೋಳಾಡುತ್ತಿದ್ದ ಭರತನನ್ನು ನೋಡಿ ವಸಿಷ್ಠಮಹರ್ಷಿಗಳು "ಹೇ ಮಹಾಬಾಹು - ಭರತ, ಈ ಮಹಾರಾಜನಿಗೆ ಮಾಡಬೇಕಾದ ಪ್ರೇತಕಾರ್ಯಗಳನ್ನು ನಿಶ್ಚಲಮನಸ್ಸಿನಿಂದ ಬೇಗನೆ ಮಾಡಿ ಮುಗಿಸು" ಎಂದರು (೧೦-೧೧). ಭರತನು ಅವರ ಮಾತನ್ನು ಮನ್ನಿಸಿ

ಯೇ ತ್ವಗ್ನಯೋ ನರೇಂದ್ರಸ್ಯ ಅಗ್ನ್ಯಗಾರಾದ್ಬಹಿಷ್ಕೃತಾಃ ।
ಋತ್ವಿಗ್ಭಿರ್ಯಾಜಕೈಶ್ಚೈವ ಅಹ್ರಿಯಂತ ಯಥಾವಿಧಿ ॥ ೧೩
ಶಿಬಿಕಾಯಾಮಾಥಾರೋಪ್ಯ ರಾಜಾನಂ ಗತಚೇತಸಮ್ ।
ಬಾಷ್ಪಕಂಠಾ ವಿಮನಸಸ್ತಮೂಹುಃ ಪರಿಚಾರಕಾಃ ॥ ೧೪
ಹಿರಣ್ಯಂ ಚ ಸುವರ್ಣಂ ಚ ವಾಸಾಂಸಿ ವಿವಿಧಾನಿ ಚ ।
ಪ್ರಕಿರಂತೋ ಜನಾ ಮಾರ್ಗೇ ನೃಪತೇರಗ್ರತೋ ಯಯುಃ ॥ ೧೫
ಚಂದನಾಗರುನಿರ್ಯಾಸಾನ್ ಸರಲಂ ಪದ್ಮಕಂ ತಥಾ ।
ದೇವದಾರೂಣಿ ಚಾಹೃತ್ಯ ಚಿತಾಂ ಚಕ್ರುಸ್ತಥಾಪರೇ ॥ ೧೬
ಗಂಧಾನುಚ್ಚಾವಚಾಂಶ್ಚಾನ್ಯಾಂಸ್ತತ್ರ ದತ್ತ್ವಾಥ ಭೂಮಿಪಮ್ ।
ತತಃ ಸಂವೇಶಯಾಮಾಸುಶ್ಚಿತಾಮಧ್ಯೇ ತಮೃತ್ವಿಜಃ ॥ ೧೭

ಕೂಡಲೆ ಋತ್ವಿಜರನ್ನೂ ಪುರೋಹಿತರನ್ನೂ ಆಚಾರ್ಯರನ್ನೂ* ಮುಂದಿನ ಕಾರ್ಯಕ್ಕಾಗಿ ತ್ವರೆಪಡಿಸಿದನು. ಆಗ ಋತ್ವಿಜರೂ ಯಾಜಕರೂ ಸೇರಿ ದಶರಥನ ಅಗ್ನಿಶಾಲೆಯಿಂದ ವಿಧಿಪೂರ್ವಕವಾಗಿ ಗಾರ್ಹಪತ್ಯವೇ ಮೊದಲಾದ ಅಗ್ನಿಗಳನ್ನು ಹೊರಗೆ ತಂದರು (೧೨-೧೩). ವಿಷಣ್ಣರಾದ ಪರಿಚಾರಕರು ರಾಜನ ಮೃತದೇಹವನ್ನು ಪಲ್ಲಕ್ಕಿಯಲ್ಲಿಟ್ಟು ಕಣ್ಣೀರುಬಿಡುತ್ತ ಹೊತ್ತುಕೊಂಡು ಹೊರಟರು. ಜನರು ಬೆಳ್ಳಿ ಮತ್ತು ಚಿನ್ನದ ನಾಣ್ಯಗಳನ್ನೂ ವಿವಿಧವಸ್ತ್ರಗಳನ್ನೂ ದಾರಿಯಲ್ಲಿ ಎರಚುತ್ತ ಹೋಗುತ್ತಿದ್ದರು (೧೪-೧೫). ಇನ್ನು ಕೆಲವರು ಶ್ರೀಗಂಧ, ಅಗರು, ಗುಗ್ಗುಳ, ಸರಲ, ಪದ್ಮಕ, ದೇವದಾರು- ಮುಂತಾದ ಕಟ್ಟಿಗೆಗಳಿಂದ ಚಿತೆಯನ್ನು ನಿರ್ಮಿಸಿದರು. ಇನ್ನೂ ಅನೇಕ ವಿಧದ ಗಂಧದ್ರವ್ಯಗಳನ್ನು ಚಿತೆಯಲ್ಲಿ ಹಾಕಿ, ಋತ್ವಿಜರು ರಾಜನ ದೇಹವನ್ನು ಚಿತೆಯ ಮಧ್ಯದಲ್ಲಿ ಮಲಗಿಸಿದರು (೧೬-೧೭).

---

* ಯಜ್ಞಕಾರ್ಯಗಳನ್ನು ನಡೆಸತಕ್ಕವರು ಋತ್ವಿಜರು. ಶಾಂತಿಕ ಪೌಷ್ಟಿಕಾದಿ ಕಾರ್ಯಗಳನ್ನು ಮಾಡುತ್ತ ಶಿಷ್ಯವರ್ಗಕ್ಕೆ ಹಿತವನ್ನು ಬಯಸತಕ್ಕವರು ಪುರೋಹಿತರು. ಉಪನಯನಮಾಡಿ ವೇದಾಧ್ಯಯನವನ್ನು ಮಾಡಿಸತಕ್ಕವರು ಆಚಾರ್ಯರು.

ತಥಾ ಹುತಾಶನಂ ದತ್ತ್ವಾ ಜೇಪುಸ್ತಸ್ಯ ತದೃತ್ವಿಜಃ ।
ಜಗುಶ್ಚ ತೇ ಯಥಾಶಾಸ್ತ್ರಂ ತತ್ರ ಸಾಮಾನಿ ಸಾಮಗಾಃ ॥ ೧೮

ಶಿಬಿಕಾಭಿಶ್ಚ ಯಾನೈಶ್ಚ ಯಥಾರ್ಹಂ ತಸ್ಯ ಯೋಷಿತಃ ।
ನಗರಾನ್ನಿರ್ಯಯುಸ್ತತ್ರ ವೃದ್ಧೈಃ ಪರಿವೃತಾಸ್ತದಾ ॥ ೧೯

ಪ್ರಸವ್ಯಂ ಚಾಪಿ ತಂ ಚಕ್ರುಃ ಋತ್ವಿಜೋಽಗ್ನಿಚಿತಂ ನೃಪಮ್ ।
ಸ್ತ್ರಿಯಶ್ಚ ಶೋಕಸಂತಪ್ತಾಃ ಕೌಸಲ್ಯಾಪ್ರಮುಖಾಸ್ತದಾ ॥ ೨೦

ಕ್ರೌಂಚೀನಾಮಿವ ನಾರೀಣಾಂ ನಿನಾದಸ್ತತ್ರ ಶುಶ್ರುವೇ ।
ಆರ್ತಾನಾಂ ಕರುಣಂ ಕಾಲೇ ಕ್ರೋಶಂತೀನಾಂ ಸಹಸ್ರಶಃ ॥ ೨೧

ತತೋ ರುದಂತ್ಯೋ ವಿವಶಾ ವಿಲಪ್ಯ ಚ ಪುನಃ ಪುನಃ ।
ಯಾನೇಭ್ಯಃ ಸರಯೂತೀರಮವತೇರುರ್ವರಾಂಗನಾಃ ॥ ೨೨

ಕೃತ್ವೋದಕಂ ತೇ ಭರತೇನ ಸಾರ್ಧಂ
ನೃಪಾಂಗನಾ ಮಂತ್ರಿಪುರೋಹಿತಾಶ್ಚ ।

ಅನಂತರ ಭರತನ ಕೈಯಿಂದ ಶಾಸ್ತ್ರೋಕ್ತಪ್ರಕಾರವಾಗಿ ಚಿತೆಗೆ ಅಗ್ನಿಯನ್ನು ಹತ್ತಿಸಿ ಋತ್ವಿಜರು ಪಿತೃಮೇಧಮಂತ್ರಗಳನ್ನು ಪಠಿಸಿದರು. ಸಾಮಗರು ಸಾಮವೇದವನ್ನು ಗಾನಮಾಡಿದರು. ಅಂತಃಪುರ ಸ್ತ್ರೀಯರು ತಮಗೆ ಅನುಕೂಲವಾದ ಪಲ್ಲಕ್ಕಿಗಳನ್ನೂ ಇತರ ವಾಹನಗಳನ್ನೂ ಏರಿ ವೃದ್ಧರನ್ನು ಜೊತೆಯಲ್ಲಿ ಕರೆದುಕೊಂಡು ಅಲ್ಲಿಗೆ ಬಂದಿದ್ದರು (೧೮-೧೯). ಅಶ್ವಮೇಧಾದಿ ಯಾಗಗಳಲ್ಲಿ ಅಗ್ನಿಚಯನವನ್ನು ಮಾಡಿದ್ದ ದಶರಥಮಹಾರಾಜನು ಚಿತೆಯಲ್ಲಿ ಮಲಗಿದ್ದನು. ಋತ್ವಿಜರೂ (ಭರತಶತ್ರುಘ್ನರೂ) ಕೌಸಲ್ಯಾದಿ ಸ್ತ್ರೀಯರೂ ಶೋಕಸಂತಪ್ತರಾಗಿ ರಾಜನನ್ನು ಅಪಸವ್ಯವಾಗಿ ಸುತ್ತಿಬಂದರು (೨೦). ಆ ಸಮಯದಲ್ಲಿ ಸಾವಿರಾರು ಮಂದಿ ಹೆಂಗಸರು ಕರುಳು ಕೊರೆಯುವಂತೆ ಅಳುತ್ತಿದ್ದರು. ಅವರ ರೋದನ ಧ್ವನಿಯು ಕ್ರೌಂಚಪಕ್ಷಿಗಳ ಕೂಗಿನಂತೆ ಕೇಳಿಸುತ್ತಿತ್ತು. ಹೀಗೆ ಅಂತಃಪುರ ಸ್ತ್ರೀಯರು ಮೈಮೇಲಿನ ಪರಿವೆಯಿಲ್ಲದೆ ಅತ್ತು ಅತ್ತು ಕಡೆಗೆ ಸರಯೂ ನದಿಯ ತೀರಕ್ಕೆ ವಾಹನಗಳಿಂದ ಬಂದಿಳಿದರು (೨೧-೨೨). ಅಲ್ಲಿ ಭರತನೂ ರಾಜಪತ್ನಿಯರೂ ಮಂತ್ರಿಪುರೋಹಿತರೂ ಜಲತರ್ಪಣವನ್ನು ಕೊಟ್ಟು ಕಣ್ಣೀರು ಹರಿಸುತ್ತ

ಪುರಂ ಪ್ರವಿಶ್ಯಾಶ್ರುಪರೀತನೇತ್ರಾ
ಭೂಮೌ ದಶಾಹಂ ವ್ಯನಯಂತ ದುಃಖಮ್ ॥ ೨೩

ಇತಿ ಶ್ರೀ ಮದ್ರಾಮಾಯಾಣೇ ಅಯೋಧ್ಯಾಕಾಂಡೇ ಷಟ್‌ಸಪ್ತತಿತಮಃ ಸರ್ಗಃ

ಸಪ್ತಸಪ್ತತಿತಮಃ ಸರ್ಗಃ

ಭರತಶತ್ರುಘ್ನವಿಲಾಪಃ

ತತೋ ದಶಾಹೇಽತಿಗತೇ ಕೃತಶೌಚೋ ನೃಪಾತ್ಮಜಃ ।
ದ್ವಾದಶೇಽಹನಿ ಸಂಪ್ರಾಪ್ತೇ ಶ್ರಾದ್ಧಕರ್ಮಾಣ್ಯಕಾರಯತ್ ॥ ೧
ಬ್ರಾಹ್ಮಣೇಭ್ಯೋ ದದೌ ರತ್ನಂ ಧನಮನ್ನಂ ಚ ಪುಷ್ಕಲಮ್ ।
ಬಾಸ್ತಿಕಂ ಬಹುಶುಕ್ಲಂ ಚ ಗಾಶ್ಚಾಪಿ ಶತಶಸ್ತದಾ ॥ ೨

ನಗರಕ್ಕೆ ಹಿಂದಿರುಗಿದರು. ಅವರು ನೆಲದ ಮೇಲೆ ಮಲಗುತ್ತ ಹತ್ತು ದಿನಗಳನ್ನು* ದುಃಖದಲ್ಲಿ ಕಳೆದರು (೨೩).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಎಪ್ಪತ್ತಾರನೆಯ ಸರ್ಗ

ಸರ್ಗ ೭೭

ಭರತಶತ್ರುಘ್ನರು ತಮ್ಮ ತಂದೆಯಾದ ದಶರಥನನ್ನು ನೆನೆಸಿಕೊಂಡು ದುಃಖಿಸುವುದು.

ಹತ್ತು ದಿನಗಳು ಕಳೆಯಲಾಗಿ (ಹನ್ನೊಂದನೆಯ ದಿನ) ಭರತನು ತನಗೆ ಪರಿಶುದ್ಧಿಯನ್ನುಂಟುಮಾಡುವ ಕೆಲವು ಶ್ರಾದ್ಧಾದಿ ಕರ್ಮಗಳನ್ನು ಮಾಡಿ ಹನ್ನೆರಡನೆಯ ದಿನ ಸಪಿಂಡೀಕರಣಾಂತವಾದ ಶ್ರಾದ್ಧಕರ್ಮಗಳನ್ನು ನೆರವೇರಿಸಿದನು (೧). ಆಗ ವಿಪ್ರರಿಗೆ ಪುಷ್ಕಳವಾಗಿ ಧನವನ್ನೂ ಶ್ರೇಷ್ಠ ವಸ್ತುಗಳನ್ನೂ ದಾನಮಾಡಿ

---

* ಕ್ಷತ್ರಿಯನಿಗೆ ಹದಿನಾರು ದಿನಗಳವರೆಗೆ ಆಶೌಚವಿದೆ. ಆದರೂ ಸ್ವಕರ್ಮನಿಷ್ಠನಾದ ಕ್ಷತ್ರಿಯನು ಹತ್ತು ದಿನಗಳಲ್ಲಿ ಶುದ್ಧನಾಗುವನೆಂದು ಪರಾಶರಸ್ಮೃತಿಯಲ್ಲಿದೆ. 'ಕ್ಷತ್ರಿಯಸ್ತು ದಶಾಹೇನ ಸ್ವಕರ್ಮನಿರತಃ ಶುಚಿಃ'.

ದಾಸೀದಾಸಂ ಚ ಯಾನಂ ಚ ವೇಶ್ಮಾನಿ ಸುಮಹಾಂತಿ ಚ ।
ಬ್ರಾಹ್ಮಣೇಭ್ಯೋ ದದೌ ಪುತ್ರೋ ರಾಜ್ಞಸ್ತಸ್ಯೌರ್ಧ್ವದೈಹಿಕಮ್ ॥ ೩

ತತಃ ಪ್ರಭಾತಸಮಯೇ ದಿವಸೇಽಥ ತ್ರಯೋದಶೇ ।
ವಿಲಲಾಪ ಮಹಾಬಾಹುರ್ಭರತಃ ಶೋಕಕರ್ಶಿತಃ ॥ ೪

ಶಬ್ದಾಪಿಹಿತಕಂಠಸ್ತು ಶೋಧನಾರ್ಥಮುಪಾಗತಃ ।
ಚಿತಾಮೂಲೇ ಪಿತುರ್ವಾಕ್ಯಮಿದಮಾಹ ಸುದುಃಖಿತಃ ॥ ೫

ತಾತ ಯಸ್ಮಿನ್ನಿಸೃಷ್ಟೋಽಹಂ ತ್ವಯಾ ಭ್ರಾತರಿ ರಾಘವೇ ।
ತಸ್ಮಿನ್ ವನಂ ಪ್ರವ್ರಜಿತೇ ಶೂನ್ಯೇ ತ್ಯಕ್ತೋಽಸ್ಮ್ಯಹಂ ತ್ವಯಾ ॥ ೬

ಯಸ್ಯಾ ಗತಿರನಾಥಾಯಾಃ ಪುತ್ರಃ ಪ್ರವ್ರಾಜಿತೋ ವನಮ್ ।
ತಾಮಂಬಾಂ ತಾತ ಕೌಸಲ್ಯಾಂ ತ್ಯಕ್ತ್ವಾ ತ್ವಂ ಕ್ವ ಗತೋ ನೃಪ ॥ ೭

ಭೂರಿಭೋಜನವನ್ನು ಮಾಡಿಸಿದನು. ಆ ರಾಜಪುತ್ರನು ತಂದೆಗೆ ಪರಲೋಕಕ್ರಿಯೆಯನ್ನು ಮಾಡುವಾಗ ಬಿಳಿಯ ಮೇಕೆಗಳನ್ನೂ ನೂರಾರು ಗೋವುಗಳನ್ನೂ ಬ್ರಾಹ್ಮಣರಿಗೆ ದಾನಮಾಡಿದನು. ಕೆಲವರಿಗೆ ದಾಸೀದಾಸರನ್ನು ಕೊಟ್ಟನು. ಕೆಲವರಿಗೆ ವಾಹನಗಳನ್ನು ದಾನಮಾಡಿ ಕೆಲವರಿಗೆ ಗೃಹದಾನವನ್ನು ಮಾಡಿದನು (೨-೩). ಹದಿಮೂರನೆಯ ದಿನ ಬೆಳಗಾಯಿತು. ಭರತನು ತಂದೆಯನ್ನು ಸ್ಮರಿಸಿಕೊಂಡು ಶೋಕವನ್ನು ತಡೆಯಲಾರದೆ ಅಳುವುದಕ್ಕಾರಂಭಿಸಿದನು. ಅವನು ಸ್ಥಳಶುದ್ಧಿಯನ್ನು* ಮಾಡುವುದಕ್ಕಾಗಿ ದಹನಮಾಡಿದ ಸ್ಥಳಕ್ಕೆ ಬಂದಿದ್ದನು. ತಂದೆಯ ಚಿತೆಯ ಬಳಿಯಲ್ಲಿ ನಿಂತು ಗಟ್ಟಿಯಾಗಿ ಅಳುತ್ತ "ಅಪ್ಪ, ಅಣ್ಣನಿಗೆ ವಿಧೇಯನಾಗಿ ನಡೆದುಕೊಳ್ಳಬೇಕೆಂದು ನನಗೆ ನೀನು ಬೋಧಿಸಿದ್ದೆಯಲ್ಲವೆ? ಅಣ್ಣನು ಕಾಡಿಗೆ ಹೋದನು. ನೀನೂ ನನ್ನನ್ನು ಕೈಬಿಟ್ಟು ಹೊರಟೆ. ನಾನು ಶೂನ್ಯವಾಗಿ ಉಳಿದೆ (೪-೬).

---

* ಹದಿಮೂರನೆಯ ದಿನ ಚಿತಾಭಸ್ಮವನ್ನು ತೆಗೆದು ಸ್ಥಳಶುದ್ಧಿಯನ್ನು ಮಾಡುವುದು ಕ್ಷತ್ರಿಯ ಧರ್ಮವೆಂದು ಕೆಲವರು ಹೇಳುತ್ತಾರೆ. ಇದಕ್ಕೆ ಅಸ್ಥಿಸಂಚಯನವೆಂದು ಕೆಲವರು ಅರ್ಥ ಮಾಡುತ್ತಾರೆ. ಹದಿಮೂರನೆಯ ದಿನವೂ ಅಸ್ಥಿಸಂಚಯನವನ್ನು ಮಾಡಬಹುದು. 'ದ್ವಿತೀಯೇಽಹ್ನಿ ಯುಗ್ಮದಿವಸೇಷ್ವರ್ಧಮಾಸಾನ್ ಮಾಸಾನ್ ಋತೂನ್ ಸಂವತ್ಸರಂ ವಾ ಸಂಚಯನಮ್' - ಬೋಧಾಯನಸೂತ್ರ.

ದೃಷ್ಟ್ವಾ ಭಸ್ಮಾರುಣಂ ತಚ್ಚ ದಗ್ಧಾಸ್ಥಿಸ್ಥಾನಮಂಡಲಮ್ ।
ಪಿತುಃ ಶರೀರನಿರ್ವಾಣಂ ನಿಷ್ಟನನ್ ವಿಷಸಾದ ಸಃ ॥ ೮

ಸ ತು ದೃಷ್ಟ್ವಾ ರುದನ್ ದೀನಃ ಪಪಾತ ಧರಣೀತಲೇ ।
ಉತ್ಥಾಪ್ಯಮಾನಃ ಶಕ್ರಸ್ಯ ಯಂತ್ರಧ್ವಜ ಇವ ಚ್ಯುತಃ ॥ ೯

ಅಭಿಪೇತುಸ್ತತಃ ಸರ್ವೇ ತಸ್ಯಾಮಾತ್ಯಾಃ ಶುಚಿವ್ರತಮ್ ।
ಅಂತಕಾಲೇ ನಿಪತಿತಂ ಯಯಾತಿಮೃಷಯೋ ಯಥಾ ॥ ೧೦

ಶತ್ರುಘ್ನಶ್ಚಾಪಿ ಭರತಂ ದೃಷ್ಟ್ವಾ ಶೋಕಪರಿಪ್ಲುತಮ್ ।
ವಿಸಂಜ್ಞೋ ನ್ಯಪತದ್ಭೂಮೌ ಭೂಮಿಪಾಲಮನುಸ್ಮರನ್ ॥ ೧೧

ಉನ್ಮತ್ತ ಇವ ನಿಶ್ಚೇತಾ ವಿಲಲಾಪ ಸುದುಃಖಿತಃ ।
ಸ್ಮೃತ್ವಾ ಪಿತುರ್ಗುಣಾಂಗಾನಿ ತಾನಿ ತಾನಿ ತದಾ ತದಾ ॥ ೧೨

ಅಪ್ಪ, ಅಮ್ಮನಾದ ಕೌಸಲ್ಯಾದೇವಿ ಅನಾಥೆಯಾದಳು. ಅವಳಿಗೆ ಒಂದು ಅವಲಂಬನೆಯಾಗಿದ್ದ ಪುತ್ರನು ವನಕ್ಕೆ ಹೋದನು. ಹೀಗಿರುವಾಗ, ಮಹಾರಾಜ, ನೀನೂ ಆ ದೇವಿಯನ್ನು ತ್ಯಜಿಸಿ ಎಲ್ಲಿಗೆ ಹೋಗಿಬಿಟ್ಟೆ?'' ಎಂದು ಹಲುಬಿದನು (೭). ಅವನ ತಂದೆಯ ದೇಹವು ಸುಟ್ಟು ನಾಶವಾದ ಸ್ಥಳವು ಬೂದಿಯಿಂದ ತುಂಬಿ ಅಲ್ಲಲ್ಲಿ ಮಾಸಲು ಕೆಂಪುಬಣ್ಣವಾಗಿತ್ತು. ಮೂಳೆಗಳು ದಗ್ಧವಾಗಿ ಗರುಕಾದ ಸನ್ನಿವೇಶ ಕಾಣಿಸುತ್ತಿತ್ತು. ಭರತನು ಅದನ್ನು ಗಮನಿಸಿದ ಕೂಡಲೆ ಹೋ ಎಂದು ದೀನಸ್ವರದಿಂದ ಅಳುತ್ತ ನೆಲದಮೇಲೆ ಕುಸಿದುಹೋದನು. ಯಂತ್ರದಿಂದ ಎಳೆದು ನಿಲ್ಲಿಸಿದ ಇಂದ್ರಧ್ವಜವು ಬೀಳುವಂತೆ ಉರುಳಿದನು (೮-೯). ಒಡನೆಯೇ ಅಮಾತ್ಯರೆಲ್ಲರೂ ಓಡಿಬಂದು, ಪುಣ್ಯಕ್ಷಯವಾಗಲು ಸ್ವರ್ಗದಿಂದ ಬಿದ್ದ ಯಯಾತಿರಾಜನನ್ನು ಋಷಿಗಳು ಹಿಡಿದಂತೆ, ಶುದ್ಧಚಿತ್ತನಾದ ಭರತನನ್ನು ಎತ್ತಿ ಹಿಡಿದರು. ಭರತನು ಶೋಕದಲ್ಲಿ ಮುಳುಗಿರುವುದನ್ನು ಕಂಡು ಶತ್ರುಘ್ನನಿಗೆ ಸಂಕಟ ಉಕ್ಕಿತು. ಅವನು ದಶರಥ ರಾಜನನ್ನು ನೆನೆಸಿಕೊಂಡು ಅಳುತ್ತ ಮೂರ್ಛೆಹೋದನು (೧೦-೧೧). ಅನಂತರ ಚೇತರಿಸಿಕೊಂಡು ಬುದ್ಧಿಗೆಟ್ಟ ಹುಚ್ಚನಂತೆ ಶತ್ರುಘ್ನನು ಹಲುಬತೊಡಗಿದನು. ಆಗಾಗ ತಂದೆಯು ತನ್ನನ್ನು ಲಾಲಿಸುತ್ತ ಆಡಿದ ಮಾತು, ಮಾಡಿದ ಕೃತಿ ಎಲ್ಲವೂ ಅವನಿಗೆ

ಮಂಥರಾಪ್ರಭವಸ್ತೀವ್ರಃ ಕೈಕೇಯೀಗ್ರಾಹಸಂಕುಲಃ ।
ವರದಾನಮಯೋಽಕ್ಷೋಭ್ಯೋಽಮಜ್ಜಯಚ್ಛೋಕಸಾಗರಃ ॥ ೧೩

ಸುಕುಮಾರಂ ಚ ಬಾಲಂ ಚ ಸತತಂ ಲಾಲಿತಂ ತ್ವಯಾ ।
ಕ್ವ ತಾತ ಭರತಂ ಹಿತ್ವಾ ವಿಲಪಂತಂ ಗತೋ ಭವಾನ್ ॥ ೧೪

ನನು ಭೋಜ್ಯೇಷು ಪಾನೇಷು ವಸ್ತ್ರೇಷ್ವಾಭರಣೇಷು ಚ ।
ಪ್ರವಾರಯಸಿ ನಃ ಸರ್ವಾಂಸ್ತನ್ನಃ ಕೋಽನ್ಯಃ ಕರಿಷ್ಯತಿ ॥ ೧೫

ಅವದಾರಣಕಾಲೇ ತು ಪೃಥಿವೀ ನಾವದೀರ್ಯತೇ ।
ಯಾ ವಿಹೀನಾ ತ್ವಯಾ ರಾಜ್ಞಾ ಧರ್ಮಜ್ಞೇನ ಮಹಾತ್ಮನಾ ॥ ೧೬

ಪಿತರಿ ಸ್ವರ್ಗಮಾಪನ್ನೇ ರಾಮೇ ಚಾರಣ್ಯಮಾಶ್ರಿತೇ ।
ಕಿಂ ಮೇ ಜೀವಿತಸಾಮರ್ಥ್ಯಂ ಪ್ರವೇಕ್ಷ್ಯಾಮಿ ಹುತಾಶನಮ್ ॥ ೧೭

ಹೀನೋ ಭ್ರಾತ್ರಾ ಚ ಪಿತ್ರಾ ಚ ಶೂನ್ಯಾಮಿಕ್ಷ್ವಾಕುಪಾಲಿತಾಮ್ ।
ಅಯೋಧ್ಯಾಂ ನ ಪ್ರವೇಕ್ಷ್ಯಾಮಿ ಪ್ರವೇಕ್ಷ್ಯಾಮಿ ತಪೋವನಮ್ ॥ ೧೮

ನೆನಪಾಯಿತು (೧೨). ಮಂಥರೆಯಿಂದ ಹುಟ್ಟಿ ಕೈಕೇಯಿಯೆಂಬ ಮೊಸಳೆಗೆ ವಾಸಸ್ಥಾನವಾಗಿ ವರದಾನವೆಂಬ ಜಲಸಮೃದ್ಧಿಯಿಂದ ತುಂಬಿದ ಅಪಾರವೂ ಘೋರವೂ ಆದ ಶೋಕಸಮುದ್ರವು ಅವರೆಲ್ಲರನ್ನೂ ದುಃಖದಲ್ಲಿ ಮುಳುಗಿಸಿತ್ತು (೧೩). ಆಗ ಶತ್ರುಘ್ನನು "ಅಪ್ಪ, ಸುಕುಮಾರನೂ ಬಾಲಕನೂ ಆದ ಭರತನು ಗೋಳಾಡುತ್ತಿರುವನಲ್ಲ! ಯಾವಾಗಲೂ ಅವನನ್ನು ಲಾಲಿಸುತ್ತಿದ್ದೆಯಲ್ಲ! ಈಗ ಅವನನ್ನು ಪರಿತ್ಯಜಿಸಿ ಎಲ್ಲಿಗೆ ಹೋಗಿಬಿಟ್ಟೆ? (೧೪). ಉತ್ತಮವಾದ ಭೋಜ್ಯ ಪಾನ ವಸ್ತ್ರಾಭರಣಾದಿಗಳನ್ನು ತರಿಸಿ ಇವುಗಳಲ್ಲಿ ನಿಮಗೆ ಬೇಕುಬೇಕಾದನ್ನು ತೆಗೆದುಕೊಳ್ಳಿ" ಎಂದು ನಮ್ಮನ್ನು ಒತ್ತಾಯಪಡಿಸುತ್ತಿದ್ದೆಯಲ್ಲ! ಇನ್ನು ಹಾಗೆ ವಾತ್ಸಲ್ಯದಿಂದ ನಮಗೆ ಹೇಳತಕ್ಕವರಾರು? (೧೫). ಧರ್ಮಜ್ಞನೂ ಮಹಾತ್ಮನೂ ಆದ ನಿನ್ನಂಥ ಪ್ರಭುವನ್ನು ಕಳೆದುಕೊಂಡ ಈ ಪೃಥ್ವಿಯು ಇನ್ನೂ ಸೀಳಿಹೋಗದೆ ಉಳಿದಿದೆಯಲ್ಲ! ಅಯ್ಯೋ! ನನ್ನ ತಂದೆಯು ಸ್ವರ್ಗಸ್ಥನಾದನು. ಶ್ರೀರಾಮನು ಕಾಡಿಗೆ ಹೋದನು. ಇನ್ನು ಯಾವ ಸಾಮರ್ಥ್ಯದಿಂದ ನಾನು ಬದುಕಿರಲಿ? ಬೆಂಕಿಯಲ್ಲಿ ಬಿದ್ದು ಸಾಯುವೆನು (೧೬-೧೭).

ತಯೋರ್ವಿಲಪಿತಂ ಶ್ರುತ್ವಾ ವ್ಯಸನಂ ಚಾನ್ವವೇಕ್ಷ್ಯ ತತ್ ।
ಭೃಶಮಾರ್ತತರಾ ಭೂಯಃ ಸರ್ವ ಏವಾನುಗಾಮಿನಃ ॥ ೧೯

ತತೋ ವಿಷಣ್ಣೌ ಶೋಚಂತೌ ಶತ್ರುಘ್ನಭರತಾವುಭೌ ।
ಧರಣ್ಯಾಂ ಸಂವ್ಯಚೇಷ್ಟೇತಾಂ ಭಗ್ನಶೃಂಗಾವಿವರ್ಷಭೌ ॥ ೨೦

ತತಃ ಪ್ರಕೃತಿಮಾನ್ ವೈದ್ಯಃ ಪಿತುರೇಷಾಂ ಪುರೋಹಿತಃ ।
ವಸಿಷ್ಠೋ ಭರತಂ ವಾಕ್ಯಮುತ್ಥಾಪ್ಯ ತಮುವಾಚ ಹ ॥ ೨೧

ತ್ರಯೋದಶೋಽಯಂ ದಿವಸಃ ಪಿತುರ್ವೃತ್ತಸ್ಯ ತೇ ವಿಭೋ ।
ಸಾವಶೇಷಾಸ್ಥಿನಿಚಯೇ ಕಿಮಿಹ ತ್ವಂ ವಿಲಂಬಸೇ ॥ ೨೨

ತ್ರೀಣಿ ದ್ವಂದ್ವಾನಿ ಭೂತೇಷು ಪ್ರವೃತ್ತಾನ್ಯವಿಶೇಷತಃ ।
ತೇಷು ಚಾಪರಿಹಾರ್ಯೇಷು ನೈವಂ ಭವಿತುಮರ್ಹಸಿ ॥ ೨೩

ಅಣ್ಣನೂ ಇಲ್ಲದೆ ತಂದೆಯೂ ಇಲ್ಲದೆ ಅಯೋಧ್ಯೆಯು ಶೂನ್ಯವಾಯಿತು. ನಾನು ಅಯೋಧ್ಯೆಗೆ ಹೋಗಲಾರೆ. ತಪೋವನಕ್ಕೆ ಹೋಗಿಬಿಡುವೆನು'' ಎಂದು ಗೋಳಾಡಿದನು (೧೮). ಭರತಶತ್ರುಘ್ನರ ವಿಲಾಪವನ್ನೂ ಸಂಕಟವನ್ನೂ ಕಂಡು ಜೊತೆಗೆ ಬಂದವರೆಲ್ಲರೂ ಬಹಳ ವ್ಯಥೆಪಟ್ಟರು. ಭರತಶತ್ರುಘ್ನರಿಬ್ಬರೂ ಸಂಕಟದಿಂದ ನರಳುತ್ತ, ಕೊಂಬುಮುರಿದ ಎತ್ತುಗಳಂತೆ ನೆಲದಮೇಲೆ ಅಳುತ್ತ ಹೊರಳುತ್ತಿದ್ದರು (೧೯-೨೦). ಅಷ್ಟರಲ್ಲಿ ಅವರ ತಂದೆಗೆ ಪುರೋಹಿತರೂ ಜನರ ಅಂತರಂಗಸ್ವಭಾವವನ್ನು ಬಲ್ಲವರೂ ಮನೋವ್ಯಾಧಿಗೆ ವೈದ್ಯರೂ ಆದ ವಸಿಷ್ಠರು ಬಂದು ಭರತನನ್ನು ಎತ್ತಿ ಕುಳ್ಳಿರಿಸಿದರು (೨೧). ಅವರು ಭರತನನ್ನು ಕುರಿತು ''ರಾಜಪುತ್ರ, ನಿನ್ನ ತಂದೆಯು ಗತಿಸಿದ ಮೇಲೆ★ ಇದು ಹದಿಮೂರನೆಯ ದಿವಸ. ಇನ್ನೂ ಅಸ್ಥಿಸಂಚಯನವನ್ನು ಮಾಡಬೇಕಾಗಿರುವಾಗ ಏಕೆ ತಡಮಾಡುತ್ತಿದ್ದೀಯೆ? ಲೋಕದಲ್ಲಿ ಹಸಿವು-ಬಾಯಾರಿಕೆ, ಶೋಕ-ಮೋಹ, ಮುಪ್ಪು-ಮರಣ ಎಂಬ ಮೂರು ದ್ವಂದ್ವಗಳು ಸಕಲಪ್ರಾಣಿಗಳಿಗೂ ಬಂದೇಬರುತ್ತವೆ.

★ ವೃತ್ತಸ್ಯ = ಸಂಸ್ಕೃತಸ್ಯ. ದಹನಸಂಸ್ಕಾರವಾದ ಮೇಲೆ ಹದಿಮೂರನೆಯ ದಿವಸ ಎಂದು ಕೆಲವರು ಅರ್ಥ ಮಾಡಿದ್ದಾರೆ. ದಹನ ಮಾಡಿದ ದಿವಸದಿಂದ ಹತ್ತು ದಿನ ಅಶೌಚವನ್ನು ಭರತನು ನಡೆಸಿದನೆಂದು ಅವರ ಅಭಿಪ್ರಾಯ. ಪ್ರಧಾನಾಸ್ಥಿಗಳನ್ನು ಮೂರನೆಯ ದಿನವೇ ಸಂಚಯನಮಾಡಿದ್ದನೆಂದೂ ಹದಿಮೂರನೆಯ ದಿನ ಸ್ಥಳ ಶುದ್ಧಿಯನ್ನು ಮಾಡಿದನೆಂದೂ ಹೇಳುತ್ತಾರೆ.

ಸುಮಂತ್ರಶ್ಚಾಪಿ ಶತ್ರುಘ್ನಮುತ್ಥಾಪ್ಯಾಭಿಪ್ರಸಾದ್ಯ ಚ ।
ಶ್ರಾವಯಾಮಾಸ ತತ್ತ್ವಜ್ಞಃ ಸರ್ವಭೂತಭವಾಭವೌ ॥ ೨೪

ಉತ್ಥಿತೌ ಚ ನರವ್ಯಾಘ್ರೌ ಪ್ರಕಾಶೇತೇ ಯಶಸ್ವಿನೌ ।
ವರ್ಷಾತಪಪರಿಕ್ಲಿನ್ನೌ ಪೃಥಗಿಂದ್ರಧ್ವಜಾವಿವ ॥ ೨೫

ಅಕ್ಷೀಣಿ ಪರಿಮೃದ್ನಂತೌ ರಕ್ತಾಕ್ಷೌ ದೀನಭಾಷಿಣೌ ।
ಅಮಾತ್ಯಾಸ್ತ್ವರಯಂತಿ ಸ್ಮ ತನಯೌ ಚಾಪರಾಃ ಕ್ರಿಯಾಃ ॥ ೨೬

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತ ಸಪ್ತತಿತಮಃ ಸರ್ಗಃ

❀❀❀

ಅವುಗಳನ್ನು ಪರಿಹರಿಸಲು ಶಕ್ಯವಿಲ್ಲ. ಆದ್ದರಿಂದ ನೀನು ಹೀಗೆ ಅಳುತ್ತಿರುವುದು ಸರಿಯಲ್ಲ'' ಎಂದರು (೨೨-೨೩). ಆಗ ತತ್ತ್ವಜ್ಞನಾದ ಸುಮಂತ್ರನು ಶತ್ರುಘ್ನನನ್ನು ಕೈಹಿಡಿದೆತ್ತಿ ಸಂತೈಸುತ್ತ ಸಮಸ್ತ ಜಂತುಗಳಿಗೂ ಜನನಮರಣಗಳು ಸ್ವಾಭಾವಿಕವೆಂದು ಬೋಧಿಸಿದನು. ಪುರುಷಶ್ರೇಷ್ಠರಾದ ಭರತಶತ್ರುಘ್ನರು ಧೈರ್ಯವನ್ನು ತಂದುಕೊಂಡು ಎದ್ದುನಿಂತರು. ಅವರು ಮಳೆಗೂ ಬಿಸಿಲಿಗೂ ಸಿಕ್ಕಿ ಗಾಸಿಯಾದ ಇಂದ್ರಧ್ವಜಗಳಂತೆ ಕಾಣುತ್ತಿದ್ದರು (೨೪-೨೫). ಅತ್ತು ಅತ್ತು ಅವರ ಕಣ್ಣುಗಳು ಕೆಂಪಾಗಿದ್ದವು. ಕಣ್ಣೀರನ್ನು ಒರಸಿಕೊಳ್ಳುತ್ತ ದೈನ್ಯದಿಂದ ಮಾತನಾಡುತ್ತಿದ್ದರು. ಮುಂದಿನ ಅಸ್ಥಿಸಂಚಯನಾದಿ ಕಾರ್ಯಗಳನ್ನು ಮಾಡುವಂತೆ ಅಮಾತ್ಯರು ಆ ರಾಜಕುಮಾರರನ್ನು ತ್ವರೆ ಪಡಿಸಿದರು (೨೬).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಎಪ್ಪತ್ತೇಳನೆಯ ಸರ್ಗ

❀❀❀

ಅಷ್ಟಸಪ್ತತಿತಮಃ ಸರ್ಗಃ

ಕುಬ್ಜಾವಿಕ್ಷೇಪಃ

ಅಥ ಯಾತ್ರಾಂ ಸಮೀಹಂತಂ ಶತ್ರುಘ್ನೋ ಲಕ್ಷ್ಮಣಾನುಜಃ ।
ಭರತಂ ಶೋಕಸಂತಪ್ತಮಿದಂ ವಚನಮಬ್ರವೀತ್ ॥ ೧

ಗತಿರ್ಯಃ ಸರ್ವಭೂತಾನಾಂ ದುಃಖೇ ಕಿಂ ಪುನರಾತ್ಮನಃ ।
ಸ ರಾಮಃ ಸತ್ತ್ವಸಂಪನ್ನಃ ಸ್ತ್ರಿಯಾ ಪ್ರವ್ರಾಜಿತೋ ವನಮ್ ॥ ೨

ಬಲವಾನ್ ವೀರ್ಯಸಂಪನ್ನೋ ಲಕ್ಷ್ಮಣೋ ನಾಮ ಯೋಽಪ್ಯಸೌ ।
ಕಿಂ ನ ಮೋಚಯತೇ ರಾಮಂ ಕೃತ್ವಾಪಿ ಪಿತೃನಿಗ್ರಹಮ್ ॥ ೩

ಪೂರ್ವಮೇವ ತು ನಿಗ್ರಾಹ್ಯಃ ಸಮವೇಕ್ಷ್ಯ ನಯಾನಯೌ ।
ಉತ್ಪಥಂ ಯಃ ಸಮಾರೂಢೋ ನಾರ್ಯಾ ರಾಜಾ ವಶಂಗತಃ ॥ ೪

ಇತಿ ಸಂಭಾಷಮಾಣೇ ತು ಶತ್ರುಘ್ನೇ ಲಕ್ಷ್ಮಣಾನುಜೇ ।
ಪ್ರಾಗ್ದ್ವಾರೇಽಭೂತ್ತದಾ ಕುಬ್ಜಾ ಸರ್ವಾಭರಣಭೂಷಿತಾ ॥ ೫

ಸರ್ಗ ೭೮

ಮಂಥರೆಯನ್ನು ಕಂಡಾಗ ಶತ್ರುಘ್ನನ ಕೋಪ.

ದಶರಥನ ಅಪರಕ್ರಿಯೆಗಳೆಲ್ಲವೂ ನಡೆದಮೇಲೆ ಶೋಕಸಂತಪ್ತನಾದ ಭರತನು ಶ್ರೀರಾಮನ ಬಳಿಗೆ ಹೋಗಬೇಕೆಂದು ವಿಚಾರ ಮಾಡುತ್ತಿದ್ದನು. ಆಗ ಶತ್ರುಘ್ನನು ಭರತನನ್ನು ಕುರಿತು "ಅಣ್ಣ, ವಿಪತ್ತು ಸಂಭವಿಸಿದಾಗ ಸಮಸ್ತರಿಗೂ ಶ್ರೀರಾಮನು ದಿಕ್ಕಾಗಬಲ್ಲವನು. ಅವನು ತನಗೆ ಕಷ್ಟಬಂದಾಗ ತನ್ನನ್ನು ರಕ್ಷಿಸಿಕೊಳ್ಳಲಾರನೆ? ಅಂಥ ಸತ್ತ್ವಶಾಲಿಯನ್ನು ಒಬ್ಬ ಹೆಂಗಸು ಕಾಡಿಗೆ ಕಳಿಸಿಬಿಟ್ಟಳಲ್ಲ! (೧-೨). ಬಲಶಾಲಿಯೂ ಮಹಾಪರಾಕ್ರಮಿಯೂ ಆದ ಲಕ್ಷ್ಮಣನಾದರೂ ಶ್ರೀರಾಮನ ವನವಾಸವನ್ನು ತಪ್ಪಿಸಬಾರದಾಗಿತ್ತೆ? ಸಮಯ ಬಂದರೆ ತಂದೆಯನ್ನಾದರೂ ನಿಗ್ರಹಿಸಬಹುದಾಗಿತ್ತು. ಮಹಾರಾಜನು ಹೆಂಗಸಿಗೆ ಅಧೀನನಾಗಿ ತಪ್ಪುದಾರಿಯನ್ನು ಹಿಡಿದನು.

ಲಿಪ್ತಾ ಚಂದನಸಾರೇಣ ರಾಜವಸ್ತ್ರಾಣಿ ಬಿಭ್ರತೀ ।
ವಿವಿಧಂ ವಿವಿಧೈಸ್ತೈಸ್ತೈರ್ಭೂಷಣೈಶ್ಚ ವಿಭೂಷಿತಾ ॥ ೬

ಮೇಖಲಾದಾಮಭಿಶ್ಚಿತ್ರೈರನ್ಯೈಶ್ಚ ಶುಭಭೂಷಣೈಃ ।
ಬಭಾಸೇ ಬಹುಭಿರ್ಬದ್ಧಾ ರಜ್ಜುಬದ್ಧೇವ ವಾನರೀ ॥ ೭

ತಂ ಸಮೀಕ್ಷ್ಯ ತದಾ ದ್ವಾಃಸ್ಥಾಃ ಸುಭೃಶಂ ಪಾಪಕಾರಿಣೀಮ್ ।
ಗೃಹೀತ್ವಾ ಕರುಣಾಂ ಕುಬ್ಜಾಂ ಶತ್ರುಘ್ನಾಯ ನ್ಯವೇದಯನ್ ॥ ೮

ಯಸ್ಯಾಃ ಕೃತೇ ವನೇ ರಾಮೋ ನ್ಯಸ್ತದೇಹಶ್ಚ ವಃ ಪಿತಾ ।
ಸೇಯಂ ಪಾಪಾ ನೃಶಂಸಾ ಚ ತಸ್ಯಾಃ ಕುರು ಯಥಾಮತಿ ॥ ೯

ಶತ್ರುಘ್ನಶ್ಚ ತದಾಜ್ಞಾಯ ವಚನಂ ಭೃಶದುಃಖಿತಃ ।
ಅಂತಃಪುರಚರಾನ್ ಸರ್ವಾನಿತ್ಯುವಾಚ ಧೃತವ್ರತಃ ॥ ೧೦

ನ್ಯಾಯಾನ್ಯಾಯಗಳನ್ನು ವಿಚಾರಿಸಿ ಲಕ್ಷ್ಮಣನು ಅವನನ್ನು ಮೊದಲೇ ದಂಡಿಸಿ ತಡೆಯಬೇಕಾಗಿತ್ತು ''ಎಂದನು (೩-೪). ಹೀಗೆ ಲಕ್ಷ್ಮಣನ ತಮ್ಮನು (ಲಕ್ಷ್ಮಣನ ಶೈಲಿಯಲ್ಲಿ) ಮಾತನಾಡುತ್ತಿರಲು, ಕುಬ್ಜೆಯು ಸರ್ವಾಭರಣಭೂಷಿತಳಾಗಿ ಪೂರ್ವದಿಕ್ಕಿನ ಬಾಗಿಲಿನಲ್ಲಿ ಥಕ್ಕನೆ ಕಾಣಿಸಿಕೊಂಡಳು! (೫). ಆ ಗೂನಿಯು ಶ್ರೀಗಂಧವನ್ನು ಮೈಗೆ ತೊಡೆದುಕೊಂಡು ರಾಜಯೋಗ್ಯವಾದ ಪಟ್ಟೆಯ ಸೀರೆಯನ್ನುಟ್ಟಿದ್ದಳು. ನಾನಾ ಬಗೆಯ ಒಡವೆಗಳಿಂದ ತನ್ನನ್ನು ವಿಚಿತ್ರವಾಗಿ ಸಿಂಗರಿಸಿಕೊಂಡಿದ್ದಳು. ವಿಚಿತ್ರ ವರ್ಣದ ಅಲಂಕಾರಗಳನ್ನು ಧರಿಸಿದ್ದಳು. ಸೊಂಟಕ್ಕೆ ವಿವಿಧಾಕಾರದ ಪಟ್ಟಿಗಳನ್ನು ಸುತ್ತಿಕೊಂಡಿದ್ದ ಆ ಗೂನಿಯು ಹಗ್ಗಗಳಿಂದ ಕಟ್ಟಿಹಾಕಿದ ಹೆಣ್ಣುಕೋತಿಯಂತೆ ಕಂಗೊಳಿಸಿದಳು (೬-೭). ಕೂಡಲೆ ದ್ವಾರಪಾಲಕರು ನಿರ್ಘೃಣಳಾದ ಆ ಪಾಪಕಾರಿಣಿಯನ್ನು ಹಿಡಿದು ನಿಲ್ಲಿಸಿ, ಶತ್ರುಘ್ನನನ್ನು ಕರೆದು ''ರಾಜಕುಮಾರ, ಶ್ರೀರಾಮನು ಕಾಡಿಗೆ ಹೋಗುವುದಕ್ಕೂ ನಿಮ್ಮ ತಂದೆಯು ದೇಹವನ್ನು ಬಿಡುವುದಕ್ಕೂ ಈ ಪಾಪಿಯೇ ಮೂಲ ಕಾರಣ. ಇವಳು ಕೆಟ್ಟವಳು. ಇವಳನ್ನು ನಿನಗೆ ತೋರಿದಂತೆ ದಂಡಿಸಬಹುದ' ಎಂದರು (೮-೯). ಆ ಮಾತನ್ನು ಕೇಳಿ ದುಃಖದಲ್ಲಿ ಮುಳುಗಿದ್ದ ಶತ್ರುಘ್ನನಿಗೆ ಅವಳನ್ನು ಶಿಕ್ಷಿಸುವುದು ಕರ್ತವ್ಯವೆಂದು

ತೀವ್ರಮುತ್ಪಾದಿತಂ ದುಃಖಂ ಭ್ರಾತೄಣಾಂ ಮೇ ತಥಾ ಪಿತುಃ ।
ಯಯಾ ಸೇಯಂ ನೃಶಂಸಸ್ಯ ಕರ್ಮಣಃ ಫಲಮಶ್ನುತಾಮ್ ॥ ೧೧

ಏವಮುಕ್ತ್ವಾ ತು ತೇನಾಥ ಸಖೀಜನಸಮಾವೃತಾ ।
ಗೃಹೀತಾ ಬಲವತ್ ಕುಬ್ಜಾ ಸಾ ತದ್ಗೃಹಮನಾದಯತ್ ॥ ೧೨

ತತಃ ಸುಭೃಶಸಂತಪ್ತಸ್ತಸ್ಯಾಃ ಸರ್ವಃ ಸಖೀಜನಃ ।
ಕ್ರುದ್ಧಮಾಜ್ಞಾಯ ಶತ್ರುಘ್ನಂ ವ್ಯಪಲಾಯತ ಸರ್ವಶಃ ॥ ೧೩

ಆಮಂತ್ರಯತ ಕೃತ್ಸ್ನಶ್ಚ ತಸ್ಯಾಃ ಸರ್ವಃ ಸಖೀಜನಃ ।
ಯಥಾಯಂ ಸಮುಪಕ್ರಾಂತೋ ನಿಃಶೇಷಾನ್ನಃ ಕರಿಷ್ಯತಿ ॥ ೧೪

ಸಾನುಕ್ರೋಶಾಂ ವದನ್ಯಾಂ ಚ ಧರ್ಮಜ್ಞಾಂ ಚ ಯಶಸ್ವಿನೀಮ್ ।
ಕೌಸಲ್ಯಾಂ ಶರಣಂ ಯಾಮ ಸಾ ಹಿ ನೋಽಸ್ತು ಧ್ರುವಾ ಗತಿಃ ॥ ೧೫

ಸ ಚ ರೋಷೇಣ ತಾಮ್ರಾಕ್ಷಃ ಶತ್ರುಘ್ನಃ ಶತ್ರುತಾಪನಃ ।
ವಿಚಕರ್ಷ ತದಾ ಕುಬ್ಜಾಂ ಕ್ರೋಶಂತೀಂ ಧರಣೀತಲೇ ॥ ೧೬

ತೋರಿತು. ಅವನು ಅಂತಃಪುರದಲ್ಲಿದ್ದವರನ್ನು ಕುರಿತು "ಇವಳು ನನ್ನ ಅಣ್ಣಂದಿರಿಗೂ ತಂದೆಗೂ ಘೋರವಾದ ದುಃಖವನ್ನು ತಂದೊಡ್ಡಿದ್ದಾಳೆ. ಇವಳು ತನ್ನ ನೀಚಕೃತ್ಯಕ್ಕೆ ತಕ್ಕ ಫಲವನ್ನನುಭವಿಸಲಿ!" ಎಂದು ಹೇಳಿದನು (೧೦-೧೧). ಹೀಗೆ ನುಡಿದು ಶತ್ರುಘ್ನನು ಗೆಳತಿಯರ ಮಧ್ಯದಲ್ಲಿ ಸೇರಿಕೊಂಡಿದ್ದ ಆ ಗೂನಿಯನ್ನು ಹಿಡಿದೆಳೆದನು. ಅರಮನೆಯು ಬಿರಿದು ಹೋಗುವಂತೆ ಅವಳು ಕಿರಿಚಿಕೊಂಡಳು. ಶತ್ರುಘ್ನನು ಕುಪಿತನಾಗಿರುವುದನ್ನು ಕಂಡು ಆ ಕುಬ್ಜೆಯ ಗೆಳತಿಯರು ಹೆದರಿ ಓಡಿಹೋದರು (೧೨-೧೩). ಅವರೆಲ್ಲರೂ ಒಟ್ಟು ಸೇರಿ 'ಈ ಶತ್ರುಘ್ನನ ಆರಂಭವನ್ನು ನೋಡಿದರೆ ಇವನು ನಮ್ಮೆಲ್ಲರನ್ನೂ ನಿಶ್ಶೇಷಮಾಡುವಂತೆ ಕಾಣುತ್ತದೆ. ಈಗ ನಾವು ದಯಾಳುವಾದ ಕೌಸಲ್ಯೆಯನ್ನು ಮರೆಹೋಗುವುದು ಲೇಸು. ಅವಳು ಉದಾರಸ್ವಭಾವದವಳು; ಧರ್ಮಜ್ಞಳು. ಅವಳೇ ನಮಗೆ ಗತಿ. ಬೇರೆ ದಾರಿ ಇಲ್ಲ' ಎಂದು ಮಾತನಾಡಿಕೊಂಡರು (೧೪-೧೫). ಇತ್ತ ಶತ್ರುಘ್ನನು ಸಿಟ್ಟಿನಿಂದ ಕಣ್ಣು ಕೆಂಪುಮಾಡಿಕೊಂಡು, ಒಂದೇ ಸಮನಾಗಿ ಕೂಗುತ್ತಿದ್ದ ಆ ಕುಬ್ಜೆಯನ್ನು ನೆಲದ ಮೇಲೆ ದರದರನೆ ಎಳೆದುಕೊಂಡು ಹೋದನು (೧೬). ಆಗ

ತಸ್ಯಾ ಹ್ಯಾಕೃಷ್ಯಮಾಣಾಯಾ ಮಂಥರಾಯಾಸ್ತತಸ್ತತಃ ।
ಚಿತ್ರಂ ಬಹುವಿಧಂ ಭಾಂಡಂ ಪೃಥಿವ್ಯಾಂ ತದ್ವ್ಯಶೀರ್ಯತ ॥ ೧೭

ತೇನ ಭಾಂಡೇನ ಸಂಕೀರ್ಣಂ ಶ್ರೀಮದ್ರಾಜನಿವೇಶನಮ್ ।
ಅಶೋಭತ ತದಾ ಭೂಯಃ ಶಾರದಂ ಗಗನಂ ಯಥಾ ॥ ೧೮

ಸ ಬಲೀ ಬಲವತ್ಕ್ರೋಧಾದ್ ಗೃಹೀತ್ವಾ ಪುರುಷರ್ಷಭಃ ।
ಕೈಕೇಯೀಮಭಿನಿರ್ಭರ್ತ್ಸ್ಯ ಬಭಾಷೇ ಪರುಷಂ ವಚಃ ॥ ೧೯

ತೈರ್ವಾಕ್ಯೈಃ ಪರುಷೈರ್ದುಃಖೈಃ ಕೈಕೇಯೀ ಭೃಶದುಃಖಿತಾ ।
ಶತ್ರುಘ್ನಭಯಸಂತ್ರಸ್ತಾ ಪುತ್ರಂ ಶರಣಮಾಗತಾ ॥ ೨೦

ತಾಂ ಪ್ರೇಕ್ಷ್ಯ ಭರತಃ ಕ್ರುದ್ಧಂ ಶತ್ರುಘ್ನಮಿದಮಬ್ರವೀತ್ ।
ಅವಧ್ಯಾಃ ಸರ್ವಭೂತಾನಾಂ ಪ್ರಮದಾಃ ಕ್ಷಮ್ಯತಾಮಿತಿ ॥ ೨೧

ಹನ್ಯಾಮಹಮಿಮಾಂ ಪಾಪಾಂ ಕೈಕೇಯೀಂ ದುಷ್ಟಚಾರಿಣೀಮ್ ।
ಯದಿ ಮಾಂ ಧಾರ್ಮಿಕೋ ರಾಮೋ ನಾಸೂಯೇನ್ಮಾತೃಘಾತುಕಂ ॥

ಮಂಥರೆಯು ತೊಟ್ಟಿದ್ದ ನಾನಾ ಬಗೆಯ ಒಡವೆಗಳು ಕಿತ್ತು ಹರಿದು ನೆಲದಮೇಲೆ ಹರಡಿಹೋದವು. ಆಭರಣಗಳ ಚೂರುಗಳು ಎಲ್ಲೆಲ್ಲಿಯೂ ಹರಡಿಹೋಗಲು ಸುಂದರವಾದ ಅಂತಃಪುರದ ನೆಲವು (ನಕ್ಷತ್ರಗಳಿಂದ ರಂಜಿಸುವ) ಶರತ್ಕಾಲದ ಗಗನತಳದಂತೆ ಕಾಣಿಸಿತು (೧೭-೧೮). (ಅಷ್ಟರಲ್ಲಿ ಕುಬ್ಜೆಯನ್ನು ಬಿಡಿಸುವುದಕ್ಕಾಗಿ ಕೈಕೇಯಿಯು ಬಂದಳು) ಶತ್ರುಘ್ನನು ಕುಬ್ಜೆಯನ್ನು ಗಟ್ಟಿಯಾಗಿ ಹಿಡಿದುಕೊಂಡು ಕೈಕೇಯಿಯನ್ನು ಗದರಿಸಿ ನಿಷ್ಠುರವಾದ ಮಾತನ್ನಾಡಿದನು. ಆದರಿಂದ ಕೈಕೇಯಿಯು ಬಹಳ ನೊಂದುಕೊಂಡು ಮಂಥರೆಗೆ ಏನಾಗುವುದೋ ಎಂಬ ಭಯದಿಂದ ತನ್ನ ಮಗನ ಸಮೀಪಕ್ಕೆ ಹೋಗಿ ಅವನ ಮರೆಹೊಕ್ಕಳು (೧೯-೨೦). ಆಗ ಭರತನು ಕ್ರುದ್ಧನಾದ ಶತ್ರುಘ್ನನನ್ನು ಕಂಡು ''ತಮ್ಮ - ಶತ್ರುಘ್ನ, ಹೆಂಗಸರನ್ನು ಯಾರೂ ಕೊಲ್ಲಬಾರದು. ಅವಳನ್ನು ಕ್ಷಮಿಸಿಬಿಡು. ಪಾಪಿಯೂ ದುರಾಚಾರಳೂ ಆದ ಈ ಕೈಕೇಯಿಯನ್ನು ನಾನು ಮೊದಲೇ ಕೊಂದುಹಾಕುತ್ತಿದ್ದೆನು. ನಾನು ಮಾತೃಹತ್ಯೆ ಮಾಡಿದವನೆಂದು ತಿಳಿದು ಧಾರ್ಮಿಕನಾದ ಶ್ರೀರಾಮನು ನನ್ನ ಮೇಲೆ ಕೋಪಿಸಿಕೊಳ್ಳುವನೆಂದು ಸುಮ್ಮನಿದ್ದೇನೆ (೨೧-೨೨). ಈ ಗೂನಿಯನ್ನು ಕೊಂದರೆ,

ಇಮಾಮಪಿ ಹತಾಂ ಕುಬ್ಜಾಂ ಯದಿ ಜಾನಾತಿ ರಾಘವಃ ।
ತ್ವಾಂ ಚ ಮಾಂ ಚ ಹಿ ಧರ್ಮಾತ್ಮಾ ನಾಭಿಭಾಷಿಷ್ಯತೇ ಧ್ರುವಮ್ ॥ ೨೩

ಭರತಸ್ಯ ವಚಃ ಶ್ರುತ್ವಾ ಶತ್ರುಘ್ನೋ ಲಕ್ಷ್ಮಣಾನುಜಃ ।
ನ್ಯವರ್ತತ ತತೋ ರೋಷಾತ್ತಾಂ ಮುಮೋಚ ಚ ಮಂಥರಾಮ್ ॥ ೨೪

ಸಾ ಪಾದಮೂಲೇ ಕೈಕೇಯ್ಯಾ ಮಂಥರಾ ನಿಪಪಾತ ಹ ।
ನಿಃಶ್ವಸಂತೀ ಸುದುಃಖಾರ್ತಾ ಕೃಪಣಂ ವಿಲಲಾಪ ಚ ॥ ೨೫

ಶತ್ರುಘ್ನವಿಕ್ಷೇಪವಿಮೂಢಸಂಜ್ಞಾಂ
ಸಮೀಕ್ಷ್ಯ ಕುಬ್ಜಾಂ ಭರತಸ್ಯ ಮಾತಾ ।
ಶನೈಃ ಸಮಾಶ್ವಾಸಯದಾರ್ತರೂಪಾಂ
ಕ್ರೌಂಚೀಂ ವಿಲಗ್ನಾಮಿವ ವೀಕ್ಷಮಾಣಾಮ್ ॥ ೨೬

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಅಷ್ಟಸಪ್ತತಿತಮಃ ಸರ್ಗಃ

❋❋❋

ಈ ವಿಷಯವು ಶ್ರೀರಾಮನಿಗೆ ಗೊತ್ತಾದರೆ, ಆ ಧರ್ಮಾತ್ಮನು ನಮ್ಮಿಬ್ಬರೊಡನೆ ಮುಖವನ್ನು ಕೊಟ್ಟು ಮಾತನ್ನೇ ಆಡುವುದಿಲ್ಲ. ಇದು ನಿಶ್ಚಯ'' ಎಂದು ಹೇಳಿದನು (೨೩). ಭರತನ ಮಾತನ್ನು ಕೇಳಿ ಶತ್ರುಘ್ನನ ಕೋಪವು ಇಳಿಯಿತು. ಅವನು ಮಂಥರೆಯನ್ನು ಬಿಟ್ಟುಬಿಟ್ಟನು. ಅವಳು ಕೈಕೇಯಿಯ ಕಾಲಿಗೆ ಬಿದ್ದು ನಿಟ್ಟುಸಿರುಬಿಡುತ್ತ 'ಗೋಳೋ' ಎಂದು ಅತ್ತಳು (೨೪). ಶತ್ರುಘ್ನನ ಎಳೆದಾಟದಿಂದ ಆ ಗೂನಿಗೆ ಎಚ್ಚರದಪ್ಪಿದಂತಾಗಿತ್ತು. ಸೆರೆಹಿಡಿದ ಕ್ರೌಂಚಪಕ್ಷಿಯಂತೆ ಅವಳು ಸುತ್ತಲೂ ಭಯದಿಂದ ನೋಡುತ್ತ ದೈನ್ಯದಿಂದ ಅಳುತ್ತಿದ್ದಳು. ಕೈಕೇಯಿಯು ಒಳ್ಳೆಯ ಮಾತಿನಿಂದ ಮೆಲ್ಲಗೆ ಅವಳನ್ನು ಸಂತೈಸಿದಳು (೨೫-೨೬).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಎಪ್ಪತ್ತೆಂಟನೆಯ ಸರ್ಗ

❋❋❋

ಏಕೋನಾಶೀತಿತಮಃ ಸರ್ಗಃ

ಸಚಿವಪ್ರಾರ್ಥನಾಪ್ರತಿಷೇಧಃ

ತತಃ ಪ್ರಭಾತಸಮಯೇ ದಿವಸೇ ಚ ಚತುರ್ದಶೇ ।
ಸಮೇತ್ಯ ರಾಜಕರ್ತಾರೋ ಭರತಂ ವಾಕ್ಯಮಬ್ರುವನ್ ॥ ೧

ಗತೋ ದಶರಥಃ ಸ್ವರ್ಗಂ ಯೋ ನೋ ಗುರುತರೋ ಗುರುಃ ।
ರಾಮಂ ಪ್ರವ್ರಾಜ್ಯ ವೈ ಜ್ಯೇಷ್ಠಂ ಲಕ್ಷ್ಮಣಂ ಚ ಮಹಾಬಲಮ್ ॥ ೨

ತ್ವಮದ್ಯ ಭವ ನೋ ರಾಜಾ ರಾಜಪುತ್ರ ಮಹಾಯಶಃ ।
ಸಂಗತ್ಯಾ ನಾಪರಾಧ್ನೋತಿ ರಾಜ್ಯಮೇತದನಾಯಕಮ್ ॥ ೩

ಆಭಿಷೇಚನಿಕಂ ಸರ್ವಮಿದಮಾದಾಯ ರಾಘವ ।
ಪ್ರತೀಕ್ಷತೇ ತ್ವಾಂ ಸ್ವಜನಃ ಶ್ರೇಣಯಶ್ಚ ನೃಪಾತ್ಮಜ ॥ ೪

ರಾಜ್ಯಂ ಗೃಹಾಣ ಭರತ ಪಿತೃಪೈತಾಮಹಂ ಧ್ರುವಮ್ ।
ಅಭಿಷೇಚಯ ಚಾತ್ಮಾನಂ ಪಾಹಿ ಚಾಸ್ಮಾನ್ನರರ್ಷಭ ॥ ೫

ಸರ್ಗ ೭೯

ಭರತನು ರಾಜನಾಗಲೆಂಬ ಸಚಿವರ ಪ್ರಾರ್ಥನೆಯನ್ನು ಅವನು ನಿರಾಕರಿಸುವುದು.
ಶ್ರೀರಾಮನನ್ನು ಕರೆತರಲು ವನಕ್ಕೆ ಹೋಗಬೇಕೆಂದು ನಿಶ್ಚಯಿಸುವುದು.

ಆಮೇಲೆ ಹದಿನಾಲ್ಕನೆಯ ದಿವಸ ಪ್ರಾತಃಕಾಲದಲ್ಲಿ ರಾಜನಿಗೆ ಮಾರ್ಗಪ್ರದರ್ಶನಮಾಡತಕ್ಕ ಸಚಿವರು ಭರತನನ್ನು ಕಂಡು ''ರಾಜಪುತ್ರ, ನಮ್ಮೆಲ್ಲರಿಗೂ ಶ್ರೇಷ್ಠನಾದ ಗುರುವಾಗಿದ್ದ ದಶರಥರಾಜನು ಜ್ಯೇಷ್ಠ ಪುತ್ರನಾದ ಶ್ರೀರಾಮನುನನ್ನೂ ಬಲಶಾಲಿಯಾದ ಲಕ್ಷ್ಮಣನನ್ನೂ ವನಕ್ಕೆ ಕಳಿಸಿ ತಾನು ಸ್ವರ್ಗಸ್ಥನಾದನು (೧-೨). ಇನ್ನುಮೇಲೆ ಕೀರ್ತಿಶಾಲಿಯಾದ ನೀನೇ ನಮಗೆ ರಾಜನಾಗು. ನ್ಯಾಯವಾಗಿ ಇದರಲ್ಲಿ ನಿನ್ನ ಅಪರಾಧವೇನೂ ಇಲ್ಲ. ರಾಜ್ಯವಾದರೋ ಅನಾಯಕವಾಗಿದೆ. ಹೇ ರಾಘವ, ಅಧಿಕಾರಿಗಳೂ ಪೌರರೂ ಅಭಿಷೇಕ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಂಡು ನಿನ್ನ ಒಪ್ಪಿಗೆಗೋಸ್ಕರ ಕಾದಿದ್ದಾರೆ (೩-೪).

ಆಭಿಷೇಚನಿಕಂ ಭಾಂಡಂ ಕೃತ್ವಾ ಸರ್ವಂ ಪ್ರದಕ್ಷಿಣಮ್ ।
ಭರತಸ್ತಂ ಜನಂ ಸರ್ವಂ ಪ್ರತ್ಯುವಾಚ ಧೃತವ್ರತಃ ॥ ೬
ಜ್ಯೇಷ್ಠಸ್ಯ ರಾಜತಾ ನಿತ್ಯಮುಚಿತಾ ಹಿ ಕುಲಸ್ಯ ನಃ ।
ನೈವಂ ಭವಂತೋ ಮಾಂ ವಕ್ತು ಮರ್ಹಂತಿ ಕುಶಲಾ ಜನಾಃ ॥ ೭
ರಾಮಃ ಪೂರ್ವೋ ಹಿ ನೋ ಭ್ರಾತಾ ಭವಿಷ್ಯತಿ ಮಹೀಪತಿಃ ।
ಅಹಂ ತ್ವರಣ್ಯೇ ವತ್ಸ್ಯಾಮಿ ವರ್ಷಾಣಿ ನವ ಪಂಚ ಚ ॥ ೮
ಯುಜ್ಯತಾಂ ಮಹತೀ ಸೇನಾ ಚತುರಂಗ ಮಹಾಬಲಾ
ಆನಯಿಷ್ಯಾಮ್ಯಹಂ ಜ್ಯೇಷ್ಠಭ್ರಾತರಂ ರಾಘವಂ ವನಾತ್ ॥ ೯
ಆಭಿಷೇಚನಿಕಂ ಚೈವ ಸರ್ವಮೇತದುಪಸ್ಕೃತಮ್ ।
ಪುರಸ್ಕೃತ್ಯ ಗಮಿಷ್ಯಾಮಿ ರಾಮಹೇತೋರ್ವನಂ ಪ್ರತಿ ॥ ೧೦
ತತ್ರೈವ ತಂ ನರವ್ಯಾಘ್ರಮಭಿಷಿಚ್ಯ ಪುರಸ್ಕೃತಮ್ ।
ಆನಯಿಷ್ಯಾಮಿ ವೈ ರಾಮಂ ಹವ್ಯವಾಹಮಿವಾಧ್ವರಾತ್ ॥ ೧೧

ಆದ್ದರಿಂದ, ಭರತ, ಪಿತೃಪರಂಪರೆಯಿಂದ ಬಂದ ಸ್ಥಿರವಾದ ಈ ರಾಜ್ಯವನ್ನು ಸ್ವೀಕರಿಸಿ ಪಟ್ಟಾಭಿಷಿಕ್ತನಾಗು. ನಮ್ಮೆಲ್ಲರನ್ನೂ ಪಾಲಿಸು'' ಎಂದು ಹೇಳಿದರು (೫). ಆಗ ಭರತನು ಹೊರಟುಬಂದು ಅವರು ಸಿದ್ಧಪಡಿಸಿದ್ದ ಅಭಿಷೇಕಸಾಮಗ್ರಿಗಳಿಗೆ ಪ್ರದಕ್ಷಿಣೆಮಾಡಿ ನಮಸ್ಕರಿಸಿದನು. ಅನಂತರ ಅಲ್ಲಿ ನೆರೆದಿದ್ದ ಸಕಲರನ್ನೂ ಕುರಿತು ''ನಮ್ಮ ವಂಶದಲ್ಲಿ ಜ್ಯೇಷ್ಠಪುತ್ರನಿಗೆ ರಾಜಪದವಿಯು ತಪ್ಪದೆ ನಡೆದುಕೊಂಡು ಬಂದಿದೆ. ನೀವು ಇವೆಲ್ಲವನ್ನೂ ತಿಳಿದವರಾಗಿ ನನ್ನೊಡನೆ ಈ ರೀತಿಯಲ್ಲಿ ಹೇಳುವುದು ಸರಿಯಲ್ಲ (೬-೭). ಶ್ರೀರಾಮನು ಜ್ಯೇಷ್ಠಪುತ್ರ. ಅವನೇ ನಮ್ಮೆಲ್ಲರಿಗೂ ರಾಜನಾಗಬೇಕು. ಅವನಿಗೆ ಪ್ರತಿಯಾಗಿ ನಾನೇ ಹದಿನಾಲ್ಕು ವರ್ಷ ಅರಣ್ಯದಲ್ಲಿ ವಾಸಮಾಡುವೆನು. ಆದ್ದರಿಂದ ಮಂತ್ರಿಗಳೆ, ಚತುರಂಗಬಲಸಮೇತವಾದ ಮಹಾಸೇನೆಯು ಸಿದ್ಧವಾಗಲಿ. ಅದರೊಡನೆ ನಾನೇ ಹೋಗಿ ಅಣ್ಣನಾದ ಶ್ರೀರಾಮನನ್ನು (ವೈಭವದಿಂದ) ಕರೆತರುವೆನು (೮-೯). ನೀವು ಮುಂದಿಟ್ಟಿರುವ ಪಟ್ಟಾಭಿಷೇಕದ ಉಪಕರಣಗಳೆಲ್ಲವನ್ನೂ ಶ್ರೀರಾಮನಿಗೋಸ್ಕರ ವನಕ್ಕೆ ಸಾಗಿಸಿಕೊಂಡು ಹೋಗುವೆನು (೧೦). ವನದಲ್ಲಿಯೇ ಆ ಪುರುಷಶ್ರೇಷ್ಠನಿಗೆ ಪಟ್ಟಾಭಿಷೇಕವನ್ನು ಮಾಡಿಸಿ,

ನ ಸಕಾಮಾಂ ಕರಿಷ್ಯಾಮಿ ಸ್ವಾಮಿಮಾಂ ಮಾತೃಗಂಧಿನೀಮ್ ।
ವನೇ ವತ್ಸ್ಯಾಮ್ಯಹಂ ದುರ್ಗೇ ರಾಮೋ ರಾಜಾ ಭವಿಷ್ಯತಿ ॥ ೧೨

ಕ್ರಿಯತಾಂ ಶಿಲ್ಪಿಭಿಃ ಪಂಥಾಃ ಸಮಾನಿ ವಿಷಮಾಣಿ ಚ ।
ರಕ್ಷಿಣಶ್ಚಾನುಸಂಯಾಂತು ಪಥಿ ದುರ್ಗವಿಚಾರಕಾಃ ॥ ೧೩

ಏವಂ ಸಂಭಾಷಮಾಣಂ ತಂ ರಾಮಹೇತೋರ್ನೃಪಾತ್ಮಜಮ್ ।
ಪ್ರತ್ಯುವಾಚ ಜನಃ ಸರ್ವಃ ಶ್ರೀಮದ್ವಾಕ್ಯಮನುತ್ತಮಮ್ ॥ ೧೪

ಏವಂ ತೇ ಭಾಷಮಾಣಸ್ಯ ಪದ್ಮಾ ಶ್ರೀರುಪತಿಷ್ಠತಾಮ್ ।
ಯಸ್ತ್ವಂ ಜ್ಯೇಷ್ಠೇ ನೃಪಸುತೇ ಪೃಥಿವೀಂ ದಾತುಮಿಚ್ಛಸಿ ॥ ೧೫

ಅನುತ್ತಮಂ ತದ್ವಚನಂ ನೃಪಾತ್ಮಜ-
ಪ್ರಭಾಷಿತಂ ಸಂಶ್ರವಣೇ ನಿಶಮ್ಯ ಚ ।
ಪ್ರಹರ್ಷಜಾಸ್ತಂ ಪ್ರತಿ ಬಾಷ್ಪಬಿಂದವೋ
ನಿಪೇತುರಾರ್ಯಾನನನೇತ್ರಸಂಭವಾಃ ॥ ೧೬

ಯಜ್ಞಶಾಲೆಯಿಂದ ಅಗ್ನಿಹೋತ್ರಗೃಹಕ್ಕೆ ಅಗ್ನಿಯನ್ನು ತರುವಂತೆ, ಶ್ರೀರಾಮನನ್ನು ಇಲ್ಲಿಗೆ ಕರೆದುಕೊಂಡು ಬರುವೆನು. ನನ್ನ ತಾಯಿಯೆನಿಸಿಕೊಂಡವಳ ಆಸೆಯನ್ನು ಮಾತ್ರ ನಾನು ಎಂದಿಗೂ ನಡೆಸತಕ್ಕವನಲ್ಲ. ದುರ್ಗಮವಾದ ಕಾಡಿನಲ್ಲಿ ನಾನೇ ವಾಸಮಾಡುತ್ತೇನೆ. ಶ್ರೀರಾಮನೇ ರಾಜನಾಗುತ್ತಾನೆ (೧೧-೧೨). ಆದ್ದರಿಂದ, ಕಾಡಿಗೆ ಹೋಗುವ ದಾರಿಯನ್ನು ಉತ್ತಮಪಡಿಸುವಂತೆ ಕಾರ್ಮಿಕರಿಗೆ ಆಜ್ಞಾಪಿಸಿರಿ. ಹಳ್ಳತಿಟ್ಟುಗಳನ್ನು ಸರಿಪಡಿಸಲಿ. ದಾರಿಯಲ್ಲಿ ಅಪಾಯಕರವಾದ ಪ್ರದೇಶವನ್ನು ವಿಚಾರಿಸಿಕೊಳ್ಳುವುದಕ್ಕಾಗಿ ರಕ್ಷಣಾಪಡೆಯವರು ನಿರ್ಗಮಿಸಲಿ'' ಎಂದು ಹೇಳಿದನು (೧೩). ಹೀಗೆ ಶ್ರೀರಾಮನನ್ನು ಗೌರವಿಸಿ ಅವನ ಪರವಾಗಿ ಮಾತನಾಡಿದ ಭರತನನ್ನು ಅಲ್ಲಿದ್ದ ಸಮಸ್ತ ಜನರೂ ಕೊಂಡಾಡುತ್ತ ''ಹೇ ರಾಜಕುಮಾರ, ನಿನ್ನ ಅಣ್ಣನಿಗೆ ಈ ಪೃಥ್ವಿಯನ್ನು ಅರ್ಪಿಸಲು ಉದ್ದೇಶಿಸಿದ್ದೀಯಲ್ಲ! ಹೀಗೆ ಮಾತನಾಡುವ ನಿನಗೆ ಪದ್ಮ ಹಸ್ತೆಯಾದ ಲಕ್ಷ್ಮೀದೇವಿಯು ಒಲಿಯಲಿ'' ಎಂದು ಅವನಿಗೆ ಶ್ರೇಯಸ್ಸನ್ನು ಕೋರಿದರು (೧೪-೧೫). ಶ್ರೀರಾಮನೇ ರಾಜನಾಗಬೇಕು ಎಂಬ ಭರತನ ದೃಢನಿರ್ಧಾರದ ಮಾತನ್ನು ಕೇಳಿ, ಅಲ್ಲಿ ನೆರೆದಿದ್ದ ಸಜ್ಜನರ ಕಣ್ಣುಗಳಿಂದ ಆನಂದಬಾಷ್ಪಗಳು ತುಳುಕಿದವು (೧೬). ಮಂತ್ರಿಗಳೂ ಸಭಾಸದರೂ ನಿಶ್ಚಿಂತರಾಗಿ ಸಂತೋಷದಿಂದ ಉಬ್ಬಿದರು.

ಊಚುಸ್ತೇ ವಚನಮಿದಂ ನಿಶಮ್ಯ ಹೃಷ್ಟಾಃ
ಸಾಮಾತ್ಯಾಃ ಸಪರಿಷದೋ ವಿಯಾತಶೋಕಾಃ ।
ಪಂಥಾನಂ ನರವರ ಭಕ್ತಿಮಾನ್ ಜನಶ್ಚ
ವ್ಯಾದಿಷ್ಟಸ್ತವ ವಚನಾಚ್ಚ ಶಿಲ್ಪಿವರ್ಗಃ ॥ ೧೭

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕೋನಾಶೀತಿತಮಃ ಸರ್ಗಃ

ಅಶೀತಿತಮಃ ಸರ್ಗಃ

ಮಾರ್ಗಸಂಸ್ಕಾರಃ

ಅಥ ಭೂಮಿಪ್ರದೇಶಜ್ಞಾಃ ಸೂತ್ರಕರ್ಮವಿಶಾರದಾಃ
ಸ್ವಕರ್ಮಾಭಿರತಾಃ ಶೂರಾಃ ಖನಕಾ ಯಂತ್ರಕಾಸ್ತಥಾ ॥ ೧
ಕರ್ಮಾಂತಿಕಾಃ ಸ್ಥಪತಯಃ ಪುರುಷಾ ಯಂತ್ರಕೋವಿದಾಃ ।
ತಥಾ ವರ್ಧಕಯಶ್ಚೈವ ಮಾರ್ಗಿಣೋ ವೃಕ್ಷತಕ್ಷಕಾಃ ॥ ೨

ಮಂತ್ರಿಗಳು ಭರತನನ್ನು ಕುರಿತು "ರಾಜಪುತ್ರ, ನಿನ್ನ ಆದೇಶದಂತೆ ರಾಜಭಕ್ತಿಯುಳ್ಳ ರಕ್ಷಣಾಪಡೆಯವರಿಗೂ ಕಾರ್ಮಿಕರಿಗೂ ಆಜ್ಞೆ ಮಾಡಿದ್ದೇವೆ' ಎಂದು ನುಡಿದರು (೧೭).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಎಪ್ಪತ್ತೊಂಬತ್ತನೆಯ ಸರ್ಗ

ಸರ್ಗ ೮೦

ಅಯೋಧ್ಯೆಯಿಂದ ಗಂಗಾನದಿಯವರೆಗೆ ಮಾರ್ಗವನ್ನು ಸರಿಪಡಿಸುವುದು.

ಅನಂತರ ಭೂಪ್ರದೇಶದ ಸ್ಥಿತಿಯನ್ನು ಬಲ್ಲವರೂ ಸೂತ್ರಪಾತವನ್ನು ಮಾಡಿ ಶಿಬಿರಗಳನ್ನು ನಿರ್ಮಿಸತಕ್ಕವರೂ ಮಾರ್ಗರಕ್ಷಣೆಯಲ್ಲಿ ದಕ್ಷರಾದ ಕರ್ಮನಿಷ್ಠರೂ ನೆಲವನ್ನು ಅಗೆಯತಕ್ಕವರೂ ನೌಕೆ ಮುಂತಾದ ಯಂತ್ರಗಳನ್ನು ನಿರ್ಮಿಸತಕ್ಕವರೂ ರಸ್ತೆಯ ಕಾರ್ಯಕ್ಕಾಗಿ ನಗರದಿಂದ ಹೊರಟರು (೧). ಹಾಗೆಯೇ ಕೂಲಿಕಾರರೂ ಯಂತ್ರಗಳನ್ನು ಮಾಡುವ ಪ್ರಧಾನ ಶಿಲ್ಪಿಗಳೂ ಬಡಗಿಗಳೂ ರಸ್ತೆಯ ವಿಧಾನವನ್ನು

ಕೂಪಕಾರಾಃ ಸುಧಾಕಾರಾ ವಂಶಕರ್ಮಕೃತಸ್ತಥಾ ।
ಸಮರ್ಥಾ ಯೇ ಚ ದ್ರಷ್ಟಾರಃ ಪುರತಸ್ತೇ ಪ್ರತಸ್ಥಿರೇ ॥ ೩

ಸ ತು ಹರ್ಷಾತ್ತ ಮುದ್ದೇಶಂ ಜನೌಘೋ ವಿಪುಲಃ ಪ್ರಯಾನ್ ।
ಅಶೋಭತ ಮಹಾವೇಗಃ ಸಮುದ್ರ ಇವ ಪರ್ವಣಿ ॥ ೪

ತೇ ಸ್ವವಾರಂ ಸಮಾಸ್ಥಾಯ ವರ್ತ್ಮಕರ್ಮಣಿ ಕೋವಿದಾಃ ।
ಕರಣೈರ್ವಿವಿಧೋಪೇತೈಃ ಪುರಸ್ತಾತ್ ಸಂಪ್ರತಸ್ಥಿರೇ ॥ ೫

ಲತಾ ವಲ್ಲೀಶ್ಚ ಗುಲ್ಮಾಂಶ್ಚ ಸ್ಥಾಣೂನಶ್ಮನ ಏವ ಚ ।
ಜನಯಾಂಚಕ್ರಿರೇ ಮಾರ್ಗಂ ಛಿಂದಂತೋ ವಿವಿಧಾನ್ ದ್ರುಮಾನ್ ॥

ಅವೃಕ್ಷೇಷು ಚ ದೇಶೇಷು ಕೇಚಿದ್ವೃಕ್ಷಾನರೋಪಯನ್ ।
ಕೇಚಿತ್ ಕುಠಾರೈಷ್ಟಂಕೈಶ್ಚ ದಾತ್ರೈಶ್ಛಿಂದನ್ ಕ್ವಚಿತ್ ಕ್ವಚಿತ್ ॥ ೭

ಗೊತ್ತುಪಡಿಸತಕ್ಕವರೂ ಮರಗಳನ್ನು ಕಡಿಯತಕ್ಕವರೂ ಹೊರಟರು (೨). ಅವರೊಡನೆ ಬಾವಿಗಳನ್ನು ತೋಡತಕ್ಕವರೂ ಸುಣ್ಣಬಳಿಯುವವರೂ ಬಿದಿರಿನ ಕೆಲಸ ಮಾಡುವ ಮೇದರೂ ಅವರೆಲ್ಲರ ಮೇಲ್ವಿಚಾರಣೆಯನ್ನು ನೋಡಿಕೊಳ್ಳತಕ್ಕ ವೀಕ್ಷಕರೂ ಹೋದರು (೩). ಈ ರೀತಿಯಲ್ಲಿ ಕೆಲಸ ಮಾಡಲು ಆ ಸ್ಥಳಕ್ಕೆ ಒಂದು ದೊಡ್ಡ ಜನಸ್ತೋಮವೇ ಉತ್ಸಾಹದಿಂದ ಹೋಗುತ್ತಿರಲು, ಪರ್ವಕಾಲದಲ್ಲಿ ಮಹಾವೇಗದಿಂದ ನುಗ್ಗಿ ಬರುವ ಸಮುದ್ರದಂತೆ ಅದು ಕಾಣಿಸಿತು. ರಸ್ತೆಯ ಕೆಲಸದಲ್ಲಿ ನಿಪುಣರಾದ ಆ ಜನರು ವಿವಿಧೋಪಕರಣಗಳನ್ನು ಹೊತ್ತುಕೊಂಡು ತಮ್ಮ ತಮ್ಮ ಗುಂಪಿನೊಡನೆ ಮುಂದೆ ಹೋದರು (೪-೫). ಅವರು ದಾರಿಗೆ ಅಡ್ಡಲಾಗಿದ್ದ ಕೊಂಬೆಗಳನ್ನೂ ಬಳ್ಳಿಗಳನ್ನೂ ಕತ್ತರಿಸಿ ಪೊದೆಗಳನ್ನು ಕಿತ್ತೊಗೆದು ಮುಳ್ಳುಗಳನ್ನು ತೆಗೆದುಹಾಕಿ ಬಂಡೆಗಳನ್ನು ತೆಗೆದೊತ್ತಿ ಮರಗಳನ್ನು ಕಡಿದು ಮಾರ್ಗವನ್ನು ನಿರ್ಮಿಸುತ್ತ ಹೋದರು (೬). ಮರಗಳಿಲ್ಲದ ಸ್ಥಳದಲ್ಲಿ ನೆರಳಿಗೋಸ್ಕರ ಗಿಡಗಳನ್ನು ನೆಟ್ಟರು. ಕೆಲವರು ಕೊಡಲಿ, ಕಲ್ಲುಳಿ, ಕುಡುಗೋಲುಗಳಿಂದ ಕತ್ತರಿಸಬೇಕಾದವುಗಳನ್ನು ಕತ್ತರಿಸಿದರು. ಕೆಲವು ಬಲಶಾಲಿಗಳು ಬಲವಾಗಿ ಬೇರುಬಿಟ್ಟಿದ್ದ ಹುಲ್ಲಿನ ಪೊದೆಗಳನ್ನು ಕಿತ್ತೆಸೆದರು. ಹಳ್ಳತಿಟ್ಟುಗಳನ್ನು

ಅಪರೇ ವೀರಣಸ್ತಂಭಾನ್ ಬಲಿನೋ ಬಲವತ್ತರಾಃ ।
ವಿಧಮಂತಿ ಸ್ಮ ದುರ್ಗಾಣಿ ಸ್ಥಲಾನಿ ಚ ತತಸ್ತತಃ ॥ ೮
ಅಪರೇಽಪೂರಯನ್ ಕೂಪಾನ್ ಪಾಂಸುಭಿಃ ಶ್ವಭ್ರಮಾಯತಮ್ ।
ನಿಮ್ನಭಾಗಾಂಸ್ತತಃ ಕೇಚಿತ್ ಸಮಾಂಶ್ಚಕ್ರುಃ ಸಮಂತತಃ ॥ ೯
ಬಬಂಧುರ್ಬಂಧನೀಯಾಂಶ್ಚ ಕ್ಷೋದ್ಯಾನ್ ಸಂಚುಕ್ಷುದುಸ್ತದಾ ।
ಬಿಭಿದುರ್ಭೇದನೀಯಾಂಶ್ಚ ತಾಂಸ್ತಾನ್ ದೇಶಾನ್ನರಾಸ್ತದಾ ॥ ೧೦
ಅಚಿರೇಣೈವ ಕಾಲೇನ ಪರಿವಾಹಾನ್ ಬಹೂದಕಾನ್ ।
ಚಕ್ರುರ್ಬಹುವಿಧಾಕಾರಾನ್ ಸಾಗರಪ್ರತಿಮಾನ್ ಬಹೂನ್ ॥ ೧೧
ನಿರ್ಜಲೇಷು ಚ ದೇಶೇಷು ಖಾನಯಾಮಾಸುರುತ್ತಮಾನ್ ।
ಉದಪಾನಾನ್ ಬಹುವಿಧಾನ್ ವೇದಿಕಾಪರಿಮಂಡಿತಾನ್ ॥ ೧೨
ಸ ಸುಧಾಕುಟ್ಟಿಮತಲಃ ಪ್ರಪುಷ್ಪಿತಮಹೀರುಹಃ ।
ಮತ್ತೋದ್ಘುಷ್ಟದ್ವಿಜಗಣಃ ಪತಾಕಾಭಿರಲಂಕೃತಃ ॥ ೧೩
ಚಂದನೋದಕಸಂಸಿಕ್ತೋ ನಾನಾಕುಸುಮಭೂಷಿತಃ ।
ಬಹ್ವಶೋಭತ ಸೇನಾಯಾಃ ಪಂಥಾಃ ಸುರಪಥೋಪಮಃ ॥ ೧೪

ಸರಿಪಡಿಸಿದರು (೭-೮). ಕೆಲವರು ದಾರಿಯಲ್ಲಿದ್ದ ಗುಂಡಿಗಳನ್ನೂ ಅಗಲವಾದ ಕೊರಕಲನ್ನೂ ಮಣ್ಣಿನಿಂದ ಮುಚ್ಚಿದರು. ತಗ್ಗುನೆಲವನ್ನು ಸಮವಾಗಿ ಮಾಡಿದರು. ಕಟ್ಟಬೇಕಾದ ಸೇತುವೆಗಳನ್ನು ಕಟ್ಟಿ, ಕಲ್ಲರೆಗಳನ್ನು ಒಡೆದು, ನೀರು ಹರಿಯಲು ಚರಂಡಿಗಳನ್ನು ತೋಡಿದರು (೯-೧೦). ಸಣ್ಣ ಹಳ್ಳಗಳಿಗೆ ಆಣೆಕಟ್ಟನ್ನು ಕಟ್ಟಿ ಸಮುದ್ರದಂತೆ ನೀರು ತುಂಬಿದ ವಿವಿಧಾಕಾರದ ಕೊಳಗಳನ್ನು ಅತಿಶೀಘ್ರವಾಗಿ ನಿರ್ಮಿಸಿದರು. ನಿರ್ಜಲವಾದ ಪ್ರದೇಶದಲ್ಲಿ ಸೋಪಾನಗಳಿರುವ ಬಾವಿಗಳನ್ನು ತೋಡಿದರು (೧೧-೧೨). ಭರತನ ಸೈನ್ಯವು ನಡೆದುಬರತಕ್ಕ ದಾರಿಯಲ್ಲಿ ಸುಣ್ಣದ ನೀರನ್ನು ಚೆಲ್ಲಿ ನೆಲವನ್ನು ಬಡಿದು ಅಚ್ಚುಕಟ್ಟು ಮಾಡಿದರು. ಮರಗಳು ಅರಳಿಹೂಬಿಟ್ಟಿದ್ದವು. ಮದಿಸಿದ ಪಕ್ಷಿಗಳು ಕೂಗುತ್ತಿದ್ದವು. ಧ್ವಜಪಟಗಳಿಂದ ರಸ್ತೆಯನ್ನು ಅಲಂಕರಿಸಿದ್ದರು. ಸುಗಂಧದ ನೀರನ್ನು ಚೆಲ್ಲಿ ಹೂಗಳನ್ನು ಎರಚಿದ್ದರು. ಆ ದಾರಿಯು ದೇವಲೋಕದ ಮಾರ್ಗದಂತೆ ಚೆಲುವಾಯಿತು (೧೩-೧೪). ಹೀಗೆ ದಾರಿಯು

ಆಜ್ಞಾಪ್ಯಾಥ ಯಥಾಜ್ಞಪ್ತಿ ಯುಕ್ತಾಸ್ತೇಽಧಿಕೃತಾ ನರಾಃ ।
ರಮಣೀಯೇಷು ದೇಶೇಷು ಬಹುಸ್ವಾದುಫಲೇಷು ಚ ॥ ೧೫

ಯೋ ನಿವೇಶಸ್ತ್ವಭಿಮತೋ ಭರತಸ್ಯ ಮಹಾತ್ಮನಃ ।
ಭೂಯಸ್ತಂ ಶೋಭಯಾಮಾಸುರ್ಭೂಷಾಭಿರ್ಭೂಷಣೋಪಮಮ್

ನಕ್ಷತ್ರೇಷು ಪ್ರಶಸ್ತೇಷು ಮುಹೂರ್ತೇಷು ಚ ತದ್ವಿದಃ ।
ನಿವೇಶಾನ್ ಸ್ಥಾಪಯಾಮಾಸುರ್ಭರತಸ್ಯ ಮಹಾತ್ಮನಃ ॥ ೧೭

ಬಹುಪಾಂಸುಚಯಾಶ್ಚಾಪಿ ಪರಿಖಾಪರಿವಾರಿತಾಃ ।
ತತ್ರೇಂದ್ರಕೀಲಪ್ರತಿಮಾಃ ಪ್ರತೋಲೀವರಶೋಭಿತಾಃ ॥ ೧೮

ಪ್ರಾಸಾದಮಾಲಾ ವಿತತಾಃ ಸೌಧಪ್ರಾಕಾರಸಂವೃತಾಃ ।
ಪತಾಕಾಶೋಭಿತಾಃ ಸರ್ವೇ ಸುನಿರ್ಮಿತಮಹಾಪಥಾಃ ॥ ೧೯

ವಿತರ್ದಿಭಿರಿವಾಕಾಶೇ ವಿಟಂಕಾಗ್ರವಿಮಾನಕೈಃ ।
ಸಮುಚ್ಛ್ರಿತೈರ್ನಿವೇಶಾಸ್ತೇ ಬಭುಃ ಶಕ್ರಪುರೋಪಮಾಃ ॥ ೨೦

ಸಿದ್ಧವಾದ ಮೇಲೆ ಅಧಿಕಾರಿಗಳು ಭರತನ ಆಜ್ಞೆಯಂತೆ ಉತ್ತಮವಾದ ಸಿಹಿನೀರು ಮತ್ತು ಹಣ್ಣುಗಳು ದೊರಕುವ ಸುಂದರ ಪ್ರದೇಶಗಳಲ್ಲಿ ಶಿಬಿರಗಳನ್ನು ನಿರ್ಮಿಸಿ ಮೇಲುಕಟ್ಟು ಮೊದಲಾದವುಗಳನ್ನು ಉಪಯೋಗಿಸಿ ಅಲಂಕಾರ ಮಾಡಿದರು. ಆ ಶಿಬಿರಗಳು ರಸ್ತೆಗೆ ಭೂಷಣಪ್ರಾಯವಾದವು (೧೫-೧೬). ವಾಸ್ತುಶಿಲ್ಪತಜ್ಞರು ಶುಭನಕ್ಷತ್ರಗಳಲ್ಲಿ ಆ ಶಿಬಿರಗಳನ್ನು ಸ್ಥಾಪಿಸಿದ್ದರು. ಆ ಗುಡಾರಗಳಲ್ಲಿ ನುಣ್ಣನೆಯ ಮಣ್ಣನ್ನು ಹರಡಿ ಸುತ್ತಲೂ ಕಾಲುವೆಗಳನ್ನು ಅಗೆದು ಉತ್ತಮವಾದ ರಸ್ತೆಗಳನ್ನು ಏರ್ಪಡಿಸಿದ್ದರು. ಆ ಗುಡಾರಗಳು ಇಂದ್ರಕೀಲ ಪರ್ವತದಂತೆ ಶೋಭಿಸುತ್ತಿದ್ದವು (೧೭-೧೮). ಆ ಶಿಬಿರಗಳಲ್ಲಿ ದೇವಪೂಜಾ ಗೃಹಗಳಿದ್ದವು. ಸುತ್ತಲಿರುವ ಪ್ರಾಕಾರಗಳಿಗೆ ಸುಣ್ಣವನ್ನು ಬಳಿದಿದ್ದರು. ಪತಾಕೆಗಳಿಂದ ಅಲಂಕರಿಸಿದ್ದರು. ಅಲ್ಲಲ್ಲಿ ರಾಜಮಾರ್ಗಗಳನ್ನು ರಚಿಸಿದ್ದರು. ಸೂರುಗಳಿಂದ ಕೂಡಿದ ಉನ್ನತ ಗೃಹಗಳು ಆಕಾಶದಲ್ಲಿರುವ ವೇದಿಕೆಗಳೋ ಎಂಬಂತೆ ಕಾಣುತ್ತಿದ್ದವು. ಆ ಶಿಬಿರಗಳು ಅಮರಾವತಿಯಂತೆ ವೈಭವದಿಂದ ಒಪ್ಪುತ್ತಿದ್ದವು (೧೯-೨೦). ನಾನಾ ಬಗೆಯ ಮರಗಳಿರುವ ಕಾಡುಗಳಿಂದಲೂ ತಣ್ಣನೆಯ

ಜಾಹ್ನವೀಂ ತು ಸಮಾಸಾದ್ಯ ವಿವಿಧದ್ರುಮಕಾನನಾಮ್ ।
ಶೀತಲಾಮಲಪಾನೀಯಾಂ ಮಹಾಮೀನಸಮಾಕುಲಾಮ್ ॥ ೨೧

ಸಚಂದ್ರತಾರಾಗಣಮಂಡಿತಂ ಯಥಾ
ನಭಃ ಕ್ಷಪಾಯಾಮಮಲಂ ವಿರಾಜತೇ ।
ನರೇಂದ್ರಮಾರ್ಗಃ ಸ ತಥಾ ವ್ಯರಾಜತ
ಕ್ರಮೇಣ ರಮ್ಯಃ ಶುಭಶಿಲ್ಪಿನಿರ್ಮಿತಃ ॥ ೨೨

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಅಶೀತಿತಮಃ ಸರ್ಗಃ

ತಿಳಿನೀರಿನಿಂದಲೂ ಮೀನುಗಳಿಂದಲೂ ರಮಣೀಯವಾದ ಗಂಗಾನದಿಯವರೆಗೆ ರಾಜಮಾರ್ಗವು ನಿರ್ಮಿತವಾಯಿತು. ಉತ್ತಮ ಶಿಲ್ಪಿಗಳಿಂದ ನಿರ್ಮಿತವಾದ ಆ ಮಾರ್ಗವು, ರಾತ್ರಿಯಲ್ಲಿ ಚಂದ್ರನಿಂದಲೂ ತಾರಾಪುಂಜದಿಂದಲೂ ರಂಜಿತವಾಗಿ ನಿರ್ಮಲವಾದ ಆಕಾಶದಂತೆ ಮನೋಹರವಾಯಿತು (೨೧-೨೨).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಎಂಬತ್ತನೆಯ ಸರ್ಗ

ಏಕಾಶೀತಿತಮಃ ಸರ್ಗಃ

ಸಭಾಸ್ಥಾನಮ್

ತತೋ ನಾಂಧೀಮುಖೀಂ ರಾತ್ರಿಂ ಭರತಂ ಸೂತಮಾಗಧಾಃ ।
ತುಷ್ಟುವುರ್ವಾಗ್ವಿಶೇಷಜ್ಞಾಃ ಸ್ತವೈರ್ಮಂಗಲಸಂಹಿತೈಃ ॥ ೧

ಸುವರ್ಣಕೋಣಾಭಿಹತಃ ಪ್ರಾಣದದ್ಯಾಮದುಂದುಭಿಃ ।
ದಧ್ಮುಃ ಶಂಖಾಂಶ್ಚ ಶತಶೋ ವಾದ್ಯಾಂಶ್ಚೋಚ್ಚಾವಚಸ್ವರಾನ್ ॥ ೨

ಸ ತೂರ್ಯಘೋಷಃ ಸುಮಹಾನ್ ದಿವಮಾಪೂರಯನ್ನಿವ ।
ಭರತಂ ಶೋಕಸಂತಪ್ತಂ ಭೂಯಃ ಶೋಕೈರರಂಧ್ರಯತ್ ॥ ೩

ತತಃ ಪ್ರಬುದ್ಧೋ ಭರತಸ್ತಂ ಘೋಷಂ ಸಂನಿವರ್ತ್ಯ ಚ ।
ನಾಹಂ ರಾಜೇತಿ ಚಾಪ್ಯುಕ್ತ್ವಾ ಶತ್ರುಘ್ನಮಿದಮಬ್ರವೀತ್ ॥ ೪

ಪಶ್ಯ ಶತ್ರುಘ್ನ ಕೈಕೇಯ್ಯಾ ಲೋಕಸ್ಯಾಪಕೃತಂ ಮಹತ್ ।
ವಿಸೃಜ್ಯ ಮಯಿ ದುಃಖಾನಿ ರಾಜಾ ದಶರಥೋ ಗತಃ ॥ ೫

ಸರ್ಗ ೮೧

ವಸಿಷ್ಠರು ರಾಜಸಭೆಗೆ ಬಂದು ಭರತಶತ್ರುಘ್ನರನ್ನು ಕರೆಸುವುದು.

ಹದಿನಾಲ್ಕನೆಯ ದಿನ ಪುಣ್ಯಾಹವಾಚನವನ್ನು ಮಾಡಿಸಿ ಶುಭಸ್ವೀಕಾರವನ್ನು ಮಾಡಲಾಯಿತು. ಆ ರಾತ್ರಿಯು ಕಳೆಯುತ್ತಿರುವಾಗ ವಾಗ್ವಿಶಾರದರಾದ ಸೂತಮಾಗಧರು ಮಂಗಳಸ್ತೋತ್ರವನ್ನು ಹಾಡಿದರು. ಯಾಮಸೂಚಕವಾದ ದುಂದುಭಿವಾದ್ಯಗಳನ್ನು ಚಿನ್ನದ ಕೋಲುಗಳಿಂದ ಬಾರಿಸಿ ಮೊಳಗಿಸಿದರು. ಶಂಖಗಳನ್ನು ಊದುತ್ತ ನಾನಾ ಬಗೆಯ ವಾದ್ಯಗಳನ್ನು ನುಡಿಸಲಾರಂಭಿಸಿದರು (೧-೨). ಆ ವಾದ್ಯಘೋಷವು ಆಕಾಶವನ್ನು ವ್ಯಾಪಿಸಿತು. ಮೊದಲೇ ಶೋಕಸಂತಪ್ತನಾಗಿದ್ದ ಭರತನಿಗೆ, ಅದು ಇನ್ನೂ ದುಃಖವನ್ನುಂಟುಮಾಡಿ ಕಿವಿಯನ್ನು ಕೊರೆಯಿತು. ಎಚ್ಚೆತ್ತ ಭರತನು ಕೂಡಲೆ ''ವಾದ್ಯಘೋಷವನ್ನು ನಿಲ್ಲಿಸಿರಿ, ನಾನೇನೂ ರಾಜನಲ್ಲ'' ಎಂದು ಹೇಳಿ ಆ ಘೋಷವನ್ನು ನಿಲ್ಲಿಸಿದನು (೩-೪). ಅವನು ಶತ್ರುಘ್ನನನ್ನು ಕುರಿತು ''ನೋಡು ಶತ್ರುಘ್ನ, ಕೈಕೇಯಿಯು ಜನರಿಗೆ ಎಂಥ ಕೆಡುಕನ್ನು

ತಸ್ಯೈಷಾ ಧರ್ಮರಾಜಸ್ಯ ಧರ್ಮಮೂಲಾ ಮಹಾತ್ಮನಃ ।
ಪರಿಭ್ರಮತಿ ರಾಜಶ್ರೀರ್ನೌರಿವಾಕರ್ಣಿಕಾ ಜಲೇ ॥ ೬

ಯೋ ಹಿ ನಃ ಸುಮಹಾನ್ನಾಥಃ ಸೋಽಪಿ ಪ್ರವ್ರಾಜಿತೋ ವನಮ್ ।
ಅನಯಾ ಧರ್ಮಮುತ್ಸೃಜ್ಯ ಮಾತ್ರಾ ಮೇ ರಾಘವಃ ಸ್ವಯಮ್ ॥ ೭

ಇತ್ಯೇವಂ ಭರತಂ ಪ್ರೇಕ್ಷ್ಯ ವಿಲಪಂತಂ ವಿಚೇತನಮ್ ।
ಕೃಪಣಂ ರುರುದುಃ ಸರ್ವಾಃ ಸಸ್ವರಂ ಯೋಷಿತಸ್ತದಾ ॥ ೮

ತಥಾ ತಸ್ಮಿನ್ ವಿಲಪತಿ ವಸಿಷ್ಠೋ ರಾಜಧರ್ಮವಿತ್ ।
ಸಭಾಮಿಕ್ಷ್ವಾಕುನಾಥಸ್ಯ ಪ್ರವಿವೇಶ ಮಹಾಯಶಾಃ ॥ ೯

ಶಾತಕುಂಭಮಯೀಂ ರಮ್ಯಾಂ ಮಣಿರತ್ನಸಮಾಕುಲಾಮ್ ।
ಸುಧರ್ಮಾಮಿವ ಧರ್ಮಾತ್ಮಾ ಸಗಣಃ ಪ್ರತ್ಯಪದ್ಯತ ॥ ೧೦

ಸ ಕಾಂಚನಮಯಂ ಪೀಠಂ ಪರಾರ್ಧ್ಯಾಸ್ತರಣಾವೃತಮ್ ।
ಅಧ್ಯಾಸ್ತ ಸರ್ವವೇದಜ್ಞೋ ದೂತಾನನುಶಶಾಸ ಚ ॥ ೧೧

ತಂದಿಟ್ಟಳು! ಈ ಕಷ್ಟಗಳನ್ನು ನನ್ನ ಮೇಲೆ ಹೊರಿಸಿ ದಶರಥರಾಜನು ಹೊರಟುಹೋದನು. ಧರ್ಮರಾಜನೆನಿಸಿದ್ದ ಆ ಮಹಾತ್ಮನು ಧರ್ಮದಿಂದ ರಕ್ಷಿಸುತ್ತಿದ್ದ ರಾಜ್ಯಲಕ್ಷ್ಮಿಯು ಆಶ್ರಯವಿಲ್ಲದೆ ಅಲೆಯುತ್ತಿದೆ. ನೀರಿನಲ್ಲಿ ನಾವಿಕನಿಲ್ಲದ ದೋಣಿಯಂತೆ ತೊಳಲುತ್ತಿದೆ (೫-೬). ನಮ್ಮೆಲ್ಲರಿಗೂ ನಾಥನಾಗಿ ರಕ್ಷಿಸಬಲ್ಲ ಮಹಾತ್ಮನು ಕಾಡಿಗೆ ಹೋದನು. ನನ್ನ ತಾಯಿ ಧರ್ಮವನ್ನು ಕಡೆಗಣಿಸಿ ಶ್ರೀರಾಮನನ್ನು ಕಾಡಿಗೆ ಕಳಿಸಿದಳು'' ಎಂದು ಹೇಳಿ ಮತ್ತೆ ಅಳಲಾರಂಭಿಸಿದನು. ಮೈಮೇಲೆ ಪ್ರಜ್ಞೆಯಿಲ್ಲದಂತೆ ಗೋಳಾಡುತ್ತಿದ್ದ ಭರತನನ್ನು ನೋಡಿ ಅಂತಃಪುರದ ಸ್ತ್ರೀಯರೆಲ್ಲರೂ ಗಟ್ಟಿಯಾಗಿ ರೋದಿಸತೊಡಗಿದರು (೭-೮). ಆ ಸಮಯದಲ್ಲಿ ರಾಜಧರ್ಮಜ್ಞರಾದ ವಸಿಷ್ಠಮುನಿಗಳು ರಾಜಸಭೆಯನ್ನು ಪ್ರವೇಶಿಸಿದರು. ದೇವೇಂದ್ರನ ಸುಧರ್ಮಸಭೆಯಂತೆ ಸುವರ್ಣಮಯವಾಗಿಯೂ ವಿವಿಧರತ್ನಭೂಷಿತರಾಗಿಯೂ ರಮಣೀಯವಾಗಿ ಒಪ್ಪುತ್ತಿದ್ದ ಆಸ್ಥಾನಮಂಟಪಕ್ಕೆ ವಸಿಷ್ಠರು ಶಿಷ್ಯಪರಿವಾರದೊಡನೆ ಬಂದರು (೯-೧೦). ಸಮಸ್ತ ವೇದಗಳನ್ನೂ ಅರಿತಿದ್ದ ಆ ಮುನಿಗಳು ಶ್ರೇಷ್ಠವಾದ

ಬ್ರಾಹ್ಮಣಾನ್ ಕ್ಷತ್ರಿಯಾನ್ ವೈಶ್ಯಾನಮಾತ್ಯಾನ್ ಗಣವಲ್ಲಭಾನ್ ।
ಕ್ಷಿಪ್ರಮಾನಯತಾವ್ಯಗ್ರಾಃ ಕೃತ್ಯಮಾತ್ಯಯಿಕಂ ಹಿ ನಃ ॥ ೧೨

ಸರಾಜಪುತ್ರಂ ಶತ್ರುಘ್ನಂ ಭರತಂ ಚ ಯಶಸ್ವಿನಮ್ ।
ಯುಧಾಜಿತಂ ಸುಮಂತ್ರಂ ಚ ಯೇ ಚ ತತ್ರ ಹಿತಾ ಜನಾಃ ॥ ೧೩

ತತೋ ಹಲಹಲಾಶಬ್ದಃ ಸುಮಹಾನ್ ಸಮಪದ್ಯತ ।
ರಥೈರಶ್ವೈರ್ಗಜೈಶ್ಚಾಪಿ ಜನಾನಾಮುಪಗಚ್ಛತಾಮ್ ॥ ೧೪

ತತೋ ಭರತಮಾಯಾಂತಂ ಶತಕ್ರತುಮಿವಾಮರಾಃ ।
ಪ್ರತ್ಯನಂದನ್ ಪ್ರಕೃತಯೋ ಯಥಾ ದಶರಥಂ ತಥಾ ॥ ೧೫

ಹ್ರದ ಇವ ತಿಮಿನಾಗಸಂವೃತಃ
ಸ್ತಿಮಿತಜಲೋ ಮಣಿಶಂಖಶರ್ಕರಃ ।

ಹೊದಿಕೆಯಿಂದ ಆವೃತವಾದ ಸುವರ್ಣಪೀಠದಲ್ಲಿ ಕುಳಿತು ರಾಜಭಟರನ್ನು ಕರೆದು "ಎಲೈ ದೂತರೆ, ಅಯೋಧ್ಯೆಯಲ್ಲಿರತಕ್ಕ ಬ್ರಾಹ್ಮಣ ಕ್ಷತ್ರಿಯ ವೈಶ್ಯರನ್ನೂ ಮಂತ್ರಿ ಸೇನಾಪತಿಗಳನ್ನೂ ಕೂಡಲೆ ಸಭೆಗೆ ಕರೆತನ್ನಿರಿ. ಆಲಸ್ಯ ಕೂಡದು. ನಮ್ಮ ಕಾರ್ಯವು ಶೀಘ್ರವಾಗಿ ನಡೆಯಬೇಕಾದ ಪ್ರಾಮುಖ್ಯವುಳ್ಳದ್ದು (೧೧-೧೨). ಅನ್ಯರಾಜಪುತ್ರರೊಂದಿಗೆ ಭರತಶತ್ರುಘ್ನರನ್ನೂ ಬರುವಂತೆ ತಿಳಿಸಿರಿ. ಯುಧಾಜಿತ್ತು, ಸುಮಂತ್ರ ಮತ್ತು ರಾಜ್ಯಹಿತೈಷಿಗಳಾದವರೆಲ್ಲರನ್ನೂ ಸಭೆಗೆ ಕರೆತನ್ನಿರಿ" ಎಂದು ಆಜ್ಞಾಪಿಸಿದರು (೧೩). ಅನಂತರ ಅಯೋಧ್ಯೆಯಲ್ಲಿದ್ದ ಜನರು, ರಥ ಅಶ್ವ ಗಜ ಮುಂತಾದ ವಾಹನಗಳನ್ನೇರಿ ಸಂಭ್ರಮದಿಂದ ರಾಜಸಭೆಗೆ ಬರತೊಡಗಲಾಗಿ, ನಗರದಲ್ಲಿ ಕೋಲಾಹಲ ಶಬ್ದವಾಯಿತು. ಅವರೆಲ್ಲರೂ ಬಂದಮೇಲೆ ಭರತನು ರಾಜಸಭೆಗೆ ಬಂದನು. ದೇವೇಂದ್ರನನ್ನು ದೇವತೆಗಳು ಸ್ವಾಗತಿಸುವಂತೆ ಸಭಾಸದರು ಅವನನ್ನು ಸ್ವಾಗತಿಸಿದರು. ಮೊದಲು ದಶರಥನನ್ನು ಗೌರವಿಸುತ್ತಿದ್ದಂತೆ ಗೌರವಿಸಿದರು

---

* ಇವನು ಭರತನ ಸೋದರಮಾವನಲ್ಲ, ಬೇರೊಬ್ಬ ಸಾಮಂತರಾಜನೊ ಮಂತ್ರಿಯೊ ಇರಬಹುದು.

ದಶರಥಸುತಶೋಭಿತಾ ಸಭಾ
ಸದಶರಥೇವ ಬಭೌ ಯಥಾ ಪುರಾ ॥ ೧೬

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕಾಶೀತಿತಮಃ ಸರ್ಗಃ

ದ್ವ್ಯಶೀತಿತಮಃ ಸರ್ಗಃ

ಸೇನಾಪ್ರಸ್ಥಾನಮ್

ತಾಮಾರ್ಯಗಣಸಂಪೂರ್ಣಾಂ ಭರತಃ ಪ್ರಗ್ರಹಾಂ ಸಭಾಮ್ ।
ದದರ್ಶ ಬುದ್ಧಿಸಂಪನ್ನಃ ಪೂರ್ಣಚಂದ್ರೋ ನಿಶಾಮಿವ ॥ ೧

ಆಸನಾನಿ ಯಥಾನ್ಯಾಯಮಾರ್ಯಾಣಾಂ ವಿಶತಾಂ ತದಾ ।
ವಸ್ತ್ರಾಂಗರಾಗಪ್ರಭಯಾ ದ್ಯೋತಿಕಾ ಸಾ ಸಭೋತ್ತಮಾ ॥ ೨

(೧೪-೧೫). ಆ ಸಭೆಯಲ್ಲಿ ಗೋಡೆಗಳ ಮೇಲೆ ತಿಮಿಂಗಿಲಗಳನ್ನೂ ನೀರಾನೆಗಳನ್ನೂ ಸರ್ಪಗಳನ್ನೂ ಚಿತ್ರಿಸಿದ್ದರು. ರತ್ನಗಳು ಶಂಖಗಳು ಮತ್ತು ಸುವರ್ಣದ ಪುಡಿಗಳಿಂದ ಅಲಂಕರಿಸಿದ್ದರು. ಸಭೆಯಲ್ಲಿದ್ದವರು ನಿಶ್ಚಲರಾಗಿ ಗಂಭೀರಭಾವದಿಂದ ಕುಳಿತಿದ್ದರು. ಆ ಸಭೆಯು ಸಮುದ್ರಮಧ್ಯದಲ್ಲಿ ತಿಮಿಂಗಿಲಾದಿಗಳಿಂದ ಪರಿವೃತವಾದ ಅಗಾಧವಾದ ಮಡುವಿನಂತೆ ಕಾಣುತ್ತಿತ್ತು. ಮೊದಲು ದಶರಥನಿಂದ ಯುಕ್ತವಾಗಿರುವಂತೆ, ಈಗ ದಶರಥಪುತ್ರನಿಂದ ಯುಕ್ತವಾಗಿದ್ದ ಸಭೆಯು ಹಿಂದಿನಂತೆಯೇ ಶೋಭಿಸಿತು (೧೬).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಎಂಬತ್ತೊಂದನೆಯ ಸರ್ಗ

ಸರ್ಗ ೮೨

ಭರತನು ಶ್ರೀರಾಮನನ್ನು ಕರೆತರಲು ವನಕ್ಕೆ ಹೋಗಬೇಕೆಂದೂ ಅದಕ್ಕಾಗಿ ಸೇನೆಯು ಸಿದ್ಧವಾಗಲೆಂದೂ ಆಜ್ಞಾಪಿಸುವುದು.

ಪೂರ್ಣಚಂದ್ರನು ರಾತ್ರಿಯನ್ನು ಪ್ರವೇಶಿಸುವಂತೆ, ಧೀಮಂತನಾದ ಭರತನು ಸಜ್ಜನರಿಂದ ಪೂರ್ಣವಾಗಿ ನಿಯಮಬದ್ಧವಾಗಿದ್ದ ಆ ಸಭೆಯನ್ನು ಪ್ರವೇಶಿಸಿ ಸುತ್ತಲೂ ನೋಡಿದನು (೧). ತಮ್ಮ ತಮ್ಮ ಪೀಠಗಳಲ್ಲಿ ಕುಳಿತುಕೊಳ್ಳುತ್ತಿದ್ದ ಮಹಾಜನರ

ಸಾ ವಿದ್ವಜ್ಜನಸಂಪೂರ್ಣಾ ಸಭಾ ಸುರುಚಿರಾ ತದಾ ।
ಅದೃಶ್ಯತ ಘನಾಪಾಯೇ ಪೂರ್ಣಚಂದ್ರೇವ ಶರ್ವರೀ ॥ ೩

ರಾಜ್ಞಸ್ತು ಪ್ರಕೃತೀಃ ಸರ್ವಾಃ ಸಮಗ್ರಾಃ ಪ್ರೇಕ್ಷ್ಯ ಧರ್ಮವಿತ್ ।
ಇದಂ ಪುರೋಹಿತೋ ವಾಕ್ಯಂ ಭರತಂ ಮೃದು ಚಾಬ್ರವೀತ್ ॥ ೪

ತಾತ ರಾಜಾ ದಶರಥಃ ಸ್ವರ್ಗತೋ ಧರ್ಮಮಾಚರನ್ ।
ಧನಧಾನ್ಯವತೀಂ ಸ್ಫೀತಾಂ ಪ್ರದಾಯ ಪೃಥಿವೀಂ ತವ ॥ ೫

ರಾಮಸ್ತಥಾ ಸತ್ಯಧೃತಿಃ ಸತಾಂ ಧರ್ಮಮನುಸ್ಮರನ್ ।
ನಾಜಹಾತ್ ಪಿತುರಾದೇಶಂ ಶಶೀ ಜ್ಯೋತ್ಸ್ನಾಮಿವೋದಿತಃ ॥ ೬

ಪಿತ್ರಾ ಭ್ರಾತ್ರಾ ಚ ತೇ ದತ್ತಂ ರಾಜ್ಯಂ ನಿಹತಕಂಟಕಮ್ ।
ತದ್ಭುಂಕ್ಷ್ವ ಮುದಿತಾಮಾತ್ಯಃ ಕ್ಷಿಪ್ರಮೇವಾಭಿಷೇಚಯ ॥ ೭

ಉದೀಚ್ಯಾಶ್ಚ ಪ್ರತೀಚ್ಯಾಶ್ಚ ದಾಕ್ಷಿಣಾತ್ಯಶ್ಚ ಕೇವಲಾಃ ।
ಕೋಟ್ಯಾಪರಾಂತಾಃ ಸಾಮುದ್ರಾ ರತ್ನಾನ್ಯಭಿಹರಂತು ತೇ ॥ ೮

ವಸ್ತ್ರಗಳಿಂದಲೂ ಚಂದನಾದ್ಯನುಲೇಪನಗಳಿಂದಲೂ ರಾಜಸಭೆಯು ಶೋಭಿಸುತ್ತಿತ್ತು. ವಿದ್ವಜ್ಜನರಿಂದ ತುಂಬಿ ವೈಭವೋಪೇತವಾದ ಆ ಸಭೆಯು ಶರತ್ಕಾಲದಲ್ಲಿ ಪೂರ್ಣಚಂದ್ರನಿಂದ ಕಂಗೊಳಿಸುವ ರಜನಿಯಂತೆ ರಮಣೀಯವಾಗಿತ್ತು (೨-೩). ಆಗ ಧರ್ಮಜ್ಞರಾದ ವಸಿಷ್ಠಮುನಿಗಳು ಸಮಸ್ತ ಪ್ರಜೆಗಳನ್ನೂ ಸಚಿವರನ್ನೂ ಒಂದು ಸಲ ನೋಡಿ ಭರತನನ್ನು ಕುರಿತು ಮೃದುವಚನದಿಂದ ಹೀಗೆ ಹೇಳಿದರು : "ವತ್ಸ-ಭರತ, ಧರ್ಮಮಾರ್ಗದಲ್ಲಿದ್ದ ದಶರಥಮಹಾರಾಜನು ಧನಧಾನ್ಯಗಳಿಂದ ಕೂಡಿ ವಿಶಾಲವಾಗಿರುವ ಈ ರಾಜ್ಯವನ್ನು ನಿನಗೆ ಒಪ್ಪಿಸಿ ಸ್ವರ್ಗಸ್ಥನಾದನು (೪-೫). ಶ್ರೀರಾಮನಾದರೊ ಸತ್ಯನಿಷ್ಠನಾಗಿ ಸಜ್ಜನಸಮ್ಮತವಾದ ಧರ್ಮಮಾರ್ಗವನ್ನು ಹಿಡಿದನು. ಅವನು ತಂದೆಯ ಆಜ್ಞೆಯನ್ನು ಮೀರಲಿಲ್ಲ. ಚಂದ್ರನು ಚಂದ್ರಿಕೆಯನ್ನು ಬಿಡದಂತೆ ತಂದೆಯ ಆಜ್ಞೆಯನ್ನು ಪಾಲಿಸಿದರು (೬). ನಿನ್ನ ತಂದೆಯೂ ಅಣ್ಣನೂ ನಿಷ್ಕಂಟಕವಾಗಿ ರಾಜ್ಯವನ್ನು ನಿನಗೆ ಬಿಟ್ಟುಕೊಟ್ಟಿದ್ದಾರೆ. ಆದ್ದರಿಂದ ನೀನು ಈ ರಾಜ್ಯವನ್ನು ಪಾಲಿಸು. ಮಂತ್ರಿಗಳಿಗೆ ಸಂತೋಷವನ್ನುಂಟುಮಾಡು. ಬೇಗನೆ ಪಟ್ಟಾಭಿಷಿಕ್ತನಾಗು (೭). ಉತ್ತರ, ಪಶ್ಚಿಮ, ದಕ್ಷಿಣ ಮತ್ತು ಪೂರ್ವಪ್ರದೇಶದ

ತಚ್ಛ್ರುತ್ವಾ ಭರತೋ ವಾಕ್ಯಂ ಶೋಕೇನಾಭಿಪರಿಪ್ಲುತಃ ।
ಜಗಾಮ ಮನಸಾ ರಾಮಂ ಧರ್ಮಜ್ಞೋ ಧರ್ಮಕಾಂಕ್ಷಯಾ ॥ ೯

ಸ ಬಾಷ್ಪಕಲಯಾ ವಾಚಾ ಕಲಹಂಸಸ್ವರೋ ಯುವಾ ।
ವಿಲಲಾಪ ಸಭಾಮಧ್ಯೇ ಜಗರ್ಹೇ ಚ ಪುರೋಹಿತಮ್ ॥ ೧೦

ಚರಿತಬ್ರಹ್ಮಚರ್ಯಸ್ಯ ವಿದ್ಯಾಸ್ನಾತಸ್ಯ ಧೀಮತಃ ।
ಧರ್ಮೇ ಪ್ರಯತಮಾನಸ್ಯ ಕೋ ರಾಜ್ಯಂ ಮದ್ವಿಧೋ ಹರೇತ್ ॥ ೧೧

ಕಥಂ ದಶರಥಾಜ್ಜಾತೋ ಭವೇದ್ರಾಜ್ಯಾಪಹಾರಕಃ ।
ರಾಜ್ಯಂ ಚಾಹಂ ಚ ರಾಮಸ್ಯ ಧರ್ಮಂ ವಕ್ತುಮಿಹಾರ್ಹಸಿ ॥ ೧೨

ಜ್ಯೇಷ್ಠಃ ಶ್ರೇಷ್ಠಶ್ಚ ಧರ್ಮಾತ್ಮಾ ದಿಲೀಪನಹುಷೋಪಮಃ ।
ಲಬ್ಧುಮರ್ಹತಿ ಕಾಕುತ್ಸ್ಥೋ ರಾಜ್ಯಂ ದಶರಥೋ ಯಥಾ ॥ ೧೩

ಅಧಿಪತಿಗಳೂ ಅಪರಾಂತದೇಶದ ಒಡೆಯರಾದ ಯವನರೂ ಸಮುದ್ರಮಧ್ಯದಲ್ಲಿರುವ ದ್ವೀಪಗಳ ಒಡೆಯರೂ ಶ್ರೇಷ್ಠವಸ್ತುಗಳನ್ನು ತಂದು ನಿನಗೆ ಕಾಣಿಕೆಯಾಗಿ ಒಪ್ಪಿಸಲಿ'' ಎಂದು ಹೇಳಿದರು (೮). ಆ ಮಾತನ್ನು ಕೇಳಿ ಭರತನು ದುಃಖದಲ್ಲಿ ಮುಳುಗಿದನು. ಮನಸ್ಸಿನಲ್ಲಿ ಶ್ರೀರಾಮನನ್ನು ಸ್ಮರಿಸಿಕೊಂಡನು. ಶ್ರೀರಾಮನ ಅನುವೃತ್ತಿಯೇ ತನಗೆ ಧರ್ಮವೆಂದು ಭಾವಿಸಿದನು. ಆ ತರುಣನು ಕಂಬನಿದುಂಬಿ ಬಿಕ್ಕುತ್ತ ರಾಜಹಂಸದಂತೆ ಇಂಪಾದ ಸ್ವರದಲ್ಲಿ ಆ ರಾಜಪುರೋಹಿತರನ್ನು ಆಕ್ಷೇಪಿಸಿದನು (೯-೧೦) : ''ಬ್ರಹ್ಮಚರ್ಯವ್ರತದಲ್ಲಿದ್ದು ಗುರುಕುಲವಾಸದಲ್ಲಿ ವೇದಾದಿ ಸಕಲಶಾಸ್ತ್ರಗಳನ್ನು ಅಧ್ಯಯನ ಮಾಡಿ ಸ್ನಾತಕನಾಗಿ ಧರ್ಮಮಾರ್ಗದಲ್ಲಿ ನಡೆಯುತ್ತಿರುವ ಶ್ರೀರಾಮನ ರಾಜ್ಯವನ್ನು ನನ್ನಂಥವನು ಅಪಹರಿಸಬಹುದೆ? ದಶರಥನಿಗೆ ಮಗನಾಗಿ ಹುಟ್ಟಿದವನು ಇನ್ನೊಬ್ಬರ ಸ್ವತ್ತನ್ನು ಅಪಹರಿಸಿಯಾನೆ? ಈ ರಾಜ್ಯವು ಶ್ರೀರಾಮನಿಗೆ ಸೇರಿದ್ದು. ನಾನು ಆತನಿಗೆ ಅಧೀನ. ನೀವು ನನಗೆ ಧರ್ಮಮಾರ್ಗವನ್ನು ಉಪದೇಶಿಸಬೇಕಲ್ಲದೆ ಇಂಥ ಮಾತನ್ನು ಹೇಳುವುದು ತರವಲ್ಲ (೧೧-೧೨). ಧರ್ಮಾತ್ಮನಾದ ಶ್ರೀರಾಮನು ನನಗಿಂತ ವಯಸ್ಸಿನಲ್ಲಿ ಜ್ಯೇಷ್ಠ; ಗುಣದಲ್ಲಿ ಶ್ರೇಷ್ಠ ದಿಲೀಪ ನಹುಷಾದಿ ಚಕ್ರವರ್ತಿಗಳಿಗೆ ಸದೃಶನಾದವನು. ನಮ್ಮ ತಂದೆ

ಅನಾರ್ಯಜುಷ್ಟಮಸ್ವರ್ಗ್ಯಂ ಕುರ್ಯಾಂ ಪಾಪಮಹಂ ಯದಿ ।
ಇಕ್ಷ್ವಾಕೂಣಾಮಹಂ ಲೋಕೇ ಭವೇಯಂ ಕುಲಪಾಂಸನಃ ॥ ೧೪

ಯದ್ಧಿ ಮಾತ್ರಾ ಕೃತಂ ಪಾಪಂ ನಾಹಂ ತದಪಿ ರೋಚಯೇ ।
ಇಹಸ್ಥೋ ವನದುರ್ಗಸ್ಥಂ ನಮಸ್ಯಾಮಿ ಕೃತಾಂಜಲಿಃ ॥ ೧೫

ರಾಮಮೇವಾನುಗಚ್ಛಾಮಿ ಸ ರಾಜಾ ದ್ವಿಪದಾಂ ವರಃ ।
ತ್ರಯಾಣಾಮಪಿ ಲೋಕಾನಾಂ ರಾಜ್ಯಮರ್ಹತಿ ರಾಘವಃ ॥ ೧೬

ತದ್ವಾಕ್ಯಂ ಧರ್ಮಸಂಯುಕ್ತಂ ಶ್ರುತ್ವಾ ಸರ್ವೇ ಸಭಾಸದಃ ।
ಹರ್ಷಾನ್ಮುಮುಚುರಶ್ರೂಣಿ ರಾಮೇ ನಿಹಿತಚೇತಸಃ ॥ ೧೭

ಯದಿ ತ್ವಾರ್ಯಂ ನ ಶಕ್ಷ್ಯಾಮಿ ವಿನಿವರ್ತಯಿತುಂ ವನಾತ್ ।
ವನೇ ತತ್ರೈವ ವತ್ಸ್ಯಾಮಿ ಯಥಾರ್ಯೋ ಲಕ್ಷ್ಮಣಸ್ತಥಾ ॥ ೧೮

ಸರ್ವೋಪಾಯಂ ಚ ವರ್ತಿಷ್ಯೇ ವಿನಿವರ್ತಯಿತುಂ ವನಾತ್ ।
ಸಮಕ್ಷಮಾರ್ಯಮಿಶ್ರಾಣಾಂ ಸಾಧೂನಾಂ ಗುಣವರ್ತಿನಾಮ್ ॥ ೧೯

ದಶರಥಮಹಾರಾಜನಂತೆ ಅವನೇ ಈ ರಾಜ್ಯಕ್ಕೆ ಉತ್ತರಾಧಿಕಾರಿ (೧೩). ನಾನು ರಾಜನಾಗುವುದು ಪಾಪಕಾರ್ಯ, ಸಜ್ಜನರು ಎಂದೂ ಆಚರಿಸಿದ್ದಲ್ಲ, ಅಧೋಗತಿಗೆ ತಳ್ಳುವ ಕಾರ್ಯವಿದು. ಹೀಗೆ ಮಾಡಿದರೆ ನಾನು ಇಕ್ಷ್ವಾಕುವಂಶಕ್ಕೆ ಮಸಿಬಳಿದ ಕುಲಗೇಡಿಯಾದೇನು. ನನ್ನ ತಾಯಿ ಮಾಡಿದ ಪಾಪಕೃತ್ಯವನ್ನು ನಾನು ಅನುಮೋದಿಸುವುದಿಲ್ಲ, ವನದಲ್ಲಿರುವ ಆ ಮಹಾತ್ಮನಿಗೆ ನಾನು ಇಲ್ಲಿಂದಲೇ ಕೈಮುಗಿಯುತ್ತಿದ್ದೇನೆ (೧೪-೧೫). ನಾನು ಶ್ರೀರಾಮನನ್ನು ಅನುಸರಿಸಿ ಕೊಂಡಿರುತ್ತೇನೆ. ಪುರುಷಶ್ರೇಷ್ಠನಾದ ಅವನೇ ರಾಜ. ಮೂರುಲೋಕಗಳಿಗೂ ಪ್ರಭುವಾಗುವ ಅರ್ಹತೆ ಅವನಲ್ಲಿದೆ'' ಎಂದು ನುಡಿದನು. ಧರ್ಮಯುಕ್ತವಾದ ಭರತನ ಮಾತನ್ನು ಆಲಿಸುತ್ತಿದ್ದ ಸಭಾಸದರೆಲ್ಲರೂ ಆನಂದಬಾಷ್ಪವನ್ನು ಸುರಿಸಿದರು. ಅವರ ಮನಸ್ಸು ಶ್ರೀರಾಮನಲ್ಲಿ ನೆಟ್ಟಿತು (೧೬-೧೭). ಪುನಃ ಭರತನು ''ಅಣ್ಣನನ್ನು ಕಾಡಿನಿಂದ ಹಿಂದಿರುಗಿಸಿ ಕರೆದುಕೊಂಡು ಬರಲು ನನಗೆ ಸಾಧ್ಯವಾಗದೆ ಹೋದರೆ, ನಾನೂ ಆರ್ಯನಾದ ಲಕ್ಷ್ಮಣನಂತೆ ಕಾಡಿನಲ್ಲಿಯೇ ವಾಸಮಾಡುವೆನು. ಪೂಜ್ಯರೂ ಸಜ್ಜನರೂ ಗುಣಶಾಲಿಗಳೂ ಆದ ನಿಮ್ಮ

ವಿಷ್ಟಿಕರ್ಮಾಂತಿಕಾಃ ಸರ್ವೇ ಮಾರ್ಗಶೋಧಕದಕ್ಷಕಾಃ ।
ಪ್ರಸ್ಥಾಪಿತಾ ಮಯಾ ಪೂರ್ವಂ ಯಾತ್ರಾ ಚ ಮಮ ರೋಚತೇ ॥ ೨೦

ಏವಮುಕ್ತ್ವಾ ತು ಧರ್ಮಾತ್ಮಾ ಭರತೋ ಭ್ರಾತೃವತ್ಸಲಃ ।
ಸಮೀಪಸ್ಥಮುವಾಚೇದಂ ಸುಮಂತ್ರಂ ಮಂತ್ರಕೋವಿದಮ್ ॥ ೨೧

ತೂರ್ಣಮುತ್ಥಾಯ ಗಚ್ಛ ತ್ವಂ ಸುಮಂತ್ರ ಮಮ ಶಾಸನಾತ್ ।
ಯಾತ್ರಾಮಾಜ್ಞಾಪಯ ಕ್ಷಿಪ್ರಂ ಬಲಂ ಚೈವ ಸಮಾನಯ ॥ ೨೨

ಏವಮುಕ್ತಃ ಸುಮಂತ್ರಸ್ತು ಭರತೇನ ಮಹಾತ್ಮನಾ ।
ಪ್ರಹೃಷ್ಟಃ ಸೋऽದಿಶತ್ ಸರ್ವಂ ಯಥಾಸಂದಿಷ್ಟಮಿಷ್ಟವತ್ ॥ ೨೩

ತಾಃ ಪ್ರಹೃಷ್ಟಾಃ ಪ್ರಕೃತಯೋ ಬಲಾಧ್ಯಕ್ಷಾ ಬಲಸ್ಯ ಚ ।
ಶ್ರುತ್ವಾ ಯಾತ್ರಾಂ ಸಮಾಜ್ಞಪ್ತಾಂ ರಾಘವಸ್ಯ ನಿವರ್ತನೇ ॥ ೨೪

ತತೋ ಯೋಧಾಂಗನಾಃ ಸರ್ವಾ ಭರ್ತ್ನ್ ಸರ್ವಾನ್ ಗೃಹೇ ಗೃಹೇ ।
ಯಾತ್ರಾಗಮನಮಾಜ್ಞಾಯ ತ್ವರಯಂತಿ ಸ್ಮ ಹರ್ಷಿತಾಃ ॥ ೨೫

ಎದುರಿನಲ್ಲಿಯೇ ಅಣ್ಣನನ್ನು ಕಾಡಿನಿಂದ ಕರೆತರುವುದಕ್ಕಾಗಿ ನನಗೆ ಸಾಧ್ಯವಿರುವ ಸಕಲೋಪಾಯಗಳನ್ನು ಮಾಡುವೆನು (೧೮-೧೯). ದಾರಿಯನ್ನು ಸರಿಪಡಿಸುವುದಕ್ಕಾಗಿ ದಕ್ಷರಾದ ಕಾರ್ಮಿಕರನ್ನು ನಾನು ಈಗಾಗಲೇ ಕಳಿಸಿದ್ದೇನೆ. ಅಲ್ಲಿಗೆ ಪ್ರಯಾಣ ಮಾಡುವುದೇ ನನ್ನ ಸಂಕಲ್ಪ'' ಎಂದನು. ಆ ಭ್ರಾತೃವತ್ಸಲನು ಸಮೀಪದಲ್ಲಿದ್ದ ಮಂತ್ರಾಲೋಚನಾನಿಪುಣನಾದ ಸುಮಂತ್ರನನ್ನು ಕುರಿತು ಸುಮಂತ್ರ, ನೀನು ಬೇಗನೆ ಹೊರಡು. ಪ್ರಯಾಣ ಸನ್ನದ್ಧವಾಗುವಂತೆ ಚತುರಂಗಬಲಕ್ಕೆ ಆದೇಶವನ್ನು ಕೊಡು'' ಎಂದು ಆಜ್ಞಾಪಿಸಿದನು (೨೦-೨೨). ಆಗ ಸುಮಂತ್ರನು ಸಂತೋಷಪಡುತ್ತ ಹೋಗಿ ಭರತನ ಆಜ್ಞೆಯಂತೆ ಹೊರಡಬೇಕೆಂದು ಸೈನ್ಯವನ್ನು ನಿಯಮಿಸಿದನು. ಶ್ರೀರಾಮನನ್ನು ಕರೆತರುವುದಕ್ಕಾಗಿ ಸೇನೆಯು ಹೊರಡಬೇಕೆಂಬುದನ್ನು ಕೇಳಿ ಪ್ರಜೆಗಳಿಗೂ ಸೇನಾಪತಿಗಳಿಗೂ ಆನಂದವಾಯಿತು (೨೩-೨೪). ಯೋಧರ ಹೆಂಡತಿಯರಿಗೆ ಈ ವಿಷಯವು ತಿಳಿಯಿತು. ಅವರು ಹರ್ಷಗೊಂಡು ಮನೆಮನೆಯಲ್ಲಿಯೂ ತಮ್ಮ ಗಂಡಂದಿರನ್ನು ಬೇಗನೆ ಪ್ರಯಾಣಮಾಡುವಂತೆ ತ್ವರೆಪಡಿಸಲಾರಂಭಿಸಿದರು (೨೫).

ತೇ ಹಯೈರ್ಗೋರಥೈಃ ಶೀಘ್ರೈಃ ಸ್ಯಂದನೈಶ್ಚ ಮಹಾಜವೈಃ ।
ಸಹ ಯೋಧೈರ್ಬಲಾಧ್ಯಕ್ಷಾ ಬಲಂ ಸರ್ವಮಚೋದಯನ್ ॥ ೨೬

ಸಜ್ಜಂ ತು ತದ್ಬಲಂ ದೃಷ್ಟ್ವಾ ಭರತೋ ಗುರುಸನ್ನಿಧೌ ।
ರಥಂ ಮೇ ತ್ವರಯಸ್ವೇತಿ ಸುಮಂತ್ರಂ ಪಾರ್ಶ್ವತೋಽಬ್ರವೀತ್ ॥ ೨೭

ಭರತಸ್ಯ ತು ತಸ್ಯಾಜ್ಞಾಂ ಪ್ರತಿಗೃಹ್ಯ ಪ್ರಹರ್ಷಿತಃ ।
ರಥಂ ಗೃಹೀತ್ವಾ ಪ್ರಯಯೌ ಯುಕ್ತಂ ಪರಮವಾಜಿಭಿಃ ॥ ೨೮

ಸ ರಾಘವಃ ಸತ್ಯಧೃತಿಃ ಪ್ರತಾಪವಾನ್
ಬ್ರುವನ್ ಸುಯುಕ್ತಂ ದೃಢಸತ್ಯವಿಕ್ರಮಃ ।
ಗುರುಂ ಮಹಾರಾಣ್ಯಗತಂ ಯಶಸ್ವಿನಂ
ಪ್ರಸಾದಯಿಷ್ಯನ್ ಭರತೋಽಬ್ರವೀತ್ತದಾ ॥ ೨೯

ತೂರ್ಣಂ ಸಮುತ್ಥಾಯ ಸುಮಂತ್ರ ಗಚ್ಛ
ಬಲಸ್ಯ ಯೋಗಾಯ ಬಲಪ್ರಧಾನಾನ್ ।
ಆನೇತುಮಿಚ್ಛಾಮಿ ಹಿ ತಂ ವನಸ್ಥಂ
ಪ್ರಸಾದ್ಯ ರಾಮಂ ಜಗತೋ ಹಿತಾಯ ॥ ೩೦

ಅಷ್ಟರಲ್ಲಿ ಕುದುರೆಗಳು ವೇಗವಾಗಿ ಓಡುವ ಎತ್ತಿನ ಬಂಡಿಗಳು ಮತ್ತು ರಥಗಳೊಡನೆ ಸೇನೆಯು ಪ್ರಯಾಣಮಾಡಬೇಕೆಂದು ಸೇನಾಪತಿಗಳು ಆಜ್ಞೆಯನ್ನಿತ್ತರು. ಆಗ ಭರತನು ಗುರುಗಳಾದ ವಸಿಷ್ಠರ ಸಮೀಪದಲ್ಲಿ ನಿಂತು ತನ್ನ ರಥವನ್ನು ತರುವಂತೆ ಬಳಿಯಲ್ಲಿದ್ದ ಸುಮಂತ್ರನಿಗೆ ಸೂಚಿಸಿದನು (೨೬-೨೭). ಭರತನ ಆಜ್ಞೆಯನ್ನು ಕೇಳಿ ಸುಮಂತ್ರನು ಸಂತೋಷದಿಂದ ಹಿಗ್ಗುತ್ತ ಹೋಗಿ, ಉತ್ತಮಾಶ್ವಗಳಿಂದ ಸಜ್ಜಾದ ರಥವನ್ನು ತಂದು ನಿಲ್ಲಿಸಿದನು. ಹಿಂದೆ ಸತ್ಯಸಂಧನೂ ಪ್ರತಾಪಶಾಲಿಯೂ ಆದ ಭರತನು ಪ್ರಜೆಗಳಿಗೆ ಯುಕ್ತವಾದ ಮಾತನ್ನು ತಿಳಿಸಿ, ಅರಣ್ಯದಲ್ಲಿರುವ ತನ್ನ ಅಣ್ಣನನ್ನು ಆದರದಿಂದ ಕರೆತರಬೇಕೆಂದು ನಿರ್ಣಯಿಸಿದನು (೨೮-೨೯). ಅವನು ಸುಮಂತ್ರನನ್ನು ಕುರಿತು ಸೇನಾಪತಿಗಳು ಸೇನೆಯೊಡನೆ ಕೂಡಲೆ ಹೊರಡಬೇಕೆಂದೂ ಜಗತ್ತಿನ ಹಿತಕ್ಕಾಗಿಯೇ ಶ್ರೀರಾಮನನ್ನು ಕರೆತರುವೆನೆಂದೂ ಹೇಳಿದನು. ಅದರಂತೆಯೇ ಸುಮಂತ್ರನು ಪ್ರಜೆಗಳಿಗೂ ಮಿತ್ರರಿಗೂ ಮಂತ್ರಿಗಳೇ ಮೊದಲಾದ ಅಧಿಕಾರಿಗಳಿಗೂ

ಸ ಸೂತಪುತ್ರೋ ಭರತೇನ ಸಮ್ಯ -
ಗಾಜ್ಞಾಪಿತಃ ಸಂಪರಿಪೂರ್ಣಕಾಮಃ।
ಶಶಾಸ ಸರ್ವಾನ್ ಪ್ರಕೃತಿಪ್ರಧಾನಾನ್
ಬಲಸ್ಯ ಮುಖ್ಯಾಂಶ್ಚ ಸುಹೃಜ್ಜನಂ ಚ ॥ ೩೧

ತತಃ ಸಮುತ್ಥಾಯ ಕುಲೇ ಕುಲೇ ತೇ
ರಾಜನ್ಯವೈಶ್ಯಾ ವೃಷಲಾಶ್ಚ ವಿಪ್ರಾಃ।
ಅಯೂಯುಜನ್ನುಷ್ಟ್ರರಥಾನ್ ಖರಾಂಶ್ಚ
ನಾಗಾನ್ ಹಯಾಂಶ್ಚೈವ ಕುಲಪ್ರಸೂತಾನ್ ॥ ೩೨

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದ್ವ್ಯಶೀತಿತಮಃ ಸರ್ಗಃ

❁❁❁

ಸುಮಂತ್ರನು ಪ್ರಜೆಗಳಿಗೂ ಮಿತ್ರರಿಗೂ ಮಂತ್ರಿಗಳೇ ಮೊದಲಾದ ಅಧಿಕಾರಿಗಳಿಗೂ ವನಕ್ಕೆ ಪ್ರಯಾಣ ಮಾಡುವಂತೆ ಸೂಚಿಸಿದನು (೩೦-೩೧). ಅನಂತರ ಅಯೋಧ್ಯಾನಗರದ ಮನೆಮನೆಗಳಿಂದಲೂ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರು ಉತ್ಸಾಹದಿಂದ ಯಥೋಚಿತವಾಗಿ ಒಂಟೆ, ರಥ, ಹೇಸರಗತ್ತೆ, ಆನೆ, ಜಾತ್ಯಶ್ವಗಳನ್ನು ಏರಿ ಹೊರಟರು (೩೨).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಎಂಬತ್ತೆರಡನೆಯ ಸರ್ಗ

❁❁❁

ತ್ರ್ಯಶೀತಿತಮಃ ಸರ್ಗಃ

ಭರತವನಪ್ರಸ್ಥಾನಮ್

ತತಃ ಸಮುತ್ಥಿತಃ ಕಲ್ಯಮಾಸ್ಥಾಯ ಸ್ಯಂದನೋತ್ತಮಮ್ ।
ಪ್ರಯಯೌ ಭರತಃ ಶೀಘ್ರಂ ರಾಮದರ್ಶನಕಾಂಕ್ಷಯಾ ॥ ೧

ಅಗ್ರತಃ ಪ್ರಯಯುಸ್ತಸ್ಯ ಸರ್ವೇ ಮಂತ್ರಿಪುರೋಧಸಃ ।
ಅಧಿರುಹ್ಯ ಹಯೈರ್ಯುಕ್ತಾನ್ ರಥಾನ್ ಸೂರ್ಯರಥೋಪಮಾನ್

ನವನಾಗಸಹಸ್ರಾಣಿ ಕಲ್ಪಿತಾನಿ ಯಥಾವಿಧಿ ।
ಅನ್ವಯುರ್ಭರತಂ ಯಾಂತಮಿಕ್ಷ್ವಾಕುಕುಲನಂದನಮ್ ॥ ೩

ಷಷ್ಟೀರಥಸಹಸ್ರಾಣಿ ಧನ್ವಿನೋ ವಿವಿಧಾಯುಧಾಃ ।
ಅನ್ವಯುರ್ಭರತಂ ಯಾಂತಂ ರಾಜಪುತ್ರಂ ಯಶಸ್ವಿನಮ್ ॥ ೪

ಶತಂ ಸಹಸ್ರಾಣ್ಯಶ್ವಾನಾಂ ಸಮಾರೂಢಾನಿ ರಾಘವಮ್ ।
ಅನ್ವಯುರ್ಭರತಂ ಯಾಂತಂ ಸತ್ಯಸಂಧಂ ಜಿತೇಂದ್ರಿಯಮ್ ॥ ೫

ಸರ್ಗ ೮೩

ಭರತನು ಸೈನ್ಯದೊಡನೆ ಪ್ರಯಾಣಮಾಡಿ ಗಂಗಾತೀರವನ್ನು ಸೇರುವುದು.

ಅನಂತರ ಭರತನು ಬೆಳಗಾಗುವಷ್ಟರಲ್ಲಿ ಎದ್ದು ಉತ್ತಮವಾದ ರಥವನ್ನೇರಿ ಶ್ರೀರಾಮನ ದರ್ಶನಕ್ಕಾಗಿ ತ್ವರೆಯಿಂದ ಹೊರಟನು. ಎಲ್ಲ ಮಂತ್ರಿಗಳೂ ಪುರೋಹಿತರೂ ಸೂರ್ಯರಥದಂತೆ ಶ್ರೇಷ್ಠವಾದ, ಕುದುರೆಗಳನ್ನು ಹೂಡಿದ ರಥಗಳನ್ನು ಹತ್ತಿ ಅವನ ಮುಂದೆ ಪ್ರಯಾಣ ಮಾಡಿದರು (೧-೨). ಭರತನು ನಿಯೋಜಿಸಿದಂತೆ ಒಂಬತ್ತು ಸಾವಿರ ಆನೆಗಳು ಆತನ ಹಿಂದೆ ಹೊರಟವು. ಅರುವತ್ತುಸಾವಿರ ರಥಗಳೂ ವಿವಿಧಾಸ್ತ್ರಗಳನ್ನು ಹಿಡಿದು ಧನುರ್ಧಾರಿಗಳಾಗಿದ್ದ ಯೋಧರೂ ಕೀರ್ತಿಶಾಲಿಯಾದ ಆ ರಾಜಪುತ್ರನನ್ನು ಹಿಂಬಾಲಿಸಿದರು (೩-೪). ಸತ್ಯಸಂಧನೂ ಜಿತೇಂದ್ರಿಯನೂ ಆದ ಭರತನ ಹಿಂದೆ ರಾವುತರು ಏರಿದ್ದ ಒಂದು

ಕೈಕೇಯೀ ಚ ಸುಮಿತ್ರಾ ಚ ಕೌಸಲ್ಯಾ ಚ ಯಶಸ್ವಿನೀ ।
ರಾಮಾನಯನಸಂಹೃಷ್ಟಾ ಯಯುರ್ಯಾನೇನ ಭಾಸ್ವತಾ ॥ ೬

ಪ್ರಯಾತಾಶ್ಚಾರ್ಯಸಂಘಾತಾ ರಾಮಂ ದ್ರಷ್ಟುಂ ಸಲಕ್ಷ್ಮಣಮ್ ।
ತಸ್ಯೈವ ಚ ಕಥಾಶ್ಚಿತ್ರಾಃ ಕುರ್ವಾಣಾ ಹೃಷ್ಟಮಾನಸಾಃ ॥ ೭

ಮೇಘಶ್ಯಾಮಂ ಮಹಾಬಾಹುಂ ಸ್ಥಿರಸತ್ತ್ವಂ ದೃಢವ್ರತಮ್ ।
ಕದಾ ದ್ರಕ್ಷ್ಯಾಮಹೇ ರಾಮಂ ಜಗತಃ ಶೋಕನಾಶನಮ್ ॥ ೮

ದೃಷ್ಟ ಏವ ಹಿ ನಃ ಶೋಕಮುಪನೇಷ್ಯತಿ ರಾಘವಃ ।
ತಮಃ ಸರ್ವಸ್ಯ ಲೋಕಸ್ಯ ಸಮುದ್ಯನ್ನಿವ ಭಾಸ್ಕರಃ ॥ ೯

ಇತ್ಯೇವಂ ಕಥಯಂತಸ್ತೇ ಸಂಪ್ರಹೃಷ್ಟಾಃ ಕಥಾಃ ಶುಭಾಃ ।
ಪರಿಷ್ವಜಾನಾಶ್ಚಾನ್ಯೋನ್ಯಂ ಯಯುರ್ನಾಗರಿಕಾ ಜನಾಃ ॥ ೧೦

ಯೇ ಚ ತತ್ರಾಪರೇ ಸರ್ವೇ ಸಂಮತಾ ಯೇ ಚ ನೈಗಮಾಃ ।
ರಾಮಂ ಪ್ರತಿಯಯುರ್ಹೃಷ್ಟಾಃ ಸರ್ವಾಃ ಪ್ರಕೃತಯಸ್ತಥಾ ॥ ೧೧

ಲಕ್ಷ ಕುದುರೆಗಳು ಪ್ರಯಾಣ ಮಾಡಿದವು. ಕೈಕೇಯಿಯೂ ಸಂತೋಷದಿಂದ ಹೊರಟಳು. ಹಾಗೆಯೇ ಸುಮಿತ್ರೆಯೂ ಕೌಸಲ್ಯೆಯೂ ಶ್ರೀರಾಮನನ್ನು ಕರೆತರುವ ಸಂಭ್ರಮದಿಂದ ಉತ್ತಮ ವಾಹನಗಳನ್ನೇರಿ ಪ್ರಯಾಣ ಮಾಡಿದರು (೫-೬). ಸಜ್ಜನರಾದ ಪ್ರಜೆಗಳು ಶ್ರೀರಾಮನನ್ನೂ ಲಕ್ಷ್ಮಣನನ್ನೂ ನೋಡುವುದಕ್ಕೋಸ್ಕರ ಗುಂಪುಗುಂಪಾಗಿ ಹೊರಟರು. ಅವರೆಲ್ಲರೂ ಶ್ರೀರಾಮನ ವಿಷಯವನ್ನೇ ಕುರಿತು ವಿವಿಧವಾದ ಮಾತನ್ನಾಡುತ್ತ ಉಲ್ಲಾಸದಿಂದ ಹೋಗುತ್ತಿದ್ದರು (೭) : "ಮೇಘಶ್ಯಾಮನೂ ಅಜಾನುಬಾಹುವೂ ಆದ ಶ್ರೀರಾಮನನ್ನು ನಾವು ಯಾವಾಗ ನೋಡುವೆವೊ? ಅವನು ಎಷ್ಟು ಸತ್ತ್ವಗುಣಸಂಪನ್ನ! ಹಿಡಿದ ಕಾರ್ಯವನ್ನು ಸಾಧಿಸುವುದರಲ್ಲಿ ಎಂಥ ನಿಷ್ಠೆ! ಜಗತ್ತಿನ ಕಷ್ಟವೆಲ್ಲವನ್ನೂ ಅವನು ಪರಿಹರಿಸಬಲ್ಲನು. ಅವನನ್ನು ನೋಡಿದರೆ ಸಾಕು, ನಮ್ಮ ಶೋಕವು ನೀಗುತ್ತದೆ. ಸೂರ್ಯನು ಮೂಡಿದರೆ ಸಾಕು. ಲೋಕದ ಕತ್ತಲೆ ಅಳಿಯುತ್ತದೆ' ಎಂದು ಹೇಳಿಕೊಳ್ಳುತ್ತಿದ್ದರು (೮-೯). ಆ ನಾಗರೀಕರು ಶ್ರೀರಾಮನಿಗೆ ಸಂಬಂಧಿಸಿದ ಒಳ್ಳೆಯ ಕಥೆಗಳನ್ನು ಹೇಳುತ್ತ ಆನಂದತುಂದಿಲರಾಗಿ ಒಬ್ಬರನ್ನೊಬ್ಬರು ಅಪ್ಪಿಕೊಳ್ಳುತ್ತಿದ್ದರು. ಶ್ರೀರಾಮನಿಗೆ

ಮಣಿಕಾರಾಶ್ಚ ಯೇ ಕೇಚಿತ್ ಕುಂಭಕಾರಾಶ್ಚ ಶೋಭನಾಃ।
ಸೂತ್ರಕರ್ಮಕೃತಶ್ಚೈವ ಯೇ ಚ ಶಸ್ತ್ರೋಪಜೀವಿನಃ॥ ೧೨

ಮಾಯೂರಕಾಃ ಕ್ರಾಕಚಿಕಾ ರೋಚಕಾ ವೇಧಕಾಸ್ತಥಾ।
ದಂತಕಾರಾಃ ಸುಧಾಕಾರಾಸ್ತಥಾ ಗಂಧೋಪಜೀವಿನಃ॥ ೧೩

ಸುವರ್ಣಕಾರಾಃ ಪ್ರಖ್ಯಾತಾಸ್ತಥಾ ಕಂಬಲಕಾರಕಾಃ।
ಸ್ನಾಪಕೋಚ್ಛಾದಕಾ ವೈದ್ಯಾ ಧೂಪಕಾಃ ಶೌಂಡಿಕಾಸ್ತಥಾ॥ ೧೪

ರಜಕಾಸ್ತುನ್ನವಾಯಾಶ್ಚ ಗ್ರಾಮಘೋಷಮಹತ್ತರಾಃ।
ಶೈಲೂಷಾಶ್ಚ ಸಹ ಸ್ತ್ರೀಭಿರ್ಯಯುಃ ಕೈವರ್ತಕಾಸ್ತಥಾ॥ ೧೫

ಸಮಾಹಿತಾ ವೇದವಿದೋ ಬ್ರಾಹ್ಮಣಾ ವೃತ್ತಸಂಮತಾಃ।
ಗೋರಥೈರ್ಭರತಂ ಯಾಂತಮನುಜಗ್ಮುಃ ಸಹಸ್ರಶಃ॥ ೧೬

ಸುವೇಷಾಃ ಶುದ್ಧವಸನಾಸ್ತಾಮ್ರಮೃಷ್ಟಾನುಲೇಪನಾಃ।
ಸರ್ವೇ ತೇ ವಿವಿಧೈರ್ಯಾನೈಃ ಶನೈರ್ಭರತಮನ್ವಯುಃ॥ ೧೭

ಪ್ರಿಯರಾದ ನಾಗರಿಕರೂ ವರ್ತಕರೂ ಅಧಿಕಾರಿಗಳೂ ಸಂತೋಷದಿಂದ ಉಬ್ಬುತ್ತ ಪ್ರಯಾಣ ಮಾಡಿದರು (೧೦-೧೧). ಆ ಜನಜಂಗುಳಿಯಲ್ಲಿ ದಕ್ಷರಾದ ಮಣಿಕಾರರಿದ್ದರು; ಕುಂಬಾರರಿದ್ದರು; ಪರಿಣತರಾದ ನೇಯ್ಗೆಯವರಿದ್ದರು; ಶಸ್ತ್ರಾಸ್ತ್ರಗಳನ್ನು ನಿರ್ಮಿಸುವ ಶಿಲ್ಪಿಗಳಿದ್ದರು. ನವಿಲುಗರಿಯಿಂದ ಕೆಲಸ ಮಾಡುವ ಕುಶಲಕರ್ಮಿಗಳೂ ಗರಗಸದವರೂ ರತ್ನಗಳಿಗೆ ತೂತು ಕೊರೆಯುವ ವೇಧಕರೂ ಮೆರಗು ಹಾಕುವವರೂ ದಂತದ ಕೆಲಸಗಾರರೂ ಸುಣ್ಣಬಳಿಯುವವರೂ ಗಂದಿಗೆಯ ಅಂಗಡಿಯವರೂ ಇದ್ದರು (೧೨-೧೩). ಅವರಲ್ಲಿ ಅಕ್ಕಸಾಲಿಗರೂ ಕಂಬಳಿ ನೇಯುವ ಗೊಂಗಡಿಕಾರರೂ ಇದ್ದರು. ಅಂಗಮರ್ದನ ಮಾಡಿ ಸ್ನಾನ ಮಾಡಿಸುವ ಜನರಿದ್ದರು. ವೈದ್ಯರಿದ್ದರು. ಸುಗಂಧದ್ರವ್ಯಗಳನ್ನು ನಿರ್ಮಿಸತಕ್ಕವರಿದ್ದರು. ಹೆಂಡವನ್ನಿಳಿಸುವ ಈಡಿಗರಿದ್ದರು (೧೪). ಅಲ್ಲದೆ ಅಗಸರು ಚಿಪ್ಪಿಗರು ಹಳ್ಳಿಗರು ಕವಾಡಿಗರು ಮತ್ತು ಅಂಬಿಗರು ಆ ಗುಂಪಿನಲ್ಲಿ ಸೇರಿ ಹೊರಟಿದ್ದರು. ನಟರು ತಮ್ಮ ಸ್ತ್ರೀಯರೊಡನೆ ಬಂದಿದ್ದರು. ಅಲ್ಲದೆ ವೇದವಿದರೂ ಸದಾಚಾರನಿಷ್ಠರೂ ಆದ ಸಾವಿರಾರು ಮಂದಿ ಬ್ರಾಹ್ಮಣರು ಎತ್ತಿನ ಬಂಡಿಗಳಲ್ಲಿ ಕುಳಿತು ಭರತನನ್ನು ಹಿಂಬಾಲಿಸಿ

ಪ್ರಹೃಷ್ಟಮುದಿತಾ ಸೇನಾ ಸಾನ್ವಯಾತ್ ಕೈಕಯೀಸುತಮ್ ।
ಭ್ರಾತುರಾನಯನೇ ಯಾಂತಂ ಭರತಂ ಭ್ರಾತೃವತ್ಸಲಮ್ ॥ ೧೮

ತೇ ಗತ್ವಾ ದೂರಮಧ್ವಾನಂ ರಥಯಾನಾಶ್ವಕುಂಜರೈಃ ।
ಸಮಾಸೇದುಸ್ತತೋ ಗಂಗಾಂ ಶೃಂಗಿವೇರಪುರಂ ಪ್ರತಿ ॥ ೧೯

ಯತ್ರ ರಾಮಸಖೋ ವೀರೋ ಗುಹೋ ಜ್ಞಾತಿಗಣೈರ್ವೃತಃ ।
ನಿವಸತ್ಯಪ್ರಮಾದೇನ ದೇಶಂ ತಂ ಪರಿಪಾಲಯನ್ ॥ ೨೦

ಉಪೇತ್ಯ ತೀರಂ ಗಂಗಾಯಾಶ್ಚಕ್ರವಾಕೈರಲಂಕೃತಮ್ ।
ವ್ಯವಾತಿಷ್ಠತ ಸಾ ಸೇನಾ ಭರತಸ್ಯಾನುಯಾಯಿನೀ ॥ ೨೧

ನಿರೀಕ್ಷ್ಯಾನುಗತಾಂ ಸೇನಾಂ ತಾಂ ಚ ಗಂಗಾಂ ಶಿವೋದಕಾಮ್ ।
ಭರತಃ ಸಚಿವಾನ್ ಸರ್ವಾನಬ್ರವೀದ್ವಾಕ್ಯಕೋವಿದಃ ॥ ೨೨

ನಿವೇಶಯತ ಮೇ ಸೈನ್ಯಮಭಿಪ್ರಾಯೇಣ ಸರ್ವತಃ ।
ವಿಶ್ರಾಂತಾಃ ಪ್ರತರಿಷ್ಯಾಮಃ ಶ್ವ ಇದಾನೀಮಿಮಾಂ ನದೀಮ್ ॥ ೨೩

ಹೊರಟರು (೧೩-೧೬). ಅವರೆಲ್ಲರೂ ಶುದ್ಧವಾದ ಬಟ್ಟೆಯನ್ನುಟ್ಟು (ಗೋರೋಚನಾದಿಗಳಿಂದ ಪರಿಷ್ಕೃತವಾದ) ಕೆಂಪು ಗಂಧವನ್ನು ಹಚ್ಚಿ ಅಲಂಕೃತರಾಗಿ, ನಾನಾ ಬಗೆಯ ವಾಹನಗಳನ್ನೇರಿ ಮೆಲ್ಲಗೆ ಭರತನನ್ನು ಹಿಂಬಾಲಿಸಿದರು (೧೭). ಶ್ರೀರಾಮನನ್ನು ಕರೆತರುವುದಕ್ಕಾಗಿ ಹೊರಟ ಭ್ರಾತೃವತ್ಸಲನಾದ ಭರತನ ಹಿಂದೆ ಅವನ ಸೇನೆಯು ಆನಂದದಿಂದ ನಲಿಯುತ್ತ ಹೋಯಿತು. ಅವರೆಲ್ಲರೂ ರಥ ಅಶ್ವಗಜ - ಮುಂತಾದ ವಿವಿಧ ವಾಹನಗಳನ್ನೇರಿ ಬಹುದೂರದವರೆಗೆ ಪ್ರಯಾಣಮಾಡಿ ಶೃಂಗಿವೇರಪುರದ ಬಳಿಯಲ್ಲಿ ಗಂಗಾತೀರಕ್ಕೆ ಬಂದರು (೧೮-೧೯). ಅಲ್ಲಿ ಶ್ರೀರಾಮನ ಮಿತ್ರನೂ ಮಹಾಶೂರನೂ ಆದ ಗುಹನು ತನ್ನ ಬಂಧುಗಳೊಡನೆ ಎಚ್ಚರಿಕೆಯಿಂದ ಆ ಪ್ರದೇಶವನ್ನು ಪಾಲಿಸುತ್ತಿದ್ದನು. ಭರತನೊಡನೆ ಹೊರಟ ಆ ಸೇನೆಯು ಚಕ್ರವಾಕಪಕ್ಷಿಗಳಿಂದ ರಮಣೀಯವಾದ ಗಂಗಾತೀರದಲ್ಲಿ ಬಂದು ನಿಂತಿತು (೨೦-೨೧). ಆಗ ಭರತನು ತನ್ನನ್ನು ಹಿಂಬಾಲಿಸಿ ಬಂದ ಅಪಾರ ಸೈನ್ಯವನ್ನೂ ಪುಣ್ಯೋದಕವುಳ್ಳ ಗಂಗಾನದಿಯನ್ನೂ ನೋಡಿ ತನ್ನ ಸಚಿವರನ್ನು ಕರೆದು "ಅಮಾತ್ಯರೆ, ನಮ್ಮ ಸೈನಿಕರು ತಮಗೆ ಅನುಕೂಲವಾದ ಸ್ಥಳವನ್ನು ನೋಡಿಕೊಂಡು ಇಲ್ಲಿಯೇ ಇಳಿದುಕೊಳ್ಳುವಂತೆ ಸೂಚಿಸಿರಿ. ಈದಿನ ವಿಶ್ರಮಿಸಿಕೊಂಡಿದ್ದು ನಾಳೆ ಈ

ದಾತುಂ ಚ ತಾವದಿಚ್ಛಾಮಿ ಸ್ವರ್ಗತಸ್ಯ ಮಹೀಪತೇಃ ।
ಔರ್ಧ್ವದೇಹನಿಮಿತ್ತಾರ್ಥಮವತೀರ್ಯೋದಕಂ ನದೀಮ್ ॥ ೨೪

ತಸ್ಯೈವಂ ಬ್ರುವತೋಽಮಾತ್ಯಾಸ್ತಥೇತ್ಯುಕ್ತ್ವಾ ಸಮಾಹಿತಾಃ ।
ನ್ಯವೇಶಯಂಸ್ತಾಂಶ್ಛಂದೇನ ಸ್ವೇನ ಸ್ವೇನ ಪೃಥಕ್ ಪೃಥಕ್ ॥ ೨೫

ನಿವೇಶ್ಯ ಗಂಗಾಮನು ತಾಂ ಮಹಾನದೀಂ
ಚಮೂಂ ವಿಧಾನೈಃ ಪರಿಬರ್ಹಶೋಭಿನೀಮ್ ।
ಉವಾಸ ರಾಮಸ್ಯ ತದಾ ಮಹಾತ್ಮನೋ
ವಿಚಿಂತಯಾನೋ ಭರತೋ ನಿವರ್ತನಮ್ ॥ ೨೬

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತ್ರ್ಯಶೀತಿತಮಃ ಸರ್ಗಃ

❀❀❀

ಮಹಾರಾಜನಿಗೆ ಈ ನದಿಯಲ್ಲಿಳಿದು ಪಿತೃತರ್ಪಣವನ್ನು ಕೊಡಬೇಕೆಂದಿದ್ದೇನೆ '' ಎಂದು ಹೇಳಿದನು. ಅದನ್ನು ಕೇಳಿ ಸಚಿವರು ಹಾಗೆಯೇ ಆಗಲೆಂದು ಸಮ್ಮತಿಸಿ, ಆ ಸೈನಿಕರು ತಮ್ಮ ಇಷ್ಟಾನುಸಾರವಾಗಿ ಅಲ್ಲಲ್ಲಿ ಬಿಡಾರ ಹಾಕುವಂತೆ ಏರ್ಪಡಿಸಿದರು (೨೪-೨೫). ಆ ಗಂಗಾತೀರದಲ್ಲಿ ಸೇನೆಯು ಕ್ರಮಬದ್ಧವಾಗಿ ಗುಡಾರಗಳನ್ನು ಕಟ್ಟಿಕೊಂಡು ಬಿಡಾರಹೂಡಲು ಭರತನು ವ್ಯವಸ್ಥೆ ಮಾಡಿದನು. ಮಹಾತ್ಮನಾದ ಶ್ರೀರಾಮನನ್ನು ಕರೆತರುವ ಬಗೆ ಯಾವುದು ಎಂದು ಆತನು ಚಿಂತಿಸುತ್ತಲೇ ಇದ್ದನು (೨೬).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಎಂಬತ್ತುಮೂರನೆಯ ಸರ್ಗ

❀❀❀

ಚತುರಶೀತಿತಮಃ ಸರ್ಗಃ

ಗುಹಾಗಮನಮ್

ತತೋ ನಿವಿಷ್ಟಾಂ ಧ್ವಜಿನೀಂ ಗಂಗಾಮನ್ವಾಶ್ರಿತಾಂ ನದೀಮ್ ।
ನಿಷಾದರಾಜೋ ದೃಷ್ಟ್ವೈವ ಜ್ಞಾತೀನ್ ಸಂತ್ವರಿತೋಽಬ್ರವೀತ್ ॥ ೧

ಮಹತೀಯಮಿತಃ ಸೇನಾ ಸಾಗರಾಭಾ ಪ್ರದೃಶ್ಯತೇ ।
ತಸ್ಯಾಂತಂ ನಾಧಿಗಚ್ಛಾಮಿ ಮನಸಾಪಿ ವಿಚಿಂತಯನ್ ॥ ೨

ಯಥಾ ತು ಖಲು ದುರ್ಬುದ್ಧಿರ್ಭರತಃ ಸ್ವಯಮಾಗತಃ ।
ಸ ಏಷ ಹಿ ಮಹಾಕಾಯಃ ಕೋವಿದಾರಧ್ವಜೋ ರಥೇ ॥ ೩

ಬಂಧಯಿಷ್ಯತಿ ವಾ ದಾಶಾನಥವಾಸ್ಮಾನ್ ವಧಿಷ್ಯತಿ ।
ಅಥ ದಾಶರಥಿಂ ರಾಮಂ ಪಿತ್ರಾ ರಾಜ್ಯಾದ್ವಿವಾಸಿತಮ್ ॥ ೪

ಸಂಪನ್ನಾಂ ಶ್ರಿಯಮನ್ವಿಚ್ಛಂಸ್ತಸ್ಯ ರಾಜ್ಞಃ ಸುದುರ್ಲಭಾಮ್ ।
ಭರತಃ ಕೈಕೇಯೀಪುತ್ರೋ ಹಂತುಂ ತಮುಪಗಚ್ಛತಿ ॥ ೫

ಸರ್ಗ ೮೪

ಗುಹನು ಬಂದು ಭರತನನ್ನು ಸಂದರ್ಶಿಸುವುದು.

ಹೀಗೆ ಭರತನ ಸೇನೆಯು ಗಂಗಾತೀರದಲ್ಲಿ ಬೀಡುಬಿಟ್ಟಿದೆಯೆಂಬುದು ನಿಷಾದ ರಾಜನಾದ ಗುಹನಿಗೆ ತಿಳಿಯಿತು. ಅವನು ಕೂಡಲೆ ತನ್ನ ಆಪ್ತ ಪರಿವಾರವನ್ನು ಕರೆದು ಹೀಗೆಂದನು : "ಮಿತ್ರರೆ, ಮಹಾಸೇನೆಯೊಂದು ಗಂಗಾತೀರದಲ್ಲಿ ಕಾಣಿಸುತ್ತಿದೆ. ಸಮುದ್ರದಂತೆ ಹರಡಿಕೊಂಡಿದೆ. ಅದರ ಪಾರವೆಲ್ಲಿದೆಯೆಂದು ಮನಸ್ಸಿನಲ್ಲಿ ಊಹಿಸುವುದಕ್ಕೂ ಶಕ್ಯವಿಲ್ಲ (೧-೨). ಭರತನೇ ದುರ್ಬುದ್ಧಿಯಿಂದ ದಂಡೆತ್ತಿ ಬಂದಿರಬೇಕು. ಏಕೆಂದರೆ, ರಥದ ಮೇಲೆ ಬೃಹದಾಕಾರವಾದ ಕೋವಿದಾರ* ಧ್ವಜವು ಕಾಣಿಸುತ್ತಿದೆ. ಅವನು ಅಂಬಿಗರಾದ ನಮ್ಮೆಲ್ಲರನ್ನೂ ಬಂಧಿಸಬೇಕೆಂದೊ ಸಂಹರಿಸಬೇಕೆಂದೊ ಉದ್ದೇಶಿಸಿರಬೇಕು. ಆಮೇಲೆ, ತಂದೆಯಿಂದ ರಾಜ್ಯಭ್ರಂಶಕ್ಕೊಳಗಾದ ಶ್ರೀರಾಮನನ್ನು ಕೊಲ್ಲಲು ಉದ್ದೇಶಿಸಿದ್ದಾನೆ (೩-೪). ದಶರಥರಾಜನ ದುರ್ಲಭವಾದ ರಾಜಲಕ್ಷ್ಮಿಯು ಈಗ ಭರತನಿಗೆ ಸಿಕ್ಕಿದೆ. ಅದನ್ನು

---

* ಕೋವಿದಾರ – ಜೋಡಿ ಎಲೆಗಳಿರುವ ಒಂದು ಜಾತಿಯ ಮರ; ಪಾರಿಜಾತ ವೃಕ್ಷ

ಭರ್ತಾ ಚೈವ ಸಖಾ ಚೈವ ರಾಮೋ ದಾಶರಥಿರ್ಮಮ ।
ತಸ್ಯಾರ್ಥಕಾಮಾಃ ಸಂನದ್ಧಾ ಗಂಗಾನೂಪೇಽತ್ರ ತಿಷ್ಠತ ॥ ೬

ತಿಷ್ಠಂತು ಸರ್ವೇ ದಾಶಾಶ್ಚ ಗಂಗಾಮನ್ವಾಶ್ರಿತಾ ನದೀಮ್ ।
ಬಲಯುಕ್ತಾ ನದೀರಕ್ಷಾ ಮಾಂಸಮೂಲಫಲಾಶನಾಃ ॥ ೭

ನಾವಾಂ ಶತಾನಾಂ ಪಂಚಾನಾಂ ಕೈವರ್ತಾನಾಂ ಶತಂ ಶತಮ್ ।
ಸಂನದ್ಧಾನಾಂ ತಥಾ ಯೂನಾಂ ತಿಷ್ಠಂತ್ವಿತ್ಯಭ್ಯಚೋದಯತ್ ॥ ೮

ಯದಾ ತುಷ್ಟಸ್ತು ಭರತೋ ರಾಮಸ್ಯೇಹ ಭವಿಷ್ಯತಿ ।
ಸೇಯಂ ಸ್ವಸ್ತಿಮತೀ ಸೇನಾ ಗಂಗಾಮದ್ಯ ತರಿಷ್ಯತಿ ॥ ೯

ಇತ್ಯುಕ್ತ್ವೋಪಾಯನಂ ಗೃಹ್ಯ ಮತ್ಸ್ಯಮಾಂಸಮಧೂನಿ ಚ ।
ಅಭಿಚಕ್ರಾಮ ಭರತಂ ನಿಷಾದಾಧಿಪತಿರ್ಗುಹಃ ॥ ೧೦

ತಮಾಯಾಂತಂ ತು ಸಂಪ್ರೇಕ್ಷ್ಯ ಸೂತಪುತ್ರಃ ಪ್ರತಾಪವಾನ್ ।
ಭರತಾಯಾಚಚಕ್ಷೇಽಥ ವಿನಯಜ್ಞೋ ವಿನೀತವತ್ ॥ ೧೧

ಸ್ಥಿರಪಡಿಸಿಕೊಳ್ಳಬೇಕೆಂದು ಶ್ರೀರಾಮನನ್ನು ಸಂಹರಿಸುವುದಕ್ಕಾಗಿ ಬಂದಿದ್ದಾನೆ. ಈ ಭರತ ಕೈಕೇಯಿಯ ಮಗನಲ್ಲವೆ? (೫). (ಒಳ್ಳೆಯದು) ಶ್ರೀರಾಮನು ನನಗೆ ಒಡೆಯನೂ ಹೌದು ಗೆಳೆಯನೂ ಹೌದು. ನೀವೆಲ್ಲರೂ ಶ್ರೀರಾಮನಿಗೆ ಶ್ರೇಯಸ್ಸನ್ನು ಬಯಸತಕ್ಕವರು. ನೀವು ಗಂಗಾತೀರದಲ್ಲಿ ಸಜ್ಜಾಗಿ ನಿಲ್ಲಿರಿ. ಬೆಸ್ತರೆಲ್ಲರೂ ಗಂಗಾತೀರಕ್ಕೆ ಹೋಗಿ ನದಿಯನ್ನು ಬಲವಾಗಿ ಕಾಯುತ್ತ ನಿಲ್ಲಲಿ! ಮಾಂಸ ಗಡ್ಡೆ ಹಣ್ಣು ಮುಂತಾದ ಆಹಾರಗಳನ್ನು ಒಯ್ಯಲಿ (೬-೭). ಯುದ್ಧಸಾಮಗ್ರಿಗಳಿಂದ ಸಜ್ಜಾದ ಐದುನೂರು ನೌಕೆಗಳು ಸಿದ್ಧವಾಗಿ ನಿಂತಿರಬೇಕು. ಒಂದೊಂದು ನೌಕೆಯಲ್ಲಿ ನೂರು ನೂರು ಮಂದಿ ತರುಣ ಯೋಧರು ಯುದ್ಧಸನ್ನದ್ಧರಾಗಿ ಇರತಕ್ಕದ್ದು'' ಎಂದು ಆಜ್ಞಾಪಿಸಿದನು (೮). ಅನಂತರ ಗುಹನು ''ಒಂದು ವೇಳೆ ಭರತನು ಶ್ರೀರಾಮನಲ್ಲಿ ಸ್ನೇಹಭಾವದಿಂದ ಬಂದಿದ್ದರೂ ಇರಬಹುದು. ಹಾಗಿದ್ದರೆ ಮಾತ್ರ ಆತನ ಸೇನೆಯು ಕ್ಷೇಮದಿಂದ ಗಂಗಾನದಿಯನ್ನು ದಾಟೀತು! ಎಂದನು (೯). ಹೀಗೆ ನುಡಿದು ನಿಷಾದರಾಜನಾದ ಗುಹನು ಕಾಣಿಕೆಯನ್ನೂ ಮತ್ಸ್ಯಮಾಂಸಗಳನ್ನೂ ಜೇನನ್ನೂ ತೆಗೆಸಿಕೊಂಡು ಭರತನನ್ನು ನೋಡುವುದಕ್ಕಾಗಿ ಬಂದನು. ಗುಹನು ಬರುತ್ತಿರುವುದನ್ನು ಪ್ರತಾಪಶಾಲಿಯಾದ

ಏಷ ಜ್ಞಾತಿಸಹಸ್ರೇಣ ಸ್ಥಪತಿಃ ಪರಿವಾರಿತಃ।
ಕುಶಲೋ ದಂಡಕಾರಣ್ಯೇ ವೃದ್ಧೋ ಭ್ರಾತುಶ್ಚ ತೇ ಸಖಾ॥ ೧೨

ತಸ್ಮಾತ್ ಪಶ್ಯತು ಕಾಕುತ್ಸ್ಥ ತ್ವಾಂ ನಿಷಾದಾಧಿಪೋ ಗುಹಃ।
ಅಸಂಶಯಂ ವಿಜಾನೀತೇ ಯತ್ರ ತೌ ರಾಮಲಕ್ಷ್ಮಣೌ॥ ೧೩

ಏತತ್ತು ವಚನಂ ಶ್ರುತ್ವಾ ಸುಮಂತ್ರಾದ್ಭರತಃ ಶುಭಮ್।
ಉವಾಚ ವಚನಂ ಶೀಘ್ರಂ ಗುಹಃ ಪಶ್ಯತು ಮಾಮಿತಿ॥ ೧೪

ಲಬ್ಧ್ವಾಭ್ಯನುಜ್ಞಾಂ ಸಂಹೃಷ್ಟೋ ಜ್ಞಾತಿಭಿಃ ಪರಿವಾರಿತಃ।
ಆಗಮ್ಯ ಭರತಂ ಪ್ರಹ್ವೋ ಗುಹೋ ವಚನಮಬ್ರವೀತ್॥ ೧೫

ನಿಷ್ಕುಟಶ್ಚೈವ ದೇಶೋಽಯಂ ವಂಚಿತಾಶ್ಚಾಪಿ ತೇ ವಯಮ್।
ನಿವೇದಯಾಮಸ್ತೇ ಸರ್ವೇ ಸ್ವಕೇ ದಾಸಕುಲೇ ವಸ॥ ೧೬

ಅಸ್ತಿ ಮೂಲಂ ಫಲಂ ಚೈವ ನಿಷಾದೈಃ ಸಮುಪಾಹೃತಮ್।
ಆರ್ದ್ರಮಾಂಸಂ ಚ ಶುಷ್ಕಂ ಚ ವನ್ಯಂ ಚೋಚ್ಚಾವಚಂ ಮಹತ್॥ ೧೭

ಸುಮಂತ್ರನು ದೂರದಿಂದಲೇ ಕಂಡು ಭರತನ ಸಮೀಪಕ್ಕೆ ಹೋಗಿ ವಿನಯದಿಂದ ಹೀಗೆ ಹೇಳಿದನು. (೧೦-೧೧) ; "ರಾಜಪುತ್ರ, ನಿಷಾದರಾಜನಾದ ಗುಹನು ಸಾವಿರಾರು ಮಂದಿ ಪರಿವಾರದೊಡನೆ ಬರುತ್ತಿದ್ದಾನೆ. ಈತನಿಗೆ ದಂಡಕಾರಣ್ಯದ ವಿಷಯವೆಲ್ಲವೂ ಗೊತ್ತಿದೆ. ಇವನು ಈ ಅರಣ್ಯದಲ್ಲಿಯೇ ಬೆಳೆದವನು. ನಿನ್ನ ಅಣ್ಣನಿಗೆ ಮಿತ್ರನಾಗಿದ್ದಾನೆ (೧೨). ಆದ್ದರಿಂದ ಗುಹನಿಗೆ ಸಂದರ್ಶನವನ್ನು ಕೊಡು. ರಾಮಲಕ್ಷ್ಮಣರು ಎಲ್ಲಿದ್ದಾರೆಂಬುದು ಇವನಿಗೆ ನಿಶ್ಚಯವಾಗಿ ತಿಳಿದಿದೆ ಎಂದನು. ಸುಮಂತ್ರನು ಶುಭಕರವಾದ ಮಾತನ್ನಾಡಿದನೆಂದುಕೊಂಡು ಭರತನು ಗುಹನು ಕೂಡಲೆ ಬಂದು ನನ್ನನ್ನು ನೋಡಲಿ" ಎಂದು ತಿಳಿಸಿದನು (೧೩-೧೪). ಭರತನನ್ನು ಸಂದರ್ಶಿಸಲು ಗುಹನಿಗೆ ಅನುಮತಿ ದೊರೆಯಿತು. ಅವನು ಸಂತೋಷದಿಂದ ತನ್ನ ಪರಿವಾರದೊಡನೆ ಬಂದು ಭರತನನ್ನು ಸಂದರ್ಶಿಸಿ ವಿನಯದಿಂದ "ರಾಜಕುಮಾರ, ಈ ದೇಶವು ನಿನ್ನ ಅರಮನೆಗೆ ಸೇರಿದ ಒಂದು ಹೂದೋಟವೆಂದು ತಿಳಿ. ನೀನು ಬರುವುದು ನಮಗೆ ತಿಳಿಯದೆ ಮೋಸವಾಯಿತು. ನಾವೆಲ್ಲರೂ ನಿನ್ನ ಭೃತ್ಯವರ್ಗದವರು. ನಮ್ಮ ಮನೆಯಲ್ಲಿ ಉಳಿದುಕೊಳ್ಳಬೇಕೆಂದು ಅರಿಕೆಮಾಡುತ್ತೇವೆ (೧೫-೧೬). ಈ ಬೇಡರು ತಂದಿರುವ ಗಡ್ಡೆಗೆಣಸು ಹಣ್ಣುಹಂಪಲುಗಳು ಯಥೇಷ್ಟವಾಗಿವೆ. ಹಸಿಯ ಮಾಂಸವಾಗಲಿ

ಆಶಂಸೇ ಸ್ವಾಶಿತಾ ಸೇನಾ ವತ್ಸ್ಯತೀಮಾಂ ವಿಭಾವರೀಮ್ ।
ಅರ್ಚಿತೋ ವಿವಿಧೈಃ ಕಾಮೈಃ ಶ್ವಃ ಸಸೈನ್ಯೋ ಗಮಿಷ್ಯಸಿ ॥ ೧೮

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತುರಶೀತಿತಮಃ ಸರ್ಗಃ

ಪಂಚಾಶೀತಿತಮಃ ಸರ್ಗಃ

ಗುಹಸಮಾಗಮಃ

ಏವಮುಕ್ತಸ್ತು ಭರತೋ ನಿಷಾದಾಧಿಪತಿಂ ಗುಹಮ್ ।
ಪ್ರತ್ಯುವಾಚ ಮಹಾಪ್ರಾಜ್ಞೋ ವಾಕ್ಯಂ ಹೇತ್ವರ್ಥಸಂಹಿತಮ್ ॥ ೧

ಊರ್ಜಿತಃ ಖಲು ತೇ ಕಾಮಃ ಕೃತೋ ಮಮ ಗುರೋಃ ಸಖೇ ।
ಯೋ ಮೇ ತ್ವಮೀದೃಶೀಂ ಸೇನಾಮೇಕೋಽಭ್ಯರ್ಚಿತುಮಿಚ್ಛಸಿ ॥ ೨

ಒಣಗಿದುದಾಗಲಿ ಇವೆ. ಕಾಡಿನಲ್ಲಿ ದೊರೆಯುವ ನಾನಾಬಗೆಯ ಆಹಾರಪದಾರ್ಥಗಳಿವೆ (೧೭). ನಿನ್ನ ಸೇನೆಯು ಸುಖವಾಗಿ ಭೋಜನ ಮಾಡಿ ಈ ರಾತ್ರಿ ಇಲ್ಲಿಯೇ ಇರಲೆಂದು ನನ್ನ ಬೇಡಿಕೆ. ನೀನು ನನ್ನ ಸತ್ಕಾರವನ್ನು ಸ್ವೀಕರಿಸಿ ನಾಳೆ ಸೇನಾಸಮೇತನಾಗಿ ಪ್ರಯಾಣಮಾಡಬಹುದು'' ಎಂದು ನುಡಿದನು (೧೮).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಎಂಬತ್ತುನಾಲ್ಕನೆಯ ಸರ್ಗ

ಸರ್ಗ ೮೫

ಭರತನು ಗುಹನೊಡನೆ ತನ್ನ ದುಃಖವನ್ನು ಹೇಳಿಕೊಳ್ಳುವುದು.
ಗುಹನ ಸಮಾಧಾನ.

ಆಗ ಪ್ರಾಜ್ಞನಾದ ಭರತನು ಗುಹನನ್ನು ಕುರಿತು ಅರ್ಥವತ್ತಾಗಿ ಮಾತನಾಡುತ್ತ "ಸೌಮ್ಯ, ಪೂಜ್ಯನಾದ ನನ್ನ ಅಣ್ಣನಿಗೆ ನೀನು ಮಿತ್ರನಾಗಿರುವೆ. ಇಂಥ ಅಪಾರವಾದ ಸೇನೆಯನ್ನು ನೀನು ಸತ್ಕರಿಸಬೇಕೆಂದು ಉದ್ದೇಶಿಸಿರುವೆಯಲ್ಲ! ನಿನ್ನ ಈ ಮಹತ್ತರವಾದ ಅಭಿಲಾಷೆಯು ಕೈಗೂಡಿತೆಂದು ತಿಳಿ. ಸಮಸ್ತ ಸತ್ಕಾರವೂ ಸಂದಿತೆಂದು

ಇತ್ಯುಕ್ತ್ವಾತು ಮಹಾತೇಜಾ ಗುಹಂ ವಚನಮುತ್ತಮಮ್ ।
ಅಬ್ರವೀದ್ಭರಿತಃ ಶ್ರೀಮಾನ್ನಿಷಾದಾಧಿಪತಿಂ ಪುನಃ ॥ ೩

ಕತರೇಣ ಗಮಿಷ್ಯಾಮಿ ಭರದ್ವಾಜಾಶ್ರಮಂ ಗುಹ ।
ಗಹನೋಽಯಂ ಭೃಶಂ ದೇಶೋ ಗಂಗಾನೂಪೋ ದುರತ್ಯಯಃ ॥ ೪

ತಸ್ಯ ತದ್ವಚನಂ ಶ್ರುತ್ವಾ ರಾಜಪುತ್ರಸ್ಯ ಧೀಮತಃ ।
ಅಬ್ರವೀತ್ ಪ್ರಾಂಜಲಿರ್ವಾಕ್ಯಂ ಗುಹೋ ಗಹನಗೋಚರಃ ॥ ೫

ದಾಶಾಸ್ತ್ವಾನುಗಮಿಷ್ಯಂತಿ ಧನ್ವಿನಃ ಸುಸಮಾಹಿತಾಃ ।
ಅಹಂ ತ್ವಾನುಗಮಿಷ್ಯಾಮಿ ರಾಜಪುತ್ರ ಮಹಾಯಶಃ ॥ ೬

ಕಚ್ಚಿನ್ನ ದುಷ್ಟೋ ವ್ರಜಸಿ ರಾಮಸ್ಯಾಕ್ಲಿಷ್ಟಕರ್ಮಣಃ ।
ಇಯಂ ತೇ ಮಹತೀ ಸೇನಾ ಶಂಕಾಂ ಜನಯತೀವ ಮೇ ॥ ೭

ತಮೇವಮಭಿಭಾಷಂತಮಾಕಾಶ ಇವ ನಿರ್ಮಲಃ ।
ಭರತಃ ಶ್ಲಕ್ಷ್ಣಯಾ ವಾಚಾ ಗುಹಂ ವಚನಮಬ್ರವೀತ್ ॥ ೮

ಸಂತುಷ್ಟನಾಗಿದ್ದೇನೆ'' ಎಂದನು (೧-೨). ಮಹಾತೇಜಸ್ವಿಯಾದ ಭರತನು ಮತ್ತೆ ನಿಷಾದರಾಜನನ್ನು ಕುರಿತು'' ಗುಹ, ಭರದ್ವಾಜಾಶ್ರಮಕ್ಕೆ ನಾನು ಯಾವದಾರಿಯಲ್ಲಿ ಹೋಗುವುದು ಉತ್ತಮ? ಈ ಪ್ರದೇಶವು ಬಹಳ ದುರ್ಗಮವಾಗಿದೆ. ಗಂಗಾತೀರದಲ್ಲಿ ಈ ಜೌಗು ಪ್ರದೇಶವನ್ನು ದಾಟುವುದು ಕಷ್ಟವಾಗಿ ತೋರುತ್ತಿದೆ'' ಎಂದನು (೩-೪). ಆಗ ಅರಣ್ಯವಾಸಿಯಾದ ಗುಹನು ಕೈಮುಗಿದುಕೊಂಡು ಭರತನನ್ನುದ್ದೇಶಿಸಿ ''ರಾಜಪುತ್ರ, ನನ್ನ ಕಡೆಯ ವ್ಯಾಧರು ಧನುರ್ಧಾರಿಗಳಾಗಿ ಎಚ್ಚರಿಕೆಯಿಂದ ದಾರಿತೋರಿಸುತ್ತ ನಿನ್ನೊಡನೆ ಬರುವರು. ನಾನೂ ಬರುವೆನು (೫-೬). ಆದರೆ ಪುಣ್ಯಾತ್ಮನಾದ ಶ್ರೀರಾಮನ ಬಳಿಗೆ ನೀನು ದುರ್ಭಾವನೆಯಿಂದ ಹೋಗುತ್ತಿಲ್ಲವಷ್ಟೆ? ನಿನ್ನ ಈ ಮಹಾಸೇನೆಯನ್ನು ನೋಡಿದರೆ ನನಗೆ ಸ್ವಲ್ಪ ಸಂದೇಹವಾಗುತ್ತಿದೆ!'' ಎಂದು ಹೇಳಿದನು (೭). ಭರತನ ಸ್ವಭಾವವಾದರೊ ಆಕಾಶದಂತೆ ನಿರ್ಮಲ. ಅವನು ಸಮಾಧಾನದಿಂದಲೇ ಮೃದುವಾಗಿ ''ಗುಹ, ನನ್ನ ವಿಷಯದಲ್ಲಿಸಂದೇಹಪಡುವಂಥ ಕಾಲ ಎಂದಿಗೂ ಬರದಿರಲಿ! ಶ್ರೀರಾಮನು ನನಗೆ ಅಣ್ಣ, ನನ್ನ ತಂದೆಗೆ ಸಮಾನ.

ಮಾ ಭೂತ್ ಸ ಕಾಲೋ ಯತ್ಕಷ್ಟಂ ನ ಮಾಂ ಶಂಕಿತುಮರ್ಹಸಿ ।
ರಾಘವಃ ಸ ಹಿ ಮೇ ಭ್ರಾತಾ ಜ್ಯೇಷ್ಠಃ ಪಿತೃಸಮೋ ಮತಃ ॥ ೯

ತಂ ನಿವರ್ತಯಿತುಂ ಯಾಮಿ ಕಾಕುತ್ಸ್ಥಂ ವನವಾಸಿನಮ್ ।
ಬುದ್ಧಿರನ್ಯಾ ನ ತೇ ಕಾರ್ಯಾ ಗುಹ ಸತ್ಯಂ ಬ್ರವೀಮಿ ತೇ ॥ ೧೦

ಸ ತು ಸಂಹೃಷ್ಟವದನಃ ಶ್ರುತ್ವಾ ಭರತಭಾಷಿತಮ್ ।
ಪುನರೇವಾಬ್ರವೀದ್ವಾಕ್ಯಂ ಭರತಂ ಪ್ರತಿ ಹರ್ಷಿತಃ ॥ ೧೧

ಧನ್ಯಸ್ತ್ವಂ ನ ತ್ವಯಾ ತುಲ್ಯಂ ಪಶ್ಯಾಮಿ ಜಗತೀತಲೇ ।
ಅಯತ್ನಾದಾಗತಂ ರಾಜ್ಯಂ ಯಸ್ತ್ವಂ ತ್ಯಕ್ತುಮಿಹೇಚ್ಛಸಿ ॥ ೧೨

ಶಾಶ್ವತೀ ಖಲು ತೇ ಕೀರ್ತಿರ್ಲೋಕಾನನುಚರಿಷ್ಯತಿ ।
ಯಸ್ತ್ವಂ ಕೃಚ್ಛ್ರಗತಂ ರಾಮಂ ಪ್ರತ್ಯಾನಯಿತು ಮಿಚ್ಛಸಿ ॥ ೧೩

ಏವಂ ಸಂಭಾಷಮಾಣಸ್ಯ ಗುಹಸ್ಯ ಭರತಂ ತದಾ ।
ಬಭೌ ನಷ್ಟಪ್ರಭಃ ಸೂರ್ಯೋ ರಜನೀ ಚಾಭ್ಯವರ್ತತ ॥ ೧೪

ವನವಾಸಿಯಾಗಿರುವ ಆತನನ್ನು ಕರೆದುಕೊಂಡು ಬರುವುದಕ್ಕಾಗಿ ಹೋಗುತ್ತಿದ್ದೇನೆ. ನೀನು ಎಂದಿಗೂ ಅನ್ಯಥಾ ಭಾವಿಸಬೇಡ. ಗುಹ, ಸತ್ಯವನ್ನು ಹೇಳುತ್ತಿದ್ದೇನೆಂದು ತಿಳಿ '' ಎಂದನು (೮-೧೦). ಭರತನ ನುಡಿಯನ್ನು ಕೇಳಿ ಗುಹನ ಮುಖವು ಹರ್ಷದಿಂದ ಅರಳಿತು. ಅವನು ಭರತನ ವಿಷಯದಲ್ಲಿ ಸಂತುಷ್ಟನಾಗಿ ''ರಾಜಕುಮಾರ, ನೀನೇ ಧನ್ಯ. ಈ ಜಗತ್ತಿನಲ್ಲಿ ನಿನಗೆ ಸಮಾನರಾದವರಿಲ್ಲ. ತಾನಾಗಿ ಕೈಗೆ ಬಂದ ರಾಜ್ಯವನ್ನು ಬಿಟ್ಟುಕೊಡಲು ಸಿದ್ಧನಾಗಿರುವೆಯಲ್ಲ! (೧೧-೧೨). ನಿನ್ನ ಕೀರ್ತಿಯು ಶಾಶ್ವತವಾಗಿ ಲೋಕದಲ್ಲಿ ನಿಲ್ಲುವುದು. ಕಷ್ಟದಲ್ಲಿ ಸಿಕ್ಕಿರುವ ಶ್ರೀರಾಮನನ್ನು ಕರೆತರಲು ಸಂಕಲ್ಪಿಸಿದ್ದೀಯೆ'' ಎಂದು ನುಡಿದನು. ಈ ಪ್ರಕಾರದಲ್ಲಿ ಗುಹನು ಭರತನೊಡನೆ ಸಂಭಾಷಿಸುತ್ತಿರುವಾಗ ಸೂರ್ಯರಶ್ಮಿಯು ಮಂದವಾಗುತ್ತ ಬಂದು ರಾತ್ರಿಯಾಯಿತು (೧೩-೧೪).

ಸಂನಿವೇಶ್ಯ ಸ ತಾಂ ಸೇನಾಂ ಗುಹೇನ ಪರಿತೋಷಿತಃ ।
ಶತ್ರುಘ್ನೇನ ಸಹ ಶ್ರೀಮಾನ್ ಶಯನಂ ಪುನರಾಗಮತ್ ॥ ೧೫

ರಾಮಚಿಂತಾಮಯಃ ಶೋಕೋ ಭರತಸ್ಯ ಮಹಾತ್ಮನಃ ।
ಉಪಸ್ಥಿತೋ ಹ್ಯನರ್ಹಸ್ಯ ಧರ್ಮಪ್ರೇಕ್ಷಸ್ಯ ತಾದೃಶಃ ॥ ೧೬

ಅಂತರ್ದಾಹೇನ ದಹನಃ ಸಂತಾಪಯತಿ ರಾಘವಮ್ ।
ವನದಾಹಾಭಿಸಂತಪ್ತಂ ಗೂಢೋಽಗ್ನಿರಿವ ಪಾದಪಮ್ ॥ ೧೭

ಪ್ರಸೃತಃ ಸರ್ವಗಾತ್ರೇಭ್ಯಃ ಸ್ವೇದಂ ಶೋಕಾಗ್ನಿಸಂಭವಮ್ ।
ಯಥಾ ಸೂರ್ಯಾಂಶುಸಂತಪ್ತೋ ಹಿಮವಾನ್ ಪ್ರಸೃತೋ ಹಿಮಮ್ ॥ ೧೮

ಧ್ಯಾನನಿರ್ದರಶೈಲೇನ ವಿನಿಃಶ್ವಸಿತಧಾತುನಾ ।
ದೈನ್ಯಪಾದಪಸಂಘೇನ ಶೋಕಾಯಾಸಾಧಿಶೃಂಗಿಣಾ ॥ ೧೯

ಪ್ರಮೋಹಾನಂತಸತ್ತ್ವೇನ ಸಂತಾಪೌಷಧಿವೇಣುನಾ ।
ಆಕ್ರಾಂತೋ ದುಃಖಶೈಲೇನ ಮಹತಾ ಕೈಕಯೀಸುತಃ ॥ ೨೦

ಭರತನು ಶತ್ರುಘ್ನನೊಡನೆ ಗುಹನ ಸತ್ಕಾರವನ್ನು ಸ್ವೀಕರಿಸಿ ಸಂತುಷ್ಟನಾಗಿ, ಸೇನೆಯು ವಿಶ್ರಮಿಸುವಂತೆ ಸೂಚಿಸಿ, ತಾನು ವಿಶ್ರಾಂತಿಗಾಗಿ ಹಾಸಿಗೆಯ ಮೇಲೆ ಬಂದು ಕುಳಿತನು. ಧರ್ಮದಲ್ಲಿಯೇ ದೃಷ್ಟಿಯುಳ್ಳ ಮಹಾಪುರುಷನಾದ ಭರತನು ಹಿಂದೆ ದುಃಖವನ್ನು ಕಂಡವನಲ್ಲ. ಈಗ ಶ್ರೀರಾಮನ ಚಿಂತೆಯು ಬಹುದುಃಖವನ್ನು ಕೊಡುತ್ತ ಅವನನ್ನು ಆವರಿಸಿತ್ತು (೧೫-೧೬). ಅಂತರಂಗದಲ್ಲಿ ನಾಟಿದ ಚಿಂತೆಯಿಂದ ಕಂಗೆಟ್ಟ ಭರತನನ್ನು ಶೋಕಾಗ್ನಿಯು ಸುಡುತ್ತಿತ್ತು. ಕಾಳ್ಗಿಚ್ಚಿನ ಬೇಗೆಯಿಂದ ಒಣಗಿ ಸೀದುಹೋದ ಮರವನ್ನು ಮರದ ಒಳಗಡೆ ಸೇರಿದ ಬೆಂಕಿಯು ಸುಡುವಂತೆ ಆಗಿತ್ತು (೧೭). ಶೋಕಾಗ್ನಿಯಿಂದ ಸಂತಪ್ತನಾದ ಭರತನ ಸರ್ವಾಂಗಗಳಿಂದಲೂ ಬೆವರು ಹರಿದಿತ್ತು. ಸೂರ್ಯರಶ್ಮಿಯಿಂದ ಕಾದ ಹಿಮಾಲಯದಿಂದ ಹಿಮವು ಕರಗಿ ಹರಿದಂತಾಗಿತ್ತು (೧೮). ದುಃಖವೆಂಬ ಒಂದು ಮಹಾಪರ್ವತವು ಅವನ ಮೇಲೆ ಕವಿದುಬಿದ್ದಿತ್ತು. ಚಿಂತೆಗಳೇ ಆ ಪರ್ವತದಿಂದ ಉರುಳಿ ಬರುತ್ತಿದ್ದ ಬಂಡೆಗಳು. ನಿಟ್ಟುಸಿರುಗಳೇ ಹೊರಗೆ ಚೆಲ್ಲುತ್ತಿದ್ದ ಗೈರಿಕಾದಿ ಧಾತುಗಳು. ದೈನ್ಯದಿಂದ ದಿಕ್ಕುಗಾಣದೆ ನಿಂತಿರುವುದೇ ಮರಗಳ ರಾಶಿ. ಶೋಕ, ಆಯಾಸ ಮುಂತಾದ ಮನೋವ್ಯಥೆಗಳೇ ಶಿಖರಗಳು (೧೯). ಆಗಾಗ ಸಂಭವಿಸುತ್ತಿದ್ದ ಮೂರ್ಛೆಗಳೇ ದುಃಖಪರ್ವತದಲ್ಲಿದ್ದ ಕ್ರೂರಜಂತುಗಳು.

ವಿನಿಃಶ್ವಸನ್ ವೈ ಭೃಶದುರ್ಮನಾಸ್ತತಃ
ಪ್ರಮೂಢಸಂಜ್ಞಃ ಪರಮಾಪದಂ ಗತಃ ।
ಶಮಂ ನ ಲೇಭೇ ಹೃದಯಜ್ವರಾರ್ದಿತೋ
ನರರ್ಷಭೋ ಯೂಥಹತೋ ಯಥರ್ಷಭಃ ॥ ೨೧

ಗುಹೇನ ಸಾರ್ಧಂ ಭರತಃ ಸಮಾಗತೋ
ಮಹಾನುಭಾವಃ ಸಜನಃ ಸಮಾಹಿತಃ ।
ಸುದುರ್ಮನಾಸ್ತಂ ಭರತಂ ತದಾ ಪುನಃ
ಗುಹಃ ಸಮಾಶ್ವಾಸಯದಗ್ರಜಂ ಪ್ರತಿ ॥ ೨೨

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಪಂಚಾಶೀತಿತಮಃ ಸರ್ಗಃ

***

ಮನಃಸಂತಾಪಗಳೇ ಆ ಬೆಟ್ಟದಲ್ಲಿದ್ದ ಪೊದೆಗಳು; ಬಿದಿರು ಮೆಳೆಗಳು. ಈ ರೀತಿಯಲ್ಲಿ ದುಃಖವು ಅವನನ್ನು ಆವರಿಸಿತ್ತು (೨೦).

ಪುರುಷಶ್ರೇಷ್ಠನಾದ ಭರತನು ದೊಡ್ಡ ಸಂಕಟದಲ್ಲಿ ಸಿಲುಕಿದ್ದನು. ವಿಷಾದದಿಂದ ಬಿಸುಸುಯ್ಯುತ್ತ ದಿಕ್ಕುಗಾಣದವನಾಗಿದ್ದನು. ಅಂತರಂಗದ ಜ್ವರದಿಂದ ನರಳುತ್ತಿದ್ದನು. ಮಂದೆಯನ್ನು ತಪ್ಪಿ ಬಂದ ವೃಷಭದಂತಾಗಿದ್ದನು. ಅವನ ಮನಸ್ಸಿಗೆ ಶಾಂತಿಯೇ ಇಲ್ಲವಾಗಿತ್ತು (೨೧). ತನ್ನ ಪರಿವಾರದೊಡನೆಯೂ ಗುಹನೊಡನೆಯೂ ಕುಳಿತಿದ್ದ ಮಹಾನುಭಾವನಾದ ಭರತನು ಏಕಾಗ್ರಚಿತ್ತನಾಗಿ ಚಿಂತಿಸುತ್ತ ವಿಷಣ್ಣನಾಗಿದ್ದನು. ಆಗ ಗುಹನು ಭರತನಿಗೆ ಅವನ ಅಣ್ಣನ ವಿಷಯವಾಗಿ ಮಾತನಾಡುತ್ತ ಸಮಾಧಾನವನ್ನು ಹೇಳುತ್ತಿದ್ದನು (೨೨).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಎಂಬತ್ತೈದನೆಯ ಸರ್ಗ

***

ಷಡಶೀತಿತಮಃ ಸರ್ಗಃ

ಗುಹವಾಕ್ಯಮ್

ಆಚಚಕ್ಷೇಽಥ ಸದ್ಭಾವಂ ಲಕ್ಷ್ಮಣಸ್ಯ ಮಹಾತ್ಮನಃ ।
ಭರತಾಯಾಪ್ರಮೇಯಾಯ ಗುಹೋ ಗಹನಗೋಚರಃ ॥ ೧

ತಂ ಜಾಗ್ರತಂ ಗುಣೈರ್ಯುಕ್ತಂ ವರಚಾಪೇಷುಧಾರಿಣಮ್ ।
ಭ್ರಾತೃಗುಪ್ತ್ಯರ್ಥಮತ್ಯಂತಮಹಂ ಲಕ್ಷ್ಮಣಮಬ್ರವಮ್ ॥ ೨

ಇಯಂ ತಾತ ಸುಖಾ ಶಯ್ಯಾ ತ್ವದರ್ಥಮುಪಕಲ್ಪಿತಾ ।
ಪ್ರತ್ಯಾಶ್ವಸಿಹಿ ಶೇಷ್ವಾಸ್ಯಾಂ ಸುಖಂ ರಾಘವನಂದನ ॥ ೩

ಉಚಿತೋಽಯಂ ಜನಃ ಸರ್ವೋ ದುಃಖಾನಾಂ ತ್ವಂ ಸುಖೋಚಿತಃ ।
ಧರ್ಮಾತ್ಮಂಸ್ತಸ್ಯ ಗುಪ್ತ್ಯರ್ಥ್ಯಂ ಜಾಗರಿಷ್ಯಾಮಹೇ ವಯಮ್ ॥ ೪

ನ ಹಿ ರಾಮಾತ್ ಪ್ರಿಯತರೋ ಮಮಾಸ್ತಿ ಭುವಿ ಕಶ್ಚನ ।
ಮೋತ್ಸುಕೋ ಭೂರ್ಬ್ರವೀಮ್ಯೇತದಥ ಸತ್ಯಂ ತವಾಗ್ರತಃ ॥ ೫

ಸರ್ಗ ೮೬

ಲಕ್ಷ್ಮಣನು ಆಡಿದ ಮಾತನ್ನು ಗುಹನು ಭರತನಿಗೆ ಹೇಳುವುದು.

ಭರತನಿಗೆ ಸಮಾಧಾನ ಹೇಳಿ ವನಚಾರಿಯಾದ ಗುಹನು ಮಹಾತ್ಮನಾದ ಲಕ್ಷ್ಮಣನ ಸೌಜನ್ಯವನ್ನು ವಿಸ್ತರಿಸಿದನು : ರಾಜಪುತ್ರ, (ಇಲ್ಲಿ ಶ್ರೀರಾಮನು ನಿದ್ರಿಸುತ್ತಿದ್ದಾಗ) ಗುಣಶಾಲಿಯಾದ ಲಕ್ಷ್ಮಣನು ಅಣ್ಣನ ಅಂಗರಕ್ಷಣೆಗಾಗಿ ಧನುರ್ಬಾಣಗಳನ್ನು ಹಿಡಿದು ಬಹಳ ಎಚ್ಚರಿಕೆಯಿಂದ ಕಾವಲಾಗಿದ್ದನು. ಆಗ ನಾನು ಅವನನ್ನು ಕುರಿತು ಹೀಗೆಂದನು (೧-೨) : 'ಲಕ್ಷ್ಮಣ, ನಿನಗೋಸ್ಕರ ಮೃದುವಾದ ಹಾಸಿಗೆ ಸಿದ್ಧವಾಗಿದೆ. ಸಮಾಧಾನವನ್ನು ತಂದುಕೊಂಡು ಇದರಲ್ಲಿ ಸುಖವಾಗಿ ಮಲಗು. ವನಚಾರಿಗಳಾದ ನಾವೆಲ್ಲರೂ ಕಷ್ಟವನ್ನು ಸಹಿಸಬಲ್ಲೆವು. ನೀನು ಕಷ್ಟಪಡುವುದು ಸರಿಯಲ್ಲ, ಶ್ರೀರಾಮನ ರಕ್ಷಣೆಗಾಗಿ ನಾವು ಎಚ್ಚರವಾಗಿರುತ್ತೇವೆ (೩-೪). ಈ

ಅಸ್ಯ ಪ್ರಸಾದಾದಾಶಂಸೇ ಲೋಕೇಽಸ್ಮಿನ್ ಸುಮಹದ್ಯಶಃ ।
ಧರ್ಮಾವಾಪ್ತಿಂ ಚ ವಿಪುಲಾಮರ್ಥಾವಾಪ್ತಿಂ ಚ ಕೇವಲಾಮ್ ॥ ೬

ಸೋಽಹಂ ಪ್ರಿಯಸಖಂ ರಾಮಂ ಶಯಾನಂ ಸಹ ಸೀತಯಾ ।
ರಕ್ಷಿಷ್ಯಾಮಿ ಧನುಷ್ಪಾಣಿಃ ಸರ್ವೈಃ ಸ್ವೈರ್ಜ್ಞಾತಿಭಿಃ ಸಹ ॥ ೭

ನ ಹಿ ಮೇಽವಿದಿತಂ ಕಿಂಚಿದ್ವನೇಽಸ್ಮಿಂಶ್ಚರತಃ ಸದಾ ।
ಚತುರಂಗಂ ಹ್ಯಪಿ ಬಲಂ ಪ್ರಸಹೇಮ ವಯಂ ಯುಧಿ ॥ ೮

ಏವಮಸ್ಮಾಭಿರುಕ್ತೇನ ಲಕ್ಷ್ಮಣೇನ ಮಹಾತ್ಮನಾ ।
ಅನುನೀತಾ ವಯಂ ಸರ್ವೇ ಧರ್ಮಮೇವಾನುಪಶ್ಯತಾ ॥ ೯

ಕಥಂ ದಾಶರಥೌ ಭೂಮೌ ಶಯಾನೇ ಸಹ ಸೀತಯಾ ।
ಶಕ್ಯಾ ನಿದ್ರಾ ಮಯಾ ಲಬ್ಧುಂ ಜೀವಿತಂ ವಾ ಸುಖಾನಿ ವಾ ॥ ೧೦

ಯೋ ನ ದೇವಾಸುರೈಃ ಸರ್ವೈಃ ಶಕ್ಯಃ ಪ್ರಸಹಿತುಂ ಯುಧಿ ।
ತಂ ಪಶ್ಯ ಗುಹ ಸಂವಿಷ್ಟಂ ತೃಣೇಷು ಸಹ ಸೀತಯಾ ॥ ೧೧

ಜಗತ್ತಿನಲ್ಲಿ ಶ್ರೀರಾಮನಿಗಿಂತಲೂ ನನಗೆ ಹೆಚ್ಚು ಪ್ರಿಯನಾದವನು ಇನ್ನೊಬ್ಬನಿಲ್ಲ. ನೀನು ಚಿಂತಿಸಬೇಡ. ಸತ್ಯದ ಆಣೆಯಾಗಿ ಹೇಳುತ್ತಿದ್ದೇನೆ. ಈ ಲೋಕದಲ್ಲಿ ಮಹಾಕೀರ್ತಿಯೂ ಧರ್ಮವೂ ಐಶ್ವರ್ಯವೂ ಈತನ ಅನುಗ್ರಹದಿಂದಲೇ ನನಗೆ ದೊರೆಯುತ್ತವೆಯೆಂದು ಆಶಿಸುತ್ತೇನೆ (೫-೬). ಆದ್ದರಿಂದ ನಾನು ನನ್ನ ಪರಿವಾರದೊಡನೆ ಧನುಷ್ಪಾಣಿಯಾಗಿದ್ದು ಇಲ್ಲಿ ಮಲಗಿರುವ ನನ್ನ ಪ್ರಿಯಮಿತ್ರನಾದ ಶ್ರೀರಾಮನನ್ನೂ ಸೀತಾದೇವಿಯನ್ನೂ ರಕ್ಷಿಸುತ್ತಿರುವೆನು (೭). ಯಾವಾಗಲೂ ವನದಲ್ಲಿಯೇ ಸಂಚರಿಸುವ ನನಗೆ ಇಲ್ಲಿ ಗೊತ್ತಿಲ್ಲದ ವಿಷಯವಿಲ್ಲ. ಎಂಥ ಚತುರಂಗಬಲವು ಬಂದರೂ ನಾವು ಯುದ್ಧದಲ್ಲಿ ಎದುರಿಸಬಲ್ಲೆವು' ಎಂದು ಹೇಳಿದೆನು (೮). ಹೀಗೆ ನಾವೆಲ್ಲರೂ ಹೇಳಿದೆವು. ಆದರೆ ಧರ್ಮದಲ್ಲಿಯೇ ದೃಷ್ಟಿಯುಳ್ಳ ಮಹಾತ್ಮನಾದ ಲಕ್ಷ್ಮಣನು ಪ್ರತಿಯಾಗಿ ಸಮಾಧಾನ ಹೇಳುತ್ತ ಈ ರೀತಿ ನುಡಿದನು (೯) : 'ಗುಹ, ಈ ದಾಶರಥಿಯು ಸೀತಾಸಮೇತನಾಗಿ ನೆಲದಮೇಲೆ ಮಲಗಿದ್ದಾನೆ, ನೋಡು. ಈಗ ನನಗೆ ನಿದ್ರೆ ಬಂದೀತೇ? ಆಹಾರವಾಗಲಿ ಸುಖವಾಗಲಿ ಬೇಕೆನಿಸೀತೆ? ಸಮಸ್ತ ದೇವಾಸುರರು ಒಟ್ಟುಗೂಡಿ ಯುದ್ಧಕ್ಕೆ ಬಂದರೂ ಯಾರನ್ನು ಎದುರಿಸಲು ಶಕ್ಯವಿಲ್ಲವೊ, ಗುಹ, ಅಂಥ

ಮಹತಾ ತಪಸಾ ಲಬ್ಧೋ ವಿವಿಧೈಶ್ಚ ಪರಿಶ್ರಮೈಃ ।
ಏಕೋ ದಶರಥಸ್ಯೈಷ ಪುತ್ರಃ ಸದೃಶಲಕ್ಷಣಃ ॥ ೧೨

ಅಸ್ಮಿನ್ ಪ್ರವ್ರಾಜಿತೇ ರಾಜಾ ನ ಚಿರಂ ವರ್ತಯಿಷ್ಯತಿ ।
ವಿಧವಾ ಮೇದಿನೀ ನೂನಂ ಕ್ಷಿಪ್ರಮೇವ ಭವಿಷ್ಯತಿ ॥ ೧೩

ವಿನದ್ಯ ಸುಮಹಾನಾದಂ ಶ್ರಮೇಣೋಪರತಾಃ ಸ್ತ್ರಿಯಃ ।
ನಿರ್ಘೋಷೋಪರತಂ ನೂನಮದ್ಯ ರಾಜನಿವೇಶನಮ್ ॥ ೧೪

ಕೌಸಲ್ಯಾ ಚೈವ ರಾಜಾ ಚ ತಥೈವ ಜನನೀ ಮಮ ।
ನಾಶಂಸೇ ಯದಿ ಜೀವೇಯುಃ ಸರ್ವೇ ತೇ ಶರ್ವರೀಮಿಮಾಮ್ ॥

ಜೀವೇದಪಿ ಹಿ ಮೇ ಮಾತಾ ಶತ್ರುಘ್ನಸ್ಯಾನ್ವವೇಕ್ಷಯಾ ।
ದುಃಖಿತಾ ಯಾ ತು ಕೌಸಲ್ಯಾ ವೀರಸೂರ್ವಿನಶಿಷ್ಯತಿ ॥ ೧೬

ಅತಿಕ್ರಾಂತಮತಿಕ್ರಾಂತಮನವಾಪ್ಯ ಮನೋರಥಮ್ ।
ರಾಜ್ಯೇ ರಾಮಮನಿಕ್ಷಿಪ್ಯ ಪಿತಾ ಮೇ ವಿನಶಿಷ್ಯತಿ ॥ ೧೭

ವೀರಾಗ್ರಣಿಯು ಸೀತಾಸಮೇತನಾಗಿ ಹುಲ್ಲಿನ ಮೇಲೆ ಮಲಗಿರುವುದನ್ನು ನೋಡು! (೧೦-೧೧). ದಶರಥಮಹಾರಾಜನು ಮಹತ್ತರವಾದ ತಪಸ್ಸನ್ನು ಮಾಡಿ ನಾನಾ ಕಷ್ಟಗಳನ್ನು ಅನುಭವಿಸಿ ಅದ್ವಿತೀಯವಾದ ಈ ಪುತ್ರರತ್ನವನ್ನು ಪಡೆದಿದ್ದಾನೆ. ಇವನು ತಂದೆಗೆ ಅನುರೂಪನಾದ ಲಕ್ಷಣಸಂಪನ್ನ. ಇಂಥ ಪುತ್ರನು ದೇಶಭ್ರಷ್ಟನಾಗಿ ಬಂದ ಮೇಲೆ, ಮಹಾರಾಜನು ಬಹಳ ದಿನ ಉಳಿಯಲಾರ. ಭೂದೇವಿಯು ಶೀಘ್ರದಲ್ಲಿ ವಿಧವೆಯಾಗುವಳು (೧೨-೧೩). ಇಷ್ಟು ಹೊತ್ತಿಗೆ ಅರಮನೆಯಲ್ಲಿ ಸ್ತ್ರೀಯರು ಅತ್ತು ಅತ್ತು ಸಾಕಾಗಿ ಬಳಲಿ ಸುಮ್ಮನಾಗಿರಬಹುದು! ಅರಮನೆಯು ನಿಶ್ಶಬ್ದವಾಗಿರಬಹುದು. ಕೌಸಲ್ಯೆ, ಮಹಾರಾಜ, ನನ್ನ ತಾಯಿ-ಈ ಮೂವರೂ ಬದುಕಿರಲಾರರು. ಬದುಕಿದರೂ ಇದೊಂದು ರಾತ್ರಿ ಮಾತ್ರವೇ (೧೪-೧೫). ನನ್ನ ತಾಯಿ ಶತ್ರುಘ್ನನನ್ನು ನೋಡುವ ಬಯಕೆಯಿಂದ ಒಂದು ವೇಳೆ ಪ್ರಾಣವನ್ನು ಹಿಡಿದಾಳು. ಆದರೆ ವೀರಮಾತೆಯಾದ ಕೌಸಲ್ಯೆಯು ಬದುಕಲಾರಳೆಂಬುದು ದುಃಖಕರವಾದ ಪ್ರಸಂಗ (೧೬). ಒಟ್ಟಿನಲ್ಲಿ ಕಾರ್ಯವು ಮಿಂಚಿಹೋಯಿತು, ಮಿಂಚಿಹೋಯಿತು. ನನ್ನ ತಂದೆಯ ಆಸೆ ಕೈಗೂಡಲಿಲ್ಲ. ಶ್ರೀರಾಮನಿಗೆ ಪಟ್ಟಾಭಿಷೇಕಮಾಡಿ ರಾಜ್ಯವನ್ನು ವಹಿಸಿಕೊಡದೆಯೇ

ಸಿದ್ಧಾರ್ಥಾಃ ಪಿತರಂ ವೃತ್ತಂ ತಸ್ಮಿನ್ ಕಾಲೇ ಹ್ಯುಪಸ್ಥಿತೇ ।
ಪ್ರೇತಕಾರ್ಯೇಷು ಸರ್ವೇಷು ಸಂಸ್ಕರಿಷ್ಯಂತಿ ಭೂಮಿಪಮ್ ॥ ೧೮

ರಮ್ಯಚತ್ವರಸಂಸ್ಥಾನಾಂ ಸುವಿಭಕ್ತ ಮಹಾಪಥಮ್ ।
ಹರ್ಮ್ಯಪ್ರಾಸಾದಸಂಪನ್ನಾಂ ಸರ್ವರತ್ನವಿಭೂಷಿತಾಮ್ ॥ ೧೯

ಗಜಾಶ್ವರಥಸಂಬಾಧಾಂ ತೂರ್ಯನಾದವಿನಾದಿತಾಮ್ ।
ಸರ್ವಕಲ್ಯಾಣಸಂಪೂರ್ಣಾಂ ಹೃಷ್ಟಪುಷ್ಟಜನಾಕುಲಾಮ್ ॥ ೨೦

ಆರಾಮೋದ್ಯಾನಸಂಪನ್ನಾಂ ಸಮಾಜೋತ್ಸವಶಾಲಿನೀಮ್ ।
ಸುಖಿತಾ ವಿಚರಿಷ್ಯಂತಿ ರಾಜಧಾನೀಂ ಪಿತುರ್ಮಮ ॥ ೨೧

ಅಪಿ ಸತ್ಯಪ್ರತಿಜ್ಞೇನ ಸಾರ್ಧಂ ಕುಶಲಿನಾ ವಯಮ್ ।
ನಿವೃತ್ತೇ ಸಮಯೇ ಹ್ಯಸ್ಮಿನ್ ಸುಖಿತಾಃ ಪ್ರವಿಶೇಮಹಿ ॥ ೨೨

ಪರಿದೇವಯಮಾನಸ್ಯ ತಸ್ಯೈವಂ ಸಮಹಾತ್ಮನಃ ।
ತಿಷ್ಠತೋ ರಾಜಪುತ್ರಸ್ಯ ಶರ್ವರೀ ಸಾತ್ಯವರ್ತತ ॥ ೨೩

ಅವನು ಮರಣಹೊಂದುವನು. ಅಂಥ ಕಾಲವೂ ಬಂದರೆ, ಮೃತನಾದ ನಮ್ಮ ತಂದೆಗೆ ಉತ್ತರಕ್ರಿಯೆಯನ್ನು ಮಾಡತಕ್ಕವರೇ ಧನ್ಯರು, ಪುಣ್ಯಾತ್ಮರು (೧೭-೧೮). ಅಯೋಧ್ಯಾನಗರವು ರಮ್ಯವಾದ ಅಂಗಣಗಳಿಂದಲೂ ಚೆನ್ನಾಗಿ ವಿಂಗಡಿಸಿದ ವಿಶಾಲವಾದ ಬೀದಿಗಳಿಂದಲೂ ಉನ್ನತಭವನಗಳಿಂದಲೂ ಸರ್ವೋತ್ತಮ ವಸ್ತುಗಳಿಂದಲೂ ವಿರಾಜಿಸುತ್ತಿದೆ. ಆನೆ ಕುದುರೆ ರಥಗಳು ಸಂಚರಿಸುತ್ತಲೇ ಇರುತ್ತವೆ. ವಾದ್ಯಧ್ವನಿಗಳು ಹರಡಿರುತ್ತವೆ. ಅದು ಸಮಸ್ತ ಕಲ್ಯಾಣಗಳಿಗೂ ನೆಲೆಯಾಗಿದೆ. ಹೃಷ್ಟಪುಷ್ಟರಾದ ಜನರು ತುಂಬಿರುತ್ತಾರೆ (೧೯-೨೦). ನನ್ನ ತಂದೆಯ ರಾಜಧಾನಿಯಲ್ಲಿ ಕ್ರೀಡಾವನಗಳೂ ಹೂದೋಟಗಳೂ ವಿಪುಲವಾಗಿವೆ. ಜನಸಮೂಹವು ನಾನಾ ರೀತಿಯ ಉತ್ಸವಗಳನ್ನು ನಡೆಸುತ್ತಲೇ ಇರುವುದು. ಆ ನಗರದಲ್ಲಿ ಸಂಚರಿಸತಕ್ಕವರೇ ಭಾಗ್ಯವಂತರು! (೨೧). ಮಿತ್ರ, ನನ್ನ ಅಣ್ಣನು ಪ್ರತಿಜ್ಞೆಯನ್ನು ಪೂರೈಸಿ ಕುಶಲದಿಂದ ಹಿಂದಿರುಗಬಹುದೆ? ನಿಯತವಾದ ಕಾಲವು ಕಳೆದಮೇಲೆ ನಾವು ಸುಖವಾಗಿ ಅಯೋಧ್ಯೆಯನ್ನು ಪ್ರವೇಶಿಸುತ್ತೇವೆಯೆ? (೨೨). ಭರತ, ಈ ರೀತಿಯಲ್ಲಿ ಮಹಾತ್ಮನಾದ ಲಕ್ಷ್ಮಣನು ಕಳವಳದಿಂದ ಮಾತನಾಡುತ್ತ ನಿಂತೇ ಇದ್ದನು. ಅಷ್ಟರಲ್ಲಿ ಆ

ಪ್ರಭಾತೇ ವಿಮಲೇ ಸೂರ್ಯೇ ಕಾರಯಿತ್ವಾ ಜಟಾ ಉಭೌ ।
ಅಸ್ಮಿನ್ ಭಾಗೀರಥೀತೀರೇ ಸುಖಂ ಸಂತಾರಿತೌ ಮಯಾ ॥ ೨೪
ಜಟಾಧರೌ ತೌ ದ್ರುಮಚೀರವಾಸಸೌ
ಮಹಾಬಲೌ ಕುಂಜರಯೂಥಪೋಪಮೌ ।
ವರೇಷುಚಾಪಾಸಿಧರೌ ಪರಂತಪೌ
ವ್ಯವೇಕ್ಷಮಾಣೌ ಸಹ ಸೀತಯಾ ಗತೌ ॥ ೨೫

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಷಡಶೀತಿತಮಃ ಸರ್ಗಃ

❂❂❂

ರಾತ್ರಿ ಕಳೆದೇ ಹೋಯಿತು. ಬೆಳಗಾದ ಮೇಲೆ ನಿರ್ಮಲನಾದ ಸೂರ್ಯನು ಕಾಣಿಸಿದನು. ಶ್ರೀರಾಮಲಕ್ಷ್ಮಣರಿಬ್ಬರೂ ಜಟೆಯನ್ನು ನಿರ್ಮಿಸಿಕೊಂಡು ಗಂಗಾತೀರವನ್ನು ಸೇರಿದರು. ನಾನು ಗಂಗಾನದಿಯನ್ನು ಕ್ಷೇಮದಿಂದ ದಾಟಿಸಿದೆನು (೨೩-೨೪). ಮಹಾಬಲಾಢ್ಯರಾದ ಅವರಿಬ್ಬರೂ ಜಟಾಧಾರಿಗಳಾಗಿ ನಾರುಬಟ್ಟೆಯನ್ನುಟ್ಟು, ಮದ್ದಾನೆಗಳಂತೆ ನಡೆಯುತ್ತಿದ್ದರು. ಆ ವೀರರು ಧನುರ್ಬಾಣಗಳನ್ನೂ ಖಡ್ಗಗಳನ್ನೂ ಧರಿಸಿ ಜಾಗರೂಕತೆಯಿಂದ ಸೀತಾದೇವಿಯನ್ನು ಕರೆದುಕೊಂಡು ಮುಂದಕ್ಕೆ ಹೋದರು'' ಎಂದು ಗುಹನು ಭರತನಿಗೆ ಹೇಳಿದನು (೨೫).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಎಂಬತ್ತಾರನೆಯ ಸರ್ಗ

❂❂❂

ಸಪ್ತಾಶೀತಿತಮಃ ಸರ್ಗಃ

ರಾಮಶಯನಾದಿಪ್ರಶ್ನಃ

ಗುಹಸ್ಯ ವಚನಂ ಶ್ರುತ್ವಾ ಭರತೋ ಭೃಶಮಪ್ರಿಯಮ್ ।
ಧ್ಯಾನಂ ಜಗಾಮ ತತ್ರೈವ ಯತ್ರ ತಚ್ಛ್ರುತಮಪ್ರಿಯಮ್ ॥ ೧

ಸುಕುಮಾರೋ ಮಹಾಸತ್ತ್ವಃ ಸಿಂಹಸ್ಕಂಧೋ ಮಹಾಭುಜಃ ।
ಪುಂಡರೀಕವಿಶಾಲಾಕ್ಷಸ್ತರುಣಃ ಪ್ರಿಯದರ್ಶನಃ ॥ ೨

ಪ್ರತ್ಯಾಶ್ವಸ್ಯ ಮುಹೂರ್ತಂ ತು ಕಾಲಂ ಪರಮದುರ್ಮನಾಃ ।
ಪಪಾತ ಸಹಸಾ ತೋತ್ರೈರ್ಹೃದಿ ವಿದ್ಧ ಇವ ದ್ವಿಪಃ ॥ ೩

ತದವಸ್ಥಂ ತು ಭರತಂ ಶತ್ರುಘ್ನೋಽನಂತರಸ್ಥಿತಃ ।
ಪರಿಷ್ವಜ್ಯ ರುರೋದೋಚ್ಚೈರ್ವಿಸಂಜ್ಞಃ ಶೋಕಕರ್ಶಿತಃ ॥ ೪

ಸರ್ಗ ೮೭

ಶ್ರೀರಾಮನ ವೃತ್ತಾಂತವನ್ನು ಭರತನು ವಿವರವಾಗಿ ಕೇಳುವುದು;
ಗುಹನ ವಿವರಣೆ.

ಗುಹನ ಮಾತನ್ನು ಕೇಳಿ ಭರತನ ಮನಸ್ಸಿಗೆ ಬಹಳ ಕೆಡುಕೆನಿಸಿತು. ದುಃಖಕರವಾದ ಆ ವೃತ್ತಾಂತವನ್ನಾಲಿಸಿ ಭರತನು ಏನನ್ನೋ ಧ್ಯಾನಿಸುತ್ತ ಮೈಮರೆತನು (೧). ಭರತನಾದರೊ ಸುಕುಮಾರನಾದರೂ ಮಹಾಸತ್ತ್ವಶಾಲಿ. ಸಿಂಹದ ಹೆಗಲಿನಂತೆ ಕೊಬ್ಬಿದ ಹೆಗಲುಳ್ಳವನು. ಆಜಾನುಬಾಹು. ತಾವರೆಯ ದಳದಂತೆ ವಿಶಾಲವಾದ ನೇತ್ರಗಳುಳ್ಳ ತರುಣ. ಅವನನ್ನು ನೋಡಿದರೆ ಆನಂದವಾಗುವುದು (೨). ಆ ಭರತನು ಸ್ವಲ್ಪ ಕಾಲದಲ್ಲಿ ಹಾಗೆಯೇ ಚೇತರಿಸಿಕೊಂಡನು. ಮತ್ತೆ ಆತನಿಗೆ ತಡೆಯಲಾರದಷ್ಟು ಸಂಕಟವಾಯಿತು. ಶೂಲಗಳಿಂದ ಎದೆಯಲ್ಲಿ ತಿವಿಯಲ್ಪಟ್ಟ ಆನೆಯಂತೆ ದೊಪ್ಪನೆ ಉರುಳಿಬಿದ್ದನು (೩). ಸಮೀಪದಲ್ಲಿದ್ದ ಶತ್ರುಘ್ನನು ಹಾಗೆ ಬಿದ್ದ ಭರತನನ್ನು ಅಪ್ಪಿಕೊಂಡು ಶೋಕಾತುರನಾಗಿ, ಪ್ರಜ್ಞೆಯಿಲ್ಲದವನಂತೆ ಗಟ್ಟಿಯಾಗಿ ಅಳತೊಡಗಿದನು. ಆ ಶಬ್ದವನ್ನು

ತತಃ ಸರ್ವಾಃ ಸಮಾಪೇತುರ್ಮಾತರೋ ಭರತಸ್ಯ ತಾಃ ।
ಉಪವಾಸಕೃಶಾ ದೀನಾ ಭರ್ತುರ್ವ್ಯಸನಕರ್ಶಿತಾಃ ॥ ೫

ತಾಶ್ಚ ತಂ ಪತಿತಂ ಭೂಮೌ ರುದಂತ್ಯಃ ಪರ್ಯವಾರಯನ್ ।
ಕೌಸಲ್ಯಾ ತ್ವನುಸೃತ್ಯೈನಂ ದುರ್ಮನಾಃ ಪರಿಷಸ್ವಜೇ ॥ ೬

ವತ್ಸಲಾ ಸ್ವಂ ಯಥಾ ವತ್ಸಮುಪಗೂಹ್ಯ ತಪಸ್ವಿನೀ ।
ಪರಿಪಪ್ರಚ್ಛ ಭರತಂ ರುದಂತೀ ಶೋಕಕರ್ಶಿತಾ ॥ ೭

ಪುತ್ರ ವ್ಯಾಧಿರ್ನ ತೇ ಕಚ್ಚಿಚ್ಛರೀರಂ ಪರಿಬಾಧತೇ ।
ಅದ್ಯ ರಾಜಕುಲಸ್ಯಾಸ್ಯ ತ್ವದಧೀನಂ ಹಿ ಜೀವಿತಮ್ ॥ ೮

ತ್ವಾಂ ದೃಷ್ಟ್ವಾ ಪುತ್ರ ಜೀವಾಮಿ ರಾಮೇ ಸಭ್ರಾತೃಕೇ ಗತೇ ।
ವೃತ್ತೇ ದಶರಥೇ ರಾಜ್ಞಿ ನಾಥ ಏಕಸ್ತ್ವಮದ್ಯ ನಃ ॥ ೯

ಕಚ್ಚಿನ್ನು ಲಕ್ಷ್ಮಣೇ ಪುತ್ರ ಶ್ರುತಂ ತೇ ಕಿಂಚಿದಪ್ರಿಯಮ್ ।
ಪುತ್ರೇ ವಾ ಹ್ಯೇಕಪುತ್ರಾಯಾಃ ಸಹಭಾರ್ಯೇ ವನಂ ಗತೇ ॥ ೧೦

ಕೇಳಿ ಭರತನ ಮಾತೆಯರೆಲ್ಲರೂ ಓಡಿಬಂದರು. ಅವರೆಲ್ಲರೂ ತಮ್ಮ ಪತಿಯು ಮೃತನಾದನೆಂಬ ವ್ಯಸನದಿಂದ ದೀನರಾಗಿದ್ದರು. ಉಪವಾಸ ಮಾಡಿ ಕೃಶರಾಗಿದ್ದರು (೪-೫). ನೆಲದಮೇಲೆ ಬಿದ್ದ ಭರತನ ಸುತ್ತಲೂ ಮುತ್ತಿಕೊಂಡರು. ಕೌಸಲ್ಯೆಯು ಅಳುತ್ತ ಬಂದು ಭರತನನ್ನು ಅಪ್ಪಿಕೊಂಡಳು. ಶೋಕವು ಅವಳನ್ನು ಕಿತ್ತೆಳೆಯುತ್ತಿತ್ತು. ಆ ಸ್ವಾಯು ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನಂತೆ ಭರತನನ್ನು ವಾತ್ಸಲ್ಯದಿಂದ ತಬ್ಬಿಕೊಂಡು ಹೀಗೆ ಮಾತನಾಡಿದಳು (೬-೭) : ''ಮಗು, ಯಾವುದಾದರೂ ವ್ಯಾಧಿಯು ನಿನ್ನನ್ನು ಬಾಧಿಸುವುದೆ? ಈಗ ನಿನ್ನನ್ನು ನಂಬಿ ಈ ರಾಜಕುಟುಂಬವು ಜೀವಹಿಡಿದಿದೆ. ರಾಮನು ತಮ್ಮನೊಡನೆ ಹೊರಟುಹೋದ ಮೇಲೆ, ಮಗನೆ, ನಿನ್ನನ್ನು ನೋಡಿ ಬದುಕಿದ್ದೇನೆ. ದಶರಥ ಮಹಾರಾಜನು ಗತಿಸಿದ ಮೇಲೆ, ನೀನೊಬ್ಬನೇ ನಮಗೆ ಗತಿಯಾಗಿದ್ದೀಯೆ (೮-೯). ಕಂದ, ಏನಾಯಿತು ? ಲಕ್ಷ್ಮಣನ ವಿಷಯದಲ್ಲಿ ಏನಾದರೂ ಅಪ್ರಿಯವಾದ ಸುದ್ದಿ ಬಂದಿತೆ? ಅಥವಾ ತನ್ನ ಪತ್ನಿಯೊಡನೆ ಕಾಡಿಗೆ ಹೋಗಿರುವ ನನ್ನ ಪುತ್ರನ ವಿಷಯದಲ್ಲಿ – ಒಬ್ಬನೇ ಮಗನಿರುವ ನನ್ನ ಮಗನ ವಿಷಯವಾಗಿ – ಯಾವುದಾದರೂ ಕೆಟ್ಟ ಸುದ್ದಿ ಬಂದಿತೆ ?'' ಎಂದು ಕೇಳಿದಳು (೧೦). ಭರತನು ಸ್ವಲ್ಪಹೊತ್ತಿನಲ್ಲಿ

ಸ ಮುಹೂರ್ತಂ ಸಮಾಶ್ವಸ್ಯ ರುದನ್ನೇವ ಮಹಾಯಶಾಃ ।
ಕೌಸಲ್ಯಾಂ ಪರಿಸಾಂತ್ವ್ಯೇದಂ ಗುಹಂ ವಚನಮಬ್ರವೀತ್ ॥ ೧೧

ಭ್ರಾತಾ ಮೇ ಕ್ವಾವಸದ್ರಾತ್ರಿಂ ಕ್ವ ಸೀತಾ ಕ್ವ ಚ ಲಕ್ಷ್ಮಣಃ ।
ಅಸ್ವಪಚ್ಛಯನೇ ಕಸ್ಮಿನ್ ಕಿಂ ಭುಕ್ತ್ವಾ ಗುಹ ಶಂಸ ಮೇ ॥ ೧೨

ಸೋಽಬ್ರವೀದ್ಭರತಂ ಹೃಷ್ಟೋ ನಿಷಾದಾಧಿಪತಿರ್ಗುಹಃ ।
ಯದ್ವಿಧಂ ಪ್ರತಿಪೇದೇ ಚ ರಾಮೇ ಪ್ರಿಯಹಿತೇಽತಿಥೌ ॥ ೧೩

ಅನ್ನಮುಚ್ಚಾವಚಂ ಭಕ್ಷಾಃ ಫಲಾನಿ ವಿವಿಧಾನಿ ಚ ।
ರಾಮಾಯಾಭ್ಯವಹಾರಾರ್ಥಂ ಬಹು ಚೋಪಹೃತಂ ಮಯಾ ॥ ೧೪

ತತ್ಸರ್ವಂ ಪ್ರತ್ಯನುಜ್ಞಾಸೀದ್ರಾಮಃ ಸತ್ಯಪರಾಕ್ರಮಃ ।
ನ ತು ತತ್ಪ್ರತ್ಯಗೃಹ್ಣಾತ್ ಸ ಕ್ಷತ್ರಧರ್ಮಮನುಸ್ಮರನ್ ॥ ೧೫

ನ ಹ್ಯಸ್ಮಾಭಿಃ ಪ್ರತಿಗ್ರಾಹ್ಯಂ ಸಖೇ ದೇಯಂ ತು ಸರ್ವದಾ ।
ಇತಿ ತೇನ ವಯಂ ರಾಜನ್ನನುನೀತಾ ಮಹಾತ್ಮನಾ ॥ ೧೬

ಚೇತರಿಸಿಕೊಂಡು ಕೌಸಲ್ಯೆಯನ್ನು ಸಂತೈಸಿ, ಅಳುತ್ತಲೇ ಗುಹನನ್ನು ಕುರಿತು "ಗುಹ, ನನ್ನ ಅಣ್ಣನು ಆ ರಾತ್ರಿ ಎಲ್ಲಿ ಇಳಿದುಕೊಂಡಿದ್ದನು? ಸೀತಾದೇವಿ ಎಲ್ಲಿದ್ದಳು? ಲಕ್ಷ್ಮಣನು ಎಲ್ಲಿದ್ದ? ಅವರು ಏನನ್ನು ತಿಂದರು? ಯಾವ ಹಾಸಿಗೆಯಲ್ಲಿ ಮಲಗಿದರು? ಗುಹ, ಎಲ್ಲವನ್ನೂ ನನಗೆ ಹೇಳಪ್ಪಾ" ಎಂದನು (೧೧-೧೨). ಭರತನ ಭ್ರಾತೃಪ್ರೇಮವನ್ನು ಕಂಡು ಗುಹನು ಸಂತುಷ್ಟನಾದನು. ಆ ನಿಷಾದರಾಜನು ತನಗೆ ಪ್ರಿಯಾತಿಥಿಯಾಗಿ ಬಂದ ಶ್ರೀರಾಮನಿಗೆ ತಾನು ಮಾಡಿದ ಸತ್ಕಾರವನ್ನು ವಿವರಿಸಿ ಹೇಳಿದನು (೧೩) : "ಭರತ, ನಾನು ಶ್ರೀರಾಮನ ಭೋಜನಕ್ಕೋಸ್ಕರ ನಾನಾ ಬಗೆಯ ಅನ್ನವನ್ನೂ ಭಕ್ಷ್ಯಗಳನ್ನೂ ತರಿಸಿದೆ. ವಿವಿಧ ಫಲಮೂಲಗಳನ್ನೂ ಹೇರಳವಾಗಿ ಒದಗಿಸಿದೆ. ಆ ಭೋಜ್ಯವಸ್ತುಗಳೆಲ್ಲವನ್ನೂ ಸ್ವೀಕರಿಸಿದಂತೆಯೇ ತನಗೆ ತೃಪ್ತಿಯಾಯಿತೆಂದು ಆ ಸತ್ಯಸಂಧನು ಹೇಳಿಬಿಟ್ಟನೇ ಹೊರತು ಅವುಗಳನ್ನು ಸ್ವೀಕರಿಸಲೇ ಇಲ್ಲ. ಪ್ರತಿಗ್ರಹ ಮಾಡುವುದು ಕ್ಷತ್ರಿಯ ಧರ್ಮವಲ್ಲವೆಂದು ಆತನು ಭಾವಿಸಿದನು (೧೪-೧೫). ರಾಜಪುತ್ರ, 'ಆ ಮಹಾತ್ಮನು ಮಿತ್ರ-ಗುಹ, ನಾವು ಯಾವಾಗಲೂ ಇತರರಿಗೆ ಕೊಡಬೇಕೇ ಹೊರತು ಅವರಿಂದ ಸ್ವೀಕರಿಸಬಾರದು' ಎಂದು ನಮಗೆ ಸಮಾಧಾನ

ಲಕ್ಷ್ಮಣೇನ ಸಮಾನೀತಂ ಪೀತ್ವಾ ವಾರಿ ಮಹಾತ್ಮನಾ ।
ಔಪವಾಸ್ಯಂ ತದಾಕಾರ್ಷೀದ್ರಾಘವಃ ಸಹ ಸೀತಯಾ ॥ ೧೭

ತತಸ್ತು ಜಲಶೇಷೇಣ ಲಕ್ಷ್ಮಣೋಽಪ್ಯಕರೋತ್ತದಾ ।
ವಾಗ್ಯತಾಸ್ತೇ ತ್ರಯಃ ಸಂಧ್ಯಾಂ ಸಮುಪಾಸತ ಸಂಹಿತಾಃ ॥ ೧೮

ಸೌಮಿತ್ರಿಸ್ತು ತತಃ ಪಶ್ಚಾದಕರೋತ್ ಸ್ವಾಸ್ತರಂ ಶುಭಮ್ ।
ಸ್ವಯಮಾನೀಯ ಬರ್ಹೀಂಷಿ ಕ್ಷಿಪ್ರಂ ರಾಘವಕಾರಣಾತ್ ॥ ೧೯

ತಸ್ಮಿನ್ ಸಮಾವಿಶದ್ರಾಮಃ ಸ್ವಾಸ್ತರೇ ಸಹ ಸೀತಾಯಾ ।
ಪ್ರಕ್ಷಾಲ್ಯ ಚ ತಯೋಃ ಪಾದಾವಪಚಕ್ರಾಮ ಲಕ್ಷ್ಮಣಃ ॥ ೨೦

ಏತತ್ತದಿಂಗುದೀಮೂಲಮಿದಮೇವ ಚ ತತ್ತೃಣಮ್ ।
ಯಸ್ಮಿನ್ ರಾಮಶ್ಚ ಸೀತಾ ಚ ರಾತ್ರಿಂ ತಾಂ ಶಯಿತಾವುಭೌ ॥ ೨೧

ನಿಯಮ್ಯ ಪೃಷ್ಠೇ ತು ತಲಾಂಗುಲಿತ್ರವಾನ್
ಶರೈಃ ಸುಪೂರ್ಣಾವಿಷುಧೀ ಪರಂತಪಃ ।

ಹೇಳಿಬಿಟ್ಟನು. ಆ ಮಹಾಪುರುಷನು ಆಗ ಲಕ್ಷ್ಮಣನು ತಂದ ಗಂಗಾತೀರ್ಥವನ್ನು ಮಾತ್ರವೇ ಕುಡಿದು ಸೀತಾದೇವಿಯೊಡನೆ ಉಪವಾಸವಿದ್ದುಬಿಟ್ಟನು (೧೬-೧೭). ಲಕ್ಷ್ಮಣನೂ ಸಹ ಮಿಕ್ಕ ನೀರನ್ನು ಮಾತ್ರ ಕುಡಿದು ಹಾಗೆಯೇ ಇದ್ದನು. ಅವರು ಮೂವರು ವಾಙ್ನಿಯಮದಿಂದಿದ್ದು ಏಕಾಗ್ರಚಿತ್ತದಿಂದ ಸಂಧ್ಯೋಪಾಸನೆಯನ್ನು ಮಾಡಿದರು. ಅನಂತರ ಸೌಮಿತ್ರಿಯು ಬೇಗಬೇಗನೆ ಹೋಗಿ ದರ್ಭೆಗಳನ್ನು ತಂದು ಅಚ್ಚುಕಟ್ಟಾಗಿ ಹಾಸಿ ಶ್ರೀರಾಮನಿಗೋಸ್ಕರ ಒಂದು ಹಾಸಿಗೆಯನ್ನು ನಿರ್ಮಿಸಿದನು (೧೮-೧೯). ಶ್ರೀರಾಮನು ಸೀತಾಸಮೇತನಾಗಿ ಆ ಹುಲ್ಲಿನ ಹಾಸಿಗೆಯಲ್ಲಿ ಮಲಗಿದನು. ಲಕ್ಷ್ಮಣನು ನೀರನ್ನು ತಂದಿಟ್ಟು ಅವರೀರ್ವರೂ ಪಾದಗಳನ್ನು ತೊಳೆದುಕೊಳ್ಳಲು ಸೌಕರ್ಯಪಡಿಸಿ ಇತ್ತ ಹೊರಟುಬಂದನು. ಭರತ (ಇಲ್ಲಿನೋಡು), ಇದೇ ಇಂಗುದೀಮರದ ಅಡಿಯಲ್ಲಿ ಅವರು ಮಲಗಿದ್ದರು! ಇದೇ ಹುಲ್ಲು! ಸೀತಾರಾಮರಿಬ್ಬರೂ ಆ ರಾತ್ರಿ ಇಲ್ಲಿಯೇ ಮಲಗಿದ್ದರು (೨೦-೨೧). ಇತ್ತ ಲಕ್ಷ್ಮಣನು ಬಾಣಗಳಿಂದ ತುಂಬಿದ ಎರಡು ಬತ್ತಳಿಕೆಗಳನ್ನು ಬೆನ್ನಿಗೆ ಬಿಗಿದುಕಟ್ಟಿ ಅಂಗುಲಿತ್ರಾಣವನ್ನು ಧರಿಸಿ ಧನುಸ್ಸನ್ನು ಸಜ್ಜುಮಾಡಿಕೊಂಡನು. ಆ ಮಹಾಧನುಸ್ಸನ್ನು ಹಿಡಿದು ರೆಪ್ಪೆಮುಚ್ಚದೆ, ಅವನು

ಮಹದ್ಧನುಃ ಸಜ್ಯಮುಪೋಹ್ಯ ಲಕ್ಷ್ಮಣೋ
ನಿಶಾಮತಿಷ್ಠತ್ ಪರಿತೋಽಸ್ಯ ಕೇವಲಮ್ ॥ ೨೨

ತತಸ್ತ್ವಹಂ ಚೋತ್ತಮಬಾಣಚಾಪಧೃತ್
ಸ್ಥಿತೋಽಭವಂ ತತ್ರ ಸ ಯತ್ರ ಲಕ್ಷ್ಮಣಃ ।
ಅತಂದ್ರಿಭಿರ್ಜ್ಞಾತಿಭಿರಾತ್ತಕಾರ್ಮುಕೈಃ
ಸಹೇಂದ್ರಕಲ್ಪಂ ಪರಿಪಾಲಯಂತಸ್ತದಾ ॥ ೨೩

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತಾಶೀತಿತಮಃ ಸರ್ಗಃ

❁❁❁

ರಾತ್ರಿಯೆಲ್ಲವೂ ಶ್ರೀರಾಮನ ಸುತ್ತಲೂ ಕಾವಲಾಗಿ ನಿಂತಿದ್ದನು (೨೨). ಆಗ ನಾನೂ ಉತ್ತಮವಾದ ಧನುರ್ಬಾಣಗಳನ್ನು ಧರಿಸಿ, ಲಕ್ಷ್ಮಣನ ಜೊತೆಯಲ್ಲಿದ್ದೆನು. ನನ್ನ ಕಡೆಯವರೂ ಧನುರ್ಧಾರಿಗಳಾಗಿ ಕಾವಲಾಗಿದ್ದರು. ಹೀಗೆ ದೇವೇಂದ್ರಸದೃಶನಾದ ಶ್ರೀರಾಮನನ್ನು ನಾವು ಆಗ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿದ್ದೆವು'' ಎಂದು ಗುಹನು ಹೇಳಿದನು (೨೩).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಎಂಬತ್ತೇಳನೆಯ ಸರ್ಗ

❁❁❁

ಅಷ್ಟಾಶೀತಿತಮಃ ಸರ್ಗಃ

ಶಯ್ಯಾನುವೀಕ್ಷಣಮ್

ತಚ್ಛ್ರುತ್ವಾ ನಿಪುಣಂ ಸರ್ವಂ ಭರತಃ ಸಹ ಮಂತ್ರಿಭಿಃ ।
ಇಂಗುದೀಮೂಲಮಾಗಮ್ಯ ರಾಮಶಯ್ಯಾಮವೇಕ್ಷ್ಯ ತಾಮ್ ॥ ೧

ಅಬ್ರವೀಜ್ಜನನೀಃ ಸರ್ವಾ ಇಹ ತೇನ ಮಹಾತ್ಮನಾ ।
ಶರ್ವರೀ ಶಯಿತಾ ಭೂಮಾವಿದಮಸ್ಯ ವಿಮರ್ದಿತಮ್ ॥ ೨

ಮಹಾಭಾಗಕುಲೀನೇನ ಮಹಾಭಾಗೇನ ಧೀಮತಾ ।
ಜಾತೋ ದಶರಥೇನೋರ್ವ್ಯಾಂ ನ ರಾಮಃ ಸ್ವಪ್ತುಮರ್ಹತಿ ॥ ೩

ಅಜಿನೋತ್ತರಸಂಸ್ತೀರ್ಣೇ ವರಾಸ್ತರಣಸಂವೃತೇ ।
ಶಯಿತ್ವಾ ಪುರುಷವ್ಯಾಘ್ರಃ ಕಥಂ ಶೇತೇ ಮಹೀತಲೇ ॥ ೪

ಪ್ರಾಸಾದಾಗ್ರವಿಮಾನೇಷು ವಲಭೀಷು ಚ ಸರ್ವದಾ ।
ಹೈಮರಾಜತಭೌಮೇಷು ವರಾಸ್ತರಣಶಾಲಿಷು ॥ ೫

ಸರ್ಗ ೮೮

ಶ್ರೀರಾಮನು ಮಲಗಿದ್ದ ಸ್ಥಳವನ್ನು ನೋಡಿ ಭರತನು ದುಃಖಿಸುವುದು.

ಗುಹನ ಹೇಳಿಕೆಯನ್ನು ಭರತನು ಕಿವಿಗೊಟ್ಟು ಆಲಿಸಿದನು. ಅನಂತರ ಮಂತ್ರಿಗಳೊಡನೆ ಇಂಗುದೀಮರದ ಬುಡಕ್ಕೆ ಹೋಗಿ ಶ್ರೀರಾಮನು ಮಲಗಿದ್ದ ಹಾಸಿಗೆಯನ್ನು ನೋಡುತ್ತ, ಸುತ್ತಲೂ ಇದ್ದ ತನ್ನ ಮಾತೆಯರನ್ನು ಕುರಿತು ಹೀಗೆಂದನು (೧) : "ಜನನಿಯರೆ, ಆ ಮಹಾತ್ಮನು ಮಲಗಿದ್ದ ಸ್ಥಳವಿದು. ಈ ನೆಲದ ಮೇಲೆ ಮಲಗಿ ಒಂದು ರಾತ್ರಿಯನ್ನು ಕಳೆದಿದ್ದಾನೆ. ಮಲಗಿ ಹೊರಳಿದ ಗುರುತಿದೆ. ಮಹಾವಂಶದಲ್ಲಿ ಮಹಾಭಾಗ್ಯಶಾಲಿಯಾಗಿ ಜನಿಸಿ, ದಶರಥ ಮಹಾರಾಜನಿಗೆ ಮಗನಾಗಿ, ಧೀಮಂತನಾದ ಶ್ರೀರಾಮನು ನೆಲದ ಮೇಲೆ ಮಲಗುವುದು ಯೋಗ್ಯವಾದೀತೇ? (೨-೩). ಮೃದುವಾದ ಚರ್ಮಗಳನ್ನು ಹಾಸಿ ಸರ್ವೋತ್ತಮವಾದ ಆಸ್ತರಣಗಳನ್ನು ಬಿಚ್ಚಿರುವ ಪರ್ಯಂಕದಲ್ಲಿ ಪವಡಿಸುತ್ತಿದ್ದ ಆ ಪುರುಷೋತ್ತಮನು ಈ ನೆಲದ ಮೇಲೆ ಹೇಗೆ ಮಲಗಿಯಾನು ? ಸೌಧಗಳಲ್ಲಿ ವಿಮಾನಸದೃಶವಾದ ಮಹಡಿಗಳಲ್ಲಿಯೂ

ಪುಷ್ಪಸಂಚಯಚಿತ್ರೇಷು ಚಂದನಾಗರುಗಂಧಿಷು ।
ಪಾಂಡರಾಭ್ರಪ್ರಕಾಶೇಷು ಶುಕಸಂಘರುತೇಷು ಚ ॥ ೬

ಪ್ರಾಸಾದವರವರ್ಯೇಷು ಶೀತವತ್ಸು ಸುಗಂಧಿಷು ।
ಉಷಿತ್ವಾ ಮೇರುಕಲ್ಪೇಷು ಕೃತಕಾಂಚನಭಿತ್ತಿಷು ॥ ೭

ಗೀತವಾದಿತ್ರನಿರ್ಘೋಷೈರ್ವರಾಭರಣನಿಃಸ್ವನೈಃ ।
ಮೃದಂಗವರಶಬ್ದೈಶ್ಚ ಸತತಂ ಪ್ರತಿಬೋಧಿತಃ ॥ ೮

ವಂದಿಭಿರ್ವಂದಿತಃ ಕಾಲೇ ಬಹುಭಿಃ ಸೂತಮಾಗಧೈಃ ।
ಗಾಥಾಭಿರನುರೂಪಾಭಿಃ ಸ್ತುತಿಭಿಶ್ಚ ಪರಂತಪಃ ॥ ೯

ಅಶ್ರದ್ಧೇಯಮಿದಂ ಲೋಕೇ ನ ಸತ್ಯಂ ಪ್ರತಿಭಾತಿ ಮಾಮ್ ।
ಮುಹ್ಯತೇ ಖಲು ಮೇ ಭಾವಃ ಸ್ವಪ್ನೋಽಯಮಿತಿ ಮೇ ಮತಿಃ ॥ ೧೦

ಉನ್ನತವಾದ ಮೇಲ್ಮನೆಗಳಲ್ಲಿಯೂ ಚಿನ್ನಬೆಳ್ಳಿಗಳಿಂದ ಅಲಂಕೃತವಾದ ಪ್ರದೇಶದಲ್ಲಿ ರತ್ನಗಂಬಳಿಯ ಹಾಸಿಗೆಯಲ್ಲಿ ಮಲಗುತ್ತಿದ್ದವನು ಶ್ರೀರಾಮ (೪-೫). ಆ ಸ್ಥಳವು ನಾನಾಬಗೆಯ ಚಿತ್ರವರ್ಣದ ಹೂಗಳಿಂದ ಭೂಷಿತವಾಗಿ ಚಂದನ ಅಗರುಗಳ ಸುಗಂಧವನ್ನು ಬೀರುವುದು. ಅವನು ಗಿಳಿ ಹಿಂಡುಗಳ ಕೂಗಿನಿಂದ ತುಂಬಿ, ಬಿಳಿಯ ಮೋಡದಂತಿರುವ ಭವನದಲ್ಲಿದ್ದವನು (೬). ಚಿನ್ನದ ಗೋಡೆಗಳಿಂದ ನಿರ್ಮಿತವಾಗಿ ಮೇರುಪರ್ವತದಂತೆ ಕಂಗೊಳಿಸುವ ಪ್ರಾಸಾದಗಳಲ್ಲಿ ವಾಸವಾಗಿದ್ದವನು. ಸುಗಂಧವನ್ನು ಬೀರುವ ತಂಪಾದ ಅರಮನೆಯಲ್ಲಿದ್ದವನು. ಪ್ರಭಾತದಲ್ಲಿ ಗೀತವಾದ್ಯಗಳ ಮಂಗಳಧ್ವನಿಯನ್ನು ಕೇಳಿ ಎಚ್ಚರಗೊಳ್ಳುತ್ತಿದ್ದವನು. (ಅಂತಃಪುರ ಸ್ತ್ರೀಯರ) ಆಭರಣಗಳ ಶಬ್ದವನ್ನೂ ಮೃದಂಗದ ಮೃದುನಾದವನ್ನೂ ಕೇಳುತ್ತ ಎಚ್ಚರಗೊಳ್ಳುತ್ತಿದ್ದವನು (೭-೮). ವಂದಿಸೂತಮಾಗಧರು ಕಾಲಕಾಲಕ್ಕೆ ಬಂದು ಹಾಡುಗಳನ್ನು ಹಾಡಿ ಸ್ತೋತ್ರಗಳನ್ನು ಪಠಿಸಿ ಆ ವೀರಾಗ್ರಣಿಗೆ ವಂದಿಸಿ ಹೋಗುತ್ತಿದ್ದರಲ್ಲವೆ? (ಅಂಥವನು ಈಗ ಇಲ್ಲಿ ನೆಲದ ಮೇಲೆ ಮಲಗ ಬೇಕಾಯಿತೆಂದರೆ) ಇದು ನಂಬತಕ್ಕದ್ದಲ್ಲ. ಇದು ಸತ್ಯವೆಂದು ತೋರುವುದಿಲ್ಲ. ನನ್ನ ಮನಸ್ಸಿಗೆ ಭ್ರಮೆ ಹಿಡಿದಿರಬೇಕು! ನನಗೆ ಕನಸುಬಿದ್ದಿರಬೇಕು! (೯-೧೦).

ನ ನೂನಂ ದೈವತಂ ಕಿಂಚಿತ್ ಕಾಲೇನ ಬಲವತ್ತರಮ್ ।
ಯತ್ರ ದಾಶರಥೀ ರಾಮೋ ಭೂಮಾವೇವಮಶೇತ ಸಃ ॥ ೧೧

ವಿದೇಹರಾಜಸ್ಯ ಸುತಾ ಸೀತಾ ಚ ಪ್ರಿಯದರ್ಶನಾ ।
ದಯಿತಾ ಶಯಿತಾ ಭೂಮೌ ಸ್ನುಷಾ ದಶರಥಸ್ಯ ಚ ॥ ೧೨

ಇಯಂ ಶಯ್ಯಾ ಮಮ ಭ್ರಾತುರಿದಂ ಹಿ ಪರಿವರ್ತಿತಮ್ ।
ಸ್ಥಂಡಿಲೇ ಕಠಿನೇ ಸರ್ವಂ ಗಾತ್ರೈರ್ವಿಮೃದಿತಂ ತೃಣಮ್ ॥ ೧೩

ಮನ್ಯೇ ಸಾಭರಣಾ ಸುಪ್ತಾ ಸೀತಾಸ್ಮಿನ್ ಶಯನೇ ಶುಭಾ ।
ತತ್ರ ತತ್ರ ಹಿ ದೃಶ್ಯಂತೇ ಸಕ್ತಾಃ ಕನಕಬಿಂದವಃ ॥ ೧೪

ಉತ್ತರೀಯಮಿಹಾಸಕ್ತಂ ಸುವ್ಯಕ್ತಂ ಸೀತಯಾ ತದಾ ।
ತಥಾ ಹ್ಯೇತೇ ಪ್ರಕಾಶಂತೇ ಸಕ್ತಾಃ ಕೌಶೇಯತಂತವಃ ॥ ೧೫

ಮನ್ಯೇ ಭರ್ತುಃ ಸುಖಾ ಶಯ್ಯಾ ಯೇನ ಬಾಲಾ ತಪಸ್ವಿನೀ ।
ಸುಕುಮಾರೀ ಸತೀ ದುಃಖಂ ನ ವಿಜಾನಾತಿ ಮೈಥಿಲೀ ॥ ೧೬

ಕಾಲಗತಿಗಿಂತಲೂ ಬಲಶಾಲಿಯಾದ ಯಾವ ದೇವತೆಯೂ ಇಲ್ಲ. ದಶರಥಪುತ್ರನಾದ ಶ್ರೀರಾಮನೂ ನೆಲದ ಮೇಲೆ ಹೀಗೆ ಮಲಗಬೇಕಾಯಿತಲ್ಲ! ಜನಕಮಹಾರಾಜನ ಆ ಪುತ್ರಿ - ಯಾರ ದರ್ಶನದಿಂದ ಹೃದಯಕ್ಕೆ ಆನಂದವಾಗುವುದೋ ಆ ಸೀತಾದೇವಿ - ದಶರಥರಾಜನ ಪ್ರೀತಿಯ ಸೊಸೆ ಬರಿಯ ನೆಲದ ಮೇಲೆ ಮಲಗಿದಳು! (೧೧-೧೨). ಇದೇ ನನ್ನ ಅಣ್ಣನು ಮಲಗಿದ್ದ ಹಾಸಿಗೆ! ಇದು ಅವನು ಹೊರಳಿದ ಸ್ಥಳ. ಒರಟಾದ ಕಲ್ಲುನೆಲದಲ್ಲಿ ಹಾಸಿದ ಹುಲ್ಲು, ಮೈಯನ್ನು ಹೊರಳಿಸಿದ್ದರಿಂದ ನುಗ್ಗಾಗಿದೆ. ಮಾತೆಯರೆ, ಮಂಗಳಾಂಗಿಯಾದ ಸೀತಾದೇವಿಯು ಒಡವೆಗಳನ್ನು ಧರಿಸಿಕೊಂಡು ಇಲ್ಲಿ ಮಲಗಿರಬೇಕೆಂದು ತೋರುತ್ತದೆ. ಅಲ್ಲಲ್ಲಿ ಚಿನ್ನದ ಪುಡಿಗಳು ಹುಲ್ಲಿನಲ್ಲಿ ಸಿಕ್ಕಿಕೊಂಡಿರುವುದು ಕಾಣಿಸುತ್ತದೆ (೧೩-೧೪). ಇಲ್ಲಿ ಆ ದೇವಿಯು ತನ್ನ ಉತ್ತರೀಯವನ್ನು ತೆಗೆದಿಟ್ಟಿರಬೇಕೆಂದು ಚೆನ್ನಾಗಿ ಗೊತ್ತಾಗುತ್ತದೆ. ಏಕೆಂದರೆ, ರೇಶ್ಮೆಯ ಎಳೆಗಳು ಇಲ್ಲಿ ಸ್ಪಷ್ಟವಾಗಿ ಕಾಣಿಸುತ್ತಿವೆ (೧೫). ಪತಿವ್ರತೆಯಾದ ಸಾಧ್ವಿಗೆ ತನ್ನ ಪತಿಯ ಹಾಸಿಗೆಯು ಹೇಗಿದ್ದರೂ ಹಿತಕರವಾಗಿಯೇ ತೋರುವುದೆಂದು ಎಣಿಸುತ್ತೇನೆ. ಆದ್ದರಿಂದ ಮೈಥಿಲಿಯು ಎಳೆಯಪ್ರಾಯದವಳೂ ಸುಕುಮಾರಿಯೂ

ಹಾ ಹತೋಽಸ್ಮಿ ನೃಶಂಸೋಽಹಂ ಯತ್ ಸಭಾರ್ಯಃ ಕೃತೇ ಮಮ ।
ಈದೃಶೀಂ ರಾಘವಃ ಶಯ್ಯಾಮಧಿಶೇತೇ ಹ್ಯನಾಥವತ್ ॥ ೧೭

ಸಾರ್ವಭೌಮಕುಲೇ ಜಾತಃ ಸರ್ವಲೋಕಸುಖಾವಹಃ ।
ಸರ್ವಲೋಕಪ್ರಿಯಸ್ತ್ಯಕ್ತ್ವಾ ರಾಜ್ಯಂ ಸುಖಮನುತ್ತಮಮ್ ॥ ೧೮

ಕಥಮಿಂದೀವರಶ್ಯಾಮೋ ರಕ್ತಾಕ್ಷಃ ಪ್ರಿಯದರ್ಶನಃ ।
ಸುಖಭಾಗೀ ನ ದುಃಖಾರ್ಹಃ ಶಯಿತೋ ಭುವಿ ರಾಘವಃ ॥ ೧೯

ಧನ್ಯಃ ಖಲು ಮಹಾಭಾಗೋ ಲಕ್ಷ್ಮಣಃ ಶುಭಲಕ್ಷಣಃ ।
ಭ್ರಾತರಂ ವಿಷಮೇ ಕಾಲೇ ಯೋ ರಾಮಮನುವರ್ತತೇ ॥ ೨೦

ಸಿದ್ಧಾರ್ಥಾ ಖಲು ವೈದೇಹೀ ಪತಿಂ ಯಾನುಗತಾ ವನಮ್ ।
ವಯಂ ಸಂಶಯಿತಾಃ ಸರ್ವೇ ಹೀನಾಸ್ತೇನ ಮಹಾತ್ಮನಾ ॥ ೨೧

ಅಕರ್ಣಧಾರಾ ಪೃಥಿವೀ ಶೂನ್ಯೇವ ಪ್ರತಿಭಾತಿ ಮೇ ।
ಗತೇ ದಶರಥೇ ಸ್ವರ್ಗಂ ರಾಮೇ ಚಾರಣ್ಯಮಾಶ್ರಿತೇ ॥ ೨೨

ಆಗಿದ್ದರೂ ಇದು ದುಃಖಕರವೆಂದು ಭಾವಿಸಲಿಲ್ಲ (೧೬). ಅಯ್ಯೋ! ನಾನು ಕೆಟ್ಟೆನು! ನಾನು ಮಹಾನೀಚ! ನನಗೋಸ್ಕರ ರಾಘವನು ಪತ್ನಿಸಮೇತನಾಗಿ ದಿಕ್ಕಿಲ್ಲದವನಂತೆ ಇಂಥ ಹಾಸಿಗೆಯಲ್ಲಿ ಮಲಗಬೇಕಾಯಿತೆ! (೧೭). ಚಕ್ರವರ್ತಿಯ ಮನೆಯಲ್ಲಿ ಹುಟ್ಟಿ ಸಮಸ್ತರಿಗೂ ಸುಖವನ್ನು ಕೋರುತ್ತ ಸರ್ವಲೋಕ ಪ್ರಿಯನಾದ ರಾಘವನು ರಾಜ್ಯವನ್ನು ತ್ಯಜಿಸಿ ಸುಖವನ್ನು ಬದಿಗೊತ್ತಬೇಕಾಯಿತೆ? ಇಂದೀವರಶ್ಯಾಮನಾಗಿ ನಸುಗೆಂಪಾದ ಕಣ್ಣುಗಳಿರುವ ಶ್ರೀರಾಮನ ದರ್ಶನಮಾತ್ರದಿಂದಲೇ ಲೋಕಕ್ಕೆ ಆನಂದವಾಗುವುದು. ಅವನು ಸುಖವಾಗಿ ಇರಬೇಕಾದವನೇ ಹೊರತು ಈ ಬಗೆಯ ಕಷ್ಟಕ್ಕೆ ತಕ್ಕವನಲ್ಲ. ಅವನು ನೆಲದಮೇಲೆ ಹೇಗೆ ಮಲಗಿರಬಹುದು ? (೧೮-೧೯). ಆಹಾ! ಲಕ್ಷ್ಮಣನೇ ಧನ್ಯ! ಅವನೇ ಭಾಗ್ಯಶಾಲಿ ! ಲಕ್ಷ್ಮಣಸಂಪನ್ನವೆಂದರೆ ಅವನೇ ಕಷ್ಟಕಾಲದಲ್ಲಿ ಅಣ್ಣನಿಗೆ ನೆರವಾಗಿ ಹಿಂಬಾಲಿಸಿ ಹೋಗಿದ್ದಾನೆ. ವೈದೇಹಿಯೇ ಪುಣ್ಯಾತ್ಮಳು. ತನ್ನ ಪತಿಯೊಡನೆ ಕಾಡಿಗೆ ಹೋಗಿಬಿಟ್ಟಳು. ಆ ಮಹಾತ್ಮನನ್ನು ಕಳೆದುಕೊಂಡ ನಮಗೆ ಆತನನ್ನು ಸೇವಿಸುವ ಭಾಗ್ಯ ಲಭಿಸುವುದೊ ಇಲ್ಲವೊ! (೨೦-೨೧). ದಶರಥಮಹಾರಾಜನು ಸ್ವರ್ಗಸ್ಥನಾದನು. ಇತ್ತ ಶ್ರೀರಾಮನು

ನ ಚ ಪ್ರಾರ್ಥಯತೇ ಕಶ್ಚಿನ್ಮನಸಾಪಿ ವಸುಂಧರಾಮ್ ।
ವನೇಽಪಿ ವಸತಸ್ತಸ್ಯ ಬಾಹುವೀರ್ಯಾಭಿರಕ್ಷಿತಾಮ್ ॥ ೨೩

ಶೂನ್ಯಸಂವರಣಾರಕ್ಷಾಮಯಂತ್ರಿತಹಯದ್ವಿಪಾಮ್ ।
ಅಪಾವೃತಪುರದ್ವಾರಾಂ ರಾಜಧಾನೀಮರಕ್ಷಿತಾಮ್ ॥ ೨೪

ಅಪಹೃಷ್ಟಬಲಾಂ ನ್ಯೂನಾಂ ವಿಷಮಸ್ಥಾಮನಾವತಾಮ್ ।
ಶತ್ರವೋ ನಾಭಿಮನ್ಯಂತೇ ಭಕ್ಷ್ಯಾನ್ ವಿಷಕೃತಾನಿವ ॥ ೨೫

ಅದ್ಯ ಪ್ರಭೃತಿ ಭೂಮೌ ತು ಶಯಿಶ್ಯೇಽಹಂ ತೃಣೇಷು ವಾ ।
ಫಲಮೂಲಾಶನೋ ನಿತ್ಯಂ ಜಟಾಚೀರಾಣಿ ಧಾರಯನ್ ॥ ೨೬

ತಸ್ಯಾರ್ಥಮುತ್ತರಂ ಕಾಲಂ ನಿವತ್ಸ್ಯಾಮಿ ಸುಖಂ ವನೇ ।
ತಂ ಪ್ರತಿಶ್ರವಮಾಮುಚ್ಯ ನಾಸ್ಯ ಮಿಥ್ಯಾ ಭವಿಷ್ಯತಿ ॥ ೨೭

ಅರಣ್ಯವನ್ನು ಸೇರಿದನು. ರಾಜ್ಯವನ್ನು ನಡೆಸಿಕೊಂಡು ಹೋಗುವ ಕರ್ಣಧಾರನೇ ಇಲ್ಲ. ಈ ಜಗತ್ತೇ ನನಗೆ ಬಿಣ್ಣೆನಿಸುತ್ತದೆ (೨೨). ಆತನು ವನದಲ್ಲಿದ್ದರೂ ಆತನ ಭುಜಬಲದಿಂದ ಈ ರಾಷ್ಟ್ರವು ಸುರಕ್ಷಿತವಾಗಿದೆ. ಇದನ್ನು ಕಸಿದುಕೊಳ್ಳಬೇಕೆಂದು ಮನಸ್ಸಿನಲ್ಲಿ ಕೂಡ ಯಾವನೂ ಬಯಸುವುದಿಲ್ಲ(೨೩). ಈಗ ನಮ್ಮ ರಾಜಧಾನಿಯ ಕೋಟೆಯನ್ನು ರಕ್ಷಿಸತಕ್ಕವರಿಲ್ಲ. ಆನೆ ಕುದುರೆಗಳ ಸಂಚಾರವನ್ನು ನಿಯಂತ್ರಿಸತಕ್ಕವರಿಲ್ಲ. ನಗರದ್ವಾರವು ತೆರೆದ ಬಾಗಿಲಾಗಿದೆ (೨೪). ಸೈನಿಕರಲ್ಲಿ ಉತ್ಸಾಹವಿಲ್ಲ. ಈಗಲಂತೂ ಅಯೋಧ್ಯೆಯಲ್ಲಿ ಸೇನಾಬಲವೂ ನ್ಯೂನವಾಗಿದೆ. ಅಯೋಧ್ಯೆಯು ದುರ್ದಶೆಯಲ್ಲಿ ಸಿಕ್ಕಿ ಅರಕ್ಷಿತವಾಗಿದೆ. ಆದರೂ ಶತ್ರುಗಳು (ಶ್ರೀರಾಮನ ಭಯದಿಂದ) ಅದಕ್ಕೆ ಆಸೆ ಪಡುವುದಿಲ್ಲ. ಅವರ ಪಾಲಿಗೆ ಅಯೋಧ್ಯೆಯು ವಿಷಮಿಶ್ರವಾದ ಭಕ್ಷ್ಯದಂತಿದೆ (೨೫). ಜನನಿಯರೆ, ಈ ದಿವಸ ಮೊದಲ್ಗೊಂಡು ನಾನು ನೆಲದ ಮೇಲೋ ಹುಲ್ಲಿನ ಮೇಲೋ ಮಲಗುವೆನು. ಫಲಮೂಲಗಳನ್ನೇ ತಿಂದುಕೊಂಡಿರುವೆನು. ಜಟೆಯನ್ನು ಕಟ್ಟಿ ನಾರುಬಟ್ಟೆಯನ್ನುಡುವೆನು. ಶ್ರೀರಾಮನ ಪ್ರತಿಜ್ಞೆಯನ್ನು ನಾನು ಸ್ವೀಕರಿಸಿ ಅವನಿಗೆ ಪ್ರತಿಯಾಗಿ ನಾನೇ ಕಾಡಿನಲ್ಲಿದ್ದು ಮುಂದಿನ ಕಾಲವನ್ನು ಕಳೆಯುವೆನು. ಆದೇ ನನಗೆ

ವಸಂತಂ ಭ್ರಾತುರರ್ಥಾಯ ಶತ್ರುಘ್ನೋ ಮಾನುವತ್ಸ್ಯತಿ ।
ಲಕ್ಷ್ಮಣೇನ ಸಹ ತ್ವಾರ್ಯೋ ಹ್ಯಯೋಧ್ಯಾಂ ಪಾಲಯಿಷ್ಯತಿ ॥ ೨೮

ಅಭಿಷೇಕ್ಷ್ಯಂತಿ ಕಾಕುತ್ಸ್ಥಮಯೋಧ್ಯಾಯಾಂ ದ್ವಿಜಾತಯಃ ।
ಅಪಿ ಮೇ ದೇವತಾಃ ಕುರ್ಯುರಿಮಂ ಸತ್ಯಂ ಮನೋರಥಮ್ ॥ ೨೯

ಪ್ರಸಾದ್ಯಮಾನಃ ಶಿರಸಾ ಮಯಾ ಸ್ವಯಂ
ಬಹುಪ್ರಕಾರಂ ಯದಿ ನಾಭಿಪತ್ಸ್ಯತೇ ।
ತತೋಽನುವತ್ಸ್ಯಾಮಿ ಚಿರಾಯ ರಾಘವಂ
ವನೇಚರಂ ನಾರ್ಹತಿ ಮಾಮುಪೇಕ್ಷಿತುಮ್ ॥ ೩೦

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಅಷ್ಟಾಶೀತಿತಮಃ ಸರ್ಗಃ

☆☆☆

ಸುಖವೆನಿಸುವುದು. ಆದರಿಂದ ಶ್ರೀರಾಮನ ಪ್ರತಿಜ್ಞೆಗೆ ಭಂಗವೂ ಆಗದು (೨೬-೨೭). ಅಣ್ಣನಿಗೋಸ್ಕರ ನಾನು ಕಾಡಿನಲ್ಲಿರುವಾಗ ಶತ್ರುಘ್ನನು ನನ್ನೊಡನೆ ಬಂದಾನು. ಅಣ್ಣನು ಲಕ್ಷ್ಮಣನೊಡನೆ ಹೋಗಿ ಅಯೋಧ್ಯೆಯನ್ನು ಪಾಲಿಸುತ್ತಿರಲಿ. ದ್ವಿಜೋತ್ತಮರೆಲ್ಲರೂ ಸೇರಿ ಶ್ರೀರಾಮನಿಗೆ ರಾಜಧಾನಿಯಲ್ಲಿ ಪಟ್ಟಾಭಿಷೇಕವನ್ನು ನಡೆಸಲಿ ! ಓ ! ದೇವತೆಗಳೆ ! ನನ್ನ ಅಂತರಂಗದ ಈ ಬೇಡಿಕೆಯನ್ನು ಸತ್ಯವಾಗಿ ನಡೆಸಿಕೊಡುವಿರಾ ? (೨೮-೨೯). ನಾನು ಶ್ರೀರಾಮನಿಗೆ ತಲೆ ಬಾಗಿ ಅಡ್ಡಬಿದ್ದು ಪ್ರಸನ್ನನಾಗುವಂತೆ ಬಹುಪ್ರಕಾರದಲ್ಲಿ ಬೇಡಿಕೊಳ್ಳುವೆನು. ಆದರೂ ಅಯೋಧ್ಯೆಗೆ ಬರಲು ಒಪ್ಪದಿದ್ದರೆ, ನಾನೂ ವನೇಚರನಾಗಿ ಅವನ ಹಿಂದೆಯೇ ಅನುವರ್ತಿಸುತ್ತ ಇದ್ದುಬಿಡುತ್ತೇನೆ. ಆತನು ಎಂದಿಗೂ ನನ್ನನ್ನು ಉಪೇಕ್ಷಿಸಲಾರನು'' ಎಂದು ಹೇಳಿದನು (೩೦).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಎಂಬತ್ತೆಂಟನೆಯ ಸರ್ಗ

☆☆☆

ಏಕೋನನವತಿತಮಃ ಸರ್ಗಃ

ಗಂಗಾತರಣಮ್

ವ್ಯುಷ್ಯ ರಾತ್ರಿಂ ತು ತತ್ರೈವ ಗಂಗಾಕೂಲೇ ಸ ರಾಘವಃ ।
ಭರತಃ ಕಲ್ಯಮುತ್ಥಾಯ ಶತ್ರುಘ್ನಮಿದಮಬ್ರವೀತ್ ॥ ೧

ಶತ್ರುಘ್ನೋತ್ತಿಷ್ಠ ಕಿಂ ಶೇಷೇ ನಿಷಾದಾಧಿಪತಿಂ ಗುಹಮ್ ।
ಶೀಘ್ರಮಾನಯ ಭದ್ರಂ ತೇ ತಾರಯಿಷ್ಯತಿ ವಾಹಿನೀಮ್ ॥ ೨

ಜಾಗರ್ಮಿ ನಾಹಂ ಸ್ವಪಿಮಿ ತಮೇವಾರ್ಯಂ ವಿಚಿಂತಯನ್ ।
ಇತ್ಯೇವಮಬ್ರವೀದ್ಭ್ರಾತ್ರಾ ಶತ್ರುಘ್ನೋಽಪಿ ಪ್ರಚೋದಿತಃ ॥ ೩

ಇತಿ ಸಂವದತೋರೇವಮನ್ಯೋನ್ಯಂ ನರಸಿಂಹಯೋಃ ।
ಆಗತ್ಯ ಪ್ರಾಂಜಲಿಃ ಕಾಲೇ ಗುಹೋ ಭರತಮಬ್ರವೀತ್ ॥ ೪

ಕಚ್ಚಿತ್ ಸುಖಂ ನದೀತೀರೇಽವಾತ್ಸೀಃ ಕಾಕುತ್ಸ್ಥ ಶರ್ವರೀಮ್ ।
ಕಚ್ಚಿತ್ತೇ ಸಹಸೈನ್ಯಸ್ಯ ತಾವತ್ ಸರ್ವಮನಾಮಯಮ್ ॥ ೫

ಸರ್ಗ ೮೯

ಭರತನು ಗಂಗಾನದಿಯನ್ನು ದಾಟಿ ಭರದ್ವಾಜರ ಆಶ್ರಮಕ್ಕೆ ಹೋಗುವುದು.

ರಘುಕುಲೋತ್ತಮನಾದ ಭರತನು ಗಂಗಾತೀರದಲ್ಲಿ ಆ ರಾತ್ರಿಯನ್ನು ಕಳೆದನು. ಅವನು ಉಷಃಕಾಲದಲ್ಲೆದ್ದು ಶತ್ರುಘ್ನನನ್ನು ನೋಡಿ, ''ವತ್ಸ - ಶತ್ರುಘ್ನ, ಏಳು. ಇನ್ನೂ ನಿದ್ರಿಸುವೆಯಾ ? ಒಳ್ಳೆಯದು. ನಿಷಾದ ರಾಜನಾದ ಗುಹನನ್ನು ಬೇಗನೆ ಕರೆದುಕೊಂಡು ಬಾ. ಅವನು ಗಂಗಾನದಿಯನ್ನು ದಾಟಲು ನಮಗೆ ನೆರವಾಗುವನು'' ಎಂದನು (೧-೨). ಹೀಗೆ ಅಣ್ಣನು ತ್ವರೆಪಡಿಸಲಾಗಿ ಶತ್ರುಘ್ನನು ''ಅಣ್ಣ, ನಾನು ಎಚ್ಚರವಾಗಿಯೇ ಇದ್ದೇನೆ. ನಿದ್ರೆ ಬರಲಿಲ್ಲ. ಅಣ್ಣನನ್ನೇ ಕುರಿತು ಚಿಂತಿಸುತ್ತಿದ್ದೆನು'' ಎಂದು ನುಡಿದನು. ಆ ನರಶ್ರೇಷ್ಠರು ಈ ರೀತಿಯಲ್ಲಿ ಮಾತನಾಡುತ್ತಿರುವಾಗ ಗುಹನು ಅಲ್ಲಿಗೆ ಬಂದನು (೩-೪). ಅವನು ಭರತನಿಗೆ ಕೈಮುಗಿದು ''ರಾಜಪುತ್ರ, ಈ ನದೀತೀರದಲ್ಲಿ ರಾತ್ರಿ ಸುಖವಾಗಿ ಕಳೆಯಿತೆ ? ನಿನಗೂ ನಿನ್ನ ಸೈನ್ಯಕ್ಕೂ ಯಾವ

ಗುಹಸ್ಯ ತತ್ತು ವಚನಂ ಶ್ರುತ್ವಾ ಸ್ನೇಹಾದುದೀರಿತಮ್ ।
ರಾಮಸ್ಯಾನುವಶೋ ವಾಕ್ಯಂ ಭರತೋಽಪೀದಮಬ್ರವೀತ್ ॥ ೬

ಸುಖಾ ನಃ ಶರ್ವರೀ ರಾಜನ್ ಪೂಜಿತಾಶ್ಚಾಪಿ ತೇ ವಯಮ್ ।
ಗಂಗಾಂ ತು ನೌಭಿರ್ಬಹ್ವೀಭಿರ್ದಾಶಾಃ ಸಂತಾರಯಂತು ನಃ ॥ ೭

ತತೋ ಗುಹಃ ಸಂತ್ವರಿತಂ ಶ್ರುತ್ವಾ ಭರತಶಾಸನಮ್ ।
ಪ್ರತಿಪ್ರವಿಶ್ಯ ನಗರಂ ತಂ ಜ್ಞಾತಿಜನಮಬ್ರವೀತ್ ॥ ೮

ಉತ್ತಿಷ್ಠತ ಪ್ರಬುಧ್ಯಧ್ವಂ ಭದ್ರಮಸ್ತು ಚ ವಃ ಸದಾ ।
ನಾವಃ ಸಮುನುಕರ್ಷಧ್ವಂ ತಾರಯಿಷ್ಯಾಮ ವಾಹಿನೀಮ್ ॥ ೯

ತೇ ತಥೋಕ್ತಾಃ ಸಮುತ್ಥಾಯ ತ್ವರಿತಾ ರಾಜಶಾಸನಾತ್ ।
ಪಂಚ ನಾವಾಂ ಶತಾನ್ಯಾಶು ಸಮಾನಿನ್ಯುಃ ಸಮಂತತಃ ॥ ೧೦

ಅನ್ಯಾಃ ಸ್ವಸ್ತಿಕವಿಜ್ಞೇಯಾ ಮಹಾಘಂಟಾಧರಾ ವರಾಃ ।
ಶೋಭಮಾನಾಃ ಪತಾಕಾಭಿರ್ಯುಕ್ತವಾತಾಃ ಸುಸಂಹತಾಃ ॥ ೧೧

ತೊಂದರೆಯೂ ಆಗಲಿಲ್ಲವಷ್ಟೆ?'' ಎಂದು ಕುಶಲ ಪ್ರಶ್ನೆ ಮಾಡಿದನು. (೫). ಗುಹನ ಸ್ನೇಹಮಯವಾದ ನುಡಿಯನ್ನು ಕೇಳಿ ಭರತನು ಶ್ರೀರಾಮನನ್ನು ನೋಡುವ ತವಕದಿಂದ ''ನಿಷಾದರಾಜ, ರಾತ್ರಿಯನ್ನು ಸುಖವಾಗಿ ಕಳೆದೆನು. ನಮ್ಮನ್ನು ಚೆನ್ನಾಗಿ ಆದರಿಸಿದ್ದೀಯೆ. ಈಗ ಅಂಬಿಗರು ನಮ್ಮನ್ನು ದಾಟಿಸಲಿ. ಈ ಗಂಗೆಯನ್ನು ದಾಟಿಸಲು ಬಹಳ ನೌಕೆಗಳು ಬೇಕಾಗಬಹುದು'' ಎಂದನು (೬-೭). ತ್ವರಾವಿಷ್ಟನಾದ ಭರತನ ಆಜ್ಞೆಯನ್ನು ಕೇಳಿ ಗುಹನು ಪುನಃ ತನ್ನ ಪಟ್ಟಣಕ್ಕೆ ಹೋಗಿ ತನ್ನ ಬಂಧುಗಳನ್ನು ನೋಡಿ ''ಸೌಮ್ಯರೆ, ಏಳಿರಿ ಏಳಿರಿ! ನೌಕೆಗಳನ್ನು ನಡೆಸಿಕೊಂಡು ಬನ್ನಿರಿ. ಭರತನ ಸೇನೆಯನ್ನು ಮುಂದಕ್ಕೆ ದಾಟಿಸೋಣ'' ಎಂದು ಆದೇಶವನ್ನಿತ್ತನು (೮-೯). ಕೂಡಲೆ ಅವರೆಲ್ಲರೂ ರಾಜಾಜ್ಞೆಯಂತೆ ಹೋಗಿ ಎಲ್ಲ ಕಡೆಯಿಂದಲೂ ಐನೂರು ನೌಕೆಗಳನ್ನು ತಂದರು (೧೦). ಅವುಗಳಲ್ಲದೆ ಸ್ವಸ್ತಿಕಾಕಾರದ ಸ್ವಸ್ತಿಕವೆಂಬ ನೌಕೆಗಳನ್ನೂ ತಂದರು. ಅವು ದೊಡ್ಡ ಘಂಟೆಗಳಿಂದಲೂ ಪತಾಕೆಗಳಿಂದಲೂ ಶೋಭಿಸುತ್ತಿದ್ದವು. (ಅಲ್ಲಲ್ಲಿ ಕಿಟಕಿಗಳಿದ್ದುದರಿಂದ) ಗಾಳಿಯು ಹಿತಕರವಾಗಿ ಅದರೊಳಗೆ ಬೀಸುತ್ತಿತ್ತು. ಆ ನೌಕೆಗಳು

ತತಃ ಸ್ವಸ್ತಿಕವಿಜ್ಞೇಯಾಂ ಪಾಂಡುಕಂಬಲಸಂವೃತಾಮ್ ।
ಸನಂದಿಘೋಷಾಂ ಕಲ್ಯಾಣೀಂ ಗುಹೋ ನಾವಮುಪಾಹರತ್ ॥ ೧೨

ತಾಮಾರುರೋಹ ಭರತಃ ಶತ್ರುಘ್ನಶ್ಚ ಮಹಾಯಶಾಃ ।
ಕೌಸಲ್ಯಾ ಚ ಸುಮಿತ್ರಾ ಚ ಯಾಶ್ಚಾನ್ಯಾ ರಾಜಯೋಷಿತಃ ॥ ೧೩

ಪುರೋಹಿತಶ್ಚ ತತ್ಪೂರ್ವಂ ಗುರವೋ ಬ್ರಾಹ್ಮಣಾಶ್ಚ ಯೇ ।
ಅನಂತರಂ ರಾಜದಾರಾಸ್ತಥೈವ ಶಕಟಾಪಣಾಃ ॥ ೧೪

ಆವಾಸಮಾದೀಪಯತಾ ತೀರ್ಥಂ ಚಾಪ್ಯವಗಾಹತಾಮ್ ।
ಭಾಂಡಾನಿ ಚಾದದಾನಾನಾಂ ಘೋಷಸ್ತ್ರಿದಿವಮಸ್ಪೃಶತ್ ॥ ೧೫

ಪತಾಕಿನ್ಯಸ್ತು ತಾ ನಾವಃ ಸ್ವಯಂ ದಾಶೈರಧಿಷ್ಠಿತಾಃ ।
ವಹಂತ್ಯೋ ಜನಮಾರೂಢಂ ತದಾ ಸಂಪೇತುರಾಶುಗಾಃ ॥ ೧೬

ಸುಂದರವಾಗಿಯೂ ಗಟ್ಟಿಮುಟ್ಟಾಗಿಯೂ ಇದ್ದವು (೧೧). ಆಗ ಗುಹನು (ಭರತನಿಗೋಸ್ಕರ) ಪ್ರತ್ಯೇಕವಾಗಿ ಒಂದು ಸ್ವಸ್ತಿಕ ನೌಕೆಯನ್ನು ತರಿಸಿದನು. ಅದರಲ್ಲಿ ಶ್ರೇಷ್ಠವಾದ ಬಿಳಿಯ ಕಂಬಳಿಯನ್ನು ಹಾಸಲಾಗಿತ್ತು. ಆನಂದವನ್ನುಂಟುಮಾಡುವ ಕಿರುಗೆಜ್ಜೆಗಳ ನಾದದಿಂದ ಆ ನೌಕೆ ಮನೋಹರವಾಗಿತ್ತು (೧೨). ಅದನ್ನು ಭರತನೂ ಶತ್ರುಘ್ನನೂ ಹತ್ತಿದರು. ಕೌಸಲ್ಯೆ, ಸುಮಿತ್ರೆ ಮೊದಲಾದ ರಾಜಸ್ತ್ರೀಯರೂ ಆ ನೌಕೆಯನ್ನೇರಿದರು. ಪುರೋಹಿತರಾದ ವಸಿಷ್ಠರೂ ಅವರೊಡನೆ ಇತರ ಬ್ರಾಹ್ಮಣ ಶ್ರೇಷ್ಠರೂ ಹಾಗೆಯೇ ರಾಜಸ್ತ್ರೀಪರಿಚಾರಿಕೆಯರೂ ದೋಣಿಗಳನ್ನೇರಿದರು. ಆಮೇಲೆ ಬಂಡಿಗಳನ್ನೂ ಇತರ ಪದಾರ್ಥಗಳನ್ನೂ ದೋಣಿಗಳಲ್ಲಿ ಹೇರಲಾಯಿತು (೧೩-೧೪). ಆಗ ಕೆಲವು ಸೈನಿಕರು ತಾವು ಇಳಿದುಕೊಂಡಿದ್ದ ಬಿಡಾರಗಳಿಗೆ ಬೆಂಕಿಯನ್ನು ಹಚ್ಚುತ್ತಿದ್ದರು. * ಕೆಲವರು ತ್ವರೆಯಿಂದ ನೀರಿನ ಘಟ್ಟವನ್ನಿಳಿದು ಓಡಿಬರುತ್ತಿದ್ದರು. ಕೆಲವರು ತಮ್ಮ ತಮ್ಮ ಪದಾರ್ಥಗಳನ್ನು ಹುಡುಕಿ ಎಳೆದು ಕಟ್ಟಿ ಹೊರುತ್ತಿದ್ದರು. ಆ ಸೈನಿಕರ ಕೋಲಾಹಲವು ಆಕಾಶವನ್ನು ವ್ಯಾಪಿಸಿತು (೧೫). ಹಾಯಿಗಳನ್ನೇರಿ ಕಟ್ಟಿ

---

* ಸೈನಿಕರು ಮುಂದಕ್ಕೆ ಪ್ರಯಾಣ ಮಾಡುವಾಗ ತಾವು ಇಳಿದುಕೊಂಡ ಬಿಡಾರಗಳನ್ನು ಸುಟ್ಟು ಹಾಕುವ ಪದ್ಧತಿ ಇದ್ದಿತು. ಇದು ಸೇನಾಧರ್ಮ.

ನಾರೀಣಾಮಭಿಪೂರ್ಣಾಸ್ತು ಕಾಶ್ಚಿತ್ ಕಾಶ್ಚಿಚ್ಚ ವಾಜಿನಾಮ್ ।
ಕಾಶ್ಚಿದತ್ರ ವಹಂತಿ ಸ್ಮ ಯಾನಯುಗ್ಯಂ ಮಹಾಧನಮ್ ॥ ೧೭

ತಾಃ ಸ್ಮ ಗತ್ವಾ ಪರಂ ತೀರಮವರೋಪ್ಯ ಚ ತಂ ಜನಮ್ ।
ನಿವೃತ್ತಾಃ ಕಾಂಡಚಿತ್ರಾಣಿ ಕ್ರಿಯಂತೇ ದಾಶಬಂಧುಭಿಃ ॥ ೧೮

ಸವೈಜಯಂತಾಸ್ತು ಗಜಾ ರಾಜಾರೋಹಪ್ರಚೋದಿತಾಃ ।
ತರಂತಃ ಸ್ಮ ಪ್ರಕಾಶಂತೇ ಸಪಕ್ಷಾ ಇವ ಪರ್ವತಾಃ ॥ ೧೯

ನಾವಶ್ಚಾರುರುಹುಶ್ಚಾನ್ಯೇ ಪ್ಲವೈಸ್ತೇರುಸ್ತಥಾಪರೇ ।
ಅನ್ಯೇ ಕುಂಭಘಟೈಸ್ತೇರುರನ್ಯೇ ತೇರುಶ್ಚ ಬಾಹುಭಿಃ ॥ ೨೦

ಸಾ ಪುಣ್ಯಾ ಧ್ವಜಿನೀ ಗಂಗಾಂ ದಾಶೈಃ ಸಂತಾರಿತಾ ಸ್ವಯಮ್ ।
ಮೈತ್ರೇ ಮುಹೂರ್ತೇ ಪ್ರಯಯೌ ಪ್ರಯಾಗವನಮುತ್ತಮಮ್ ॥ ೨೧

ಅಂಬಿಗರಿಂದ ನಡೆಸಲ್ಪಡುತ್ತಿದ್ದ ಆ ದೋಣಿಗಳು ಜನರನ್ನು ಹೊತ್ತುಕೊಂಡು ವೇಗದಿಂದ ಸಾಗಿದವು. ಅವುಗಳಲ್ಲಿ ಕೆಲವು ನೌಕೆಗಳು ಸ್ತ್ರೀಯರನ್ನೂ ಕೆಲವು ಕುದುರೆಗಳನ್ನೂ ಕೆಲವು ನೌಕೆಗಳು ಬಹುಬೆಲೆಬಾಳುವ ರಥ ಪಲ್ಲಕ್ಕಿ ಮೊದಲಾದವುಗಳನ್ನೂ ಎತ್ತು ಒಂಟೆ ಮೊದಲಾದ ವಾಹನಗಳನ್ನೂ ಹೊತ್ತಿದ್ದವು (೧೬-೧೭). ಆ ನೌಕೆಗಳು ಗಂಗಾನದಿಯ ಆಚೆಯ ದಡವನ್ನು ಸೇರಿ ಜನರನ್ನೂ ಸಾಮಗ್ರಿಗಳನ್ನೂ ಇಳಿಸಿ ಹಿಂದಕ್ಕೆ ಹೊರಟವು. ಹಿಂದಕ್ಕೆ ಬರುವಾಗ ಅಂಬಿಗರು ನಡುನೀರಿನಲ್ಲಿ ಆ ದೋಣಿಗಳನ್ನು ವಿಚಿತ್ರವಾಗಿ ನಡೆಸುತ್ತ 'ಕಾಂಡಚಿತ್ರ'ವೆಂಬ ವಿನೋದಲೀಲೆಯನ್ನು ನಡೆಸಿದರು (೧೮). ಧ್ವಜವನ್ನು ಹೊತ್ತಿದ್ದ ಆನೆಗಳನ್ನು ಮಾವುತರು ಗಂಗಾನದಿಯಲ್ಲಿ ನಡೆಸಿಕೊಂಡು ಹೋದರು. ಆ ಸಮಯದಲ್ಲಿ ರೆಕ್ಕೆಗಳಿರುವ ಪರ್ವತಗಳಂತೆ ಆನೆಗಳು ಕಂಡವು. ಕೆಲವು ಸೈನಿಕರು ದೋಣಿಗಳನ್ನೂ ಕೆಲವರು ತೆಪ್ಪವನ್ನೂ ಹತ್ತಿ ನದಿಯನ್ನು ದಾಟಿದರು. ಕೆಲವರು ಗಡಿಗೆಗಳನ್ನು ಹಿಡಿದು ತೇಲುತ್ತ ದಾಟಿದರು. ಉಳಿದವರು ಈಜುತ್ತಲೇ ಹೋದರು (೧೯-೨೦). ಗಂಗಾಸ್ನಾನದಿಂದ ಪವಿತ್ರವಾದ ಆ ಸೇನೆಯು ಹೀಗೆ ನಾವಿಕರ ನೆರವಿನಿಂದ ಗಂಗಾನದಿಯನ್ನು ದಾಟಿತು. ಅನಂತರ ಅವರೆಲ್ಲರೂ ಮೈತ್ರ* ಮುಹೂರ್ತಕ್ಕೆ ಸರಿಯಾಗಿ ಶ್ರೇಷ್ಠವಾದ ಪ್ರಯಾಗವನವನ್ನು ಸೇರಿದರು (೨೧). ಅಲ್ಲಿ

---

* ಮುಹೂರ್ತವೆಂದರೆ ಎರಡು ಗಳಿಗೆಯ ಕಾಲ; ೪೮ ನಿಮಿಷ. ಒಂದು ಹಗಲನ್ನು ಹದಿನೈದು ಮುಹೂರ್ತಗಳಾಗಿ ವಿಂಗಡಿಸಿದ್ದಾರೆ. ಸೂರ್ಯೋದಯವಾದ ಮೇಲೆ ಮೂರನೆಯ ಮುಹೂರ್ತಕ್ಕೆ ಮೈತ್ರವೆಂದು ಹೆಸರು.

ಆಶ್ವಾಸಯಿತ್ವಾ ಚ ಚಮೂಂ ಮಹಾತ್ಮಾ
ನಿವೇಶಯಿತ್ವಾ ಚ ಯಥೋಪಜೋಷಮ್ ।
ದ್ರಷ್ಟುಂ ಭರದ್ವಾಜಮೃಷಿಪ್ರವರ್ಯಂ
ಋತ್ವಿಗ್ವೃತಃ ಸನ್ ಭರತಃ ಪ್ರತಸ್ಥೇ ॥ ೨೨

ಸ ಬ್ರಾಹ್ಮಣಸ್ಯಾಶ್ರಮಮಭ್ಯುಪೇತ್ಯ
ಮಹಾತ್ಮನೋ ದೇವಪುರೋಹಿತಸ್ಯ ।
ದದರ್ಶ ರಮ್ಯೋಟಜವೃಕ್ಷಷಂಡಂ
ಮಹದ್ವನಂ ವಿಪ್ರವರಸ್ಯ ರಮ್ಯಮ್ ॥ ೨೩

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕೋನನವತಿತಮಃ ಸರ್ಗಃ

❁❁❁

ಮಹಾತ್ಮನಾದ ಭರತನು ಸೇನೆಯನ್ನು ಸಂತೈಸಿ, ಸ್ವಲ್ಪ ಕಾಲದವರೆಗೆ ಸುಖವಾಗಿ ವಿಶ್ರಮಿಸಬೇಕೆಂದು ತಿಳಿಸಿದನು. ತಾನು ಭರದ್ವಾಜಮಹರ್ಷಿಗಳನ್ನು ನೋಡಬೇಕೆಂದು ವಸಿಷ್ಠಾದಿ ಋತ್ವಿಜರೊಡನೆ ಆಶ್ರಮದ ಕಡೆಗೆ ಹೊರಟನು (೨೨). ಅವನು ಮುಂದೆ ಹೋಗಿ ಮಹಾತ್ಮರೂ ಬ್ರಹ್ಮಜ್ಞಾನಿಗಳೂ ದೇವಪುರೋಹಿತರೂ* ಆದ ಭರದ್ವಾಜಮುನಿಗಳ ವಿಶಾಲವಾದ ತಪೋವನವನ್ನು ಕಂಡನು. ಅದು ಸುಂದರವಾದ ಪರ್ಣಶಾಲೆಗಳಿಂದಲೂ ವೃಕ್ಷಪಂಕ್ತಿಗಳಿಂದಲೂ ರಮ್ಯವಾಗಿತ್ತು (೨೩).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ಎಂಬತ್ತೊಂಬತ್ತನೆಯ ಸರ್ಗ

❁❁❁

* ಭರದ್ವಾಜರ ತಂದೆ ಬೃಹಸ್ಪತಿಯು ದೇವಪುರೋಹಿತನಾದ್ದರಿಂದ ಇವರನ್ನೂ ದೇವ ಪುರೋಹಿತರೆಂದು ಹೇಳಿದೆ.

ನವತಿತಮಃ ಸರ್ಗಃ

ಭರದ್ವಾಜಾಶ್ರಮನಿವಾಸಃ

ಭರದ್ವಾಜಾಶ್ರಮಂ ದೃಷ್ಟ್ವಾ ಕ್ರೋಶಾದೇವ ನರರ್ಷಭಃ ।
ಬಲಂ ಸರ್ವಮವಸ್ಥಾಪ್ಯ ಜಗಾಮ ಸಹ ಮಂತ್ರಿಭಿಃ ॥ ೧

ಪದ್ಭ್ಯಾಮೇವ ಹಿ ಧರ್ಮಜ್ಞೋ ನ್ಯಸ್ತಶಸ್ತ್ರಪರಿಚ್ಛದಃ ।
ವಸಾನೋ ವಾಸಸೀ ಕ್ಷೌಮೇ ಪುರೋಧಾಯ ಪುರೋಧಸಮ್ ॥ ೨

ತತಃ ಸಂದರ್ಶನೇ ತಸ್ಯ ಭರದ್ವಾಜಸ್ಯ ರಾಘವಃ ।
ಮಂತ್ರಿಣಸ್ತಾನವಸ್ಥಾಪ್ಯ ಜಗಾಮಾನುಪುರೋಹಿತಮ್ ॥ ೩

ವಸಿಷ್ಠಮಥ ದೃಷ್ಟ್ವೈವ ಭರದ್ವಾಜೋ ಮಹಾತಪಾಃ ।
ಸಂಚಚಾಲಾಸನಾತ್ತೂರ್ಣಂ ಶಿಷ್ಯಾನರ್ಘ್ಯಮಿತಿ ಬ್ರುವನ್ ॥ ೪

ಸರ್ಗ ೯೦

ಭರದ್ವಾಜರ ದರ್ಶನ. ಅವರ ಅಪೇಕ್ಷೆಯಂತೆ ಆಶ್ರಮದಲ್ಲಿ ಉಳಿಯಲು ಭರತನ ಸಮ್ಮತಿ.

ಭರತನು ಭರದ್ವಾಜರ ಆಶ್ರಮಕ್ಕೆ ಒಂದು ಹರದಾರಿ ದೂರದಲ್ಲಿಯೇ ತನ್ನ ಸೇನೆಯನ್ನು ನಿಲ್ಲಿಸಿ ಮಂತ್ರಿಗಳನ್ನು ಕರೆದುಕೊಂಡು ಆಶ್ರಮಕ್ಕೆ ಹೋದನು. ಆ ಧರ್ಮಜ್ಞನು ಆಯುಧಗಳೇ ಮೊದಲಾಗಿ ತನ್ನ ಕ್ಷತ್ರಿಯ ವೇಷವನ್ನು ತೆಗೆದಿಟ್ಟು ಒಂದು ಪರಿಧಾನ*ವನ್ನುಟ್ಟು ಉತ್ತರೀಯವನ್ನು ಹೊದೆದುಕೊಂಡನು. ಪುರೋಹಿತರನ್ನು ಮುಂದಿಟ್ಟುಕೊಂಡು ಬರಿಗಾಲಿನಿಂದ ನಡೆಯುತ್ತಲೇ ಹೋದನು (೧-೨). (ಆಶ್ರಮಕ್ಕೆ ಹೋದಮೇಲೆ) ಋಷಿಗಳ ದರ್ಶನ ಸಮಯದಲ್ಲಿ ಮಂತ್ರಿಗಳನ್ನು ದೂರದಲ್ಲಿ ನಿಲ್ಲಿಸಿ ವಸಿಷ್ಠರ ಹಿಂದೆ ತಾನೊಬ್ಬನೇ ಹೋದನು (೩). ಮಹಾತಪಸ್ವಿಗಳಾದ ಭರದ್ವಾಜರು ವಸಿಷ್ಠರನ್ನು ಕಂಡೊಡನೆ ಶಿಷ್ಯರನ್ನು ಕುರಿತು, 'ಅರ್ಘ್ಯವನ್ನು ತನ್ನಿ, ಅರ್ಘ್ಯವನ್ನು' ಎಂದು ಹೇಳುತ್ತ ಥಟ್ಟನೆ ಆಸನದಿಂದ ಎದ್ದು ನಿಂತರು (೪). ಅವರು ವಸಿಷ್ಠರನ್ನು ಸ್ವಾಗತಿಸಿದರು. ಭರತನು ಬಂದು ಭರದ್ವಾಜರಿಗೆ

---

* ಪರಿಧಾನ = ಪಂಚೆ.

ಸಮಾಗಮ್ಯ ವಸಿಷ್ಠೇನ ಭರತೇನಾಭಿವಾದಿತಃ ।
ಅಬುಧ್ಯತ ಮಹಾತೇಜಾಃ ಸುತಂ ದಶರಥಸ್ಯ ತಮ್ ॥ ೫

ತಾಭ್ಯಾಮರ್ಘ್ಯಂ ಚ ಪಾದ್ಯಂ ಚ ದತ್ವಾಪಶ್ಚಾತ್ ಫಲಾನಿ ಚ ।
ಆನುಪೂರ್ವ್ಯಾಚ್ಚ ಧರ್ಮಜ್ಞಃ ಪಪ್ರಚ್ಛ ಕುಶಲಂ ಕುಲೇ ॥ ೬

ಅಯೋಧ್ಯಾಯಾಂ ಬಲೇ ಕೋಶೇ ಮಿತ್ರೇಷ್ವಪಿ ಚ ಮಂತ್ರಿಷು ।
ಜಾನನ್ ದಶರಥಂ ವೃತ್ತಂ ನ ರಾಜಾನಮುದಾಹರತ್ ॥ ೭

ವಸಿಷ್ಠೋ ಭರತಶ್ಚೈನಂ ಪಪ್ರಚ್ಛತುರನಾಮಯಮ್ ।
ಶರೀರೇಽಗ್ನಿಷು ವೃಕ್ಷೇಷು ಶಿಷ್ಯೇಷು ಮೃಗಪಕ್ಷಿಷು ॥ ೮

ತಥೇತಿ ತತ್ ಪ್ರತಿಜ್ಞಾಯ ಭರದ್ವಾಜೋ ಮಹಾತಪಾಃ ।
ಭರತಂ ಪ್ರತ್ಯುವಾಚೇದಂ ರಾಘವಸ್ನೇಹಬಂಧನಾತ್ ॥ ೯

ಕಿಮಿಹಾಗಮನೇ ಕಾರ್ಯಂ ತವ ರಾಜ್ಯಂ ಪ್ರಶಾಸತಃ ।
ಏತದಾಚಕ್ಷ್ವ ಮೇ ಸರ್ವಂ ನ ಹಿ ಮೇ ಶುಧ್ಯತೇ ಮನಃ ॥ ೧೦

ಅಭಿವಾದನೆ ಮಾಡಿದನು. ಆ ತೇಜಸ್ವಿಗಳಿಗೆ ಅವನು ದಶರಥನ ಪುತ್ರನೆಂಬುದು ಗೊತ್ತಾಯಿತು. ಭರದ್ವಾಜರು ವಸಿಷ್ಠರಿಗೂ ಭರತನಿಗೂ ಕ್ರಮವಾಗಿ ಅರ್ಘ್ಯಪಾದ್ಯಗಳನ್ನೂ ಹಣ್ಣುಗಳನ್ನೂ ಕೊಟ್ಟು ಸತ್ಕರಿಸಿ ಕುಶಲವನ್ನು ವಿಚಾರಿಸಿದರು (೫-೬). ಅವರು ಅಯೋಧ್ಯೆ, ಸೈನ್ಯ, ರಾಜಭಂಡಾರ, ಮಿತ್ರರು ಮತ್ತು ಮಂತ್ರಿಗಳ ಯೋಗಕ್ಷೇಮವನ್ನು ವಿಚಾರಿಸಿದರು. ದಶರಥರಾಜನು ಮೃತನಾದ ವಿಷಯವು ತಿಳಿದಿದ್ದುದರಿಂದ ಅವನ ವಿಷಯವನ್ನೆತ್ತಲಿಲ್ಲ (೭). ವಸಿಷ್ಠರೂ ಭರತನೂ ಭರದ್ವಾಜರನ್ನು ಕುರಿತು ಅವರ ದೇಹಸ್ಥಿತಿಯನ್ನು ವಿಚಾರಿಸಿ ಅವರ ಅಗ್ನಿ, ಆಶ್ರಮವೃಕ್ಷಗಳು, ಶಿಷ್ಯರು ಮತ್ತು ಅಲ್ಲಿನ ಮೃಗಪಕ್ಷಿಗಳ ಕುಶಲವನ್ನು ವಿಚಾರಿಸಿದರು. ಭರದ್ವಾಜರು ಎಲ್ಲವೂ ಒಳ್ಳೆಯದೆಂದು ಹೇಳಿ ಶ್ರೀರಾಮನಮೇಲೆ ತಮಗಿದ್ದ ಪ್ರೇಮಾತಿಶಯದಿಂದ ಭರತನನ್ನು ಕುರಿತು ಹೀಗೆ ಕೇಳಿದರು (೮-೯) : "ಭರತ, ರಾಜ್ಯವನ್ನು ಆಳುತ್ತಿರುವಾಗ ನೀನು ಇಲ್ಲಿಗೆ ಬಂದ ಉದ್ದೇಶವೇನು? ಎಲ್ಲವನ್ನೂ ಸ್ಪಷ್ಟವಾಗಿ ತಿಳಿಸು. ನನ್ನ ಮನಸ್ಸಿನ ಶಂಕೆ ಹೋಗಲಿಲ್ಲ. ಸಮಸ್ತರಿಗೂ ಆನಂದವನ್ನು

ಸುಷುವೇ ಯಮಮಿತ್ರಘ್ನಂ ಕೌಸಲ್ಯಾನಂದವರ್ಧನಮ್ ।
ಭ್ರಾತ್ರಾ ಸಹ ಸಭಾರ್ಯೋ ಯಶ್ಚಿರಂ ಪ್ರವ್ರಾಜಿತೋ ವನಮ್ ॥ ೧೧

ನಿಯುಕ್ತಃ ಸ್ತ್ರೀನಿಯುಕ್ತೇನ ಪಿತ್ರಾ ಯೋಽಸೌ ಮಹಾಯಶಾಃ ।
ವನವಾಸೀ ಭವೇತೀಹ ಸಮಾಃ ಕಿಲ ಚತುರ್ದಶ ॥ ೧೨

ಕಚ್ಚಿನ್ನ ತಸ್ಯಾಪಾಪಸ್ಯ ಪಾಪಂ ಕರ್ತುಮಿಹೇಚ್ಛಸಿ ।
ಅಕಂಟಕಂ ಭೋಕ್ತುಮನಾ ರಾಜ್ಯಂ ತಸ್ಯಾನುಜಸ್ಯ ಚ ॥ ೧೩

ಏವಮುಕ್ತೋ ಭರದ್ವಾಜಂ ಭರತಃ ಪ್ರತ್ಯುವಾಚ ಹ ।
ಪರ್ಯಶ್ರುನಯನೋ ದುಃಖಾದ್ವಾಚಾ ಸಂಸಜ್ಜಮಾನಯಾ ॥ ೧೪

ಹತೋಽಸ್ಮಿ ಯದಿ ಮಾಮೇವಂ ಭಗವಾನಪಿ ಮನ್ಯತೇ ।
ಮತ್ತೋ ನ ದೋಷಮಾಶಂಕೇ ನೈವಂ ಮಾಮನುಶಾಧಿ ಹಿ ॥ ೧೫

ನ ಚೈತದಿಷ್ಟಂ ಮಾತಾ ಮೇ ಯದವೋಚನ್ಮದಂತರೇ ।
ನಾಹಮೇತೇನ ತುಷ್ಟಶ್ಚ ನ ತದ್ವಚನಮಾದದೇ ॥ ೧೬

ವರ್ಧಿಸುವ ಯಾವ ವೀರಾಗ್ರಣಿಯನ್ನು ಕೌಸಲ್ಯೆಯು ಹಡೆದಳೊ, ಆತನು ಪತ್ನೀಸಮೇತನಾಗಿ ತಮ್ಮನೊಡನೆ ದೀರ್ಘಕಾಲ ಕಾಡಿನಲ್ಲಿರುವಂತೆ ಹೊರಡಿಸಿದ್ದಾಯಿತಷ್ಟೆ (೧೦-೧೧). 'ತಂದೆಯೇ ಒಬ್ಬ ಹೆಂಗಸಿನ ಪ್ರಚೋದನೆಗೆ ಒಳಗಾಗಿ ಹದಿನಾಲ್ಕು ವರ್ಷಗಳ ಕಾಲ ವನವಾಸಿಯಾಗಿರು' ಎಂದು ಆ ಕೀರ್ತಿಶಾಲಿಗೆ ಆಜ್ಞೆ ಮಾಡಿದನಲ್ಲವೆ? ಯಾವ ಪಾಪವನ್ನೂ ಕಂಡರಿಯದ ಅವನಿಗೂ ಅವನ ತಮ್ಮನಿಗೂ ಇಲ್ಲಿ ಯಾವುದಾದರೂ ಕೇಡನ್ನು ಮಾಡಲು ನೀನು ಬಯಸಿಲ್ಲವಷ್ಟೆ? ರಾಜ್ಯವನ್ನು ನಿಷ್ಕಂಟಕವಾಗಿ ಅನುಭವಿಸಬೇಕೆಂದು ಉದ್ದೇಶಿಸಿರುವೆಯೋ ಹೇಗೆ ? '' ಎಂದು ಕೇಳಿದರು (೧೨-೧೩). ಭರದ್ವಾಜರ ಮಾತನ್ನು ಕೇಳಿದೊಡನೆ ಭರತನ ಕಣ್ಣಲ್ಲಿ ನೀರು ಉಕ್ಕಿತು. ಅವನು ದುಃಖದಿಂದ ತೊದಲುತ್ತ ಭರದ್ವಾಜರನ್ನು ಕುರಿತು, ''ಮಹರ್ಷಿಗಳೂ ಹೀಗೆ ತಿಳಿಯುವುದಾದರೆ, ಅಯ್ಯೊ! ನಾನು ಕೆಟ್ಟೆ! ನನ್ನಲ್ಲಿ ಯಾವ ತಪ್ಪೂ ಇಲ್ಲ. ತಾವು ಹೀಗೆ ಅಪ್ಪಣೆಕೊಡಿಸಬಾರದು (೧೪-೧೫). ನನ್ನ ವಿಷಯವಾಗಿ ನನ್ನ ತಾಯಿ ಏನು ಹೇಳಿದಳೋ ಅದು ನನಗೆ ಸಮ್ಮತವಿಲ್ಲ. ಆದರಿಂದ ನನಗೆ ಸಂತೋಷವಾಗಿಲ್ಲ. ಅವಳ ಮಾತನ್ನು ನಾನು ಒಪ್ಪುವುದಿಲ್ಲ. ನಾನು ಈಗ ಆ ಪುರುಷೋತ್ತಮನಿಗೆ ಸಮಾಧಾನವನ್ನು ಹೇಳಿ ಅವನ ಪಾದಗಳಿಗೆ ಅಡ್ಡಬಿದ್ದು

ಅಹಂ ತು ತಂ ನರವ್ಯಾಘ್ರಮುಪಯಾತಃ ಪ್ರಸಾದಕಃ ।
ಪ್ರತಿನೇತುಮಯೋಧ್ಯಾಂ ಚ ಪಾದೌ ತಸ್ಯಾಭಿವಂದಿತುಮ್ ॥ ೧೭

ತಂ ಮಾಮೇವಂಗತಂ ಮತ್ವಾ ಪ್ರಸಾದಂ ಕರ್ತುಮರ್ಹಸಿ ।
ಶಂಸ ಮೇ ಭಗವನ್ ರಾಮಃ ಕ್ವ ಸಂಪ್ರತಿ ಮಹೀಪತಿಃ ॥ ೧೮

ವಸಿಷ್ಠಾದಿಭಿರ್ಋತ್ವಿಗ್ಭಿರ್ಯಾಚಿತೋ ಭಗವಾಂಸ್ತತಃ ।
ಉವಾಚ ತಂ ಭರದ್ವಾಜಃ ಪ್ರಸಾದಾದ್ಭರತಂ ವಚಃ ॥ ೧೯

ತ್ವಯ್ಯೇತತ್ ಪುರುಷವ್ಯಾಘ್ರ ಯುಕ್ತಂ ರಾಘವವಂಶಜೇ ।
ಗುರುವೃತ್ತಿರ್ದಮಶ್ಚೈವ ಸಾಧೂನಾಂ ಚಾನುಯಾಯಿತಾ ॥ ೨೦

ಜಾನೇ ಚೈತನ್ಮನಃಸ್ಥಂ ತೇ ದೃಢೀಕರಣಮಸ್ತ್ವಿತಿ ।
ಅಪೃಚ್ಛಂ ತ್ವಾಂ ತಥಾತ್ಯರ್ಥಂ ಕೀರ್ತಿಂ ಸಮಭಿವರ್ಧಯನ್ ॥ ೨೧

ಜಾನೇ ಚ ರಾಮಂ ಧರ್ಮಜ್ಞಂ ಸಸೀತಂ ಸಹಲಕ್ಷ್ಮಣಮ್ ।
ಅಸೌ ವಸತಿ ತೇ ಭ್ರಾತಾ ಚಿತ್ರಕೂಟೇ ಮಹಾಗಿರೌ ॥ ೨೨

ಅಯೋಧ್ಯೆಗೆ ಕರೆದುಕೊಂಡು ಹೋಗಲು ಬಂದಿದ್ದೇನೆ (೧೬-೧೭). ಮಹರ್ಷಿಗಳೆ, ಇದಕ್ಕಾಗಿ ನಾನು ಬಂದಿದ್ದೇನೆಂದು ತಿಳಿದು ತಾವು ನನ್ನನ್ನು ಅನುಗ್ರಹಿಸಬೇಕು. ಭಗವಾನ್, ಈ ರಾಜ್ಯಕ್ಕೆ ಒಡೆಯನಾದ ಶ್ರೀರಾಮನು ಈಗ ಎಲ್ಲಿದ್ದಾನೆ? ದಯವಿಟ್ಟು ಹೇಳಬೇಕು'' ಎಂದು ನುಡಿದನು (೧೮). ಆಗ ವಸಿಷ್ಠಾದಿ ಋತ್ವಿಜರು ಭರತನಲ್ಲಿ ದೋಷವಿಲ್ಲವೆಂದೂ ಅವನನ್ನು ಕೃಪಾದೃಷ್ಟಿಯಿಂದ ನೋಡಬೇಕೆಂದೂ ಭರದ್ವಾಜರನ್ನು ಪ್ರಾರ್ಥಿಸಿದರು. ಆಗ ಭರದ್ವಾಜರು ಪ್ರಸನ್ನರಾಗಿ ಭರತನನ್ನು ನೋಡಿ, ''ಹೇ ಪುರುಷಶ್ರೇಷ್ಠ, ರಘುವಂಶದಲ್ಲಿ ಜನಿಸಿದ ನಿನಗೆ ಇದು ಯೋಗ್ಯವಾದ ನಡತೆ. ಗುರುಹಿರಿಯರಲ್ಲಿ ಭಕ್ತಿ, ಇಂದ್ರಿಯ ನಿಗ್ರಹ, ಸಜ್ಜನರ ಅನುವರ್ತನೆ - ಇವು ನಿಮ್ಮ ವಂಶದವರಿಗೆ ಸಹಜಗುಣಗಳು (೧೯-೨೦). ವತ್ಸ ನಿನ್ನ ಮನಸ್ಸಿನಲ್ಲಿರುವುದನ್ನು ನಾನು ಬಲ್ಲೆ. ಆದರೂ ಅದನ್ನು ದೃಢಪಡಿಸುವುದಕ್ಕಾಗಿ ಹೀಗೆ ಕೇಳಿದೆನು. ನಿನ್ನ ಕೀರ್ತಿಯು ಪ್ರಚುರವಾಗಲೆಂದು ಈ ಪ್ರಶ್ನೆಯನ್ನು ಹಾಕಿದೆನು (೨೧). ಧರ್ಮಜ್ಞನಾದ ಶ್ರೀರಾಮನು ಸೀತಾಲಕ್ಷ್ಮಣರೊಡನೆ ಎಲ್ಲಿದ್ದಾನೆಂಬುದು ನನಗೆ ಗೊತ್ತಿದೆ. ನಿನ್ನ ಅಣ್ಣ ಚಿತ್ರಕೂಟಪರ್ವತದಲ್ಲಿ ವಾಸವಾಗಿದ್ದಾನೆ. ಭರತ, ನಾಳೆ ನೀನು ಅಲ್ಲಿಗೆ

ಶ್ವಸ್ತು ಗಂತಾಸಿ ತಂ ದೇಶಂ ವಸಾದ್ಯ ಸಹ ಮಂತ್ರಿಭಿಃ।
ಏತಂ ಮೇ ಕುರು ಸುಪ್ರಾಜ್ಞ ಕಾಮಂ ಕಾಮಾರ್ಥಕೋವಿದ ॥ ೨೩

ತತಸ್ತಥೇತ್ಯೇವಮುದಾರದರ್ಶನಂ
ಪ್ರತೀತರೂಪೋ ಭರತೋಽಬ್ರವೀದ್ವಚಃ।
ಚಕಾರ ಬುದ್ಧಿಂ ಚ ತದಾ ತದಾಶ್ರಮೇ
ನಿಶಾನಿವಾಸಾಯ ನರಾಧಿಪಾತ್ಮಜಃ ॥ ೨೪

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ನವತಿತಮಃ ಸರ್ಗಃ

❋❋❋

ಹೋಗಬಹುದು. ಈ ದಿನ ನಿನ್ನ ಮಂತ್ರಿಗಳೊಡನೆ ಇಲ್ಲಿಯೇ ಇರು. ನನ್ನ ಈ ಕೋರಿಕೆಯೊಂದನ್ನು ನಡೆಸಿಕೊಡು. ನೀನು ಪ್ರಾಜ್ಞನಾದವನು. ನನ್ನ ಇಷ್ಟವನ್ನು ನೆರವೇರಿಸಬಲ್ಲೆ'' ಎಂದು ಹೇಳಿದರು (೨೨-೨೩). ಭರತನ ಔದಾರ್ಯವೂ ಸರಳಸ್ವಭಾವವೂ ಭರದ್ವಾಜರಿಗೆ ಸ್ಪಷ್ಟವಾಯಿತು. ಆ ರಾಜಕುಮಾರನು ಹಾಗೆಯೇ ಆಗಲೆಂದು ಭರದ್ವಾಜ ಮುನಿಗಳಿಗೆ ಹೇಳಿ ಅವರ ಆಶ್ರಮದಲ್ಲಿ ಆ ರಾತ್ರಿ ಉಳಿಯಬೇಕೆಂದು ನಿಶ್ಚಯಿಸಿದನು (೨೪).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ತೊಂಬತ್ತನೆಯ ಸರ್ಗ

❋❋❋

ಏಕನವತಿತಮಃ ಸರ್ಗಃ

ಭರದ್ವಾಜಾತಿಥ್ಯಮ್

ಕೃತಬುದ್ಧಿಂ ನಿವಾಸಾಯ ತತ್ರೈವ ಸ ಮುನಿಸ್ತದಾ ।
ಭರತಂ ಕೈಕಯೀಪುತ್ರಮಾತಿಥ್ಯೇನ ನ್ಯಮಂತ್ರಯತ್ ॥ ೧

ಅಬ್ರವೀದ್ಭರತಸ್ತ್ವೇನಂ ನನ್ವಿದಂ ಭವತಾ ಕೃತಮ್ ।
ಪಾದ್ಯಮರ್ಘ್ಯಂ ತಥಾತಿಥ್ಯಂ ವನೇ ಯದುಪಪದ್ಯತೇ ॥ ೨

ಅಥೋವಾಚ ಭರದ್ವಾಜೋ ಭರತಂ ಪ್ರಹಸನ್ನಿವ ।
ಜಾನೇ ತ್ವಾಂ ಪ್ರೀತಿಸಂಯುಕ್ತಂ ತುಷ್ಯೇಸ್ತ್ವಂ ಯೇನ ಕೇನಚಿತ್ ॥ ೩

ಸೇನಾಯಾಸ್ತು ತವೈತಸ್ಯಾಃ ಕರ್ತುಮಿಚ್ಛಾಮಿ ಭೋಜನಮ್ ।
ಮಮ ಪ್ರೀತಿರ್ಯಥಾರೂಪಾ ತ್ವಮರ್ಹೋ ಮನುಜಾಧಿಪ ॥ ೪

ಕಿಮರ್ಥಂ ಚಾಪಿ ನಿಕ್ಷಿಪ್ಯ ದೂರೇ ಬಲಮಿಹಾಗತಃ ।
ಕಸ್ಮಾನ್ನೇಹೋಪಯಾತೋಽಸಿ ಸಬಲಃ ಪುರುಷರ್ಷಭ ॥ ೫

ಸರ್ಗ ೯೧

ಭರದ್ವಾಜಮುನಿಗಳು ಭರತನಿಗೂ ಅವನ ಸೈನ್ಯಕ್ಕೂ ಔತಣವನ್ನು ಕೊಟ್ಟು ಸತ್ಕರಿಸುವುದು.

ಹೀಗೆ ಭರತನು ಆಶ್ರಮದಲ್ಲಿ ಉಳಿಯಬೇಕೆಂದು ನಿಶ್ಚಯಿಸಲು, ಭರದ್ವಾಜಮುನಿಗಳು ತಮ್ಮ ಆತಿಥ್ಯವನ್ನು ಸ್ವೀಕರಿಸಬೇಕೆಂದು ಭರತನನ್ನು ಆಮಂತ್ರಿಸಿದರು. ಆಗ ಭರತನು ''ಮಹರ್ಷಿಗಳೆ, ಅರ್ಘ್ಯಪಾದ್ಯಗಳಿಂದಲೂ ಅರಣ್ಯದಲ್ಲಿ ದೊರೆಯುವ ವಸ್ತುಗಳಿಂದಲೂ ಸತ್ಕಾರವನ್ನು ಮಾಡಿದ್ದೀರಲ್ಲವೆ? ನನಗೆ ಇನ್ನೇನಾಗಬೇಕು'' ಎಂದನು (೧-೨). ಆಗ ಭರದ್ವಾಜರು ಮುಗುಳ್ನಗೆಯನ್ನು ಬೀರುತ್ತ ''ವತ್ಸ ನೀನು ಸಂಪ್ರೀತನಾಗಿರುವೆಯೆಂಬುದು ನನಗೆ ಗೊತ್ತು. ಏನನ್ನು ಕೊಟ್ಟರೂ ನಿನಗೆ ತೃಪ್ತಿಯಾಗುತ್ತದೆ. ಆದರೆ ನಿನ್ನ ಸೈನಿಕರಿಗೆ ಒಂದು ಔತಣವನ್ನು ಏರ್ಪಡಿಸಬೇಕೆಂದು ನನಗೆ ಇಚ್ಛೆಯಾಗಿದೆ. ಇದು ನನ್ನ ಸಂತೋಷಕ್ಕಾಗಿ; ಇದಕ್ಕೆ ನೀನು ಒಪ್ಪಬೇಕು (೩-೪). ಎಲೈ ಪುರುಷಶ್ರೇಷ್ಠ, ಸೈನ್ಯವನ್ನು ದೂರದಲ್ಲಿ ಏಕೆ ಬಿಟ್ಟು ಬಂದೆ ? ಸೈನಿಕರನ್ನು

ಭರತಃ ಪ್ರತ್ಯುವಾಚೇದಂ ಪ್ರಾಂಜಲಿಸ್ತಂ ತಪೋಧನಮ್ ।
ಸಸೈನ್ಯೋ ನೋಪಯಾತೋಽಸ್ಮಿ ಭಗವನ್ ಭಗವದ್ಭಯಾತ್ ॥ ೬

ರಾಜ್ಞಾ ಚ ಭಗವನ್ನಿತ್ಯಂ ರಾಜಪುತ್ರೇಣ ವಾ ಸದಾ ।
ಯತ್ನತಃ ಪರಿಹರ್ತವ್ಯಾ ವಿಷಯೇಷು ತಪಸ್ವಿನಾಮ್ ॥ ೭

ವಾಜಿಮುಖ್ಯಾ ಮನುಷ್ಯಾಶ್ಚ ಮತ್ತಾಶ್ಚ ವರವಾರಣಾಃ ।
ಪ್ರಚ್ಛಾದ್ಯ ಭಗವನ್ ಭೂಮಿಂ ಮಹತೀಮನುಯಾಂತಿ ಮಾಮ್ ॥ ೮

ತೇ ವೃಕ್ಷಾನುದಕಂ ಭೂಮಿಮಾಶ್ರಮೇಷೂಟಜಾಂಸ್ತಥಾ ।
ನ ಹಿಂಸ್ಯುರಿತಿ ತೇನಾಹಮೇಕ ಏವ ಸಮಾಗತಃ ॥ ೯

ಆನೀಯತಾಮಿತಃ ಸೇನೇತ್ಯಾಜ್ಞಪ್ತಃ ಪರಮರ್ಷಿಣಾ ।
ತತಸ್ತು ಚಕ್ರೇ ಭರತಃ ಸೇನಾಯಾಃ ಸಮುಪಾಗಮಮ್ ॥ ೧೦

ಅಗ್ನಿಶಾಲಾಂ ಪ್ರವಿಶ್ಯಾಥ ಪೀತ್ವಾಪಃ ಪರಿಮೃಜ್ಯ ಚ ।
ಆತಿಥ್ಯಸ್ಯ ಕ್ರಿಯಾಹೇತೋರ್ವಿಶ್ವಕರ್ಮಾಣಮಾಹ್ವಯತ್ ॥ ೧೧

ಕರೆದುಕೊಂಡು ಏಕೆ ಬರಲಿಲ್ಲ?'' ಎಂದರು. ಭರತನು ಆ ತಪಸ್ವಿಗಳಿಗೆ ಕೈಮುಗಿಯುತ್ತ ''ಭಗವಾನ್, ತಮಗೆ ನಾನು ಭಯಪಟ್ಟು ಸೇನೆಯೊಡನೆ ಬರಲಿಲ್ಲ! (೫-೬). ರಾಜನಾಗಲಿ ರಾಜಪುತ್ರನಾಗಲಿ ಋಷಿಗಳ ಆಶ್ರಮಕ್ಕೆ ತನ್ನ ಪರಿವಾರವು ನುಗ್ಗದಂತೆ ದೂರವಿಡಬೇಕು. ಅಶ್ವಗಳೂ ಕಾಲಾಳುಗಳೂ ಮದ್ದಾನೆಗಳೂ ಈ ಭೂಮಿಯನ್ನು ಮುಚ್ಚಿಬಿಡುವುವೋ ಎಂಬಂತೆ ನನ್ನನ್ನು ಹಿಂಬಾಲಿಸಿ ಬಂದಿವೆ. ಭಗವನ್, ಅವು ಈ ಆಶ್ರಮದೊಳಗೆ ಬಂದು ಇಲ್ಲಿರುವ ಮರ, ನೀರು, ನೆಲ ಮತ್ತು ಆಶ್ರಮಗಳಿಗೆ ತೊಂದರೆಮಾಡದಿರಲಿ ಎಂದು ನಾನೊಬ್ಬನೇ ಬಂದೆನು'' ಎಂದು ಉತ್ತರ ಹೇಳಿದನು (೭-೯). ಆಗ ಭರದ್ವಾಜ ಮುನಿಗಳು (ಒಳ್ಳೆಯದು) ಸೇನೆಯನ್ನು ಇಲ್ಲಿಗೆ ಕರೆಸು ಎಂದು ಹೇಳಿದರು. ಭರತನು ಅವರ ಆಜ್ಞೆಯಂತೆ ಸೈನ್ಯವು ಆಶ್ರಮಕ್ಕೆ ಬರುವಂತೆ ಆದೇಶವನ್ನಿತ್ತನು. ಅನಂತರ ಭರದ್ವಾಜರು ತಮ್ಮ ಅಗ್ನಿಶಾಲೆಯನ್ನು ಪ್ರವೇಶಿಸಿ ಶುದ್ಧಾಚಮನವನ್ನು ಮಾಡಿ ಅತಿಥಿಸತ್ಕಾರವನ್ನು ನೆರವೇರಿಸುವುದಕ್ಕೋಸ್ಕರ ವಿಶ್ವ ಕರ್ಮವನ್ನು ಮಂತ್ರಪೂರ್ವಕವಾಗಿ ಆಹ್ವಾನಿಸಿದರು (೧೦-೧೧). ಅವರು ''ಈಗ

ಆಹ್ವಯೇ ವಿಶ್ವಕರ್ಮಾಣಮಹಂ ತ್ವಷ್ಟಾರಮೇವ ಚ ।
ಆತಿಥ್ಯಂ ಕರ್ತುಮಿಚ್ಛಾಮಿ ತತ್ರ ಮೇ ಸಂವಿಧಿಯತಾಮ್ ॥ ೧೨

ಆಹ್ವಯೇ ಲೋಕಪಾಲಾಂಸ್ತ್ರೀನ್ ದೇವಾನ್ ಶಕ್ರಮುಖಾಂಸ್ತಥಾ ।
ಆತಿಥ್ಯಂ ಕರ್ತುಮಿಚ್ಛಾಮಿ ತತ್ರ ಮೇ ಸಂವಿಧೀಯತಾಮ್ ॥ ೧೩

ಪ್ರಾಕ್ಸ್ರೋತಸಶ್ಚ ಯಾ ನದ್ಯಃ ಪ್ರತ್ಯಕ್ಸ್ರೋತಸ ಏವ ಚ ।
ಪೃಥಿವ್ಯಾಮಂತರಿಕ್ಷೇ ಚ ಸಮಾಯಾಂತ್ವದ್ಯ ಸರ್ವಶಃ ॥ ೧೪

ಅನ್ಯಾಃ ಸ್ರವಂತು ಮೈರೇಯಂ ಸುರಾಮನ್ಯಾಃ ಸುನಿಷ್ಠಿತಾಮ್ ।
ಅಪರಾಶ್ಚೋದಕಂ ಶೀತಮಿಕ್ಷುಕಾಂಡರಸೋಪಮಮ್ ॥ ೧೫

ಆಹ್ವಯೇ ದೇವಗಂಧರ್ವಾನ್ ವಿಶ್ವಾವಸುಹಹಾಹುಹೂನ್ ।
ತಥೈವಾಪ್ಸರಸೋ ದೇವೀರ್ಗಂಧರ್ವೀಶ್ಚಾಪಿ ಸರ್ವಶಃ ॥ ೧೬

ಘೃತಾಚೀಮಥ ವಿಶ್ವಾಚೀಂ ಮಿಶ್ರಕೇಶೀಮಲಂಬುಸಾಮ್ ।
ನಾಗದಂತಾಂ ಚ ಹೇಮಾಂ ಚ ಹಿಮಾಮದ್ರಿಕೃತಸ್ಥಲಾಮ್ ॥ ೧೭

ನಾನು (ಭರತನಿಗೂ ಅವನ ಪರಿವಾರದವರಿಗೂ) ಅತಿಥಿಸತ್ಕಾರವನ್ನು ಮಾಡಬೇಕೆಂದಿದ್ದೇನೆ. ಇದಕ್ಕಾಗಿ ಮಹಾಶಿಲ್ಪಿ ಯಾದ ವಿಶ್ವಕರ್ಮನನ್ನು ಆಹ್ವಾನಿಸುತ್ತೇನೆ. ಅವನು ಇಲ್ಲಿಗೆ ಬಂದು ಬೇಕಾದ ಸೌಕರ್ಯವನ್ನೇರ್ಪಡಿಸಲಿ! (೧೨). ಯಮ ವರುಣ ಕುಬೇರರೆಂಬ ಮೂವರು ದಿಕ್ಪಾಲಕರನ್ನೂ ಇಂದ್ರಾದಿ ದೇವತೆಗಳನ್ನೂ ಕರೆಯುತ್ತಿದ್ದೇನೆ. ಅತಿಥಿಸತ್ಕಾರವನ್ನು ಮಾಡಬೇಕೆಂದಿದ್ದೇನೆ. ಅವರೆಲ್ಲರೂ ಬಂದು ನೆರವಾಗಲಿ! ಭೂಮ್ಯಂತರಿಕ್ಷಗಳಲ್ಲಿ ಪೂರ್ವಗಾಮಿಗಳೂ ಪಶ್ಚಿಮಗಾಮಿಗಳೂ ಆದ ಸಕಲನದೀದೇವತೆಗಳೂ ಇಲ್ಲಿಗೆ ಬರಲಿ! (೧೩-೧೪). ಅವುಗಳಲ್ಲಿ ಕೆಲವು ನದೀದೇವತೆಗಳು ಖರ್ಜೂರಾದಿ ಫಲಗಳಿಂದ ಹುಟ್ಟುವ ಮೈರೇಯವೆಂಬ ಮದ್ಯವನ್ನೂ ಕೆಲವು ದೇವತೆಗಳು ಗೌಡಿ ಪೈಷ್ಟಿ ಮಾಧ್ವಿ ಎಂಬ ಸುರೆಯನ್ನೂ ಉಳಿದವು ಕಬ್ಬಿನ ಹಾಲಿನಂತಿರುವ ಶೀತಳವಾದ ಸಿಹಿನೀರನ್ನೂ ಒದಗಿಸಲಿ! (೧೫). ದೇವಗಂಧರ್ವರಾದ ವಿಶ್ವಾವಸು, ಹಾಹಾ, ಹೂಹೂ ಎಂಬ ಗಾಯಕರನ್ನು ಆಹ್ವಾನಿಸುತ್ತಿದ್ದೇನೆ. ಹಾಗೆಯೇ ದೇವಜಾತಿಗೂ ಗಂಧರ್ವಜಾತಿಗೂ ಸೇರಿದ ಅಪ್ಸರೆಯರನ್ನು ಕರೆಯುತ್ತಿದ್ದೇನೆ. ಘೃತಾಚಿ, ವಿಶ್ವಾಚಿ, ಮಿಶ್ರಕೇಶಿ, ಅಲಂಬುಸೆ,

ಶಕ್ರಂ ಯಾಶ್ಚೋಪತಿಷ್ಠಂತಿ ಬ್ರಹ್ಮಾಣಂ ಯಾಶ್ಚ ಯೋಷಿತಃ ।
ಸರ್ವಾಸ್ತುಂಬುರುಣಾ ಸಾರ್ಧಮಾಹ್ವಯೇ ಸಪರಿಚ್ಛದಾಃ ॥ ೧೮

ವನಂ ಕುರುಷು ಯದ್ದಿವ್ಯಂ ವಾಸೋಭೂಷಣಪತ್ರವತ್ ।
ದಿವ್ಯನಾರೀಫಲಂ ಶಶ್ವತ್ತತ್ ಕೌಬೇರಮಿಹೈತು ಚ ॥ ೧೯

ಇಹ ಮೇ ಭಗವಾನ್ ಸೋಮೋ ವಿಧತ್ತಾಮನ್ನಮುತ್ತಮಮ್ ।
ಭಕ್ಷ್ಯಂ ಭೋಜ್ಯಂ ಚ ಚೋಷ್ಯಂ ಚ ಲೇಹ್ಯಂ ಚ ವಿವಿಧಂ ಬಹು ॥ ೨೦

ವಿಚಿತ್ರಾಣಿ ಚ ಮಾಲ್ಯಾನಿ ಪಾದಪಪ್ರಚ್ಯುತಾನಿ ಚ ।
ಸುರಾದೀನಿ ಚ ಪೇಯಾನಿ ಮಾಂಸಾನಿ ವಿವಿಧಾನಿ ಚ ॥ ೨೧

ಏವಂ ಸಮಾಧಿನಾ ಯುಕ್ತಸ್ತೇಜಸಾಪ್ರತಿಮೇನ ಚ ।
ಶೀಕ್ಷಾಸ್ವರಸಮಾಯುಕ್ತಂ ತಪಸಾ ಚಾಬ್ರವೀನ್ಮುನಿಃ ॥ ೨೨

ಮನಸಾ ಧ್ಯಾಯತಸ್ತಸ್ಯ ಪ್ರಾಙ್ಮುಖಸ್ಯ ಕೃತಾಂಜಲೇಃ ।
ಆಜಗ್ಮುಸ್ತಾನಿ ಸರ್ವಾಣಿ ದೈವತಾನಿ ಪೃಥಕ್ ಪೃಥಕ್ ॥ ೨೩

ನಾಗದಂತೆ, ಹೇಮೆ, ಹಿಮೆ ಮತ್ತು ಅದ್ರಿಕೃತಸ್ಥಲೆಯೆಂಬ ಅಪ್ಸರೆಯರೂ ಬರಲಿ! (೧೬-೧೭). ದೇವೇಂದ್ರನನ್ನೂ ಬ್ರಹ್ಮನನ್ನೂ ಸೇವಿಸುತ್ತಿರುವ ತರುಣಿಯರೆಲ್ಲರೂ ತಮ್ಮ ನೃತ್ಯಗೀತ ಸಾಮಗ್ರಿಗಳೊಡನೆ ತುಂಬುರುಮುನಿಗಳೊಡನೆ ಬರಲೆಂದು ಕರೆಯುತ್ತಿದ್ದೇನೆ (೧೮). ಉತ್ತರ ಕುರುದೇಶದಲ್ಲಿರುವ ಕುಬೇರನ ಚೈತ್ರರಥವೆಂಬ ದಿವ್ಯವಾದ ಉದ್ಯಾನ ವನವೇ ಇಲ್ಲಿಗೆ ಬರಲಿ! ಅದು ವಸ್ತ್ರಭೂಷಣಗಳೆಂಬ ಪತ್ರಗಳಿಂದಲೂ ದಿವ್ಯಸ್ತ್ರೀಯರೆಂಬ ಫಲಗಳಿಂದಲೂ ಸಮೇತವಾಗಿಯೇ ಬರಬೇಕು! (೧೯). (ಓಷಧೀಶ್ವರನಾದ) ಭಗವಾನ್ ಸೋಮನು ಭಕ್ಷ್ಯ, ಭೋಜ್ಯ, ಚೋಷ್ಯ, ಲೇಹ್ಯಗಳೇ ಮೊದಲಾದ ವಿವಿಧ ಖಾದ್ಯವಸ್ತುಗಳನ್ನು ಹೇರಳವಾಗಿ ನಿರ್ಮಿಸಲಿ! ಆತನು ವಿಚಿತ್ರವಾದ ಹೂಮಾಲೆಗಳನ್ನೂ ಆಗತಾನೇ ಮರದಿಂದ ಕಿತ್ತ ಬಿಡಿಹೂಗಳನ್ನೂ ಮದ್ಯವೇ ಮೊದಲಾದ ಪೇಯಗಳನ್ನೂ ನಾನಾಬಗೆಯ ಮಾಂಸಗಳನ್ನೂ ಸಿದ್ಧಪಡಿಸಲಿ!'' ಎಂದರು (೨೦-೨೧). ಹೀಗೆ ಯೋಗಬಲಸಮನ್ವಿತರೂ ತಪಸ್ವಿಗಳೂ ಮಹಾತೇಜಸ್ವಿಗಳೂ ಆದ ಭರದ್ವಾಜಮಹರ್ಷಿಗಳು ಶಿಕ್ಷಾಶಾಸ್ತ್ರೋಕ್ತ ಕ್ರಮದಲ್ಲಿ ನಿರ್ದುಷ್ಟವಾಗಿ ಆಹ್ವಾನ ಮಂತ್ರಗಳನ್ನು ಜಪಿಸಿದರು (೨೨). ಅವರು

ಮಲಯಂ ದರ್ದುರಂ ಚೈವ ತತಃ ಸ್ವೇದನುದೋಽನಿಲಃ ।
ಉಪಸ್ಪೃಶ್ಯ ವವೌ ಯುಕ್ತ್ಯಾ ಸುಪ್ರಿಯಾತ್ಮಾ ಸುಖಃ ಶಿವಃ ॥ ೨೪
ತತೋಽಭ್ಯವರ್ಷಂತ ಘನಾ ದಿವ್ಯಾಃ ಕುಸುಮವೃಷ್ಟಯಃ ।
ದಿವ್ಯದುಂದುಭಿಘೋಷಶ್ಚ ದಿಕ್ಷು ಸರ್ವಾಸು ಶುಶ್ರುವೇ ॥ ೨೫
ಪ್ರವವುಶ್ಚೋತ್ತಮಾ ವಾತಾ ನನೃತುಶ್ಚಾಪ್ಸರೋಗಣಾಃ ।
ಪ್ರಜಗುರ್ದೇವಗಂಧರ್ವಾ ವೀಣಾಃ ಪ್ರಮುಮುಚುಃ ಸ್ವರಾನ್ ॥ ೨೬
ಸ ಶಬ್ದೋ ದ್ಯಾಂ ಚ ಭೂಮಿಂ ಚ ಪ್ರಾಣಿನಾಂ ಶ್ರವಣಾನಿ ಚ ।
ವಿವೇಶೋಚ್ಚಾವಚಃ ಶ್ಲಕ್ಷ್ಣಃ ಸಮೋ ಲಯಗುಣಾನ್ವಿತಃ ॥ ೨೭
ತಸ್ಮಿನ್ನುಪರತೇ ಶಬ್ದೇ ದಿವ್ಯೇ ಶ್ರೋತ್ರಸುಖೇ ನೃಣಾಮ್ ।
ದದರ್ಶ ಭಾರತಂ ಸೈನ್ಯಂ ವಿಧಾನಂ ವಿಶ್ವಕರ್ಮಣಃ ॥ ೨೮
ಬಭೂವ ಹಿ ಸಮಾ ಭೂಮಿಃ ಸಮಂತಾತ್ ಪಂಚಯೋಜನಮ್ ।
ಶಾದ್ವಲೈರ್ಬಹುಭಿಶ್ಛನ್ನಾ ನೀಲವೈದೂರ್ಯಸಂನಿಭೈಃ ॥ ೨೯

ಪೂರ್ವಾಭಿಮುಖವಾಗಿ ನಿಂತು ಅಂಜಲಿಯನ್ನೊಡ್ಡಿ ಏಕಾಗ್ರಚಿತ್ತದಿಂದ ಧ್ಯಾನಮಾಡುತ್ತಿರಲು, ಆಹ್ವಾನಿಸಿದ ದೇವತೆಗಳೆಲ್ಲರೂ ಬೇರೆಬೇರೆಯಾಗಿ ಆಶ್ರಮಕ್ಕೆ ಬಂದರು. ಮಲಯ ದರ್ದುರಗಳೆಂಬ ಪರ್ವತಗಳ ಮೇಲೆ ಬೀಸಿ ಸುಗಂಧಿಯಾದ ಶೀತಲ ಮಾರುತವು ಸೈನಿಕರ ಬೆವರನ್ನು ಕಳೆಯುತ್ತ ಹಿತಕರವಾಗಿ ಬೀಸಿತು (೨೩-೨೪). ನಿರಂತರವಾಗಿ ದಿವ್ಯಕುಸುಮಗಳ ಮಳೆ ಸುರಿಯಿತು. ದಿವ್ಯ ದುಂದುಭಿಗಳ ನಾದವು ಎಲ್ಲ ದಿಕ್ಕುಗಳಲ್ಲಿಯೂ ಕೇಳಿಸಿತು. ಗಾಳಿಯು ಸುಖಕರವಾಗಿ ಬೀಸುತ್ತಲೇ ಇದ್ದಿತು. ಅಪ್ಸರೆಯರು ಕುಣಿದರು. ದೇವಗಂಧರ್ವರು ಹಾಡಿದರು. ವೀಣೆಗಳು ನುಡಿದವು (೨೫-೨೬). ಭೂಮ್ಯಾಕಾಶಗಳಲ್ಲಿ ಹರಡಿದ ನಾನಾ ಬಗೆಯ ಆ ಗೀತಧ್ವನಿಯು ಶ್ರುತಿಸಮವೂ ಲಯಾನ್ವಿತವೂ ಆಗಿ ಜನರೆಲ್ಲರಿಗೂ ಇಂಪಾಗಿ ಕೇಳಿಸಿತು. ಕರ್ಣಾನಂದಕರವಾದ ಆ ನಾದವು ಸ್ವಲ್ಪ ಹೊತ್ತಿನ ಮೇಲೆ ನಿಂತಿತು. ಅಷ್ಟರಲ್ಲಿ ಭರತನ ಸೈನಿಕರಿಗೆ ವಿಶ್ವಕರ್ಮನ ಶಿಲ್ಪ ಚಮತ್ಕಾರವು ಗೋಚರಿಸಿತು (೨೭-೨೮). ಆ ಪ್ರದೇಶದಲ್ಲಿ ಸುತ್ತಲೂ ಐದು ಯೋಜನದಷ್ಟು ನೆಲವು ಹಳ್ಳತಿಟ್ಟುಗಳಿಲ್ಲದೆ ಸಮಭೂಮಿಯಾಗಿತ್ತು. ಇಂದ್ರನೀಲಮಣಿಯಂತೆಯೂ ವೈಡೂರ್ಯದಂತೆಯೂ

ತಸ್ಮಿನ್ ಬಿಲ್ವಾಃ ಕಪಿತ್ಥಾಶ್ಚ ಪನಸಾ ಬೀಜಪೂರಕಾಃ ।
ಅಮಲಕ್ಯೋ ಬಭೂವುಶ್ಚ ಚೂತಾಶ್ಚ ಫಲಭೂಷಣಾಃ ॥ ೩೦

ಉತ್ತರೇಭ್ಯಃ ಕುರುಭ್ಯಶ್ಚ ವನಂ ದಿವ್ಯೋಪಭೋಗವತ್ ।
ಆಜಗಾಮ ನದೀ ದಿವ್ಯಾ ತೀರಜೈರ್ಬಹುಭಿರ್ವೃತಾ ॥ ೩೧

ಚತುಶ್ಶಾಲಾನಿ ಶುಭ್ರಾಣಿ ಶಾಲಾಶ್ಚ ಗಜವಾಜಿನಾಮ್ ।
ಹರ್ಮ್ಯಪ್ರಾಸಾದಸಂಬಾಧಾಸ್ತೋರಣಾನಿ ಶುಭಾನಿ ಚ ॥ ೩೨

ಸಿತಮೇಘನಿಭಂ ಚಾಪಿ ರಾಜವೇಶ್ಮ ಸುತೋರಣಮ್ ।
ದಿವ್ಯಮಾಲ್ಯಕೃತಾಕಾರಂ ದಿವ್ಯಗಂಧಸಮುಕ್ಷಿತಮ್ ॥ ೩೩

ಚತುರಶ್ರಮಸಂಬಾಧಂ ಶಯನಾಸನಯಾನವತ್ ।
ದಿವ್ಯೈಃ ಸರ್ವರಸೈರ್ಯುಕ್ತಂ ದಿವ್ಯಭೋಜನವಸ್ತ್ರವತ್ ॥ ೩೪

ಉಪಕಲ್ಪಿತಸರ್ವಾನ್ನಂ ಧೌತನಿರ್ಮಲಭಾಜನಮ್ ।
ಕ್ಲೃಪ್ತಸರ್ವಾಸನಂ ಶ್ರೀಮತ್ ಸ್ವಾಸ್ತೀರ್ಣಶಯನೋತ್ತಮಮ್ ॥ ೩೫

ಹೊಳೆಯುತ್ತಿದ್ದ ಹಸಿರುಹುಲ್ಲು ಬೆಳೆದಿತ್ತು. ಬಿಲ್ವ, ಬೇಲ, ಹಲಸು, ದಾಳಿಂಬೆ, ನೆಲ್ಲಿ ಮತ್ತು ಮಾವಿನಮರಗಳು ಹಣ್ಣುಗಳಿಂದ ಒಪ್ಪುತ್ತಿದ್ದವು (೨೯-೩೦). ಉತ್ತರಕುರುದೇಶದಲ್ಲಿದ್ದ ದಿವ್ಯವಾದ ಭೋಗಸಾಮಗ್ರಿಯುಳ್ಳ ಚೈತ್ರ ರಥವೆಂಬ ಉದ್ಯಾನವು ಅಲ್ಲಿ ಪ್ರತ್ಯಕ್ಷವಾಯಿತು. ತೀರವೃಕ್ಷಗಳಿಂದ ಶೋಭಿಸುವ ದಿವ್ಯನದಿಗಳು ಅಲ್ಲಿ ಹರಿಯತೊಡಗಿದವು. ಶುಭ್ರವಾದ ಚಚ್ಚೌಕದ ಕೈಸಾಲೆಗಳೂ ಆನೆಕುದುರೆಗಳ ಲಾಯಗಳೂ ಹರ್ಮ್ಯಪ್ರಾಸಾದಗಳೂ ಸುಂದರವಾದ ತೋರಣಗಳೂ ಕಾಣಿಸಿದವು (೩೧-೩೨). ಬಿಳಿಯ ಮೋಡದಂತೆ ಉನ್ನತವಾಗಿ ಬೆಳಗುವ ಒಂದು ರಾಜಭವನವು ಗೋಚರಿಸಿತು. ಅದು ತೋರಣಗಳಿಂದಲೂ ದಿವ್ಯಪುಷ್ಪಗಳನ್ನು ಪೋಣಿಸಿದ ಮಾಲೆಗಳಿಂದಲೂ ವಿರಾಜಿಸುತ್ತಿತ್ತು. ಅದರಲ್ಲಿ ಉತ್ತಮವಾದ ಸುಗಂಧವು ಹರಡಿತ್ತು (೩೩). ಆ ರಾಜಭವನವು ಚಚ್ಚೌಕವಾಗಿದ್ದು ಅತ್ಯಂತ ವಿಶಾಲವಾಗಿತ್ತು. ಅದರಲ್ಲಿ ಉತ್ತಮಶ್ರೇಣಿಯ ಹಾಸಿಗೆಗಳೂ ಪೀಠಗಳೂ ಪಲ್ಲಕ್ಕಿ ಮೊದಲಾದ ಉಪಕರಣಗಳೂ ಇದ್ದವು. ಷಡ್ರಸೋಪೇತವಾದ ದಿವ್ಯಭೋಜನ ಪದಾರ್ಥಗಳಿಂದಲೂ

ಪ್ರವಿವೇಶ ಮಹಾಬಾಹುರನುಜ್ಞಾತೋ ಮಹರ್ಷಿಣಾ ।
ವೇಶ್ಮ ತದ್ರತ್ನಸಂಪೂರ್ಣಂ ಭರತಃ ಕೈಕಯೀಸುತಃ ॥ ೩೬

ಅನುಜಗ್ಮುಶ್ಚ ತಂ ಸರ್ವೇ ಮಂತ್ರಿಣಃ ಸಪುರೋಹಿತಾಃ ।
ಬಭೂವುಶ್ಚ ಮುದಾ ಯುಕ್ತಾ ದೃಷ್ಟ್ವಾ ತಂ ವೇಶ್ಮಸಂವಿಧಿಮ್ ॥ ೩೭

ತತ್ರ ರಾಜಾಸನಂ ದಿವ್ಯಂ ವ್ಯಜನಂ ಛತ್ರಮೇವ ಚ ।
ಭರತೋ ಮಂತ್ರಿಭಿಃ ಸಾರ್ಧಮಭ್ಯವರ್ತತ ರಾಜವತ್ ॥ ೩೮

ಆಸನಂ ಪೂಜಯಾಮಾಸ ರಾಮಾಯಾಭಿಪ್ರಣಮ್ಯ ಚ ।
ವಾಲವ್ಯಜನಮಾದಾಯ ನ್ಯಷೀದತ್ ಸಚಿವಾಸನೇ ॥ ೩೯

ಆನುಪೂರ್ವ್ಯಾನ್ನಿಷೇದುಶ್ಚ ಸರ್ವೇ ಮಂತ್ರಿಪುರೋಹಿತಾಃ ।
ತತಃ ಸೇನಾಪತಿಃ ಪಶ್ಚಾತ್ ಪ್ರಶಾಸ್ತಾ ಚ ನಿಷೇದತುಃ ॥ ೪೦

ದಿವ್ಯವಸ್ತ್ರಗಳಿಂದಲೂ ಆ ಭವನವು ತುಂಬಿತ್ತು (೩೪). ಸಕಲವಿಧದ ಮೃಷ್ಟಾನ್ನವೂ ಅಣಿಯಾಗಿತ್ತು. ಶುಭ್ರವಾಗಿ ತೊಳೆದಿಟ್ಟ ಭೋಜನಪಾತ್ರೆಗಳಿದ್ದವು. ಸಮಸ್ತ ಪೀಠಗಳನ್ನೂ ವ್ಯವಸ್ಥೆಯಿಂದ ಜೋಡಿಸಿಡಲಾಗಿತ್ತು. ಎಲ್ಲ ಬಗೆಯ ವೈಭವದಿಂದ ಆ ಭವನವು ರಂಜಿಸುತ್ತಿತ್ತು. ಉತ್ತಮವಾದ ಹಾಸಿಗೆಗಳನ್ನು ಹಾಸಲಾಗಿತ್ತು (೩೫). ಅನಂತರ ಆಜಾನುಬಾಹುವಾದ ಭರತನು ಭರದ್ವಾಜಮುನಿಗಳ ಸೂಚನೆಯಂತೆ ಶ್ರೇಷ್ಠವಸ್ತುಗಳಿಂದ ತುಂಬಿದ್ದ ಆ ಭವನವನ್ನು ಪ್ರವೇಶಿಸಿದನು (೩೬). ಸಕಲ ಮಂತ್ರಿಗಳೂ ಪುರೋಹಿತರೂ ಅವನನ್ನು ಹಿಂಬಾಲಿಸಿ ಹೋದರು. ಅವರೆಲ್ಲರೂ ಆ ಭವನದ ವೈಭವವನ್ನೂ ಶಿಲ್ಪ ಚಾತುರ್ಯವನ್ನೂ ಕಂಡು ಆನಂದಿಸಿ ಅಚ್ಚರಿಗೊಂಡರು. ಅಲ್ಲೊಂದು ದಿವ್ಯವಾದ ರಾಜಸಿಂಹಾಸನವೂ ಛತ್ರಚಾಮರಗಳೂ ಶೋಭಿಸುತ್ತಿದ್ದವು. ಭರತನು ಸಿಂಹಾಸನಕ್ಕೆ ರಾಜಾರ್ಹವಾದ ಗೌರವವನ್ನು ತೋರಿಸಿ ಮಂತ್ರಿಗಳೊಡನೆ ಅದನ್ನು ಪ್ರದಕ್ಷಿಣೆಮಾಡಿದನು (೩೭-೩೮). ಅನಂತರ ಅಲ್ಲಿದ್ದ ಚಾಮರವನ್ನು ಕೈಗೆ ತೆಗೆದುಕೊಂಡು ಶ್ರೀರಾಮನನ್ನು ಧ್ಯಾನಮಾಡಿ ನಮಸ್ಕರಿಸಿ, ಸಿಂಹಾಸನದ ಸಮೀಪದಲ್ಲಿ ಚಾಮರವನ್ನು ಬೀಸಿ ಸೇವೆ ಸಲ್ಲಿಸಿ ಮಂತ್ರಿಗಳಿಗೆ ಉಚಿತವಾದ ಒಂದು ಆಸನದಲ್ಲಿ ಕುಳಿತುಕೊಂಡನು (೩೯). ಅನಂತರ ಮಂತ್ರಿಗಳೂ ಪುರೋಹಿತರೂ ಯಥಾಯೋಗ್ಯವಾಗಿ ತಮ್ಮ ಆಸನಗಳಲ್ಲಿ ಕುಳಿತರು. ಆಮೇಲೆ ಸೇನಾಪತಿಯೂ

ತತಸ್ತತ್ರ ಮುಹೂರ್ತೇನ ನದ್ಯಃ ಪಾಯಸಕರ್ದಮಾಃ ।
ಉಪಾತಿಷ್ಠಂತ ಭರತಂ ಭರದ್ವಾಜಸ್ಯ ಶಾಸನಾತ್ ॥ ೪೧

ತಾಸಾಮುಭಯತಃ ಕೂಲಂ ಪಾಂಡುಮೃತ್ತಿಕಲೇಪನಾಃ ।
ರಮ್ಯಾಶ್ಚಾವಸಥಾ ದಿವ್ಯಾ ಬ್ರಾಹ್ಮಣಸ್ಯ ಪ್ರಸಾದಜಾಃ ॥ ೪೨

ತೇನೈವ ಚ ಮುಹೂರ್ತೇನ ದಿವ್ಯಾಭರಣಭೂಷಿತಾಃ ।
ಆಗುರ್ವಿಂಶತಿಸಾಹಸ್ರಾ ಬ್ರಹ್ಮಣಾ ಪ್ರಹಿತಾಃ ಸ್ತ್ರಿಯಃ ॥ ೪೩

ಸುವರ್ಣಮಣಿಮುಕ್ತಾಭಿಃ ಪ್ರವಾಲೇನ ಚ ಶೋಭಿತಾಃ ।
ಆಗುರ್ವಿಂಶತಿಸಾಹಸ್ರಾಃ ಕುಬೇರಪ್ರಹಿತಾಃ ಸ್ತ್ರಿಯಃ ॥ ೪೪

ಯಾಭಿರ್ಗೃಹೀತಃ ಪುರುಷಃ ಸೋನ್ಮಾದ ಇವ ಲಕ್ಷ್ಯತೇ ।
ಆಗುರ್ವಿಂಶತಿಸಾಹಸ್ರಾ ನಂದನಾದಪ್ಸರೋಗಣಾಃ ॥ ೪೫

ನಾರದಸ್ತುಂಬುರುರ್ಗೋಪಃ ಪ್ರಭಯಾ ಸೂರ್ಯವರ್ಚಸಃ ।
ಏತೇ ಗಂಧರ್ವರಾಜಾನೋ ಭರತಸ್ಯಾಗ್ರತೋ ಜಗುಃ ॥ ೪೬

ಶಿಬಿರಾಧ್ಯಕ್ಷನೂ ಕುಳಿತುಕೊಂಡರು. ತರುವಾಯ ಅಲ್ಪ ಕಾಲದಲ್ಲಿಯೇ ಭರದ್ವಾಜರ ಆಜ್ಞೆಯಂತೆ ಭರತನೆದುರಿಗೆ ಹಾಲಿನ ಹೊಳೆಗಳು ಹರಿಯಲಾರಂಭಿಸಿದವು (೪೦-೪೧). ಅವುಗಳ ಎರಡು ಪಾರ್ಶ್ವಗಳಲ್ಲಿಯೂ ಸುಧಾಧವಲಿತವಾದ ದಿವ್ಯಗೃಹಗಳು ಆ ಬ್ರಾಹ್ಮಣೋತ್ತಮನ ಅನುಗ್ರಹದಿಂದ ಕಾಣಿಸಿಕೊಂಡವು. ಕೂಡಲೆ ಬ್ರಹ್ಮನು ಕಳಿಸಿದ ಇಪ್ಪತ್ತು ಸಾವಿರ ಸುಂದರಿಯರು ದಿವ್ಯಾಭರಣಭೂಷಿತರಾಗಿ ಅಲ್ಲಿಗೆ ಬಂದರು. ಹಾಗೆಯೇ ಕುಬೇರನು ಕಳಿಸಿದ ತರುಣಿಯರು ಚಿನ್ನ, ರತ್ನ ಮುತ್ತು, ಹವಳಗಳ ಒಡವೆಗಳಿಂದ ಅಲಂಕೃತರಾಗಿ ಬಂದು ಸೇರಿದರು (೪೨-೪೪). ನಂದನವನದಿಂದ ಇಪ್ಪತ್ತು ಸಾವಿರ ಅಪ್ಸರೆಯರು ಬಂದಿಳಿದರು. ಅವರ ಚೆಲುವೆಷ್ಟು! ಅವರು ಅಪ್ಪಿಕೊಂಡರೆ ಯಾವ ಪುರುಷನಾದರೂ ಹುಚ್ಚು ಹಿಡಿದು ಮರುಳನಾದಾನು! ಸೂರ್ಯನಂತೆ ವರ್ಚಸ್ವಿಗಳಾದ ನಾರದ, ತುಂಬುರು, ಗೋಪ

ಅಲಂಬುಸಾ ಮಿಶ್ರಕೇಶೀ ಪುಂಡರೀಕಾಥ ವಾಮನಾ ।
ಉಪಾನೃತ್ಯಂಸ್ತು ಭರತಂ ಭರದ್ವಾಜಸ್ಯ ಶಾಸನಾತ್ ॥ ೪೭
ಯಾನಿ ಮಾಲ್ಯಾನಿ ದೇವೇಷು ಯಾನಿ ಚೈತ್ರರಥೇ ವನೇ ।
ಪ್ರಯಾಗೇ ತಾನ್ಯದೃಶ್ಯಂತ ಭರದ್ವಾಜಸ್ಯ ತೇಜಸಾ ॥ ೪೮
ಬಿಲ್ವಾ ಮಾರ್ದಂಗಿಕಾ ಆಸನ್ ಕಾಂಸ್ಯಗ್ರಾಹಾ ವಿಭೀತಕಾಃ ।
ಅಶ್ವತ್ಥಾ ನರ್ತಕಾಶ್ಚಾಸನ್ ಭರದ್ವಾಜಸ್ಯ ಶಾಸನಾತ್ ॥ ೪೯
ತತಃ ಸರಲತಾಲಾಶ್ಚ ತಿಲಕಾ ನಕ್ತಮಾಲಕಾಃ ।
ಪ್ರಹೃಷ್ಟಾಸ್ತತ್ರ ಸಂಪೇತುಃ ಕುಬ್ಜಾ ಭೂತ್ವಾಥ ವಾಮನಾಃ ॥ ೫೦
ಶಿಂಶಪಾಮಲಕೀಜಂಬ್ವೋ ಯಾಶ್ಚಾನ್ಯಾಃ ಕಾನನೇ ಲತಾಃ ।
ಪ್ರಮದಾವಿಗ್ರಹಂ ಕೃತ್ವಾಭರದ್ವಾಜಾಶ್ರಮೇಽವಸನ್ ॥ ೫೧
ಸುರಾಃ ಸುರಾಪಾಃ ಪಿಬತ ಪಾಯಸಂ ಚ ಬುಭುಕ್ಷಿತಾಃ ।
ಮಾಂಸಾನಿ ಚ ಸಮೇಧ್ಯಾನಿ ಭಕ್ಷ್ಯಂತಾಂ ಯಾವದಿಚ್ಛಥ ॥ ೫೨

ಎಂಬ ಗಂಧರ್ವಶ್ರೇಷ್ಠರು ಭರತನೆದುರಿನಲ್ಲಿ ಹಾಡಿದರು (೪೫-೪೬). ಭರದ್ವಾಜರ ಆದೇಶದಂತೆ ಆಲಂಬುಸೆ, ಮಿಶ್ರಕೇಶಿ, ಪುಂಡರೀಕೆ, ವಾಮನೆ - ಮುಂತಾದ ಅಪ್ಸರೆಯರು ನರ್ತಿಸಿದರು. ದೇವಲೋಕದ ನಂದನವನದಲ್ಲಿಯೂ ಕುಬೇರನ ಚೈತ್ರರಥವನದಲ್ಲಿಯೂ ಯಾವ ಯಾವ ಹೂಗಳುಂಟೋ, ಅವೆಲ್ಲವೂ ಭರದ್ವಾಜರ ಮಹಿಮೆಯಿಂದ ಆ ಪ್ರಯಾಗಕ್ಷೇತ್ರದಲ್ಲಿ ಗೋಚರಿಸಿದವು (೪೭-೪೮). ಆ ಮಹರ್ಷಿಗಳ ಆಜ್ಞೆಯಂತೆ ಬಿಲ್ವವೃಕ್ಷಗಳು ಮನುಷ್ಯರೂಪವನ್ನು ಧರಿಸಿ ಮೃದಂಗವನ್ನು ಬಾರಿಸಿದವು. ತಾರೆಯಮರಗಳು ತಾಳವನ್ನು ಹಾಕಿದವು. ಅರಳಿಮರಗಳು ನೃತ್ಯಮಾಡಿದವು. ಸರಳ, ತಾಲ, ತಿಲಕ, ನಕ್ತಮಾಲಕಗಳೆಂಬ ವೃಕ್ಷಗಳು ಗೂನರೂ ಕುಳ್ಳರೂ ಆದ ಜನರ ವೇಷವನ್ನು ಧರಿಸಿ ಪರಿಚಾರಕರಾದವು (೪೯-೫೦). ಶಿಂಶಪಾ ಆಮಲಕೀ ಜಂಬೂವೃಕ್ಷಗಳೂ ಕಾಡಿನಲ್ಲಿದ್ದ ಇತರ ಲತೆಗಳೂ ಸ್ತ್ರೀರೂಪವನ್ನು ಧರಿಸಿ ಭರತನ ಪರಿವಾರವನ್ನು ಉಪಚರಿಸಿದವು. ಆ ಸ್ತ್ರೀಯರು ಭರತನ ಸೈನಿಕರನ್ನು ನೋಡಿ ''ಮದ್ಯವನ್ನು ಕುಡಿಯತಕ್ಕವರು ಬೇಕಾದಷ್ಟು ಮದ್ಯವನ್ನು ಕುಡಿಯಿರಿ! ಹಸಿವಾದವರು ಪಾಯಸವನ್ನು ಸುರಿಯಿರಿ! ಸೊಗಸಾದ ಮಾಂಸವನ್ನು ತಿನ್ನಿರಿ! ಎಷ್ಟು ಬೇಕಾದರೂ ಸೇವಿಸಿರಿ!'' ಎಂದು ಹೇಳುತ್ತ ಅವರಿಗೆ ಬಡಿಸಿದರು (೫೧-೫೨). ಕೆಲವು ಸ್ತ್ರೀಯರು

ಉಚ್ಛಾದ್ಯ ಸ್ನಾಪಯಂತಿ ಸ್ಮ ನದೀತೀರೇಷು ವಲ್ಗುಷು ।
ಅಪ್ಯೇಕಮೇಕಂ ಪುರುಷಂ ಪ್ರಮದಾಃ ಸಪ್ತ ಚಾಷ್ಟ ಚ ॥ ೫೩

ಸಂವಾಹಂತ್ಯಃ ಸಮಾಪೇತುರ್ನಾರ್ಯೋ ರುಚಿರಲೋಚನಾಃ ।
ಪರಿಮೃಜ್ಯ ತಥಾನ್ಯೋನ್ಯಂ ಪಾಯಯಂತಿ ವರಾಂಗನಾಃ ॥ ೫೪

ಹಯಾನ್ ಗಜಾನ್ ಖರಾನುಷ್ಟ್ರಾಂಸ್ತಥೈವ ಸುರಭೇಃ ಸುತಾನ್ ।
ಅಭೋಜಯನ್ ವಾಹನಪಾಸ್ತೇಷಾಂ ಭೋಜ್ಯಂ ಯಥಾವಿಧಿ ॥ ೫೫

ಇಕ್ಷೂಂಶ್ಚ ಮಧು ಲಾಜಾಂಶ್ಚ ಭೋಜಯಂತಿ ಸ್ಮ ವಾಹನಾನ್ ।
ಇಕ್ಷ್ವಾಕುವರಯೋಧಾನಾಂ ಚೋದಯಂತೋ ಮಹಾಬಲಾಃ ॥ ೫೬

ನಾಶ್ವಬಂಧೋಽಶ್ವಮಾಜಾನನ್ನ ಗಜಂ ಕುಂಜರಗ್ರಹಃ ।
ಮತ್ತಪ್ರಮತ್ತಮುದಿತಾ ಚಮೂಃ ಸಾ ತತ್ರ ಸಂಬಭೌ ॥ ೫೭

ಮನೋಹರವಾದ ನದೀತೀರಗಳಲ್ಲಿ ಆ ಸೈನಿಕರಿಗೆ ತೈಲಾಭ್ಯಂಗ ಮಾಡಿಸಿದರು. ಒಬ್ಬೊಬ್ಬನಿಗೆ ಏಳೆಂಟು ಮಂದಿ ಹೆಂಗಸರು ಸುತ್ತಿನಿಂತು ಮೈಯುಜ್ಜಿ ಸ್ನಾನಮಾಡಿಸಿದರು! (೫೩). ಆ ಚೆಲುವೆಯರು ಕುಡಿನೋಟವನ್ನು ಬೀರುತ್ತ ಅವರಿಗೆ ಸ್ನಾನ ಮಾಡಿಸಿ ಮೈಯೊರೆಸಿ ಉತ್ತಮವಾದ ಪೇಯಗಳನ್ನು ಕುಡಿಸಿದರು! (ಆ ಋಷಿಗಳ ಮಹಿಮೆಯಿಂದ ಬಂದ) ಕೆಲವು ಮಂದಿ ವಾಹನಪಾಲಕರು ಅಶ್ವಾದಿವಾಹನಗಳ ಯೋಗಕ್ಷೇಮಗಳನ್ನು ನೋಡಿಕೊಳ್ಳುತ್ತ ಕುದುರೆ, ಆನೆ, ಕತ್ತೆ, ಒಂಟೆ, ಎತ್ತು ಮುಂತಾದ ವಾಹನಗಳಿಗೆ ಬೇಕುಬೇಕಾದ ಆಹಾರವನ್ನಿತ್ತು ಉಪಚರಿಸಿದರು (೫೪-೫೫). ಬಲಶಾಲಿಗಳಾದ ಆ ವಾಹನಪಾಲಕರು ಭರತನ ಸೈನ್ಯದಲ್ಲಿದ್ದ ವಾಹನಗಳಿಗೆ ಕಬ್ಬು ಜೇನುಮಿಶ್ರವಾದ ಅರಳು ಮುಂತಾದ ರುಚಿರುಚಿಯಾದ ಆಹಾರವನ್ನು ಯಥೇಚ್ಛವಾಗಿ ತಿನ್ನಿಸಿದರು (೫೬). ಭರತನ ಸೈನಿಕರು ಆಕಂಠಪೂರ್ತಿಯಾಗಿ ಭೋಜನಮಾಡಿ ಉಬ್ಬಿ ಮದ್ಯಪಾನದಿಂದ ಮೈಮರೆತು ಭೋಗದ್ರವ್ಯಗಳನ್ನು ಸೇವಿಸಿ ನಲಿದಾಡಿದರು. ಕುದುರೆಯ ಕೆಲಸದವನಿಗೆ ಕುದುರೆ ಯಾವುದೆಂದು ಗೊತ್ತಾಗಲಿಲ್ಲ! ಮಾವುತನಿಗೆ ಆನೆ ಯಾವುದೆಂದು ತಿಳಿಯಲಿಲ್ಲ! (೫೭). ಅವರು ಬೇಕುಬೇಕಾದ

ತರ್ಪಿತಾಃ ಸರ್ವಕಾಮೈಸ್ತೇ ರಕ್ತಚಂದನರೂಷಿತಾಃ ।
ಅಪ್ಸರೋಗಣಸಂಯುಕ್ತಾಃ ಸೈನ್ಯಾ ವಾಚಮುದೈರಯನ್ ॥ ೫೮
ನೈವಾಯೋಧ್ಯಾಂ ಗಮಿಷ್ಯಾಮೋ ನ ಗಮಿಷ್ಯಾಮ ದಂಡಕಾನ್ ।
ಕುಶಲಂ ಭರತಸ್ಯಾಸ್ತು ರಾಮಾಯಾಸ್ತು ತಥಾ ಸುಖಮ್ ॥ ೫೯

ಇತಿ ಪಾದಾತಯೋಧಾಶ್ಚ ಹಸ್ತ್ಯಶ್ವಾರೋಹಬಂಧಕಾಃ ।
ಅನಾಥಾಸ್ತಂ ವಿಧಿಂ ಲಬ್ಧ್ವಾ ವಾಚಮೇತಾಮುದೈರಯನ್ ॥ ೬೦

ಸಂಪ್ರಹೃಷ್ಟಾ ವಿನೇದುಸ್ತೇ ನರಾಸ್ತತ್ರ ಸಹಸ್ರಶಃ ।
ಭರತಸ್ಯಾನುಯಾತಾರಃ ಸ್ವರ್ಗೋಽಯಮಿತಿ ಚಾಬ್ರುವನ್ ॥ ೬೧

ನೃತ್ಯಂತಿ ಸ್ಮ ಹಸಂತಿ ಸ್ಮ ಗಾಯಂತಿ ಸ್ಮ ಚ ಸೈನಿಕಾಃ ।
ಸಮಂತಾತ್ಪರಿಧಾವಂತಿ ಮಾಲ್ಯೋಪೇತಾಃ ಸಹಸ್ರಶಃ ॥ ೬೨

ತತೋ ಭುಕ್ತವತಾಂ ತೇಷಾಂ ತದನ್ನಮಮೃತೋಪಮಮ್ ।
ದಿವ್ಯಾನುದ್ವೀಕ್ಷ್ಯ ಭಕ್ಷ್ಯಾಂಸ್ತಾನಭವದ್ಭಕ್ಷಣೇ ಮತಿಃ ॥ ೬೩

ಭೋಗಗಳನ್ನು ಅನುಭವಿಸಿ ತೃಪ್ತರಾದರು. ರಕ್ತಚಂದನಾದಿ ಸುಗಂಧದ್ರವ್ಯಗಳನ್ನು ಪೂಸಿಕೊಂಡರು. ಅಪ್ಸರೆಯರೊಡನೆ ನಲಿದರು. ಆ ಸೈನಿಕರು "ನಾವು ಅಯೋಧ್ಯೆಗೂ ಹೋಗುವುದಿಲ್ಲ! ದಂಡಕಾರಣ್ಯಕ್ಕೂ ಹೋಗುವುದಿಲ್ಲ! ಭರತನಿಗೆ ಒಳ್ಳೆಯದಾಗಲಿ! ರಾಮನಿಗೆ ಸುಖವಾಗಲಿ!" ಎಂದು ಹೇಳುತ್ತಿದ್ದರು (೫೮-೫೯). ಹೀಗೆ ಭರದ್ವಾಜರ ಔತಣದಿಂದ ಉಬ್ಬಿಹೋದ ಪದಾತಿಗಳೂ ರಾವುತರೂ ಗಜಾರೋಹಿಗಳೂ ಅವರ ಭೃತ್ಯರೂ ತಮಗೆ ನಿಯಾಮಕನಿಲ್ಲವೆಂಬಂತೆ ಮನಸ್ಸು ಬಂದ ಹಾಗೆ ಮಾತನಾಡುತ್ತಿದ್ದರು (೬೦). ಈ ರೀತಿಯಲ್ಲಿ ಭರತನ ಸಾವಿರಾರು ಮಂದಿ ಪರಿವಾರದವರು ಹರ್ಷದಿಂದ ಉಬ್ಬಿ ಕೋಲಾಹಲ ಮಾಡಿದರು. ಸ್ವರ್ಗವೆಂದರೆ ಇದೇ ಸರಿ!" ಎಂದು ಕೂಗಾಡಿದರು. ಆ ಸೈನಿಕರು ಹೂಮಾಲೆಗಳನ್ನು ಧರಿಸಿ ಸಾವಿರಗಟ್ಟಲೆ ಗುಂಪಾಗಿ ಸೇರಿ ಕುಣಿದರು; ನಕ್ಕರು; ಹಾಡಿದರು. ಕೆಲವರು ಇಲ್ಲಿಂದಲ್ಲಿಗೆ ಭರದಿಂದ ಓಡಾಡಿದರು! (೬೧-೬೨). ಆ ಸೈನಿಕರು ತೃಪ್ತಿಯಾಗಿ ಊಟಮಾಡಿದ್ದರೂ ಅಮೃತಪ್ರಾಯವಾಗಿದ್ದ ಆ ದಿವ್ಯಭಕ್ಷ್ಯಗಳ ರಾಶಿಯನ್ನು ನೋಡಿದಾಗ ಪುನಃ ತಿನ್ನಬೇಕೆಂದು ಆಸೆಯಾಯಿತು. (ಮತ್ತೆ ಮತ್ತೆ ತಿಂದರು) (೬೩). ಆ ಸೇನೆಯಲ್ಲಿದ್ದ ಪರಿಚಾರಕರೂ ದಾಸಿಯರೂ ಯೋಧರ

ಪ್ರೇಷ್ಯಾಶ್ಚೇಟ್ಯಶ್ಚ ವಧ್ವಶ್ಚ ಬಲಸ್ಥಾಶ್ಚ ಸಹಸ್ರಶಃ।
ಬಭೂವುಸ್ತೇ ಭೃಶಂ ತೃಪ್ತಾಃ ಸರ್ವೇ ಚಾಹತವಾಸಸಃ ॥ ೬೪

ಕುಂಜರಾಶ್ಚ ಖರೋಷ್ಟ್ರಾಶ್ಚ ಗೋಽಶ್ವಾಶ್ಚ ಮೃಗಪಕ್ಷಿಣಃ।
ಬಭೂವುಃ ಸುಭೃತಾಸ್ತತ್ರ ನಾನ್ಯೋ ಹ್ಯನ್ಯಮಕಲ್ಪಯತ್ ॥ ೬೫

ನಾಶುಕ್ಲವಾಸಾಸ್ತತ್ರಾಸೀತ್ ಕ್ಷುಧಿತೋ ಮಲಿನೋಽಪಿ ವಾ।
ರಜಸಾ ಧ್ವಸ್ತಕೇಶೋ ವಾ ನರಃ ಕಶ್ಚಿದದೃಶ್ಯತ ॥ ೬೬

ಆಜೈಶ್ಚಾಪಿ ಚ ವಾರಾಹೈರ್ನಿಷ್ಠಾನವರಸಂಚಯೈಃ।
ಫಲನಿರ್ವ್ಯೂಹಸಂಸಿದ್ಧೈಃ ಸೂಪೈರ್ಗಂಧರಸಾನ್ವಿತೈಃ ॥ ೬೭

ಪುಷ್ಪಧ್ವಜವತೀಃ ಪೂರ್ಣಾಃ ಶುಕ್ಲಸ್ಯಾನ್ನಸ್ಯ ಚಾಭಿತಃ।
ದದೃಶುರ್ವಿಸ್ಮಿತಾಸ್ತತ್ರ ನರಾ ಲೌಹೀಃ ಸಹಸ್ರಶಃ ॥ ೬೮

ಸ್ತ್ರೀಯರೂ ತಿಂದು ತೇಗಿ ತೃಪ್ತರಾದರು. ಎಲ್ಲರೂ ಹೊಸಬಟ್ಟೆಗಳನ್ನುಟ್ಟುಕೊಂಡು ಮೆರೆದರು. ಅಲ್ಲಿದ್ದ ಆನೆ, ಕುದುರೆ, ಕತ್ತೆ, ಒಂಟೆ, ಎತ್ತುಗಳೂ ಇತರ ಮೃಗಪಕ್ಷಿಗಳೂ ಹೊಟ್ಟೆ ತುಂಬ ತಿಂದು ತೃಪ್ತಿ ಹೊಂದಿದವು. ಭರದ್ವಾಜಮುನಿಗಳು ನಿರ್ಮಿಸಿದ ಭೋಜನಪದಾರ್ಥವಲ್ಲದೆ ಇನ್ನು ಯಾವುದನ್ನೂ ಯಾರು ಉಪಯೋಗಿಸಲಿಲ್ಲ (೬೪-೬೫). ಆ ಸಮಯದಲ್ಲಿ ಶುಭ್ರವಸ್ತ್ರವನ್ನು ಧರಿಸದೆ ಇದ್ದವನು ಅಲ್ಲಿ ಒಬ್ಬನೂ ಇರಲಿಲ್ಲ; ಹಸಿದವನಿರಲಿಲ್ಲ; ಧೂಳಿಂದ ಕೊಳೆಯಾದವನಿಗಲಿಲ್ಲ; ತಲೆಗೂದಲನ್ನು ಕೆದರಿಕೊಂಡವನಿರಲಿಲ್ಲ (೬೬). ಹೂಗಳನ್ನು ಬಿಡಿಸಿ ಚಿತ್ತಾರ ಮಾಡಿದ ಸಾವಿರಾರು ಸುವರ್ಣ ಪಾತ್ರೆಗಳಲ್ಲಿ ಆಹಾರ ಪದಾರ್ಥಗಳನ್ನು ತುಂಬಿದ್ದರು. ಒಂದು ಕಡೆ ಮೇಕೆಯ ಮಾಂಸ! ಇನ್ನೊಂದು ಕಡೆ ಹಂದಿಯ ಮಾಂಸ! ಮತ್ತೊಂದು ಕಡೆ ತರಕಾರಿಗಳಿಂದ ಮಾಡಿದ ಉತ್ತಮವಾದ ಪದಾರ್ಥಗಳ ರಾಶಿ! ಮಗದೊಂದು ಕಡೆ ನಾನಾ ಬಗೆಯ ಹಣ್ಣಿನ ರಸಗಳು! ಒಂದುಕಡೆ ಗಮಗಮಿಸುವ ತೊವ್ವೆಗಳ ರಾಶಿ! (೬೭). ಅವುಗಳ ಮಧ್ಯದಲ್ಲಿ ಹೂಗಳಿಂದ ಅಲಂಕರಿಸಿದ ಪಾತ್ರೆಗಳಲ್ಲಿ ತುಂಬಿದ್ದ ಬಿಳಿಯ ಅನ್ನದ ರಾಶಿ! ಈ ವೈಭವವನ್ನು ಕಂಡು ಆ ಜನರು ಆಶ್ಚರ್ಯಚಕಿತರಾದರು. ಅಲ್ಲದೆ ಆ ತಪೋವನದಲ್ಲಿದ್ದ ಬಾವಿಗಳು ಪಾಯಸದಿಂದ ತುಂಬಿದವು. ಹಸುಗಳು

ಬಭೂವುರ್ವನಪಾರ್ಶ್ವೇಷು ಕೂಪಾಃ ಪಾಯಸಕರ್ದಮಾಃ ।
ತಾಶ್ಚ ಕಾಮದುಘಾ ಗಾವೋ ದ್ರುಮಾಶ್ಚಾಸನ್ ಮಧುಚ್ಯುತಃ ॥ ೬೯
ವಾಪ್ಯೋ ಮೈರೇಯಪೂರ್ಣಾಶ್ಚ ಮೃಷ್ಟಮಾಂಸಚಯೈರ್ವೃತಾಃ ।
ಪ್ರತಪ್ತಪಿಠರೈಶ್ಚಾಪಿ ಮಾರ್ಗಮಾಯೂರಕೌಕ್ಕುಟೈಃ ॥ ೭೦
ಪಾತ್ರೀಣಾಂ ಚ ಸಹಸ್ರಾಣಿ ಸ್ಥಾಲೀನಾಂ ನಿಯುತಾನಿ ಚ ।
ನ್ಯರ್ಬುದಾನಿ ಚ ಪಾತ್ರಾಣಿ ಶಾತಕುಂಭಮಯಾನಿ ಚ ॥ ೭೧
ಸ್ಥಾಲ್ಯಃ ಕುಂಭ್ಯಃ ಕರಂಭ್ಯಶ್ಚ ದೀರ್ಘಪೂರ್ಣಾಃ ಸುಸಂಸ್ಕೃತಾಃ ।
ಯೌವನಸ್ಥಸ್ಯ ಗೌರಸ್ಯ ಕಪಿತ್ಥಸ್ಯ ಸುಗಂಧಿನಃ ॥ ೭೨
ಹ್ರದಾಃ ಪೂರ್ಣಾ ರಸಾಲಸ್ಯ ದಧ್ನಃ ಶ್ವೇತಸ್ಯ ಚಾಪರೇ ।
ಬಭೂವುಃ ಪಾಯಸಸ್ಯಾನ್ಯೇ ಶರ್ಕರಾ ಯವಸಂಚಯಾಃ ॥ ೭೩
ಕಲ್ಕಾಂಶ್ಚೂರ್ಣಕಷಾಯಾಂಶ್ಚ ಸ್ನಾನಾನಿ ವಿವಿಧಾನಿ ಚ ।
ದದೃಶುರ್ಭಾಜನಸ್ಥಾನಿ ತೀರ್ಥೇಷು ಸರಿತಾಂ ನರಾಃ ॥ ೭೪

ಕಾಮಧೇನುಗಳಾದವು. ಮರಗಳು ಜೇನನ್ನು ಸುರಿಸಿದವು! (೬೮-೬೯). ಹೊಂಡಗಳು ಮದ್ಯದಿಂದ ತುಂಬಿದವು. ಅವುಗಳ ಸುತ್ತಲೂ ರುಚಿಕರವಾದ ಮಾಂಸದ ರಾಶಿ ಜೋಡಿಸಿತು. ಚೆರಿಗೆಗಳಲ್ಲಿ ಪಕ್ವವಾದ ಜಿಂಕೆ ನವಿಲು ಮತ್ತು ಕೋಳಿಗಳ ಮಾಂಸಗಳು ಅಣಿಯಾದವು (೭೦). ಅಲ್ಲಿ ಸಾವಿರಾರು ಭೋಜನಪಾತ್ರೆಗಳೂ ಲಕ್ಷೋಪಲಕ್ಷ ತಾಲಿಗಳೂ ಕೋಟಿಗಟ್ಟಲೆ ತಟ್ಟೆಗಳೂ ಇದ್ದವು. ಎಲ್ಲವೂ ಬಂಗಾರದಿಂದ ಮಾಡಿದವು! ಶುಂಠಿ ಮೊದಲಾದ ಪರಿಕರಗಳಿಂದ ಹದಮಾಡಿದ ಮೊಸರನ್ನು ತುಂಬಿದ್ದ ವಿವಿಧಾಕಾರದ ಪಾತ್ರೆಗಳು ವಿಪುಲವಾಗಿದ್ದವು. ಸ್ವಲ್ಪ ಕಾಲದ ಹಿಂದೆ ಕಡೆದಿದ್ದ ಸುಗಂಧಿಯಾದ ಬಿಳಿಯ ಮಜ್ಜಿಗೆಯು ಯಥೇಷ್ಟವಾಗಿತ್ತು (೭೧-೭೨). ಒಂದು ಕಡೆ ಏಲಕ್ಕಿ ಲವಂಗಾದಿಗಳನ್ನು ಸೇರಿಸಿದ ಮಜ್ಜಿಗೆಯ ಮಡುಗಳು! ಇನ್ನೊಂದು ಕಡೆ ಸ್ವಚ್ಛವಾದ ಮೊಸರಿನ ಕೊಳಗಳು! ಮತ್ತೊಂದು ಕಡೆ ಪಾಯಸದ ಹೊಂಡಗಳು! ಮಗದೊಂದು ಕಡೆ ಸಕ್ಕರೆ ಜವೆಗೋಧಿಗಳಿಂದ ಮಾಡಿದ ಭಕ್ಷ್ಯದ ರಾಶಿಗಳು! (೭೩). ಕೆಲವು ಪಾತ್ರೆಗಳಲ್ಲಿ ಚಟ್ನಿ ಉಪ್ಪಿನಕಾಯಿಗಳನ್ನು ತುಂಬಿದ್ದರು. ಒಂದು ಪಾರ್ಶ್ವದಲ್ಲಿ ಸ್ನಾನಾರ್ಥವಾದ ವಿವಿಧಚೂರ್ಣಗಳನ್ನೂ ಸುಗಂಧಿಯಾದ ಕಷಾಯವನ್ನೂ ಬಿಸಿನೀರನ್ನೂ ಅಣಿಮಾಡಿ ನದೀತೀರಗಳಲ್ಲಿ ಇಟ್ಟಿರುವುದನ್ನು ಭರತನ ಪರಿವಾರದವರು ಕಂಡರು (೭೪). ಅಲ್ಲದೆ, ಶುಭ್ರವಾಗಿ ನಯವಾಗಿರುವ ಹಲ್ಲುಜ್ಜುವ ಸಾಮಗ್ರಿಗಳೂ

ಶುಕ್ಲಾನಂಶುಮತಶ್ಚಾಪಿ ದಂತಧಾವನಸಂಚಯಾನ್ ।
ಶುಕ್ಲಾಂಶ್ಚಂದನಕಲ್ಕಾಂಶ್ಚ ಸಮುದ್ಗೇಷ್ವವತಿಷ್ಠತಃ ॥ ೭೫

ದರ್ಪಣಾನ್ ಪರಿಮೃಷ್ಟಾಂಶ್ಚ ವಾಸಸಾಂ ಚಾಪಿ ಸಂಚಯಾನ್ ।
ಪಾದುಕೋಪಾನಹಾಂ ಚೈವ ಯುಗ್ಮಾನ್ಯತ್ರ ಸಹಸ್ರಶಃ ॥ ೭೬

ಆಂಜನೀಃ ಕಂಕತಾನ್ ಕೂರ್ಚಾನ್ ಶಸ್ತ್ರಾಣಿ ಚ ಧನೂಂಷಿ ಚ ।
ಮರ್ಮತ್ರಾಣಾನಿ ಚಿತ್ರಾಣಿ ಶಯನಾನ್ಯಾಸನಾನಿ ಚ ॥ ೭೭

ಪ್ರತಿಪಾನಹ್ರದಾನ್ ಪೂರ್ಣಾನ್ ಖರೋಷ್ಟ್ರಗಜವಾಜಿನಾಮ್ ।
ಅವಗಾಹ್ಯ ಸುತೀರ್ಥಾಂಶ್ಚ ಹ್ರದಾನ್ ಸೋತ್ಪಲಪುಷ್ಕರಾನ್ ॥ ೭೮

ಆಕಾಶವರ್ಣಪ್ರತಿಮಾನ್ ಸ್ವಚ್ಛತೋಯಾನ್ ಸುಖಾಪ್ಲವಾನ್ ।
ನೀಲವೈದೂರ್ಯವರ್ಣಾಂಶ್ಚ ಮೃದೂನ್ ಯವಸಂಚಯಾನ್ ॥ ೭೯

ಬಟ್ಟಲುಗಳಲ್ಲಿ ತೇದು ತುಂಬಿರುವ ನಿರ್ಮಲವಾದ ಶ್ರೀಗಂಧವೂ ಹೇರಳವಾಗಿ ಕಾಣಿಸಿದವು. ಕನ್ನಡಿಗಳನ್ನು ಸ್ವಚ್ಛವಾಗಿ ಒರಸಿ ಇಟ್ಟಿದ್ದರು. ನಿರ್ಮಲವಸ್ತ್ರಗಳನ್ನು ರಾಶಿರಾಶಿಯಾಗಿ ಪೇರಿಸಿದ್ದರು. ಮರದ ಪಾದುಕೆಗಳನ್ನೂ ಚರ್ಮದ ಪಾದರಕ್ಷೆಗಳನ್ನೂ ಜೊತೆಜೊತೆಯಾಗಿ ಸಾವಿರಗಟ್ಟಲೆ ಸಿದ್ಧಪಡಿಸಿದ್ದರು (೭೫-೭೬). ಕಾಡಿಗೆಯ ಭರಣಿ, ಬಾಚಣಿಗೆ, ಕೂರ್ಚ,* ಶಸ್ತ್ರ ಧನುಸ್ಸು ಕವಚ, ವಿಚಿತ್ರವಾದ ಶಯ್ಯೆ ಮತ್ತು ಆಸನಗಳು ಅಪರಿಮಿತವಾಗಿದ್ದವು (೭೭). ಭೋಜನವಾದ ಮೇಲೆ ಕುಡಿಯುವ ಶುಂಠಿಕಷಾಯ ಮೊದಲಾದ ಪೇಯಗಳಿದ್ದವು. ಒಂದು ಕಡೆ ಕತ್ತೆ, ಒಂಟೆ, ಆನೆ, ಕುದುರೆ ಮೊದಲಾದ ಪ್ರಾಣಿಗಳು ಇಳಿದು ಸ್ನಾನಮಾಡಬಹುದಾದ ಕೆರೆಗಳು ನೈದಿಲೆ ತಾವರೆಗಳಿಂದ ರಮಣೀಯವಾಗಿದ್ದವು (೭೮). ಅವುಗಳಲ್ಲಿ ಆಕಾಶದಂತೆ ನೀಲವರ್ಣದ ತಿಳಿನೀರು ತುಂಬಿ ಸುಖವಾದ ಸ್ನಾನಕ್ಕೆ ಯೋಗ್ಯವಾಗಿತ್ತು. ಇನ್ನೊಂದು ಕಡೆ ಪಶುಗಳ ಆಹಾರಾರ್ಥವಾಗಿ ಇಂದ್ರನೀಲಮಣಿಯಂತೆಯೂ ವೈಡೂರ್ಯದಂತೆಯೂ ಹಚ್ಚಗಿರುವ ಗರಿಕೆಯ ಹುಲ್ಲು ಬೆಳೆದಿತ್ತು. ಇದೇನು ಸ್ವಪ್ನವೋ ಎಂಬಂತೆ ಅದ್ಭುತವಾಗಿದ್ದ ಆ ದೃಶ್ಯವನ್ನು ಕಂಡು ಭರತನ ಪರಿವಾರದವರು ಬೆಕ್ಕಸಬೆರಗಾದರು (೭೯-೮೦). ಭರದ್ವಾಜ ಮಹರ್ಷಿಗಳು ಭರತನಿಗೆ ಏರ್ಪಡಿಸಿದ ಔತಣಕೂಟವನ್ನು ಕಂಡು ಸೈನಿಕರು

---

* ಕೂರ್ಚ = ಬ್ರಷ್ (Brush)

ನಿರ್ವಾಪಾರ್ಥಾನ್ ಪಶೂನಾಂ ತೇ ದದೃಶುಸ್ತತ್ರ ಸರ್ವಶಃ ।
ವ್ಯಸ್ಮಯಂತ ಮನುಷ್ಯಾಸ್ತೇ ಸ್ವಪ್ನಕಲ್ಪಂ ತದದ್ಭುತಮ್ ॥ ೮೦

ದೃಷ್ಟ್ವಾತಿಥ್ಯಂ ಕೃತಂ ತಾದೃಗ್ಭರತಸ್ಯ ಮಹರ್ಷಿಣಾ ।
ಇತ್ಯೇವಂ ರಮಮಾಣಾನಾಂ ದೇವಾನಾಮಿವ ನಂದನೇ ॥ ೮೧

ಭರದ್ವಾಜಾಶ್ರಮೇ ರಮ್ಯೇ ಸಾ ರಾತ್ರಿರ್ವ್ಯತ್ಯವರ್ತತ ।
ಪ್ರತಿಜಗ್ಮುಶ್ಚ ತಾ ನದ್ಯೋ ಗಂಧರ್ವಾಶ್ಚ ಯಥಾಗತಮ್ ॥ ೮೨

ಭರದ್ವಾಜಮನುಜ್ಞಾಪ್ಯ ತಾಶ್ಚ ಸರ್ವಾ ವರಾಂಗನಾಃ ।
ತಥೈವ ಮತ್ತಾ ಮದಿರೋತ್ಕಟಾ ನರಾ-
ಸ್ತಥೈವ ದಿವ್ಯಾಗರುಚಂದನೋಕ್ಷಿತಾಃ ।
ತಥೈವ ದಿವ್ಯಾ ವಿವಿಧಾಃ ಸ್ರಗುತ್ತಮಾಃ
ಪೃಥಕ್ಪ್ರಕೀರ್ಣಾ ಮನುಜೈಃ ಪ್ರಮರ್ದಿತಾಃ ॥ ೮೩

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕನವತಿತಮಃ ಸರ್ಗಃ

ಅಚ್ಚರಿಗೊಂಡರು. ನಂದನವನದಲ್ಲಿ ದೇವತೆಗಳು ವಿಹರಿಸುವಂತೆ ಆ ಸೈನಿಕರು ಅಚ್ಚರಿಗೊಂಡರು. ನಂದನ ವನದಲ್ಲಿ ದೇವತೆಗಳು ವಿಹರಿಸುವಂತೆ ಆ ಸೈನಿಕರು ರಮ್ಯವಾದ ಭರದ್ವಾಜಾಶ್ರಮದಲ್ಲಿ ವಿಹರಿಸಿದರು (೮೧). ಅವರು ಹೀಗೆ ವಿನೋದಿಸುತ್ತಿರುವಾಗಲೇ ರಾತ್ರಿ ಕಳೆಯಿತು. ಭರದ್ವಾಜರ ಕೋರಿಕೆಯಂತೆ ಬಂದಿದ್ದ ಆ ದಿವ್ಯನದಿಗಳೂ ಗಂಧರ್ವರೂ ಅಪ್ಸರೆಯರೂ ಆ ಮುನಿಗಳ ಅನುಜ್ಞೆಯನ್ನು ಪಡೆದು ಬಂದ ದಾರಿ ಹಿಡಿದು ಹೊರಟುಹೋದರು! (೮೨). ಆದರೆ ಮದ್ಯಪಾನದಿಂದ ಮತ್ತರಾದವರು ಹಾಗೆಯೇ ಮದಿಸಿದ್ದರು. ದಿವ್ಯಾಗರು ಚಂದನಗಳನ್ನು ಬಳಿದುಕೊಂಡವರು ಬಳಿದುಕೊಂಡೇ ಇದ್ದರು. ಆ ಸೈನಿಕರು ಧರಿಸಿ ತೂರಾಡಿದ ನಾನಾ ಬಗೆಯ ದಿವ್ಯ ಪುಷ್ಪ ಮಾಲೆಗಳು ಹಾಗೆಯೇ ಚೆಲ್ಲಿದ್ದವು* (೮೩).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ತೊಂಬತ್ತೊಂದನೆಯ ಸರ್ಗ

---

* ಔತಣವು ಸ್ವಪ್ನದಂತೆಯೂ ಇಂದ್ರಜಾಲದಂತೆಯೂ ಅಲ್ಲ, ಯಥಾರ್ಥವಾಗಿ ನಡೆಯಿತು ಎಂದು ಅಭಿಪ್ರಾಯ.

ದ್ವಿನವತಿತಮಃ ಸರ್ಗಃ

ಭರದ್ವಾಜಾಮನ್ತ್ರಣಮ್

ತತಸ್ತಾಂ ರಜನೀಂ ವ್ಯುಷ್ಯ ಭರತಃ ಸಪರಿಚ್ಛದಃ ।
ಕೃತಾತಿಥ್ಯೋ ಭರದ್ವಾಜಂ ಕಾಮಾದಭಿಜಗಾಮ ಹ ॥ ೧

ತಮೃಷಿಃ ಪುರುಷವ್ಯಾಘ್ರಂ ಪ್ರೇಕ್ಷ್ಯ ಪ್ರಾಂಜಲಿಮಾಗತಮ್ ।
ಹುತಾಗ್ನಿಹೋತ್ರೋ ಭರತಂ ಭರದ್ವಾಜೋಽಭ್ಯಭಾಷತ ॥ ೨

ಕಚ್ಚಿದತ್ರ ಸುಖಾ ರಾತ್ರಿಸ್ತವಾಸ್ಮದ್ವಿಷಯೇ ಗತಾ ।
ಸಮಗ್ರಸ್ತೇ ಜನಃ ಕಚ್ಚಿದಾತಿಥ್ಯೇ ಶಂಸ ಮೇಽನಘ ॥ ೩

ತಮುವಾಚಾಂಜಲಿಂ ಕೃತ್ವಾ ಭರತೋಽಭಿಪ್ರಣಮ್ಯ ಚ ।
ಆಶ್ರಮಾದಭಿನಿಷ್ಕ್ರಾಂತಮೃಷಿಮುತ್ತಮತೇಜಸಮ್ ॥ ೪

ಸುಖೋಷಿತೋಽಸ್ಮಿ ಭಗವನ್ ಸಮಗ್ರಬಲವಾಹನಃ ।
ತರ್ಪಿತಃ ಸರ್ವಕಾಮೈಶ್ಚ ಸಾಮಾತ್ಯೋ ಭಗವಂಸ್ತ್ವಯಾ ॥ ೫

ಸರ್ಗ ೯೨

ಭರತನು ಭರದ್ವಾಜಮುನಿಗಳ ಅನುಜ್ಞೆಯನ್ನು ಪಡೆದು ಚಿತ್ರಕೂಟಕ್ಕೆ ಪ್ರಯಾಣಮಾಡುವುದು.

ಹೀಗೆ ಭರತನು ಪರಿವಾರಸಮೇತನಾಗಿ ಭರದ್ವಾಜಾಶ್ರಮದಲ್ಲಿ ಆ ರಾತ್ರಿಯುಳಿದು ಮುನಿಗಳ ಆತಿಥ್ಯವನ್ನು ಸ್ವೀಕರಿಸಿದನು. ಆಮೇಲೆ ಶ್ರೀರಾಮನನ್ನು ನೋಡುವ ತವಕದಿಂದ ಹೋಗಿ ಭರದ್ವಾಜರನ್ನು ಕಂಡು ಕೈಮುಗಿದನು. ಅಷ್ಟರಲ್ಲಿ ಆ ಮಹರ್ಷಿಗಳು ಪ್ರಾತಃಕಾಲದ ಅಗ್ನಿಹೋತ್ರವನ್ನು ಮುಗಿಸಿದ್ದರು (೧-೨). ಅವರು ಆ ಪುರುಷಶ್ರೇಷ್ಠನನ್ನು ಕುರಿತು "ಭರತ, ನಮ್ಮ ಆಶ್ರಮದಲ್ಲಿ ರಾತ್ರಿ ಸುಖವಾಗಿ ಕಳೆಯಿತೆ? ನಿನ್ನ ಜನರಿಗೆ ಆತಿಥ್ಯವು ತೃಪ್ತಿಕರವಾಗಿದ್ದಿತೆ? ಹೇಳು" ಎಂದರು (೩). ಆ ಸಮಯದಲ್ಲಿ ಭರದ್ವಾಜರು ತಮ್ಮ ಆಶ್ರಮದಿಂದ ಹೊರಗೆ ಬಂದಿದ್ದರು. ಆ ತೇಜಸ್ವಿಗಳನ್ನು ನೋಡುತ್ತ ಭರತನು ಸಾಷ್ಟಾಂಗನಮಸ್ಕಾರವನ್ನು ಮಾಡಿ ಕೈಮುಗಿದುಕೊಂಡು "ಭಗವನ್, ಸುಖವಾಗಿ ಕಳೆದೆನು. ನಮ್ಮೆಲ್ಲರಿಗೂ ಮಂತ್ರಿಗಳು, ಸೈನಿಕರು, ವಾಹನಗಳು – ಎಲ್ಲರಿಗೂ

ಅಪೇತಕ್ಲಮಸಂತಾಪಾಃ ಸುಭಿಕ್ಷಾಃ ಸುಪ್ರತಿಶ್ರಯಾಃ ।
ಅಪಿ ಪ್ರೇಷ್ಯಾನುಪಾದಾಯ ಸರ್ವೇ ಸ್ಮ ಸುಸುಖೋಷಿತಾಃ ॥ ೬

ಆಮಂತ್ರಯೇಽಹಂ ಭಗವನ್ ಕಾಮಂ ತ್ವಾಂ ಋಷಿಸತ್ತಮ ।
ಸಮೀಪಂ ಪ್ರಸ್ಥಿತಂ ಭ್ರಾತುರ್ಮೈತ್ರೇಣೇಕ್ಷಸ್ವ ಚಕ್ಷುಷಾ ॥ ೭

ಆಶ್ರಮಂ ತಸ್ಯ ಧರ್ಮಜ್ಞ ಧಾರ್ಮಿಕಸ್ಯ ಮಹಾತ್ಮನಃ ।
ಆಚಕ್ಷ್ವ ಕತಮೋ ಮಾರ್ಗಃ ಕಿಯಾನಿತಿ ಚ ಶಂಸ ಮೇ ॥ ೮

ಇತಿ ಪೃಷ್ಟಸ್ತು ಭರತಂ ಭ್ರಾತೃದರ್ಶನಲಾಲಸಮ್ ।
ಪ್ರತ್ಯುವಾಚ ಮಹಾತೇಜಾ ಭರದ್ವಾಜೋ ಮಹಾತಪಾಃ ॥ ೯

ಭರತಾರ್ಧತೃತೀಯೇಷು ಯೋಜನೇಷ್ವಜನೇ ವನೇ ।
ಚಿತ್ರಕೂಟೋ ಗಿರಿಸ್ತತ್ರ ರಮ್ಯನಿರ್ದರಕಾನನಃ ॥ ೧೦

ಉತ್ತರಂ ಪಾರ್ಶ್ವಮಾಸಾದ್ಯ ತಸ್ಯ ಮಂದಾಕಿನೀ ನದೀ ।
ಪುಷ್ಪಿತದ್ರುಮಸಂಛನ್ನಾ ರಮ್ಯಪುಷ್ಪಿತಕಾನನಾ ॥ ೧೧

ಸಕಲ ಸೌಖ್ಯಗಳನ್ನೂ ಒದಗಿಸಿ ನೀವು ತೃಪ್ತಿಪಡಿಸಿದಿರಿ (೪-೫). ಪರಿಚಾರಕರಿಂದ ಮೊದಲಾಗಿ ನಾವೆಲ್ಲರೂ ದಣಿವು ಆಯಾಸಗಳನ್ನು ನೀಗಿಕೊಂಡೆವು. ತೃಪ್ತಿಯಾಗುವಂತೆ ಭೋಜನ ಮಾಡಿದೆವು. ಉತ್ತಮವಾದ ವಾಸಗೃಹಗಳಲ್ಲಿ ವಿಶ್ರಮಿಸಿದೆವು. ಎಲ್ಲರೂ ಪರಮಸೌಖ್ಯದಿಂದ ರಾತ್ರಿಯನ್ನು ಕಳೆದೆವು (೬). ಭಗವನ್, ನಾನು ಹೊರಡಲು ಸಂತೋಷದಿಂದ ತಮ್ಮ ಅನುಜ್ಞೆಯನ್ನು ಬೇಡುತ್ತಿದ್ದೇನೆ. ಅಣ್ಣನ ಸಮೀಪಕ್ಕೆ ಹೋಗುತ್ತಿದ್ದೇನೆ. ಮಹರ್ಷಿಗಳೆ, ಸ್ನೇಹಪೂರ್ಣವಾದ ದೃಷ್ಟಿಯಿಂದ ನೋಡೋಣವಾಗಲಿ (೭). ಮಹಾತ್ಮನಾದ ಶ್ರೀರಾಮನು ವಾಸವಾಗಿರುವ ಆಶ್ರಮವೆಲ್ಲಿದೆ? ಹೋಗುವ ದಾರಿ ಯಾವುದು? ಇಲ್ಲಿಂದ ಎಷ್ಟು ದೂರವಾದೀತು? ದಯವಿಟ್ಟು ಹೇಳಬೇಕು'' ಎಂದನು (೮). ಹೀಗೆ ಅಣ್ಣನನ್ನು ನೋಡಲು ಹಾತೊರೆಯುತ್ತಿದ್ದ ಭರತನನ್ನು ನೋಡಿ ಮಹಾತಪಸ್ವಿಗಳಾದ ಭರದ್ವಾಜರು ಹೀಗೆಂದರು : ವತ್ಸ-ಭರತ, ಇಲ್ಲಿಗೆ ಎರಡೂವರೆ ಯೋಜನಗಳ ದೂರದಲ್ಲಿ ನಿರ್ಜನವಾದ ಒಂದು ವನವಿದೆ. ಅಲ್ಲಿ ಚಿತ್ರಕೂಟವೆಂಬ ಒಂದು ಪರ್ವತವುಂಟು. ಅದು ಗಿರಿನದಿಗಳಿಂದಲೂ ಕಾಡುಗಳಿಂದಲೂ ರಮ್ಯವಾಗಿದೆ (೯-೧೦). ಅದರ ಉತ್ತರದಿಕ್ಕಿನಲ್ಲಿ ಮಂದಾಕಿನೀನದಿಯು ಹರಿಯುತ್ತಿದೆ. ಆ ನದಿಯ ತೀರವೃಕ್ಷಗಳೂ

ಅನಂತರಂ ತತ್ಸರಿತಶ್ಚಿತ್ರಕೂಟಶ್ಚ ಪರ್ವತಃ ।
ತಯೋಃ ಪರ್ಣಕುಟೀ ತಾತ ತತ್ರ ತೌ ವಸತೋ ಧ್ರುವಮ್ ॥ ೧೨

ದಕ್ಷಿಣೇನೈವ ಮಾರ್ಗೇಣ ಸವ್ಯದಕ್ಷಿಣಮೇವ ವಾ ।
ಗಜವಾಜಿರಥಾಕೀರ್ಣಾಂ ವಾಹಿನೀಂ ವಾಹಿನೀಪತೇ ॥ ೧೩

ವಾಹಯಸ್ವ ಮಹಾಭಾಗ ತತೋ ದ್ರಕ್ಷ್ಯಸಿ ರಾಘವಮ್ ।
ಪ್ರಯಾಣಮಿತಿ ತಚ್ಛ್ರುತ್ವಾ ರಾಜರಾಜಸ್ಯ ಯೋಷಿತಃ ॥ ೧೪

ಹಿತ್ವಾ ಯಾನಾನಿ ಯಾನಾರ್ಹಾ ಬ್ರಾಹ್ಮಣಂ ಪರ್ಯವಾರಯನ್ ।
ವೇಪಮಾನಾ ಕೃಶಾ ದೀನಾ ಸಹ ದೇವ್ಯಾ ಸುಮಿತ್ರಯಾ ॥ ೧೫

ಕೌಸಲ್ಯಾ ತತ್ರ ಜಗ್ರಾಹ ಕರಾಭ್ಯಾಂ ಚರಣೌ ಮುನೇಃ ।
ಅಸಮೃದ್ಧೇನ ಕಾಮೇನ ಸರ್ವಲೋಕಸ್ಯ ಗರ್ಹಿತಾ ॥ ೧೬

ಕೈಕೇಯೀ ತಸ್ಯ ಜಗ್ರಾಹ ಚರಣೌ ಸವ್ಯಪತ್ರಪಾ ।
ತಂ ಪ್ರದಕ್ಷಿಣಮಾಗಮ್ಯ ಭಗವಂತಂ ಮಹಾಮುನಿಮ್ ॥ ೧೭

ಸುತ್ತುಮುತ್ತಲಿನ ವನಪ್ರದೇಶಗಳೂ ಹೂಗಳಿಂದ ತುಂಬಿ ತುಳುಕುತ್ತಿವೆ. ಆ ನದಿಯ ಪಕ್ಕದಲ್ಲಿರುವುದೇ ಚಿತ್ರಕೂಟ. ಅಲ್ಲಿ ಒಂದು ಪರ್ಣಕುಟೀರವನ್ನು ಮಾಡಿಕೊಂಡು ರಾಮಲಕ್ಷ್ಮಣರು ವಾಸವಾಗಿದ್ದಾರೆ. ಇದು ನಿಶ್ಚಯ (೧೧-೧೨). ನಿನ್ನೊಡನೆ ಆನೆ ಕುದುರೆ ರಥಗಳಿಂದ ಕೂಡಿದ ಒಂದು ದೊಡ್ಡ ಸೈನ್ಯವಿದೆ. ಆದ್ದರಿಂದ ನೀನು ಯಮುನೆಯ ದಕ್ಷಿಣಕ್ಕಿರುವ ರಸ್ತೆಯನ್ನೇ ಹಿಡಿದು ಹೋಗು. ಮುಂದೆ ಎರಡು ಕವಲುದಾರಿಗಳು ಸಿಗುತ್ತವೆ. ಅವುಗಳಲ್ಲಿ ನಿನ್ನ ಎಡಕ್ಕೆ ದಕ್ಷಿಣದಿಕ್ಕಿಗೆ ಹೋಗುವ ದಾರಿಯಲ್ಲಿ ಸೇನೆಯನ್ನು ತೆಗೆದುಕೊಂಡುಹೋಗು (೧೩). ಅಲ್ಲಿ ನಿನಗೆ ರಾಮನ ದರ್ಶನವಾಗುವುದು'' ಎಂದರು. ಪ್ರಯಾಣ ಸನ್ನಾಹವನ್ನು ತಿಳಿದೊಡನೆ ದಶರಥ ಚಕ್ರವರ್ತಿಯ ಭಾರ್ಯೆಯರೆಲ್ಲರೂ ತಮ್ಮ ವಾಹನಗಳನ್ನು ಬಿಟ್ಟು ಬಂದು ಭರದ್ವಾಜರ ಸುತ್ತಲೂ ನಿಂತರು. ದೈನ್ಯದಿಂದ ಕೃಶಳಾಗಿ ನಡುಗುತ್ತಿದ್ದ ಕೌಸಲ್ಯೆಯು ಸುಮಿತ್ರಾದೇವಿಯ ಸಹಾಯದಿಂದ ಮುಂದೆ ಬಂದು, ಆ ಮುನಿಗಳ ಪಾದಗಳನ್ನು ಮುಟ್ಟಿನಮಸ್ಕರಿಸಿದಳು (೧೪-೧೬). ಕೈಕೇಯಿಯು ನಾಚಿಕೆಯಿಂದ ಸಂಕೋಚಿಸುತ್ತ ಮುಂದೆ ಬಂದಳು. ತನ್ನ ಇಷ್ಟಾರ್ಥವೂ ಕೈಗೂಡದೆ ಸಮಸ್ತರ ನಿಂದೆಗೂ ಅವಳು

ಆದೂರಾದ್ಭರತಸ್ಯೈವ ತಸ್ಥೌ ದೀನಮನಸ್ತದಾ ।
ತತಃ ಪಪ್ರಚ್ಛ ಭರತಂ ಭರದ್ವಾಜೋ ದೃಢವ್ರತಃ ॥ ೧೮

ವಿಶೇಷಂ ಜ್ಞಾತುಮಿಚ್ಛಾಮಿ ಮಾತೃಣಾಂ ತವ ರಾಘವ ।
ಏವಮುಕ್ತಸ್ತು ಭರತೋ ಭರದ್ವಾಜೇನ ಧಾರ್ಮಿಕಃ ॥ ೧೯

ಉವಾಚ ಪ್ರಾಂಜಲಿರ್ಭೂತ್ವಾ ವಾಕ್ಯಂ ವಚನಕೋವಿದಃ ।
ಯಾಮಿಮಾಂ ಭಗವನ್ ದೀನಾಂ ಶೋಕಾನಶನಕರ್ಶಿತಾಮ್ ॥ ೨೦

ಪಿತುರ್ಹಿ ಮಹಿಷೀಂ ದೇವೀಂ ದೇವತಾಮಿವ ಪಶ್ಯಸಿ ।
ಏಷಾಂ ತಂ ಪುರುಷವ್ಯಾಘ್ರಂ ಸಿಂಹವಿಕ್ರಾಂತಗಾಮಿನಮ್ ॥ ೨೧

ಕೌಸಲ್ಯಾ ಸುಷುವೇ ರಾಮಂ ಧಾತಾರಮದಿತಿರ್ಯಥಾ ।
ಅಸ್ಯಾ ವಾಮಭುಜಂ ಶ್ಲಿಷ್ಟಾಯೈಷಾ ತಿಷ್ಠತಿ ದುರ್ಮನಾಃ ॥ ೨೨

ಇಯಂ ಸುಮಿತ್ರಾ ದುಃಖಾರ್ತಾ ದೇವೀ ರಾಜ್ಞಶ್ಚ ಮಧ್ಯಮಾ ।
ಕರ್ಣಿಕಾರಸ್ಯ ಶಾಖೇನ ಶೀರ್ಣಪುಷ್ಪಾ ವನಾಂತರೇ ॥ ೨೩

ಗುರಿಯಾಗಿದ್ದಳು. ಅವಳು ಆ ಮಹರ್ಷಿಗಳಿಗೆ ಪ್ರದಕ್ಷಿಣೆ ಮಾಡಿ ನಮಸ್ಕರಿಸಿ ಭರತನ ಸಮೀಪಕ್ಕೆ ಹೋಗಿ ದೈನ್ಯದಿಂದ ನಿಂತುಕೊಂಡಳು (೧೭-೧೮). ಆಗ ಭರದ್ವಾಜಮುನಿಗಳು ಭರತನನ್ನು ಕುರಿತು "ರಾಘವ, ನಿನ್ನ ಮಾತೆಯರಲ್ಲಿ ಯಾರು ಯಾರೆಂಬ ವಿಶೇಷವನ್ನು ತಿಳಿಯಲಿಚ್ಛಿಸುತ್ತೇನೆ" ಎಂದರು. ಆಗ ಧಾರ್ಮಿಕನೂ ವಾಗ್ಮಿಯೂ ಆದ ಭರತನು ಕೈಮುಗಿದುಕೊಂಡು ಹೀಗೆಂದನು (೧೯) : "ಭಗವನ್, ಶೋಕದಿಂದಲೂ ಉಪವಾಸದಿಂದಲೂ ಕೃಶಳಾಗಿ ದೈನ್ಯದಿಂದ ನಿಂತಿರುವ ಈ ದೇವಿಯನ್ನು ನೀವು ನೋಡುವಿರಲ್ಲ, ಸಾಕ್ಷಾತ್ ದೇವತೆಯಂತೆ ವಿರಾಜಿಸುವ ಈ ದೇವಿಯು ನನ್ನ ತಂದೆಯ ಪಟ್ಟದರಾಣಿ. ಅದಿತಿಯು ಉಪೇಂದ್ರನನ್ನು ಪ್ರಸವಿಸಿದಂತೆ, ಇವಳು ಪುರುಷಶ್ರೇಷ್ಠನೂ ಸಿಂಹಗಂಭೀರಗಾಮಿಯೂ ಆದ ಶ್ರೀರಾಮನಿಗೆ ಜನ್ಮವನ್ನು ಕೊಟ್ಟಿರುವಳು. ಈ ದೇವಿಯ ಹೆಸರು ಕೌಸಲ್ಯೆ (೨೦-೨೧). ಇವಳ ಎಡಭುಜವನ್ನು ಹಿಡಿದು ದುಃಖಿಸುತ್ತ ನಿಂತಿರುವವಳು ಸುಮಿತ್ರಾದೇವಿ. ಮಹಾರಾಜನ ಮಧ್ಯಮಪತ್ನಿ ಕಾಡಿನಲ್ಲಿ ಬಾಡಿದ ಹೂಗಳುಳ್ಳ ಕರ್ಣಿಕಾರದ ಶಾಖೆಯಂತೆ ದೀನಳಾಗಿದ್ದಾಳೆ. ಅಶ್ವಿನೀ

ಏತಸ್ಯಾಸ್ತೌ ಸುತೌ ದೇವ್ಯಾಃ ಕುಮಾರೌ ದೇವವರ್ಣಿನೌ ।
ಉಭೌ ಲಕ್ಷ್ಮಣಶತ್ರುಘ್ನೌ ವೀರೌ ಸತ್ಯಪರಾಕ್ರಮೌ ॥ ೨೪

ಯಸ್ಯಾಃ ಕೃತೇ ನರವ್ಯಾಘ್ರೌ ಜೀವನಾಶಮಿತೋ ಗತೌ ।
ರಾಜಾ ಪುತ್ರವಿಹೀನಶ್ಚ ಸ್ವರ್ಗಂ ದಶರಥೋ ಗತಃ ॥ ೨೫

ಕ್ರೋಧನಾಮಕೃತಪ್ರಜ್ಞಾಂ ದೃಪ್ತಾಂ ಸುಭಗಮಾನಿನೀಮ್ ।
ಐಶ್ವರ್ಯಕಾಮಾಂ ಕೈಕೇಯೀಮನಾರ್ಯಾಮಾರ್ಯರೂಪಿಣೀಮ್ ॥

ಮಮೈತಾಂ ಮಾತರಂ ವಿದ್ಧಿ ನೃಶಂಸಾಂ ಪಾಪನಿಶ್ಚಯಾಮ್ ।
ಯತೋಮೂಲಂ ಹಿ ಪಶ್ಯಾಮಿ ವ್ಯಸನಂ ಮಹದಾತ್ಮನಃ ॥ ೨೭

ಇತ್ಯುಕ್ತ್ವಾ ನರಶಾರ್ದೂಲೋ ಬಾಷ್ಪಗದ್ಗದಯಾ ಗಿರಾ ।
ಸ ನಿಶಶ್ವಾಸ ತಾಮ್ರಾಕ್ಷೋ ನಾಗಃ ಕ್ರುದ್ಧ ಇವ ಶ್ವಸನ್ ॥ ೨೮

ಭರದ್ವಾಜೋ ಮಹರ್ಷಿಸ್ತಂ ಬ್ರುವಂತಂ ಭರತಂ ತಥಾ ।
ಪ್ರತ್ಯುವಾಚ ಮಹಾಬುದ್ಧಿರಿದಂ ವಚನಮರ್ಥವತ್ ॥ ೨೯

ದೇವತೆಗಳಂತೆ ರೂಪಸಂಪನ್ನರೂ ವೀರರೂ ಸತ್ಯಸಂಧರೂ ಆದ ಲಕ್ಷ್ಮಣ ಶತ್ರುಘ್ನರಿಬ್ಬರೂ ಈಕೆಯ ಪುತ್ರರು (೨೨-೨೪). ಮಹರ್ಷಿಗಳೆ, ಯಾರ ದೆಸೆಯಿಂದ ಶ್ರೀರಾಮಲಕ್ಷ್ಮಣರು ಪ್ರಾಣಾಂತಕವಾದ ಕಷ್ಟಕ್ಕೆ ಸಿಕ್ಕಿ ಹೊರಟುಹೋದರೊ - ದಶರಥಮಹಾರಾಜನು ಪುತ್ರಶೋಕದಿಂದ ಕೊರಗಿ ಸ್ವರ್ಗಸ್ಥನಾದನೋ - ಅಂಥ ಸಿಡುಕಿಯೂ ಅವಿವೇಕಿಯೂ ದುರಹಂಕಾರಿಯೂ ಆದ ಕೈಕೇಯಿ ಇಲ್ಲಿ ನಿಂತಿದ್ದಾಳೆ (೨೫). ತಾನೇ ಸುಂದರಿಯೆಂದು ತಿಳಿದುಕೊಂಡಿದ್ದಾಳೆ. ಇವಳಿಗೆ ಐಶ್ವರ್ಯ ಬೇಕೆಂದು ದುರಾಸೆ. ದುಷ್ಟಳಾದರೂ ಒಳ್ಳೆಯವಂತೆ ನಟಿಸುತ್ತಾಳೆ. ಕಠೋರ ಹೃದಯಳೂ ಪಾಪಿಯೂ ಆದ ಇವಳು ನನ್ನ ತಾಯಿ. ಇವಳಿಂದಲೇ ನನಗೆ ಮಹತ್ತರವಾದ ಕಷ್ಟ ಬಂದಿತು'' ಎಂದನು (೨೬-೨೭). ಹೀಗೆ ಹೇಳುವಾಗ ಆ ಪುರುಷಶ್ರೇಷ್ಠನಿಗೆ ಕಣ್ಣೀರು ಉಕ್ಕುತ್ತಿತ್ತು. ಮಾತು ತೊದಲುತ್ತಿತ್ತು. ಕಣ್ಣು ಕೆಂಪಾಗಿತ್ತು. ಕೆರಳಿದ ಸರ್ಪದಂತೆ ಭರತನು ಬುಸುಗುಟ್ಟುತ್ತಿದ್ದನು (೨೮). ಆಗ ಜ್ಞಾನಿಗಳಾದ ಭರದ್ವಾಜ ಮಹರ್ಷಿಗಳು ''ಭರತ, ಕೈಕೇಯಿಯ ವಿಷಯದಲ್ಲಿ ದೋಷವನ್ನೆಣಿಸಬೇಡ. ರಾಮನನ್ನು ವನಕ್ಕೆ ಕಳಿಸಿದ್ದು

ನ ದೋಷೇಣಾವಗಂತವ್ಯಾ ಕೈಕೇಯೀ ಭರತ ತ್ವಯಾ ।
ರಾಮಪ್ರವ್ರಾಜನಂ ಹ್ಯೇತತ್ ಸುಖೋದರ್ಕಂ ಭವಿಷ್ಯತಿ ॥ ೩೦

ದೇವಾನಾಂ ದಾನವಾನಾಂ ಚ ಋಷೀಣಾಂ ಭಾವಿತಾತ್ಮನಾಮ್ ।
ಹಿತಮೇವ ಭವಿಷ್ಯದ್ಧಿ ರಾಮಪ್ರವ್ರಾಜನಾದಿಹ ॥ ೩೧

ಅಭಿವಾದ್ಯ ತು ಸಂಸಿದ್ಧಃ ಕೃತ್ವಾ ಚೈನಂ ಪ್ರದಕ್ಷಿಣಮ್ ।
ಆಮಂತ್ರ್ಯ ಭರತಃ ಸೈನ್ಯಂ ಯುಜ್ಯತಾಮಿತ್ಯಚೋದಯತ್ ॥ ೩೨

ತತೋ ವಾಜಿರಥಾನ್ ಯುಕ್ತ್ವಾ ದಿವ್ಯಾನ್ ಹೇಮಪರಿಷ್ಕೃತಾನ್ ।
ಅಧ್ಯಾರೋಹತ್ ಪ್ರಯಾಣಾರ್ಥೀ ಬಹೂನ್ ಬಹುವಿಧೋ ಜನಃ ॥

ಗಜಕನ್ಯಾ ಗಜಾಶ್ಚೈವ ಹೇಮಕಕ್ಷ್ಯಾಃ ಪತಾಕಿನಃ ।
ಜೀಮೂತಾ ಇವ ಘರ್ಮಾಂತೇ ಸಘೋಷಾಃ ಸಂಪ್ರತಸ್ಥಿರೇ ॥ ೩೪

ವಿವಿಧಾನ್ಯಪಿ ಯಾನಾನಿ ಮಹಾಂತಿ ಚ ಲಘೂನಿ ಚ ।
ಪ್ರಯಯುಃ ಸುಮಹಾರ್ಹಾಣಿ ಪಾದೈರೇವ ಪದಾತಯಃ ॥ ೩೫

ಪರಿಣಾಮದಲ್ಲಿ ಜನರಿಗೆ ಸೌಖ್ಯವನ್ನು ತರುತ್ತದೆ. ರಾಮನ ವನವಾಸದಿಂದ ದೇವದಾನವರಿಗೂ ಆತ್ಮನಿಷ್ಠರಾದ ಋಷಿಗಳಿಗೂ ಹಿತವೇ ಆಗುತ್ತದೆ '' ಎಂದು ನುಡಿದರು (೨೯-೩೧). ಆಮೇಲೆ ಭರತನು ಭರದ್ವಾಜರಿಗೆ ಪ್ರದಕ್ಷಿಣೆಮಾಡಿ ಅಭಿವಂದಿಸಿ ಅವರ ಆಶೀರ್ವಾದವನ್ನು ಪಡೆದನು. ಅನಂತರ ಅವರ ಅನುಮತಿಯನ್ನು ಪಡೆದು, ಮುಂದಿನ ಪ್ರಯಾಣಕ್ಕೆ ಸೈನ್ಯವು ಸಿದ್ಧವಾಗಲೆಂದು ಆಜ್ಞಾಪಿಸಿದನು (೩೨). ಕೂಡಲೆ ಅವನ ಪರಿವಾರದ ಜನರೆಲ್ಲರೂ ಅಶ್ವ, ರಥ ಮುಂತಾದ ಉತ್ತಮವಾಹನಗಳನ್ನು ಸುವರ್ಣಾದಿಗಳಿಂದ ಅಲಂಕರಿಸಿ ಪ್ರಯಾಣಕ್ಕೋಸ್ಕರ ಹತ್ತಿದರು. ಚಿನ್ನದ ಸರಪಳಿಗಳಿಂದ ಭೂಷಿತರಾಗಿ ಧ್ವಜಗಳನ್ನು ಹೊತ್ತಿದ್ದ ಹೆಣ್ಣಾನೆ ಗಂಡಾನೆಗಳು ಮಳೆಗಾಲದ ಮೇಘಖಂಡಗಳಂತೆ ಘೀಂಕಾರ ಮಾಡುತ್ತ ಹೊರಟವು (೩೩-೩೪). ದೊಡ್ಡವೂ ಚಿಕ್ಕವೂ ಆದ ಬೆಲೆಬಾಳುವ ವಿವಿಧ ವಾಹನಗಳನ್ನೇರಿ ಜನರು ಪ್ರಯಾಣ ಮಾಡಿದರು. ಕಾಲಾಳುಗಳು ನಡೆಯುತ್ತಲೇ ಹೋದರು(೩೫). ಶ್ರೀರಾಮನನ್ನುನೋಡುತ್ತೇವೆಂದು ಹರ್ಷಗೊಂಡ ಕೌಸಲ್ಯೆ ಮೊದಲಾದ

ಅಥ ಯಾನಪ್ರವೇಕೈಸ್ತು ಕೌಸಲ್ಯಾಪ್ರಮುಖಾಃ ಸ್ತ್ರಿಯಃ ।
ರಾಮದರ್ಶನಕಾಂಕ್ಷಿಣ್ಯಃ ಪ್ರಯಯುರ್ಮುದಿತಾಸ್ತದಾ ॥ ೩೬

ಚಂದ್ರಾರ್ಕತರುಣಾಭಾಸಾಂ ನಿಯುಕ್ತಾಂ ಶಿಬಿಕಾಂ ಶುಭಾಮ್ ।
ಆಸ್ಥಾಯ ಪ್ರಯಯೌ ಶ್ರೀಮಾನ್ ಭರತಃ ಸಪರಿಚ್ಛದಃ ॥ ೩೭

ಸಾ ಪ್ರಯಾತಾ ಮಹಾಸೇನಾ ಗಜವಾಜಿರಥಾಕುಲಾ ।
ದಕ್ಷಿಣಾಂ ದಿಶಮಾವೃತ್ಯ ಮಹಾಮೇಘ ಇವೋತ್ಥಿತಃ ॥ ೩೮

ವನಾನಿ ತು ವ್ಯತಿಕ್ರಮ್ಯ ಜುಷ್ಟಾನಿ ಮೃಗಪಕ್ಷಿಭಿಃ ।
ಗಂಗಾಯಾಃ ಪರವೇಲಾಯಾಂ ಗಿರಿಷ್ವಪಿ ನದೀಷು ಚ ॥ ೩೯

ಸಾ ಸಂಪ್ರಹೃಷ್ಟದ್ವಿಪವಾಜಿಯೋಧಾ
ವಿತ್ರಾಸಯಂತೀ ಮಗಪಕ್ಷಿಸಂಘಾನ್ ।
ಮಹದ್ವನಂ ತತ್ಪ್ರತಿಗಾಹಮಾನಾ
ರರಾಜ ಸೇನಾ ಭರತಸ್ಯ ತತ್ರ ॥ ೪೦

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದ್ವಿನವತಿತಮಃ ಸರ್ಗಃ

ರಾಜಸ್ತ್ರೀಯರು ಶ್ರೇಷ್ಠವಾಹನಗಳನ್ನೇರಿ ಪ್ರಯಾಣ ಮಾಡಿದರು. ಉದಯಿಸುವ ಚಂದ್ರನಂತೆಯೂ ಬಾಲಸೂರ್ಯನಂತೆಯೂ ಹೊಳೆಯುತ್ತಿದ್ದ ರಮ್ಯವಾದ ಒಂದು ಪಲ್ಲಕ್ಕಿಯನ್ನೇರಿ, ಭರತನು ತನ್ನ ಪರಿವಾರದೊಂದಿಗೆ ಹೊರಟನು (೩೬-೩೭). ಆನೆ ಕುದುರೆ ರಥಗಳಿಂದ ತುಂಬಿದ್ದ ಆ ಮಹಾಸೇನೆಯು ದಕ್ಷಿಣಾಭಿಮುಖವಾಗಿ ಹೊರಟು ಮೇಘಪಂಕ್ತಿಯಂತೆ ವ್ಯಾಪಿಸಿತು. ಆ ಸೇನೆಯು ಗಂಗಾನದಿಯ ದಕ್ಷಿಣದಿಕ್ಕಿಗೆ ಬೆಟ್ಟಗಳ ಮತ್ತು ನದಿಗಳ ಸುತ್ತಲೂ ಮೃಗಪಕ್ಷಿಗಳಿಂದ ತುಂಬಿದ ಅನೇಕ ವನಗಳನ್ನು ದಾಟುತ್ತ ಹೋಯಿತು (೩೮-೩೯). ಭರತನ ಆ ಚತುರಂಗಬಲವು ಉಲ್ಲಾಸದಿಂದ ಹೋಗುತ್ತಿರುವಾಗ ಮೃಗಪಕ್ಷಿಗಳು ಹೆದರಿ ಪಲಾಯನ ಮಾಡುತ್ತಿದ್ದವು. ಆ ಸೇನೆಯು ಮುಂದೆ ಒಂದು ಮಹಾರಣ್ಯವನ್ನು ಪ್ರವೇಶಿಸಿತು (೪೦).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ತೊಂಬತ್ತೆರಡನೆಯ ಸರ್ಗ

ತ್ರಿನವತಿತಮಃ ಸರ್ಗಃ

ಚಿತ್ರಕೂಟವನಪ್ರೇಕ್ಷಣಮ್

ತಯಾ ಮಹತ್ಯಾ ಯಾಯಿನ್ಯಾ ಧ್ವಜಿನ್ಯಾ ವನವಾಸಿನಃ ।
ಅರ್ದಿತಾ ಯೂಥಪಾ ಮತ್ತಾಃ ಸಯೂಥಾಃ ಸಂಪ್ರದುದ್ರುವುಃ ॥ ೧

ಋಕ್ಷಾಃ ಪೃಷತಸಂಘಾಶ್ಚ ರುರವಶ್ಚ ಸಮಂತತಃ ।
ದೃಶ್ಯಂತೇ ವನವಾಟೇಷು ಗಿರಿಷ್ವಪಿ ನದೀಷು ಚ ॥ ೨

ಸ ಸಂಪ್ರತಸ್ಥೇ ಧರ್ಮಾತ್ಮಾ ಪ್ರೀತೋ ದಶರಥಾತ್ಮಜಃ ।
ವೃತೋ ಮಹತ್ಯಾ ನಾದಿನ್ಯಾ ಸೇನಯಾ ಚತುರಂಗಯಾ ॥ ೩

ಸಾಗರೌಘನಿಭಾ ಸೇನಾ ಭರತಸ್ಯ ಮಹಾತ್ಮನಃ ।
ಮಹೀಂ ಸಂವಾದಯಾಮಾಸ ಪ್ರಾವೃಷಿ ದ್ಯಾಮಿವಾಂಬುದಃ ॥ ೪

ತುರಂಗೌಘೈರವತತಾ ವಾರಣೈಶ್ಚ ಮಹಾಬಲೈಃ ।
ಅನಾಲಕ್ಷ್ಯಾ ಚಿರಂ ಕಾಲಂ ತಸ್ಮಿನ್ ಕಾಲೇ ಬಭೂವ ಭೂಃ ॥ ೫

ಸರ್ಗ ೯೩

ಭರತನು ಚಿತ್ರಕೂಟವನ್ನು ಪ್ರವೇಶಿಸಿ ಶ್ರೀರಾಮನನ್ನು ಹುಡುಕುವುದು.

ಆ ಮಹಾಸೈನ್ಯವು ಕಾಡಿನಲ್ಲಿ ಹೋಗುತ್ತಿರುವಾಗ ವನದಲ್ಲಿದ್ದ ಸಲಗಗಳಿಗೆ ತೊಂದರೆಯಾಯಿತು. ಅವು ತಮ್ಮ ಆನೆಯ ಹಿಂಡಿನೊಡನೆ ಓಡಿ ಹೋದವು. ಕರಡಿಗಳೂ ಪೃಷತ, ರುರು*- ಎಂಬ ಜಿಂಕೆಗಳೂ ವನಪ್ರದೇಶ, ಬೆಟ್ಟ ಮತ್ತು ನದೀತೀರದಲ್ಲಿ ಸುತ್ತಲೂ ಓಡಿಹೋಗುವುದು ಕಾಣಿಸುತ್ತಿತ್ತು (೧-೨). ಧರ್ಮಾತ್ಮನಾದ ಭರತನು ಅವುಗಳನ್ನು ನೋಡಿ ವಿನೋದಿಸುತ್ತ, ಕೋಲಾಹಲಗೈಯುತ್ತಿದ್ದ ಚತುರಂಗ ಸೇನೆಯೊಡನೆ ಪ್ರಯಾಣ ಮಾಡಿದನು. ಭರತನ ಸೇನೆಯು ಸಮುದ್ರದ ಅಲೆಯಂತೆ ನುಗ್ಗುತ್ತ , ಮಳೆಗಾಲದ ಮೋಡವು ಗಗನವನ್ನು ಆವರಿಸುವಂತೆ ಭೂಮಿಯನ್ನು ಆವರಿಸುತ್ತ ಹೋಗುತ್ತಿತ್ತು (೩-೪). ಕುದುರೆಗಳ ಸಾಲುಗಳಿಂದಲೂ ಬಲಾಢ್ಯನಾದ ಆನೆಗಳಿಂದಲೂ ಭೂಮಿಯು ವ್ಯಾಪ್ತವಾಗಲು, ಬಹಳ ಹೊತ್ತಿನವರೆಗೆ ನೆಲವೇ

* ಪೃಷತ=ಮೈಮೇಲೆ ಚುಕ್ಕೆಗಳಿರುವ ಜಿಂಕೆ. ರುರು=ಚುಕ್ಕೆಗಳಿಲ್ಲದ ದೊಡ್ಡ ದೇಹವುಳ್ಳ ಕವಲುಗೊಂಬಿನ ಜಿಂಕೆ.

ಸ ಗತ್ವಾದೂರಮಧ್ವಾನಂ ಸುಪರಿಶ್ರಾಂತವಾಹನಃ ।
ಉವಾಚ ಭರತಃ ಶ್ರೀಮಾನ್ ವಸಿಷ್ಠಂ ಮಂತ್ರಿಣಾಂ ವರಮ್ ॥ ೬

ಯಾದೃಶಂ ಲಕ್ಷ್ಯತೇ ರೂಪಂ ಯಥಾ ಚೈವ ಶ್ರುತಂ ಮಯಾ ।
ವ್ಯಕ್ತಂ ಪ್ರಾಪ್ತಾಃ ಸ್ಮ ತಂ ದೇಶಂ ಭರದ್ವಾಜೋ ಯಮಬ್ರವೀತ್ ॥ ೭

ಅಯಂ ಗಿರಿಶ್ಚಿತ್ರಕೂಟ ಇಯಂ ಮಂದಾಕಿನೀ ನದೀ ।
ಏತತ್ ಪ್ರಕಾಶತೇ ದೂರಾನ್ನೀಲಮೇಘನಿಭಂ ವನಮ್ ॥ ೮

ಗಿರೇಃ ಸಾನೂನಿ ರಮ್ಯಾಣಿ ಚಿತ್ರಕೂಟಸ್ಯ ಸಂಪ್ರತಿ ।
ವಾರಣೈರವಮೃದ್ಯಂತೇ ಮಾಮಕೈಃ ಪರ್ವತೋಪಮೈಃ ॥ ೯

ಮುಂಚಂತಿ ಕುಸುಮಾನ್ಯೇತೇ ನಗಾಃ ಪರ್ವತಸಾನುಷು ।
ನೀಲಾ ಇವಾತಪಾಪಾಯೇ ತೋಯಂ ತೋಯಧರಾ ಘನಾಃ ॥ ೧೦

ಕಿನ್ನರಾಚರಿತಂ ದೇಶಂ ಪಶ್ಯ ಶತ್ರುಘ್ನ ಪರ್ವತಮ್ ।
ಮೃಗೈಃ ಸಮಂತಾದಾಕೀರ್ಣಂ ಮಕರೈರಿವ ಸಾಗರಮ್ ॥ ೧೧

ಕಾಣಿಸುತ್ತಿರಲಿಲ್ಲ. ಹೀಗೆ ಬಹಳ ದೂರ ಹೋದಮೇಲೆ ವಾಹನಗಳೆಲ್ಲವೂ ಬಳಲಿದವು. ಭರತನು ಮಂತ್ರಾಲೋಚನೆಯಲ್ಲಿ ನಿಪುಣರಾದ ವಸಿಷ್ಠರನ್ನು ನೋಡಿ ಹೀಗೆಂದನು (೫-೬) : ''ಮಹಾತ್ಮರೆ, ಇಲ್ಲಿನ ದೃಶ್ಯವನ್ನು ನೋಡಿದರೆ ಇದು ನಾನು ಕೇಳಿದ್ದ ಪ್ರದೇಶದಂತೆಯೇ ಇದೆ. ಭರದ್ವಾಜರು ಹೇಳಿದ ಸ್ಥಳಕ್ಕೆ ನಾವು ಬಂದಿದ್ದೇವೆಂಬುದು ಸ್ಪಷ್ಟವಾಗಿದೆ. ಇದೇ ಚಿತ್ರಕೂಟ ಪರ್ವತ. ಅದೇ ಮಂದಾಕಿನೀ ನದಿ. ಅತ್ತ ದೂರದಲ್ಲಿ ನೀಲಮೇಘದಂತೆ ಚಿತ್ರಕೂಟವನವು ಕಂಗೊಳಿಸುತ್ತಿದೆ (೭-೮). ಈ ಚಿತ್ರಕೂಟದ ತಪ್ಪಲುಗಳು ಬಹು ಸುಂದರವಾಗಿವೆ. ಬೆಟ್ಟದಂತಿರುವ ನಮ್ಮ ಆನೆಗಳು ಇವುಗಳನ್ನು ತುಳಿದುಹಾಕುತ್ತಿವೆ (೯). ಆಹಾ ! ಈ ತಪ್ಪಲುಗಳಲ್ಲಿ ಮರಗಳು ಹೂಗಳನ್ನು ನಿರಂತರವಾಗಿ ಸುರಿಸುತ್ತಿವೆ. ಈ ದೃಶ್ಯವು ಮಳೆಗಾಲದಲ್ಲಿ ನೀರನ್ನು ಹೊತ್ತ ಕಪ್ಪು ಮೋಡಗಳು ಮಳೆಯನ್ನು ಸುರಿಸುವಂತೆ ಕಾಣುತ್ತದೆ (೧೦). ಶತ್ರುಘ್ನ, ಅತ್ತ ನೋಡು ! ಪರ್ವತದ ಆ ಕಡೆಯಲ್ಲಿ ಕಿಂನರರು ಸಂಚರಿಸುತ್ತಿದ್ದಾರೆ ! ಸಮುದ್ರದಲ್ಲಿ ಮೊಸಳೆಗಳಿರುವಂತೆ ಇಲ್ಲಿ ಕಾಡುಮೃಗಗಳು ತುಂಬಿಕೊಂಡಿವೆ (೧೧).

ಏತೇ ಮೃಗಗಣಾ ಭಾಂತಿ ಶೀಘ್ರವೇಗಾಃ ಪ್ರಚೋದಿತಾಃ ।
ವಾಯುಪ್ರವಿದ್ಧಾ ಶರದಿ ಮೇಘರಾಜಿರಿವಾಂಬರೇ ॥ ೧೨
ಕುರ್ವಂತಿ ಕುಸುಮಾಪೀಡಾನ್ ಶಿರಸ್ಸು ಸುರಭೀನಮೀ ।
ಮೇಘಪ್ರಕಾಶೈಃ ಫಲಕೈರ್ದಾಕ್ಷಿಣಾತ್ಯಾ ಯಥಾ ನರಾಃ ॥ ೧೩
ನಿಷ್ಕೂಜಮಿವ ಭೂತ್ವೇದಂ ವನಂ ಘೋರಪ್ರದರ್ಶನಮ್ ।
ಅಯೋಧ್ಯೇವ ಜನಾಕೀರ್ಣಾ ಸಂಪ್ರತಿ ಪ್ರತಿಭಾತಿ ಮೇ ॥ ೧೪
ಖುರೈರುದೀರಿತೋ ರೇಣುರ್ದಿವಂ ಪ್ರಚ್ಛಾದ್ಯ ತಿಷ್ಠತಿ ।
ತಂ ವಹತ್ಯನಿಲಃ ಶೀಘ್ರಂ ಕುರ್ವನ್ನಿವ ಮಮ ಪ್ರಿಯಮ್ ॥ ೧೫
ಸ್ಯಂದನಾಂಸ್ತುರಗೋಪೇತಾನ್ ಸೂತಮುಖ್ಯೈರಧಿಷ್ಠಿತಾನ್ ।
ಏತಾನ್ ಸಂಪತತಃ ಶೀಘ್ರಂ ಪಶ್ಯ ಶತ್ರುಘ್ನ ಕಾನನೇ ॥ ೧೬
ಏತಾನ್ ವಿತ್ರಾಸಿತಾನ್ ಪಶ್ಯ ಬರ್ಹಿಣಃ ಪ್ರಿಯದರ್ಶನಾನ್ ।
ಏವಮಾಪತತಃ ಶೈಲಮಧಿವಾಸಂ ಪತತ್ರಿಣಾಮ್ ॥ ೧೭

ನಮ್ಮ ಸೈನ್ಯಕ್ಕೆ ಹೆದರಿ ಜಿಂಕೆಯ ಹಿಂಡು ಎಷ್ಟು ವೇಗವಾಗಿ ಓಡುತ್ತಿದೆ! ಶರತ್ಕಾಲದಲ್ಲಿ ಗಾಳಿಯ ಹೊಡೆತಕ್ಕೆ ಸಿಕ್ಕಿ ಆಕಾಶದಲ್ಲಿ ಮೋಡವು ಓಡಿದಂತೆ ಕಾಣುತ್ತದೆ (೧೨). ಈ ಮರಗಳು ಮೇಲ್ಭಾಗದಲ್ಲಿ ಮೇಘದಂತೆ ಕಪ್ಪಾದ ಕೊಂಬೆಗಳ ಜಾಲದಲ್ಲಿ ಹೂವಿನ ಗೊಂಚಲುಗಳನ್ನು ಧರಿಸಿವೆ. ಇವುಗಳನ್ನು ನೋಡಿದರೆ ದಕ್ಷಿಣದೇಶದ ಜನರು ಶಿರಸ್ಸಿನಲ್ಲಿ ಹೂಗಳನ್ನು ಮುಡಿದುಕೊಂಡಂತೆ ಕಾಣುತ್ತದೆ (೧೩). ಜನಾಕೀರ್ಣವಾಗಿದ್ದ ಅಯೋಧ್ಯೆಯು ಈಗ ಶೂನ್ಯವಾಗಿದೆ. ಈಗಿನ ಅಯೋಧ್ಯೆಯಂತೆ ಜನರಿಲ್ಲದೆ ನಿಶ್ಶಬ್ದವಾಗಿ ಭಯಂಕರವಾಗಿದ್ದ ಅರಣ್ಯವು ಹಿಂದಿನ ಅಯೋಧ್ಯೆಯಂತಾಗಿದೆ. ಅಶ್ವಗಳ ಖುರಪುಟದಿಂದ ಮೇಲೆದ್ದ ಧೂಳಿಯು ಆಕಾಶದಲ್ಲಿ ಹರಡುತ್ತಿದೆ. ಆದರೆ ಗಾಳಿಯು ನನಗೆ ಉಪಕಾರಮಾಡುವುದಕ್ಕೋ ಎಂಬಂತೆ, ಅದನ್ನು ಬೇಗನೆ ಹಾರಿಸಿಕೊಂಡು ಹೋಗುತ್ತದೆ (೧೪-೧೫). ಶತ್ರುಘ್ನ, ಕುದುರೆಗಳನ್ನು ಕಟ್ಟಿದ ಈ ರಥಗಳನ್ನು ಸಾರಥಿಗಳು ಬೇಗಬೇಗನೆ ಕಾಡಿನಲ್ಲಿ ಓಡಿಸಿಕೊಂಡು ಬರುತ್ತಿರುವುದನ್ನು ನೋಡು! ಅದರಿಂದ ಹೆದರಿ ನವಿಲುಗಳು ತಮ್ಮ ವಾಸಸ್ಥಳವಾದ ಬೆಟ್ಟದ ಕಡೆಗೆ ಓಡಿ ಬರುವುದನ್ನು ನೋಡು! ಅವು ಎಷ್ಟು ಚೆನ್ನಾಗಿ ಕಾಣಿಸುತ್ತಿವೆ! (೧೬-೧೭). ನನಗಂತೂ ಈ ಪ್ರದೇಶವು

ಅತಿಮಾತ್ರಮಯಂ ದೇಶೋ ಮನೋಜ್ಞಃ ಪ್ರತಿಭಾತಿ ಮೇ ।
ತಾಪಸಾನಾಂ ನಿವಾಸೋಽಯಂ ವ್ಯಕ್ತಂ ಸ್ವರ್ಗಪಥೋ ಯಥಾ ॥ ೧೮

ಮೃಗಾ ಮೃಗೀಭಿಃ ಸಹಿತಾ ಬಹವಃ ಪೃಷತಾ ವನೇ ।
ಮನೋಜ್ಞರೂಪಾ ಲಕ್ಷ್ಯಂತೇ ಕುಸುಮೈರಿವ ಚಿತ್ರಿತಾಃ ॥ ೧೯

ಸಾಧು ಸೈನ್ಯಾಃ ಪ್ರತಿಷ್ಠಂತಾಂ ವಿಚಿನ್ವಂತು ಚ ಕಾನನಮ್ ।
ಯಥಾ ತೌ ಪುರುಷವ್ಯಾಘ್ರೌ ದೃಶ್ಯೇತೇ ರಾಮಲಕ್ಷ್ಮಣೌ ॥ ೨೦

ಭರತಸ್ಯ ವಚಃ ಶ್ರುತ್ವಾ ಪುರುಷಾಃ ಶಸ್ತ್ರಪಾಣಯಃ ।
ವಿವಿಶುಸ್ತದ್ವನಂ ಶೂರಾ ಧೂಮಾಗ್ರಂ ದದೃಶುಸ್ತತಃ ॥ ೨೧

ತೇ ಸಮಾಲೋಕ್ಯ ಧೂಮಾಗ್ರಮೂಚುರ್ಭರತಮಾಗತಾಃ ।
ನಾಮನುಷ್ಯೇ ಭವತ್ಯಗ್ನಿರ್ವ್ಯಕ್ತಮತ್ರೈವ ರಾಘವೌ ॥ ೨೨

ಅಥ ನಾತ್ರ ನರವ್ಯಾಘ್ರೌ ರಾಜಪುತ್ರೌ ಪರಂತಪೌ ।
ಅನ್ಯೇ ರಾಮೋಪಮಾಃ ಸಂತಿ ವ್ಯಕ್ತಮತ್ರ ತಪಸ್ವಿನಃ ॥ ೨೩

ಪರಮರಮಣೀಯವಾಗಿದೆ. ತಪಸ್ವಿಗಳಿಗೆ ನಿವಾಸವಾದ ಇದು ಸ್ವರ್ಗದಂತಿದೆ. ಜಿಂಕೆಗಳು ಹೆಣ್ಣುಜಿಂಕೆಗಳೊಂದಿಗೆ ಅಲೆಯುತ್ತಿವೆ. ಮೈಯಲ್ಲಿ ಚುಕ್ಕೆಗಳಿರುವ ಈ ಜಿಂಕೆಗಳು ಹೂಗಳಿಂದ ಅಲಂಕರಿಸಲ್ಪಟ್ಟಂತೆ ಎಷ್ಟು ಚಂದವಾಗಿ ಕಾಣುತ್ತವೆ! (೧೮-೧೯). ಒಳ್ಳೆಯದು. ಈಗ ಸೈನಿಕರು ಮುಂದೆ ಹೋಗಿ ಅಡವಿಯನ್ನು ಸರಿಯಾಗಿ ಶೋಧಿಸತಕ್ಕದ್ದು. ಪುರುಷಶ್ರೇಷ್ಠರಾದ ರಾಮ ಲಕ್ಷ್ಮಣರು ಕಾಣುವವರೆಗೂ ಹುಡುಕತಕ್ಕದ್ದು'' ಎಂದು ಹೇಳಿ ಅದರಂತೆ ಸೈನಿಕರಿಗೆ ಆದೇಶವನ್ನಿತ್ತನು (೨೦). ಆಗ ಶೂರರಾದ ಸೈನಿಕರು ಶಸ್ತ್ರಪಾಣಿಗಳಾಗಿ ಅರಣ್ಯವನ್ನು ಪ್ರವೇಶಿಸಿ, ಒಂದು ಕಡೆ ಹೊಗೆಯಾಡುತ್ತಿರುವುದನ್ನು ಕಂಡರು (೨೧). ಅವರು ಹಿಂದಿರುಗಿ ಭರತನ ಬಳಿಗೆ ಬಂದು ''ಸ್ವಾಮಿ, (ಅಲ್ಲಿ ಹೊಗೆಯು ಕಾಣಿತ್ತಿದೆ). ಮನುಷ್ಯರಿಲ್ಲದ ಕಡೆ ಹೊಗೆಯಾಡುವುದೆ? ಅಲ್ಲಿಯೇ ಶ್ರೀರಾಮಲಕ್ಷ್ಮಣರು ಇರಬೇಕೆಂದು ಸ್ಪಷ್ಟವಾಗುತ್ತದೆ. ಅಲ್ಲಿ ವೀರಾಗ್ರಣಿಗಳಾದ ಆ ರಾಜಕುಮಾರರು ಇಲ್ಲದ ಪಕ್ಷದಲ್ಲಿ, ಶ್ರೀರಾಮನಂತೆ ತಪಸ್ವಿಗಳಾದ ಇನ್ನೂ ಯಾರಾದರೂ ಇದ್ದೇ ಇರಬೇಕು'' ಎಂದು ಅರಿಕೆ ಮಾಡಿದರು (೨೨-೨೩). ಯಾರಾದರೂ ಒಪ್ಪಬಹುದಾದ ಆ ಮಾತನ್ನು ಕೇಳಿ ಭರತನು ಸಕಲಯೋಧರನ್ನೂ ಉದ್ದೇಶಿಸಿ ''ಎಲೈ ಸೈನಿಕರೆ, ನೀವೆಲ್ಲರೂ ಸಾವಧಾನವಾಗಿ

ತಚ್ಛ್ರುತ್ವಾ ಭರತಸ್ತೇಷಾಂ ವಚನಂ ಸಾಧುಸಂಮತಮ್ ।
ಸೈನ್ಯಾನುವಾಚ ಸರ್ವಾಂಸ್ತಾನಮಿತ್ರಬಲಮರ್ದನಃ ॥ ೨೪

ಯತ್ತಾ ಭವಂತಸ್ತಿಷ್ಠಂತು ನೇತೋ ಗಂತವ್ಯಮಗ್ರತಃ ।
ಅಹಮೇವ ಗಮಿಷ್ಯಾಮಿ ಸುಮಂತ್ರೋ ಧೃತಿರೇವ ಚ ॥ ೨೫

ಏವಮುಕ್ತಾಸ್ತತಃ ಸೈನ್ಯಾಸ್ತತ್ರ ತಸ್ಥುಃ ಸಮಂತತಃ ।
ಭರತೋ ಯತ್ರ ಧೂಮಾಗ್ರಂ ತತ್ರ ದೃಷ್ಟಿಂ ಸಮಾದಧೇ ॥ ೨೬

ವ್ಯವಸ್ಥಿತಾ ಯಾ ಭರತೇನ ಸಾ ಚಮೂ-
ರ್ನಿರೀಕ್ಷಮಾಣಾಪಿ ಚ ಧೂಮಮಗ್ರತಃ ।
ಬಭೂವ ಹೃಷ್ಟಾ ನಚಿರೇಣ ಜಾನಕೀ -
ಪ್ರಿಯಸ್ಯ ರಾಮಸ್ಯ ಸಮಾಗಮಂ ತದಾ ॥ ೨೭

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತ್ರಿನವತಿತಮಃ ಸರ್ಗಃ

❋❋❋

ಇಲ್ಲಿಯೇ ನಿಲ್ಲತಕ್ಕದ್ದು. ನೀವು ಮುಂದಕ್ಕೆ ಬರಕೂಡದು. ಸುಮಂತ್ರ, ಧೃತಿ ಮೊದಲಾದ ಕೆಲವರನ್ನು ಮಾತ್ರ ಕರೆದುಕೊಂಡು ನಾನೇ ಹೋಗುತ್ತೇನೆ' ಎಂದ ಸೂಚಿಸಿದನು (೨೪-೨೫). ಭರತನ ಆಜ್ಞೆಯಂತೆ ಸೈನಿಕರೆಲ್ಲರೂ ವ್ಯವಸ್ಥಿತವಾಗಿ ಅಲ್ಲಿಯೇ ನಿಂತರು. ಹೊಗೆಯಾಡುತ್ತಿದ್ದ ಸ್ಥಳದ ಕಡೆಗೆ ಭರತನ ದೃಷ್ಟಿಯು ಕೇಂದ್ರೀಕೃತವಾಯಿತು (೨೬). ಹೀಗೆ ಭರತನ ಆಜ್ಞೆಯಂತೆ ಸೇನೆಯು ಅಲ್ಲಿಯೇ ನಿಂತರೂ ಅದರ ದೃಷ್ಟಿಯೆಲ್ಲವೂ ದೂರದಲ್ಲಿ ಕಾಣುತ್ತಿದ್ದ ಹೊಗೆಯ ಕಡೆಗ ಹರಿದಿತ್ತು. ಸದ್ಯದಲ್ಲಿಯೇ ಶ್ರೀರಾಮನ ದರ್ಶನವಾಗುವುದೆಂದು ಸೇನೆಯು ಉಲ್ಲಾಸಗೊಂಡಿತ್ತು (೨೭).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ತೊಂಬತ್ತುಮೂರನೆಯ ಸರ್ಗ

❋❋❋

ಚತುರ್ನವತಿತಮಃ ಸರ್ಗಃ

ಚಿತ್ರಕೂಟವರ್ಣನಾ

ದೀರ್ಘಕಾಲೋಷಿತಸ್ತಸ್ಮಿನ್ ಗಿರೌ ಗಿರಿವನಪ್ರಿಯಃ ।
ವೈದೇಹ್ಯಾಃ ಪ್ರಿಯಮಾಕಾಂಕ್ಷನ್ ಸ್ವಂ ಚ ಚಿತ್ತಂ ವಿಲೋಭಯನ್ ॥

ಅಥ ದಾಶರಥಿಶ್ಚಿತ್ರಂ ಚಿತ್ರಕೂಟಮದರ್ಶಯತ್ ।
ಭಾರ್ಯಾಮಮರಸಂಕಾಶಃ ಶಚೀಮಿವ ಪುರಂದರಃ ॥ ೨

ನ ರಾಜ್ಯಾದ್ಭ್ರಂಶನಂ ಭದ್ರೇ ನ ಸುಹೃದ್ಭಿರ್ವಿನಾಭವಃ ।
ಮನೋ ಮೇ ಬಾಧತೇ ದೃಷ್ಟ್ವಾ ರಮಣೀಯಮಿಮಂ ಗಿರಿಮ್ ॥ ೩

ಪಶ್ಯೇಮಮಚಲಂ ಭದ್ರೇ ನಾನಾದ್ವಿಜಗಣಾಯುತಮ್ ।
ಶಿಖರೈಃ ಖಮಿವೋದ್ವಿದ್ಧೈರ್ಧಾತುಮದ್ಭಿರ್ವಿಭೂಷಿತಮ್ ॥ ೪

ಕೇಚಿದ್ರಜತಸಂಕಾಶಾಃ ಕೇಚಿತ್ ಕ್ಷತಜಸನ್ನಿಭಾಃ ।
ಪೀತಮಾಂಜಿಷ್ಠವರ್ಣಾಶ್ಚ ಕೇಚಿನ್ಮಣಿವರಪ್ರಭಾಃ ॥ ೫

ಸರ್ಗ ೯೪

ಶ್ರೀರಾಮನು ಸೀತೆಗೆ ಚಿತ್ರಕೂಟವನ್ನು ವರ್ಣಿಸಿ ಹೇಳುವುದು.

ಇತ್ತಲಾಗಿ ಶ್ರೀರಾಮನು ಚಿತ್ರಕೂಟಪರ್ವತದಲ್ಲಿರುತ್ತ ಬಹಳ ದಿನಗಳು ಕಳೆದಿದ್ದವು. ಅವನಿಗಾದರೋ ಗಿರಿವನಗಳೆಂದರೆ ಅತಿಶಯವಾದ ಪ್ರೀತಿ. ಅವನು ವೈದೇಹಿಗೆ ಸಂತೋಷವನ್ನುಂಟುಮಾಡಬೇಕೆಂದೂ ತನ್ನ ಮನಸ್ಸಿನ ಬೇಸರವನ್ನು ಕಳೆದುಕೊಳ್ಳಬೇಕೆಂದೂ ವಿಚಿತ್ರವಾದ ಆ ಪರ್ವತವನ್ನು ತೋರಿಸುತ್ತಿದ್ದನು (೧). ಆ ದಶರಥಕುಮಾರನು ತನ್ನ ಪತ್ನಿಯೊಡನೆ, ಶಚೀದೇವಿಯೊಡಗೂಡಿದ ದೇವೇಂದ್ರನಂತೆ ಸಂಚರಿಸುತ್ತ, ಚಿತ್ರಕೂಟದ ದೃಶ್ಯಗಳನ್ನು ಹೀಗೆ ವರ್ಣಿಸಿ ಹೇಳುತ್ತಿದ್ದನು (೨) : "ಭದ್ರೆ, ರಮಣೀಯವಾದ ಈ ಬೆಟ್ಟವನ್ನು ನೋಡುತ್ತಿದ್ದರೆ, ರಾಜ್ಯಭ್ರಂಶವಾಗಲಿ – ನನ್ನ ಗೆಳೆಯರ ವಿರಹವಾಗಲಿ – ನನ್ನ ಮನಸ್ಸನ್ನು ಬಾಧಿಸುವುದಿಲ್ಲ. ನಾನಾ ಬಗೆಯ ಹಕ್ಕಿಗಳು ಈ ಬೆಟ್ಟದಲ್ಲಿ ಹಾರಾಡುತ್ತಿರುವುದನ್ನು ನೋಡು! ಬಗೆಬಗೆಯ ಬಣ್ಣದ ಧಾತುಗಳಿಂದ ರಂಜಿಸುವ ಶಿಖರಗಳು ಆಕಾಶದೊಳಗೆ ಚಾಚಿ ನಿಂತಿರುವುದನ್ನು ನೋಡು! (೩-೪).

ಪುಷ್ಪಾರ್ಕಕೇತಕಾಭಾಶ್ಚ ಕೇಚಿಜ್ಜ್ಯೋತೀರಸಪ್ರಭಾಃ।
ವಿರಾಜಂತೇಽಚಲೇಂದ್ರಸ್ಯ ದೇಶಾ ಧಾತುವಿಭೂಷಿತಾಃ॥ ೬

ನಾನಾ ಮೃಗಗಣೈರ್ದ್ವೀಪಿತರಕ್ಷ್ವೃಗಣೈರ್ವೃತಃ।
ಅದುಷ್ಟೈರ್ಭಾತ್ಯಯಂ ಶೈಲೋ ಬಹುಪಕ್ಷಿಸಮಾಕುಲಃ॥ ೭

ಆಮ್ರಜಂಬ್ವಸನೈರ್ಲೋಧ್ರೈಃ ಪ್ರಿಯಾಲೈಃ ಪನಸೈರ್ಧವೈಃ।
ಅಂಕೋಲೈರ್ಭವ್ಯತಿನಿಶೈರ್ಬಿಲ್ವತಿಂದುಕವೇಣುಭಿಃ॥ ೮

ಕಾಶ್ಮರ್ಯರಿಷ್ಟವರಣೈರ್ಮಧೂಕೈಸ್ತಿಲಕೈಸ್ತಥಾ।
ಬದರ್ಯಾಮಲಕೈರ್ನೀಪೈರ್ವೇತ್ರಧನ್ವನಬೀಜಕೈಃ॥ ೯

ಪುಷ್ಪವದ್ಭಿಃ ಫಲೋಪೇತೈಶ್ಛಾಯಾವದ್ಭಿರ್ಮನೋರಮೈಃ।
ಏವಮಾದಿಭಿರಾಕೀರ್ಣಾಃ ಶ್ರಿಯಂ ಪುಷ್ಯತಯಂ ಗಿರಿಃ॥ ೧೦

ಶೈಲಪ್ರಸ್ಥೇಷು ರಮ್ಯೇಷು ಪಶ್ಯೇಮಾನ್ ರೋಮಹರ್ಷಣಾನ್।
ಕಿಂನರಾನ್ ದ್ವಂದ್ವಶೋ ಭದ್ರೇ ರಮಮಾಣಾನ್ ಮನಸ್ವಿನಃ॥ ೧೧

ಈ ಪರ್ವತರಾಜನ ಕೆಲವು ಪ್ರದೇಶಗಳು ಬೆಳ್ಳಿಯಂತಿವೆ ; ಕೆಲವು ರಕ್ತದಂತಿವೆ; ಕೆಲವು ಹಳದಿಯಾಗಿ ಕೆಲವು ಮಂಜಿಷ್ಠದಂತೆ ಕೆಂಪಾಗಿವೆ. ಕೆಲವು ಇಂದ್ರನೀಲಮಣಿಯಂತೆ ಹೊಳೆಯುತ್ತಿವೆ (೫). ಕೆಲವು ಪ್ರದೇಶಗಳು ಪುಷ್ಯರಾಗದಂತೆಯೂ ಸ್ಫಟಿಕದಂತೆಯೂ ಕೇದಗೆಯ ಹೂವಿನಂತೆಯೂ ಕಂಗೊಳಿಸುತ್ತವೆ. ಕೆಲವು ಬೆಂಕಿಯ ಜ್ವಾಲೆಯಂತೆಯೂ ಪಾದರಸದಂತೆಯೂ ಕಾಣುತ್ತವೆ. ಇವೆಲ್ಲವೂ ಗೈರಿಕಧಾತುಗಳಿಂದ ಭೂಷಿತವಾಗಿವೆ. (೬). ಈ ಪರ್ವತದಲ್ಲಿ ಹುಲಿ, ಚಿರತೆ, ಕರಡಿ ಮೊದಲಾದ ವಿವಿಧ ಮೃಗಗಳು ಹಿಂಡುಹಿಂಡಾಗಿವೆ. ಆದರೂ (ಋಷಿಗಳ ತಪಃಪ್ರಭಾವದಿಂದ) ಇವು ಜನರಿಗೆ ಹಿಂಸೆ ಮಾಡುವುದಿಲ್ಲ. ಹಕ್ಕಿಗಳು ಅಸಂಖ್ಯಾತವಾಗಿದ್ದು ಈ ಬೆಟ್ಟಕ್ಕೆ ಒಂದು ಶೋಭೆಯನ್ನು ತಂದಿವೆ (೭). ಸೀತೆ, ಈ ಮರಗಳನ್ನು ನೋಡು! ಮಾವು, ನೇರಿಳೆ, ಹೊನ್ನೆ, ಲೋಧ್ರ, ಪ್ರಿಯಾಲ, ಹಲಸು, ಧವ, ಅಂಕೋಲ, ಹೊಂಗೆ, ಬಿಲ್ವ, ತುಂಬರು, ಬಿದಿರುಗಳಿಂದ ಈ ಪರ್ವತವು ತುಂಬಿದೆ (೮). ಅಲ್ಲದೆ ಶಿವನೆ, ಬೇವು, ವಸಲೆ, ಹಿಪ್ಪೆ, ತಿಲಕ, ಎಲಚಿ, ನೆಲ್ಲಿ, ಈಚಲು, ಬೆತ್ತ, ಧನ್ವನ, ದಾಳಿಂಬೆ ಮೊದಲಾದವುಗಳಿಂದ ಮನೋಹರವಾಗಿದೆ. ಈ ವೃಕ್ಷಗಳು ಹಣ್ಣುಹೂಗಳಿಂದ ತುಂಬಿ ನೆರಳನ್ನು ಕೊಡುತ್ತ ಈ ಚಿತ್ರಕೂಟ ಪರ್ವತವನ್ನು ರಮ್ಯವಾಗಿ ಮಾಡಿವೆ (೯-೧೦). ಪ್ರಿಯೆ, ರಮಣೀಯವಾದ ಸಮಭೂಮಿಗಳಲ್ಲಿ

ಶಾಖಾವಸಕ್ತಾನ್ ಖಡ್ಗಾಂಶ್ಚ ಪ್ರವರಾಣ್ಯಂಬರಾಣಿ ಚ ।
ಪಶ್ಯ ವಿದ್ಯಾಧರಸ್ತ್ರೀಣಾಂ ಕ್ರೀಡೋದ್ದೇಶಾನ್ ಮನೋರಮಾನ್ ॥ ೧೨

ಜಲಪ್ರಪಾತೈರುದ್ಭೇದೈರ್ನಿಷ್ಯಂದೈಶ್ಚ ಕ್ವಚಿತ್ ಕ್ವಚಿತ್ ।
ಸ್ರವದ್ಭಿರ್ಭಾತ್ಯಯಂ ಶೈಲಃ ಸ್ರವನ್ಮದ ಇವ ದ್ವಿಪಃ ॥ ೧೩

ಗುಹಾಸಮೀರಣೋ ಗಂಧಾನ್ನಾನಾ ಪುಷ್ಪಭವಾನ್ ವಹನ್ ।
ಘ್ರಾಣತರ್ಪಣಮಭ್ಯೇತ್ಯ ಕಂ ನರಂ ನ ಪ್ರಹರ್ಷಯೇತ್ ॥ ೧೪

ಯದೀಹ ಶರದೋಽನೇಕಾಸ್ತ್ವಯಾ ಸಾರ್ಧಮನಿಂದಿತೇ ।
ಲಕ್ಷ್ಮಣೇನ ಚ ವತ್ಸ್ಯಾಮಿ ನ ಮಾಂ ಶೋಕಃ ಪ್ರಧಕ್ಷ್ಯತಿ ॥ ೧೫

ಬಹುಪುಷ್ಪಫಲೇ ರಮ್ಯೇ ನಾನಾದ್ವಿಜಗಣಾಯುತೇ ।
ವಿಚಿತ್ರಶಿಖರೇ ಹ್ಯಸ್ಮಿನ್ ರತವಾನಸ್ಮಿ ಭಾಮಿನಿ ॥ ೧೬

ಅನ್ಯೋನ್ಯ ಪ್ರೇಮವುಳ್ಳ ಕಿನ್ನರದಂಪತಿಗಳು ಜೋಡಿಜೋಡಿಯಾಗಿ ವಿಹರಿಸುವುದನ್ನು ನೋಡು! ಅವರನ್ನು ನೋಡಿದ ಮಾತ್ರದಿಂದಲೇ ರೋಮಾಂಚವಾಗುತ್ತದೆ! (೧೧). ಇಲ್ಲಿ ವಿದ್ಯಾಧರಸ್ತ್ರೀಯರು ಕ್ರೀಡಿಸುವ ಸ್ಥಳವನ್ನು ನೋಡು ! ವಿದ್ಯಾಧರರು ತಮ್ಮ ಖಡ್ಗಗಳನ್ನೂ ದಿವ್ಯವಸ್ತ್ರಗಳನ್ನೂ ಮರದ ಕೊಂಬೆಗಳಿಗೆ ನೇತುಹಾಕಿದ್ದಾರೆ. ಜಾನಕಿ, ಅಲ್ಲಲ್ಲಿ ಜಲಪಾತಗಳೂ ಬುಗ್ಗೆಗಳೂ ಗಿರಿನದಿಗಳೂ ಹರಿಯುವುದನ್ನು ನೋಡಿದರೆ, ಈ ಪರ್ವತವು ಮದೋದಕವನ್ನು ಸುರಿಸುತ್ತಿರುವ ಮದ್ದಾನೆಯಂತೆ ಕಾಣುತ್ತದೆ (೧೨-೧೩). ಗುಹೆಗಳಿಂದ ಬೀಸುವ ಗಾಳಿಯು ನಾನಾ ಜಾತಿಯ ಕುಸುಮಗಳ ಸೌರಭವನ್ನು ಹೊತ್ತು ತರುತ್ತಿದೆ. ಮೂಗಿಗೆ ಅಪ್ಯಾಯನವಾಗುವಂತೆ ಹೀಗೆ ಬೀಸಿದರೆ ಯಾವ ಮನುಷ್ಯನಿಗೆ ಹರ್ಷವಾಗದೆ ಇದ್ದೀತು! (೧೪). ಶೋಭನೆ, ನನ್ನೊಡನೆ ನೀನೂ ಲಕ್ಷ್ಮಣನೂ ಇದ್ದರೆ, ಇಲ್ಲಿ ಎಷ್ಟು ವರ್ಷಗಳನ್ನಾದರೂ ಹೀಗೆಯೇ ಕಳೆದೇನು! ಯಾವ ದುಃಖವೂ ನನ್ನನ್ನು ಬಾಧಿಸದು. ಈ ಪರ್ವತದಲ್ಲಿ ಹಣ್ಣುಹೂಗಳು ಸಮೃದ್ಧವಾಗಿವೆ. ಹಿತಕರವಾಗಿ ಗಾಳಿ ಬೀಸುವುದರಿಂದ ರಮ್ಯವಾಗಿದೆ. ಹಕ್ಕಿಗಳ ಚಿಲಿಪಿಲಿಧ್ವನಿಗಳು ಇಂಪಾಗಿವೆ. ಸುಂದರವಾದ ಬಣ್ಣಬಣ್ಣದ ಶಿಖರಗಳಿವೆ. ಸೀತೆ, ನನ್ನ ಮನಸ್ಸು ಇಲ್ಲಿ

ಅನೇನ ವನವಾಸೇನ ಮಯಾ ಪ್ರಾಪ್ತಂ ಫಲದ್ವಯಮ್ ।
ಪಿತುಶ್ಚಾನೃಣತಾ ಧರ್ಮೇ ಭರತಸ್ಯ ಪ್ರಿಯಂ ತಥಾ ॥ ೧೭

ವೈದೇಹಿ ರಮಸೇ ಕಚ್ಚಿಚ್ಚಿತ್ರಕೂಟೇ ಮಯಾ ಸಹ ।
ಪಶ್ಯಂತೀ ವಿವಿಧಾನ್ ಭಾವಾನ್ ಮನೋವಾಕ್ಕಾಯಸಂಮತಾನ್ ॥

ಇದಮೇವಾಮೃತಂ ಪ್ರಾಹೂ ರಾಜ್ಞಿ ರಾಜರ್ಷಯಃ ಪರೇ ।
ವನವಾಸಂ ಭವಾರ್ಥಾಯ ಪ್ರೇತ್ಯ ಮೇ ಪ್ರಪಿತಾಮಹಾಃ ॥ ೧೯

ಶಿಲಾಃ ಶೈಲಸ್ಯ ಶೋಭಂತೇ ವಿಶಾಲಾಃ ಶತಶೋಽಭಿತಃ ।
ಬಹುಲಾ ಬಹುಲೈರ್ವರ್ಣೈರ್ನೀಲಪೀತಸಿತಾರುಣೈಃ ॥ ೨೦

ನಿಶಿ ಭಾಂತ್ಯಚಲೇಂದ್ರಸ್ಯ ಹುತಾಶನಶಿಖಾ ಇವ ।
ಓಷಧ್ಯಃ ಸ್ವಪ್ರಭಾಲಕ್ಷ್ಮ್ಯಾ ಭ್ರಾಜಮಾನಾಃ ಸಹಸ್ರಶಃ ॥ ೨೧

ನೆಟ್ಟುಹೋಗಿದೆ * (೧೫-೧೬). ಈ ವನವಾಸದಿಂದ ನನಗೆ ಎರಡು ಪ್ರಯೋಜನಗಳಾದವು. ನನ್ನ ತಂದೆಯ ಮಾತನ್ನು ಧರ್ಮಮಾರ್ಗದಿಂದ ನಡೆಸಿ ತೀರಿಸುವುದೊಂದು ; ಭರತನಿಗೆ ಪ್ರಿಯವಾದುದನ್ನು ಮಾಡುವುದು ಇನ್ನೊಂದು. ವೈದೇಹಿ, ಈ ಚಿತ್ರಕೂಟದಲ್ಲಿ ನನ್ನೊಡನೆ ವಿಹರಿಸುತ್ತ, ಮನೋವಾಕ್ಕಾಯಗಳಿಗೆ ಅಪ್ಯಾಯನವನ್ನು ಕೊಡುವ ಈ ವಸ್ತುಗಳನ್ನು ನೋಡುತ್ತಿದ್ದರೆ ನಿನಗೆ ಬೇಸರ ಹೋಗುವುದೆ ? ಮನಸ್ಸಿಗೆ ಹರ್ಷವಾಗುವುದೆ ? (೧೭-೧೮). ನನ್ನ ರಾಣಿ ! ಈ ವನವಾಸವನ್ನು ನಮ್ಮ ಪೂರ್ವಜರಾದ ರಾಜರ್ಷಿಗಳು ಅಮೃತವೆಂದು ಹೇಳುತ್ತಿದ್ದರು. ದೇಹತ್ಯಾಗವಾದ ಮೇಲೆ ಈ ಅಮೃತದಿಂದ ಪುನರ್ಜನ್ಮವಿಲ್ಲವೆಂದು ತಿಳಿದಿದ್ದರು (೧೯). ಈ ಶೈಲದಲ್ಲಿರುವ ವಿಶಾಲ ಶಿಲೆಗಳು ಹೇಗೆ ಶೋಭಿಸುತ್ತಿವೆ, ನೋಡು ! ಕಪ್ಪು ಹಳದಿ ಬಿಳುಪು ಕೆಂಪು ಮೊದಲಾದ ಎಷ್ಟು ಬಗೆಯ ಬಣ್ಣಗಳು ! ಈ ಪರ್ವತ ರಾಜನಲ್ಲಿ ಸ್ವಯಂ ಪ್ರಕಾಶವಾದ ಸಾವಿರಾರು ಔಷಧಿಗಳಿವೆ. ರಾತ್ರಿಯ ಹೊತ್ತು ಅಗ್ನಿಜ್ವಾಲೆಗಳಂತೆ ಇವು ಬೆಳಗುತ್ತವೆ (೨೦-೨೧). ಇಲ್ಲಿ ಕೆಲವು ಸ್ಥಳಗಳು ಮನೆಗಳಂತಿವೆ. ಕೆಲವು

---

* ಪಂಚೇಂದ್ರಿಯಗಳಿಗೂ ಇಲ್ಲಿ ತೃಪ್ತಿಯುಂಟು ಎಂಬ ಅರ್ಥ ಇದರಲ್ಲಿ ಸೂಚಿತವಾಗಿದೆ. ಹಣ್ಣು ನಾಲಿಗೆಯನ್ನೂ ಹೂವು ಮೂಗನ್ನೂ ಗಾಳಿ ಚರ್ಮವನ್ನೂ ಚಿಲಿಪಿಲಿ ಧ್ವನಿಯು ಕಿವಿಯನ್ನೂ ಬಣ್ಣದ ಶಿಖರವು ಕಣ್ಣನ್ನೂ ತೃಪ್ತಿಪಡಿಸುತ್ತವೆಯೆಂದು ಅಭಿಪ್ರಾಯ.

ಕೇಚಿತ್ ಕ್ಷಯನಿಭಾ ದೇಶಾಃ ಕೇಚಿದುದ್ಯಾನಸಂನಿಭಾಃ।
ಕೇಚಿದೇಕಶಿಲಾ ಭಾಂತಿ ಪರ್ವತಸ್ಯಾಸ್ಯ ಭಾಮಿನಿ॥ ೨೨

ಭಿತ್ತ್ವೇವ ವಸುಧಾಂ ಭಾತಿ ಚಿತ್ರಕೂಟಃ ಸಮುತ್ಥಿತಃ।
ಚಿತ್ರಕೂಟಸ್ಯ ಕೂಟೋಽಯಂ ದೃಶ್ಯತೇ ಸರ್ವತಃ ಶುಭಃ॥ ೨೩

ಕುಷ್ಠಪುನ್ನಾಗಸ್ಥಗರಭೂರ್ಜಪತ್ರೋತ್ತರಚ್ಛದಾನ್।
ಕಾಮಿನಾಂ ಸ್ವಾಸ್ತರಾನ್ ಪಶ್ಯ ಕುಶೇಶಯದಲಾಯುತಾನ್॥ ೨೪

ಮೃದಿತಾಶ್ಚಾಪವಿದ್ಧಾಶ್ಚ ದೃಶ್ಯಂತೇ ಕಮಲಸ್ರಜಃ।
ಕಾಮಿಭಿರ್ವನಿತೇ ಪಶ್ಯ ಫಲಾನಿ ವಿವಿಧಾನಿ ಚ॥ ೨೫

ವಸ್ವೌಕಸಾರಾಂ ನಲಿನೀಮತ್ಯೇತೀವೋತ್ತರಾನ್ ಕುರೂನ್।
ಪರ್ವತಶ್ಚಿತ್ರಕೂಟೋಽಸೌ ಬಹುಮೂಲಫಲೋದಕಃ॥ ೨೬

ಹೂದೋಟಗಳಂತಿವೆ. ಕೆಲವು ಕಡೆ ವಿಶಾಲವಾದ ಒಂದೇ ಬಂಡೆಯು ವಿಸ್ತರಿಸಿದೆ. ಈ ಚಿತ್ರಕೂಟವು ನೆಲವನ್ನು ಭೇದಿಸಿಕೊಂಡು ಎದ್ದು ಬಂದಿದೆಯೋ ಎಂಬಂತೆ ಕಾಣುವುದು. ಇದರ ಶೃಂಗವು ಬಹುಸುಂದರವಾಗಿ ರಂಜಿಸುವುದು (೨೨-೨೩). ಕಾಂತೆ, ಇಲ್ಲಿ ಕಾಮಿಗಳ ಪುಷ್ಪಶಯ್ಯೆಗಳನ್ನು ನೋಡು! ಪಾರಿಭಾವ್ಯ, ಪುನ್ನಾಗ, ಸ್ಥಗರ ಪುಷ್ಪಗಳ ರಾಶಿಯ ಮೇಲೆ ಭೂರ್ಜಪತ್ರವನ್ನು ಹಾಸಿ ಅದರಮೇಲೆ ತಾವರೆಯದಳಗಳನ್ನು ಹರಡಿದ್ದಾರೆ! (೨೪). ಇಲ್ಲಿ ನಲುಗಿದ ತಾವರೆಯ ಮಾಲೆಗಳನ್ನು ಕಾಮಿಗಳು ಎಸೆದು ತೂರಾಡಿರುವುದು ಕಾಣುತ್ತದೆ. ಸುಂದರಿ, ಈ ಕಡೆ ನಾನಾ ವಿಧದ ಹಣ್ಣುಗಳನ್ನು ತಿಂದು ಎಸೆದಿರುವುದನ್ನು ನೋಡು (೨೫). ಬಹುವಿಧವಾದ ಗಡ್ಡೆಗೆಣಸುಗಳಿಂದಲೂ ಹಣ್ಣುಹಂಪಲುಗಳಿಂದಲೂ ತಿಳಿನೀರಿನಿಂದಲೂ ಪೂರ್ಣವಾದ ಈ ಚಿತ್ರಕೂಟವು ಉತ್ತರ ಕುರುದೇಶದ ಕುಬೇರನಗರಿಯನ್ನೂ ಮಾನಸ ಸರೋವರವನ್ನೂ* ಮೀರಿಸುವಂತಿದೆ. (೨೬). ಜಾನಕಿ, ನಿನ್ನೊಡನೆಯೂ ಲಕ್ಷ್ಮಣನೊಡನೆಯೂ ಇದ್ದು ಈ ಹದಿನಾಲ್ಕು ವರ್ಷಗಳನ್ನು ವಿಹರಿಸುತ್ತ ಕಳೆಯುವೆನು.

---

* ಮೂಲದಲ್ಲಿರುವ ವಸ್ವೌಕಸಾರಾ ಎಂಬ ಪದಕ್ಕೆ ಕುಬೇರನಗರಿ, ಅಮರಾವತಿ ಎಂದು ಎರಡು ಅರ್ಥಗಳಿವೆ. ನಲಿನೀ ಎಂಬ ಪದಕ್ಕೆ ಅಮರಾವತಿ, ಮಾನಸ ಸರೋವರ, ಸೌಗಂಧಿಕಸರೋವರ, ಆಕಾಶಗಂಗೆ ಎಂಬ ಅರ್ಥಗಳನ್ನು ಹೇಳಿದ್ದಾರೆ.

ಇಮಂ ತು ಕಾಲಂ ವನಿತೇ ವಿಜಹ್ರಿವಾನ್
ತ್ವಯಾ ಚ ಸೀತೇ ಸಹ ಲಕ್ಷ್ಮಣೇನ ಚ ।
ರತಿಂ ಪ್ರಪತ್ಸ್ಯೇ ಕುಲಧರ್ಮವರ್ಧಿನೀಂ
ಸತಾಂ ಪಥಿ ಸ್ವೈರ್ನಿಯಮೈಃ ಪರೈಃ ಸ್ಥಿತಃ ॥ ೨೭

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತುರ್ನವತಿತಮಃ ಸರ್ಗಃ

ಪಂಚನವತಿತಮಃ ಸರ್ಗಃ

ಮಂದಾಕಿನೀವರ್ಣನಾ

ಅಥ ಶೈಲಾದ್ವಿನಿಷ್ಕ್ರಮ್ಯ ಮೈಥಿಲೀಂ ಕೋಸಲೇಶ್ವರಃ ।
ಅದರ್ಶಯಚ್ಛುಭಜಲಾಂ ರಮ್ಯಾಂ ಮಂದಾಕಿನೀಂ ನದೀಮ್ ॥ ೧

ಅಬ್ರವೀಚ್ಚ ವರಾರೋಹಾಂ ಚಾರುಚಂದ್ರನಿಭಾನನಾಮ್ ।
ವಿದೇಹರಾಜಸ್ಯ ಸುತಾಂ ರಾಮೋ ರಾಜೀವಲೋಚನಃ ॥ ೨

ನನಗೆ ಗೊತ್ತಾದ ನಿಯಮಗಳನ್ನು ಪಾಲಿಸುತ್ತ ಸನ್ಮಾರ್ಗದಲ್ಲಿದ್ದು ನನ್ನ ಕುಲಧರ್ಮವನ್ನು ನಡೆಸಿದೆನೆಂಬ ತೃಪ್ತಿಯನ್ನು ಪಡೆಯುವೆನು'' ಎಂದು ಹೇಳಿದನು (೨೭).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ತೊಂಬತ್ತುನಾಲ್ಕನೆಯ ಸರ್ಗ

ಸರ್ಗ ೯೫

ಶ್ರೀರಾಮನು ಸೀತೆಗೆ ಮಂದಾಕಿನೀನದಿಯನ್ನು ವರ್ಣಿಸಿ ಹೇಳುವುದು.

ಅನಂತರ ಶ್ರೀರಾಮನು ಆ ಬೆಟ್ಟದಿಂದ ಕೆಳಗಿಳಿದು ಬರುತ್ತ ತಿಳಿನೀರಿನಿಂದ ಚೆಲುವಾದ ಮಂದಾಕಿನೀನದಿಯನ್ನು ಮೈಥಿಲಿಗೆ ತೋರಿಸಿದನು. ಆ ಕಮಲನೇತ್ರನು ಚಂದ್ರಮುಖಿಯಾದ ಜಾನಕಿಯನ್ನು ನೋಡಿ ಹೀಗೆಂದನು (೧-೨) : ''ವಿದೇಹರಾಜತನಯೆ, ಈ ಮಂದಾಕಿನೀನದಿಯು ಎಷ್ಟು ರಮ್ಯವಾಗಿದೆ ನೋಡು !

ವಿಚಿತ್ರಪುಲಿನಾಂ ರಮ್ಯಾಂ ಹಂಸಸಾರಸಸೇವಿತಾಮ್ ।
ಕಮಲೈರುಪಸಂಪನ್ನಾಂ ಪಶ್ಯ ಮಂದಾಕಿನೀಂ ನದೀಮ್ ॥ ೩

ನಾನಾವಿಧೈಸ್ತೀರರುಹೈರ್ವೃತಾಂ ಪುಷ್ಪಫಲದ್ರುಮೈಃ ।
ರಾಜಂತೀಂ ರಾಜರಾಜಸ್ಯ ನಲಿನೀಮಿವ ಸರ್ವತಃ ॥ ೪

ಮೃಗಯೂಥನಿಪೀತಾನಿ ಕಲುಷಾಂಭಾಂಸಿ ಸಾಂಪ್ರತಮ್ ।
ತೀರ್ಥಾನಿ ರಮಣೀಯಾನಿ ರತಿಂ ಸಂಜನಯಂತಿ ಮೇ ॥ ೫

ಜಟಾಜಿನಧರಾಃ ಕಾಲೇ ವಲ್ಕಲೋತ್ತರವಾಸಸಃ ।
ಋಷಯಸ್ತವಗಾಹಂತೇ ನದೀಂ ಮಂದಾಕಿನಿಂ ಪ್ರಿಯೇ ॥ ೬

ಆದಿತ್ಯಮುಪತಿಷ್ಠಂತೇ ನಿಯಮಾದೂರ್ಧ್ವಬಾಹವಃ ।
ಏತೇ ಪರೇ ವಿಶಾಲಾಕ್ಷಿ ಮುನಯಃ ಸಂಶಿತವ್ರತಾಃ ॥ ೭

ಮಾರುತೋದ್ಧೂತಶಿಖರೈಃ ಪ್ರನೃತ್ತ ಇವ ಪರ್ವತಃ ।
ಪಾದಪೈಃ ಪುತ್ರಪುಷ್ಪಾಣಿ ಸೃಜದ್ಭಿರಭಿತೋ ನದೀಮ್ ॥ ೮

ವಿಚಿತ್ರಾಕೃತಿಯ ಮರಳುದಿಣ್ಣೆಗಳಿಂದಲೂ ಹಂಸಸಾರಸ ಪಕ್ಷಿಗಳಿಂದಲೂ ಶೋಭಿಸುತ್ತಿದೆ. ತಾವರೆಹೂಗಳು ಕಂಗೊಳಿಸುತ್ತಿವೆ (೩). ಹೂಹಣ್ಣುಗಳಿಂದ ಬಳುಕುವ ನಾನಾ ಜಾತಿಯ ತೀರವೃಕ್ಷಗಳು ಹೇಗೆ ಬೆಳೆದಿವೆ! ಕುಬೇರನ ಸೌಗಂಧಿಕಸರೋವರದಂತೆ ಈ ನದಿಯು ಚೆಲುವಾಗಿದೆ. ಮೃಗಗಳ ಹಿಂಡು ಘಟ್ಟಗಳಲ್ಲಿಳಿದು ನೀರನ್ನು ಕುಡಿಯುವುದರಿಂದ ಆ ಭಾಗದ ನೀರು ಕೆಸರಾಗಿದೆ. ಆದರೂ ಈ ಘಟ್ಟಗಳು ನನ್ನ ಮನಸ್ಸಿಗೆ ಆಹ್ಲಾದವನ್ನುಂಟುಮಾಡುತ್ತವೆ (೪-೫). ಪ್ರಿಯೆ, ಕೃಷ್ಣಾಜಿನ ಜಟೆಗಳನ್ನು ಧರಿಸಿ ನಾರುಬಟ್ಟೆಯನ್ನು ಹೊದೆದಿರುವ ಈ ಋಷಿಗಳು ಕಾಲಕಾಲದಲ್ಲಿ ಬಂದು ಈ ನದಿಯಲ್ಲಿ ಸ್ನಾನ ಮಾಡುತ್ತಾರೆ. ವಿಶಾಲಾಕ್ಷಿ, ಇತ್ತ ನೋಡು. ವ್ರತನಿಷ್ಠರಾದ ಈ ಮುನಿಗಳು ಕೈಗಳನ್ನು ಮೇಲೆತ್ತಿ ನಿಯಮಪೂರ್ವಕವಾಗಿ ಸೂರ್ಯೋಪಾಸನೆಯನ್ನು ಮಾಡುತ್ತಿದ್ದಾರೆ (೬-೭). ಗಾಳಿಯಿಂದ ಮರಗಳ ತುದಿ ಅಲ್ಲಾಡುತ್ತಿದೆ. ನದಿಯ ಸುತ್ತಲೂ ಮರಗಳು ಎಲೆ, ಹೂಗಳನ್ನು ಉದುರಿಸುತ್ತಿವೆ. ಇದನ್ನು ನೋಡಿದರೆ ಈ ಪರ್ವತವು ನೃತ್ಯವನ್ನು

ಕ್ವಚಿನ್ಮಣಿನಿಕಾಶೋದಾಂ ಕ್ವಚಿತ್ ಪುಲಿನಶಾಲಿನೀಮ್ ।
ಕ್ವಚಿತ್ ಸಿದ್ಧಜನಾಕೀರ್ಣಾಂ ಪಶ್ಯ ಮಂದಾಕಿನೀಂ ನದೀಮ್ ॥ ೯

ನಿರ್ಧೂತಾನ್ ವಾಯುನಾ ಪಶ್ಯ ವಿತತಾನ್ ಪುಷ್ಪಸಂಚಯಾನ್ ।
ಪೋಪ್ಲೂಯಮಾನಾನಪರಾನ್ ಪಶ್ಯ ತ್ವಂ ಜಲಮಧ್ಯಗಾನ್ ॥ ೧೦

ಪಶ್ಯೈತಾನ್ ವಲ್ಗುವಚಸೋ ರಥಾಂಗಾಹ್ವಯನಾ ದ್ವಿಜಾಃ ।
ಅಧಿರೋಹಂತಿ ಕಲ್ಯಾಣಿ ನಿಷ್ಕೂಜಂತಃ ಶುಭಾ ಗಿರಃ ॥ ೧೧

ದರ್ಶನಂ ಚಿತ್ರಕೂಟಸ್ಯ ಮಂದಾಕಿನ್ಯಾಶ್ಚ ಶೋಭನೇ ।
ಅಧಿಕಂ ಪುರವಾಸಾಚ್ಚ ಮನ್ಯೇ ತವ ಚ ದರ್ಶನಾತ್ ॥ ೧೨

ವಿಧೂತಕಲುಷೈಃ ಸಿದ್ಧೈಸ್ತಪೋದಮಶಮಾನ್ವಿತೈಃ ।
ನಿತ್ಯವಿಕ್ಷೋಭಿತಜಲಾಂ ವಿಗಾಹಸ್ವ ಮಯಾ ಸಹ ॥ ೧೩

ಆರಂಭಿಸುವುದೋ ಎಂದು ಕಾಣುವುದು! (೮). ಈ ಮಂದಾಕಿನಿಯಲ್ಲಿ ಕೆಲವು ಕಡೆ ಮುತ್ತಿನಮಣಿಯಂತೆ ನೀರು ಹರಿಯುವುದನ್ನು ನೋಡು. ಒಂದು ಕಡೆ ಮರಳಿನ ರಾಶಿ ಹರಡಿದೆ. ಇನ್ನೊಂದು ಕಡೆ ಸಿದ್ಧಪುರುಷರು ಬಂದು ನೆರೆದಿದ್ದಾರೆ (೯). ಪ್ರಿಯೆ, ಹೂವಿನ ರಾಶಿಗಳು ಗಾಳಿಗೆ ಹಾರಿಹೋಗುತ್ತಿರುವುದನ್ನು ನೋಡು! ಕೆಲವು ನೀರಿನ ಮಧ್ಯದಲ್ಲಿ ಬಿದ್ದು ತೇಲಿಬರುತ್ತಿರುವುದನ್ನು ನೋಡು! ಮಂಗಳಾಂಗಿ, ಈ ಚಕ್ರವಾಕಪಕ್ಷಿಗಳು 'ಕುಲುಕುಲು' ಎಂದು ಇಂಪಾಗಿ ಕೂಗುತ್ತ ಆ ಹೂವಿನ ರಾಶಿಗಳ ಮೇಲೆ ಹತ್ತಿ ಕುಳಿತುಕೊಳ್ಳುವುದನ್ನು ನೋಡು! (೧೦-೧೧). ಈ ಚಿತ್ರಕೂಟವನ್ನೂ ಮಂದಾಕಿನಿಯನ್ನೂ ನೋಡುತ್ತಿರುವುದು ಅಯೋಧ್ಯೆಯಲ್ಲಿರುವುದಕ್ಕಿಂತ ನನಗೆ ಆನಂದಕರವಾಗಿದೆ. ಶೋಭನೆ, ನೀನು ಪ್ರತ್ಯಕ್ಷವಾಗಿ ನನ್ನ ಬಳಿ ಇರುವುದರಿಂದ ಈ ಆನಂದ ಇಮ್ಮಡಿಸಿದೆ! (೧೨). ಪುಣ್ಯವಂತರೂ ಶಮದಮಾನ್ವಿತರೂ ತಪಸ್ವಿಗಳೂ ಆದ ಸಿದ್ಧರು ಯಾವಾಗಲೂ ಈ ನದಿಯ ಜಲದಲ್ಲಿ ಸ್ನಾನ ಮಾಡುತ್ತಾರೆ. ಈ ಪುಣ್ಯನದಿಯಲ್ಲಿ ನನ್ನೊಡನೆ ಬಂದು ನೀನು ಸ್ನಾನಮಾಡುತ್ತಿರು. ಸೀತೆ, ನನ್ನ ಗೆಳತಿಯಾಗಿ ಬಂದು ಈ ಮಂದಾಕಿನಿಯಲ್ಲಿ ಜಲಕ್ರೀಡೆಯಾಡು. ಇಲ್ಲಿ ಬೆಳೆದಿರುವ ಕೆಂದಾವರೆಗಳೂ ಬಿಳಿಯ

ಸಖೀವಚ್ಚ ವಿಗಾಹಸ್ವ ಸೀತೇ ಮಂದಾಕಿನೀಂ ನದೀಮ್ ।
ಕಮಲಾನ್ಯವಮಜ್ಜಂತೀ ಪುಷ್ಕರಾಣಿ ಚ ಭಾಮಿನಿ ॥ ೧೪

ತ್ವಂ ಪೌರಜನವದ್ವ್ಯಾಲಾನಯೋಧ್ಯಾಮಿವ ಪರ್ವತಮ್ ।
ಮನ್ಯಸ್ವ ವನಿತೇ ನಿತ್ಯಂ ಸರಯೂವದಿಮಾಂ ನದೀಮ್ ॥ ೧೫

ಲಕ್ಷ್ಮಣಶ್ಚಾಪಿ ಧರ್ಮಾತ್ಮಾ ಮನ್ನಿದೇಶೇ ವ್ಯವಸ್ಥಿತಃ ।
ತ್ವಂ ಚಾನುಕೂಲಾ ವೈದೇಹಿ ಪ್ರೀತಿಂ ಜನಯತೋ ಮಮ ॥ ೧೬

ಉಪಸ್ಪೃಶಂಸ್ತ್ರಿಷವಣಂ ಮಧುಮೂಲಫಲಾಶನಃ ।
ನಾಯೋಧ್ಯಾಯೈ ನ ರಾಜ್ಯಾಯ ಸ್ಪೃಹಯೇಽದ್ಯ ತ್ವಯಾ ಸಹ ॥ ೧೭

ಇಮಾಂ ಹಿ ರಮ್ಯಾಂ ಗಜಯೂಥಲೋಲಿತಾಂ
ನಿಪೀತತೋಯಾಂ ಗಜಸಿಂಹವಾನರೈಃ ।
ಸುಪುಷ್ಪಿತೈಃ ಪುಷ್ಪಧರೈರಲಂಕೃತಾಂ
ನ ಸೋಽಸ್ತಿ ಯಃ ಸ್ಯಾದಗತಕ್ಲಮಃ ಸುಖೀ ॥ ೧೮

ಕಮಲಗಳೂ ನಿನ್ನ ಸೌಂದರ್ಯವನ್ನು ಕಂಡು ನಾಚಿ ನೀರಿನಲ್ಲಿ ಮುಳುಗಿಹೋಗಲಿ! (ಆ ಹೂಗಳನ್ನು ಲೀಲೆಯಿಂದ ಮುಳುಗಿಸುತ್ತ ವಿನೋದಿಸು) (೧೩-೧೪). ಈ ವನಚರಪ್ರಾಣಿಗಳು ಪೌರರೆಂದು ಭಾವಿಸಿ ವಾತ್ಸಲ್ಯವನ್ನಿಡು. ಈ ಪರ್ವತವೇ ಅಯೋಧ್ಯೆಯೆಂದು ತಿಳಿ. ಮಂದಾಕಿನಿಯೇ ಸರಯೂನದಿಯೆಂದು ತಿಳಿದುಕೊ (೧೫). ಧರ್ಮಾತ್ಮನಾದ ಲಕ್ಷ್ಮಣನು ನನ್ನ ಮಾತನ್ನು ಪಾಲಿಸುತ್ತ ಅನುಕೂಲನಾಗಿದ್ದಾನೆ. ವೈದೇಹಿ, ನೀನೂ ನನ್ನ ಮನಸ್ಸಿಗೆ ಹಿತವಾಗಿ ನಡೆದುಕೊಳ್ಳುತ್ತಿದ್ದೀಯೆ. ನಿಮ್ಮಿಬ್ಬರಿಂದಲೂ ನನಗೆ ಆನಂದವಾಗಿದೆ (೧೬). ತ್ರಿಸಂಧ್ಯೆಯಲ್ಲಿಯೂ ಇಲ್ಲಿ ಸ್ನಾನಮಾಡುತ್ತ ಜೇನು, ಗಡ್ಡೆಗೆಣಸು, ಹಣ್ಣುಹಂಪಲುಗಳನ್ನು ತಿಂದುಕೊಂಡು, ಸೀತೆ, ನಿನ್ನ ಜೊತೆಯಲ್ಲಿದ್ದರೆ – ನನಗೆ ಅಯೋಧ್ಯೆಯೂ ಬೇಡ! ರಾಜಪದವಿಯೂ ಬೇಡ! (೧೭). ಆನೆಗಳ ಹಿಂಡು ಈ ನದಿಯಲ್ಲಿಳಿದು ನೀರನ್ನು ಕದಡುತ್ತವೆ. ಆನೆ ಸಿಂಹ ಕಪಿಗಳು ಬಂದು ಒತ್ತಟ್ಟಿಗೆ ನೀರು ಕುಡಿದು ಹೋಗುತ್ತವೆ. ಇಂಥ ನದಿಯನ್ನು ನೋಡಿ ಮಿಂದು ದಣಿವು ತೀರಿಸಿಕೊಂಡು ಆನಂದಿಸದ ಮನುಷ್ಯನು ಜಗತ್ತಿನಲ್ಲುಂಟೆ ? "ಎಂದು ಸೀತೆಯೊಡನೆ ಹೇಳಿದನು (೧೮). ಈ ರೀತಿಯಲ್ಲಿ ಶ್ರೀರಾಮನು ಸೀತಾಸಮೇತನಾಗಿ ನದಿಯನ್ನು ವರ್ಣಿಸುತ್ತ

ಇತೀವ ರಾಮೋ ಬಹುಸಂಗತಂ ವಚಃ
ಪ್ರಿಯಾಸಹಾಯಃ ಸರಿತಂ ಪ್ರತಿ ಬ್ರುವನ್ ।
ಚಚಾರ ರಮ್ಯಂ ನಯನಾಂಜನಪ್ರಭಂ
ಸ ಚಿತ್ರಕೂಟಂ ರಘುವಂಶವರ್ಧನಃ ॥ ೧೯

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಪಂಚನವತಿತಮಃ ಸರ್ಗಃ

ಷಣ್ಣವತಿತಮಃ ಸರ್ಗಃ

ಲಕ್ಷ್ಮಣಕ್ರೋಧಃ

ತಾಂ ತಥಾ ದರ್ಶಯಿತ್ವಾ ತು ಮೈಥಿಲೀಂ ಗಿರಿನಿಮ್ನಗಾಮ್ ।
ನಿಷಸಾದ ಗಿರಿಪ್ರಸ್ಥೇ ಸೀತಾಂ ಮಾಂಸೇನ ಛಂದಯನ್ ॥ ೧
ಇದಂ ಮೇಧ್ಯಮಿದಂ ಸ್ವಾದು ನಿಷ್ಟಪ್ತಮಿದಮಗ್ನಿನಾ ।
ಏವಮಾಸ್ತೇ ಸ ಧರ್ಮಾತ್ಮಾ ಸೀತಯಾ ಸಹ ರಾಘವಃ ॥ ೨

ಹಿತಕರವಾದ ಮಾತುಗಳನ್ನಾಡುತ್ತಿದ್ದನು. ಆ ರಘುಕುಲತಿಲಕನು ಕಣ್ಣಿನ ಕಾಡಿಗೆಯಂತೆ ಕಪ್ಪಗೆ ರಮಣೀಯವಾದ ಚಿತ್ರಕೂಟದಲ್ಲಿ ಅಲ್ಲಲ್ಲಿ ಸಂಚರಿಸುತ್ತಿದ್ದನು (೧೯).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ತೊಂಬತ್ತೈದನೆಯ ಸರ್ಗ

ಸರ್ಗ ೯೬

ಭರತನ ಸೇನೆಯನ್ನು ನೋಡಿ ಲಕ್ಷ್ಮಣನ ಕ್ರೋಧ.

ಈ ರೀತಿಯಲ್ಲಿ ಧರ್ಮಾತ್ಮನಾದ ರಾಘವನು ಸೀತೆಗೆ ಆ ಗಿರಿನದಿಯ ಅಂದವನ್ನು ತೋರಿಸಿ ಒಂದು ಸಮಭೂಮಿಯಲ್ಲಿ ಬಂದು ಕುಳಿತನು. ಅವನು ಸೀತೆಯೆದುರಿಗೆ ಮಾಂಸವನ್ನಿಟ್ಟು "ಪ್ರಿಯೆ, ಇದು ಪರಿಶುದ್ಧವಾಗಿದೆ, ಇದು ರುಚಿಯಾಗಿದೆ. ಇದು ಚೆನ್ನಾಗಿ ಬೆಂದಿದೆ (ಇದನ್ನು ಭುಜಿಸು)" ಎಂದು ಹೇಳುತ್ತ ಅವಳನ್ನು ಉಪಚರಿಸುತ್ತಿದ್ದನು (೧-೨). ಹಾಗೆ ಕುಳಿತಿರುವಾಗ ಅತ್ತ ಬರುತ್ತಿದ್ದ ಭರತನ

ತಥಾ ತತ್ರಾಸತಸ್ತಸ್ಯ ಭರತಸ್ಯೋಪಯಾಯಿನಃ ।
ಸೈನ್ಯರೇಣುಶ್ಚ ಶಬ್ದಶ್ಚ ಪ್ರಾದುರಾಸ್ತಾಂ ನಭಸ್ಪೃಶೌ ॥ ೩

ಏತಸ್ಮಿನ್ನಂತರೇ ತ್ರಸ್ತಾಃ ಶಬ್ದೇನ ಮಹತಾ ತತಃ ।
ಅರ್ದಿತಾ ಯೂಥಪಾ ಮತ್ತಾಃ ಸಯೂಥಾ ದುದ್ರುವುರ್ದಿಶಃ ॥ ೪

ಸ ತಂ ಸೈನ್ಯಸಮುದ್ಭೂತ ಶಬ್ದಂ ಶುಶ್ರಾವ ರಾಘವಃ ।
ತಾಂಶ್ಚ ವಿಪ್ರದ್ರುತಾನ್ ಸರ್ವಾನ್ ಯೂಥಪಾನನ್ವವೈಕ್ಷತ ॥ ೫

ತಾಂಶ್ಚ ವಿದ್ರವತೋ ದೃಷ್ಟ್ವಾ ತಂ ಚ ಶ್ರುತ್ವಾ ಮಹಾಸ್ವನಮ್ ।
ಉವಾಚ ರಾಮಃ ಸೌಮಿತ್ರಿಂ ಲಕ್ಷ್ಮಣಂ ದೀಪ್ತತೇಜಸಮ್ ॥ ೬

ಹಂತ ಲಕ್ಷ್ಮಣ ಪಶ್ಯೇಹ ಸುಮಿತ್ರಾ ಸುಪ್ರಜಾಸ್ತ್ವಯಾ ।
ಭೀಮಸ್ತನಿತಗಂಭೀರಸ್ತುಮುಲಃ ಶ್ರೂಯತೇ ಸ್ವನಃ ॥ ೭

ಗಜಯೂಥಾನಿ ವಾರಣ್ಯೇ ಮಹಿಷಾ ವಾ ಮಹಾವನೇ ।
ವಿತ್ರಾಸಿತಾ ಮೃಗಾಃ ಸಿಂಹೈಃ ಸಹಸಾ ಪ್ರದ್ರುತಾ ದಿಶಃ ॥ ೮

ಸೈನ್ಯದ ಧೂಳಿಯೂ ಕೋಲಾಹಲಶಬ್ದವೂ ಆಕಾಶಕ್ಕೆ ಅಡರಿದವು. ಆ ಮಹಾಕೋಲಾಹಲಕ್ಕೆ ಹೆದರಿ ಮದಿಸಿದ ಮೃಗಗಳು ಗುಂಪುಗುಂಪಾಗಿ ದಿಕ್ಕುದಿಕ್ಕಿಗೆ ಓಡಿಹೋದವು (೩-೪). ಶ್ರೀರಾಮನಿಗೆ ಸೈನ್ಯದಿಂದಾದ ಗದ್ದಲವು ಕೇಳಿಸಿತು. ಓಡುತ್ತಿದ್ದ ಮೃಗಗಳ ಹಿಂಡು ಕಾಣಿಸಿತು. ಮೃಗಗಳು ಓಡುವುದನ್ನೂ ಸೈನ್ಯದ ಕೋಲಾಹಲವನ್ನೂ ಕೇಳಿ ಶ್ರೀರಾಮನು ತೇಜಸ್ವಿಯಾದ ಲಕ್ಷ್ಮಣನನ್ನು ಕರೆದು "ಆಹಾ! ಇದೇನು ಲಕ್ಷ್ಮಣ? ನೋಡು ನಿನ್ನನ್ನು ಹಡೆದು ಸುಮಿತ್ರೆ ಧನ್ಯೆಯೆನಿಸಿದಳು. ಭೀಕರವಾದ ಗುಡುಗಿನಂತೆ ಗಂಭೀರವಾದ ಕೋಲಾಹಲಶಬ್ದವು ಕೇಳಿಸುತ್ತದೆಯಲ್ಲ! (೫-೭). ಈ ಮಹಾರಣ್ಯದಲ್ಲಿರುವ ಆನೆಯ ಹಿಂಡುಗಳೂ ಕಾಡುಕೋಣಗಳೂ ಜಿಂಕೆಗಳೂ ಹೆದರಿ ದಿಕ್ಕುದಿಕ್ಕಿಗೆ ಓಡುತ್ತಿವೆಯಲ್ಲ! ಸಿಂಹಗಳಿಗೆ ಹೆದರಿ ಓಡುತ್ತಿರಬಹುದೆ? ಆದರೆ ಸಿಂಹಗಳೂ ಜೊತೆಯಲ್ಲಿ ಪಲಾಯನಮಾಡುತ್ತಿವೆ (೮). ರಾಜನೊ ಅಥವಾ ರಾಜನಂತಿರುವ ಇನ್ನೊಬ್ಬನೊ ಬೇಟೆಯಾಡುತ್ತಿರಬಹುದು. ಇಲ್ಲವೆ,

ರಾಜಾ ವಾ ರಾಜಮಾತ್ರೋ ವಾ ಮೃಗಯಾಮಟತೇ ವನೇ ।
ಅನ್ಯದ್ವಾ ಶ್ವಾಪದಂ ಕಿಂಚಿತ್ ಸೌಮಿತ್ರೇ ಜ್ಞಾತುಮರ್ಹಸಿ ॥ ೯

ಸುದುಶ್ಚರೋ ಗಿರಿಶ್ಚಾಯಂ ಪಕ್ಷಿಣಾಮಪಿ ಲಕ್ಷ್ಮಣ ।
ಸರ್ವಮೇತದ್ಯಥಾತತ್ತ್ವಮಚಿರಾಜ್ಜ್ಞಾತುಮರ್ಹಸಿ ॥ ೧೦

ಸ ಲಕ್ಷ್ಮಣಃ ಸಂತ್ವರಿತಃ ಸಾಲಮಾರುಹ್ಯ ಪುಷ್ಪಿತಮ್ ।
ಪ್ರೇಕ್ಷಮಾಣೋ ದಿಶಃ ಸರ್ವಾಃ ಪೂರ್ವಾಂ ದಿಶಮವೈಕ್ಷತ ॥ ೧೧

ಉದಙ್ಮುಖಃ ಪ್ರೇಕ್ಷಮಾಣೋ ದದರ್ಶ ಮಹತೀಂ ಚಮೂಮ್ ।
ಗಜಾಶ್ವರಥಸಂಬಾಧಾಂ ಯತ್ತೈರ್ಯುಕ್ತಾಂ ಪದಾತಿಭಿಃ ॥ ೧೨

ತಾಮಶ್ವಗಜಸಂಪೂರ್ಣಾಂ ರಥಧ್ವಜವಿಭೂಷಿತಾಮ್ ।
ಶಶಂಸ ಸೇನಾಂ ರಾಮಾಯ ವಚನಂ ಚೇದಮಬ್ರವೀತ್ ॥ ೧೩

ಅಗ್ನಿಂ ಸಂಶಮಯತ್ವಾರ್ಯಃ ಸೀತಾ ಚ ಭಜತಾಂ ಗುಹಾಮ್ ।
ಸಜ್ಯಂ ಕುರುಷ್ವಚಾಪಂ ಚ ಶರಾಂಶ್ಚ ಕವಚಂ ತಥಾ ॥ ೧೪

ಯಾವುದಾದರೊಂದು ಕ್ರೂರಜಂತು ಈ ಪ್ರಾಣಿಗಳನ್ನು ಹೆದರಿಸುತ್ತಿರಬಹುದು. ಲಕ್ಷ್ಮಣ, ಅದೇನೆಂಬುದನ್ನು ಗೊತ್ತುಮಾಡು (೯). ಈ ಬೆಟ್ಟವಾದರೊ ಹೊರಗಡೆಯಿಂದ ಪಕ್ಷಿಗಳೂ ಹಾರಿಬರಲಾರದಷ್ಟು ಉನ್ನತವೂ ದಟ್ಟವೂ ಆಗಿದೆ. ಆದ್ದರಿಂದ, ಲಕ್ಷ್ಮಣ, ಇದರ ಮೂಲವೇನು ಎಂಬುದನ್ನು ಗೊತ್ತುಮಾಡು'' ಎಂದು ಹೇಳಿದನು (೧೦). ಕೂಡಲೆ ಲಕ್ಷ್ಮಣನು ಒಂದು ಮರವನ್ನು ಹತ್ತಿದನು. ಅದರಲ್ಲಿ ಹೂಗಳು ಅರಳಿದ್ದರಿಂದ ಹೆಚ್ಚು ಎಲೆಗಳಿರಲಿಲ್ಲ. ಲಕ್ಷ್ಮಣನು ಮರದ ಮೇಲಿಂದ ಸುತ್ತಲೂ ನೋಡಿ ಪೂರ್ವದಿಕ್ಕನ್ನು ಗಮನಿಸಿ ನೋಡಿದನು (೧೧). ಅನಂತರ ಉತ್ತರ ದಿಕ್ಕಿಗೆ ತಿರುಗಲು ದೊಡ್ಡ ಸೇನೆಯೊಂದು ಕಾಣಿಸಿತು. ಗಜಾಶ್ವರಥಗಳೂ ಕವಚಧಾರಿಗಳಾದ ಪದಾತಿಗಳೂ ಕಾಣಿಸಿದರು (೧೨). ಆಗ ಲಕ್ಷ್ಮಣನು ಚತುರಂಗಸೇನೆಯೊಂದು ಆ ಕಡೆಯಿಂದ ಬರುತ್ತಿದೆಯೆಂದು ಶ್ರೀರಾಮನಿಗೆ ತಿಳಿಸಿ, ಪುನಃ ''ಅಣ್ಣ, ಬೆಂಕಿಯನ್ನಾರಿಸು! ಸೀತಾದೇವಿಯು ಗುಹೆಯೊಳಗೆ ಹೋಗಲಿ! ಧನುಸ್ಸಿಗೆ ಹೆದೆಯೇರಿಸಿ ಬಾಣಗಳನ್ನು

ತಂ ರಾಮಃ ಪುರುಷವ್ಯಾಘ್ರೋ ಲಕ್ಷ್ಮಣಂ ಪ್ರತ್ಯುವಾಚ ಹ ।
ಅಂಗಾವೇಕ್ಷಸ್ವ ಸೌಮಿತ್ರೇ ಕಸ್ಯೇಮಾಂ ಮನ್ಯಸೇ ಚಮೂಮ್ ॥ ೧೫

ಏವಮುಕ್ತಸ್ತು ರಾಮೇಣ ಲಕ್ಷ್ಮಣೋ ವಾಕ್ಯಮಬ್ರವೀತ್ ।
ದಿಧಕ್ಷನ್ನಿವ ತಾಂ ಸೇನಾಂ ರುಷಿತಃ ಪಾವಕೋ ಯಥಾ ॥ ೧೬

ಸಂಪನ್ನಂ ರಾಜ್ಯಮಿಚ್ಛಂಸ್ತು ವ್ಯಕ್ತಂ ಪ್ರಾಪ್ಯಾಭಿಷೇಚನಮ್ ।
ಆವಾಂ ಹಂತುಂ ಸಮಭ್ಯೇತಿ ಭರತಃ ಕೈಕಯೀಸುತಃ ॥ ೧೭

ಏಷ ವೈ ಸುಮಹಾನ್ ಶ್ರೀಮಾನ್ ವಿಟಪೀ ಸಂಪ್ರಕಾಶತೇ ।
ವಿರಾಜತ್ಯುದ್ಗತಸ್ಕಂಧಃ ಕೋವಿದಾರಧ್ವಜೋ ರಥೇ ॥ ೧೮

ಭಜಂತ್ಯೇತೇ ಯಥಾಕಾಮಮಶ್ವಾನಾರುಹ್ಯ ಶೀಘ್ರಗಾನ್ ।
ಏತೇ ಭ್ರಾಜಂತಿ ಸಂಹೃಷ್ಟಾ ಗಜಾನಾರುಹ್ಯ ಸಾದಿನಃ ॥ ೧೯

ಗೃಹೀತಧನುಷೌ ಚಾವಾಂ ಗಿರಿಂ ವೀರ ಶ್ರಯಾವಹೇ ।
ಅಥವೇಹೈವ ತಿಷ್ಠಾವಃ ಸಂನದ್ಧಾವುದ್ಯತಾಯುಧೌ ॥ ೨೦

ಸಿದ್ಧಪಡಿಸಿಕೊ! ಕವಚವನ್ನು ತೊಡು!'' ಎಂದು ಕೂಗಿದನು (೧೩-೧೪). ಆದಕ್ಕೆ ಉತ್ತರವಾಗಿ ಶ್ರೀರಾಮನು ''ಸರಿಯಾಗಿ ನೋಡು, ಸೌಮಿತ್ರಿ, ಆದು ಯಾರ ಸೇನೆಯೆಂದು ನಿನ್ನ ಅಭಿಪ್ರಾಯ?'' ಎಂದು ಕೇಳಿದನು. ಲಕ್ಷ್ಮಣನು ಆ ದಿಕ್ಕಿನ ಕಡೆಗೆ ನೋಡುತ್ತ ಬೆಂಕಿಯಂತೆ ಸಿಡಿದೆದ್ದನು. ಸೇನೆಯನ್ನು ಸುಟ್ಟುಬಿಡುವನೋ ಎಂಬಂತೆ ಕೆಂಗಣ್ಣಿನಿಂದ ದುರದುರನೆ ನೋಡುತ್ತ ಹೀಗೆಂದನು (೧೫-೧೬) : ''ಪಟ್ಟಾಭಿಷೇಕ ಮಾಡಿಸಿಕೊಂಡಿದ್ದಲ್ಲದೆ ತನ್ನ ರಾಜ್ಯವು ನಿಷ್ಕಂಟಕವಾಗಿರಲೆಂದು ಉದ್ದೇಶಿಸಿದ್ದಾನೆ. ಆ ಕೈಕೇಯಿಯ ಮಗನು ನಮ್ಮನ್ನು ಸಂಹರಿಸಬೇಕೆಂದು ಬರುತ್ತಿದ್ದಾನೆ; ನಿಶ್ಚಯ (೧೭). ರಥದಲ್ಲಿ ಭವ್ಯಾಕಾರದ ದೊಡ್ಡ ಕೋವಿದಾರಧ್ವಜವು ಕಾಣಿಸುತ್ತಿದೆ. ಮೇಲೆದ್ದ ಕೊಂಬೆಗಳಿರುವ ಮರದ ಚಿಹ್ನೆ ಸ್ಪಷ್ಟವಾಗಿದೆ. ರಾಹುತರು ವೇಗಶಾಲಿಗಳಾದ ಕುದುರೆಗಳನ್ನೇರಿ ತಡೆಯಿಲ್ಲದೆ ಇತ್ತ ಬರುತ್ತಿದ್ದಾರೆ. ಗಜಾರೋಹಿಗಳಾದ ಯೋಧರು ಆನೆಗಳನ್ನೇರಿ ಹರ್ಷದಿಂದಿರುವುದು ಕಾಣುತ್ತದೆ (೧೮-೧೯). ಶ್ರೀರಾಮ, ನಾವು ಧನುರ್ಧಾರಿಗಳಾಗಿ ಈ ಬೆಟ್ಟದ ಒಂದು ದುರ್ಗಪ್ರದೇಶಕ್ಕೆ ಹೋಗಿ ನಿಲ್ಲೋಣ. ಅಥವಾ ಆಯುಧಗಳನ್ನು ಸರಿಪಡಿಸಿಕೊಂಡು ಇಲ್ಲಿಯೇ ಯುದ್ಧಸನ್ನದ್ಧರಾಗಿ ಇರೋಣ! (೨೦).

ಅಪಿ ನೌ ವಶಮಾಗಚ್ಛೇತ್ ಕೋವಿದಾರಧ್ವಜೋ ರಣೇ ।
ಅಪಿ ದ್ರಕ್ಷ್ಯಾಮಿ ಭರತಂ ಯತ್ಕೃತೇ ವ್ಯಸನಂ ಮಹತ್ ॥ ೨೧

ತ್ವಯಾ ರಾಘವ ಸಂಪ್ರಾಪ್ತಂ ಸೀತಯಾ ಚ ಮಯಾ ತಥಾ ।
ಯನ್ನಿಮಿತ್ತಂ ಭವಾನ್ ರಾಜ್ಯಾಚ್ಚ್ಯುತೋ ರಾಘವ ಶಾಶ್ವತಾತ್ ॥ ೨೨

ಸಂಪ್ರಾಪ್ತೋಽಯಮರಿರ್ವೀರ ಭರತೋ ವಧ್ಯ ಏವ ಮೇ ।
ಭರತಸ್ಯ ವಧೇ ದೋಷಂ ನಾಹಂ ಪಶ್ಯಾಮಿ ರಾಘವ ॥ ೨೩

ಪೂರ್ವಾಪಕಾರಿಣಂ ಹತ್ವಾ ನ ಹ್ಯಧರ್ಮೇಣ ಯುಜ್ಯತೇ ।
ಪೂರ್ವಾಪಕಾರೀ ಭರತಸ್ತ್ಯಕ್ತಧರ್ಮಶ್ಚ ರಾಘವ ॥ ೨೪

ಏತಸ್ಮಿನ್ನಿಹತೇ ಕೃತ್ಸ್ನಾಮನುಶಾಧಿ ವಸುಂಧರಾಮ್ ।
ಅದ್ಯ ಪುತ್ರಂ ಹತಂ ಸಂಖ್ಯೇ ಕೈಕೇಯೀ ರಾಜ್ಯಕಾಮುಕಾ ॥ ೨೫

ಮಯಾ ಪಶ್ಯೇತ್ ಸುದುಃಖಾರ್ತಾ ಹಸ್ತಿಭಗ್ನಮಿವ ದ್ರುಮಮ್ ।
ಕೈಕೇಯೀಂ ಚ ವಧಿಷ್ಯಾಮಿ ಸಾನುಬಂಧಾಂ ಸಬಾಂಧವಾಮ್ ॥ ೨೬

ರಣರಂಗದಲ್ಲಿ ಈ ಕೋವಿದಾರ ಧ್ವಜವು ಯಾವಾಗ ನಮ್ಮ ವಶವಾದೀತೋ! ಆ ಭರತನನ್ನು ಯಾವಾಗ ಕಂಡೇನೊ! ಇವನಿಂದಲೇ ಅಲ್ಲವೆ ನಮಗೆ ಮಹತ್ತರವಾದ ಕಷ್ಟ ಬಂದಿದೆ? ಅಣ್ಣ, ಇವನಿಗೋಸ್ಕರವೇ ಅಲ್ಲವೆ ಶಾಶ್ವತವಾಗಿ ಬರಬೇಕಾದ ರಾಜ್ಯವು ನಿನಗೆ ತಪ್ಪಿ ಹೋಯಿತು? (೨೧-೨೨). ವೀರಾಗ್ರಣಿ, ಈ ವೈರಿಯು ಇಂದು ಕೈಗೆ ಸಿಕ್ಕಿಬಿದ್ದನು. ಭರತನನ್ನು ನಾನು ಕೊಂದು ಹಾಕುವುದೇ ದಿಟ. ಭರತನನ್ನು ಕೊಲ್ಲುವುದರಲ್ಲಿ ಯಾವ ತಪ್ಪನ್ನೂ ಕಾಣೆ (೨೩). ನಿಷ್ಕಾರಣವಾಗಿ ನಿನಗೆ ಮೊದಲು ಅಪಕಾರಮಾಡಿದವನನ್ನು ಕೊಂದರೆ ಪಾಪವಿಲ್ಲ. ಭರತನು ನಿಷ್ಕಾರಣವಾಗಿ ಮೊದಲು ಅಪಕಾರ ಮಾಡಿದ್ದಾನೆ. ಧರ್ಮವನ್ನು ತ್ಯಜಿಸಿದ್ದಾನೆ (೨೪). ಇವನನ್ನು ವಧಿಸಿದ ಮೇಲೆ ಸಮಸ್ತರಾಜ್ಯವನ್ನೂ ನೀನು ಆಳಬಹುದು. ರಾಜ್ಯಕ್ಕಾಗಿ ದುರಾಸೆಪಟ್ಟ ಕೈಕೇಯಿ ಈ ದಿನ ಯುದ್ಧದಲ್ಲಿ ಸತ್ತುಬಿದ್ದಿರುವ ತನ್ನ ಮಗನನ್ನು ಬಂದು ನೋಡಲಿ! ಮದ್ದಾನೆಯು ಮರವನ್ನು ಉರುಳಿಸುವಂತೆ ಅವನನ್ನು ಕೊಂದು ಉರುಳಿಸುತ್ತೇನೆ! ಆಮೇಲೆ ಕೈಕೇಯಿಯನ್ನೂ ಕೊಂದುಹಾಕಿ ಬುಡಬೇರುಸಹಿತ ಅವಳ ಬಂಧುಗಳನ್ನೂ ಧ್ವಂಸಮಾಡುತ್ತೇನೆ! (೨೫-೨೬). ಮಹತ್ತರವಾದ ಈ ಪಾಪಶೇಷವು ಭೂಮಿಯಿಂದ ತೊಡೆದುಹೋಗಲಿ!

ಕಲುಷೇಣಾದ್ಯ ಮಹತಾ ಮೇದಿನೀ ಪರಿಮುಚ್ಯತಾಮ್ ।
ಅದ್ಯೇಮಂ ಸಂಯತಂ ಕ್ರೋಧಮಸತ್ಕಾರಂ ಚ ಮಾನದ ॥ ೨೭

ಮೋಕ್ಷ್ಯಾಮಿ ಶತ್ರುಸೈನ್ಯೇಷು ಕಕ್ಷೇಷ್ವಿವ ಹುತಾಶನಮ್ ।
ಅದ್ಯೈತಚ್ಚಿತ್ರಕೂಟಸ್ಯ ಕಾನನಂ ನಿಶಿತೈಃ ಶರೈಃ ॥ ೨೮

ಭಿಂದನ್ ಶತ್ರುಶರೀರಾಣಿ ಕರಿಷ್ಯೇ ಶೋಣಿತೋಕ್ಷಿತಮ್ ।
ಶರೈರ್ನಿರ್ಭಿನ್ನಹೃದಯಾನ್ ಕುಂಜರಾಂಸ್ತುರಗಾಂಸ್ತಥಾ ॥ ೨೯

ಶ್ವಾಪದಾಃ ಪರಿಕರ್ಷಂತು ನರಾಂಶ್ಚ ನಿಹತಾನ್ ಮಯಾ ।
ಶರಾಣಾಂ ಧನುಷಶ್ಚಾಹಮನೃಣೋಽಸ್ಮಿನ್ ಮಹಾಮೃಧೇ ॥ ೩೦

ಸಸೈನ್ಯಂ ಭರತಂ ಹತ್ವಾ ಭವಿಷ್ಯಾಮಿ ನ ಸಂಶಯಃ ॥

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಷಣ್ಣವತಿತಮಃ ಸರ್ಗಃ

***

ಇದುವರೆಗೆ ನಾನು ತಡೆಹಿಡಿದಿದ್ದ ಸಿಟ್ಟನ್ನು ಅವಮಾನವನ್ನೂ ಶತ್ರುಸೈನ್ಯದ ಮೇಲೆ ಕಾರುವೆನು. ಒಣಹುಲ್ಲುರಾಶಿಗೆ ಬೆಂಕಿಯಿಟ್ಟಂತೆ ಮಾಡುವೆನು. ನಿಶಿತಾಸ್ತ್ರಗಳಿಂದ ಶತ್ರುಗಳನ್ನು ಕಡಿಕಡಿದು, ಚಿತ್ರಕೂಟದ ಅರಣ್ಯವನ್ನು ಈ ದಿನ ರಕ್ತದಲ್ಲಿ ನೆನೆಯಿಸುವೆನು (೨೭-೨೮). ನನ್ನ ಬಾಣಗಳಿಂದ ಎದೆಯೊಡೆದು ಕಡಿದುರುಳಿದ ಆನೆ, ಕುದುರೆ, ಮನುಷ್ಯರನ್ನು ಕಾಡುಮೃಗಗಳು ಎಳೆದಾಡಲಿ! ಈ ಮಹಾಯುದ್ಧದಲ್ಲಿ ಭರತನನ್ನೂ ಅವನ ಸೈನ್ಯವನ್ನೂ ಸಂಹರಿಸಿ ಬಲಿಕೊಟ್ಟು ನನ್ನ ಧನುರ್ಬಾಣಗಳ ಋಣವನ್ನು ತೀರಿಸಿಕೊಳ್ಳುವೆನು'' ಎಂದು ಆರ್ಭಟಿಸಿದನು (೨೯-೩೦).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ತೊಂಬತ್ತಾರನೆಯ ಸರ್ಗ

***

ಸಪ್ತನವತಿತಮಃ ಸರ್ಗಃ

ಭರತಗುಣಪ್ರಶಂಸಾ

ಸುಸಂರಬ್ಧಂ ತು ಸೌಮಿತ್ರಿಂ ಲಕ್ಷ್ಮಣಂ ಕ್ರೋಧಮೂರ್ಛಿತಮ್ ।
ರಾಮಸ್ತು ಪರಿಸಾಂತ್ವ್ಯಾಥ ವಚನಂ ಚೇದಮಬ್ರವೀತ್ ॥ ೧

ಕಿಮತ್ರ ಧನುಷಾ ಕಾರ್ಯಮಸಿನಾ ವಾ ಸಚರ್ಮಣಾ ।
ಮಹೇಷ್ವಾಸೇ ಮಹಾಪ್ರಾಜ್ಞೇ ಭರತೇ ಸ್ವಯಮಾಗತೇ ॥ ೨

ಪಿತುಃ ಸತ್ಯಂ ಪ್ರತಿಶ್ರುತ್ಯ ಹತ್ವಾ ಭರತಮಾಗತಮ್ ।
ಕಿಂ ಕರಿಷ್ಯಾಮಿ ರಾಜ್ಯೇನ ಸಾಪವಾದೇನ ಲಕ್ಷ್ಮಣ ॥ ೩

ಯದ್ದ್ರವ್ಯಂ ಬಾಂಧವಾನಾಂ ವಾ ಮಿತ್ರಾಣಾಂ ವಾ ಕ್ಷಯೇ ಭವೇತ್ ।
ನಾಹಂ ತತ್ ಪ್ರತಿಗೃಹ್ಣೀಯಾಂ ಭಕ್ಷಾನ್ ವಿಷಕೃತಾನಿವ ॥ ೪

ಧರ್ಮಮರ್ಥಂ ಚ ಕಾಮಂ ಚ ಪೃಥಿವೀಂ ಚಾಪಿ ಲಕ್ಷ್ಮಣ ।
ಇಚ್ಛಾಮಿ ಭವತಾಮರ್ಥೆ ಏತತ್ ಪ್ರತಿಶೃಣೋಮಿ ತೇ ॥ ೫

ಸರ್ಗ ೯೭

ಶ್ರೀರಾಮನು ಭರತನ ಸದ್ಗುಣಗಳನ್ನು ವರ್ಣಿಸಿ ಲಕ್ಷ್ಮಣನನ್ನು ಸಂತೈಸುವುದು.

ಹೀಗೆ ಕೋಪಾವಿಷ್ಟನಾಗಿ ವಿಚಾರವಿಲ್ಲದೆ ಉರಿದುಬೀಳುತ್ತಿದ್ದ ಲಕ್ಷ್ಮಣನನ್ನು ಸಂತೈಸುತ್ತ ಶ್ರೀರಾಮನು ಈ ಪ್ರಕಾರ ಹೇಳಿದನು : ''ಲಕ್ಷ್ಮಣ, ಮಹಾಶೂರನೂ ಅತ್ಯಂತ ವಿವೇಕಿಯೂ ಆದ ಭರತನೇ ತಾನು ಬಂದಾಗ ನಾವು ಮಾಡಬೇಕಾದ್ದೇನಿದೆ? ಧನುಸ್ಸಿನಿಂದಾಗಲಿ ಕತ್ತಿಢಾಲುಗಳಿಂದಾಗಲಿ ಉಪಯೋಗವೇನು? (೧-೨). ಸತ್ಯವಾಗಿ ಆಜ್ಞೆಯನ್ನು ನಡೆಸುತ್ತೇನೆಂದು ನಾನು ತಂದೆಗೆ ಮಾತುಕೊಟ್ಟು ಈಗ ಇಲ್ಲಿಗೆ ಬಂದ ಭರತನನ್ನು ಸಂಹರಿಸಲೆ? ಕೆಟ್ಟ ಹೆಸರನ್ನು ತರುವ ಈ ರಾಜ್ಯವನ್ನು ಕಟ್ಟಿಕೊಂಡು ಏನು ಮಾಡಲಿ? (೩). ಬಂಧುಗಳೂ ಮಿತ್ರರೂ ಹಾಳಾದ್ದರಿಂದ ದೊರಕುವ ಹಣವನ್ನು ನಾನು ಎಂದಿಗೂ ಮುಟ್ಟಲಾರೆ. ಅದು ವಿಷಮಿಶ್ರವಾದ ಭಕ್ಷ್ಯವೆಂದು ತಿಳಿಯುತ್ತೇನೆ. ಲಕ್ಷ್ಮಣ, ಆಣೆಮಾಡಿ ಹೇಳುತ್ತೇನೆ, ಕೇಳು: ಧರ್ಮಾರ್ಥ ಕಾಮಗಳನ್ನಾಗಲಿ ಈ ಪೃಥ್ವಿಯನ್ನಾಗಲಿ

ಭ್ರಾತೄಣಾಂ ಸಂಗ್ರಹಾರ್ಥಂ ಚ ಸುಖಾರ್ಥಂ ಚಾಪಿ ಲಕ್ಷ್ಮಣ ।
ರಾಜ್ಯಮಪ್ಯಹಮಿಚ್ಛಾಮಿ ಸತ್ಯೇನಾಯುಧಮಾಲಭೇ ॥ ೬

ನೇಯಂ ಮಮ ಮಹೀ ಸೌಮ್ಯ ದುರ್ಲಭಾ ಸಾಗರಾಂಬರಾ ।
ನ ಹೀಚ್ಛೇಯಮಧರ್ಮೇಣ ಶಕ್ರತ್ವಮಪಿ ಲಕ್ಷ್ಮಣ ॥ ೭

ಯದ್ವಿನಾ ಭರತಂ ತ್ವಾಂ ಚ ಶತ್ರುಘ್ನಂ ಚಾಪಿ ಮಾನದ ।
ಭವೇನ್ಮಮ ಸುಖಂ ಕಿಂಚಿದ್ಭಸ್ಮ ತತ್ ಕುರುತಾಂ ಶಿಖೀ ॥ ೮

ಮನ್ಯೇಽಹಮಾಗತೋಽಯೋಧ್ಯಾಂ ಭರತೋ ಭ್ರಾತೃವತ್ಸಲಃ ।
ಮಮ ಪ್ರಾಣಾತ್ ಪ್ರಿಯತರಃ ಕುಲಧರ್ಮಮನುಸ್ಮರನ್ ॥ ೯

ಶ್ರುತ್ವಾ ಪ್ರವ್ರಾಜಿತಂ ಮಾಂ ಹಿ ಜಟಾವಲ್ಕಲಧಾರಿಣಮ್ ।
ಜಾನಕ್ಯಾ ಸಹಿತಂ ವೀರ ತ್ವಯಾ ಚ ಪುರುಷರ್ಷಭ ॥ ೧೦

ಸ್ನೇಹೇನಾಕ್ರಾಂತಹೃದಯಃ ಶೋಕೇನಾಕುಲಿತೇಂದ್ರಿಯಃ ।
ದ್ರಷ್ಟುಮಭ್ಯಾಗತೋ ಹ್ಯೇಷ ಭರತೋ ನಾನ್ಯಥಾಗತಃ ॥ ೧೧

ನಿಮಗೋಸ್ಕರವೇ ನಾನು ಬಯಸುತ್ತೇನೆ (೪-೫). ಆಯುಧವನ್ನು ಮುಟ್ಟಿ ಸತ್ಯಮಾಡಿ ಹೇಳುತ್ತೇನೆ; ತಮ್ಮಂದಿರ ಜೊತೆಗೂಡಿ ಇರಬೇಕೆಂದೂ ಅವರಿಗೆ ಸುಖವಾಗಬೇಕೆಂದೂ ನಾನು ರಾಜ್ಯವನ್ನು ಬಯಸುವೆನೇ ಹೊರತು ನನಗೋಸ್ಕರವಲ್ಲ (೬). ಲಕ್ಷ್ಮಣ, ಸಮುದ್ರಪರ್ಯಂತವಾದ ಈ ಜಗತ್ತನ್ನೇ ಗೆದ್ದು ವಶಪಡಿಸಿಕೊಳ್ಳುವುದು ನನಗೇನೂ ಅಶಕ್ಯವಲ್ಲ. ಆದರೆ ಅಧರ್ಮದಿಂದ ದೇವೇಂದ್ರ ಪದವಿಯು ಬಂದರೂ ನನಗೆ ಬೇಡ (೭). ಭರತನನ್ನೂ ನಿನ್ನನ್ನೂ ಶತ್ರುಘ್ನನನ್ನೂ ಬಿಟ್ಟು ನಿಮಗಿಲ್ಲದ ಸುಖ ನನಗೆ ಬರುವುದಾದರೆ, ಅದನ್ನು ಬೆಂಕಿಯಲ್ಲಿ ಸುಡಬೇಕು (೮). ನನಗೆ ಹೀಗೆ ತೋರುತ್ತದೆ: ಪ್ರಾಣಕ್ಕಿಂತಲೂ ನನಗೆ ಪ್ರಿಯತರನಾದ ಭರತನು ಅಯೋಧ್ಯೆಗೆ ಬಂದಿದ್ದಾನೆ. ಆ ಭ್ರಾತೃವತ್ಸಲನು ತನ್ನ ಕುಲಧರ್ಮವನ್ನು ಸ್ಮರಿಸಿಕೊಂಡಿದ್ದಾನೆ. ನಾನು ಜಟಾವಲ್ಕಲಧಾರಿಯಾಗಿ ಜಾನಕಿಯನ್ನೂ ನಿನ್ನನ್ನೂ ಜೊತೆಗೂಡಿ ಕಾಡಿಗೆ ಬರಬೇಕಾದ ಸಂಗತಿಯನ್ನು ಕೇಳಿದ್ದಾನೆ (೯-೧೦). ಲಕ್ಷ್ಮಣ, ಆಗ ಅವನ ಹೃದಯದಲ್ಲಿ ನಮ್ಮ ಮೇಲಿನ ಸ್ನೇಹವು ಉಕ್ಕಿದೆ. ಶೋಕದಿಂದ ಇಂದ್ರಿಯಗಳು ಕಂಗೆಟ್ಟಿವೆ. ಭರತನು ಪ್ರೇಮದಿಂದ ನಮ್ಮನ್ನು ನೋಡಲು ಬಂದಿದ್ದಾನೆ. ಅವನು ಬೇರೆ ಯಾವ ದುರ್ಭಾವನೆಯಿಂದಲೂ

ಅಂಬಾಂ ಚ ಕೈಕಯೀಂ ರುಷ್ಯ ಪರುಷಂ ಚಾಪ್ರಿಯಂ ವದನ್ ।
ಪ್ರಸಾದ್ಯ ಪಿತರಂ ಶ್ರೀಮಾನ್ ರಾಜ್ಯಂ ಮೇ ದಾತುಮಾಗತಃ ॥ ೧೨

ಪ್ರಾಪ್ತಕಾಲಂ ಯದೇಷೋಽಸ್ಮಾನ್ ಭರತೋ ದ್ರಷ್ಟುಮಿಚ್ಛತಿ ।
ಅಸ್ಮಾಸು ಮನಸಾಪ್ಯೇಷ ನಾಹಿತಂ ಕಿಂಚಿದಾಚರೇತ್ ॥ ೧೩

ವಿಪ್ರಿಯಂ ಕೃತಪೂರ್ವಂ ತೇ ಭರತೇನ ಕದಾ ನು ಕಿಮ್ ।
ಈದೃಶಂ ವಾ ಭಯಂ ತೇಽದ್ಯ ಭರತಂ ಯದ್ವಿಶಂಕಸೇ ॥ ೧೪

ನ ಹಿ ತೇ ನಿಷ್ಠುರಂ ವಾಚ್ಯೋ ಭರತೋ ನಾಪ್ರಿಯಂ ವಚಃ ।
ಅಹಂ ಹ್ಯಪ್ರಿಯಮುಕ್ತಃ ಸ್ಯಾಂ ಭರತಸ್ಯಾಪ್ರಿಯೇ ಕೃತೇ ॥ ೧೫

ಕಥಂ ನು ಪುತ್ರಾಃ ಪಿತರಂ ಹನ್ಯುಃ ಕಸ್ಯಾಂಚಿದಾಪದಿ ।
ಭ್ರಾತಾ ವಾ ಭ್ರಾತರಂ ಹನ್ಯಾತ್ ಸೌಮಿತ್ರೇ ಪ್ರಾಣಮಾತ್ಮನಃ ॥ ೧೬

ಯದಿ ರಾಜ್ಯಸ್ಯ ಹೇತೋಸ್ತ್ವಮಿಮಾಂ ವಾಚಂ ಪ್ರಭಾಷಸೇ ।
ವಕ್ಷ್ಯಾಮಿ ಭರತಂ ದೃಷ್ಟ್ವಾ ರಾಜ್ಯಮಸ್ಮೈ ಪ್ರದೀಯತಾಮ್ ॥ ೧೭

ಬಂದಿಲ್ಲ (೧೧). ಅವನು ತಾಯಿಯಾದ ಕೈಕೇಯಿಯ ಮೇಲೆ ಕೋಪಗೊಂಡು ಅವಳಿಗೆ ಕಠೋರವಾದ ಕೆಟ್ಟ ಮಾತುಗಳನ್ನು ಹೇಳದೆ ಇಲ್ಲ. ಆಮೇಲೆ ತಂದೆಗೆ ಸಮಾಧಾನವನ್ನು ಹೇಳಿ ರಾಜ್ಯವನ್ನು ನನಗೆ ಅರ್ಪಿಸುವುದಕ್ಕಾಗಿ ಬಂದಿದ್ದಾನೆ (೧೨). ಇಂಥ ಸಮಯದಲ್ಲಿ ಭರತನು ನಮ್ಮನ್ನು ನೋಡಲಿಚ್ಛಿಸುವುದು ಉಚಿತವೇ ಸರಿ. ಅವನು ಮನಸ್ಸಿನಲ್ಲಿಯೂ ನಮಗೆ ಕೇಡನ್ನೆಣಿಸತಕ್ಕವನಲ್ಲ. ಲಕ್ಷ್ಮಣ, ಭರತನು ಹಿಂದೆ ಯಾವಾಗಲಾದರೂ ನಿನಗೆ ಅಪ್ರಿಯವನ್ನು ಮಾಡಿದ್ದುಂಟೆ? ಇಂಥ ಭಯವನ್ನು ಹುಟ್ಟಿಸುವ ಮಾತನ್ನು ಆಡಿದ್ದುಂಟೆ? ಅವನ ವಿಷಯದಲ್ಲಿ ಸಂದೇಹಪಡುವೆಯಲ್ಲ! (೧೩-೧೪). ನೀನು ಭರತನ ವಿಷಯದಲ್ಲಿ ನಿಷ್ಠುರವಾಗಿ ಮಾತನಾಡಬಾರದು. ಬೇಸರದ ನುಡಿಯನ್ನು ನುಡಿಯಬಾರದು. ಹಾಗೆ ಹೇಳಿದರೆ ಆ ಮಾತನ್ನು ನನಗೆ ಹೇಳಿದಂತೆಯೇ ಸರಿ. ಸೌಮಿತ್ರಿ, ಎಂತಹ ವಿಪತ್ತೇ ಬರಲಿ, ಮಕ್ಕಳು ತಂದೆಯನ್ನು ಕೊಲ್ಲುವುದುಂಟೆ? ಸೋದರನು ತನ್ನ ಅಣ್ಣತಮ್ಮಂದಿರನ್ನು ಕೊಲ್ಲಬಹುದೆ? ಅಣ್ಣತಮ್ಮಂದಿರು ತನ್ನ ಪ್ರಾಣವಲ್ಲವೆ? (೧೫-೧೬). ನೀನೇನಾದರೂ ರಾಜ್ಯದ ಆಸೆಯಿಂದ ಇಂಥ ಮಾತನ್ನು ಆಡುತ್ತಿರುವೆಯೋ ಹೇಗೆ? ಹಾಗಿದ್ದರೆ, ನಾನು ಭರತನನ್ನು

ಉಚ್ಯಮಾನೋಽಪಿ ಭರತೋ ಮಯಾ ಲಕ್ಷ್ಮಣ ತತ್ತ್ವಶಃ ।
ರಾಜ್ಯಮಸ್ಮೈ ಪ್ರಯಚ್ಛೇತಿ ಬಾಢಮಿತ್ಯೇವ ವಕ್ಷ್ಯತಿ ॥ ೧೮

ತಥೋಕ್ತೋ ಧರ್ಮಶೀಲೇನ ಭ್ರಾತ್ರಾ ತಸ್ಯ ಹಿತೇ ರತಃ ।
ಲಕ್ಷ್ಮಣಃ ಪ್ರವಿವೇಶೇವ ಸ್ವಾನಿ ಗಾತ್ರಾಣಿ ಲಜ್ಜಯಾ ॥ ೧೯

ತದ್ವಾಕ್ಯಂ ಲಕ್ಷ್ಮಣಃ ಶ್ರುತ್ವಾ ವ್ರೀಡಿತಃ ಪ್ರತ್ಯುವಾಚ ಹ ।
ತ್ವಾಂ ಮನ್ಯೇ ದ್ರಷ್ಟುಮಾಯಾತಃ ಪಿತಾ ದಶರಥಃ ಸ್ವಯಮ್ ॥ ೨೦

ವ್ರೀಡಿತಂ ಲಕ್ಷ್ಮಣಂ ದೃಷ್ಟ್ವಾ ರಾಘವಃ ಪ್ರತ್ಯುವಾಚ ಹ ।
ಏಷ ಮನ್ಯೇ ಮಹಾಬಾಹುರಿಹಾಸ್ಮಾನ್ ದ್ರಷ್ಟುಮಾಗತಃ ॥ ೨೧

ಅಥವಾ ನೌ ಧ್ರುವಂ ಮನ್ಯೇ ಮನ್ಯಮಾನಃ ಸುಖೋಚಿತೌ ।
ವನವಾಸಮನುಧ್ಯಾಯ ಗೃಹಾಯ ಪ್ರತಿನೇಷ್ಯತಿ ॥ ೨೨

ಕಂಡಾಗ 'ಭರತ, ರಾಜ್ಯವನ್ನು ಲಕ್ಷ್ಮಣನಿಗೆ ಕೊಟ್ಟುಬಿಡು' ಎಂದು ಹೇಳುತ್ತೇನೆ (೧೭). ನಾನು ಹಾಗೆ ಹೇಳಿದರೆ, ಲಕ್ಷ್ಮಣ, ಭರತನು ನಿಜವಾಗಿಯೂ 'ಆಗಲಿ' ಎಂದೇ ಮನಃಪೂರ್ವಕವಾಗಿ ಹೇಳುವನು'' ಎಂದು ಶ್ರೀರಾಮನು ಲಕ್ಷ್ಮಣನಿಗೆ ಹೇಳಿದನು (೧೮). ಹೀಗೆ ಧರ್ಮಶೀಲನಾದ ಅಣ್ಣನು ಹೇಳಲಾಗಿ ಅವನ ಹಿತದಲ್ಲಿಯೇ ಆಸಕ್ತನಾದ ಲಕ್ಷ್ಮಣನಿಗೆ ಬಹಳ ನಾಚಿಕೆಯಾಯಿತು. ಅವನು ಲಜ್ಜೆಯಿಂದ ಕುಗ್ಗಿ ತನ್ನ ದೇಹದಲ್ಲಿಯೇ ತಾನು ಅಡಗಿಕೊಳ್ಳುವಂತಾಯಿತು (೧೯). ಅವನು ಲಜ್ಜೆಯಿಂದ ''ಅಣ್ಣ ಒಂದು ವೇಳೆ ದಶರಥಮಹಾರಾಜನೇ ನಿನ್ನನ್ನು ನೋಡಲು ಬಂದಿರಬಹುದು ಎಂದನು. ಲಕ್ಷ್ಮಣನು ಲಜ್ಜಿತನಾದುದನ್ನು ಕಂಡು ಶ್ರೀರಾಮನು (ಅವನನ್ನು ಸಂತೈಸುವುದಕ್ಕಾಗಿ) ''ತಮ್ಮ ಹಾಗಿದ್ದರೂ ಇರಬಹುದು, ಮಹಾರಾಜರು ನಮ್ಮನ್ನು ನೋಡಲು ಬಂದಿರಬಹುದು (೨೦-೨೧). ಅಥವಾ ನಾವು ಸುಖವಾಗಿ ಇರಬೇಕಾದವರೆಂದೂ ವನವಾಸವು ನಮಗೆ ಅನುಚಿತವೆಂದೂ ನಿಶ್ಚಯಿಸಿ ನಮ್ಮನ್ನು ಅಯೋಧ್ಯೆಗೆ ಕರೆದುಕೊಂಡು ಹೋಗಲು ಉದ್ದೇಶಿಸಿರಬೇಕು. ಅಲ್ಲದಿದ್ದರೆ, 'ಈ ವೈದೇಹಿಯು ಸುಖವಾಗಿಯೇ ಬೆಳೆದವಳು, (ಇವಳು ಕಾಡಿನಲ್ಲಿರುವುದು ಬೇಡ)'

ಇಮಾಂ ವಾಪ್ಯೇಷ ವೈದೇಹೀಮತ್ಯಂತಸುಖಸೇವಿನೀಮ್ ।
ಪಿತಾ ಮೇ ರಾಘವಃ ಶ್ರೀಮಾನ್ ವನಾದಾದಾಯ ಯಾಸ್ಯತಿ ॥ ೨೩

ಏತೌ ತೌ ಸಂಪ್ರಕಾಶೇತೇ ಗೋತ್ರವಂತೌ ಮನೋರಮೌ ।
ವಾಯುವೇಗಸಮೌ ವೀರ ಜವನೌ ತುರಗೋತ್ತಮೌ ॥ ೨೪

ಸ ಏಷ ಸುಮಹಾಕಾಯಃ ಕಂಪತೇ ವಾಹಿನೀಮುಖೇ ।
ನಾಗಃ ಶತ್ರುಂಜಯೋ ನಾಮ ವೃದ್ಧಸ್ತಾತಸ್ಯ ಧೀಮತಃ ॥ ೨೫

ನ ತು ಪಶ್ಯಾಮಿ ತಚ್ಛತ್ರಂ ಪಾಂಡರಂ ಲೋಕಸತ್ಕೃತಮ್ ।
ಪಿತುರ್ದಿವ್ಯಂ ಮಹಾಬಾಹೋ ಸಂಶಯೋ ಭವತೀಹ ಮೇ ॥ ೨೬

ವೃಕ್ಷಾಗ್ರಾದವರೋಹ ತ್ವಂ ಕುರು ಲಕ್ಷ್ಮಣ ಮದ್ವಚಃ ।
ಇತೀವ ರಾಮೋ ಧರ್ಮಾತ್ಮಾ ಸೌಮಿತ್ರಿಂ ತಮುವಾಚ ಹ ॥ ೨೭

ಅವತೀರ್ಯ ತು ಸಾಲಾಗ್ರಾತ್ತಸ್ಮಾತ್ ಸ ಸಮಿತಿಂಜಯಃ ।
ಲಕ್ಷ್ಮಣಃ ಪ್ರಾಂಜಲಿರ್ಭೂತ್ವಾತಸ್ಥೌ ರಾಮಸ್ಯ ಪಾರ್ಶ್ವತಃ ॥ ೨೮

ಎಂದು ನಿರ್ಣಯಿಸಿ ಪೂಜ್ಯನಾದ ನಮ್ಮ ತಂದೆ ಬಂದಿದ್ದಾನೆ. ಅವನು ಸೀತೆಯನ್ನಾದರೂ ಇಲ್ಲಿಂದ ಕರೆದುಕೊಂಡೇ ಹೋಗುವನು (೨೨-೨೩). ಲಕ್ಷ್ಮಣ, (ಅಲ್ಲಿ ನೋಡು!) ವಾಯುವೇಗದಿಂದ ಓಡುವ ಸುಂದರಾಕೃತಿಯ ನಮ್ಮ ಜಾತ್ಯಶ್ವಗಳೆರಡೂ ಚೆನ್ನಾಗಿ ಕಾಣಿಸುತ್ತಿವೆ. ಸೇನೆಯ ಎದುರಿಗೆ ಬೃಹದಾಕಾರದ ಶತ್ರುಂಜಯವೆಂಬ ಆನೆ ತೂಗಾಡುತ್ತ ಬರುತ್ತಿದೆ. ಧೀಮಂತನಾದ ನಮ್ಮ ತಂದೆಯ ಪಟ್ಟದಾನೆ ಇದು. ಮುದಿಯಾಗುತ್ತ ಬಂದಿತು (೨೪-೨೫). ಆದರೆ, ಮಹಾಬಾಹು, ಇದೇನು? ನಮ್ಮ ತಂದೆಯ ದಿವ್ಯವೂ ಲೋಕಪೂಜ್ಯವೂ ಆದ ಶ್ವೇತಚ್ಛತ್ರವು ಕಾಣಿಸುವುದಿಲ್ಲವಲ್ಲ! ನನಗೆ ಕಳವಳವಾಗುತ್ತಿದೆ. ಲಕ್ಷ್ಮಣ, ನೀನು ಮರದಿಂದ ಕೆಳಗೆ ಇಳಿದು ಬಾ'' ಎಂದು ನುಡಿದನು (೨೬-೨೭). ಆಮೇಲೆ ವೀರಾಗ್ರಣಿಯಾದ ಲಕ್ಷ್ಮಣನು ಆ ಮರದ ತುದಿಯಿಂದ ಇಳಿದು ಬಂದು ಶ್ರೀರಾಮನ ಪಾರ್ಶ್ವದಲ್ಲಿ ಕೈಮುಗಿದುಕೊಂಡು ನಿಂತನು. ಇತ್ತ ಭರತನು ಯಾವ ಗದ್ದಲವನ್ನೂ ಮಾಡದೆ ದೂರದಲ್ಲಿರಬೇಕೆಂದು ಸೈನ್ಯಕ್ಕೆ ಆಜ್ಞಾಪಿಸಲಾಗಿ, ಆ

ಭರತೇನಾಥ ಸಂದಿಷ್ಟಾ ಸಂಮರ್ದೋ ನ ಭವೇದಿತಿ ।
ಸಮಂತಾತ್ತಸ್ಯ ಶೈಲಸ್ಯ ಸೇನಾ ವಾಸಮಕಲ್ಪಯತ್ ॥ ೨೯

ಅಧ್ಯರ್ಧಮಿಕ್ಷ್ವಾಕುಚಮೂರ್ಯೋಜನಂ ಪರ್ವತಸ್ಯ ಸಾ ।
ಪಾರ್ಶ್ವೇ ನ್ಯವಿಶದಾವೃತ್ಯ ಗಜವಾಜಿರಥಾಕುಲಾ ॥ ೩೦

ಸಾ ಚಿತ್ರಕೂಟೇ ಭರತೇನ ಸೇನಾ
ಧರ್ಮಂ ಪುರಸ್ಕೃತ್ಯ ವಿಧೂಯ ದರ್ಪಮ್ ।
ಪ್ರಸಾದನಾರ್ಥಂ ರಘುನಂದನಸ್ಯ
ವಿರಾಜತೇ ನೀತಿಮತಾ ಪ್ರಣೀತಾ ॥ ೩೧

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತನವತಿತಮಃ ಸರ್ಗಃ

❁❁❁

ಸೈನ್ಯವು ಚಿತ್ರಕೂಟದ ಸುತ್ತಲೂ ತಳ ಊರಿತು (೨೮-೨೯). ಆನೆ ಕುದುರೆ ರಥಗಳಿಂದ ತುಂಬಿದ್ದ ಆ ಇಕ್ಷ್ವಾಕುಸೇನೆಯು ಪರ್ವತದ ಪಾರ್ಶ್ವದಲ್ಲಿ ಒಂದೂವರೆ ಯೋಜನದವರೆಗೆ ವ್ಯಾಪಿಸಿತು. ನೀತಿವಂತನಾದ ಭರತನು ಶ್ರೀರಾಮನ ಮನಸ್ಸನ್ನು ಒಲಿಸಿಕೊಳ್ಳಬೇಕೆಂದು ದರ್ಪವನ್ನು ಬದಿಗೊತ್ತಿ ಧರ್ಮವನ್ನು ಪುರಸ್ಕರಿಸಿ ತನ್ನ ಸೇನೆಯು ದೂರವಿರಬೇಕೆಂದು ವ್ಯವಸ್ಥೆ ಮಾಡಿದನು (೩೦-೩೧).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ತೊಂಬತ್ತೇಳನೆಯ ಸರ್ಗ

❁❁❁

ಅಷ್ಟನವತಿತಮಃ ಸರ್ಗಃ

ರಾಮಾನ್ವೇಷಣಮ್

ನಿವೇಶ್ಯ ಸೇನಾಂ ತು ವಿಭುಃ ಪದ್ಭ್ಯಾಂ ಪಾದವತಾಂ ವರಃ ।
ಅಭಿಗಂತುಂ ಸ ಕಾಕುತ್ಸ್ಥಮಿಯೇಷ ಗುರುವರ್ತಕಮ್ ॥ ೧

ನಿವಿಷ್ಟಮಾತ್ರೇ ಸೈನ್ಯೇ ತು ಯಥೋದ್ದೇಶಂ ವಿನೀತವತ್ ।
ಭರತೋ ಭ್ರಾತರಂ ವಾಕ್ಯಂ ಶತ್ರುಘ್ನಮಿದಮಬ್ರವೀತ್ ॥ ೨

ಕ್ಷಿಪ್ರಂ ವನಮಿದಂ ಸೌಮ್ಯ ನರಸಂಘೈಃ ಸಮಂತತಃ ।
ಲುಬ್ಧೈಶ್ಚ ಸಹಿತೈರೇಭಿಸ್ತ್ವಮನ್ವೇಷಿತುಮರ್ಹಸಿ ॥ ೩

ಗುಹೋ ಜ್ಞಾತಿಸಹಸ್ರೇಣ ಶರಚಾಪಾಸಿಧಾರಿಣಾ ।
ಸಮನ್ವೇಷತು ಕಾಕುತ್ಸ್ಥಾವಸ್ಮಿನ್ ಪರಿವೃತ್ತಃ ಸ್ವಯಮ್ ॥ ೪

ಅಮಾತ್ಯೈಃ ಸಹ ಪೌರೈಶ್ಚ ಗುರುಭಿಶ್ಚ ದ್ವಿಜಾತಿಭಿಃ ।
ವನಂ ಸರ್ವಂ ಚರಿಷ್ಯಾಮಿ ಪದ್ಭ್ಯಾಂ ಪರಿವೃತಃ ಸ್ವಯಮ್ ॥ ೫

ಸರ್ಗ ೯೮

ಭರತನು ಪಾದಚಾರಿಯಾಗಿ ಶ್ರೀರಾಮನನ್ನು ಹುಡುಕುವುದು.

ಹೊಗೆಯ ಗುರುತಿನಿಂದ ಶ್ರೀರಾಮನ ಪರ್ಣಶಾಲೆಯನ್ನು ಗೊತ್ತುಮಾಡುವುದು.

ಪುರುಷಶ್ರೇಷ್ಠನಾದ ಭರತನು ಸೇನೆಯನ್ನು ವ್ಯವಸ್ಥೆಯಿಂದ ನಿಲ್ಲಿಸಿ ತಂದೆಯ ಆಜ್ಞೆಯಂತೆ ನಡೆಯುತ್ತಿದ್ದ ಕಾಕುತ್ಸ್ಥನ ಬಳಿಗೆ ಪಾದಚಾರಿಯಾಗಿ ಹೊರಟನು (೧). ಸೈನ್ಯವು ಗೊತ್ತಾದ ಸ್ಥಳದಲ್ಲಿ ವಿನಯದಿಂದ ನಿಂತುಕೊಳ್ಳಲು, ಭರತನು ಶತ್ರುಘ್ನನನ್ನು ಕರೆದು ಹೀಗೆಂದನು : 'ವತ್ಸ ನಮ್ಮ ಕೆಲವು ಸೇವಕರನ್ನೂ ಈ ಬೇಡರನ್ನೂ ಕರೆದುಕೊಂಡು, ನೀನು ಈ ವನದ ಸುತ್ತಲೂ ಹುಡುಕು. ಗುಹನು ಶಸ್ತ್ರಧಾರಿಗಳಾದ ತನ್ನ ಬಂಧುಗಳೊಡನೆ ರಾಮಲಕ್ಷ್ಮಣರನ್ನು ಅನ್ವೇಷಿಸಲಿ (೨-೪). ನಾನು ಅಮಾತ್ಯರನ್ನೂ ಪೌರರನ್ನೂ ಗುರುಜನರನ್ನೂ ಕೆಲವು ಮಂದಿ ಬ್ರಾಹ್ಮಣರನ್ನೂ ಸಂಗಡ ಕರೆದುಕೊಂಡು ಕಾಲ್ನಡಿಗೆಯಿಂದಲೇ ಈ ಅರಣ್ಯವನ್ನು ಸುತ್ತುವೆನು (೫).

ಯಾವನ್ನ ರಾಮಂ ದ್ರಕ್ಷ್ಯಾಮಿ ಲಕ್ಷ್ಮಣಂ ವಾ ಮಹಾಬಲಮ್ ।
ವೈದೇಹೀಂ ವಾ ಮಹಾಭಾಗಾಂ ನ ಮೇ ಶಾಂತಿರ್ಭವಿಷ್ಯತಿ ॥ ೬

ಯಾವನ್ನ ಚಂದ್ರಸಂಕಾಶಂ ದ್ರಕ್ಷ್ಯಾಮಿ ಶುಭಮಾನನಮ್ ।
ಭ್ರಾತುಃ ಪದ್ಮಪಲಾಶಾಕ್ಷಂ ನ ಮೇ ಶಾಂತಿರ್ಭವಿಷ್ಯತಿ ॥ ೭

ಯಾವನ್ನ ಚರಣೌ ಭ್ರಾತುಃ ಪಾರ್ಥಿವವ್ಯಂಜನಾನ್ವಿತೌ ।
ಪ್ರಗ್ರಹೀಷ್ಯಾಮಿ ಶಿರಸಾ ನ ಮೇ ಶಾಂತಿರ್ಭವಿಷ್ಯತಿ ॥ ೮

ಯಾವನ್ನ ರಾಜ್ಯೇ ರಾಜ್ಯಾರ್ಹಃ ಪಿತೃಪೈತಾಮಹೇ ಸ್ಥಿತಃ ।
ಅಭಿಷೇಕಜಲಕ್ಲಿನ್ನೋ ನ ಮೇ ಶಾಂತಿರ್ಭವಿಷ್ಯತಿ ॥ ೯

ಸಿದ್ಧಾರ್ಥಃ ಖಲು ಸೌಮಿತ್ರಿರ್ಯಶ್ಚಂದ್ರವಿಮಲೋಪಮಮ್ ।
ಮುಖಂ ಪಶ್ಯತಿ ರಾಮಸ್ಯ ರಾಜೀವಾಕ್ಷಂ ಮಹಾದ್ಯುತಿ ॥ ೧೦

ಕೃತಕೃತ್ಯಾ ಮಹಾಭಾಗಾ ವೈದೇಹಿ ಜನಕಾತ್ಮಜಾ ।
ಭರ್ತಾರಂ ಸಾಗರಾಂತಾಯಾಃ ಪೃಥಿವ್ಯಾ ಯಾನುಗಚ್ಛತಿ ॥ ೧೧

ಶ್ರೀರಾಮನನ್ನಾಗಲಿ ಬಡಾಢ್ಯನಾದ ಲಕ್ಷ್ಮಣನನ್ನಾಗಲಿ ಭಾಗ್ಯಶಾಲಿನಿಯಾದ ಸೀತಾದೇವಿಯನ್ನಾಗಲಿ ಕಂಡ ಹೊರತು ನನ್ನ ಮನಸ್ಸಿಗೆ ನೆಮ್ಮದಿಯಾಗದು (೬). ಚಂದ್ರಮಂಡಲದಂತೆ ರಮಣೀಯವಾಗಿ, ಪದ್ಮದಳದಂತೆ ನೇತ್ರಗಳಿರುವ, ಅಣ್ಣನ ಮುಖವನ್ನು ಕಂಡ ಹೊರತು ನನಗೆ ನೆಮ್ಮದಿಯಾಗದು. ಅಣ್ಣನ ರಾಜಲಕ್ಷಣಲಕ್ಷಿತವಾದ ಪಾದಗಳನ್ನು ತನ್ನ ತಲೆಯ ಮೇಲೆ ಇಟ್ಟುಕೊಂಡ ಹೊರತು ನನಗೆ ನೆಮ್ಮದಿಯಾಗದು (೭-೮). ರಾಜಪದವಿಗೆ ಅರ್ಹನಾದ ಶ್ರೀರಾಮನು ಪಿತೃಪಿತಾಮಹಪರಂಪರೆಯಿಂದ ಬಂದ ರಾಜ್ಯದಲ್ಲಿ ನೆಲೆಗೊಂಡು ಪಟ್ಟಾಭಿಷಿಕ್ತನಾದ ಹೊರತು ನನ್ನ ಮನಸ್ಸಿಗೆ ನೆಮ್ಮದಿಯಿಲ್ಲ(೯). ಆಹಾ! ಲಕ್ಷ್ಮಣನೇ ಧನ್ಯ! ನಿರ್ಮಲವಾದ ಚಂದ್ರಬಿಂಬದಂತಿರುವ ಅಣ್ಣನ ಮುಖವನ್ನು ಯಾವಾಗಲೂ ನೋಡುತ್ತಿರುವನು. ಕಮಲದಂತಹ ಕಣ್ಣು! ಎಷ್ಟು ತೇಜಸ್ವಿಯಾದ ಮುಖ! (೧೦). ಜನಕಪುತ್ರಿಯಾದ ವೈದೇಹಿಯೇ ಧನ್ಯೆ! ಅವಳೇ ಮಹಾಭಾಗ್ಯವಂತೆ! ಸಮುದ್ರಪರ್ಯಂತವಾದ ಪೃಥಿವಿಗೆ ಅಧಿಪತಿಯಾದ

ಸುಭಗಶ್ಚಿತ್ರಕೂಟೋಽಸೌ ಗಿರಿರಾಜೋಪಮೋ ಗಿರಿಃ ।
ಯಸ್ಮಿನ್ ವಸತಿ ಕಾಕುತ್ಸ್ಥಃ ಕುಬೇರ ಇವ ನಂದನೇ ॥ ೧೨

ಕೃತಕಾರ್ಯಮಿದಂ ದುರ್ಗಂ ವನಂ ವ್ಯಾಲನಿಷೇವಿತಮ್ ।
ಯದಧ್ಯಾಸ್ತೇ ಮಹಾತೇಜಾ ರಾಮಃ ಶಸ್ತ್ರಭೃತಾಂ ವರಃ ॥ ೧೩

ಏವಮುಕ್ತ್ವಾ ಮಹಾತೇಜ ಭರತಃ ಪುರುಷರ್ಷಭಃ ।
ಪದ್ಭ್ಯಾಮೇವ ಮಹಾಬಾಹುಃ ಪ್ರವಿವೇಶ ಮಹದ್ವನಮ್ ॥ ೧೪

ಸ ತಾನಿ ದ್ರುಮಜಾಲಾನಿ ಜಾತಾನಿ ಗಿರಿಸಾನುಷು ।
ಪುಷ್ಪಿತಾಗ್ರಾಣಿ ಮಧ್ಯೇನ ಜಗಾಮ ವದತಾಂ ವರಃ ॥ ೧೫

ಸ ಗಿರೇಶ್ಚಿತ್ರ ಕೂಟಸ್ಯ ಸಾಲಮಾಸಾದ್ಯ ಪುಷ್ಪಿತಮ್ ।
ರಾಮಾಶ್ರಮಗತಸ್ಯಾಗ್ನೇರ್ದದರ್ಶ ಧ್ವಜಮುಚ್ಛ್ರಿತಮ್ ॥ ೧೬

ಮಹಾಪುರುಷನನ್ನು ಹಿಂಬಾಲಿಸಿ ಹೋಗಿದ್ದಾಳೆ (೧೧). ಈ ಚಿತ್ರಕೂಟಪರ್ವತವೇ ಸುಂದರವಾದದ್ದು ಇದೇ ಭಾಗ್ಯಶಾಲಿ! ಇದು ಪರ್ವತರಾಜನೆನಿಸುವ ಯೋಗ್ಯತೆಯನ್ನು ಪಡೆಯಿತು! ಇಲ್ಲಿಗೆ ಬಂದು ಶ್ರೀರಾಮನು ವಾಸಮಾಡುತ್ತಿರುವನಲ್ಲವೆ? ಕುಬೇರನು ನಂದನವನಕ್ಕೆ ಬಂದಂತಾಗಿದೆ (೧೨). ಕ್ರೂರಮೃಗಗಳಿದ್ದರೂ ದುರ್ಗಮವಾಗಿದ್ದರೂ ಈ ಅರಣ್ಯವು ತನ್ನ ಕರ್ತವ್ಯವನ್ನು ನೆರವೇರಿಸಿ ಧನ್ಯವಾಯಿತು. ಮಹಾತೇಜಸ್ವಿಯೂ ವೀರಾಗ್ರೇಸರನೂ ಆದ ಶ್ರೀರಾಮನಿಗೆ ಇದು ಆಶ್ರಯವನ್ನು ಕೊಟ್ಟಿದೆ!'' (೧೩). ಈ ರೀತಿಯಲ್ಲಿ ಪುರುಷೋತ್ತಮನೂ ಆಜಾನುಬಾಹುವೂ ಆದ ಭರತನು ನುಡಿದು ಕಾಲ್ನಡಿಗೆಯಿಂದಲೇ ಆ ಘೋರಾರಣ್ಯವನ್ನು ಪ್ರವೇಶಿಸಿದನು (೧೪). ಮರಗಳ ತುದಿಯಲ್ಲಿ ಅರಳಿದ ಹೂಗಳು ಕಾಣುತ್ತಿದ್ದವು. ಬೆಟ್ಟದ ತಪ್ಪಲುಗಳಲ್ಲಿ ಬೆಳೆದಿದ್ದ ಆ ಮರಗಳ ರಾಶಿಯ ಸಂದಿಯಲ್ಲಿ ನುಗ್ಗುತ್ತ ಆತನು ಮುಂದೆ ಹೋದನು (೧೫). ಹೀಗೆ ಹೋಗುತ್ತ ಭರತನು ಚಿತ್ರಕೂಟದಲ್ಲಿದ್ದ ಒಂದು ಪುಷ್ಪಿತ ವೃಕ್ಷದ ಬಳಿಯನ್ನು ಸೇರಿದನು. ಅಲ್ಲಿ ಶ್ರೀರಾಮನ ಆಶ್ರಮದಿಂದ ಹೊರಡುತ್ತಿದ್ದ ಹೊಗೆಯು ಕಾಣಿಸಿತು. ಆದನ್ನು

ತಂ ದೃಷ್ಟ್ವಾ ಭರತಃ ಶ್ರೀಮಾನ್ ಮುಮೋದ ಸಹಬಾಂಧವಃ ।
ಅತ್ರ ರಾಮ ಇತಿ ಜ್ಞಾತ್ವಾ ಗತಃ ಪಾರಮಿವಾಂಭಸಃ ॥ ೧೭

ಸ ಚಿತ್ರಕೂಟೇ ತು ಗಿರೌ ನಿಶಮ್ಯ
ರಾಮಾಶ್ರಮಂ ಪುಣ್ಯಜನೋಪಪನ್ನಮ್ ।
ಗುಹೇನ ಸಾರ್ಧಂ ತ್ವರಿತೋ ಜಗಾಮ
ಪುನರ್ನಿವೇಶ್ಯೈವ ಚಮೂಂ ಮಹಾತ್ಮಾ ॥ ೧೮

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಅಷ್ಟನವತಿತಮಃ ಸರ್ಗಃ

ಕಂಡೊಡನೆ ಭರತನೂ ಅವನ ಪರಿವಾರದವರೂ ಆನಂದದಿಂದ ಹಿಗ್ಗಿದರು. ಅಲ್ಲಿ ಶ್ರೀರಾಮನಿರುವನೆಂದು ಭರತನು ನಿಶ್ಚಯಿಸಿದನು. ನೀರಿನಲ್ಲಿ ಕೊಚ್ಚಿಹೋಗುವವನಿಗೆ ದಡವು ಸಿಕ್ಕಿದಂತಾಯಿತು (೧೬-೧೭). ಅವನು ಆ ಚಿತ್ರಕೂಟದಲ್ಲಿ ಸಜ್ಜನಸೇವಿತವಾದ ಶ್ರೀರಾಮನ ಆಶ್ರಮವನ್ನು ಗುರುತಿಸಿದೊಡನೆ, ಪುನಃ ತನ್ನ ಪರಿವಾರವನ್ನು ಅಲ್ಲಿಯೇ ನಿಲ್ಲಿಸಿ ಗುಹನನ್ನು ಕರೆದುಕೊಂಡು ತ್ವರೆಯಿಂದ ಮುಂದೆ ಹೋದನು (೧೮).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ತೊಂಬತ್ತೆಂಟನೆಯ ಸರ್ಗ

ಏಕೋನಶತತಮಃ ಸರ್ಗಃ

ರಾಮಸಮಾಗಮಃ

ನಿವಿಷ್ಟಾಯಾಂ ತು ಸೇನಾಯಾಮುತ್ಸುಕೋ ಭರತಸ್ತತಃ ।
ಜಗಾಮ ಭ್ರಾತರಂ ದ್ರಷ್ಟುಂ ಶತ್ರುಘ್ನಮನುದರ್ಶಯನ್ ॥ ೧

ಋಷಿಂ ವಸಿಷ್ಠಂ ಸಂದಿಶ್ಯ ಮಾತೄರ್ಮೇ ಶೀಘ್ರಮಾನಯ ।
ಇತಿ ತ್ವರಿತಮಗ್ರೇ ಸ ಜಗಾಮ ಗುರುವತ್ಸಲಃ ॥ ೨

ಸುಮಂತ್ರಸ್ತ್ವಪಿ ಶತ್ರುಘ್ನಮದೂರಾದನ್ವಪದ್ಯತ ।
ರಾಮದರ್ಶನಜಸ್ತರ್ಷೋ ಭರತಸ್ಯೇವ ತಸ್ಯ ಚ ॥ ೩

ಗಚ್ಛನ್ನೇವಾಥ ಭರತಸ್ತಾಪಸಾಲಯಸಂಸ್ಥಿತಾಮ್ ।
ಭ್ರಾತುಃ ಪರ್ಣಕುಟೀಂ ಶ್ರೀಮಾನುಟಜಂ ಚ ದದರ್ಶ ಹ ॥ ೪

ಶಾಲಾಯಾಸ್ತ್ವಗ್ರತಸ್ತಸ್ಯಾ ದದರ್ಶ ಭರತಸ್ತದಾ ।
ಕಾಷ್ಠಾನಿ ಚಾವಭಗ್ನಾನಿ ಪುಷ್ಪಾಣ್ಯುಪಚಿತಾನಿ ಚ ॥ ೫

ಸರ್ಗ ೯೯

ಭರತನು ಶ್ರೀರಾಮನನ್ನು ದರ್ಶನ ಮಾಡುವುದು.

ಭರತನು ಪರಿವಾರವನ್ನು ಹಿಂದೆ ನಿಲ್ಲಿಸಿ ಶ್ರೀರಾಮನನ್ನು ನೋಡುವ ಉತ್ಸಾಹದಿಂದ ಶತ್ರುಘ್ನನಿಗೆ ಆಶ್ರಮದ ಚಿಹ್ನೆಗಳನ್ನು ತೋರಿಸುತ್ತ ಮುಂದೆ ಹೋದನು. ಹೋಗುವಾಗ ವಸಿಷ್ಠ ಋಷಿಗಳಿಗೆ ತನ್ನ ತಾಯಂದಿರನ್ನು ಬೇಗನೆ ಕರೆದುಕೊಂಡು ಬರಬೇಕೆಂದು ತಿಳಿಸಿ, ತಾನು ತ್ವರೆಯಿಂದ ಸಾಗಿದನು (೧-೨). ಸುಮಂತ್ರನೂ ಶತ್ರುಘ್ನನ ಸಮೀಪದಲ್ಲಿ ಧಾವಿಸುತ್ತ ಭರತನೊಡನೆ ಹೋದನು. ಭರತನಿಗಿದ್ದಂತೆ ಶತ್ರುಘ್ನ ಸುಮಂತರಿಗೂ ಶ್ರೀರಾಮನನ್ನು ನೋಡುವ ಕುತೂಹಲವು ತೀವ್ರವಾಗಿತ್ತು (೩). ಮುಂದೆ ಭರತನು ಋಷಿಗಳ ಪರ್ಣಶಾಲೆಯಂತಿದ್ದ ಪರ್ಣರಚಿತವಾದ ಒಂದು ಮಂಟಪವನ್ನೂ ಒಂದು ಗುಡಿಸಲನ್ನೂ ಕಂಡನು. ಆ ಪರ್ಣಶಾಲೆಯ ಎದುರಿಗೆ ಮುರಿದು ರಾಶಿ ಹಾಕಿದ ಸೌದೆಗಳೂ ಕಿತ್ತಿಟ್ಟಿದ್ದ ಹೂಗಳೂ ಕಾಣಿಸಿದವು (೪-೫).

ಸಲಕ್ಷ್ಮಣಸ್ಯ ರಾಮಸ್ಯ ದದರ್ಶಾಶ್ರಮಮೀಯುಷಃ ।
ಕೃತಂ ವೃಕ್ಷೇಷ್ವಭಿಜ್ಞಾನಂ ಕುಶಚೀರೈಃ ಕ್ವಚಿತ್ ಕ್ವಚಿತ್ ॥ ೬

ದದರ್ಶ ಚ ವನೇ ತಸ್ಮಿನ್ ಮಹತಃ ಸಂಚಯಾನ್ ಕೃತಾನ್ ।
ಮೃಗಾಣಾಂ ಮಹಿಷಾಣಾಂ ಚ ಕರೀಷೈಃ ಶೀತಕಾರಣಾತ್ ॥ ೭

ಗಚ್ಛನ್ನೇವ ಮಹಾಬಾಹುರ್ದ್ಯುತಿಮಾನ್ ಭರತಸ್ತದಾ ।
ಶತ್ರುಘ್ನಂ ಚಾಬ್ರವೀದ್ಧೃಷ್ಟಸ್ತಾನಮಾತ್ಯಾಂಶ್ಚ ಸರ್ವಶಃ ॥ ೮

ಮನ್ಯೇ ಪ್ರಾಪ್ತಾಃ ಸ್ಮ ತಂ ದೇಶಂ ಭರದ್ವಾಜೋ ಯಮಬ್ರವೀತ್ ।
ನಾತಿದೂರೇ ಹಿ ಮನ್ಯೇಽಹಂ ನದೀಂ ಮಂದಾಕಿನೀಮಿತಃ ॥ ೯

ಉಚ್ಚೈರ್ಬದ್ಧಾನಿ ಚೀರಾಣಿ ಲಕ್ಷ್ಮಣೇನ ಭವೇದಯಮ್ ।
ಅಭಿಜ್ಞಾನಕೃತಃ ಪಂಥಾ ವಿಕಾಲೇ ಗಂತುಮಿಚ್ಛತಾ ॥ ೧೦

ಇದಂ ಚೋದಾತ್ತದಂತಾನಾಂ ಕುಂಜರಾಣಾಂ ತರಸ್ವಿನಾಮ್ ।
ಶೈಲಪಾರ್ಶ್ವೇ ಪರಿಕ್ರಾಂತಮನ್ಯೋನ್ಯಮಭಿಗರ್ಜತಾಮ್ ॥ ೧೧

ಆಶ್ರಮದಲ್ಲಿದ್ದ ರಾಮಲಕ್ಷ್ಮಣರು (ಕಾಡುದಾರಿಯನ್ನು ಗುರುತಿಸುವುದಕ್ಕಾಗಿ) ಮರಗಳ ಮೇಲೆ ಅಲ್ಲಲ್ಲಿ ದರ್ಭೆಗಳಿಂದಲೂ ನಾರುಬಟ್ಟೆಯ ತುಂಡುಗಳಿಂದಲೂ ಮಾಡಿಕೊಂಡಿದ್ದ ಚಿಹ್ನೆಗಳು ಗೋಚರಿಸಿದವು (೬). ಚಳಿಯನ್ನು ತಡೆಯಲಾರದೆ ಬೆಂಕಿಯನ್ನು ಕಾಯಿಸುವುದಕ್ಕಾಗಿ ಜಿಂಕೆ ಮತ್ತು ಕಾಡುಕೋಣಗಳ ಬೆರಣಿಯನ್ನು ರಾಶಿ ಹಾಕಿರುವುದು ಕಾಣಿಸಿತು. ಅವುಗಳನ್ನು ಗಮನಿಸಿ ನೋಡುತ್ತ ಭರತನು ಮುಂದೆ ಹೋಗುತ್ತಲೇ ಇದ್ದನು. ಅವನು ಶತ್ರುಘ್ನನನ್ನೂ ತನ್ನ ಜೊತೆಗೆ ಬರುತ್ತಿದ್ದ ಇತರ ಮಂತ್ರಿಗಳನ್ನೂ ಕುರಿತು ಹೀಗೆಂದನು (೭-೮): "ಭರದ್ವಾಜರು ಹೇಳಿದ ಸ್ಥಳಕ್ಕೆ ನಾವು ಬಂದೆವೆಂದು ತೋರುವುದು. ಸಮೀಪದಲ್ಲಿಯೇ ಮಂದಾಕಿನೀ ನದಿಯು ಹರಿಯುತ್ತಿರಬೇಕು. ಎತ್ತರದಲ್ಲಿ ಕಾಣಿಸುವ ಈ ನಾರುಬಟ್ಟೆಗಳನ್ನು ಲಕ್ಷ್ಮಣನು ಕಟ್ಟಿರಬೇಕು. ಅಕಾಲದಲ್ಲಿ ಹೊರಗೆ ಹೋಗಬೇಕಾಗಿ ಬಂದರೆ ದಾರಿಯನ್ನು ಗುರುತಿಸಲು ಕಟ್ಟಿದ್ದಾನೆ (೯-೧೦). ತೀಕ್ಷ್ಣದಂತಗಳಿರುವ ಆನೆಗಳು ಅನ್ಯೋನ್ಯ ಸ್ಪರ್ಧೆಯಿಂದ ಗರ್ಜಿಸುತ್ತ ಭರದಿಂದ ಅಲೆದಾಡಿದ ಸ್ಥಳವಿದು. ತಾಪಸರು ಪ್ರಾತಃಸಾಯಂಕಾಲಗಳಲ್ಲಿ

ಯಮೇವಾಧಾತುಮಿಚ್ಛಂತಿ ತಾಪಾಸಾಃ ಸತತಂ ವನೇ ।
ತಸ್ಯಾಸೌ ದೃಶ್ಯತೇ ಧೂಮಃ ಸಂಕುಲಃ ಕೃಷ್ಣವರ್ತ್ಮನಃ ॥ ೧೨

ಅತ್ರಾಹಂ ಪುರುಷವ್ಯಾಘ್ರಂ ಗುರುಸಂಸ್ಕಾರಕಾರಿಣಮ್ ।
ಆರ್ಯಂ ದ್ರಕ್ಷ್ಯಾಮಿ ಸಂಹೃಷ್ಟಂ ಮಹರ್ಷಿಮಿವ ರಾಘವಮ್ ॥ ೧೩

ಅಥ ಗತ್ವಾಮುಹೂರ್ತಂ ತು ಚಿತ್ರಕೂಟಂ ಸ ರಾಘವಃ ।
ಮಂದಾಕಿನೀಮನುಪ್ರಾಪ್ತಸ್ತಂ ಜನಂ ಚೇದಮಬ್ರವೀತ್ ॥ ೧೪

ಜಗತ್ಯಾಂ ಪುರುಷವ್ಯಾಘ್ರ ಆಸ್ತೇ ವೀರಾಸನೇ ರತಃ ।
ಜನೇಂದ್ರೋ ನಿರ್ಜನಂ ಪ್ರಾಪ್ಯ ದಿಙ್ಮೇ ಜನ್ಮ ಸಜೀವಿತಮ್ ॥ ೧೫

ಮತ್ಕೃತೇ ವ್ಯಸನಂ ಪ್ರಾಪ್ತೋ ಲೋಕನಾಥೋ ಮಹಾದ್ಯುತಿಃ ।
ಸರ್ವಾನ್ ಕಾಮಾನ್ ಪರಿತ್ಯಜ್ಯ ವನೇ ವಸತಿ ರಾಘವಃ ॥ ೧೬

ಇತಿ ಲೋಕಸಮಾಕ್ರುಷ್ಟಃ ಪಾದೇಷ್ವದ್ಯ ಪ್ರಸಾದಯನ್ ।
ರಾಮಂ ತಸ್ಯ ಪತಿಷ್ಯಾಮಿ ಸೀತಾಯಾ ಲಕ್ಷ್ಮಣಸ್ಯ ಚ ॥ ೧೭

ಹೋಮವನ್ನು ಮಾಡುವುದಕ್ಕಾಗಿ ಅಗ್ನಿಯನ್ನು ರಕ್ಷಿಸಿಡುತ್ತಾರೆ. ಆ ಅಗ್ನಿಯಿಂದ ದಟ್ಟವಾದ ಹೊಗೆಯು ಏಳುತ್ತಿದೆ(೧೧-೧೨). ಇಲ್ಲಿ ಪುರುಷೋತ್ತಮನಾದ ಅಣ್ಣನನ್ನು ನಾನು ನೋಡುವೆನು! (ಧರ್ಮಬೋಧನೆಯಿಂದ) ಜನರಿಗೆ ಶ್ರೇಷ್ಠವಾದ ಸಂಸ್ಕಾರವನ್ನುಂಟುಮಾಡುತ್ತ ಮಹರ್ಷಿಯಂತೆ ವಿರಾಜಿಸುವ ಅಣ್ಣನನ್ನು ನೋಡುವೆನು! ಸಂತೃಪ್ತನಾದ ರಘುನಾಥನ ದರ್ಶನವು ನನಗಾಗುವುದು!'' ಎಂದನು (೧೩). ಹಾಗೆಯೇ ಮುಂದೆ ಹೋಗುತ್ತ ಭರತನು ಸ್ವಲ್ಪ ಹೊತ್ತಿಗೆ ಮಂದಾಕಿನೀನದಿಯ ಸಮೀಪಕ್ಕೆ ಬಂದನು. ಆಗ ತನ್ನ ಬಳಿಯಲ್ಲಿದ್ದ ಜನರನ್ನು ನೋಡಿ ''ಮಹಾರಾಜನಾಗಿರಬೇಕಾದ ಆ ನರಶ್ರೇಷ್ಠನು ನಿರ್ಜನವಾದ ಕಾಡಿನಲ್ಲಿ ನೆಲದ ಮೇಲೆ ವೀರಾಸನದಲ್ಲಿ ಕುಳಿತಿರಬೇಕಾಯಿತಲ್ಲ! ನನ್ನ ಜನ್ಮಕ್ಕೆ ಧಿಕ್ಕಾರ! ನನ್ನ ಬದುಕಿಗೆ ಧಿಕ್ಕಾರ! (೧೪-೧೫). 'ಮಹಾತೇಜಸ್ವಿಯಾದ ರಘುನಾಥನು ಸಕಲಭೋಗಗಳನ್ನೂ ಪರಿತ್ಯಜಿಸಬೇಕಾಯಿತು. ನನಗೋಸ್ಕರ ಕಾಡಿನಲ್ಲಿ ಇಂಥ ಕಷ್ಟಕ್ಕೆ ಸಿಕ್ಕಬೇಕಾಯಿತು' ಎಂದು ಜನರು ನನ್ನನ್ನು ಹಳಿಯುವಂತಾಯಿತು (೧೬). ನನ್ನನ್ನು

ಏವಂ ಸ ವಿಲಪಂಸ್ತಸ್ಮಿನ್ ವನೇ ದಶರಥಾತ್ಮಜಃ ।
ದದರ್ಶ ಮಹತೀಂ ಪುಣ್ಯಾಂ ಪರ್ಣಶಾಲಾಂ ಮನೋರಮಾಮ್ ॥

ಸಾಲತಾಲಾಶ್ವಕರ್ಣಾನಾಂ ಪರ್ಣೈರ್ಬಹುಭಿರಾವೃತಾಮ್ ।
ವಿಶಾಲಾಂ ಮೃದುವಿಸ್ತೀರ್ಣಾಂ ಕುಶೈರ್ವೇದಿಮಿವಾಧ್ವರೇ ॥ ೧೯

ಶಕ್ರಾಯುಧನಿಕಾಶೈಶ್ಚ ಕಾರ್ಮುಕೈರ್ಭಾರಸಾಧನೈಃ ।
ರುಕ್ಮಪೃಷ್ಠೈರ್ಮಹಾಸಾರೈಃ ಶೋಭಿತಾಂ ಶತ್ರುಬಾಧಕೈಃ ॥ ೨೦

ಅರ್ಕರಶ್ಮಿಪ್ರತೀಕಾಶೈರ್ಘೋರೈಸ್ತೂಣೀಗತೈಃ ಶರೈಃ ।
ಶೋಭಿತಾಂ ದೀಪ್ತವದನೈಃ ಸರ್ಪೈರ್ಭೋಗವತೀಮಿವ ॥ ೨೧

ಅನುಗ್ರಹಿಸೆಂದು ಹೇಳಿ ಶ್ರೀರಾಮನ ಪಾದಗಳಿಗೆ ಅಡ್ಡ ಬೀಳುವೆನು. ಸೀತಾಲಕ್ಷ್ಮಣರ* ಕಾಲುಗಳಿಗೂ ಬಿದ್ದು ಬೇಡಿಕೊಳ್ಳುವೆನು'' ಎಂದು ಭರತನು ಹಲುಬುತ್ತಿದ್ದನು (೧೭). ಹೀಗೆ ಆ ವನದಲ್ಲಿ ಭರತನು ತನ್ನ ಸಂಕಟವನ್ನು ತೋಡಿಕೊಳ್ಳುತ್ತ ಹೋಗುತ್ತಿರಲು, ವಿಶಾಲವೂ ಪವಿತ್ರವೂ ಮನೋಹರವೂ ಆದ ಪರ್ಣಶಾಲೆಯು ಕಾಣಿಸಿತು. ಸಾಲ, ತಾಲ, ಅಶ್ವಕರ್ಣ ಮುಂತಾದ ಮರಗಳ ಎಲೆಗಳಿಂದ ಆ ಪರ್ಣಶಾಲೆಯನ್ನು ನಿರ್ಮಿಸಲಾಗಿತ್ತು. ಮೃದುವಾದ ದರ್ಭಾಸನಗಳನ್ನು ಹಾಸಿದ್ದರಿಂದ, ಯಾಗಶಾಲೆಯಲ್ಲಿ ದರ್ಭೆಗಳನ್ನು ಹರಡಿದ ವೇದಿಕೆಯಂತೆ ಅದು ತೋರುತ್ತಿತ್ತು (೧೮-೧೯). ಇಂದ್ರ ಧನುಸ್ಸಿನಂತೆ ಬಾಗಿ ಬೆಳಗುತ್ತಿದ್ದ ದೃಢವಾದ ಧನುಸ್ಸುಗಳು ಪರ್ಣಶಾಲೆಯಲ್ಲಿ ಶೋಭಿಸುತ್ತಿದ್ದವು. ಆ ಧನುಸ್ಸುಗಳಾದರೂ ಅತ್ಯಂತ ಭಾರವಾದವು. ಚಿನ್ನದ ಕಟ್ಟುಗಳಿಂದ ಬಿಗಿಯಲ್ಪಟ್ಟವು. ಶತ್ರುಗಳನ್ನು ಧ್ವಂಸಮಾಡತಕ್ಕವು (೨೦). ಬಾಣಗಳು ಸೂರ್ಯರಶ್ಮಿಗಳಂತೆ ಬತ್ತಳಿಕೆಗಳಲ್ಲಿ ಮಿರುಮಿರುಗುತ್ತಿದ್ದವು. ತೀಕ್ಷ್ಣಾಗ್ರವುಳ್ಳ ಆ ಘೋರಬಾಣಗಳು ಕರಾಳಮುಖದ ಸರ್ಪಗಳಂತೆ ಇದ್ದುದರಿಂದ, ಪರ್ಣಶಾಲೆಯು

---

* ಲಕ್ಷ್ಮಣನಿಗೂ ತನ್ನಿಂದ ಕಷ್ಟ ಬಂದಿತೆಂದು ಭರತನು ತನ್ನ ಸಂಕಟವನ್ನು ತೋಡಿಕೊಳ್ಳುತ್ತಿದ್ದಾನೆ. ಲಕ್ಷ್ಮಣನ ಕಾಲಿಗೂ ಬೀಳುತ್ತೇನೆಂಬುದು ಭಾವೋದ್ರೇಕದಿಂದ ಹೇಳುವ ಮಾತು. ಚಿಕ್ಕವನಾದ ಲಕ್ಷ್ಮಣನಿಗೆ ನಮಸ್ಕರಿಸಬಹುದೆ ? ಎಂಬ ಶಂಕೆ ಈ ಸಮಯದಲ್ಲಿ ಹುರುಳಿಲ್ಲದ್ದು.

ಮಹಾರಜತವಾಸೋಭ್ಯಾಮಸಿಭ್ಯಾಂ ಚ ವಿರಾಜಿತಾಮ್ ।
ರುಕ್ಮಬಿಂದುವಿಚಿತ್ರಾಭ್ಯಾಂ ಚರ್ಮಭ್ಯಾಂ ಚಾಪಿ ಶೋಭಿತಾಮ್ ॥ ೨೨

ಗೋಧಾಂಗುಲಿತ್ರೈರಾಸಕ್ತೈಶ್ಚಿತ್ರೈಃ ಕಾಂಚನಭೂಷಿತೈಃ ।
ಅರಿಸಂಘೈರನಾಧೃಷ್ಯಾಂ ಮೃಗೈಃ ಸಿಂಹಗುಹಾಮಿವ ॥ ೨೩

ಪ್ರಾಗುದಕ್ಪ್ರವಣಾಂ ವೇದಿಂ ವಿಶಾಲಾಂ ದೀಪ್ತಪಾವಕಾಮ್ ।
ದದರ್ಶ ಭರತಸ್ತತ್ರ ಪುಣ್ಯಾಂ ರಾಮನಿವೇಶನೇ ॥ ೨೪

ನಿರೀಕ್ಷ್ಯ ಸ ಮುಹೂರ್ತಂ ತು ದದರ್ಶ ಭರತೋ ಗುರುಮ್ ।
ಉಟಜೇ ರಾಮಮಾಸೀನಂ ಜಟಾಮಂಡಲಧಾರಿಣಮ್ ॥ ೨೫

ಕೃಷ್ಣಾಜಿನಧರಂ ತಂ ತು ಚೀರವಲ್ಕಲವಾಸಸಮ್ ।
ದದರ್ಶ ರಾಮಮಾಸೀನಮಭಿತಃ ಪಾವಕೋಪಮಮ್ ॥ ೨೬

ಸರ್ಪಗಳಿಗೆ ವಾಸಸ್ಥಾನವಾದ ನಾಗಲೋಕವೋ ಎಂಬಂತೆ ತೋರುತ್ತಿತ್ತು (೨೧). ಚಿನ್ನದ ಹಿಡಿಕೈಗಳುಳ್ಳ ಎರಡು ಖಡ್ಗಗಳು ಜಗಜಗಿಸುತ್ತಿದ್ದವು. ಬಂಗಾರದಂತಹ ಚುಕ್ಕೆಗಳುಳ್ಳ ಚರ್ಮವನ್ನು ಹೊದಿಸಿದ ಎರಡು ಗುರಾಣಿಗಳು ಕಂಗೊಳಿಸುತ್ತಿದ್ದವು (೨೨). ಉಡುವಿನ ಚರ್ಮದಿಂದ ಮಾಡಲ್ಪಟ್ಟು ಸುವರ್ಣಾಲಂಕೃತವಾಗಿ ಚಿತ್ರಾಕಾರವಾಗಿದ್ದ ಕೈಚೀಲಗಳು ತೂಗಾಡುತ್ತಿದ್ದವು. ಮೃಗಗಳಿಗೆ ಸಿಂಹದ ಗುಹೆ ಇದ್ದಂತೆ, ಶತ್ರುಗಳಿಗೆ ಆ ಪರ್ಣಶಾಲೆಯ ಬಳಿಯಲ್ಲಿ ಸುಳಿಯಲೂ ಅಶಕ್ಯವಾಗಿತ್ತು (೨೩). ಶ್ರೀರಾಮನ ಆ ಪರ್ಣಶಾಲೆಯೊಳಗೆ ಈಶಾನ್ಯ ದಿಕ್ಕಿನಲ್ಲಿ ಹಳ್ಳವಾದ ಪವಿತ್ರ ವೇದಿಕೆ ಇದ್ದಿತು. ವಿಶಾಲವಾದ ಆ ವೇದಿಕೆಯಲ್ಲಿ ಅಗ್ನಿಯು ಧಗಧಗಿಸುತ್ತಿರುವುದೂ ಭರತನಿಗೆ ಕಾಣಿಸಿತು (೨೪). ಹೀಗೆ ಭರತನು ಪರ್ಣಶಾಲೆಯೊಳಗೆ ಕಣ್ಣು ಹಾಯಿಸುತ್ತಿರುವಾಗ, ಸ್ವಲ್ಪ ಹೊತ್ತಿನಲ್ಲಿಯೇ ಒಳಗೆ ಗುಡಿಸಲಿನಲ್ಲಿ ಅವನ ಅಣ್ಣನಾದ ಶ್ರೀರಾಮನು ಕುಳಿತಿರುವುದು ಗೋಚರಿಸಿತು! ಶ್ರೀರಾಮನು ವಿಶಾಲವಾದ ಜಟೆಯನ್ನು ಕಟ್ಟಿದ್ದನು (೨೫). ಅವನು ವಲ್ಕಲವನ್ನುಟ್ಟು ಕೃಷ್ಣಾಜಿನವನ್ನು ಹೊದೆದು ಸಮೀಪದಲ್ಲಿ (ವೇದಿಯಲ್ಲಿದ್ದ) ಅಗ್ನಿಯಂತೆ ತೇಜೋಮಯನಾಗಿದ್ದನು. ಸಿಂಹದಂತೆ ಹೆಗಲುಳ್ಳವನೂ ಆಜಾನುಬಾಹುವೂ



ಶ್ರೀರಾಮ ಭರತ ಸಮಾಗಮ

ಸಿಂಹಸ್ಕಂಧಂ ಮಹಾಬಾಹುಂ ಪುಂಡರೀಕನಿಭೇಕ್ಷಣಮ್ ।
ಪೃಥಿವ್ಯಾಃ ಸಾಗರಾಂತಾಯಾ ಭರ್ತಾರಂ ಧರ್ಮಚಾರಿಣಮ್ ॥ ೨೭

ಉಪವಿಷ್ಟಂ ಮಹಾಬಾಹುಂ ಬ್ರಹ್ಮಾಣಮಿವ ಶಾಶ್ವತಮ್ ।
ಸ್ಥಂಡಿಲೇ ದರ್ಭಸಂಸ್ತೀರ್ಣೇ ಸೀತಯಾ ಲಕ್ಷ್ಮಣೇನ ಚ ॥ ೨೮

ತಂ ದೃಷ್ಟ್ವಾ ಭರತಃ ಶ್ರೀಮಾನ್ ದುಃಖಮೋಹಪರಿಪ್ಲುತಃ ।
ಅಭ್ಯಧಾವತ ಧರ್ಮಾತ್ಮಾ ಭರತಃ ಕೈಕಯೀಸುತಃ ॥ ೨೯

ದೃಷ್ಟ್ವೈವ ವಿಲಲಾಪಾರ್ತೋ ಬಾಷ್ಪಸಂದಿಗ್ಧಯಾ ಗಿರಾ ।
ಅಶಕ್ನುವನ್ ಧಾರಯಿತುಂ ಧೈರ್ಯಾದ್ವಚನಮಬ್ರವೀತ್ ॥ ೩೦

ಯಃ ಸಂಸದಿ ಪ್ರಕೃತಿಭಿರ್ಭವೇದ್ಯುಕ್ತ ಉಪಾಸಿತುಮ್ ।
ವನ್ಯೈರ್ಮೃಗೈರುಪಾಸೀನಃ ಸೋಽಯಮಾಸ್ತೇ ಮಮಾಗ್ರಜಃ ॥ ೩೧

ವಾಸೋಭಿರ್ಬಹುಸಾಹಸ್ರೈರ್ಯೋ ಮಹಾತ್ಮಾ ಪುರೋಚಿತಃ ।
ಮೃಗಾಜಿನೇ ಸೋಽಯಮಿಹ ಪ್ರವಸ್ತೇ ಧರ್ಮಮಾಚರನ್ ॥ ೩೨

ಕಮಲದಳಾಯತಾಕ್ಷನೂ ಸಮುದ್ರಪರ್ಯಂತವಾದ ಪೃಥ್ವಿಗೆ ಅಧಿಪತಿಯೂ ಆದ ಶ್ರೀರಾಮನು (ಋಷಿಯಂತೆ) ಧರ್ಮಾಚರಣೆಯಲ್ಲಿ ತೊಡಗಿರುವುದನ್ನು ಭರತನು ಕಂಡನು (೨೬-೨೭). ದರ್ಭೆಗಳನ್ನು ಹರಡಿದ ನೆಲದಮೇಲೆ ಶಾಶ್ವತನಾದ ಬ್ರಹ್ಮದೇವನಂತೆ ವಿರಾಜಿಸುತ್ತ ಕುಳಿತಿದ್ದ ಆ ವೀರಾಗ್ರಣಿಯನ್ನು ಭರತನು ಕಂಡನು. ಸಮೀಪದಲ್ಲಿ ಸೀತಾದೇವಿಯೂ ಲಕ್ಷ್ಮಣನೂ ಇದ್ದುದು ಕಾಣಿಸಿತು (೨೮). ಶ್ರೀರಾಮನನ್ನು ಕಂಡೊಡನೆ ಧರ್ಮಾತ್ಮನಾದ ಭರತನಿಗೆ ದುಃಖವು ಉಮ್ಮಳಿಸಿತು. ಬುದ್ಧಿಗೆ ಕತ್ತಲೆ ಕವಿದಂತಾಯಿತು. ಬೇಗಬೇಗನೆ ಹೆಜ್ಜೆಯಿಡುತ್ತ ಭರತನು ಮುಂದಕ್ಕೆ ಧಾವಿಸಿದನು (೨೯). ಶ್ರೀರಾಮನನ್ನು ಕಂಡೊಡನೆ ಭರತನಿಗೆ ಕಣ್ಣೀರು ಉಕ್ಕಿತು. ಶೋಕವನ್ನು ಧೈರ್ಯದಿಂದ ಬಿಗಿಹಿಡಿಯುವ ಶಕ್ತಿ ಇಲ್ಲದಾಯಿತು. ಅವನ ಬಾಯಿಂದ ತೊದಲು ನುಡಿಗಳು ಹೊರಟವು : ''ರಾಜಸಭೆಯಲ್ಲಿ ಮಂತ್ರಿಗಳೊಡನೆ - ಪ್ರಜೆಗಳೊಡನೆ - ವೈಭವದಿಂದ ಕುಳಿತಿರಬೇಕಾದ ನನ್ನ ಅಣ್ಣನು ಕಾಡುಮೃಗಗಳ ಮಧ್ಯದಲ್ಲಿ ಕುಳಿತಿರಬೇಕಾಯಿತೆ! (೩೦-೩೧). ಸಾವಿರಾರು ವರಹಗಳ ಬೆಲೆ ಬಾಳುವ

ಅಧಾರಯದ್ಯೋ ವಿವಿಧಾಶ್ಚಿತ್ರಾಃ ಸುಮನಸಸ್ತದಾ ।
ಸೋಽಯಂ ಜಟಾಭಾರಮಿಮಂ ವಹತೇ ರಾಘವಃ ಕಥಮ್ ॥ ೩೩

ಯಸ್ಯ ಯಜ್ಞೈರ್ಯಥೋದ್ದಿಷ್ಟೈರ್ಯುಕ್ತೋ ಧರ್ಮಸ್ಯ ಸಂಚಯಃ
ಶರೀರಕ್ಲೇಶಸಂಭೂತಂ ಸ ಧರ್ಮಂ ಪರಿಮಾರ್ಗತೇ ॥ ೩೪

ಚಂದನೇನ ಮಹಾರ್ಹೇಣ ಯಸ್ಯಾಂಗಮುಪಸೇವಿತಮ್ ।
ಮಲೇನ ತಸ್ಯಾಂಗಮಿದಂ ಕಥಮಾರ್ಯಸ್ಯ ಸೇವ್ಯತೇ ॥ ೩೫

ಮನ್ನಿಮಿತ್ತ ಮಿದಂ ದುಃಖಂ ಪ್ರಾಪ್ತೋ ರಾಮಃ ಸುಖೋಚಿತಃ ।
ಧಿಗ್ಜೀವಿತಂ ನೃಶಂಸಸ್ಯ ಮಮ ಲೋಕವಿಗರ್ಹಿತಮ್ ॥ ೩೬

ಇತ್ಯೇವಂ ವಿಲಪನ್ ದೀನಂ ಪ್ರಸ್ವಿನ್ನಮುಖಪಂಕಜಃ ।
ಪಾದಾವಪ್ರಾಪ್ಯ ರಾಮಸ್ಯ ಪಪಾತ ಭರತೋ ರುದನ್ ॥ ೩೭

ದುಃಖಾಭಿತಪ್ತೋ ಭರತೋ ರಾಜಪುತ್ರೋ ಮಹಾಬಲಃ ।
ಉಕ್ತ್ವಾರ್ಯೇತಿ ಸಕೃದ್ದೀನಂ ಪುನರ್ನೋವಾಚ ಕಿಂಚನ ॥ ೩೮

ದಿವ್ಯವಸ್ತ್ರಗಳನ್ನು ಧರಿಸುತ್ತಿದ್ದ ನನ್ನ ಅಣ್ಣನು, ಕೃಷ್ಣಾಜಿನವನ್ನು ಹೊದೆದು ಇಲ್ಲಿ ತಪಸ್ಸು ಮಾಡುತ್ತ ಇರುವನಲ್ಲ! (೩೨). ನಾನಾಬಗೆಯ ಪುಷ್ಪ ಮಾಲಿಕೆಗಳನ್ನು ಧರಿಸುತ್ತಿದ್ದ ಶ್ರೀರಾಮನು, ಈ ಜಟಾಭಾರವನ್ನು ಹೇಗೆ ಹೊತ್ತುಕೊಂಡಿದ್ದಾನು! ರಾಜೋಚಿತವಾದ ಯಾಗಗಳನ್ನಾಚರಿಸಿ ಧರ್ಮ ಸಂಪಾದನೆ ಮಾಡಬೇಕಾದವನು, ಧರ್ಮಕ್ಕೋಸ್ಕರ ಹೀಗೆ ದೇಹವನ್ನು ದಂಡಿಸುತ್ತಿದ್ದಾನೆ (೩೩-೩೪). ದಿವ್ಯಚಂದನವನ್ನು ಲೇಪಿಸಿ ಕೊಳ್ಳುತ್ತಿದ್ದ ದೇಹದಲ್ಲಿ ಕಾಡಿನ ಕಶ್ಮಲವು ಸೇರಬೇಕಾಯಿತೆ! ಶ್ರೀರಾಮನಿಗೆ ಈ ಕಷ್ಟವೆಲ್ಲವೂ ನನ್ನಿಂದ ಬಂದಿತು. ನಾನೆಂತಹ ಪಾಪಿ! ನನ್ನ ಬಾಳನ್ನು ಸುಡಬೇಕು! ಲೋಕ ಗರ್ಹಿತವಾದದ್ದು ನನ್ನ ಬಾಳು!" ಎಂದು ಭರತನು ದೈನ್ಯದಿಂದ ಹಲುಬಿದನು (೩೫-೩೬). ತಾವರೆಯಂತಿದ್ದ ಅವನ ಮುಖದ ಮೇಲೆ ಬೆವರು ಹರಿಯಿತು. (ಆಶ್ರಮವು ಸಮೀಪಿಸಿದಂತೆ) ಆ ರಾಜಪುತ್ರನು ದುಃಖದಿಂದ ಉದ್ವಿಗ್ನನಾದನು. ಶ್ರೀರಾಮನ ಪಾದಗಳನ್ನು ಹಿಡಿದುಕೊಳ್ಳಬೇಕೆಂದು ಭರತನು ಗಟ್ಟಿಯಾಗಿ ಅಳುತ್ತ (ಕೈನೀಡಿ ಕೊಂಡು) ಓಡಿದನು. ಆದರೆ ಪಾದಗಳನ್ನು ಮುಟ್ಟುವುದರೊಳಗೆ ಅವನು ಬಿದ್ದು ಹೋದನು. ಒಂದು ಸಲ 'ಅಣ್ಣಾ' ಎಂಬ ಒಂದು ದೈನ್ಯದನುಡಿ ಅವನ ಬಾಯಿಂದ ಹೊರಟಿತು.

ಬಾಷ್ಪಾಪಿಹಿತಕಂಠಶ್ಚ ಪ್ರೇಕ್ಷ್ಯ ರಾಮಂ ಯಶಸ್ವಿನಮ್ ।
ಅಯೇತ್ಯೇವಾಭಿಸಂಕ್ರುಶ್ಯ ವ್ಯಾಹರ್ತುಂ ನಾಶಕತ್ತತಃ ॥ ೩೯

ಶತ್ರುಘ್ನಶ್ಚಾಪಿ ರಾಮಸ್ಯ ವವಂದೇ ಚರಣೌ ರುದನ್ ।
ತಾವುಭೌ ಸ ಸಮಾಲಿಂಗ್ಯ ರಾಮೋಽಪ್ಯಶ್ರೂಣ್ಯವರ್ತಯತ್ ॥ ೪೦

ತತಃ ಸುಮಂತ್ರೇಣ ಗುಹೇನ ಚೈವ
ಸಮೀಯತೂ ರಾಜಸುತಾವರಣ್ಯೇ ।
ದಿವಾಕರಶ್ಚೈವ ನಿಶಾಕರಶ್ಚ
ಯಥಾಂಬರೇ ಶುಕ್ರಬೃಹಸ್ಪತಿಭ್ಯಾಂ ॥ ೪೧

ತಾನ್ ಪಾರ್ಥಿವಾನ್ ವಾರಣಯೂಥಪಾರ್ಹಾನ್
ಸಮಾಗತಾಂಸ್ತತ್ರ ಮಹತ್ಯರಣ್ಯೇ ।
ವನೌಕಸಸ್ತೇಽಪಿ ಸಮೀಕ್ಷ್ಯ ಸರ್ವೇಽ-
ಪ್ಯಶ್ರೂಣ್ಯಮುಂಚನ್ ಪ್ರವಿಹಾಯ ಹರ್ಷಮ್ ॥ ೪೨

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡ ಏಕೋನಶತತಮಃ ಸರ್ಗಃ

ಇನ್ನೇನೂ ಹೊರಡಲಿಲ್ಲ(೩೭-೩೮). ಶ್ರೀರಾಮನನ್ನು ಕಂಡು ಅವನಿಗೆ ಕಣ್ಣೀರು ಉಕ್ಕಿ ಕುತ್ತಿಗೆಯು ಹಿಡಿದಿತ್ತು. 'ಅಣ್ಣಾ' ಎಂದು ಕೂಗಿಕೊಂಡನೇ ಹೊರತು ಇನ್ನೇನು ಹೇಳಲೂ ಅವನಿಗೆ ಸಾಧ್ಯವಾಗಲಿಲ್ಲ (೩೯). ಶತ್ರುಘ್ನನೂ ಅಳುತ್ತ ಬಂದು ಶ್ರೀರಾಮನ ಕಾಲುಗಳನ್ನು ಮುಟ್ಟಿ ವಂದಿಸಿದನು. ಶ್ರೀರಾಮನು ಭರತಶತ್ರುಘ್ನರನ್ನು ಅಪ್ಪಿ ಕೊಂಡು ಕಣ್ಣೀರು ಹರಿಸಿದನು (೪೦). ಆಮೇಲೆ ರಾಮಲಕ್ಷ್ಮಣರು ಸುಮಂತ್ರನನ್ನೂ ಗುಹನನ್ನೂ ಆಲಿಂಗಿಸಿಕೊಂಡರು. ಆಗ ರಾಮಲಕ್ಷ್ಮಣರು ಆಕಾಶದಲ್ಲಿ ಶುಕ್ರಬೃಹಸ್ಪ ತಿಗಳೊಡನೆ ಸೇರಿದ ಸೂರ್ಯಚಂದ್ರರಂತೆ ವಿರಾಜಿಸಿದರು (೪೧). ಆ ಮಹಾರಣ್ಯದಲ್ಲಿ ಮಹಾಗಜಗಳಂತೆ ಒಂದೆಡೆ ಸೇರಿದ ನಾಲ್ವರು ರಾಜಪುತ್ರರನ್ನೂ (ಅವರ ದುಃಖವನ್ನೂ) ನೋಡಿ ಕಾಡಿನಲ್ಲಿದ್ದ ಋಷಿಗಳಿಗೂ ಉಲ್ಲಾಸವಡಗಿತು. ಅವರಿಗೂ ಕಂಬನಿ ಹರಿಯಿತು (೪೨).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ತೊಂಬತ್ತೊಂಬತ್ತನೆಯ ಸರ್ಗ

ಶತತಮಃ ಸರ್ಗಃ

ಕಚ್ಚಿತ್ ಸರ್ಗಃ

ಜಟಿಲಂ ಚೀರವಸನಂ ಪ್ರಾಂಜಲಿಂ ಪತಿತಂ ಭುವಿ ।
ದದರ್ಶ ರಾಮೋ ದುರ್ದರ್ಶಂ ಯುಗಾಂತೇ ಭಾಸ್ಕರಂ ಯಥಾ ॥ ೧

ಕಥಂಚಿದಭಿವಿಜ್ಞಾಯ ವಿವರ್ಣವದನಂ ಕೃಶಮ್ ।
ಭ್ರಾತರಂ ಭರತಂ ರಾಮಃ ಪರಿಜಗ್ರಾಹ ಬಾಹುನಾ ॥ ೨

ಆಘ್ರಾಯ ರಾಮಸ್ತಂ ಮೂರ್ಧ್ನಿ ಪರಿಷ್ವಜ್ಯ ಚ ರಾಘವಃ ।
ಅಂಕೇ ಭರತಮಾರೋಪ್ಯ ಪರ್ಯಪೃಚ್ಛತ್ ಸಮಾಹಿತಃ ॥ ೩

ಕ್ವ ನು ತೇಽಭೂತ್ ಪಿತಾ ತಾತ ಯದರಣ್ಯಂ ತ್ವಮಾಗತಃ ।
ನ ಹಿ ತ್ವಂ ಜೀವತಸ್ತಸ್ಯ ವನಮಾಗಂತುಮರ್ಹಸಿ ॥ ೪

ಸರ್ಗ ೧೦೦

ಶ್ರೀರಾಮನು ಕುಶಲಪ್ರಶ್ನೆಯನ್ನು ಕೇಳುವುದರ ಮೂಲಕ ಭರತನಿಗೆ ರಾಜನೀತಿಯನ್ನು ಬೋಧಿಸುವುದು.

ಆಗ ಜಟಾಧಾರಿಯಾಗಿ ನಾರುಬಟ್ಟೆಯನ್ನುಟ್ಟು* ಕೈಜೋಡಿಸಿಕೊಂಡು ನೆಲದಮೇಲೆ ಬಿದ್ದ ಭರತನನ್ನು ಶ್ರೀರಾಮನು ನೋಡಿದನು. ತೇಜಸ್ವಿಯಾದ ಆ ಭರತನು ಪ್ರಳಯಕಾಲದಲ್ಲಿ ಕೆಳಗೆ ಬಿದ್ದ ಸೂರ್ಯನಂತೆ ಕಾಣಿಸಿದನು (೧). ಭರತನ ಮುಖವು ಬಾಡಿ ಬಣ್ಣಗೆಟ್ಟಿತ್ತು. ದೇಹವು ಸೊರಗಿ ಕೃಶವಾಗಿತ್ತು. ಅವನು ತನ್ನ ತಮ್ಮನಾದ ಭರತನೇ ಎಂಬುದು ಶ್ರೀರಾಮನಿಗೆ ಥಟ್ಟನೆ ತಿಳಿಯಲಿಲ್ಲ. ಆಮೇಲೆ ಗುರುತು ಹಿಡಿದು ಕೂಡಲೆ ಎದ್ದುಬಂದು, ಶ್ರೀರಾಮನು ಭರತನನ್ನು ಕೈಹಿಡಿದು ಎತ್ತಿದನು (೨). ಭರತನ ಶಿರಸ್ಸನ್ನು ಆಘ್ರಾಣಿಸಿ ಅವನನ್ನು ಅಪ್ಪಿ ಕೊಂಡನು. ಅನಂತರ ಭರತನನ್ನು ತನ್ನ ತೊಡೆಯಮೇಲೆ ಕುಳ್ಳಿರಿಸಿಕೊಂಡು ಸಾವಧಾನವಾಗಿ ಕುಶಲಪ್ರಶ್ನೆ ಮಾಡಿದನು (೩) : "ವತ್ಸ - ಭರತ, ಇದೇನು ? ನೀನು ಕಾಡಿಗೆ ಬಂದೆಯಲ್ಲ, ತಂದೆ ಎಲ್ಲಿ? ಅವನ

---

* ಹಿಂದೆ ೮೮ನೆಯ ಸರ್ಗದಲ್ಲಿ ಭರತನು ಜಟಾವಲ್ಕಲಧಾರಿಯಾಗುವುದಾಗಿ ಪ್ರತಿಜ್ಞೆ ಮಾಡಿದನೆಂದು ಹೇಳಿದೆ. ಮರುದಿನ ಭರದ್ವಾಜರನ್ನು ದರ್ಶನ ಮಾಡಿದಾಗ ಅವುಗಳನ್ನು ಧರಿಸಲು ಅವಕಾಶವಾಗಲಿಲ್ಲ. ಅವರ ಆಶ್ರಮವನ್ನು ಬಿಟ್ಟು ಹೊರಟ ಮೇಲೆ ಭರತನು ಜಟಾವಲ್ಕಲಧಾರಿಯಾದನೆಂದು ತಿಳಿಯಬೇಕು.

ಚಿರಸ್ಯ ಬತ ಪಶ್ಯಾಮಿ ದೂರಾದ್ಭರತಮಾಗತಮ್ ।
ದುಷ್ಪ್ರತೀಕಮರಣ್ಯೇಽಸ್ಮಿನ್ ಕಿಂ ತಾತ ವನಮಾಗತಃ ॥ ೫

ಕಚ್ಚಿನ್ನು ಧರತೇ ತಾತ ರಾಜಾ ಯತ್ತ್ವಮಿಹಾಗತಃ ।
ಕಚ್ಚಿನ್ನ ದೀನಃ ಸಹಸಾ ರಾಜಾ ಲೋಕಾಂತರಂ ಗತಃ ॥ ೬

ಕಚ್ಚಿತ್ಸೌಮ್ಯ ನ ತೇ ರಾಜ್ಯಂ ಭ್ರಷ್ಟಂ ಬಾಲಸ್ಯ ಶಾಶ್ವತಮ್ ।
ಕಚ್ಚಿತ್ ಶುಶ್ರೂಷಸೇ ತಾತ ಪಿತರಂ ಸತ್ಯವಿಕ್ರಮಮ್ ॥ ೭

ಕಚ್ಚಿದ್ದಶರಥೋ ರಾಜಾ ಕುಶಲೀ ಸತ್ಯಸಂಗರಃ ।
ರಾಜಸೂಯಾಶ್ವಮೇಧಾನಾಮಾಹರ್ತಾ ಧರ್ಮನಿಶ್ಚಿತಃ ॥ ೮

ಸ ಕಚ್ಚಿದ್ಬ್ರಾಹ್ಮಣೋ ವಿದ್ವಾನ್ ಧರ್ಮನಿತ್ಯೋ ಮಹಾದ್ಯುತಿಃ ।
ಇಕ್ಷ್ವಾಕೂಣಾಮುಪಾಧ್ಯಾಯೋ ಯಥಾವತ್ತಾತ ಪೂಜ್ಯತೇ ॥ ೯

ಸಾ ತಾತ ಕಚ್ಚಿತ್ ಕೌಸಲ್ಯಾ ಸುಮಿತ್ರಾ ಚ ಪ್ರಜಾವತೀ ।
ಸುಖಿನೀ ಕಚ್ಚಿದಾರ್ಯಾ ಚ ದೇವೀ ನಂದತಿ ಕೈಕಯೀ ॥ ೧೦

ಸೇವೆಯನ್ನು ಬಿಟ್ಟು ನೀನು ಇಲ್ಲಿಗೆ ಬರಬಹುದೆ? ಆಹಾ! ನಮ್ಮ ಭರತನನ್ನು ನೋಡಿ ಎಷ್ಟು ಕಾಲವಾಯಿತು! ಬಹುದೂರದಿಂದ ಬಂದಿದ್ದಾನೆ. ಭರತ, ಮೊದಲು ನಿನ್ನ ಗುರುತೇ ನನಗೆ ಸಿಗಲಿಲ್ಲ. ತಮ್ಮ, ಈ ಅರಣ್ಯಕ್ಕೆ ಏಕೆ ಬಂದೆ? (೪-೫). ನೀನು ಇಲ್ಲಿಗೆ ಬಂದುಬಿಟ್ಟೆಯಲ್ಲ, ನಮ್ಮ ಮಹಾರಾಜನು ಬದುಕಿರವನಷ್ಟೆ? ದೈನ್ಯದಲ್ಲಿದ್ದ ಮಹಾರಾಜನು ಅನಿರೀಕ್ಷಿತವಾಗಿ ಸ್ವರ್ಗಸ್ಥನಾಗಲಿಲ್ಲವಷ್ಟೆ? ಶಾಶ್ವತವಾಗಿ ಬಂದ ರಾಜ್ಯದ ಆಡಳಿತವು, ನೀನು ಚಿಕ್ಕವನಾದ್ದರಿಂದ, ಕೈದಪ್ಪಿ ಹೋಗಲಿಲ್ಲವಷ್ಟೆ? ಸತ್ಯಸಂಧನಾದ ನಮ್ಮ ತಂದೆಯ ಸೇವೆಯನ್ನು ಮಾಡುತ್ತಿರುವೆಯಾ? (೬-೭). ಮಹಾರಾಜನು ಕುಶಲದಿಂದಿರುವನೆ? ಅಶ್ವಮೇಧ ರಾಜಸೂಯಾದಿ ಯಾಗಗಳನ್ನು ಆಚರಿಸಿದ ಮಹಾಭಾಗನವನು. ವಿದ್ವಾಂಸರೂ ಧರ್ಮನಿಷ್ಠರೂ ಮಹಾವರ್ಚಸ್ವಿಗಳೂ ನಮ್ಮ ಇಕ್ಷ್ವಾಕು ವಂಶದ ಕುಲಪುರೋಹಿತರೂ ಆದ ವಸಿಷ್ಠರನ್ನು ವಿಧಿವತ್ತಾಗಿ ಗೌರವದಿಂದ ಕಾಣುತ್ತಿರುವೆಯಾ? (೮-೯). ವತ್ಸ, ಕೌಸಲ್ಯೆಯೂ ಸುಪುತ್ರವತಿಯಾದ ಸುಮಿತ್ರಾದೇವಿಯೂ ಸುಖದಿಂದಿರುವರೆ ? ಪೂಜ್ಯಳಾದ ಕೈಕೇಯೀದೇವಿಗೆ

ಕಚ್ಚಿದ್ವಿನಯಸಂಪನ್ನಃ ಕುಲಪುತ್ರೋ ಬಹುಶ್ರುತಃ ।
ಅನಸೂಯುರನುದ್ರಷ್ಟಾ ಸತ್ಕೃತಸ್ತೇ ಪುರೋಹಿತಃ ॥ ೧೧

ಕಚ್ಚಿದಗ್ನಿಷು ತೇ ಯುಕ್ತೋ ವಿಧಿಜ್ಞೋ ಮತಿಮಾನೃಜುಃ ।
ಹುತಂ ಚ ಹೋಷ್ಯಮಾಣಂ ಚ ಕಾಲೇ ವೇದಯತೇ ಸದಾ ॥ ೧೨

ಕಚ್ಚಿದ್ದೇವಾನ್ ಪಿತೄನ್ ಭೃತ್ಯಾನ್ ಗುರೂನ್ ಪಿತೃಸಮಾನಪಿ ।
ವೃದ್ಧಾಂಶ್ಚ ತಾತ ವೈದ್ಯಾಂಶ್ಚ ಬ್ರಾಹ್ಮಣಾಂಶ್ಚಾಭಿಮನಸ್ಯೇ ॥ ೧೩

ಇಷ್ವಸ್ತ್ರವರಸಂಪನ್ನಮರ್ಥಶಾಸ್ತ್ರವಿಶಾರದಮ್ ।
ಸುಧನ್ವಾನಮುಪಾಧ್ಯಾಯಂ ಕಚ್ಚಿತ್ ತ್ವಂ ತಾತ ಮನ್ಯಸೇ ॥ ೧೪

ಕಚ್ಚಿದಾತ್ಮಸಮಾಃ ಶೂರಾಃ ಶ್ರುತವಂತೋ ಜಿತೇಂದ್ರಿಯಾಃ ।
ಕುಲೀನಾಶ್ಚೇಂಗಿತಜ್ಞಾಶ್ಚ ಕೃತಾಸ್ತೇ ತಾತ ಮಂತ್ರಿಣಃ ॥ ೧೫

ಸಂತೋಷವಾಗಿದೆಯೆ? ವಿನಯಸಂಪನ್ನನೂ ಮಹಾಕುಲಪ್ರಸೂತನೂ ದೊಡ್ಡ ಪಂಡಿತನೂ ಅಸೂಯಾರಹಿತನೂ ನಿನ್ನ ಶ್ರೇಯಸ್ಸನ್ನು ನೋಡಿಕೊಳ್ಳತಕ್ಕವನೂ ಆದ ಪುರೋಹಿತನನ್ನು* ಸತ್ಕರಿಸುತ್ತಿರುವೆಯಾ? (೧೦-೧೧). ಅಗ್ನಿಕಾರ್ಯದಲ್ಲಿ ಸಾವಧಾನಚಿತ್ತನೂ ಹೋಮವಿಧಿಜ್ಞನೂ ಬುದ್ಧಿಶಾಲಿಯೂ ಋಜುಮಾರ್ಗಿಯೂ ಆದ ಆ ಪುರೋಹಿತನು ಆಯಾ ಕಾಲದಲ್ಲಿ ಹೋಮ ಮಾಡಬೇಕಾದ ಅಗ್ನಿಯ ವಿಷಯವಾಗಿ ತಿಳುವಳಿಕೆಯನ್ನು ಕೊಡುತ್ತಿರುವನೆ? (೧೨). ತಮ್ಮ, ದೇವತೆಗಳು, ತಂದೆತಾಯಿಗಳು, ವಿದ್ಯಾಗುರುಗಳು, ಪಿತೃಸಮಾನರಾದ ಬಂಧುಗಳು, ವೃದ್ಧರು, ವೈದ್ಯರು ಮತ್ತು ಬ್ರಾಹ್ಮಣರನ್ನು ಆದರದಿಂದ ಕಾಣುತ್ತಿರುವೆಯಾ? ಸೇವಕರನ್ನು ಯೋಗ್ಯರೀತಿಯಲ್ಲಿ ನಡೆಸಿಕೊಳ್ಳುವೆಯಾ? (೧೩). ಶಸ್ತ್ರಾಸ್ತ್ರಪಾರಂಗತರೂ ರಾಜನೀತಿವಿಶಾರದನೂ ಧನುರ್ವಿದ್ಯಾಗುರುವೂ ಆದ ಸುಧನ್ವನನ್ನು ಮನ್ನಿಸುತ್ತಿರುವೆಯಾ? ವತ್ಸ, ನಿನಗೆ ಸಮಾನವಯಸ್ಕರೂ ಶೂರರೂ ವಿದ್ಯಾವಂತರೂ ಜಿತೇಂದ್ರಿಯರೂ ಉತ್ತಮ ವಂಶದಲ್ಲಿ

---

* ಈತನು ವಸಿಷ್ಠಪುತ್ರನಾದ ಸುಯಜ್ಞನಾಗಿರಬಹುದು. ಪುರೋಹಿತನನ್ನು ಸತ್ಕರಿಸಬೇಕೆಂಬುದು ಇಲ್ಲಿ ಉದ್ದಿಷ್ಟವಾದ ನೀತಿ. ಇದೇ ರೀತಿಯಲ್ಲಿ ಮುಂದಿನ ಪ್ರಶ್ನೆಗಳಿಂದ ಉದ್ದಿಷ್ಟವಾದ ನೀತಿಯನ್ನು ಯೋಜಿಸಿಕೊಳ್ಳಬೇಕು.

ಮಂತ್ರೋ ವಿಜಯಮೂಲಂ ಹಿ ರಾಜ್ಞಾಂ ಭವತಿ ರಾಘವ ।
ಸುಸಂವೃತೋ ಮಂತ್ರಧರೈರಮಾತ್ಯೈಃ ಶಾಸ್ತ್ರಕೋವಿದೈಃ ॥ ೧೬

ಕಚ್ಚಿನ್ನಿದ್ರಾವಶಂ ನೈಷೀಃ ಕಚ್ಚಿತ್ ಕಾಲೇ ಪ್ರಬುಧ್ಯಸೇ ।
ಕಚ್ಚಿಚ್ಚಾಪರರಾತ್ರೇಷು ಚಿಂತಯಸ್ಯರ್ಥನೈಪುಣಮ್ ॥ ೧೭

ಕಚ್ಚಿನ್ಮಂತ್ರಯಸೇ ನೈಕಃ ಕಚ್ಚಿನ್ನ ಬಹುಭಿಃ ಸಹ ।
ಕಚ್ಚಿತ್ತೇ ಮಂತ್ರಿತೋ ಮಂತ್ರೋ ರಾಷ್ಟ್ರಂ ನ ಪರಿಧಾವತಿ ॥ ೧೮

ಕಚ್ಚಿದರ್ಥಂ ವಿನಿಶ್ಚಿತ್ಯ ಲಘುಮೂಲಂ ಮಹೋದಯಮ್ ।
ಕ್ಷಿಪ್ರಮಾರಭಸೇ ಕರ್ತುಂ ನ ದೀರ್ಘಯಸಿ ರಾಘವ ॥ ೧೯

ಕಚ್ಚಿತ್ತೇ ಸುಕೃತಾನ್ಯೇವ ಕೃತರೂಪಾಣಿ ವಾ ಪುನಃ ।
ವಿದುಸ್ತೇ ಸರ್ವಕಾರ್ಯಾಣಿ ನ ಕರ್ತವ್ಯಾನಿ ಪಾರ್ಥಿವಾಃ ॥ ೨೦

ಹುಟ್ಟಿದವರೂ ಇನ್ನೊಬ್ಬರ ಮನೋಗತವನ್ನು ತಿಳಿಯಲು ಸಮರ್ಥರೂ ಆದವರನ್ನು ಮಂತ್ರಿಗಳನ್ನಾಗಿ ನೇಮಿಸಿಕೊಂಡಿರುವೆಯಾ? (೧೪-೧೫). ಭರತ, ರಾಜ್ಯವನ್ನು ಆಳತಕ್ಕವರಿಗೆ ಮಂತ್ರಾಲೋಚನೆಯೇ ಜಯಕ್ಕೆ ಮೂಲಕಾರಣವಾದದ್ದು. ರಾಜ್ಯಶಾಸ್ತ್ರ ನಿಪುಣರಾದ ಅಮಾತ್ಯರು ಆ ಮಂತ್ರಾಲೋಚನೆಯನ್ನು ಗೋಪ್ಯವಾಗಿಟ್ಟಿರಬೇಕು. ನೀನು ನಿದ್ರಾವಶನಾಗದೆ ಯುಕ್ತಕಾಲದಲ್ಲಿ ಎಚ್ಚರಗೊಳ್ಳುತ್ತಿರುವೆಯಾ? ರಾತ್ರಿಯ ಕಡೆಯ ಜಾವದಲ್ಲೆದ್ದು ರಾಜನೀತಿಯ ಕರ್ತವ್ಯವನ್ನು ಪರ್ಯಾಲೋಚಿಸುತ್ತಿದ್ದೀಯಾ? (೧೬-೧೭). ನೀನೊಬ್ಬನೇ ಮಂತ್ರಾಲೋಚನೆ ಮಾಡಿ ನಿರ್ಣಯಕ್ಕೆ ಬರುವುದಿಲ್ಲವಷ್ಟೆ?* ಅಥವಾ ಬಹುಮಂದಿಯನ್ನು ಸೇರಿಸಿ ಚರ್ಚಿಸುವುದಿಲ್ಲವಷ್ಟೆ? ನಿನ್ನ ಮಂತ್ರಾಲೋಚನೆಯು ಕಾರ್ಯರೂಪಕ್ಕೆ ಬರುವುದರೊಳಗೇ ರಾಷ್ಟ್ರದಲ್ಲಿ ಬಹಿರಂಗವಾಗುವುದಿಲ್ಲವಷ್ಟೆ? (೧೮). ಅಲ್ಪ ಪ್ರಯತ್ನದಿಂದ ಬಹುಫಲವನ್ನು ಕೊಡತಕ್ಕ ಕಾರ್ಯವನ್ನು ಕೂಡಲೆ ಆಚರಣೆಗೆ ತರುತ್ತಿರುವೆಯಷ್ಟೆ? ಅದನ್ನು ಆಚರಣೆಗೆ ತರಲು ತಡಮಾಡುವುದಿಲ್ಲ ತಾನೆ? (೧೯). ನೀನು ಆಚರಣೆಗೆ ತರಬೇಕೆಂದಿರುವ ಮಂತ್ರಾಲೋಚನೆಯು ಮೊದಲೆ ಸಾಮಂತರಾಜರಿಗೆ ತಿಳಿದಿರುವುದಿಲ್ಲ ತಾನೆ? ಅದು

---

* ಈ ಪ್ರಕರಣದಲ್ಲಿ ತಿಳಿಯಬೇಕಾದ ಹೆಚ್ಚಿನ ವಿವರಗಳಿಗೆ ಅನುಬಂಧವನ್ನು ನೋಡಿ.

ಕಚ್ಚಿನ್ನ ತರ್ಕೈರ್ಯುಕ್ತ್ಯಾ ವಾ ಯೇ ಚಾಪ್ಯಪರಿಕೀರ್ತಿತಾಃ ।
ತ್ವಯಾ ವಾ ತವ ವಾಮಾತ್ಯೈರ್ಬುಧ್ಯತೇ ತಾತ ಮಂತ್ರಿತಮ್ ॥ ೨೧

ಕಚ್ಚಿತ್ ಸಹಸ್ರಾನ್ಮೂರ್ಖಾಣಾಮೇಕಮಿಚ್ಛಸಿ ಪಂಡಿತಮ್ ।
ಪಂಡಿತೋ ಹ್ಯರ್ಥಕೃಚ್ಛ್ರೇಷು ಕುರ್ಯಾನ್ನಿಃಶ್ರೇಯಸಂ ಮಹತ್ ॥ ೨೨

ಸಹಸ್ರಾಣ್ಯಪಿ ಮೂರ್ಖಾಣಾಂ ಯದ್ಯುಪಾಸ್ತೇ ಮಹೀಪತಿಃ ।
ಅಥವಾಪ್ಯಯುತಾನ್ಯೇವ ನಾಸ್ತಿ ತೇಷು ಸಹಾಯತಾ ॥ ೨೩

ಏಕೋಽಪ್ಯಮಾತ್ಯೋ ಮೇಧಾವೀ ಶೂರೋ ದಕ್ಷೋ ವಿಚಕ್ಷಣಃ ।
ರಾಜಾನಂ ರಾಜಮಾತ್ರಂ ವಾ ಪ್ರಾಪಯೇನ್ಮಹತೀಂ ಶ್ರಿಯಮ್ ॥ ೨೪

ಕಚ್ಚಿನ್ಮುಖ್ಯಾ ಮಹತ್ಸ್ವೇವ ಮಧ್ಯಮೇಷು ಚ ಮಧ್ಯಮಾಃ ।
ಜಘನ್ಯಾಸ್ತು ಜಘನ್ಯೇಷು ಭೃತ್ಯಾಃ ಕರ್ಮಸು ಯೋಜಿತಾಃ ॥ ೨೫

ಸಾಮಂತರಿಗೆ ಗೊತ್ತಾಗುವಷ್ಟರಲ್ಲಿ ಪೂರ್ಣವಾಗಿ ನಡೆದುಹೋಗಿರಬೇಕು. ಇಲ್ಲವೆ, ಅರ್ಧದಷ್ಟಾದರೂ ಆಚರಣೆಯಲ್ಲಿ ಬಂದಿರಬೇಕು (೨೦). ನೀನಾಗಲಿ ನಿನ್ನ ಮಂತ್ರಿಗಳಾಗಲಿ ನಡೆಸಿದ ಮಂತ್ರಾಲೋಚನೆಯು ಊಹೆಯಿಂದಲೂ ಯುಕ್ತಿಯಿಂದಲೂ ಜನರಿಗೆ ತಿಳಿದು ಬಹಿರಂಗವಾಗದಂತೆ ಎಚ್ಚರಿಕೆಯಲ್ಲಿರುವೆಯಾ? ಸಾವಿರ ಮೂರ್ಖರಿಗಿಂತಲೂ ಒಬ್ಬ ಪಂಡಿತನೇ ಲೇಸೆಂದು ತಿಳಿದು ಅವನನ್ನು ಆದರಿಸುವೆಯಾ? ಏಕೆಂದರೆ, ಕಷ್ಟಕಾಲದಲ್ಲಿ ಪಂಡಿತನೊಬ್ಬನೇ ಸರಿಯಾದ ಉಪಾಯವನ್ನು ಬೋಧಿಸಿ ಕಾರ್ಯವನ್ನು ನಿರ್ವಹಿಸಬಲ್ಲ(೨೧-೨೨). ಮೂರ್ಖರ ಸಂಖ್ಯೆ ಸಾವಿರವಿರಲಿ - ಹತ್ತು ಸಾವಿರವೇ ಇರಲಿ, ರಾಜನಿಗೆ ಅವರಿಂದ ಯಾವ ಸಹಾಯವೂ ಆಗುವುದಿಲ್ಲ, ಮೇಧಾವಿಯೂ ಶೂರನೂ ಕಾರ್ಯದಕ್ಷನೂ ರಾಜ್ಯಶಾಸ್ತ್ರವಿಶಾರದನೂ ಆದ ಸಚಿವನು ಒಬ್ಬನೇ ಆದರೂ ರಾಜನಿಗಾಗಲಿ ರಾಜ್ಯದ ಆಡಳಿತವನ್ನು ನಿರ್ವಹಿತತಕ್ಕವನಿಗಾಗಲಿ ಮಹತ್ತರವಾದ ಶ್ರೇಯಸ್ಸನ್ನು ತಂದುಕೊಡಬಲ್ಲನು (೨೩-೨೪). ಭರತ, ಉತ್ತಮರಾದ ಅಧಿಕಾರಿಗಳನ್ನು ಮೇಲ್ಮಟ್ಟದ ಕಾರ್ಯದಲ್ಲಿಯೂ ಮಧ್ಯಮರನ್ನು ಸಾಮಾನ್ಯಕಾರ್ಯದಲ್ಲಿಯೂ

ಅಮಾತ್ಯಾನುಪಧಾತೀತಾನ್ ಪಿತೃಪೈತಾಮಹಾನ್ ಶುಚೀನ್ ।
ಶ್ರೇಷ್ಠಾನ್ ಶ್ರೇಷ್ಠೇಷು ಕಚ್ಚಿತ್ತ್ವಂ ನಿಯೋಜಯಸಿ ಕರ್ಮಸು ॥ ೨೬

ಕಚ್ಚಿನ್ನೋಗ್ರೇಣ ದಂಡೇನ ಭೃಶಮುದ್ವೇಜಿತಪ್ರಜಮ್ ।
ರಾಷ್ಟ್ರಂ ತವಾನುಜಾನಂತಿ ಮಂತ್ರಿಣಃ ಕೈಕಯೀಸುತ ॥ ೨೭

ಕಚ್ಚಿತ್ತ್ವಾಂ ನಾವಜಾನಂತಿ ಯಾಜಕಾಃ ಪತಿತಂ ಯಥಾ ।
ಉಗ್ರಪ್ರತಿಗ್ರಹೀತಾರಂ ಕಾಮಯಾನಮಿವ ಸ್ತ್ರಿಯಃ ॥ ೨೮

ಉಪಾಯಕುಶಲಂ ವೈದ್ಯಂ ಭೃತ್ಯಂ ಸಂದೂಷಣೇ ರತಮ್ ।
ಶೂರಮೈಶ್ವರ್ಯಕಾಮಂ ಚ ಯೋ ನ ಹಂತಿ ಸ ವಧ್ಯತೇ ॥ ೨೯

ಕಚ್ಚಿದ್ಧೃಷ್ಟಶ್ಚ ಶೂರಶ್ಚ ಮತಿಮಾನ್ ಧೃತಿಮಾನ್ ಶುಚಿಃ ।
ಕುಲೀನಾಶ್ಚಾನುರಕ್ತಶ್ಚ ದಕ್ಷಃ ಸೇನಾಪತಿಃ ಕೃತಃ ॥ ೩೦

ನಿಕೃಷ್ಟರನ್ನು ಕೀಳ್ಮಟ್ಟದ ಕೆಲಸದಲ್ಲಿಯೂ ನೇಮಿಸುತ್ತಿರುವೆಯಾ? (೨೫). ಅತ್ಯುಚ್ಚವಾದ ಅಧಿಕಾರದಲ್ಲಿ ಶ್ರೇಷ್ಠರಾದ ಅಮಾತ್ಯರನ್ನು ಪರೀಕ್ಷಿಸಿ ನಿಯೋಜಿಸುತ್ತಿರುವೆಯಾ? ಅವರು ಲಂಚವನ್ನು ತೆಗೆದುಕೊಳ್ಳದವರೂ ಪ್ರಾಮಾಣ್ಯದ ವಿಷಯದಲ್ಲಿ ಸಂದೇಹಾತೀತರೂ ಆಗಿರಬೇಕು. ಅವರು ಪಿತೃಪಿತಾಮಹ ಪರಂಪರೆಯಿಂದ ಬಂದವರೂ ಮನಃಶುದ್ಧಿಯುಳ್ಳವರೂ ಆಗಿರಬೇಕು (೨೬). ನೀನು ಒಂದು ವೇಳೆ ಪ್ರಜೆಗಳಿಗೆ ಉಗ್ರದಂಡನೆಯನ್ನು ವಿಧಿಸಿ ರಾಷ್ಟ್ರವನ್ನು ಉದ್ವೇಗಗೊಳಿಸಲು ತೊಡಗಿದರೆ, ನಿನ್ನ ಮಂತ್ರಿಗಳು ಅದನ್ನು ಒಪ್ಪದೆ ನಿನ್ನನ್ನು ತಡೆದು ನಿಲ್ಲಿಸಲು ಮುಂದೆ ಬರುವರಷ್ಟೆ? (೨೭). (ದುರ್ಮಾರ್ಗದಿಂದ ಹಣವನ್ನು ಸಂಪಾದಿಸುವ) ಪತಿತನನ್ನು ಋತ್ವಿಜರೂ ಬಲಾತ್ಕರಿಸುವ ಕಾಮಾತುರನನ್ನು ಸ್ತ್ರೀಯರೂ ತಿರಸ್ಕರಿಸುತ್ತಾರೆ. ಹಾಗೆ ಪ್ರಜೆಗಳು ನಿನ್ನನ್ನು ತಿರಸ್ಕರಿಸುವುದಿಲ್ಲವಷ್ಟೆ? (೨೮). ಉಪಾಯದಿಂದ ಹಣವನ್ನು ಕೀಳುವ ವೈದ್ಯನನ್ನೂ ಒಡೆಯನನ್ನೇ ದೂಷಿಸುವ ಸೇವಕನನ್ನೂ ತನ್ನ ಐಶ್ವರ್ಯದ ಮೇಲೆ ಕಣ್ಣಿಟ್ಟಿರುವ ಶೂರನನ್ನೂ ರಾಜನು ವರ್ಜಿಸಬೇಕು. ಇಲ್ಲವೆ, ಕೊಂದು ಬಿಡಬೇಕು. ಇಲ್ಲದಿದ್ದರೆ ತಾನೇ ವಿಪತ್ತಿನಲ್ಲಿ ಸಿಕ್ಕಿಕೊಳ್ಳುತ್ತಾನೆ (೨೯). ಭರತ, ನಿನ್ನ ಸತ್ಕಾರದಿಂದ ಸಂತೃಪ್ತನೂ ಶೂರನೂ ಸೇನೆಯನ್ನು ವ್ಯವಸ್ಥೆಗೊಳಿಸುವುದರಲ್ಲಿ ಸಮರ್ಥನೂ ಆದವನನ್ನು ಸೇನಾಪತಿಯನ್ನಾಗಿ

ಬಲವಂತಶ್ಚ ಕಚ್ಚಿತ್ತೇ ಮುಖ್ಯಾ ಯುದ್ಧವಿಶಾರದಾಃ।
ದೃಷ್ಟಾಪದಾನಾ ವಿಕ್ರಾಂತಾಸ್ತ್ವಯಾ ಸತ್ಕೃತ್ಯ ಮಾನಿತಾಃ॥ ೩೧

ಕಚ್ಚಿದ್ಬಲಸ್ಯ ಭಕ್ತಂ ಚ ವೇತನಂ ಚ ಯಥೋಚಿತಮ್।
ಸಂಪ್ರಾಪ್ತಕಾಲಂ ದಾತವ್ಯಂ ದದಾಸಿ ನ ವಿಲಂಬಸೇ॥ ೩೨

ಕಾಲಾತ್ರಿಕಮಣಾಚ್ಚೈವ ಭಕ್ತವೇತನಯೋರ್ಭೃತಾಃ।
ಭರ್ತುಃ ಕುಪ್ಯಂತಿ ದುಷ್ಯಂತಿ ಸೋಽನರ್ಥಃ ಸುಮಹಾನ್ ಸ್ಮೃತಃ॥ ೩೩

ಕಚ್ಚಿತ್ ಸರ್ವೇಽನುರಕ್ತಾಸ್ತ್ವಾಂ ಕುಲಪುತ್ರಾಃ ಪ್ರಧಾನತಃ।
ಕಚ್ಚಿತ್ ಪ್ರಾಣಾಂಸ್ತವಾರ್ಥೇಷು ಸಂತ್ಯಜಂತಿ ಸಮಾಹಿತಾಃ॥ ೩೪

ಕಚ್ಚಿಜ್ಞಾನಪದೋ ವಿದ್ವಾನ್ ದಕ್ಷಿಣಃ ಪ್ರತಿಭಾನವಾನ್।
ಯಥೋಕ್ತವಾದೀ ದೂತಸ್ತೇ ಕೃತೋ ಭರತ ಪಂಡಿತಃ॥ ೩೫

ನೇಮಿಸಿರುವೆಯಾ? ಅವನು ಧೀರನಾಗಿ ಲಂಚ ಮೊದಲಾದುದಕ್ಕೆ ಆಸೆಪಡದ ಮನಃಶುದ್ಧಿಯುಳ್ಳವನಾಗಿರಬೇಕು; ಸೇನಾಪತಿಯು ಉತ್ತಮಕುಲದಲ್ಲಿ ಜನಿಸಿ ರಾಜಭಕ್ತಿಯುಳ್ಳವನಾಗಿರಬೇಕು; ಕಾರ್ಯದಕ್ಷನಾಗಿರಬೇಕು (೩೦). ಬಲಶಾಲಿಗಳೂ ಯುದ್ಧವಿಶಾರದರೂ ಹಿಂದೆ ಅನೇಕ ಯುದ್ಧಗಳನ್ನು ಮಾಡಿ ಪ್ರಸಿದ್ಧಿ ಹೊಂದಿದವರೂ ವೀರರೂ ಆದ ಸೇನಾನಾಯಕರಿಗೆ ಪಾರಿತೋಷಕಾದಿಗಳನ್ನೂ ಕೊಟ್ಟು ಸಮ್ಮಾನಿಸುತ್ತಿರುವೆಯಾ? ಸೈನಿಕರಿಗೆ ಕೊಡಬೇಕಾದ ಆಹಾರಸಾಮಗ್ರಿಯನ್ನೂ ವೇತನವನ್ನೂ ಕಾಲಕಾಲಕ್ಕೆ ಯಥೋಚಿತವಾಗಿ ಸಲ್ಲಿಸುತ್ತಿರುವೆಯಾ? ಈ ವಿಷಯದಲ್ಲಿ ವಿಳಂಬಿಸಬಾರದು (೩೧-೩೨). ಭೃತ್ಯರಿಗೆ ಕೊಡಬೇಕಾದ ಸಾಮಗ್ರಿಯನ್ನೂ ವೇತನವನ್ನೂ ಸರಿಯಾದ ಕಾಲದಲ್ಲಿ ಕೊಡದೆ ತಡಮಾಡಬಾರದು. ಹಾಗೆ ಮಾಡಿದರೆ ಭೃತ್ಯರು ಸ್ವಾಮಿಯ ಮೇಲೆ ಕೋಪಿಸಿಕೊಳ್ಳುತ್ತಾರೆ; ದುರ್ಮಾರ್ಗಕ್ಕೂ ಇಳಿಯುತ್ತಾರೆ. ಅದು ಬಹಳ ಅನರ್ಥಕ್ಕೆ ಕಾರಣ (೩೩). ಮುಖ್ಯವಾಗಿ ನಮ್ಮ ಜ್ಞಾತಿಗಳೆಲ್ಲರೂ ನಿನ್ನ ವಿಷಯದಲ್ಲಿ ಪ್ರೀತಿಯಿಂದಿರುವರೆ? ಸಮಯ ಬಂದಾಗ ಅವರೆಲ್ಲರೂ ಒಮ್ಮನಸ್ಸಿನಿಂದ ನಿನಗೋಸ್ಕರ ಪ್ರಾಣವನ್ನಾದರೂ ಒಪ್ಪಿಸಿಯಾರೆ? (೩೪). ನಮ್ಮ ದೇಶದಲ್ಲಿಯೇ ಹುಟ್ಟಿ ಬೆಳೆದ ವಿದ್ವಾಂಸನನ್ನು ದೂತನನ್ನಾಗಿ ನೇಮಿಸಿಕೊಂಡಿದ್ದೀಯಾ? ದೂತನು

ಕಚ್ಚಿದಷ್ಟಾದಶಾನ್ಯೇಷು ಸ್ವಪಕ್ಷೇ ದಶ ಪಂಚ ಚ ।
ತ್ರಿಭಿಸ್ತ್ರಿಭಿರವಿಜ್ಞಾತೈರ್ವೇತ್ಸಿ ತೀರ್ಥಾನಿ ಚಾರಣೈಃ ॥ ೩೬

ಕಚ್ಚಿದ್ವ್ಯಪಾಸ್ತಾನಹಿತಾನ್ ಪ್ರತಿಯಾತಾಂಶ್ಚ ಸರ್ವದಾ ।
ದುರ್ಬಲಾನನವಜ್ಞಾಯ ವರ್ತಸೇ ರಿಪುಸೂದನ ॥ ೩೭

ಕಚ್ಚಿನ್ನ ಲೌಕಯತಿಕಾನ್ ಬ್ರಾಹ್ಮಣಾಂಸ್ತಾತ ಸೇವಸೇ ।
ಅನರ್ಥಕುಶಲಾ ಹ್ಯೇತೇ ಬಾಲಾಃ ಪಂಡಿತಮಾನಿನಃ ॥ ೩೮

ಧರ್ಮಶಾಸ್ತ್ರೇಷು ಮುಖ್ಯೇಷು ವಿದ್ಯಮಾನೇಷು ದುರ್ಬುಧಾಃ ।
ಬುದ್ಧಿಮಾನ್ವೀಕ್ಷಿಕೀಂ ಪ್ರಾಪ್ಯ ನಿರರ್ಥಂ ಪ್ರವದಂತಿ ತೇ ॥ ೩೯

ಕಾರ್ಯಸಮರ್ಥನೂ ಪ್ರತಿಭಾಶಾಲಿಯೂ ಆಗಿರಬೇಕು; ಹೇಳಿಕಳಿಸಧ ಸಂದೇಶವನ್ನು ಮಾತ್ರ ತಿಳಿಸುವ ಸತ್ಯವಂತನಾಗಿರಬೇಕು. ಅವನು ಇದರ ಯೋಗ್ಯತೆ ಇಷ್ಟೇ ಎಂದು ನಿರ್ಣಯಿಸಬಲ್ಲ ಬುದ್ಧಿಶಾಲಿಯಾಗಿರಬೇಕು (೩೫). ಶತ್ರುಪಕ್ಷದಲ್ಲಿ ಮಂತ್ರಿಯೇ ಮೊದಲಾದ ಹದಿನೆಂಟು ತೀರ್ಥಗಳು ಹೇಗೆ ನಡೆದುಕೊಳ್ಳುತ್ತಿವೆಯೆಂದು ಪರೀಕ್ಷಿಸಲು ಒಬ್ಬೊಬ್ಬರ ಮೇಲೆ ಮೂವರು ಗೂಢಚಾರರಂತೆ ನಿಯಮಿಸಬೇಕು. ಆ ಗೂಢಚಾರರಿಗೂ ಅನ್ಯೋನ್ಯ ಪರಿಚಯವಿರಬಾರದು. ಹಾಗೆಯೇ ಸ್ವಪಕ್ಷದಲ್ಲಿ ಸೇನಾಪತಿಯೇ ಮೊದಲಾದ ಹದಿನೈದು ತೀರ್ಥಗಳನ್ನು ಗೂಢಚಾರರಿಂದ ಪರೀಕ್ಷಿಸುತ್ತಿರಬೇಕು. ಇದಕ್ಕೆ ಏರ್ಪಾಡನ್ನು ಮಾಡಿರುವೆಯಾ? (೩೬). ನೀನು ದೇಶದಿಂದ ಹೊರಗೆ ಓಡಿಸಿದಂಥ ಶತ್ರುಗಳು ಕಾಲಾಂತರದಲ್ಲಿ ಪುನಃ ದೇಶದೊಳಗೆ ಬಂದು ಸೇರಿಕೊಂಡರೆ, ಅವರು ಕೈಲಾಗದ ದುರ್ಬಲರು ಎಂಬುದಾಗಿ ಎಂದಿಗೂ ಉಪೇಕ್ಷೆ ಮಾಡಬೇಡ (೩೭). ತಮ್ಮ ಬ್ರಾಹ್ಮಣರಲ್ಲಿಯೂ ಕೆಲವರು ನಾಸ್ತಿಕರಾಗಿ ಇರುತ್ತಾರೆ. ಅಂಥವರನ್ನು ಹತ್ತಿರಕ್ಕೆ ಸೇರಿಸಬೇಡ. ಅವರು ಅವಿವೇಕಿಗಳು. ತಾವೇ ಪಂಡಿತರೆಂದು ಒಣಹೆಮ್ಮೆಯನ್ನು ತಳೆದಿರುತ್ತಾರೆ. ಅವರು ಅನರ್ಥವನ್ನೇ ತಂದಿಡುವರು (೩೮). ಧರ್ಮವನ್ನು ಬೋಧಿಸುವ ಉತ್ತಮಶಾಸ್ತ್ರಗಳಿದ್ದರೂ ಅವರು ಆ ಶಾಸ್ತ್ರಗಳನ್ನು ಉಲ್ಲಂಘಿಸಿ ಶುಷ್ಕತರ್ಕವನ್ನೇ ಅವಲಂಬಿಸುತ್ತಾರೆ. ಆ ನಾಸ್ತಿಕರು ದುರ್ಮಾರ್ಗದಲ್ಲಿಳಿದ ದುರ್ಬುದ್ಧಿಯ ಪಂಡಿತರು. ನಿರರ್ಥಕವಾದ ಮಾತನ್ನಾಡುತ್ತಾರೆ (೩೯). ವತ್ಸ

ವೀರೈರಧ್ಯುಷಿತಾಂ ಪೂರ್ವಮಸ್ಮಾಕಂ ತಾತ ಪೂರ್ವಕೈಃ ।
ಸತ್ಯನಾಮಾಂ ದೃಢದ್ವಾರಾಂ ಹಸ್ತ್ಯಶ್ವರಥಸಂಕುಲಾಮ್ ॥ ೪೦

ಬ್ರಾಹ್ಮಣೈಃ ಕ್ಷತ್ರಿಯೈರ್ವೈಶ್ಯೈಃ ಸ್ವಕರ್ಮನಿರತೈಃ ಸದಾ ।
ಜಿತೇಂದ್ರಿಯೈರ್ಮಹೋತ್ಸಾಹೈರ್ವೃತಾಮಾರ್ಯೈಃ ಸಹಸ್ರಶಃ ॥ ೪೧

ಪ್ರಾಸಾದೈರ್ವಿವಿಧಾಕಾರೈರ್ವೃತಾಂ ವೈದ್ಯಜನಾಕುಲಾಮ್ ।
ಕಚ್ಚಿತ್ ಸಮುದಿತಾಂ ಸ್ಫೀತಾಮಯೋಧ್ಯಾಂ ಪರಿರಕ್ಷಸಿ ॥ ೪೨

ಕಚ್ಚಿಚ್ಚೈತ್ಯಶತೈರ್ಜುಷ್ಟಃ ಸುನಿವಿಷ್ಟಜನಾಕುಲಃ ।
ದೇವಸ್ಥಾನೈಃ ಪ್ರಪಾಭಿಶ್ಚ ತಟಾಕೈಶ್ಚೋಪಶೋಭಿತಃ ॥ ೪೩

ಪ್ರಹೃಷ್ಟನರನಾರೀಕಃ ಸಮಾಜೋತ್ಸವಶೋಭಿತಃ ।
ಸುಕೃಷ್ಟಸೀಮಾ ಪಶುಮಾನ್ ಹಿಂಸಾಭಿರಭಿವರ್ಜಿತಃ ॥ ೪೪

ಅಯೋಧ್ಯಾ ನಗರವಾದರೂ ನಮ್ಮ ತಂದೆಯೇ ಮೊದಲಾದ ವೀರರು ಆಳಿದ ಸ್ಥಳ. ಯುದ್ಧದಲ್ಲಿ ಗೆಲ್ಲಲು ಅಶಕ್ಯವಾದ್ದರಿಂದ ಅಯೋಧ್ಯೆಯೆಂಬ ಹೆಸರು ಅನ್ವರ್ಥವಾಗಿ ಸತ್ಯವಾಗಿ ನಿಂತಿದೆ. ದೃಢವಾದ ಹೊರಬಾಗಿಲು ಅಭೇದ್ಯವಾಗಿದೆ. ನಗರವು ಚತುರಂಗ ಬಲಸಮನ್ವಿತವಾಗಿದೆ (೪೦). ಸ್ವಕರ್ಮನಿರತರಾದ ಬ್ರಾಹ್ಮಣಕ್ಷತ್ರಿಯ ವೈಶ್ಯರಿಂದ ತುಂಬಿದೆ. ಅವರೆಲ್ಲರೂ ಜಿತೇಂದ್ರಿಯರು; ಗೌರವಾನ್ವಿತರು. ನಾನಾ ಬಗೆಯ ಸೌಧಗಳಿಂದ ಅಯೋಧ್ಯೆಯು ವಿರಾಜಿಸುತ್ತಿದೆ. ವಿದ್ಯಾವಂತರಿಂದ ತುಂಬಿದೆ. ಅತ್ಯಂತ ವಿಶಾಲವಾದ ಆ ನಗರವನ್ನು ಚೆನ್ನಾಗಿ ಪಾಲಿಸಿಕೊಂಡು ಬರುತ್ತಿರುವೆಯಾ? (೪೧-೪೨). ಭರತ, ನಮ್ಮ ಕೋಸಲದೇಶವು ಅಶ್ವಮೇಧಾದಿ ಯಾಗಗಳನ್ನು ಮಾಡಿದ ನೂರಾರು ಪ್ರದೇಶಗಳಿಂದ ಪೂರ್ಣವಾಗಿದೆ. ಪ್ರಜೆಗಳು ನೆಮ್ಮದಿಯಲ್ಲಿದ್ದಾರೆ. ದೇವಸ್ಥಾನಗಳೂ ಅರವಟ್ಟಿಗೆಗಳೂ ಸರೋವರಗಳೂ ತುಂಬಿವೆ (೪೩). ಸ್ತ್ರೀಪುರುಷರೆಲ್ಲರೂ ಉಲ್ಲಾಸದಿಂದ ಇದ್ದಾರೆ. ಸಾಮಾಜಿಕವಾದ ಉತ್ಸವಗಳು ನೆರವೇರುತ್ತಲೇ ಇರುತ್ತವೆ. ಸಮಸ್ತ ಪ್ರದೇಶದಲ್ಲಿಯೂ ಕೃಷಿಯು ಚೆನ್ನಾಗಿ ನಡೆಯುತ್ತದೆ. ದನಕರುಗಳು ಸಮೃದ್ಧವಾಗಿವೆ. ಯಾವ ಹಿಂಸಾಕೃತ್ಯವು ಅಲ್ಲಿ ನಡೆಯುವುದಿಲ್ಲ(೪೪). ನಮ್ಮ ಕೋಸಲದೇಶವು ಮಳೆಯನ್ನು ಅವಲಂಬಿಸಿಕೊಂಡಿಲ್ಲ. (ನದೀಜಲದಿಂದ

ಅದೇವಮಾತೃಕೋ ರಮ್ಯಃ ಶ್ವಾಪದೈಃ ಪರಿವರ್ಜಿತಃ ।
ಪರಿತ್ಯಕ್ತೋ ಭಯೈಃ ಸರ್ವೈಃ ಖನಿಭಿಶ್ಚೋಪಶೋಭಿತಃ ॥ ೪೫
ವಿವರ್ಜಿತೋ ನರೈಃ ಪಾಪೈರ್ಮಮ ಪೂರ್ವೈಃ ಸುರಕ್ಷಿತಃ ।
ಕಚ್ಚಿಜ್ಜನಪದಃ ಸ್ಫೀತಃ ಸುಖಂ ವಸತಿ ರಾಘವ ॥ ೪೬
ಕಚ್ಚಿತ್ತೇ ದಯಿತಾಃ ಸರ್ವೇ ಕೃಷಿಗೋರಕ್ಷಜೀವಿನಃ ।
ವಾರ್ತಾಯಾಂ ಸಂಶ್ರಿತಸ್ತಾತ ಲೋಕೋ ಹಿ ಸುಖಮೇಧತೇ ॥ ೪೭
ತೇಷಾಂ ಗುಪ್ತಿಪರೀಹಾರೈಃ ಕಚ್ಚಿತ್ತೇ ಭರಣಂ ಕೃತಮ್ ।
ರಕ್ಷ್ಯಾ ಹಿ ರಾಜ್ಞಾ ಧರ್ಮೇಣ ಸರ್ವೇ ವಿಷಯವಾಸಿನಃ ॥ ೪೮
ಕಚ್ಚಿತ್ ಸ್ತ್ರಿಯಃ ಸಾಂತ್ವಯಸಿ ಕಚ್ಚಿತ್ತಾಶ್ಚ ಸುರಕ್ಷಿತಾಃ ।
ಕಚ್ಚಿನ್ನ ಶ್ರದ್ದಧಾಸ್ಯಾಸಾಂ ಕಚ್ಚಿದ್ಗುಹ್ಯಂ ನ ಭಾಷಸೇ ॥ ೪೯

ಸಮಸ್ತಕೃಷಿಗಳೂ ನಡೆಯುತ್ತವೆ). ನೋಡಲು ರಮಣೀಯವಾಗಿದೆ. ಕ್ರೂರಪ್ರಾಣಿಗಳ ಕಾಟವಿಲ್ಲ, ಯಾವ ಈತಿಭಾದೆಯೂ ಇಲ್ಲ. ನಾನಾ ಲೋಹದ ಗಣಿಗಳು ಹೇರಳವಾಗಿವೆ (೪೫). ಪಾಪಬುದ್ಧಿಯ ಜನರೇ ನಮ್ಮ ದೇಶದಲ್ಲಿಲ್ಲ. ನಮ್ಮ ಹಿರಿಯರು ಉತ್ತಮವಾಗಿ ಪಾಲಿಸಿಕೊಂಡು ಬಂದ ರಾಜ್ಯವದು. ಭರತ, ವಿಸ್ತಾರವಾದ ಆ ಕೋಸಲರಾಜ್ಯವು ಕ್ಷೇಮವಾಗಿದೆಯೆ? (೪೬). ಕೃಷಿ, ಗೋರಕ್ಷಣೆ ಮೊದಲಾದವುಗಳಿಂದ ಜೀವಿಸುವ ವೈಶ್ಯರು ನಿನಗೆ ವಿಶ್ವಾಸಪಾತ್ರರಾಗಿರುವರೆ? ಏಕೆಂದರೆ, ವಾಣಿಜ್ಯದಿಂದ ದೇಶವು ಅಭಿವೃದ್ಧಿ ಹೊಂದುತ್ತದೆ. ವಾಣಿಜ್ಯವೃತ್ತಿಯವರ ಹಿತವನ್ನು ನಡೆಸಿಕೊಟ್ಟು ಕಷ್ಟವನ್ನು ಪರಿಹರಿಸಿ ಅವರ ಯೋಗಕ್ಷೇಮಗಳನ್ನು ನೋಡಿಕೊಳ್ಳುತ್ತಿದ್ದೀಯಾ? ರಾಷ್ಟ್ರದಲ್ಲಿರುವ ಸಮಸ್ತಪ್ರಜೆಗಳನ್ನೂ ಧರ್ಮದಿಂದ ರಕ್ಷಿಸುವುದು ರಾಜನ ಕರ್ತವ್ಯ (೪೭-೪೮). ಭರತ, ನೀನು ಅಂತಃಪುರಸ್ತ್ರೀಯರಿಗೆ ಅನುಕೂಲನಾಗಿದ್ದು ಅವರನ್ನು ಸಂತೈಸುತ್ತಿರುವೆಯಾ? ಅವರಿಗೆ ದುಷ್ಟರ ಸಂಬಂಧವೇರ್ಪಡದಂತೆ ಜೋಪಾನವಾಗಿ ನೋಡಿಕೊಳ್ಳುವೆಯಾ? ವಿಮರ್ಶೆಯಿಲ್ಲದೆ ಸ್ತ್ರೀಯರ ಮಾತನ್ನು ನಂಬಬಾರದು. ಅವರಿಗೆ ಗೋಪ್ಯವಾದ ವಿಷಯವನ್ನು ತಿಳಿಸಬಾರದು (೪೯). ಆನೆಗಳು ದೊರೆಯುವ ಅರಣ್ಯವನ್ನು ಕಾಪಾಡುತ್ತಿರುವೆಯಷ್ಟೆ? ಕಾಡಾನೆಗಳನ್ನು ಹಿಡಿಯಲು ಸಾಕಾದಷ್ಟು ಹೆಣ್ಣಾನೆಗಳು ನಿನ್ನ

ಕಚ್ಚಿನ್ನಾಗವನಂ ಗುಪ್ತಂ ಕಚ್ಚಿತ್ತೇ ಸಂತಿ ಧೇನುಕಾಃ ।
ಕಚ್ಚಿನ್ನ ಗಣಿಕಾಶ್ವಾನಾಂ ಕುಂಜರಾಣಾಂ ಚ ತೃಪ್ಯಸಿ ॥ ೫೦

ಕಚ್ಚಿದ್ದರ್ಶಯಸೇ ನಿತ್ಯಂ ಮನುಷ್ಯಾಣಾಂ ವಿಭೂಷಿತಮ್ ।
ಉತ್ಥಾಯೋತ್ಥಾಯ ಪೂರ್ವಾಹ್ಣೇ ರಾಜಪುತ್ರ ಮಹಾಪಥೇ ॥ ೫೧

ಕಚ್ಚಿನ್ನ ಸರ್ವೇ ಕರ್ಮಾಂತಾಃ ಪ್ರತ್ಯಕ್ಷಾಸ್ತೇಽವಿಶಂಕಯಾ ।
ಸರ್ವೇ ವಾ ಪುನರುತ್ಸೃಷ್ಟಾ ಮಧ್ಯಮೇವಾತ್ರ ಕಾರಣಮ್ ॥ ೫೨

ಕಚ್ಚಿತ್ ಸರ್ವಾಣಿ ದುರ್ಗಾಣಿ ಧನಧಾನ್ಯಾಯುಧೋದಕೈಃ ।
ಯಂತ್ರೈಶ್ಚ ಪರಿಪೂರ್ಣಾನಿ ತಥಾ ಶಿಲ್ಪಿಧನುರ್ಧರೈಃ ॥ ೫೩

ಆಯಸ್ತೇ ವಿಪುಲಃ ಕಚ್ಚಿತ್ ಕಚ್ಚಿದಲ್ಪತರೋ ವ್ಯಯಃ ।
ಅಪಾತ್ರೇಷು ನ ತೇ ಕಚ್ಚಿತ್ ಕೋಶೋ ಗಚ್ಛತಿ ರಾಘವ ॥ ೫೪

ಬಳಿಯಲ್ಲಿವೆಯೆ? ಹೆಣ್ಣಾನೆ, ಕುದುರೆ ಮತ್ತು ಗಂಡಾನೆಗಳು ಬೇಕಾದಷ್ಟಿವೆಯೆಂದು ರಾಜನು ತೃಪ್ತಿಹೊಂದಬಾರದು (೫೦). ಪ್ರತಿದಿನವೂ ಪ್ರಾತಃಕಾಲದಲ್ಲೆದ್ದು ನಿನ್ನನ್ನು ಅಲಂಕರಿಸಿಕೊಂಡು ಸಭಾಮಂಟಪದಲ್ಲಿ ಪ್ರಜೆಗಳಿಗೆ ದರ್ಶನವನ್ನು ಕೊಡುತ್ತಿರುವೆಯಷ್ಟೆ? ನಿನ್ನ ಸೇವಕರೆಲ್ಲರೂ ನಿರ್ಭಯವಾಗಿ ಬಂದು ನಿನ್ನೆದುರಿಗೆ ನಿಲ್ಲುವಷ್ಟು ಸಲಿಗೆಯನ್ನು ಕೊಟ್ಟಿಲ್ಲ ತಾನೆ? ಅಥವಾ ಹತ್ತಿರವೇ ಸುಳಿಯದೆ ದೂರಕ್ಕೆ ತೊಲಗುವಂತೆ ಅಂಜಿಸಿಲ್ಲ ತಾನೆ? ಅವರ ವಿಷಯದಲ್ಲಿ ಹೆಚ್ಚು ಸಲಿಗೆಯೂ ಸಲ್ಲದು; ಹೆಚ್ಚು ಅಂಜಿಸುವುದೂ ಸಲ್ಲದು. ಮಧ್ಯವರ್ತಿಯಾಗಿರಬೇಕು (೫೧-೫೨). ನಿನ್ನ ದುರ್ಗಗಳಲ್ಲಿ ಧನಧಾನ್ಯ ಜಲಗಳು ಸಮೃದ್ಧಿಯಾಗಿವೆಯೆ? ಅವು ಯಂತ್ರಗಳಿಂದಲೂ ಯಂತ್ರಜ್ಞರಾದ ಶಿಲ್ಪಿ ಗಳಿಂದಲೂ ಆಯುಧಗಳಿಂದಲೂ ಧನುರ್ಧಾರಿಗಳಾದ ಸೈನಿಕರಿಂದಲೂ ಪೂರ್ಣವಾಗಿವೆಯೆ? ತಮ್ಮ, ನಿನ್ನ ಆದಾಯವು ಅಧಿಕವಾಗಿಯೂ ವ್ಯಯವು ಆದಾಯಕ್ಕಿಂತ ಕಡಿಮೆಯಾಗಿಯೂ ಇದೆಯೊ? ನಿನ್ನ ಭಂಡಾರವು ಅಯೋಗ್ಯರಿಗೋಸ್ಕರ ವಿನಿಯೋಗವಾಗುವುದಿಲ್ಲ ತಾನೆ? (೫೩-೫೪). ದೇವತೆಗಳು, ಪಿತೃಗಳು, ಬ್ರಾಹ್ಮಣರು, ಅತಿಥಿಗಳು, ಸೈನಿಕರು ಮತ್ತು ಮಿತ್ರರಿಗೋಸ್ಕರ ನಿನ್ನ ವೆಚ್ಚವು

ದೇವತಾರ್ಥೇ ಚ ಪಿತ್ರರ್ಥೇ ಬ್ರಾಹ್ಮಣಾಭ್ಯಾಗತೇಷು ಚ ।
ಯೋಧೇಷು ಮಿತ್ರವರ್ಗೇಷು ಕಚ್ಚಿದ್ಗಚ್ಛತಿ ತೇ ವ್ಯಯಃ ॥ ೫೫

ಕಚ್ಚಿದಾರ್ಯೋ ವಿಶುದ್ಧಾತ್ಮಾಽಽಕ್ಷಾರಿತಶ್ಚಾಪಕರ್ಮಣಾ ।
ಅದೃಷ್ಟಃ ಶಾಸ್ತ್ರಕುಶಲೈರ್ನ ಲೋಭಾದ್ವಧ್ಯತೇ ಶುಚಿಃ ॥ ೫೬

ಗೃಹೀತಶ್ಚೈವ ಪೃಷ್ಟಶ್ಚ ಕಾಲೇ ದೃಷ್ಟಃ ಸಕಾರಣಃ ।
ಕಚ್ಚಿನ್ನ ಮುಚ್ಯತೇ ಚೋರೋ ಧನಲೋಭಾನ್ನರರ್ಷಭ ॥ ೫೭

ವ್ಯಸನೇ ಕಚ್ಚಿದಾಢ್ಯಸ್ಯ ದುರ್ಗತಸ್ಯ ಚ ರಾಘವ ।
ಅರ್ಥಂ ವಿರಾಗಾಃ ಪಶ್ಯಂತಿ ತವಾಮಾತ್ಯಾ ಬಹುಶ್ರುತಾಃ ॥ ೫೮

ಯಾನಿ ಮಿಥ್ಯಾಭಿಶಸ್ತಾನಾಂ ಪತಂತ್ಯಸ್ರಾಣಿ ರಾಘವ ।
ತಾನಿ ಪುತ್ರಪಶೂನ್ ಘ್ನಂತಿ ಪ್ರೀತ್ಯರ್ಥಮನುಶಾಸತಃ ॥ ೫೯

ವಿನಿಯುಕ್ತವಾಗುವುದಷ್ಟೆ? (೫೫). ಶುದ್ಧಾತ್ಮನಾದ ಸಾಧುಪುರುಷನು ದುಷ್ಕೃತ್ಯವನ್ನು ಮಾಡಿದ್ದಾನೆಂಬ ಅಪಾದನೆಗೆ ಒಳಗಾಗುವುದುಂಟು. ಅಂಥ ಸಮಯದಲ್ಲಿ ಆಪಾದಿತನು ಅಪರಾಧಿಯೆಂದು ಧರ್ಮಶಾಸ್ತ್ರಜ್ಞರು ನಿರ್ಣಯಿಸದಿದ್ದರೂ ಆ ನಿರಪರಾಧಿಯನ್ನು ಲೋಭವಶರಾಗಿ (ನಿನ್ನ ಅಧಿಕಾರಿಗಳು) ದಂಡಿಸುವುದಿಲ್ಲವಷ್ಟೆ? (೫೬). ಭರತ, ಕದಿಯುವ ಕಾಲದಲ್ಲಿಯೇ ಸಿಕ್ಕಿಬಿದ್ದ ಕಳ್ಳನನ್ನು ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿ ಅವನು ಕಳ್ಳನೆಂದು ನಿರ್ಧರಿಸಿರುತ್ತಾರೆ. ಅಂಥ ಕಳ್ಳನಿಗೆ ನಿನ್ನ ರಾಜ್ಯದಲ್ಲಿ ಲಂಚದ ಆಸೆಯಿಂದ ಬಿಡುಗಡೆಯಾಗುವುದಿಲ್ಲ ತಾನೆ? (೫೭). ಶ್ರೀಮಂತನಿಗೂ ಬಡವನಿಗೂ ಯಾವುದಾದರೊಂದು ವಿಷಯದಲ್ಲಿ ವಿವಾದವು ಉದ್ಭವಿಸುವುದುಂಟು. ಆಗ ವಿದ್ವಾಂಸರಾದ ನಿನ್ನ ಮಂತ್ರಿಗಳು ಹಣದ ಆಸೆಯಿಲ್ಲದೆ ನಿಷ್ಪಕ್ಷಪಾತವಾಗಿ ವಿವಾದವನ್ನು ಬಗೆಹರಿಸುತ್ತಾರೆಯೊ? (೫೮). ಅನ್ಯಾಯದ ಆಪಾದನೆಗೆ ಒಳಗಾಗಿ ಪ್ರಜೆಗಳು ಕಷ್ಟದಲ್ಲಿ ಸಿಕ್ಕಿ ಕಣ್ಣೀರು ಸುರಿಸುವಂತಾಗಬಾರದು. ಆಗ ರಾಜನು ತನ್ನ ಸೌಖ್ಯಕ್ಕಾಗಿ ರಾಜ್ಯವನ್ನಾಳುತ್ತಾನೆಂದು ತಿಳಿಯಬೇಕಾಗುತ್ತದೆ. ಭರತ, ಪ್ರಜೆಗಳ ಕಣ್ಣೀರು ರಾಜನ ಸಂತತಿಯನ್ನೂ ಪಶು ಮುಂತಾದ ಸಂಪತ್ತನ್ನೂ ನಾಶಮಾಡುತ್ತದೆ (೫೯).

ಕಚ್ಚಿದ್ವೃದ್ಧಾಂಶ್ಚ ಬಾಲಾಂಶ್ಚ ವೈದ್ಯಮುಖ್ಯಾಂಶ್ಚ ರಾಘವ ।
ದಾನೇನ ಮನಸಾ ವಾಚಾ ತ್ರಿಭಿರೇತೈರ್ಬುಭೂಷಸೇ ॥ ೬೦

ಕಚ್ಚಿದ್ಗುರೂಂಶ್ಚ ವೃದ್ಧಾಂಶ್ಚ ತಾಪಸಾನ್ ದೇವತಾತಿಥೀನ್ ।
ಚೈತ್ಯಾಂಶ್ಚ ಸರ್ವಾನ್ ಸಿದ್ಧಾರ್ಥಾನ್ ಬ್ರಾಹ್ಮಣಾಂಶ್ಚ ನಮಸ್ಯಸಿ ॥ ೬೧

ಕಚ್ಚಿದರ್ಥೇನ ವಾ ಧರ್ಮಮರ್ಥಂ ಧರ್ಮೇಣ ವಾ ಪುನಃ ।
ಉಭೌ ವಾ ಪ್ರೀತಿಲೋಭೇನ ಕಾಮೇನ ಚ ನ ಬಾಧಸೇ ॥ ೬೨

ಕಚ್ಚಿದರ್ಥಂ ಚ ಧರ್ಮಂ ಚ ಕಾಮಂ ಚ ಜಯತಾಂ ವರ ।
ವಿಭಜ್ಯ ಕಾಲೇ ಕಾಲಜ್ಞ ಸರ್ವಾನ್ ವರದ ಸೇವಸೇ ॥ ೬೩

ಕಚ್ಚಿತ್ತೇ ಬ್ರಾಹ್ಮಣಾಃ ಶರ್ಮ ಸರ್ವಶಾಸ್ತ್ರಾರ್ಥಕೋವಿದಾಃ ।
ಆಶಂಸಂತೇ ಮಹಾಪ್ರಾಜ್ಞಪೌರಜಾನಪದೈಃ ಸಹ ॥ ೬೪

ರಘುವಂಶೋತ್ತಮ, ನೀನು ಮುದುಕರಿಗೂ ಹುಡುಗರಿಗೂ ವೈದ್ಯರಿಗೂ ಇಷ್ಟವಸ್ತುಗಳನ್ನು ಕೊಟ್ಟು ಅವರೊಡನೆ ಸ್ನೇಹಭಾವದಿಂದ ಒಳ್ಳೆಯ ಮಾತುಗಳನ್ನಾಡುತ್ತಿರುವೆಯಾ? ಗುರುಹಿರಿಯರು, ತಪಸ್ವಿಗಳು, ದೇವತೆಗಳು, ಅತಿಥಿಗಳು, ದೇವತಾವಾಸಸ್ಥಾನವಾದ ಮಹಾವೃಕ್ಷಗಳು, ಯಾಗಾದಿಗಳಿಂದ ಕೃತಕೃತ್ಯರಾದ ಬ್ರಾಹ್ಮಣರು–ಇವರನ್ನು ಕಂಡಾಗ ನಮಸ್ಕರಿಸುವೆಯಾ? (೬೦–೬೧). ಧನಾರ್ಜನೆಯಲ್ಲಿಯೇ ಆಸಕ್ತನಾಗಿ ಧರ್ಮಕ್ಕೆ ಹಾನಿಯನ್ನು ತಂದುಕೊಳ್ಳಬಾರದು. ಹಾಗೆಯೇ ಧರ್ಮಾರ್ಜನೆಯಲ್ಲಿ ಮಾತ್ರ ನಿರತನಾಗಿ ಧನಸಂಪಾದನೆಗೆ ಅಡ್ಡಿಯನ್ನು ತಂದುಕೊಳ್ಳಬಾರದು; ಅಥವಾ ಸುಖಾಭಿಲಾಷೆಯಿಂದ ಕಾಮದಲ್ಲಿಯೇ ತೊಡಗಿ ಧನಧರ್ಮಗಳೆರಡಕ್ಕೂ ಬಾಧೆಯನ್ನು ಮಾಡಿಕೊಳ್ಳಕೂಡದು. ಭರತ, ನೀನು ಈ ಪ್ರಕಾರದಲ್ಲಿ ನಡೆಯುತ್ತಿರುವೆಯಷ್ಟೆ ? (೬೨). ನೀನು ಕಾಲದ ಬೆಲೆಯನ್ನು ಅರಿತವನು. ಈ ಧರ್ಮಾರ್ಥಕಾಮಗಳನ್ನು ಯುಕ್ತಕಾಲದಲ್ಲಿ ಔಚಿತ್ಯವನ್ನರಿತು ಸೇವಿಸುತ್ತಿರುವೆಯಷ್ಟೆ? ಸರ್ವಶಾಸ್ತ್ರಗಳಲ್ಲಿಯೂ ನಿಷ್ಣಾತರಾದ ಬ್ರಾಹ್ಮಣರೂ ಪೌರರೂ ರಾಜ್ಯದ ಸಮಸ್ತ ಪ್ರಜೆಗಳೂ ನಿನಗೆ ಶ್ರೇಯಸ್ಸನ್ನು ಕೋರುತ್ತಿರುವರೆ ? (೬೩–೬೪).

ನಾಸ್ತಿಕ್ಯಮನೃತಂ ಕ್ರೋಧಂ ಪ್ರಮಾದಂ ದೀರ್ಘಸೂತ್ರತಾಮ್ ।
ಅದರ್ಶನಂ ಜ್ಞಾನವತಾಮಾಲಸ್ಯಂ ಪಂಚವೃತ್ತಿತಾಮ್ ॥ ೬೫

ಏಕಚಿಂತನಮರ್ಥಾನಾಮನರ್ಥಜ್ಞೈಶ್ಚ ಮಂತ್ರಣಮ್ ।
ನಿಶ್ಚಿತಾನಾಮನಾರಂಭಂ ಮಂತ್ರಸ್ಯಾಪರಿರಕ್ಷಣಮ್ ॥ ೬೬

ಮಂಗಲಸ್ಯಾಪ್ರಯೋಗಂ ಚ ಪ್ರತ್ಯುತ್ಥಾನಂ ಚ ಸರ್ವತಃ ।
ಕಚ್ಚಿತ್ತ್ವಂ ವರ್ಜಯಸ್ಯೇತಾನ್ ರಾಜದೋಷಾಂಶ್ಚತುರ್ದಶ ॥ ೬೭

ದಶ ಪಂಚ ಚತುರ್ವರ್ಗಾನ್ ಸಪ್ತವರ್ಗಂ ಚ ತತ್ತ್ವತಃ ।
ಅಷ್ಟವರ್ಗಂ ತ್ರಿವರ್ಗಂ ಚ ವಿದ್ಯಾಸ್ತಿಸ್ರಶ್ಚ ರಾಘವ ॥ ೬೮

ಇಂದ್ರಿಯಾಣಾಂ ಜಯಂ ಬುದ್ಧ್ವಾ ಷಾಡ್ಗುಣ್ಯಂ ದೈವಮಾನುಷಮ್ ।
ಕೃತ್ಯಂ ವಿಂಶತಿವರ್ಗಂ ಚ ತಥಾ ಪ್ರಕೃತಿಮಂಡಲಮ್ ॥ ೬೯

ಭರತ, ರಾಜನಲ್ಲಿ ಸಂಭವಿಸಬಹುದಾದ ದೋಷಗಳು ಹದಿನಾಲ್ಕು. ಅವು ಯಾವುವೆಂದರೆ - ನಾಸ್ತಿಕಬುದ್ಧಿ, ಸುಳ್ಳು, ಸಿಟ್ಟು, ಅನವಧಾನ, ಚಟುವಟಿಕೆಯಿಲ್ಲದೆ ಕೆಲಸವನ್ನು ತಡಮಾಡುವುದು. ಪ್ರಾಜ್ಞರಾದ ಸಜ್ಜನರೊಡನೆ ಸೇರದಿರುವುದು. ಸೋಮಾರಿತನ, ಪಂಚೇಂದ್ರಿಯಗಳಿಗೆ ಅಧೀನನಾಗಿ ಇಂದ್ರಿಯಚಾಪಲ್ಯದಲ್ಲಿ ಮುಳುಗುವುದು (೬೫). ಮಂತ್ರಿಗಳೊಡನೆ ಸಮಾಲೋಚಿಸದೆ ರಾಜ್ಯಕಾರ್ಯಗಳಲ್ಲಿ ತಾನೊಬ್ಬನೇ ನಿರ್ಧಾರವನ್ನು ತೆಗೆದುಕೊಳ್ಳುವುದು, ಅನುಭವವಿಲ್ಲದ ಅವಿವೇಕಿಗಳೊಡನೆ ಸಮಾಲೋಚಿಸುವುದು, ನಿಶ್ಚಯಿಸಿದ ಕಾರ್ಯಗಳನ್ನು ಆರಂಭಿಸದಿರುವುದು, ಮಂತ್ರಾಲೋಚನೆಯನ್ನು ರಹಸ್ಯವಾಗಿ ಇಡದೆ ಬಹಿರಂಗಪಡಿಸುವುದು (೬೬). ಹಾಗೆಯೇ ಮಂಗಳಕರವಾದ ಶುಭಕಾರ್ಯವನ್ನು ಮಾಡದಿರುವಿಕೆ ಮತ್ತು ಎಲ್ಲ ಶತ್ರುಗಳ ಮೇಲೂ ಏಕಕಾಲದಲ್ಲಿ ಯುದ್ಧಾರಂಭ. ಈ ಹದಿನಾಲ್ಕು ರಾಜದೋಷಗಳಿಗೆ ಅವಕಾಶವನ್ನು ಕೊಡಬೇಡ (೬೭). ವತ್ಸ (ಇವುಗಳ ಸ್ವರೂಪ ನಿನಗೆ ಗೊತ್ತಿದೆ. ಏನೆಂದರೆ) ದಶವರ್ಗ, ಪಂಚವರ್ಗ, ಚತುರ್ವರ್ಗ, ಸಪ್ತವರ್ಗ, ಅಷ್ಟವರ್ಗ ಮತ್ತು ತ್ರಿವರ್ಗ; ಮೂರು ವಿದ್ಯೆಗಳು, ಇಂದ್ರಿಯಗಳನ್ನು ಜಯಿಸುವ ಉಪಾಯ, ಷಡ್ಗುಣಗಳು, ದೈವವ್ಯಸನ, ಮಾನುಷ ವ್ಯಸನಗಳು, ಭೇದಕೃತ್ಯ, ವಿಂಶತಿವರ್ಗ, ಪಂಚಪ್ರಕೃತಿಗಳು, ದ್ವಾದಶಮಂಡಲಗಳು (೬೮-೬೯). ಮತ್ತು

ಯಾತ್ರಾದಂಡವಿಧಾನಂ ಚ ದ್ವಿಯೋನೀ ಸಂಧಿವಿಗ್ರಹೌ।
ಕಚ್ಚಿದೇತಾನ್ ಮಹಾಪ್ರಾಜ್ಞಯಥಾವದನುಮನ್ಯಸೇ॥ ೭೦

ಮಂತ್ರಿಭಿಸ್ತ್ವಂ ಯಥೋದ್ದಿಷ್ಟೈಶ್ಚತುರ್ಭಿಸ್ತ್ರಿಭಿರೇವ ವಾ।
ಕಚ್ಚಿತ್ ಸಮಸ್ತೈರ್ವ್ಯಸ್ತೈರ್ವಾ ಮಂತ್ರಂ ಮಂತ್ರಯಸೇ ಮಿಥಃ॥ ೭೧

ಕಚ್ಚಿತ್ತೇ ಸಫಲಾ ವೇದಾಃ ಕಚ್ಚಿತ್ತೇ ಸಫಲಾಃ ಕ್ರಿಯಾಃ।
ಕಚ್ಚಿತ್ತೇ ಸಫಲಾ ದಾರಾಃ ಕಚ್ಚಿತ್ತೇ ಸಫಲಂ ಶ್ರುತಮ್॥ ೭೨

ಕಚ್ಚಿದೇಷೈವ ತೇ ಬುದ್ಧಿರ್ಯಥೋಕ್ತಾ ಮಮ ರಾಘವ।
ಆಯುಷ್ಯಾ ಚ ಯಶಸ್ಯಾ ಚ ಧರ್ಮಕಾಮಾರ್ಥಸಂಹಿತಾ॥ ೭೩

ಯಾಂ ವೃತ್ತಿಂ ವರ್ತತೇ ತಾತೋ ಯಾಂ ಚ ನಃ ಪ್ರಪಿತಾಮಹಾಃ।
ತಾಂ ವೃತ್ತಿಂ ವರ್ತಸೇ ಕಚ್ಚಿದ್ಯಾ ಚ ಸತ್ಪಥಗಾ ಶುಭಾ॥ ೭೪

ದಂಡಯಾತ್ರಾ ವಿಧಾನ, ಉಳಿದ ಎರಡೆರಡು ಗುಣಗಳಿಗೆ ಕಾರಣವಾದ ಸಂಧಿ ವಿಗ್ರಹಗಳು. ಭರತ, ಇವುಗಳಲ್ಲಿ ಯಾವುದನ್ನು ಯಾವಾಗ ಸ್ವೀಕರಿಸಬೇಕು, ಯಾವಾಗ ತ್ಯಜಿಸಬೇಕು - ಎಂಬ ತಾರತಮ್ಯವನ್ನು ಗ್ರಹಿಸಿ ನಡೆಯುತ್ತಿರುವೆಯಾ? (೭೦). ವತ್ಸ ನೀತಿಶಾಸ್ತ್ರೋಕ್ತವಾದ ಅರ್ಹತೆಯುಳ್ಳ ಮೂವರು - ನಾಲ್ವರು ಮಂತ್ರಿಗಳೊಡನೆ ರಾಜಕಾರ್ಯವನ್ನು ಮೊದಲು ಒಟ್ಟಿಗೆ ಸಮಾಲೋಚಿಸಬೇಕು. ಅನಂತರ ಒಬ್ಬೊಬ್ಬರನ್ನಾಗಿ ಕರೆಸಿ ಪ್ರತ್ಯೇಕವಾಗಿ ಅವರ ಅಭಿಪ್ರಾಯವನ್ನು ಅರಿತುಕೊಳ್ಳಬೇಕು. ನೀನು ಹೀಗೆ ಮಾಡುತ್ತಿರುವೆಯಾ? (೭೧). ನೀನು ಅಧ್ಯಯನ ಮಾಡಿದ ವೇದಗಳನ್ನು ಅನುಷ್ಠಾನದಿಂದ ಸಫಲಗೊಳಿಸುತ್ತಿದ್ದೀಯಾ? ನಿನ್ನ ರಾಜಕಾರ್ಯಗಳು ಉದ್ದಿಷ್ಟಫಲವನ್ನು ಕೊಡುತ್ತಿವೆಯೊ? ಪತ್ನಿಯಿಂದ ಅಪೇಕ್ಷಿತವಾದ ಸಂತುಷ್ಟಿ ಮೊದಲಾದ ಫಲವು ದೊರಕುವುದಷ್ಟೆ? ನಿನ್ನ ವಿದ್ಯಾಭ್ಯಾಸವು ಸಫಲವಾಗಿದೆಯೊ? (೭೨). ಭರತ, ಇದುವರೆಗೆ ನಾನು ಹೇಳಿದಂತೆ ನಿನ್ನ ಬುದ್ಧಿ ಪ್ರವರ್ತಿಸುವುದೆ? ಈ ಬಗೆಯ ಬುದ್ಧಿ ಆಯುಷ್ಕರ; ಯಶಸ್ಕರ. ಇದರಿಂದ ಧರ್ಮಾರ್ಥಕಾಮಗಳು ಸಿದ್ಧಿಸುತ್ತವೆ (೭೩). ನಮ್ಮ ತಂದೆ, ನಮ್ಮ ಅಜ್ಜ ಮುತ್ತಜ್ಜಂದಿರು ಯಾವ ರೀತಿಯಲ್ಲಿ ನಡೆದುಕೊಂಡರೊ ಅದೇ

ಕಚ್ಚಿತ್ ಸ್ವಾದುಕೃತಂ ಭೋಜ್ಯಮೇಕೋ ನಾಶ್ನಾಸಿ ರಾಘವ।
ಕಚ್ಚಿದಾಶಂಸಮಾನೇಭ್ಯೋ ಮಿತ್ರೇಭ್ಯಃ ಸಂಪ್ರಯಚ್ಛಸಿ॥ ೭೫

ರಾಜಾ ತು ಧರ್ಮೇಣ ಹಿ ಪಾಲಯಿತ್ವಾ
ಮಹಾಮತಿರ್ದಂಡಧರಃ ಪ್ರಜಾನಾಮ್।
ಅವಾಪ್ಯ ಕೃತ್ಸ್ನಾಂ ವಸುಧಾಂ ಯಥಾವತ್
ಇತಶ್ಚ್ಯುತಃ ಸ್ವರ್ಗಮುಪೈತಿ ವಿದ್ವಾನ್॥ ೭೬

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಶತತಮಃ ಸರ್ಗಃ

❀❀❀

ರೀತಿಯಲ್ಲಿ ನಡೆದುಕೊಳ್ಳುವೆಯಷ್ಟೆ? ಅದೇ ಸನ್ಮಾರ್ಗ. ಅದೇ ಶ್ರೇಯಸ್ಕರ (೭೪). ರುಚಿಕರವಾದ ಮೃಷ್ಟಾನ್ನವನ್ನು ನೀನೊಬ್ಬನೇ ಭುಂಜಿಸುವುದಿಲ್ಲವಷ್ಟೆ? ನಿನ್ನ ನೆರವನ್ನು ಬಯಸುವ ಗೆಳೆಯರಿಗೆ ಬೇಕಾದ್ದನ್ನು ಕೊಟ್ಟು ಸಹಾಯ ಮಾಡುತ್ತಿರುವೆಯಾ? (೭೫). ತಮ್ಮ, ಬುದ್ಧಿಶಾಲಿಯಾದ ರಾಜನು ದಂಡಧಾರಿಯಾಗಿ ಧರ್ಮದಿಂದ ಪ್ರಜೆಗಳನ್ನು ಪಾಲಿಸಬೇಕು. ಅವನಿಗೆ ಸಮಸ್ತ ರಾಷ್ಟ್ರಗಳೂ ವಶವಾಗುತ್ತವೆ. ಅಂಥ ಪ್ರಾಜ್ಞನು ಈ ಲೋಕವನ್ನು ಬಿಟ್ಟಮೇಲೆ, ನಮ್ಮ ಪೂರ್ವಜರಂತೆ ಸ್ವರ್ಗಲೋಕವನ್ನು ಪಡೆಯುವನು'' ಎಂದು ಶ್ರೀರಾಮನು ಭರತನಿಗೆ ಹೇಳಿದನು (೭೬).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ನೂರನೆಯ ಸರ್ಗ

❀❀❀

ಏಕಾಧಿಕಶತತಮಃ ಸರ್ಗಃ

ಪಿತೃದಿಷ್ಟಾಂತಶ್ರವಣಮ್

ರಾಮಸ್ಯ ವಚನಂ ಶ್ರುತ್ವಾ ಭರತಃ ಪ್ರತ್ಯುವಾಚ ಹ ।
ಕಿಂ ಮೇ ಧರ್ಮಾದ್ವಿಹೀನಸ್ಯ ರಾಜಧರ್ಮಃ ಕರಿಷ್ಯತಿ ॥ ೧

ಶಾಶ್ವತೋಽಯಂ ಸದಾ ಧರ್ಮಃ ಸ್ಥಿತೋಽಸ್ಮಾಸು ನರರ್ಷಭ ।
ಜ್ಯೇಷ್ಠೇ ಪುತ್ರೇ ಸ್ಥಿತೇ ರಾಜನ್ ಕನೀಯಾನ್ ನ ಭವೇನ್ನೃಪಃ ॥ ೨

ಸ ಸಮೃದ್ಧಾಂ ಮಯಾ ಸಾರ್ಧಮಯೋಧ್ಯಾಂ ಗಚ್ಛ ರಾಘವ ।
ಅಭಿಷೇಚಯ ಚಾತ್ಮಾನಂ ಕುಲಸ್ಯಾಸ್ಯ ಭವಾಯ ನಃ ॥ ೩

ರಾಜಾನಂ ಮಾನುಷಂ ಪ್ರಾಹುರ್ದೇವತ್ವೇ ಸಂಮತೋ ಮಮ ।
ಯಸ್ಯ ಧರ್ಮಾರ್ಥಸಹಿತಂ ವೃತ್ತಮಾಹುರಮಾನುಷಮ್ ॥ ೪

ಕೇಕಯಸ್ಥೇ ಚ ಮಯಿ ತು ತ್ವಯಿ ಚಾರಣ್ಯಮಾಶ್ರಿತೇ ।
ದಿವಮಾರ್ಯೋ ಗತೋ ರಾಜಾ ಯಾಯಜೂಕಃ ಸತಾಂ ಮತಃ ॥ ೫

ಸರ್ಗ ೧೦೧

ಭರತನು ಶ್ರೀರಾಮನಿಗೆ ತಂದೆಯ ಮರಣವಾರ್ತೆಯನ್ನು ತಿಳಿಸುವುದು.

ಶ್ರೀರಾಮನು ಹೇಳಿದ ಮಾತನ್ನು ಕೇಳಿ ಭರತನು ಹೀಗೆಂದನು: ''ಅಣ್ಣ ಧರ್ಮಭ್ರಷ್ಟನಾದ ನನಗೆ ಈ ರಾಜಧರ್ಮದಿಂದೇನಾಗಬೇಕು? ಹಿರಿಯ ಮಗನಿರುವಾಗ ಕಿರಿಯನು ದೊರೆಯಾಗಬಾರದೆಂದು ನಮ್ಮ ಇಕ್ಷ್ವಾಕುವಂಶದಲ್ಲಿ ಶಾಶ್ವತವಾಗಿ ನಡೆದುಬಂದ ಧರ್ಮ (೧-೨). ಸರ್ವಸಮೃದ್ಧವಾದ ಅಯೋಧ್ಯೆಗೆ ನೀನು ನನ್ನೊಡನೆ ಬಂದುಬಿಡು. ಅಲ್ಲಿ ಪಟ್ಟಾಭಿಷೇಕವನ್ನು ನಡೆಸಿಕೊಂಡು ನಮ್ಮ ವಂಶವು ಉಳಿಯುವಂತೆ ಮಾಡು. ರಾಜನೂ ಒಬ್ಬ ಮನುಷ್ಯಮಾತ್ರನೆಂದು ಸಾಮಾನ್ಯ ಜನರು ಆಡಿಕೊಳ್ಳುತ್ತಾರೆ. ನಾನಂತೂ ರಾಜನು ದೇವತೆಯೆಂದೇ ಭಾವಿಸಿದ್ದೇನೆ. ಧರ್ಮಾರ್ಥ ಸಹಿತವಾಗಿ ರಾಜ್ಯಭಾರವನ್ನು ನಡೆಸುವುದು ಮನುಷ್ಯನ ಯೋಗ್ಯತೆಗೆ ಮೀರಿದ್ದೆಂದು ಬಲ್ಲವರು ಹೇಳುತ್ತಾರೆ (೩-೪). ಅಣ್ಣ ನಾನು ಕೇಕಯ ದೇಶದಲ್ಲಿದ್ದೆ ನೀನು ಅರಣ್ಯಕ್ಕೆ ಬಂದುಬಿಟ್ಟೆ. ಆ ಸಮಯದಲ್ಲಿ ಯಾಗಶೀಲನೂ ಸಜ್ಜನರಿಗೆ ಮಾನ್ಯನೂ ಆದ ನಮ್ಮ

ನಿಷ್ಕ್ರಾಂತಮಾತ್ರೇ ಭವತಿ ಸಹಸೀತೇ ಸಲಕ್ಷ್ಮಣೇ।
ದುಃಖಶೋಕಾಭಿಭೂತಸ್ತು ರಾಜಾ ತ್ರಿದಿವಮಭ್ಯಗಾತ್ ॥ ೬

ಉತ್ತಿಷ್ಠ ಪುರುಷವ್ಯಾಘ್ರ ಕ್ರಿಯತಾಮುದಕಂ ಪಿತುಃ।
ಅಹಂ ಚಾಯಂ ಚ ಶತ್ರುಘ್ನಃ ಪೂರ್ವಮೇವ ಕೃತೋದಕೌ ॥ ೭

ಪ್ರಿಯೇಣ ಖಲು ದತ್ತಂ ಹಿ ಪಿತೃಲೋಕೇಷು ರಾಘವ।
ಅಕ್ಷಯ್ಯಂ ಭವತೀತ್ಯಾಹುರ್ಭವಾಂಶ್ಚೈವ ಪಿತುಃ ಪ್ರಿಯಃ ॥ ೮

ತ್ವಾಮೇವ ಶೋಚಂಸ್ತವ ದರ್ಶನೇಪ್ಸು-
ಸ್ತ್ವಯ್ಯೇವ ಸಕ್ತಾಮನಿವರ್ತ್ಯ ಬುದ್ಧಿಮ್।
ತ್ವಯಾ ವಿಹೀನಸ್ತವ ಶೋಕರುಗ್ಣ
ಸ್ತ್ವಾಂ ಸಂಸ್ಮರನ್ನಸ್ತಮಿತಃ ಪಿತಾ ತೇ ॥ ೯

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕಾಧಿಕಶತತಮಃ ಸರ್ಗಃ

❋❋❋

ತಂದೆ - ಮಹಾರಾಜನು ಸ್ವರ್ಗಸ್ಥನಾದನು. ನೀನು ಸೀತಾಲಕ್ಷ್ಮಣರೊಡನೆ ಇತ್ತ ಬಂದಕೂಡಲೆ ಅತ್ತ ಮಹಾರಾಜನು ದುಃಖದಿಂದ ಸಂಕಟಪಡುತ್ತ ಸ್ವರ್ಗವನ್ನು ಸೇರಿಕೊಂಡನು (೫-೬). ಹೇ ಪುರುಷೋತ್ತಮ, ಏಳು; ತಂದೆಗೆ ತರ್ಪಣಾದಿಗಳನ್ನು ನಡೆಸು. ನಾನು, ಈ ಶತ್ರುಘ್ನ-ಇಬ್ಬರೂ ತಂದೆಗೆ ಸಂಸ್ಕಾರವನ್ನು ಮಾಡಿದೆವು. ಪ್ರೇಮಪಾತ್ರನಾದ ಮಗನು ಅರ್ಪಿಸಿದ್ದು ಪಿತೃಲೋಕದಲ್ಲಿ ಅಕ್ಷಯವಾದ ಫಲವನ್ನು ಕೊಡುವುದೆಂದು ಹೇಳುತ್ತಾರೆ. ತಂದೆಗೆ ಪ್ರೇಮಪಾತ್ರನಾದ ಮಗನು ನೀನು (೭-೮). ಶ್ರೀರಾಮ, ನಿನ್ನ ತಂದೆ ನಿನ್ನನ್ನು ಅಗಲಿ, ನಿನ್ನ ಶೋಕದಿಂದ ಬಳಲಿ, ನಿನ್ನನ್ನೇ ಚಿಂತಿಸುತ್ತ, ನಿನ್ನನ್ನು ನೋಡಬೇಕೆಂದು ಹಂಬಲಿಸುತ್ತ, ನಿನ್ನಲ್ಲಿಯೇ ನೆಟ್ಟ ಬುದ್ಧಿಯನ್ನು ಅತ್ತಿತ್ತ ಕದಲಿಸದೆ, ನಿನ್ನನ್ನೇ ಸ್ಮರಿಸುತ್ತ ದೇಹವನ್ನು ಬಿಟ್ಟನು'' ಎಂದನು (೯).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ನೂರೊಂದನೆಯ ಸರ್ಗ

❋❋❋

ದ್ವ್ಯಧಿಕಶತತಮಃ ಸರ್ಗಃ

ನಿವಾಪದಾನಮ್

ತಾಂ ಶ್ರುತ್ವಾ ಕರುಣಾಂ ವಾಚಂ ಪಿತುರ್ಮರಣಸಂಹಿತಾಮ್ ।
ರಾಘವೋ ಭರತೇನೋಕ್ತಾಂ ಬಭೂವ ಗತಚೇತನಃ ॥ ೧

ತಂ ತು ವಜ್ರಮಿವೋತ್ಸೃಷ್ಟಮಾಹವೇ ದಾನವಾರಿಣಾ ।
ವಾಗ್ವಜ್ರಂ ಭರತೇನೋಕ್ತಮಮನೋಜ್ಞಂ ಪರಂತಪಃ ॥ ೨

ಪ್ರಗೃಹ್ಯ ಬಾಹೂ ರಾಮೋ ವೈ ಪುಷ್ಪಿತಾಗ್ರೋ ಯಥಾ ದ್ರುಮಃ ।
ವನೇ ಪರಶುನಾ ಕೃತ್ತಸ್ತಥಾ ಭುವಿ ಪಪಾತ ಹ ॥ ೩

ತಥಾ ನಿಪತಿತಂ ರಾಮಂ ಜಗತ್ಯಾಂ ಜಗತೀಪತಿಮ್ ।
ಕೂಲಘಾತಪರಿಶ್ರಾಂತಂ ಪ್ರಸುಪ್ತಮಿವ ಕುಂಜರಮ್ ॥ ೪

ಭ್ರಾತರಸ್ತೇ ಮಹೇಷ್ವಾಸಂ ಸರ್ವತಃ ಶೋಕಕರ್ಶಿತಾಃ ।
ರುದಂತಃ ಸಹ ವೈದೇಹ್ಯಾ ಸಿಷಿಚುಃ ಸಲಿಲೇನ ವೈ ॥ ೫

ಸರ್ಗ ೧೦೨

ಶ್ರೀರಾಮನ ವಿಲಾಪ; ಮಂದಾಕಿನೀನದಿಯಲ್ಲಿ ತರ್ಪಣ; ಅಯೋಧ್ಯಾನಗರದ ಪ್ರಜೆಗಳಿಂದ ಶ್ರೀರಾಮನ ದರ್ಶನ.

ಹೀಗೆ ಭರತನು ತಂದೆಯ ಮರಣದ ಸುದ್ದಿಯನ್ನು ಹೇಳಲು, ಕರುಳು ಕೊರೆಯುವ ಆ ದುಃಖವಾರ್ತೆಯನ್ನು ಕೇಳಿ ಶ್ರೀರಾಮನಿಗೆ ಎಚ್ಚರದಪ್ಪಿತು. ಭರತನು ಹೇಳಿದ ಆ ಕೆಟ್ಟ ಸುದ್ದಿಯು, ರಣಭೂಮಿಯಲ್ಲಿ ದೇವೇಂದ್ರನು ಎಸೆದ ವಜ್ರಾಯುಧದಂತೆ ವಾಗ್ವಜ್ರವಾಗಿ ಶ್ರೀರಾಮನಿಗೆ ತಾಗಿತು (೧-೨). ಕೊಡಲಿಯಿಂದ ಕಡಿದಾಗ ಕಾಡಿನಲ್ಲಿರುವ ಅರಳಿದ ಮರವು ಹೇಗೆ ಬೀಳುವುದೋ, ಹಾಗೆ ಶ್ರೀರಾಮನು ಕೈಗಳನ್ನು ಚಾಚಿ ನೆಲದ ಮೇಲೆ ಒರಗಿದನು. ವಪ್ರಕ್ರೀಡೆಯನ್ನಾಡಿ* ಬಳಲಿ ಮಲಗಿದ ಆನೆಯಂತೆ ಆ ಜಗತ್ಪಾಲಕನು ನೆಲದ ಮೇಲೆ ಬಿದ್ದುದನ್ನು ಕಂಡು, ಎಲ್ಲರ ಶೋಕವೂ ಉಮ್ಮಳಿಸಿತು (೩-೪). ಅವನ ತಮ್ಮಂದಿರೂ ವೈದೇಹಿಯೂ ಕಣ್ಣೀರಿಡುತ್ತ, ಆ ವೀರರನ್ನು ತಣ್ಣೀರಿನಿಂದ ಚಿಮುಕಿಸಿದರು. ಶ್ರೀರಾಮನು ಎಚ್ಚೆತ್ತು ಕಣ್ಣೀರು ಹರಿಸುತ್ತ

* ವಪ್ರಕ್ರೀಡೆ = ಆನೆಯು ನದೀತಟವನ್ನು ಲೀಲೆಗಾಗಿ ಮೈಯಿಂದ ತೀಡುವುದು.

ಸ ತು ಸಂಜ್ಞಾಂ ಪುನರ್ಲಬ್ಧ್ವಾ ನೇತ್ರಾಭ್ಯಾಮಸ್ರಮುತ್ಸೃಜನ್ ।
ಉಪಾಕ್ರಮತ ಕಾಕುತ್ಸ್ಥಃ ಕೃಪಣಂ ಬಹು ಭಾಷಿತುಮ್ ॥ ೬

ಸ ರಾಮಃ ಸ್ವರ್ಗತಂ ಶ್ರುತ್ವಾ ಪಿತರಂ ಪೃಥಿವೀಪತಿಮ್ ।
ಉವಾಚ ಭರತಂ ವಾಕ್ಯಂ ಧರ್ಮಾತ್ಮಾ ಧರ್ಮಸಂಹಿತಮ್ ॥ ೭

ಕಿಂ ಕರಿಷ್ಯಾಮ್ಯಯೋಧ್ಯಾಯಾಂ ತಾತೇ ದಿಷ್ಟಾಂ ಗತಿಂ ಗತೇ ।
ಕಸ್ತಾಂ ರಾಜವರಾದ್ಧೀನಾಮಯೋಧ್ಯಾಂ ಪಾಲಯಿಷ್ಯತಿ ॥ ೮

ಕಿಂ ನು ತಸ್ಯ ಮಯಾ ಕಾರ್ಯಂ ದುರ್ಜಾತೇನ ಮಹಾತ್ಮನಃ ।
ಯೋ ಮೃತೋ ಮಮ ಶೋಕೇನ ಮಯಾ ಚಾಪಿ ನ ಸಂಸ್ಕೃತಃ ॥ ೯

ಅಹೋ ಭರತ ಸಿದ್ಧಾರ್ಥೋ ಯೇನ ರಾಜಾ ತ್ವಯಾನಘ ।
ಶತ್ರುಘ್ನೇನ ಚ ಸರ್ವೇಷು ಪ್ರೇತಕೃತ್ಯೇಷು ಸತ್ಕೃತಃ ॥ ೧೦

ನಿಷ್ಪ್ರಧಾನಾಮನೇಕಾಗ್ರಾಂ ನರೇಂದ್ರೇಣ ವಿನಾಕೃತಾಮ್ ।
ನಿವೃತ್ತವನವಾಸೋಽಪಿ ನಾಯೋಧ್ಯಾಂ ಗಂತುಮುತ್ಸಹೇ ॥ ೧೧

ದೈನ್ಯದಿಂದ ವಿಲಾಪ ಮಾಡಿದನು (೫-೬). ತಂದೆಯಾದ ಆ ಭೂಪಾಲನು ಸ್ವರ್ಗಸ್ಥನಾದನೆಂಬುದನ್ನು ಕೇಳಿ ಶ್ರೀರಾಮನು ಭರತನನ್ನು ನೋಡಿ ಧರ್ಮಯುಕ್ತವಾದ ಮಾತುಗಳಿಂದ ಹೀಗೆಂದನು : ''ತಂದೆಯು ದೈವಾಧೀನನಾದ ಮೇಲೆ ಅಯೋಧ್ಯೆಯಲ್ಲಿ ನಾನು ಮಾಡುವುದೇನು? ಆ ರಾಜಶ್ರೇಷ್ಠನಿಲ್ಲದ ಅಯೋಧ್ಯೆಯನ್ನು ಯಾರು ಪಾಲಿಸಬಲ್ಲರು? (೭-೮). ಆ ಮಹಾತ್ಮನಿಗೆ ನನ್ನಂಥ ದುಷ್ಪುತ್ರನಿಂದ ಏನು ಪ್ರಯೋಜನ? ನನ್ನ ದುಃಖದಿಂದ ಅವನು ಪ್ರಾಣವನ್ನೇ ಬಿಟ್ಟನಲ್ಲ! ನಾನು ಮಾತ್ರ ಅವನಿಗೆ ಸಂಸ್ಕಾರವನ್ನು ಮಾಡದೇಹೋದೆ. ಆಹಾ! ಭರತ, ನೀನೇ ಕೃತಾರ್ಥ; ನೀನೇ ಪುಣ್ಯಾತ್ಮ. ನೀನೂ ಶತ್ರುಘ್ನನೂ ಸೇರಿ ಸಕಲ ಉತ್ತರಕ್ರಿಯೆಗಳನ್ನೂ ಮಾಡಿ ತಂದೆಗೆ ಗೌರವವನ್ನು ಸಲ್ಲಿಸಿದಿರಿ (೯-೧೦). ತಮ್ಮ, ವನವಾಸ ಮುಗಿದ ಮೇಲೂ ಅಯೋಧ್ಯೆಗೆ ಬರಲು ನನಗೆ ಇಚ್ಛೆಯಿಲ್ಲ. ಮಹಾರಾಜನಿಲ್ಲದ ಅಯೋಧ್ಯೆ ಅನಾಯಕ; ನಿಸ್ಸಾರ. ಭರತ, ವನವಾಸ ಮುಗಿದಮೇಲೂ ನನಗೆ ಅಯೋಧ್ಯೆಯಲ್ಲಿಗತಿಯಾರು? ನಮ್ಮ ತಂದೆ ಲೋಕಾಂತರಕ್ಕೆ ಹೋದ ಮೇಲೆ ನನಗೆ ಬುದ್ಧಿ

ಸಮಾಪ್ತವನವಾಸಂ ಮಾಮಯೋಧ್ಯಾಯಾಂ ಪರಂತಪ ।
ಕೋ ನು ಶಾಸಿಷ್ಯತಿ ಪುನಸ್ತಾತೇ ಲೋಕಾಂತರಂ ಗತೇ ॥ ೧೨

ಪುರಾ ಪ್ರೇಕ್ಷ್ಯ ಸುವೃತ್ತಂ ಮಾಂ ಪಿತಾ ಯಾನ್ಯಾಹ ಸಾಂತ್ವಯನ್ ।
ವಾಕ್ಯಾನಿ ತಾನಿ ಶ್ರೋಷ್ಯಾಮಿ ಕುತಃ ಕರ್ಣಸುಖಾನ್ಯಹಮ್ ॥ ೧೩

ಏವಮುಕ್ತ್ವಾ ಸ ಭರತಂ ಭಾರ್ಯಾಮಭ್ಯೇತ್ಯ ರಾಘವಃ ।
ಉವಾಚ ಶೋಕಸಂತಪ್ತಃ ಪೂರ್ಣಚಂದ್ರನಿಭಾನನಾಮ್ ॥ ೧೪

ಸೀತೇ ಮೃತಸ್ತೇ ಶ್ವಶುರಃ ಪಿತ್ರಾ ಹೀನೋಽಸಿ ಲಕ್ಷ್ಮಣ ।
ಭರತೋ ದುಃಖಮಾಚಷ್ಟೇ ಸ್ವರ್ಗತಂ ಪೃಥಿವೀಪತಿಮ್ ॥ ೧೫

ತತೋ ಬಹುಗುಣಂ ತೇಷಾಂ ಬಾಷ್ಪೋ ನೇತ್ರೇಷ್ವಜಾಯತ ।
ತಥಾ ಬ್ರುವತಿ ಕಾಕುತ್ಸ್ಥೇ ಕುಮಾರಾಣಾಂ ಯಶಸ್ವಿನಾಮ್ ॥ ೧೬

ತತಸ್ತೇ ಭ್ರಾತರಃ ಸರ್ವೇ ಭೃಶಮಾಶ್ವಾಸ್ಯ ರಾಘವಮ್ ।
ಅಬ್ರುವನ್ ಜಗತೀಭರ್ತುಃ ಕ್ರಿಯತಾಮುದಕಂ ಪಿತುಃ ॥ ೧೭

ಹೇಳುವವರಾರು? (೧೧-೧೨). ನಾನು ವಿನೀತನಾಗಿ ನಡೆದುಕೊಂಡಾಗ ನಮ್ಮ ತಂದೆ ಎಷ್ಟು ಸಂತೋಷಪಡುತ್ತಿದ್ದನು! ಇಂಪಾದ ಮಾತುಗಳನ್ನಾಡಿ ಎಷ್ಟು ಲಾಲಿಸುತ್ತಿದ್ದನು! ಅಂಥ ಮಾತುಗಳನ್ನು ಇನ್ನು ಕೇಳುವುದೆಲ್ಲಿ?'' ಎಂದು ಹಲುಬಿದನು (೧೩). ಅನಂತರ ಶೋಕದಿಂದ ಬೆಂದುಹೋಗುತ್ತಿದ್ದ ಶ್ರೀರಾಮನು ಸೀತೆಯ ಕಡೆಗೆ ತಿರುಗಿ ಸೀತೆ, ನಿನ್ನ ಮಾವನು ಮೃತನಾದನು. ಲಕ್ಷ್ಮಣ, ನೀನು ತಂದೆಯಿಲ್ಲದ ತಬ್ಬಲಿಯಾದೆ. ಮಹಾರಾಜನು ಮೃತನಾದನೆಂದು ಭರತನು ದುಃಖದ ಸುದ್ದಿಯನ್ನು ತಂದಿದ್ದಾನೆ'' ಎಂದು ನುಡಿದನು (೧೪-೧೫). ಹೀಗೆ ಶ್ರೀರಾಮನು ವಿಲಪಿಸುತ್ತಿರುವಾಗ ಅವನ ಸೋದರರೆಲ್ಲರಿಗೂ ಕಣ್ಣುಗಳಲ್ಲಿ ನೀರು ಉಕ್ಕುತ್ತಿತ್ತು. ಅವರೆಲ್ಲರೂ ರಾಘವನನ್ನು ಬಹುಪರಿಯಲ್ಲಿ ಸಂತೈಸಿ, ತಂದೆಗೆ ಉದಕಕ್ರಿಯೆಯನ್ನು ನಡೆಸಬೇಕೆಂದು ಹೇಳಿದರು. ಸೀತೆಯು ತನ್ನ ಮಾವನು ಸ್ವರ್ಗಸ್ಥನಾದನೆಂಬುದನ್ನು ಕೇಳಿ ಕಣ್ಣೀರು ಮಿಡಿಯುತ್ತಿದ್ದಳು; ತಲೆಯೆತ್ತಿ ತನ್ನ ಪತಿಯನ್ನು ನೋಡಲಾರದೆ ಹೋದಳು (೧೬-೧೮). ದುಃಖಾರ್ತನಾದ

ಸಾ ಸೀತಾ ಶ್ವಶುರಂ ಶ್ರುತ್ವಾ ಸ್ವರ್ಗಲೋಕಗತಂ ನೃಪಮ್ ।
ನೇತ್ರಾಭ್ಯಾಮಶ್ರುಪೂರ್ಣಾಭ್ಯಾಂ ನ ಶಶಾಕೇಕ್ಷಿತುಂ ಪತಿಮ್ ॥ ೧೮

ಸಾಂತ್ವಯಿತ್ವಾ ತು ತಾಂ ರಾಮೋ ರುದಂತೀಂ ಜನಕಾತ್ಮಜಾಮ್ ।
ಉವಾಚ ಲಕ್ಷ್ಮಣಂ ತತ್ರ ದುಃಖಿತೋ ದುಃಖಿತಂ ವಚಃ ॥ ೧೯

ಆನಯೇಂಗುದಿಪಿಣ್ಯಾಕಂ ಚೀರಮಾಹರ ಚೋತ್ತರಮ್ ।
ಜಲಕ್ರಿಯಾರ್ಥಂ ತಾತಸ್ಯ ಗಮಿಷ್ಯಾಮಿ ಮಹಾತ್ಮನಃ ॥ ೨೦

ಸೀತಾ ಪುರಸ್ತಾದ್ವ್ರಜತು ತ್ವಮೇನಾಮಭಿತೋ ವ್ರಜ ।
ಅಹಂ ಪಶ್ಚಾದ್ಗಮಿಷ್ಯಾಮಿ ಗತಿರ್ಹ್ಯೇಷಾ ಸುದಾರುಣಾ ॥ ೨೧

ತತೋ ನಿತ್ಯಾನುಗಸ್ತೇಷಾಂ ವಿದಿತಾತ್ಮಾ ಮಹಾಮತಿಃ ।
ಮೃದುರ್ದಾಂತಶ್ಚ ಶಾಂತಶ್ಚ ರಾಮೇ ಚ ದೃಢಭಕ್ತಿಮಾನ್ ॥ ೨೨

ಸುಮಂತ್ರಸ್ತೈರ್ನೃಪಸುತೈಃ ಸಾರ್ಧಮಾಶ್ವಾಸ್ಯ ರಾಘವಮ್ ।
ಅವಾತಾರಯದಾಲಂಬ್ಯ ನದೀಂ ಮಂದಾಕಿನೀಂ ಶಿವಾಮ್ ॥ ೨೩

ಶ್ರೀರಾಮನು ಅಳುತ್ತಿದ್ದ ಜಾನಕಿಯನ್ನು ಸಂತೈಸಿ, ಖಿನ್ನನಾಗಿದ್ದ ಲಕ್ಷ್ಮಣನನ್ನು ಕುರಿತು "ಲಕ್ಷ್ಮಣ, ಇಂಗುದೀ ಬೀಜದ ಉಂಡೆಯನ್ನೂ ಉಡುವ ಮತ್ತು ಹೊದೆಯುವ ನಾರುಮಡಿಗಳನ್ನೂ ತಂದಿಡು. ಮಹಾತ್ಮನಾದ ನಮ್ಮ ತಂದೆಗೆ ಉದಕಕ್ರಿಯೆಯನ್ನು ನಡೆಸಲು ಹೋಗುತ್ತೇನೆ (೧೯-೨೦). ಸೀತೆಯನ್ನು ಮುಂದಿಟ್ಟುಕೊಂಡು ನೀನು ಹೊರಡು. ನಿನ್ನ ಹಿಂದೆ ನಾನು ಬರುತ್ತೇನೆ. ಇಂಥ ದುಃಖದ ಕಾರ್ಯಕ್ಕೆ ಹೋಗುವಾಗ ಇದೇ ಶಾಸ್ತ್ರವಿಧಿ*" ಎಂದು ಹೇಳಿದನು (೨೧). ಅನಂತರ ಯಾವಾಗಲೂ ಆ ರಾಜವಂಶೀಯರಿಗೆ ಜೊತೆಗಾರನೂ ವಿವೇಕಿಯೂ ಪ್ರಾಜ್ಞನೂ ಮೃದುಸ್ವಭಾವದವನೂ ಶಮದಮಾದಿ ಗುಣಯುಕ್ತನೂ ಶ್ರೀರಾಮನಲ್ಲಿ ವಿಶೇಷವಾದ ಭಕ್ತಿಯುಳ್ಳವನೂ ಆದ ಸುಮಂತ್ರನು, ಶ್ರೀರಾಮನನ್ನೂ ಇತರ ರಾಜಕುಮಾರರನ್ನೂ ಸಂತೈಸುತ್ತ

---

* 'ಸರ್ವೇ ಕನಿಷ್ಠಪ್ರಥಮಾ ಅನುಪೂರ್ವ ಇತೇ ಸ್ತ್ರಿಯೋಽಗ್ರೇ' ಎಂದು ಪಿತೃಮೇಧಸೂತ್ರ. ಕನಿಷ್ಠನನ್ನು ಮುಂದೆ ಮಾಡಿಕೊಂಡು ಕ್ರಮವಾಗಿ ಹಿರಿಯರು ಹಿಂದೆ ಇರಬೇಕು. ಹೆಂಗಸರು ಎಲ್ಲರಿಗೂ ಮುಂದೆ ಇರಬೇಕು' ಎಂದು ಅದರ ಅರ್ಥ.

ತೇ ಸುತೀರ್ಥಾಂ ತತಃ ಕೃಚ್ಛ್ರಾದುಪಾಗಮ್ಯ ಯಶಸ್ವಿನಃ ।
ನದೀಂ ಮಂದಾಕಿನೀಂ ರಮ್ಯಾಂ ಸದಾ ಪುಷ್ಪಿತಕಾನನಾಮ್ ॥ ೨೪

ಶೀಘ್ರಸ್ರೋತಸಮಾಸಾದ್ಯ ತೀರ್ಥಂ ಶಿವಮಕರ್ದಮಮ್ ।
ಸಿಷಿಚುಸ್ತೂದಕಂ ರಾಜ್ಞೇ ತತ್ರೈತತ್ತೇ ಭವತ್ವಿತಿ ॥ ೨೫

ಪ್ರಗೃಹ್ಯ ಚ ಮಹೀಪಾಲೋ ಜಲಪೂರಿತಮಂಜಲಿಮ್ ।
ದಿಶಂ ಯಾಮ್ಯಾಮಭಿಮುಖೋ ರುದನ್ ವಚನಮಬ್ರವೀತ್ ॥ ೨೬

ಏತತ್ತೇ ರಾಜಶಾರ್ದೂಲ ವಿಮಲಂ ತೋಯಮಕ್ಷಯಮ್ ।
ಪಿತೃಲೋಕಗತಸ್ಯಾದ್ಯ ಮದ್ದತ್ತಮುಪತಿಷ್ಠತು ॥ ೨೭

ತತೋ ಮಂದಾಕಿನೀತೀರಾತ್ ಪ್ರತ್ಯುತ್ತೀರ್ಯ ಸ ರಾಘವಃ ।
ಪಿತುಶ್ಚಕಾರ ತೇಜಸ್ವೀ ನಿವಾಪಂ ಭ್ರಾತೃಭಿಃ ಸಹ ॥ ೨೮

ಐಂಗುದಂ ಬದರೀಮಿಶ್ರಂ ಪಿಣ್ಯಾಕಂ ದರ್ಭಸಂಸ್ತರೇ ।
ನ್ಯಸ್ಯ ರಾಮಃ ಸುದುಃಖಾರ್ತೋ ರುದನ್ ವಚನಮಬ್ರವೀತ್ ॥ ೨೯

ಕರೆದುಕೊಂಡುಹೋಗಿ, ಕೈಹಿಡಿದು ಮೆಲ್ಲಗೆ ಪವಿತ್ರವಾದ ಮಂದಾಕಿನೀನದಿಗೆ ಇಳಿಸಿದನು (೨೨-೨೩). ರಮಣೀಯವಾದ ಮಂದಾಕಿನೀ ನದಿಯ ಇಕ್ಕೆಲದ ವನಗಳಲ್ಲಿ ಹೂಗಳು ಅರಳಿ ನಿಂತಿದ್ದವು. ನದಿಯಲ್ಲಿ ಪವಿತ್ರವಾದ ತಿಳಿನೀರು ಸಳಸಳನೆ ಹರಿಯುತ್ತಿತ್ತು. ಅವರೆಲ್ಲರೂ ಬಹುದುಃಖದಿಂದ ನದಿಯಲ್ಲಿ ಸ್ನಾನಮಾಡಿದರು. ಅನಂತರ ಆ ಸೋದರರರು 'ಅಪ್ಪ, ಇದು ನಿನಗೆ ಅರ್ಪಿತವಾಗಲಿ' ಎಂದು ತರ್ಪಣವನ್ನಿತ್ತರು (೨೪-೨೫). ಶ್ರೀರಾಮನು ಅಂಜಲಿಯಲ್ಲಿ ಜಲವನ್ನು ತುಂಬಿಕೊಂಡು ದಕ್ಷಿಣದಿಕ್ಕಿಗೆ ತಿರುಗಿ ರೋದಿಸುತ್ತ ''ಹೇ ಮಹಾರಾಜ, ನಾನು ಅರ್ಪಿಸುವ ಈ ಶುದ್ಧೋದಕವು ಈಗ ಪಿತೃಲೋಕದಲ್ಲಿರುವ ನಿನಗೆ ಸೇರಿ ಅಕ್ಷಯವಾಗಲಿ'' ಎಂದು ಹೇಳಿ ತರ್ಪಣವನ್ನು ಕೊಟ್ಟನು (೨೬-೨೭). ಅನಂತರ ತೇಜಸ್ವಿಯಾದ ರಾಘವನು ತಮ್ಮಂದಿರೊಡನೆ ಮಂದಾಕಿನೀತೀರದಿಂದ ಮೇಲಕ್ಕೆ ಬಂದು ತಂದೆಗೆ ಪಿಂಡಪ್ರದಾನವನ್ನು ಮಾಡಿದನು. ಅವನು ಬೋರೆ ಹಣ್ಣುಗಳಿಂದ ಮಿಶ್ರವಾದ ಇಂಗುದೀಬೀಜಗಳ ಉಂಡೆಯನ್ನು ದರ್ಭಾಸ್ತರಣದ ಮೇಲಿಟ್ಟು

ಇದಂ ಭುಂಕ್ಷ್ವ ಮಹಾರಾಜ ಪ್ರೀತೋ ಯದಶನಾ ವಯಮ್ ।
ಯದನ್ನಃ ಪುರುಷೋ ಭವತಿ ತದನ್ನಾಸ್ತಸ್ಯ ದೇವತಾಃ ॥ ೩೦

ತತಸ್ತೇನೈವ ಮಾರ್ಗೇಣ ಪ್ರತ್ಯುತ್ತೀರ್ಯ ನದೀತಟಾತ್ ।
ಆರುರೋಹ ನರವ್ಯಾಘ್ರೋ ರಮ್ಯಸಾನುಂ ಮಹೀಧರಮ್ ॥ ೩೧

ತತಃ ಪರ್ಣಕುಟೀದ್ವಾರಮಾಸಾದ್ಯ ಜಗತೀಪತಿಃ ।
ಪರಿಜಗ್ರಾಹ ಬಾಹುಭ್ಯಾಮುಭೌ ಭರತಲಕ್ಷ್ಮಣೌ ॥ ೩೨

ತೇಷಾಂ ತು ರುದತಾಂ ಶಬ್ದಾತ್ ಪ್ರತಿಶಬ್ದೋಽಭವದ್ಗಿರೌ ।
ಭ್ರಾತೄಣಾಂ ಸಹ ವೈದೇಹ್ಯಾ ಸಿಂಹಾನಾಮಿವ ನರ್ದತಾಮ್ ॥ ೩೩

ಮಹಾಬಲಾನಾಂ ರುದತಾಂ ಕುರ್ವತಾಮುದಕಂ ಪಿತುಃ ।
ವಿಜ್ಞಾಯ ತುಮುಲಂ ಶಬ್ದಂ ತ್ರಸ್ತಾ ಭರತಸೈನಿಕಾಃ ॥ ೩೪

ಅಬ್ರುವಂಶ್ಚಾಪಿ ರಾಮೇಣ ಭರತಃ ಸಂಗತೋ ಧ್ರುವಮ್ ।
ತೇಷಾಮೇವ ಮಹಾನ್ ಶಬ್ದಃ ಶೋಚತಾಂ ಪಿತರಂ ಮೃತಮ್ ॥ ೩೫

ದುಃಖವನ್ನು ತಡೆಯಲಾರದೆ ಅಳುತ್ತ "ಮಹಾರಾಜ, ಇದನ್ನು ಭುಂಜಿಸಿ ಸುಪ್ರೀತನಾಗು. ಇದೇ ನಮ್ಮ ಆಹಾರ. ಜನರಿಗೆ ಯಾವುದು ಆಹಾರವೋ, ಅವರ ಇಷ್ಟದೇವತೆಗಳಿಗೆ ಅದೇ ಆಹಾರವಾಗುತ್ತದೆ" ಎಂದು ಹೇಳಿ ಪಿಂಡಪ್ರದಾನವನ್ನು ಮಾಡಿದನು (೨೮-೩೦). ಆಮೇಲೆ ನದೀತೀರದಿಂದ ಅದೇ ಮಾರ್ಗವಾಗಿ ಹಿಂದಿರುಗಿ ಅಂದವಾದ ತಪ್ಪಲುಗಳಿದ್ದ ಚಿತ್ರಕೂಟ ಪರ್ವತವನ್ನು ಹತ್ತಿದನು. ಶ್ರೀರಾಮನು ತನ್ನ ಪರ್ಣಶಾಲೆಯ ಬಾಗಿಲಿಗೆ ಬಂದು ಭರತಲಕ್ಷ್ಮಣರನ್ನು ಎರಡು ತೋಳುಗಳಿಂದಲೂ ಅಪ್ಪಿಕೊಂಡು ಗಟ್ಟಿಯಾಗಿ ಅತ್ತನು (೩೧-೩೨). ನಾಲ್ವರು ಅಣ್ಣ ತಮ್ಮಂದಿರೂ ರೋದಿಸಿದರು. ವೈದೇಹಿಯೂ ಅಳುತ್ತ ನಿಂತಳು. ಅವರ ರೋದನ ಧ್ವನಿಯು ಸಿಂಹಗರ್ಜನೆಯಂತೆ ಬೆಟ್ಟದಲ್ಲಿ ಪ್ರತಿಧ್ವನಿಸುತ್ತಿತ್ತು. ಬಲಾಢ್ಯರಾದ ಆ ಅಣ್ಣ ತಮ್ಮಂದಿರು ತಂದೆಗೆ ತರ್ಪಣವನ್ನರ್ಪಿಸಿ ಅಳುತ್ತಿರಲು, ಆ ತುಮುಲ ಶಬ್ದವನ್ನು ಕೇಳಿ ಭರತನ ಸೈನಿಕರು ಭಯಚಕಿತರಾದರು (೩೩-೩೪). "ಭರತನು ಶ್ರೀರಾಮನನ್ನು ಕಂಡಿರಬೇಕು. ತಂದೆಯು ಮೃತನಾದನೆಂದು ಅವರೆಲ್ಲರೂ ಗಟ್ಟಿಯಾಗಿ ಅಳುತ್ತಿದ್ದಾರೆ" ಎಂಬುದಾಗಿ

ಅಥ ವಾಸಾನ್ ಪರಿತ್ಯಜ್ಯ ತಂ ಸರ್ವೇಽಭಿಮುಖಾಃ ಸ್ವನಮ್ ।
ಅಪ್ಯೇಕಮನಸೋ ಜಗ್ಮುರ್ಯಥಾಸ್ಥಾನಂ ಪ್ರಧಾವಿತಾಃ ॥ ೩೬

ಹಯೈರನ್ಯೇ ಗಜೈರನ್ಯೇ ರಥೈರನ್ಯೇ ಸ್ವಲಂಕೃತೈಃ ।
ಸುಕುಮಾರಾಸ್ತಥೈವಾನ್ಯೇ ಪದ್ಭಿರೇವ ನರಾ ಯಯುಃ ॥ ೩೭

ಅಚಿರಪ್ರೋಷಿತಂ ರಾಮಂ ಚಿರವಿಪ್ರೋಷಿತಂ ಯಥಾ ।
ದ್ರಷ್ಟುಕಾಮೋ ಜನಃ ಸರ್ವೋ ಜಗಾಮ ಸಹಸಾಶ್ರಮಮ್ ॥ ೩೮

ಭ್ರಾತೄಣಾಂ ತ್ವರಿತಾಸ್ತತ್ರ ದ್ರಷ್ಟುಕಾಮಾಃ ಸಮಾಗಮಮ್ ।
ಯಯುರ್ಬಹುರ್ಭಿಯಾನೈಃ ಖುರನೇಮಿಸ್ವನಾಕುಲೈಃ ॥ ೩೯

ಸಾ ಭೂಮಿರ್ಬಹುರ್ಭಿಯಾನೈಃ ಖುರನೇಮಿಸಮಾಹತಾ ।
ಮುಮೋಚ ತುಮುಲಂ ಶಬ್ದಂ ದ್ಯೌರಿವಾಭ್ರಸಮಾಗಮೇ ॥ ೪೦

ತೇನ ವಿತ್ರಾಸಿತಾ ನಾಗಾಃ ಕರೇಣುಪರಿವಾರಿತಾಃ ।
ಆವಾಸಯಂತೋ ಗಂಧೇನ ಜಗ್ಮುರನ್ಯದ್ವನಂ ತತಃ ॥ ೪೧

ಆ ಸೈನಿಕರು ಮಾತನಾಡಿಕೊಂಡರು. ಕೂಡಲೆ ಅವರೆಲ್ಲರೂ ತಮ್ಮ ಬಿಡಾರಗಳಿಂದ ಹೊರಟು ಶಬ್ದವು ಬರುತ್ತಿದ್ದ ಕಡೆಗೆ ಒಮ್ಮನಸ್ಸಿನಿಂದ ಓಡುತ್ತ ಹೋದರು (೩೫-೩೬). ಕೆಲವರು ನಡೆಯುತ್ತಲೇ ಹೋದರು. ನಡೆಯಲಾರದವರು ಕುದುರೆ ಆನೆ ರಥಗಳನ್ನು ಹತ್ತಿ ಹೊರಟರು. ಶ್ರೀರಾಮನು ಕಾಡಿಗೆ ಹೋಗಿ ಸ್ವಲ್ಪ ಕಾಲ ಮಾತ್ರವೇ ಆಗಿದ್ದರೂ ಅವರಿಗೆ ಬಹುಕಾಲವಾದಂತೆ ಕಾಣುತ್ತಿತ್ತು. ಅವನನ್ನು ನೋಡುವ ಉತ್ಸಾಹದಿಂದ ಅವರೆಲ್ಲರೂ ಥಟ್ಟನೆ ಆಶ್ರಮದ ಕಡೆಗೆ ಓಡಿದರು (೩೭-೩೮). ನಾಲ್ವರು ಅಣ್ಣತಮ್ಮಂದಿರೂ ಒಂದಾಗಿ ಕಲೆತ ಸನ್ನಿವೇಶವನ್ನು ನೋಡುವ ಕೌತುಕ ಅವರಲ್ಲಿ ತುಂಬಿತ್ತು. ಹೀಗೆ ಆ ಜನರು ನಾನಾ ಬಗೆಯ ವಾಹನಗಳನ್ನೇರಿ ಧಾವಿಸುತ್ತಿರಲು, ಅಶ್ವಗಳ ಖುರಪುಟ ಧ್ವನಿಯಿಂದಲೂ ಚಕ್ರಗಳ ಚೀತ್ಕಾರದಿಂದಲೂ ಭೂಮಿಯು ಮೊಳಗಿತು. ಮೋಡಗಳು ಆಕಾಶದಲ್ಲಿ ಒಂದಕ್ಕೊಂದು ಅಪ್ಪಳಿಸಿದಂತೆ ಶಬ್ದವಾಯಿತು (೩೯-೪೦). ಆಗ ಅಲ್ಲಿದ್ದ ಕಾಡಾನೆಗಳು ಭಯಗೊಂಡು ತಮ್ಮ ಮದಗಂಧವನ್ನು ಸುತ್ತಲೂ ಸೂಸುತ್ತ ಹೆಣ್ಣಾನೆಗಳೊಡನೆ ಮತ್ತೊಂದು ಕಾಡಿಗೆ ಓಡಿಹೋದವು. ಹಂದಿ,

ವರಾಹವೃಕಸಂಘಾಶ್ಚ ಮಹಿಷಾಃ ಸರ್ಪವಾನರಾಃ ।
ವ್ಯಾಘ್ರಗೋಕರ್ಣಗವಯಾ ವಿತ್ರೇಸುಃ ಪೃಷತೈಃ ಸಹ ॥ ೪೨

ರಥಾಂಗಸಾಹ್ವಾ ನತ್ಯೂಹಾ ಹಂಸಾಃ ಕಾರಂಡವಾಃ ಪ್ಲವಾಃ ।
ತಥಾ ಪುಂಸ್ಕೋಕಿಲಾಃ ಕ್ರೌಂಚಾ ವಿಸಂಜ್ಞಾ ಭೇಜಿರೇ ದಿಶಃ ॥ ೪೩

ತೇನ ಶಬ್ದೇನ ವಿತ್ರಸ್ತೈರಾಕಾಶಂ ಪಕ್ಷಿಭಿರ್ವೃತಮ್ ।
ಮನುಷ್ಯೈರಾವೃತಾ ಭೂಮಿರುಭಯಂ ಪ್ರಬಭೌ ತದಾ ॥ ೪೪

ತತಸ್ತಂ ಪುರುಷವ್ಯಾಘ್ರಂ ಯಶಸ್ವಿನಮಕಲ್ಮಷಮ್ ।
ಆಸೀನಂ ಸ್ಥಂಡಿಲೇ ರಾಮಂ ದದರ್ಶ ಸಹಸಾ ಜನಃ ॥ ೪೫

ವಿಗರ್ಹಮಾಣಃ ಕೈಕೇಯೀಂ ಸಹಿತೋ ಮಂಥರಾಮಪಿ ।
ಅಭಿಗಮ್ಯ ಜನೋ ರಾಮಂ ಬಾಷ್ಪಪೂರ್ಣಮುಖೋಽಭವತ್ ॥ ೪೬

ತಾನ್ನರಾನ್ ಬಾಷ್ಪಪೂರ್ಣಾಕ್ಷಾನ್ ಸಮೀಕ್ಷ್ಯಾಥ ಸುದುಃಖಿತಾನ್ ।
ಪರ್ಯಷ್ವಜತ ಧರ್ಮಜ್ಞಃ ಪಿತೃವನ್ಮಾತೃವಚ್ಚ ಸಃ ॥ ೪೭

ತೋಳ, ಕಾಡುಕೋಣ, ಸರ್ಪ, ಕಪಿ, ಹುಲಿ, ಚಿಗರಿ, ಕಡವ, ಜಿಂಕೆ ಮುಂತಾದ ಪ್ರಾಣಿಗಳು ತಳಮಳಿಸಿದವು (೪೧-೪೨). ಚಕ್ರವಾಕ, ನೀರುಕೋಳಿ, ಹಂಸ, ಕಾರಂಡವ, ನೀರುಕಾಗೆ, ಕೋಗಿಲೆ, ಕ್ರೌಂಚ, ಮುಂತಾದ ಪಕ್ಷಿಗಳು ತಲ್ಲಣಿಸಿ ನಾನಾದಿಕ್ಕಿಗೆ ಹಾರಿದವು. ತಲ್ಲಣಗೊಂಡು ಹಾರುತ್ತಿದ್ದ ಪಕ್ಷಿಗಳಿಂದ ಗಗನವೂ ಕುತೂಹಲದಿಂದ ಓಡುತ್ತಿದ್ದ ಭರತಸೈನಿಕರಿಂದ ಭೂಮಿಯೂ ರಮಣೀಯವಾಗಿ ಕಂಡವು (೪೩-೪೪). ಆ ಜನರು ಆಶ್ರಮಕ್ಕೆ ನುಗ್ಗಿ ಹೋಗಿ ಶ್ರೀರಾಮನನ್ನು ನೋಡಿದರು. ಅಲ್ಲಿ ಆ ಪುರುಷಶ್ರೇಷ್ಠನು ಬರಿಯ ನೆಲದ ಮೇಲೆ ಶಾಂತಿಯಿಂದ ಕುಳಿತಿದ್ದನು. ಅವರು ಕೈಕೇಯಿಯನ್ನೂ ಮಂಥರೆಯನ್ನೂ ಬಯ್ಯುತ್ತ ಹೋಗಿ ಶ್ರೀರಾಮನನ್ನು ವೀಕ್ಷಿಸಿದರು. ಅವರ ಕಣ್ಣಲ್ಲಿ ಕಂಬನಿ ತುಳುಕಿತು (೪೫-೪೬). ಹೀಗೆ ದುಃಖದಿಂದ ಕಣ್ಣೀರುಬಿಡುತ್ತಿದ್ದ ಆ ಪ್ರಜೆಗಳನ್ನು ನೋಡಿ ಧರ್ಮಾತ್ಮನಾದ ಶ್ರೀರಾಮನು ಎದ್ದುಬಂದು ತಂದೆಯಂತೆಯೂ ತಾಯಿಯಂತೆಯೂ ಅಕ್ಕರೆಯಿಂದ ಅವರನ್ನು ಆಲಿಂಗಿಸಿಕೊಂಡನು (೪೭). ಈ ಪ್ರಕಾರ

ಸ ತತ್ರ ಕಾಂಶ್ಚಿತ್ ಪರಿಷಸ್ವಜೇ ನರಾನ್
ನರಾಶ್ಚ ಕೇಚಿತ್ತು ತಮಭ್ಯವಾದಯನ್ ।
ಚಕಾರ ಸರ್ವಾನ್ ಸವಯಸ್ಯಬಾಂಧವಾನ್
ಯಥಾರ್ಹಮಾಸಾದ್ಯ ತದಾ ನೃಪಾತ್ಮಜಃ ॥ ೪೮

ಸ ತತ್ರ ತೇಷಾಂ ರುದತಾಂ ಮಹಾತ್ಮನಾಂ
ಭುವಂ ಚ ಖಂ ಚಾನುನಿನಾದಯನ್ ಸ್ವನಃ ।
ಗುಹಾ ಗಿರೀಣಾಂ ಚ ದಿಶಶ್ಚ ಸಂತತಂ
ಮೃದಂಗಘೋಷಪ್ರತಿಮಃ ಪ್ರಶುಶ್ರುವೇ ॥ ೪೯

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದ್ವ್ಯಧಿಕಶತತಮಃ ಸರ್ಗಃ

ಕೆಲವರನ್ನು ಆಲಿಂಗಿಸಿಕೊಂಡನು. ಕೆಲವರು ಶ್ರೀರಾಮನಿಗೆ ಅಡ್ಡಬಿದ್ದು ನಮಸ್ಕರಿಸಿದರು. ಆ ರಾಜಪುತ್ರನು ತನ್ನ ಮಿತ್ರರನ್ನೂ ಬಂಧುಗಳನ್ನೂ ಯಥೋಚಿತವಾಗಿ ಆದರಿಸಿದನು (೪೮). ಆ ಸಂದರ್ಭದಲ್ಲಿ ದುಃಖವನ್ನು ತಡೆಯಲಾರದೆ ಎಲ್ಲರೂ ಅಳುತ್ತಿದ್ದರು. ರೋದನಧ್ವನಿಯು ಭೂಮ್ಯಾಕಾಶಗಳನ್ನೂ ಗಿರಿಗುಹೆಗಳನ್ನೂ ಸಕಲದಿಕ್ಕುಗಳನ್ನೂ ವ್ಯಾಪಿಸಿತ್ತು; ಮೃದಂಗ ಧ್ವನಿಯಂತೆ ಗಂಭೀರವಾಗಿ ಕೇಳಿಸುತ್ತಿತ್ತು (೪೯).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ನೂರೆರಡನೆಯ ಸರ್ಗ

ತ್ರ್ಯಧಿಕಶತತಮಃ ಸರ್ಗಃ

ಮಾತೃದರ್ಶನಮ್

ವಸಿಷ್ಠಃ ಪುರತಃ ಕೃತ್ವಾ ದಾರಾನ್ ದಶರಥಸ್ಯ ಚ ।
ಅಭಿಚಕ್ರಾಮ ತಂ ದೇಶಂ ರಾಮದರ್ಶನತರ್ಷಿತಃ ॥ ೧

ರಾಜಪತ್ನ್ಯಶ್ಚ ಗಚ್ಛಂತ್ಯೋ ಮಂದಂ ಮಂದಾಕಿನೀಂ ಪ್ರತಿ ।
ದದೃಶುಸ್ತತ್ರ ತತ್ತೀರ್ಥಂ ರಾಮಲಕ್ಷ್ಮಣಸೇವಿತಮ್ ॥ ೨

ಕೌಸಲ್ಯಾ ಬಾಷ್ಪಪೂರ್ಣೇನ ಮುಖೇನ ಪರಿಶುಷ್ಯತಾ ।
ಸುಮಿತ್ರಾಮಬ್ರವೀದ್ದೀನಾ ಯಾಶ್ಚಾನ್ಯಾ ರಾಜಯೋಷಿತಃ ॥ ೩

ಇದಂ ತೇಷಾಮನಾಥಾನಾಂ ಕ್ಲಿಷ್ಟಮಕ್ಲಿಷ್ಟಕರ್ಮಣಾಮ್ ।
ವನೇ ಪ್ರಾಕ್ಕೇವಲಂ ತೀರ್ಥಂ ಯೇ ತೇ ನಿರ್ವಿಷಯೀಕೃತಾಃ ॥ ೪

ಇತಃ ಸುಮಿತ್ರೇ ಪುತ್ರಸ್ತೇ ಸದಾ ಜಲಮತಂದ್ರಿತಃ ।
ಸ್ವಯಂ ಹರತಿ ಸೌಮಿತ್ರಿರ್ಮಮ ಪುತ್ರಸ್ಯ ಕಾರಣಾತ್ ॥ ೫

ಸರ್ಗ ೧೦೩

ಕೌಸಲ್ಯೆಯೇ ಮೊದಲಾದ ಮಾತೆಯರು ಶ್ರೀರಾಮನನ್ನು ಕಂಡು ಶೋಕಿಸುವುದು.

ಇತ್ತ ವಸಿಷ್ಠ ಮುನಿಗಳು ಕೌಸಲ್ಯೆಯೇ ಮೊದಲಾದ ದಶರಥನ ಪತ್ನಿಯರನ್ನು ಮುಂದಿಟ್ಟುಕೊಂಡು ಶ್ರೀರಾಮನ ದರ್ಶನಕ್ಕಾಗಿ ಬರುತ್ತಿದ್ದರು. ಆ ರಾಜಪತ್ನಿಯರು ಮೆಲ್ಲಗೆ ಬರುತ್ತ ರಾಮಲಕ್ಷ್ಮಣರು ಉಪಯೋಗಿಸುತ್ತಿದ್ದ ಮಂದಾಕಿನೀನದಿಯ ಘಟ್ಟವನ್ನು ಕಂಡರು (೧-೨). ಅದನ್ನು ಕಂಡು ಬಾಡಿ ಹೋಗಿದ್ದ ಕೌಸಲ್ಯೆಯ ಮುಖದ ಮೇಲೆ ಕಣ್ಣೀರು ಹರಿಯಿತು. ಅವಳು ಸುಮಿತ್ರೆಯನ್ನೂ ಇತರ ರಾಜಸ್ತ್ರೀಯರನ್ನೂ ನೋಡಿ "ಸುಮಿತ್ರೆ, ದೇಶದಿಂದ ಹೊರಡಿಸಲ್ಪಟ್ಟು ಅನಾಥರಾಗಿರುವ ಸೀತಾರಾಮಲಕ್ಷ್ಮಣರು ಬಳಸುವ ನದೀಘಟ್ಟವು ಇದೇ ಆಗಿರಬೇಕು. ಆ ಸರಳಜೀವಿಗಳು ಕಾಡಿನಲ್ಲಿ ಹತ್ತಿ ಇಳಿಯಬೇಕಾದ ಈ ಪ್ರದೇಶವು ಎಷ್ಟು ಕೊರಕಲಾಗಿದೆ, ನೋಡು! (೩-೪). ಸುಮಿತ್ರೆ, ನಿನ್ನ ಮಗನು ನನ್ನ ಮಗನಿಗೋಸ್ಕರ ಯಾವಾಗಲೂ ಬೇಸರವಿಲ್ಲದೆ ಇಲ್ಲಿಂದ ನೀರನ್ನು

ಜಘನ್ಯಮಪಿ ತೇ ಪುತ್ರಃ ಕೃತವಾನ್ನತು ಗರ್ಹಿತಃ।
ಭ್ರಾತುರ್ಯದರ್ಥಸಹಿತಂ ಸರ್ವಂ ತದ್ವಿಹಿತಂ ಗುಣೈಃ॥ ೬

ಅದ್ಯಾಯಮಪಿ ತೇ ಪುತ್ರಃ ಕ್ಲೇಶಾನಾಮತಥೋಚಿತಃ।
ನೀಚಾನರ್ಥಸಮಾಚಾರಂ ಸಜ್ಜಂ ಕರ್ಮ ಪ್ರಮುಂಚತು॥ ೭

ದಕ್ಷಿಣಾಗ್ರೇಷು ದರ್ಭೇಷು ಸಾ ದದರ್ಶ ಮಹೀತಲೇ।
ಪಿತುರಿಂಗುದಿಪಿಣ್ಯಾಕಂ ನ್ಯಸ್ತಮಾಯತಲೋಚನಾ॥ ೮

ತಂ ಭೂಮೌ ಪಿತುರಾರ್ತೇನ ನ್ಯಸ್ತಂ ರಾಮೇಣ ವೀಕ್ಷ್ಯ ಸಾ।
ಉವಾಚ ದೇವೀ ಕೌಸಲ್ಯಾ ಸರ್ವಾ ದಶರಥಸ್ತ್ರಿಯಃ॥ ೯

ಇದಮಿಕ್ಷ್ವಾಕುನಾಥಸ್ಯ ರಾಘವಸ್ಯ ಮಹಾತ್ಮನಃ।
ರಾಘವೇಣ ಪಿತುರ್ದತ್ತಂ ಪಶ್ಯತೈತದ್ಯಥಾವಿಧಿ॥ ೧೦

ತಸ್ಯ ದೇವಸಮಾನಸ್ಯ ಪಾರ್ಥಿವಸ್ಯ ಮಹಾತ್ಮನಃ।
ನೈತದೌಪಾಯಿಕಂ ಮನ್ಯೇ ಭುಕ್ತಭೋಗಸ್ಯ ಭೋಜನಮ್॥ ೧೧

ಹೊತ್ತುಕೊಂಡು ಹೋಗುತ್ತಿದ್ದಾನೆ. ನಿಕೃಷ್ಟವಾದ ಕೆಲಸವನ್ನು ಮಾಡುತ್ತಿದ್ದರೂ ನಿನ್ನ ಮಗನು ನಿಕೃಷ್ಟನಲ್ಲ, ಅಣ್ಣನ ಸೇವೆಗಾಗಿ ಅವನು ಮಾಡುವುದೆಲ್ಲವೂ ವಿಹಿತವಾದ್ದರಿಂದ ಅದು ಕೀರ್ತಿಯನ್ನೇ ತರುವುದು (೫-೬). ಲಕ್ಷ್ಮಣನಿಗೆ ಈ ಕಷ್ಟವು ಬರಬಾರದು. ಈಗ (ಭರತನ ಪ್ರಾರ್ಥನೆಯನ್ನು ರಾಮನು ಒಪ್ಪಿದಲ್ಲಿ) ನಿನ್ನ ಮಗನಿಗೆ ನಿಕೃಷ್ಟವೂ ದುಃಖಕರವೂ ಆದ ಈ ಕೆಲಸದಿಂದ ಬಿಡುಗಡೆಯಾದೀತು ಎಂದು ಹೇಳಿದಳು (೭). ಅಷ್ಟರಲ್ಲಿ ಕೌಸಲ್ಯೆಗೆ ನೆಲದ ಮೇಲೆ ದಕ್ಷಿಣಾಗ್ರವಾಗಿ ಹಾಸಿದ ದರ್ಭೆಗಳು ಗೋಚರಿಸಿದವು. ಅವುಗಳ ಮೇಲೆ ಶ್ರೀರಾಮನು ತಂದೆಗೋಸ್ಕರ ಇಂಗುದೀಬೀಜಗಳಿಂದ ಮಾಡಿದ ಪಿಂಡವನ್ನರ್ಪಿಸಿದ್ದನು. ಕೌಸಲ್ಯೆಯು ಕಣ್ಣುಗಳನ್ನು ಹಿಗ್ಗಿಸಿ ನೋಡಿದಳು! (೮). ಶೋಕಾರ್ತನಾದ ಶ್ರೀರಾಮನು ತಂದೆಗೆ ಅರ್ಪಿಸಿದ್ದ ಪಿಂಡವನ್ನು ನೋಡಿ ಕೌಸಲ್ಯಾದೇವಿಯು ಅದನ್ನು ದಶರಥನ ಪತ್ನಿಯರಿಗೆ ತೋರಿಸುತ್ತ ಹೀಗೆಂದಳು: ''ಇಲ್ಲಿ ನೋಡಿರಿ! ರಘುಕುಲದಲ್ಲಿ ಜನಿಸಿ ಇಕ್ಷ್ವಾಕುನಾಥನೂ ಮಹಾತ್ಮನೂ ಆದ ತಂದೆಗೆ ರಾಮನು ಶಾಸ್ತ್ರೀಯವಾಗಿ ಅರ್ಪಿಸಿರುವುದನ್ನು ನೋಡಿರಿ ! (೯-೧೦). ಮಹಾರಾಜನಾಗಿ ಸಕಲ ಭೋಗಗಳನ್ನೂ ಅನುಭವಿಸಿ

ಚತುರಂತಾಂ ಮಹೀಂ ಭುಕ್ತ್ವಾ ಮಹೇಂದ್ರಸದೃಶೋ ಭುವಿ ।
ಕಥಮಿಂಗುದಿಪಿಣ್ಯಾಕಂ ಸ ಭುಂಕ್ತೇ ವಸುಧಾದಿಪಃ ॥ ೧೨

ಅತೋ ದುಃಖತರಂ ಲೋಕೇ ನ ಕಿಂಚಿತ್ ಪ್ರತಿಭಾತಿ ಮೇ ।
ಯತ್ರ ರಾಮಃ ಪಿತುರ್ದದ್ಯಾದಿಂಗುದೀಕ್ಷೋದಮೃದ್ಧಿಮಾನ್ ॥ ೧೩

ರಾಮೇಣೇಂಗುದಿಪಿಣ್ಯಾಕಂ ಪಿತುರ್ದತ್ತಂ ಸಮೀಕ್ಷ್ಯ ಮೇ ।
ಕಥಂ ದುಃಖೇನ ಹೃದಯಂ ನ ಸ್ಫೋಟತಿ ಸಹಸ್ರಧಾ ॥ ೧೪

ಶ್ರುತಿಸ್ತು ಖಲ್ವಿಯಂ ಸತ್ಯಾ ಲೌಕಿಕೀ ಪ್ರತಿಭಾತಿ ಮಾ ।
ಯದನ್ನಃ ಪುರುಷೋ ಭವತಿ ತದನ್ನಾಸ್ತಸ್ಯ ದೇವತಾಃ ॥ ೧೫

ಏವಮಾರ್ತಾಂ ಸಪತ್ನ್ಯಸ್ತಾ ಜಗ್ಮುರಾಶ್ವಾಸ್ಯ ತಾಂ ತದಾ ।
ದದೃಶುಶ್ಚಾಶ್ರಮೇ ರಾಮಂ ಸ್ವರ್ಗಚ್ಯುತಮಿವಾಮರಮ್ ॥ ೧೬

ಸರ್ವಭೋಗೈಃ ಪರಿತ್ಯಕ್ತಂ ರಾಮಂ ಸಂಪ್ರೇಕ್ಷ್ಯ ಮಾತರಃ ।
ಆರ್ತಾ ಮುಮುಚುರಶ್ರೂಣಿ ಸಸ್ವರಂ ಶೋಕಕರ್ಶಿತಾಃ ॥ ೧೭

ದೇವತಾಸಮಾನನಾದ ಆ ಮಹಾಪುರುಷನಿಗೆ ಇದು ಯೋಗ್ಯವಾದ ಆಹಾರವೆನಿಸೀತೆ? ಚತುಸ್ಸಮುದ್ರಪರ್ಯಂತವಾದ ರಾಜ್ಯವನ್ನಾಳಿ ಭೂಲೋಕದ ಇಂದ್ರನಂತೆ ವೈಭವದಲ್ಲಿದ್ದ ಚಕ್ರವರ್ತಿಯು ಇಂಗುದೀಬೀಜದ ಈ ಮುದ್ದೆಯನ್ನು ಹೇಗೆ ತಿಂದಾನು? (೧೧-೧೨). ಸಕಲೈಶ್ವರ್ಯಗಳಿದ್ದರೂ ರಾಮನು ತನ್ನ ತಂದೆಗೆ ಇಂಗುದಿಯ ಪಿಂಡವನ್ನು ಕೊಡಬೇಕಾಗಿ ಬಂದಿತಲ್ಲ! ಇದಕ್ಕಿಂತಲೂ ಹೆಚ್ಚಿನ ದುಃಖವು ಲೋಕದಲ್ಲಿ ಇನ್ನಾವುದಿದ್ದೀತು? ರಾಮನು ತಂದೆಗೆ ಇಂಗುದೀ ಪಿಂಡವನ್ನು ಅರ್ಪಿಸಿದ್ದನ್ನು ನೋಡಿದೆನಲ್ಲ! ಈಗಲಾದರೂ ನನ್ನ ಎದೆ ಸಾವಿರ ಚೂರಾಗಿ ಒಡೆದುಹೋಗಬಾರದೆ! (೧೩-೧೪). 'ತಾನು ಯಾವುದನ್ನು ತಿನ್ನುವನೋ ಅದನ್ನೇ ಮನುಷ್ಯನು ತನ್ನ ಇಷ್ಟದೇವತೆಗೆ ಅರ್ಪಿಸುವನು' ಎಂಬ ಲೋಕದ ಗಾದೆ ಸತ್ಯ. ಅದು ಈಗ ನನಗೆ ಪ್ರತ್ಯಕ್ಷವಾಯಿತು'' ಎಂದು ಹೇಳುತ್ತ ಗೋಳಾಡಿದಳು (೧೫). ಅವಳನ್ನು ಇತರ ರಾಜಸ್ತ್ರೀಯರು ಸಂತೈಸುತ್ತ ಮುಂದೆ ಕರೆದುಕೊಂಡು ಹೋದರು. ಆಶ್ರಮವು ಸಮೀಪಿಸಿತು. ಅಲ್ಲಿ ಶ್ರೀರಾಮನು ಸ್ವರ್ಗದಿಂದ ಜಾರಿಬಿದ್ದ ದೇವತೆಯಂತೆ ಅವರಿಗೆ

ತಾಸಾಂ ರಾಮಃ ಸಮುತ್ಥಾಯ ಜಗ್ರಾಹ ಚರಣಾನ್ ಶುಭಾನ್ ।
ಮಾತೄಣಾಂ ಮನುಜವ್ಯಾಘ್ರಃ ಸರ್ವಾಸಾಂ ಸತ್ಯಸಂಗರಃ ॥ ೧೮
ತಾಃ ಪಾಣಿಭಿಃ ಸುಖಸ್ಪರ್ಶೈರ್ಮೃದ್ವಂಗುಲಿತಲೈಃ ಶುಭೈಃ ।
ಪ್ರಮಮಾರ್ಜೂ ರಜಃ ಪೃಷ್ಠಾದ್ರಾಮಸ್ಯಾಯತಲೋಚನಾಃ ॥ ೧೯
ಸೌಮಿತ್ರಿರಪಿ ತಾಃ ಸರ್ವಾ ಮಾತೄಃ ಸಂಪ್ರೇಕ್ಷ್ಯ ದುಃಖಿತಃ ।
ಅಭ್ಯವಾದಯತಾಸಕ್ತಂ ಶನೈ ರಾಮಾದನಂತರಮ್ ॥ ೨೦
ಯಥಾ ರಾಮೇ ತಥಾ ತಸ್ಮಿನ್ ಸರ್ವಾ ವವೃತಿರೇ ಸ್ತ್ರಿಯಃ ।
ವೃತ್ತಿಂ ದಶರಥಾಜ್ಞಾತೇ ಲಕ್ಷ್ಮಣೇ ಶುಭಲಕ್ಷಣೇ ॥ ೨೧
ಸೀತಾಪಿ ಚರಣಾಂಸ್ತಾಸಾಮುಪಸಂಗೃಹ್ಯ ದುಃಖಿತಾ ।
ಶ್ವಶ್ರೂಣಾಮಶ್ರುಪೂರ್ಣಾಕ್ಷೀ ಸಾ ಬಭೂವಾಗ್ರತಃ ಸ್ಥಿತಾ ॥ ೨೨
ತಾಂ ಪರಿಷ್ವಜ್ಯ ದುಃಖಾರ್ತಾ ಮಾತಾ ದುಹಿತರಂ ಯಥಾ ।
ವನವಾಸಕೃಶಾಂ ದೀನಾಂ ಕೌಸಲ್ಯಾ ವಾಕ್ಯಮಬ್ರವೀತ್ ॥ ೨೩

ಗೋಚರಿಸಿದನು. ಸಕಲ ರಾಜಭೋಗಗಳನ್ನೂ ವಿಸರ್ಜಿಸಿ ಕುಳಿತಿದ್ದ ಶ್ರೀರಾಮನನ್ನು ನೋಡಿದೊಡನೆ ಅವನ ಮಾತೆಯರಿಗೆ ದುಃಖವು ಉಮ್ಮಳಿಸಿತು. ಕಣ್ಣೀರು ಉಕ್ಕಿತು. ಗಟ್ಟಿಯಾಗಿ ಅತ್ತರು (೧೬-೧೭). ಅವರನ್ನು ಕಂಡೊಡನೆ ಪುರುಷೋತ್ತಮನಾದ ಶ್ರೀರಾಮನು ಎದ್ದುಬಂದು ಆ ಮಾತೆಯರೆಲ್ಲರ ಪಾದಗಳನ್ನೂ ಮುಟ್ಟಿ ನಮಸ್ಕರಿಸಿದನು. ಆ ಸ್ತ್ರೀಯರು ಶ್ರೀರಾಮನನ್ನು ಕಣ್ಣರಳಿಸಿ ನೋಡುತ್ತ ತಮ್ಮ ಮೃದುವಾದ ಹಸ್ತಗಳಿಂದ ಅವನ ಬೆನ್ನನ್ನು ಸವರುತ್ತ ಧೂಳಿಯನ್ನೊರಸಿದರು. ತಾಯಂದಿರ (ವಾತ್ಸಲ್ಯಪೂರ್ಣವಾದ) ಸ್ಪರ್ಶದಿಂದ ಶ್ರೀರಾಮನಿಗೆ ಸುಖವೆನಿಸಿತು (೧೮-೧೯). ಅನಂತರ ಲಕ್ಷ್ಮಣನೂ ಅಳುತ್ತ ಬಂದು ಮಾತೆಯರೆಲ್ಲರಿಗೂ ಕ್ರಮವಾಗಿ ಅಭಿವಾದನೆ ಮಾಡಿದನು. ದಶರಥಪುತ್ರನೂ ಶುಭಲಕ್ಷಣ ಸಂಪನ್ನನೂ ಆದ ಲಕ್ಷ್ಮಣನನ್ನೂ ಆ ಮಾತೆಯರೆಲ್ಲರೂ ಶ್ರೀರಾಮನನ್ನು ಕಂಡಂತೆ ವಾತ್ಸಲ್ಯದಿಂದ ಮನ್ನಿಸಿದರು (೨೦-೨೧). ಸೀತೆಯೂ ಕೂಡ ಶೋಕಾರ್ತಳಾಗಿ ತನ್ನ ಅತ್ತೆಯರಾದ ಆ ಸ್ತ್ರೀಯರೆಲ್ಲರ ಪಾದಗಳಿಗೂ ನಮಸ್ಕರಿಸಿ ಕಣ್ಣೀರು ತುಂಬಿ ನಿಂತುಕೊಂಡಳು. ಸೀತೆಯು ಆಗಲೇ

ವಿದೇಹರಾಜಸ್ಯ ಸುತಾ ಸ್ನುಷಾ ದಶರಥಸ್ಯ ಚ ।
ರಾಮಪತ್ನೀ ಕಥಂ ದುಃಖಂ ಸಂಪ್ರಾಪ್ತಾ ನಿರ್ಜನೇ ವನೇ ॥ ೨೪

ಪದ್ಮಮಾತಪಸಂತಪ್ತಂ ಪರಿಕ್ಲಿಷ್ಟಮಿವೋತ್ಪಲಮ್ ।
ಕಾಂಚನಂ ರಜಸಾ ಧ್ವಸ್ತ ಕ್ಲಿಷ್ಟಂ ಚಂದ್ರಮಿವಾಂಬುದೈಃ ॥ ೨೫

ಮುಖಂ ತೇ ಪ್ರೇಕ್ಷ್ಯ ಮಾಂ ಶೋಕೋ ದಹತ್ಯಗ್ನಿರಿವಾಶ್ರಯಮ್ ।
ಭೃಶಂ ಮನಸಿ ವೈದೇಹಿ ವ್ಯಸನಾರಣಿಸಂಭವಃ ॥ ೨೬

ಬ್ರುವಂತ್ಯಾಮೇವಮಾರ್ತಾಯಾಂ ಜನನ್ಯಾಂ ಭರತಾಗ್ರಜಃ ।
ಪಾದವಾಸಾದ್ಯ ಜಗ್ರಾಹ ವಸಿಷ್ಠಸ್ಯ ಚ ರಾಘವಃ ॥ ೨೭

ಪುರೋಹಿತಸ್ಯಾಗ್ನಿಸಮಸ್ಯ ವೈ ತದಾ
ಬೃಹಸ್ಪತೇರಿಂದ್ರ ಇವಾಮರಾಧಿಪಃ ।
ಪ್ರಗೃಹ್ಯ ಪಾದೌ ಸುಸಮೃದ್ಧತೇಜಸಃ
ಸಹೈವ ತೇನೋಪವಿವೇಶ ರಾಘವಃ ॥ ೨೮

ವನವಾಸದ ಕಷ್ಟದಿಂದ ಕೃಶಳಾಗಿದ್ದಳು. ದೈನ್ಯದಿಂದ ನಿಂತಿದ್ದ ಅವಳನ್ನು ಕೌಸಲ್ಯೆಯು, ತಾಯಿಯು ಮಗಳನ್ನು ಅಪ್ಪಿ ಕೊಳ್ಳುವಂತೆ ಪ್ರೀತಿಯಿಂದ ಅಪ್ಪಿ ಕೊಂಡು ಹೀಗೆಂದಳು (೨೨-೨೩) : ''ಜನಕರಾಜನ ಮಗಳಾಗಿ ಜನಿಸಿ ದಶರಥಮಹಾರಾಜನಿಗೆ ಸೊಸೆಯಾಗಿ ರಾಮನಿಗೆ ಪತ್ನಿಯಾದ ನೀನೂ ನಿರ್ಜನವಾದ ಈ ಕಾಡಿನಲ್ಲಿ ಇಂಥ ಕಷ್ಟವನ್ನು ಅನುಭವಿಸಬೇಕಾಯಿತೆ! (೨೪). ಅಯ್ಯೋ! ಸೀತೆ, ನಿನ್ನ ಮುಖವು ಬಿಸಿಲಿನಿಂದ ಬಾಡಿದ ತಾವರೆಯಾಗಿದೆ. ಹಿಸುಕಿದ ನೈದಿಲೆಯಾಗಿದೆ. ಚಿನ್ನಕ್ಕೆ ಕೊಳೆಹತ್ತಿದಂತೆ ಕಾಣುತ್ತದೆ. ಮೋಡಮುಸುಕಿದ ಚಂದ್ರನಂತೆ ಕಾಣುತ್ತದೆ. ಜಾನಕಿ, ನಿನ್ನನ್ನು ನೋಡಿ ನನ್ನ ಮನಸ್ಸಿಗಾದ ದುಃಖ ನನ್ನನ್ನೇ ಸುಡುತ್ತಿದೆ. ವ್ಯಸನವೆಂಬ ಅರಣಿಯಿಂದ ಹುಟ್ಟಿದ ಈ ದುಃಖ, ಬೆಂಕಿಯು ಮರವನ್ನು ಸುಡುವಂತೆ ಸುಡುತ್ತಿದೆ'' ಎಂದು ಹೇಳುತ್ತ ಅತ್ತಳು (೨೫-೨೬). ಆಗ ಶ್ರೀರಾಮನು ಬಂದು ತನ್ನ ತಾಯಿಗೆ ವಂದಿಸಿದನು. ಅಷ್ಟರಲ್ಲಿ ಅಗ್ನಿಯಂತೆ ಬೆಳಗುತ್ತಿದ್ದ ವಸಿಷ್ಠಮುನಿಗಳು ಅಲ್ಲಿಗೆ ಬಂದರು, ಇಂದ್ರನು ಬೃಹಸ್ಪತಿಗೆ

ತತೋ ಜಘನ್ಯಂ ಸಹಿತೈಃ ಸ್ವಮಂತ್ರಿಭಿಃ
ಪುರಪ್ರಧಾನೈಶ್ಚ ಸಹೈವ ಸೈನಿಕೈಃ ।
ಜನೇನ ಧರ್ಮಜ್ಞತಮೇನ ಧರ್ಮವಾನ್
ಉಪೋಪವಿಷ್ಟೋ ಭರತಸ್ತದಾಗ್ರಜಮ್ ॥ ೨೯

ಉಪೋಪವಿಷ್ಟಸ್ತು ಸದಾ ಸ ವೀರ್ಯವಾನ್
ತಪಸ್ವಿವೇಷೇಣ ಸಮೀಕ್ಷ್ಯ ರಾಘವಮ್ ।
ಶ್ರಿಯಾ ಜ್ವಲಂತಂ ಭರತಃ ಕೃತಾಂಜಲಿ -
ರ್ಯಥಾ ಮಹೇಂದ್ರಃ ಪ್ರಯತಃ ಪ್ರಜಾಪತಿಮ್ ॥ ೩೦

ಕಿಮೇಷ ವಾಕ್ಯಂ ಭರತೋಽದ್ಯ ರಾಘವಂ
ಪ್ರಣಮ್ಯ ಸತ್ಕೃತ್ಯ ಚ ಸಾಧು ವಕ್ಷ್ಯತಿ ।
ಇತೀವ ತಸ್ಯಾರ್ಯಜನಸ್ಯ ತತ್ತ್ವತೋ
ಬಭೂವ ಕೌತೂಹಲಮುತ್ತಮಂ ತದಾ ॥ ೩೧

ಸ ರಾಘವಃ ಸತ್ಯಧೃತಿಶ್ಚ ಲಕ್ಷ್ಮಣೋ
ಮಹಾನುಭಾವೋ ಭರತಶ್ಚ ಧಾರ್ಮಿಕಃ ।

ವಂದಿಸುವಂತೆ, ರಾಘವನು ತೇಜಸ್ವಿಗಳಾದ ವಸಿಷ್ಠ ಮಹರ್ಷಿಗಳಿಗೆ ಅಭಿವಾದನೆ ಮಾಡಿ ಅವರ ಸಮೀಪದಲ್ಲಿ ಕುಳಿತುಕೊಂಡನು (೨೭-೨೮). ಆಮೇಲೆ ಭರತನು ಮಂತ್ರಿಗಳೊಡನೆ ಬಂದು ಅಣ್ಣನ ಬಳಿಯಲ್ಲಿ ಕುಳಿತುಕೊಂಡನು. ಮುಖ್ಯರಾದ ನಗರವಾಸಿಗಳೂ ಸೈನಿಕರೂ ಧರ್ಮಜ್ಞರಾದ ಇತರರೂ ಒಬ್ಬೊಬ್ಬರಾಗಿ ಬಂದು ಕುಳಿತರು (೨೯). ಶ್ರೀರಾಮನು ತಪಸ್ವಿ ವೇಷದಲ್ಲಿ ತೇಜಸ್ಸಿನಿಂದ ಬೆಳಗುತ್ತಿದ್ದನು. ವೀರಾಗ್ರಣಿಯಾದ ಭರತನು ಅವನ ಬಳಿಯಲ್ಲಿ ಕೈಮುಗಿದು ಕುಳಿತಿದ್ದನು. ಆಗ ಬ್ರಹ್ಮದೇವನ ಎದುರಿಗೆ ದೇವೇಂದ್ರನು ವಿನೀತನಾಗಿ ಬಂದು ಕುಳಿತಂತೆ ಕಾಣಿಸುತ್ತಿತ್ತು (೩೦). ಅಲ್ಲಿನೆರೆದಿದ್ದ ಸಜ್ಜನರಿಗೆ 'ಈಗ ಭರತನು ರಾಮನಿಗೆ ಏನು ಹೇಳಬಹುದು? ಹೇಗೆ ಮಾತನ್ನಾರಂಭಿಸಬಹುದು? ಕೈಮುಗಿದು ವಿನಯದಿಂದ ಕೇಳಿಕೊಂಡಾನು! ಯಾವ ಮಾತನ್ನು ಹೇಗೆ ಆಡುವನೊ!' ಎಂದು ಕುತೂಹಲವು ಆವರಿಸಿತು (೩೧). ಸತ್ಯಸಂಧನಾದ ಶ್ರೀರಾಮನು ಎದುರಿಗೆ ಕುಳಿತಿದ್ದನು. ಹತ್ತಿರದಲ್ಲಿ ಮಹಾನುಭಾವನಾದ

ವೃತಾಃ ಸುಹೃದ್ಭಿಶ್ಚ ವಿರೇಜುರಧ್ವರೇ
ಯಥಾ ಸದಸ್ಯೈಃ ಸಹಿತಾಸ್ತ್ರಯೋಽಗ್ನಯಃ ॥ ೩೨

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತ್ರ್ಯಧಿಕಶತತಮಃ ಸರ್ಗಃ

ಚತುರಧಿಕಶತತಮಃ ಸರ್ಗಃ

ರಾಮಭರತಸಂವಾದಃ

ತಂ ತು ರಾಮಃ ಸಮಾಜ್ಞಾಯ ಭ್ರಾತರಂ ಗುರುವತ್ಸಲಮ್ ।
ಲಕ್ಷ್ಮಣೇನ ಸಹ ಭ್ರಾತ್ರಾ ಪ್ರಷ್ಟುಂ ಸಮುಪಚಕ್ರಮೇ ॥ ೧
ಕಿಮೇತದಿಚ್ಛೇಯಮಹಂ ಶ್ರೋತುಂ ಪ್ರವ್ಯಾಹೃತಂ ತ್ವಯಾ ।
ಯಸ್ಮಾತ್ತ್ವಮಾಗತೋ ದೇಶಮಿಮಂ ಚೀರಜಟಾಜಿನೀ ॥ ೨

ಲಕ್ಷ್ಮಣನಿದ್ದನು. ಸಮೀಪದಲ್ಲಿ ಧರ್ಮನಿಷ್ಠನಾದ ಭರತನಿದ್ದನು. ಸುತ್ತಲೂ ಆಪ್ತರಾದ ಜನರು ಮಂಡಿಸಿದ್ದರು. ಆಗ ಶ್ರೀರಾಮ ಲಕ್ಷ್ಮಣ ಭರತ - ಈ ಮೂವರು, ಯಜ್ಞಸಭೆಯಲ್ಲಿ ಸದಸ್ಯರಿಂದ ಪರಿವೃತವಾದ ತ್ರೇತಾಗ್ನಿಗಳಂತೆ ವಿರಾಜಿಸಿದರು (೩೨).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ನೂರಮೂರನೆಯ ಸರ್ಗ

ಸರ್ಗ ೧೦೪

ಶ್ರೀರಾಮನು ರಾಜ್ಯವನ್ನು ಸ್ವೀಕರಿಸಬೇಕೆಂದು ಭರತನ ಪ್ರಾರ್ಥನೆ.
ಶ್ರೀರಾಮನ ಸಮಾಧಾನ.

ತಮ್ಮನಾದ ಭರತನು ಗುರುಭಕ್ತಿಯಿಂದ ವಿನೀತನಾಗಿ ಬಂದಿರುವುದನ್ನು ತಿಳಿದು, ಶ್ರೀರಾಮನು ಲಕ್ಷ್ಮಣನೊಡಗೂಡಿ ಭರತನನ್ನು ಮಾತನಾಡಿಸುವುದಕ್ಕೆ ತೊಡಗಿದನು (೧) : ''ವತ್ಸ- ಭರತ, ನೀನು ನಾರುಬಟ್ಟೆಯನ್ನುಟ್ಟು ಜಟೆಯನ್ನು ಧರಿಸಿ ಚರ್ಮವನ್ನು ಹೊದೆದು ಇಲ್ಲಿಗೆ ಬಂದಿದ್ದೀಯೆ, ಇದೇನು? ನೀನು ಹೇಳುವುದನ್ನು

ಯನ್ನಿಮಿತ್ತಮಿಮಂ ದೇಶಂ ಕೃಷ್ಣಾಜಿನಜಟಾಧರಃ।
ಹಿತ್ವಾ ರಾಜ್ಯಂ ಪ್ರವಿಷ್ಟಸ್ತ್ವಂ ತತ್ಸರ್ವಂ ವಕ್ತುಮರ್ಹಸಿ ॥ ೩

ಇತ್ಯುಕ್ತಃ ಕೈಕಯೀಪುತ್ರಃ ಕಾಕುತ್ಸ್ಥೇನ ಮಹಾತ್ಮನಾ।
ಪ್ರಗೃಹ್ಯ ಬಲವದ್ಭೂಯಃ ಪ್ರಾಂಜಲಿರ್ವಾಕ್ಯಮಬ್ರವೀತ್ ॥ ೪

ಆರ್ಯಂ ತಾತಃ ಪರಿತ್ಯಜ್ಯ ಕೃತ್ವಾ ಕರ್ಮ ಸುದುಷ್ಕರಮ್ ।
ಗತಃ ಸ್ವರ್ಗಂ ಮಹಾಬಾಹೋ ಪುತ್ರಶೋಕಾಭಿಪೀಡಿತಃ ॥ ೫

ಸ್ತ್ರಿಯಾ ನಿಯುಕ್ತಃ ಕೈಕೇಯ್ಯಾ ಮಮ ಮಾತ್ರಾ ಪರಂತಪ ।
ಚಕಾರ ಸುಮಹತ್ ಪಾಪಮಿದಮಾತ್ಮಯಶೋಹರಮ್ ॥ ೬

ಸಾ ರಾಜ್ಯಫಲಮಪ್ರಾಪ್ಯ ವಿಧವಾ ಶೋಕಕರ್ಶಿತಾ ।
ಪತಿಷ್ಯತಿ ಮಹಾಘೋರೇ ನಿರಯೇ ಜನನೀ ಮಮ ॥ ೭

ತಸ್ಯ ಮೇ ದಾಸಭೂತಸ್ಯ ಪ್ರಸಾದಂ ಕರ್ತುಮರ್ಹಸಿ ।
ಅಭಿಷಿಂಚಸ್ವ ಚಾದ್ಯೈವ ರಾಜ್ಯೇನ ಮಘವಾನಿವ ॥ ೮

ಕೇಳಲು ಕುತೂಹಲಿಯಾಗಿದ್ದೇನೆ. ನೀನು ರಾಜ್ಯವನ್ನು ಬಿಟ್ಟು ಕೃಷ್ಣಾಜಿನವನ್ನು ಹೊದೆದು ಜಟಾಧಾರಿಯಾಗಿ ಇಲ್ಲಿಗೆ ಬಂದ ಕಾರಣವೇನು? ಎಲ್ಲವನ್ನೂ ವಿಶದವಾಗಿ ಹೇಳು'' ಎಂದು ಕೇಳಿದನು (೨-೩). (ಭರತನಿಂದ ಮಾತು ಹೊರಡಲಿಲ್ಲ) ಆಗ ಶ್ರೀರಾಮನು ಭರತನನ್ನು ಗಾಢವಾಗಿ ಅಪ್ಪಿಕೊಂಡು ಮತ್ತೆಮತ್ತೆ ಅದನ್ನೇ ಕೇಳಲಾಗಿ, ಭರತನು ಕೈಮುಗಿದುಕೊಂಡು ಹೀಗೆಂದನು (೪) : ''ಅಣ್ಣ, ನಮ್ಮ ತಂದೆಯು ಮಾಡಬಾರದ ಕೆಲಸವನ್ನು ಮಾಡಿ ಪುತ್ರಶೋಕದಿಂದ ನರಳುತ್ತ ಸ್ವರ್ಗಸ್ಥನಾದನು. ಒಬ್ಬ ಸ್ತ್ರೀಮಾತ್ರಳಾದ ನನ್ನ ತಾಯಿ ಕೈಕೇಯಿಯ ಪ್ರೇರಣೆಗೆ ಒಳಗಾಗಿ, ಅವನು ದೊಡ್ಡ ಪಾಪಕಾರ್ಯವನ್ನು ಮಾಡಿದನು. ತನ್ನ ಕೀರ್ತಿಗೆ ಕಳಂಕವನ್ನು ತಂದುಕೊಂಡನು (೫-೬). ನನ್ನ ತಾಯಿ ರಾಜ್ಯದ ಸುಖವನ್ನು ಪಡೆಯದೆ ಶೋಕದಿಂದ ನರಳಬೇಕಾಗುವುದು. ಇತ್ತ ವಿಧವೆಯೂ ಆದಳು. ಹೀಗೆಯೇ ನರಳುತ್ತ ಅವಳು ಘೋರವಾದ ನರಕದಲ್ಲಿ ಬೀಳುವಳು. ನಾನು ನಿನ್ನ ದಾಸನಾಗಿದ್ದೇನೆ. ನನ್ನನ್ನು ಅನುಗ್ರಹಿಸು. ನೀನು ಈಗಲೇ ಬಂದು ದೇವೇಂದ್ರನಂತೆ

ಇಮಾಃ ಪ್ರಕೃತಯಃ ಸರ್ವಾ ವಿಧವಾ ಮಾತರಶ್ಚ ಯಾಃ ।
ತ್ವತ್ಸಕಾಶಮನುಪ್ರಾಪ್ತಾಃ ಪ್ರಸಾದಂ ಕರ್ತುಮರ್ಹಸಿ ॥ ೯

ತದಿದಂ ಶಾಶ್ವತಂ ಪಿತ್ರ್ಯಂ ಸರ್ವಂ ಪ್ರಕೃತಿಮಂಡಲಮ್ ।
ಪೂಜಿತಂ ಪುರುಷವ್ಯಾಘ್ರ ನಾತಿಕ್ರಮಿತುಮರ್ಹಸಿ ॥ ೧೦

ಭವತ್ವವಿಧವಾ ಭೂಮಿಃ ಸಮಗ್ರಾ ಪತಿನಾ ತ್ವಯಾ ।
ಶಶಿನಾ ವಿಮಲೇನೇವ ಶಾರದೀ ರಜನೀ ಯಥಾ ॥ ೧೧

ಏಭಿಶ್ಚ ಸಚಿವೈಃ ಸಾರ್ಧಂ ಶಿರಸಾ ಯಾಚಿತೋ ಮಯಾ ।
ಭ್ರಾತುಃ ಶಿಷ್ಯಸ್ಯ ದಾಸಸ್ಯ ಪ್ರಸಾದಂ ಕರ್ತುಮರ್ಹಸಿ ॥ ೧೨

ತದಿದಂ ಶಾಶ್ವತಂ ಪಿತ್ರ್ಯಂ ಸರ್ವಂ ಪ್ರಕೃತಿಮಂಡಲಮ್ ।
ಪೂಜಿತಂ ಪುರುಷವ್ಯಾಘ್ರ ನಾತಿಕ್ರಮಿತುಮರ್ಹಸಿ ॥ ೧೩

ಏವಮುಕ್ತ್ವಾ ಮಹಾಬಾಹುಃ ಸಬಾಷ್ಪಃ ಕೈಕಯೀಸುತಃ ।
ರಾಮಸ್ಯ ಶಿರಸಾ ಪಾದೌ ಜಗ್ರಾಹ ವಿಧಿವತ್ ಪುನಃ ॥ ೧೪

ರಾಜ್ಯದಲ್ಲಿ ಪಟ್ಟಾಭಿಷಿಕ್ತನಾಗು (೭-೮). ಅಣ್ಣ, ಈ ಪ್ರಜೆಗಳೂ ವಿಧವೆಯರಾದ ಎಲ್ಲಾ ಮಾತೆಯರೂ ಈ ಉದ್ದೇಶದಿಂದಲೇ ಇಲ್ಲಿಗೆ ಬಂದಿದ್ದಾರೆ. ಅನುಗ್ರಹ ಮಾಡು. ನಮ್ಮ ವಂಶದಲ್ಲಿ ಜ್ಯೇಷ್ಠಾನುಕ್ರಮವಾಗಿ ಬಂದ ಈ ರಾಜ್ಯವು ನನಗೆ ಸೇರಬೇಕಾದದ್ದು, ನಿನ್ನ ಸಾಮರ್ಥ್ಯಕ್ಕೆ ಯೋಗ್ಯವಾದದ್ದು. ವಂಶಮರ್ಯಾದೆಯಂತೆ ರಾಜ್ಯವನ್ನು ಸ್ವೀಕರಿಸು. ನಿನ್ನ ಮಿತ್ರರ ಆಸೆಯನ್ನು ಕೈಗೂಡಿಸು (೯-೧೦). ಈಗ ವಿಧವೆಯಂತೆ ಕಳೆಗುಂದಿರುವ ಈ ಭೂದೇವಿಗೆ ನೀನು ಪತಿಯಾಗಿ ವಿರಾಜಿಸು. ಶುಭ್ರನಾದ ಚಂದ್ರನಿಂದ ಕೂಡಿದ ಶರತ್ಕಾಲದ ರಜನಿಯಂತೆ ಭೂದೇವಿಯು ರಂಜಿಸಲಿ! ಅಣ್ಣ, ಈ ಮಂತ್ರಿಗಳೂ ನಾನು ನಿನಗೆ ತಲೆಬಾಗಿ ಬೇಡಿಕೊಳ್ಳುತ್ತಿದ್ದೇವೆ. ನಿನಗೆ ನಾನು ತಮ್ಮ, ಶಿಷ್ಯ, ದಾಸ, ಪ್ರಸನ್ನ ದೃಷ್ಟಿಯಿಂದ ನೋಡು (೧೧-೧೨). ಹೇ ಪುರುಷೋತ್ತಮ, ಈ ಮಂತ್ರಿವರ್ಗವೂ ಪ್ರಜಾಸಮುದಾಯವೂ ಸನಾತನವಾಗಿ ಪಿತೃಪರಂಪರೆಯಿಂದ ಬಂದಿದೆ. ಇವರೆಲ್ಲರೂ ಮಾನ್ಯರು. ಇವರ ಪ್ರಾರ್ಥನೆಯನ್ನು ನೀನು ಉಲ್ಲಂಘಿಸಬಾರದು'' ಎಂದು ಹೇಳಿದನು (೧೩). ಆಜಾನುಬಾಹುವಾದ ಆ ಕೈಕೇಯಿಪುತ್ರನು ಹೀಗೆ ನುಡಿದು ಕಣ್ಣೀರು ಸುರಿಸುತ್ತ

ತಂ ಮತ್ತಮಿವ ಮಾತಂಗಂ ನಿಃಶ್ವಸಂತಂ ಪುನಃಪುನಃ ।
ಭ್ರಾತರಂ ಭರತಂ ರಾಮಃ ಪರಿಷ್ವಜ್ಯೇದಮಬ್ರವೀತ್ ॥ ೧೫

ಕುಲೀನಃ ಸತ್ತ್ವಸಂಪನ್ನಸ್ತೇಜಸ್ವಿ ಚರಿತವ್ರತಃ ।
ರಾಜ್ಯಹೇತೋಃ ಕಥಂ ಪಾಪಮಾಚರೇತ್ತ್ವದ್ವಿಧೋ ಜನಃ ॥ ೧೬

ನ ದೋಷಂ ತ್ವಯಿ ಪಶ್ಯಾಮಿ ಸೂಕ್ಷ್ಮಮಪ್ಯರಿಸೂದನ ।
ನ ಚಾಪಿ ಜನನೀಂ ಬಾಲ್ಯಾತ್ತ್ವಂ ವಿಗರ್ಹಿತುಮರ್ಹಸಿ ॥ ೧೭

ಕಾಮಕಾರೋ ಮಹಾಪ್ರಾಜ್ಞ ಗುರೂಣಾಂ ಸರ್ವದಾನಘ ।
ಉಪಪನ್ನೇಷು ದಾರೇಷು ಪುತ್ರೇಷು ಚ ವಿಧೀಯತೇ ॥ ೧೮

ವಯಮಸ್ಯ ಯಥಾಲೋಕೇ ಸಂಖ್ಯಾತಾಃ ಸೌಮ್ಯ ಸಾಧುಭಿಃ ।
ಭಾರ್ಯಾಃ ಪುತ್ರಾಶ್ಚ ಶಿಷ್ಯಾಶ್ಚ ತ್ವಮಪಿ ಜ್ಞಾತುಮರ್ಹಸಿ ॥ ೧೯

ವನೇ ವಾ ಚೀರವಸನಂ ಸೌಮ್ಯ ಕೃಷ್ಣಾಜಿನಾಂಬರಮ್ ।
ರಾಜ್ಯೇ ವಾಪಿ ಮಹಾರಾಜೋ ಮಾಂ ವಾಸಯಿತುಮೀಶ್ವರಃ ॥ ೨೦

ಶ್ರೀರಾಮನ ಪಾದಗಳನ್ನು ಹಿಡಿದುಕೊಂಡನು. ಆಗ ಶ್ರೀರಾಮನು, ಮದ್ದಾನೆಯಂತೆ ದುಃಖದಿಂದ ಬಿಸುಸುಯ್ಯುತ್ತಿದ್ದ ತಮ್ಮನನ್ನು ಮತ್ತೆ ಮತ್ತೆ ಆಲಿಂಗಿಸಿಕೊಳ್ಳುತ್ತ ಈ ರೀತಿಯಲ್ಲಿ ನುಡಿದನು (೧೪-೧೫) : ''ಭರತ, ನೀನು ಸತ್ಕುಲದಲ್ಲಿ ಜನಿಸಿ ಸತ್ತ್ವಗುಣಸಂಪನ್ನನಾಗಿ ಮಹಾತೇಜಸ್ವಿಯಾಗಿದ್ದೀಯೆ. ಗುರುಕುಲದಲ್ಲಿ ನಿಷ್ಠೆಯಿಂದ ಬಾಳಿದ್ದೀಯೆ. ನಿನ್ನಂಥವನು ರಾಜ್ಯಕ್ಕೋಸ್ಕರ ಎಂದಿಗಾದರೂ ಅಧರ್ಮಮಾರ್ಗಕ್ಕೆ ಇಳಿದಾನೆ? (೧೬). ಎಲೈ ವೀರಾಗ್ರಣಿ, ನಿನ್ನಲ್ಲಿ ಎಳ್ಳಷ್ಟಾದರೂ ತಪ್ಪು ನನಗೆ ಕಾಣಿಸುವುದಿಲ್ಲ. ಆದರೆ ನೀನು ಅವಿವೇಕದಿಂದ ತಾಯಿಯನ್ನು ದೂಷಿಸುವುದು ಸರಿಯಲ್ಲ. ತಮ್ಮ ಪತ್ನಿಯರನ್ನೂ ಪುತ್ರರನ್ನೂ ತಮಗೆ ಇಷ್ಟಬಂದಂತೆ ಸ್ನೇಹದಿಂದ ನಡೆಸಿಕೊಳ್ಳಲು ಹಿರಿಯರಿಗೆ ಯಾವಾಗಲೂ ಅಧಿಕಾರವಿದ್ದೇ ಇದೆ (೧೭-೧೮). ಹೆಂಡತಿಯರು, ಮಕ್ಕಳು, ಶಿಷ್ಯರು ಗುರುಹಿರಿಯರಿಗೆ ಅಧೀನರೆಂದು ಸಜ್ಜನರು ತಿಳಿದಿದ್ದಾರೆ. ಹಾಗೆ ನಾವು ನಮ್ಮ ತಂದೆಗೆ ಅಧೀನರೆಂದು ನೀನು ತಿಳಿದುಕೊಳ್ಳಬೇಕು (೧೯). ವತ್ಸ-ಭರತ, ನಾನು ನಾರುಬಟ್ಟೆಯನ್ನುಟ್ಟು ಕೃಷ್ಣಾಜಿನವನ್ನು ಧರಿಸಿ ಕಾಡಿನಲ್ಲಿ ಅಲೆಯಬೇಕೆಂದು ಮಹಾರಾಜನು ನನ್ನನ್ನು ನಿಯಮಿಸಬಹುದು, ರಾಜ್ಯಾಧಿ

ಯಾವತ್ ಪಿತರಿ ಧರ್ಮಜ್ಞೇ ಗೌರವಂ ಲೋಕಸತ್ಕೃತೇ ।
ತಾವದ್ಧರ್ಮಭೃತಾಂ ಶ್ರೇಷ್ಠ ಜನನ್ಯಾಮಪಿ ಗೌರವಮ್ ॥ ೨೧

ಏತಾಭ್ಯಾಂ ಧರ್ಮಶೀಲಾಭ್ಯಾಂ ವನಂ ಗಚ್ಛೇತಿ ರಾಘವ ।
ಮಾತಾಪಿತೃಭ್ಯಾಮುಕ್ತೋಽಹಂ ಕಥಮನ್ಯತ್ ಸಮಾಚರೇ ॥ ೨೨

ತ್ವಯಾ ರಾಜ್ಯಮಯೋಧ್ಯಾಯಾಂ ಪ್ರಾಪ್ತವ್ಯಂ ಲೋಕಸತ್ಕೃತಮ್ ।
ವಸ್ತವ್ಯಂ ದಂಡಕಾರಣ್ಯೇ ಮಯಾ ವಲ್ಕಲವಾಸಸಾ ॥ ೨೩

ಏವಂ ಕೃತ್ವಾ ಮಹಾರಾಜೋ ವಿಭಾಗಂ ಲೋಕಸಂನಿಧೌ ।
ವ್ಯಾದಿಶ್ಯ ಚ ಮಹಾತೇಜಾ ದಿವಂ ದಶರಥೋ ಗತಃ ॥ ೨೪

ಸ ಚ ಪ್ರಮಾಣಂ ಧರ್ಮಾತ್ಮಾ ರಾಜಾ ಲೋಕಗುರುಸ್ತವ ।
ಪಿತ್ರಾ ದತ್ತಂ ಯಥಾಭಾಗಮುಪಭೋಕ್ತುಂ ತ್ವಮರ್ಹಸಿ ॥ ೨೫

ಚತುರ್ದಶ ಸಮಾಃ ಸೌಮ್ಯ ದಂಡಕಾರಣ್ಯಮಾಶ್ರಿತಃ ।
ಉಪಭೋಕ್ಷ್ಯೇ ತ್ವಹಂ ದತ್ತಂ ಭಾಗಂ ಪಿತ್ರಾ ಮಹಾತ್ಮನಾ ॥ ೨೬

ಕಾರದಲ್ಲಾದರೂ ಸ್ಥಾಪಿಸಬಹುದು. ಅವನಿಗೆ ಆ ಅಧಿಕಾರ ಉಂಟು (೨೦). ಭರತ, ನೀನು ಧರ್ಮವನ್ನು ಬಲ್ಲವನು. ಧರ್ಮಜ್ಞನೂ ಲೋಕಸಮ್ಮಾನಿತನೂ ಆದ ನಮ್ಮ ತಂದೆಯಲ್ಲಿ ನಮಗೆ ಯಾವ ಗೌರವ ಬುದ್ಧಿಯುಂಟೊ, ಅಷ್ಟು ಗೌರವವನ್ನು ತಾಯಿಗೆ ನಾವು ಸಲ್ಲಿಸಬೇಕು (೨೧). ಹೀಗಿರಲು ಧರ್ಮಶೀಲರಾದ ತಾಯಿತಂದೆಗಳಿಬ್ಬರೂ ಕಾಡಿಗೆ ಹೋಗೆಂದು ನನಗೆ ಹೇಳಿದಾಗ, ನಾನು ಅದನ್ನು ಹೇಗೆ ಮೀರಿ ನಡೆಯಲಿ? ನೀನು ಅಯೋಧ್ಯೆಯಲ್ಲಿದ್ದು ಲೋಕಮಾನ್ಯವಾದ ರಾಜ್ಯವನ್ನು ಆಳುವುದೇ ಯುಕ್ತ. ನಾನು ನಾರುಬಟ್ಟೆಯನ್ನುಟ್ಟು ದಂಡಕಾರಣ್ಯದಲ್ಲಿ ವಾಸಮಾಡುವುದೇ ಯುಕ್ತ (೨೨-೨೩). ಹೀಗೆ ಮಹಾತೇಜಸ್ವಿಯಾದ ದಶರಥಮಹಾರಾಜನು ಪ್ರಜೆಗಳೆದುರಿನಲ್ಲಿ ನಮಗೆ ವಿಭಾಗವನ್ನು ಮಾಡಿಕೊಟ್ಟು ಸ್ವರ್ಗಸ್ಥನಾದನು. ಪ್ರಜೆಗಳಿಗೂ ಗುರುಸ್ಥಾನದಲ್ಲಿರತಕ್ಕ ಧರ್ಮಾತ್ಮನಾದ ಮಹಾರಾಜನೇ ನಿನಗೆ ಮುಖ್ಯಪ್ರಮಾಣ. ಆದ್ದರಿಂದ ತಂದೆಯು ನಿನ್ನ ಭಾಗಕ್ಕೆ ಕೊಟ್ಟಿರುವ ರಾಜ್ಯವನ್ನು ಅನುಭವಿಸುವುದು ನಿನ್ನ ಕರ್ತವ್ಯ (೨೪-೨೫). ಸೌಮ್ಯ - ಭರತ, ನಾನು ದಂಡಕಾರಣ್ಯದಲ್ಲಿ ಹದಿನಾಲ್ಕು ವರ್ಷಗಳನ್ನು ಕಳೆಯುವೆನು. ಮಹಾತ್ಮನಾದ ತಂದೆಯು ನನಗೆ ಕೊಟ್ಟ ಭಾಗವನ್ನು

ಯದಬ್ರವೀನ್ಮಾಂ ನರಲೋಕಸತ್ಕೃತಃ
ಪಿತಾ ಮಹಾತ್ಮಾ ವಿಬುಧಾಧಿಪೋಪಮಃ ।
ತದೇವ ಮನ್ಯೇ ಪರಮಾತ್ಮನೋ ಹಿತಂ
ನ ಸರ್ವಲೋಕೇಶ್ವರಭಾವಮಪ್ಯಹಮ್ ॥ ೨೭

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತುರಧಿಕಶತತಮಃ ಸರ್ಗಃ

✿✿✿

ಅನುಭವಿಸುವೆನು (೨೬). ನಮ್ಮ ತಂದೆ ಭೂಲೋಕದಲ್ಲಿಯೇ ಮಾನ್ಯನಾಗಿ ದೇವೇಂದ್ರನಂತೆ ಇದ್ದ ಮಹಾಪುರುಷ. ಆತನು ನನಗೆ ಏನನ್ನು ಹೇಳಿದನೋ ಅದೇ ನನಗೆ ಅತ್ಯಂತ ಹಿತಕರವಾದದ್ದೆಂದು ತಿಳಿದಿದ್ದೇನೆ. ಅವನ ಇಷ್ಟಕ್ಕೆ ವಿರೋಧವಾಗಿ ಸರ್ವಲೋಕ ಸಾಮ್ರಾಜ್ಯವು ದೊರಕಿದರೂ ನಾನು ಸ್ವೀಕರಿಸಲಾರೆ'' ಎಂದು ಹೇಳಿದನು (೨೭).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ನೂರನಾಲ್ಕನೆಯ ಸರ್ಗ

✿✿✿

ಪಂಚಾಧಿಕಶತತಮಃ ಸರ್ಗಃ

ರಾಮವಾಕ್ಯಮ್

ತತಃ ಪುರುಷಸಿಂಹಾನಾಂ ವೃತಾನಾಂ ತೈಃ ಸುಹೃದ್ಗಣೈಃ ।
ಶೋಚತಾಮೇವ ರಜನೀ ದುಃಖೇನ ವ್ಯತ್ಯವರ್ತತ ॥ ೧

ರಜನ್ಯಾಂ ಸುಪ್ರಭಾತಾಯಾಂ ಭ್ರಾತರಸ್ತೇ ಸುಹೃದ್ವೃತಾಃ ।
ಮಂದಾಕಿನ್ಯಾಂ ಹುತಂ ಜಪ್ಯಂ ಕೃತ್ವಾ ರಾಮಮುಪಾಗಮನ್ ॥ ೨

ತೂಷ್ಣೀಂ ತೇ ಸಮುಪಾಸೀನಾ ನ ಕಶ್ಚಿತ್ ಕಿಂಚಿದಬ್ರವೀತ್ ।
ಭರತಸ್ತು ಸುಹೃನ್ಮಧ್ಯೇ ರಾಮಂ ವಚನಮಬ್ರವೀತ್ ॥ ೩

ಸಾಂತ್ವಿತಾ ಮಾಮಿಕಾ ಮಾತಾ ದತ್ತಂ ರಾಜ್ಯಮಿದಂ ಮಮ ।
ತದ್ದದಾಮಿ ತವೈವಾಹಂ ಭುಂಕ್ಷ್ವ ರಾಜ್ಯಮಕಂಟಕಮ್ ॥ ೪

ಮಹತೇವಾಂಬುವೇಗೇನ ಭಿನ್ನಃ ಸೇತುರ್ಜಲಾಗಮೇ ।
ದುರಾವಾರಂ ತ್ವದನ್ಯೇನ ರಾಜ್ಯಖಂಡಮಿದಂ ಮಹತ್ ॥ ೫

ಸರ್ಗ ೧೦೫

ಶ್ರೀರಾಮನು ರಾಜ್ಯವನ್ನು ಸ್ವೀಕರಿಸಬೇಕೆಂದು ಪುನಃ ಭರತನ ಪ್ರಾರ್ಥನೆ.
ಶ್ರೀರಾಮನ ಸಮಾಧಾನ.

ಪುರುಷಶ್ರೇಷ್ಠರಾದ ಶ್ರೀರಾಮನೇ ಮೊದಲಾದವರು ಮಿತ್ರರಿಂದ ಪರಿವೃತರಾಗಿ ಶೋಕಿಸುತ್ತಿರುವಾಗಲೇ ಆ ರಾತ್ರಿಯು ಪ್ರಯಾಸದಿಂದ ಕಳೆಯಿತು. ಬೆಳಗಾಗಲು ಆ ಸಹೋದರರು ಸ್ನೇಹಿತರೊಂದಿಗೆ ಮಂದಾಕಿನೀ ನದಿಗೆ ಹೋಗಿ ಜಪಹೋಮಾದಿಗಳನ್ನು ಮುಗಿಸಿಕೊಂಡು ಬಂದರು (೧-೨). ಶ್ರೀರಾಮನ ಸುತ್ತಲೂ ಎಲ್ಲರೂ ಬಂದು ಕುಳಿತರು. ಎಲ್ಲರೂ ಸುಮ್ಮನಿದ್ದರು. ಒಬ್ಬರೂ ಒಂದು ಮಾತನ್ನೂ ಆಡಲಿಲ್ಲ. ಆಗ ಭರತನು ಮಾತ್ರ ಅವರ ಮಧ್ಯದಲ್ಲಿ ಶ್ರೀರಾಮನನ್ನು ಕುರಿತು ಹೀಗೆ ಹೇಳಲುಪಕ್ರಮಿಸಿದನು (೩): "ಅಣ್ಣ, ನನ್ನ ತಾಯಿಗೆ ಈಗ ಸಮಾಧಾನವಾಗಿದೆ. (ಅವಳು ಒಪ್ಪಿದ್ದಾಳೆ) ನನಗೆ ಕೊಟ್ಟ ರಾಜ್ಯವನ್ನು ನಾನು ನಿನಗೆ ಅರ್ಪಿಸುತ್ತಿದ್ದೇನೆ. ಯಾವ ಅಡ್ಡಿಯೂ ಇಲ್ಲದೆ ನೀನು ರಾಜ್ಯವನ್ನು ಅನುಭವಿಸು. ಮಳೆಗಾಲದಲ್ಲಿ

ಗತಿಂ ಖರ ಇವಾಶ್ವಸ್ಯ ತಾರ್ಕ್ಷ್ಯಸ್ಯೇವ ಪತತ್ರಿಣಃ ।
ಅನುಗಂತುಂ ನ ಶಕ್ತಿರ್ಮೇ ಗತಿಂ ತವ ಮಹೀಪತೇ ॥ ೬

ಸುಜೀವಂ ನಿತ್ಯಶಸ್ತಸ್ಯ ಯಃ ಪರೈರುಪಜೀವ್ಯತೇ ।
ರಾಮ ತೇನ ತು ದುರ್ಜೀವಂ ಯಃ ಪರಾನುಪಜೀವತಿ ॥ ೭

ಯಥಾ ತು ರೋಪಿತೋ ವೃಕ್ಷಃ ಪುರುಷೇಣ ವಿವರ್ಧಿತಃ ।
ಹ್ರಸ್ವಕೇನ ದುರಾರೋಹೋ ರೂಢಸ್ಕಂಧೋ ಮಹಾದ್ರುಮಃ ॥ ೮

ಸ ಯಥಾ ಪುಷ್ಪಿತೋ ಭೂತ್ವಾ ಫಲಾನಿನ ನಿದರ್ಶಯೇತ್ ।
ಸ ತಾಂ ನಾನುಭವೇತ್ ಪ್ರೀತಿಂ ಯಸ್ಯ ಹೇತೋಃ ಪ್ರರೋಪಿತಃ ॥ ೯

ಏಷೋಪಮಾ ಮಹಾಬಾಹೋ ತಮರ್ಥಂ ವೇತ್ತುಮರ್ಹಸಿ ।
ಯದಿ ತ್ವಮಸ್ಮಾನ್ ವೃಷಭೋ ಭರ್ತಾ ಭೃತ್ಯಾನ್ನ ಶಾಧಿ ಹಿ ॥ ೧೦

ಪ್ರವಾಹವೇಗದಿಂದ ಒಡೆದುಹೋಗುವ ಅಡ್ಡಗಟ್ಟೆಯಂತಿರುವ ಈ ಮಹಾರಾಜ್ಯವನ್ನು ಹಿಡಿದು ನಿಲ್ಲಿಸಲು ನಿನ್ನನ್ನು ಬಿಟ್ಟರೆ ಯಾರಿಗೂ ಶಕ್ಯವಲ್ಲ (೪-೫). ಮಹಾರಾಜ! ನಿನ್ನ ನಿರ್ವಹಣ ಸಾಮರ್ಥ್ಯವನ್ನು ಅನುಕರಿಸುವ ಶಕ್ತಿ ನನಗಿಲ್ಲ. ಹಾಗೆ ನಾನು ಹೊರಟರೆ ಅಶ್ವದ ವೇಗವನ್ನು ಕತ್ತೆಯೂ ಗರುತ್ಮಂತನ ವೇಗವನ್ನು ಸಾಮಾನ್ಯ ಹಕ್ಕಿಯೂ ಅನುಕರಿಸಲು ಹೊರಟಂತೆ ಆದೀತು. ಶ್ರೀರಾಮ, ಯಾವಾಗಲೂ ಇತರರು ನಮ್ಮನ್ನು ನಂಬಿಕೊಂಡು ಜೀವಿಸುವಂತೆ ಇರುವುದು ಉತ್ತಮ. ಹಾಗಲ್ಲದೆ ನಾವು ಇತರರನ್ನು ಆಶ್ರಯಿಸಿ ಕಾರ್ಯವನ್ನು ಸಾಗಿಸಿಕೊಳ್ಳುವುದು ಉತ್ತಮಜೀವನವಲ್ಲ* (೬-೭). ಒಬ್ಬ ಪುರುಷನು ಬೀಜವನ್ನು ನೆಟ್ಟು ಬೆಳೆಸಿ ದೊಡ್ಡ ವೃಕ್ಷವನ್ನಾಗಿ ಮಾಡುತ್ತಾನೆ ಕುಳ್ಳನಿಗೆ ಹತ್ತಲು ಅಶಕ್ಯವಾದ ಮಹಾವೃಕ್ಷವಾಗಿ ಕೊಂಬೆಗಳೊಡನೆ ಅದು ಬೆಳೆದು ಹೂಗಳನ್ನು ಬಿಡುತ್ತದೆ. ಆದರೆ ಅದು ಹಣ್ಣನ್ನು ಮಾತ್ರ ಬಿಡದೆಹೋದರೆ, ಬೆಳೆಸಿದವನಿಗೆ ಸಂತೋಷವಾದೀತೇ? ಹಣ್ಣಿಗಾಗಿಯಲ್ಲವೆ ಅವನು ವೃಕ್ಷವನ್ನು ಬೆಳೆಸಿದ್ದು? (೮-೯). ಹೇ ವೀರಾಗ್ರಣಿ, ಇದೇ ನಾನು ಕೊಡುವ ಹೋಲಿಕೆ. ಇದರ ಅಭಿಪ್ರಾಯವನ್ನು ನೀನು ತಿಳಿದುಕೊಳ್ಳಬಲ್ಲೆ. ನೀನು

---

* ಸಮರ್ಥರಾದ ಮಂತ್ರಿಗಳನ್ನು ಆಶ್ರಯಿಸಿ ರಾಜ್ಯಭಾರವನ್ನು ನಡೆಸಬಹುದಲ್ಲ ಎಂಬ ಶಂಕೆಗೆ ಇದು ಉತ್ತರ.

ಶ್ರೇಣಯಸ್ತ್ವಾಂ ಮಹಾರಾಜ ಪಶ್ಯಂತ್ವಗ್ರ್ಯಾಶ್ಚ ಸರ್ವಶಃ ।
ಪ್ರತಪಂತಮಿವಾದಿತ್ಯಂ ರಾಜ್ಯೇ ಸ್ಥಿತಮರಿಂದಮಮ್ ॥ ೧೧

ತವಾನುಯಾನೇ ಕಾಕುತ್ಸ್ಥ ಮತ್ತಾ ನರ್ದಂತು ಕುಂಜರಾಃ ।
ಅಂತಃಪುರಗತಾ ನಾರ್ಯೋ ನಂದಂತು ಸುಸಮಾಹಿತಾಃ ॥ ೧೨

ತಸ್ಯ ಸಾಧ್ವಿತ್ಯಮನ್ಯಂತ ನಾಗರಾ ವಿವಿಧಾ ಜನಾಃ ।
ಭರತಸ್ಯ ವಚಃ ಶ್ರುತ್ವಾ ರಾಮಂ ಪ್ರತ್ಯನುಯಾಚತಃ ॥ ೧೩

ತಮೇವಂ ದುಃಖಿತಂ ಪ್ರೇಕ್ಷ್ಯ ವಿಲಪಂತಂ ಯಶಸ್ವಿನಮ್ ।
ರಾಮಃ ಕೃತಾತ್ಮಾ ಭರತಂ ಸಮಾಶ್ವಾಸಯದಾತ್ಮವಾನ್ ॥ ೧೪

ನಾತ್ಮನಃ ಕಾಮಕಾರೋಽಸ್ತಿ ಪುರುಷೋಽಯಮನೀಶ್ವರಃ ।
ಇತಶ್ಚೇತರತಶ್ಚೈನಂ ಕೃತಾಂತಃ ಪರಿಕರ್ಷತಿ ॥ ೧೫

ರಾಜಶ್ರೇಷ್ಠನಾಗಿ ಭೃತ್ಯರಾದ ನಮ್ಮನ್ನು ಪಾಲಿಸದಿದ್ದರೆ ಹೀಗೆ ಆದೀತು* (೧೦). ಹೇ ಮಹಾರಾಜ! ಶತ್ರುಸಂಹಾರಕನಾದ ನೀನು ರಾಜಸಿಂಹಾಸನವನ್ನೇರಿ ಸೂರ್ಯನಂತೆ ಬೆಳಗುವುದನ್ನು ಈ ಸಮಸ್ತ ಪ್ರಜೆಗಳೂ ಪ್ರಧಾನರೂ ನೋಡುವಂತಾಗಲಿ! ಶ್ರೀರಾಮ, (ವೈಭವದ ಮೆರವಣಿಗೆಯಲ್ಲಿ) ನಿನ್ನ ಹಿಂದೆ ಮದ್ದಾನೆಗಳು ಸಾಲಿಟ್ಟು ಬರುತ್ತ ಘೀಂಕರಿಸಲಿ! ಅಂತಃಪುರದಲ್ಲಿರುವ ನಾರಿಯರು ಸಮಾಧಾನಗೊಂಡು ನಲಿಯಲಿ!'' ಎಂದು ಹೇಳಿದನು (೧೧-೧೨). ಹೀಗೆ ಶ್ರೀರಾಮನೊಡನೆ ಭರತನು ಬೇಡಿಕೊಳ್ಳುತ್ತಿರುವುದನ್ನು ಕೇಳಿ ಅಲ್ಲಿ ನೆರೆದಿದ್ದ ವಿವಿಧ ಶ್ರೇಣಿಯ ಜನರೆಲ್ಲರೂ 'ಭಲಾ! ಭೇಷ್! ಎಂದುಕೊಂಡರು. ಈ ರೀತಿಯಲ್ಲಿ ದುಃಖಾರ್ತನಾಗಿ ಹಲುಬುತ್ತಿದ್ದ ಕೀರ್ತಿಶಾಲಿಯಾದ ಭರತನನ್ನು ನೋಡಿ ಧೀರನೂ ಪರಿಷ್ಕೃತಬುದ್ಧಿಯುಳ್ಳವನೂ ಆದ ಶ್ರೀರಾಮನು ಹೀಗೆಂದನು (೧೩-೧೪) : ''ತಮ್ಮ - ಭರತ, ಮನುಷ್ಯನು ತನಗೆ ಇಷ್ಟಬಂದಂತೆ ಮಾಡಲಾರ. ಇವನಿಗೆ ಸ್ವಾತಂತ್ರ್ಯದಿಂದ ನಡೆಯುವ ಶಕ್ತಿಯಿಲ್ಲ. ದೈವವು ಮನುಷ್ಯನನ್ನು ಇಲ್ಲಿಂದಲ್ಲಿಗೆ ಎಳೆದಾಡುತ್ತದೆ. ಐಶ್ವರ್ಯದ ರಾಶಿಗೂ ನಾಶವುಂಟು.

---

* ಶ್ರೀರಾಮನೇ ಮಹಾವೃಕ್ಷ, ಬೆಳಸಿದವನು ದಶರಥ, ಪಟ್ಟಾಭಿಷೇಕದ ಏರ್ಪಾಡು ಹೂ, ರಾಜ್ಯಪಾಲನೆ ಹಣ್ಣು.

ಸರ್ವೇ ಕ್ಷಯಾಂತಾ ನಿಚಯಾಃ ಪತನಾಂತಾಃ ಸಮುಚ್ಛ್ರಯಾಃ ।
ಸಂಯೋಗಾ ವಿಪ್ರಯೋಗಾಂತಾ ಮರಣಾಂತಂ ಚ ಜೀವಿತಮ್ ॥ ೧೬

ಯಥಾ ಫಲಾನಾಂ ಪಕ್ವಾನಾಂ ನಾನ್ಯತ್ರ ಪತನಾದ್ಭಯಮ್ ।
ಏವಂ ನರಸ್ಯ ಜಾತಸ್ಯ ನಾನ್ಯತ್ರ ಮರಣಾದ್ಭಯಮ್ ॥ ೧೭

ಯಥಾಗಾರಂ ದೃಢಸ್ಥೂಣಂ ಜೀರ್ಣಂ ಭೂತ್ವಾವಸೀದತಿ ।
ತಥಾವಸೀದಂತಿ ನರಾ ಜರಾಮೃತ್ಯುವಶಂ ಗತಾಃ ॥ ೧೮

ಅತ್ಯೇತಿ ರಜನೀ ಯಾ ತು ಸಾ ನ ಪ್ರತಿನಿವರ್ತತೇ ।
ಯಾತ್ಯೇವ ಯಮುನಾ ಪೂರ್ಣಾ ಸಮುದ್ರ ಲವಣಾರ್ಣವಮ್ ॥

ಅಹೋರಾತ್ರಾಣಿ ಗಚ್ಛಂತಿ ಸರ್ವೇಷಾಂ ಪ್ರಾಣಿನಾಮಿಹ ।
ಆಯೂಂಷಿ ಕ್ಷಪಯಂತ್ಯಾಶು ಗ್ರೀಷ್ಮೇ ಜಲಮಿವಾಂಶವಃ ॥ ೨೦

ಆತ್ಮಾನಮನುಶೋಚ ತ್ವಂ ಕಿಮನ್ಯಮನುಶೋಚಸಿ ।
ಆಯುಸ್ತೇ ಹೀಯತೇ ಯಸ್ಯ ಸ್ಥಿತಸ್ಯ ಚ ಗತಸ್ಯ ಚ ॥ ೨೧

ಉನ್ನತವಾದ ಅಧಿಕಾರಕ್ಕೂ ಪತನವುಂಟು. ಪತ್ನೀಪುತ್ರಾದಿ ಸಂಯೋಗವು ವಿಯೋಗದಲ್ಲಿ ಕೊನೆಗೊಳ್ಳುತ್ತದೆ. ಜೀವಿತವು ಮರಣದಲ್ಲಿ ಕೊನೆಗೊಳ್ಳುತ್ತದೆ (೧೫-೧೬). ಮಾಗಿದ ಹಣ್ಣುಗಳಿಗೆ ಕೆಳಕ್ಕೆ ಬೀಳುವ ಭಯವಿದ್ದೇ ಇದೆ. ಹಾಗೆ, ಹುಟ್ಟಿದ ಮನುಷ್ಯನಿಗೆ ಸಾಯುವ ಭಯವಿದ್ದೇ ಇದೆ. ಎಂಥ ಗಟ್ಟಿಯಾದ ಕಂಭಗಳಿಂದ ಮನೆಯನ್ನು ಕಟ್ಟಿದರೂ ಅದು ಹಳೆಯದಾಗಿ ಒಂದು ದಿನ ಉರುಳಿಬೀಳುತ್ತದೆ. ಹಾಗೆಯೇ ಮನುಷ್ಯರು ಮುಪ್ಪು ಸಾವುಗಳಿಗೆ ವಶರಾಗಿ ನಾಶಹೊಂದುತ್ತಾರೆ (೧೭-೧೮). ಕಳೆದುಹೋದ ರಾತ್ರಿ ಪುನಃ ಬರುವುದಿಲ್ಲ. ತುಂಬಿ ಹರಿಯುವ ಯಮುನೆಯು ಸಮುದ್ರವನ್ನು ಸೇರುವುದೇ ಹೊರತು ಪುನಃ ಹಿಂದಿರುಗುವುದಿಲ್ಲ. ಈ ಲೋಕದಲ್ಲಿ ಸಕಲಪ್ರಾಣಿಗಳಿಗೂ ಹಗಲು ರಾತ್ರಿಗಳು ಕಳೆಯುತ್ತಲೇ ಇವೆ. ಬೇಸಿಗೆಯಲ್ಲಿ ಸೂರ್ಯಕಿರಣಗಳು ನೀರನ್ನು ಹೀರುವಂತೆ, ಇವು ಆಯುಸ್ಸನ್ನು ಒಂದೇ ಸಮನಾಗಿ ಹೀರುತ್ತವೆ (೧೯-೨೦). ಎಲೈ ಮನುಷ್ಯನೆ, ನಿನಗಾಗಿ ನೀನು ಪಶ್ಚತ್ತಾಪಪಡು. ಇತರರಿಗಾಗಿ ನೀನು ಶೋಕಿಸಿ ಮಾಡುವುದೇನು? ನೀನು ಸುಮ್ಮನೆ ಕುಳಿತಿದ್ದರೂ ಕೆಲಸ ಮಾಡುತ್ತಿದ್ದರೂ ನಿನ್ನ ಆಯುಸ್ಸು ಎಡಬಿಡದೆ ಕ್ಷಯಿಸುತ್ತಲೆ

ಸಹೈವ ಮೃತ್ಯುರ್ವ್ರಜತಿ ಸಹ ಮೃತ್ಯುರ್ನಿಷೀದತಿ ।
ಗತ್ವಾಸುದೀರ್ಘಮಧ್ವಾನಂ ಸಹಮೃತ್ಯುರ್ನಿವರ್ತತೇ ॥ ೨೨

ಗಾತ್ರೇಷು ವಲಯಃ ಪ್ರಾಪ್ತಾಃ ಶ್ವೇತಾಶ್ಚೈವ ಶಿರೋರುಹಾಃ ।
ಜರಯಾ ಪುರುಷೋ ಜೀರ್ಣಃ ಕಿಂ ಹಿ ಕೃತ್ವಾ ಪ್ರಭಾವಯೇತ್ ॥ ೨೩

ನಂದಂತ್ಯುದಿತ ಆದಿತ್ಯೇ ನಂದಂತ್ಯಸ್ತಮಿತೇ ರವೌ ।
ಆತ್ಮನೋ ನಾವಬುಧ್ಯಂತೇ ಮನುಷ್ಯಾ ಜೀವಿತಕ್ಷಯಮ್ ॥ ೨೪

ಹೃಷ್ಯಂತ್ಯುತುಮುಖಂ ದೃಷ್ಟ್ವಾ ನವಂ ನವಮಿಹಾಗತಮ್ ।
ಋತೂನಾಂ ಪರಿವರ್ತೇನ ಪ್ರಾಣಿನಾಂ ಪ್ರಾಣಸಂಕ್ಷಯಃ ॥ ೨೫

ಯಥಾ ಕಾಷ್ಠಂ ಚ ಕಾಷ್ಠಂ ಚ ಸಮೇಯಾತಾಂ ಮಹಾರ್ಣವೇ ।
ಸಮೇತ್ಯ ಚ ವ್ಯಪೇಯಾತಾಂ ಕಾಲಮಾಸಾದ್ಯ ಕಂಚನ ॥ ೨೬

ಏವಂ ಭಾರ್ಯಾಶ್ಚ ಪುತ್ರಾಶ್ಚ ಜ್ಞಾತಯಶ್ಚ ಧನಾನಿ ಚ ।
ಸಮೇತ್ಯ ವ್ಯವಧಾವಂತಿ ಧ್ರುವೋ ಹ್ಯೇಷಾಂ ವಿನಾಭವಃ ॥ ೨೭

ಇದೆಯಲ್ಲ! (೨೧). ಹೋಗುತ್ತಿದ್ದರೆ ಜೊತೆಯಲ್ಲಿಯೇ ಮೃತ್ಯುವು ಹಿಂಬಾಲಿಸಿ ಬರುತ್ತದೆ. ಕುಳಿತರೆ ಅದು ಪಕ್ಕದಲ್ಲಿ ಕುಳಿತಿರುತ್ತದೆ! ದೂರದ ದಾರಿಯವರೆಗೂ ಮೃತ್ಯುವು ಬಂದು, ತಾನು ಹೋಗುವಾಗ ಜೊತೆಯಲ್ಲಿ ಕರೆದುಕೊಂಡು ಹೋಗುತ್ತದೆ! (೨೨). ಅವಯವಗಳು ಸುಕ್ಕುಗಟ್ಟುತ್ತವೆ; ಕೂದಲು ಬೆಳ್ಳಗಾಗುತ್ತದೆ; ಮುಪ್ಪಿನಿಂದ ಮನುಷ್ಯನು ಜೀರ್ಣನಾಗುತ್ತಾನೆ. ಏನು ಮಾಡಿದರೆ ಇವನ್ನು ತಪ್ಪಿಸಿಕೊಂಡಾನು? ಯಾವ ಪ್ರಭಾವ ಅಲ್ಲಿ ನಡೆದೀತು? (೨೩). ಸೂರ್ಯನು ಉದಯಿಸಿದರೂ ಜನರು ಆನಂದ ಪಡುತ್ತಾರೆ; ಅಸ್ತಮಿಸಿದರೂ ಆನಂದಪಡುತ್ತಾರೆ. ತಮ್ಮ ಆಯುಸ್ಸು ಕ್ಷಯಿಸಿ ಹೋಗುತ್ತಿದೆಯೆಂಬುದನ್ನು ಮಾತ್ರ ಅವರು ಗಮನಿಸುವುದಿಲ್ಲ (೨೪). ವಸಂತಾದಿ ಋತುಗಳು ಹೊಸಹೊಸದಾಗಿ ಬಂದಾಗ (ಒಂದೊಂದು ಕಾರಣದಿಂದ) ಜನರು ನಲಿಯುತ್ತಾರೆ. ಆದರೆ ಒಂದೊಂದು ಋತುವು ಕಳೆದಾಗಲೂ ಅಷ್ಟು ಪ್ರಮಾಣದ ಆಯುಸ್ಸು ಕಳೆದುಹೋಗಿರುತ್ತದೆ! (೨೫). ಮಹಾಸಾಗರದಲ್ಲಿ ತೇಲುವ ಕಡ್ಡಿಗಳು ಆಕಸ್ಮಾತ್ತಾಗಿ ಒಂದನ್ನೊಂದು ಸಂಧಿಸುತ್ತವೆ. ಸ್ವಲ್ಪ ಹೊತ್ತಿನಲ್ಲಿ ಮತ್ತೆ ಅಗಲಿಹೋಗುತ್ತವೆ.

ನಾತ್ರ ಕಶ್ಚಿದ್ಯಥಾಭಾವಂ ಪ್ರಾಣೀ ಸಮಭಿವರ್ತತೇ ।
ತೇನ ತಸ್ಮಿನ್ನ ಸಾಮರ್ಥ್ಯಂ ಪ್ರೇತಸ್ಯಾಸ್ಯನುಶೋಚತಃ ॥ ೨೮

ಯಥಾ ಹಿ ಸಾರ್ಥಂ ಗಚ್ಛಂತಂ ಬ್ರೂಯಾತ್ ಕಶ್ಚಿತ್ ಪಥಿ ಸ್ಥಿತಃ ।
ಅಹಮಪ್ಯಾಗಮಿಷ್ಯಾಮಿ ಪೃಷ್ಠತೋ ಭವತಾಮಿತಿ ॥ ೨೯

ಏವಂ ಪೂರ್ವೈರ್ಗತೋ ಮಾರ್ಗಃ ಪಿತೃಪೈತಾಮಹೋ ಧ್ರುವಃ ।
ತಮಾಪನ್ನಃ ಕಥಂ ಶೋಚೇದ್ಯಸ್ಯ ನಾಸ್ತಿ ವ್ಯತಿಕ್ರಮಃ ॥ ೩೦

ವಯಸಃ ಪತಮಾನಸ್ಯ ಸ್ರೋತಸೋ ವಾನಿವರ್ತಿನಃ ।
ಆತ್ಮಾ ಸುಖೇ ನಿಯೋಕ್ತವ್ಯಃ ಸುಖಭಾಜಃ ಪ್ರಜಾಃ ಸ್ಮೃತಾಃ ॥ ೩೧

ಧರ್ಮಾತ್ಮಾ ಸ ಶುಭೈಃ ಕೃತ್ಸ್ನೈಃ ಕ್ರತುಭಿಶ್ಚಾಪ್ತದಕ್ಷಿಣೈಃ ।
ಧೂತಪಾಪೋ ಗತಃ ಸ್ವರ್ಗಂ ಪಿತಾ ನಃ ಪೃಥಿವೀಪತಿಃ ॥ ೩೨

ಆದರ ಹಾಗೆಯೇ ಹೆಂಡತಿ, ಮಕ್ಕಳು, ಬಂಧುಗಳು, ಐಶ್ವರ್ಯ - ಎಲ್ಲವೂ ಒಂದು ಕಾಲದಲ್ಲಿ ಬಂದು ಸೇರುತ್ತವೆ. ಹಾಗೆಯೇ ಬಿಟ್ಟುಹೋಡುತ್ತವೆ. ಇವು ಅಗಲಿಹೋಗುವುದು ನಿಶ್ಚಯ (೨೬-೨೭). ಈ ಲೋಕದಲ್ಲಿ ಯಾವ ಪ್ರಾಣಿಗೂ ತನ್ನ ಇಷ್ಟಬಂದಂತೆ ನಡೆಯಲು ಸಾಧ್ಯವಿಲ್ಲ. ಆದ್ದರಿಂದ ಮರಣಹೊಂದಿದವನಿಗಾಗಿ ಮನುಷ್ಯನು ಶೋಕಿಸಿದರೆ ಏನಾದೀತು? ಮರಣವನ್ನು ಪರಿಹರಿಸುವ ಶಕ್ತಿ ಇವನಿಗಿಲ್ಲ(೨೮). ಭರತ, ದಾರಿಯಲ್ಲಿ ಹೋಗುತ್ತಿರುವ ಮಾರ್ಗಸ್ಥರ ಗುಂಪನ್ನು ನೋಡಿ ನಡುದಾರಿಯಲ್ಲಿರುವ ಒಬ್ಬ ಮನುಷ್ಯನು 'ನಾನೂ ನಿಮ್ಮೊಡನೆ ಬರುತ್ತೇನೆ' ಎಂದು ಹೇಳಿ ಅವರೊಡನೆ ಹೋಗಬೇಕಾದ ಸ್ಥಳಕ್ಕೆ ಹೋಗುತ್ತಾನಲ್ಲವೆ? ಹಾಗೆ ಪಿತೃಪಿತಾಮಹರಿಂದ ಪರಂಪರೆಯಾಗಿ ಬಂದ ಮಾರ್ಗವೇ ನಿಶ್ಚಿತವಾದ ಗುರಿಯನ್ನು ಮುಟ್ಟಿಸುವುದು. ಆ ಮಾರ್ಗವನ್ನು ಹಿಡಿದು ತಪ್ಪದೆ ಹೋಗತಕ್ಕವನಿಗೆ ಅಪಾಯವಿಲ್ಲ (೨೯-೩೦). ವಯಸ್ಸು ಪ್ರವಾಹದಂತೆ ಮುಂದೆ ಮುಂದೆ ಕಳೆದುಹೋಗುತ್ತಲೇ ಇರುವುದರಿಂದ, ನಾವು ಸುಖಹೇತುವಾದ ಧರ್ಮವನ್ನು ಆಶ್ರಯಿಸಬೇಕು. (ಧರ್ಮದಿಂದ ಸುಖ). ಸುಖವನ್ನೇ ಜನರು ಬಯಸುತ್ತಾರೆ (೩೧). ನಮ್ಮ ತಂದೆಯಾದ ಮಹಾರಾಜನು ಧರ್ಮಾತ್ಮನಾಗಿ ಶ್ರೇಯಸ್ಕರವಾದ ಅನೇಕ ಯಾಗಗಳನ್ನು ಮಾಡಿ ಬೇಕಾದಷ್ಟು

ಭೃತ್ಯಾನಾಂ ಭರಣಾತ್ ಸಮ್ಯಕ್ ಪ್ರಜಾನಾಂ ಪರಿಪಾಲನಾತ್ ।
ಅರ್ಥಾದಾನಾಚ್ಚ ಧರ್ಮೇಣ ಪಿತಾ ನಸ್ತ್ರಿದಿವಂ ಗತಃ ॥ ೩೩

ಕರ್ಮಭಿಸ್ತು ಶುಭೈರಿಷ್ಟೈಃ ಕ್ರತುಭಿಶ್ಚಾಪ್ತದಕ್ಷಿಣೈಃ ।
ಸ್ವರ್ಗಂ ದಶರಥಃ ಪ್ರಾಪ್ತಃ ಪಿತಾ ನಃ ಪೃಥಿವೀಪತಿಃ ॥ ೩೪

ಇಷ್ಟ್ವಾ ಬಹುವಿಧೈರ್ಯಜ್ಞೈರ್ಭೋಗಾಂಶ್ಚಾವಾಪ್ಯ ಪುಷ್ಕಲಾನ್ ।
ಉತ್ತಮಂ ಚಾಯುರಾಸಾದ್ಯ ಸ್ವರ್ಗತಃ ಪೃಥಿವೀಪತಿಃ ॥ ೩೫

ಆಯುರುತ್ತಮಮಾಸಾದ್ಯ ಭೋಗಾನಪಿ ಚ ರಾಘವಃ ।
ಸ ನ ಶೋಚ್ಯಃ ಪಿತಾ ತಾತ ಸ್ವರ್ಗತಃ ಸತ್ಕೃತಃ ಸತಾಮ್ ॥ ೩೬

ಸ ಜೀರ್ಣಂ ಮಾನುಷಂ ದೇಹಂ ಪರಿತ್ಯಜ್ಯ ಪಿತಾ ಹಿ ನಃ ।
ದೈವೀಮೃದ್ಧಿಮನುಪ್ರಾಪ್ತೋ ಬ್ರಹ್ಮಲೋಕವಿಹಾರಿಣೀಮ್ ॥ ೩೭

ತಂ ತು ನೈವಂವಿಧಃ ಕಶ್ಚಿತ್ ಪ್ರಾಜ್ಞಃ ಶೋಚಿತುಮರ್ಹತಿ ।
ತದ್ವಿಧೋ ಯದ್ವಿಧಶ್ಚಾಸಿ ಶ್ರುತವಾನ್ ಬುದ್ಧಿಮತ್ತರಃ ॥ ೩೮

ದಾನಕಾರ್ಯಗಳನ್ನು ಮಾಡಿದ್ದಾನೆ. ಪಾಪದ ಲೇಶವೂ ಇಲ್ಲದ್ದರಿಂದ ಅವನು ಸ್ವರ್ಗವನ್ನು ಸೇರಿದ್ದಾನೆ. ನಮ್ಮ ತಂದೆಯು ಧರ್ಮಮಾರ್ಗದಿಂದ ಧನವನ್ನು ಸಂಪಾದಿಸಿ ಸೇವಕರನ್ನು ಚೆನ್ನಾಗಿ ಪೋಷಿಸಿದ್ದಾನೆ. ಪ್ರಜೆಗಳನ್ನು ಯುಕ್ತರೀತಿಯಲ್ಲಿ ಪರಿಪಾಲಿಸಿ ಸ್ವರ್ಗಸ್ಥನಾಗಿದ್ದಾನೆ (೩೨-೩೩). ನಮ್ಮ ತಂದೆಯಾದ ದಶರಥಭೂಪಾಲನು ಪುಣ್ಯಕರ್ಮಗಳನ್ನಾಚರಿಸಿ ಬೇಕಾದಂತೆ ಯಾಗಗಳನ್ನು ನಡೆಸಿ ಸ್ವರ್ಗಲೋಕವನ್ನುಸೇರಿದ್ದಾನೆ. ನಾನಾ ಬಗೆಯ ಯಜ್ಞಗಳನ್ನು ಮಾಡಿ ಯಥೇಷ್ಟವಾಗಿ ರಾಜಭೋಗಗಳನ್ನನುಭವಿಸಿ ದೀರ್ಘಾಯುವಾಗಿ ಬಾಳಿ ಈಗ ದಿವಂಗತನಾಗಿದ್ದಾನೆ (೩೪-೩೫). ವತ್ಸ-ಭರತ, ನಮ್ಮ ತಂದೆ ಪೂರ್ಣಾಯುಸ್ಸನ್ನು ಪಡೆದು ಜೀವಿಸಿದವನು. ದಿವ್ಯಭೋಗಗಳನ್ನು ಅನುಭವಿಸಿದವನು. ಸಜ್ಜನರಿಗೆ ಸಮ್ಮಾನ್ಯವಾಗಿ ಬಾಳಿ ಸ್ವರ್ಗಲೋಕವನ್ನು ಪಡೆದವನು. ಅಂಥವನಿಗೋಸ್ಕರ ನಾವು ಶೋಕಿಸಬಾರದು (೩೬). ನಮ್ಮ ತಂದೆ ಜೀರ್ಣವಾದ ಮನುಷ್ಯದೇಹವನ್ನು ಪರಿತ್ಯಜಿಸಿ ಬ್ರಹ್ಮಲೋಕದಲ್ಲಿ ವಿಹರಿಸ ಬಹುದಾದ ದಿವ್ಯದೇಹವನ್ನು ಪಡೆದಿದ್ದಾನೆ. ಅಂಥ ಮಹಾರಾಜನಿಗಾಗಿ ನಿನ್ನಂಥ ಪ್ರಾಜ್ಞನು ಶೋಕಿಸಬಾರದು. ನೀನು ಗುರುಮುಖದಿಂದ ವಿದ್ಯಾರ್ಜನೆ ಮಾಡಿದವನೂ

ಏತೋ ಬಹುವಿಧಾಃ ಶೋಕಾ ವಿಲಾಪರುದಿತೇ ತಥಾ ।
ವರ್ಜನೀಯಾ ಹಿ ಧೀರೇಣ ಸರ್ವಾವಸ್ಥಾಸು ಧೀಮತಾ ॥ ೩೯

ಸ ಸ್ವಸ್ಥೋ ಭವ ಮಾ ಶೋಕೋ ಯಾತ್ವಾ ಚಾವಸ ತಾಂ ಪುರೀಮ್ ।
ತಥಾ ಪಿತ್ರಾ ನಿಯುಕ್ತೋಽಸಿ ವಶಿನಾ ವದತಾಂ ವರ ॥ ೪೦

ಯತ್ರಾಹಮಪಿ ತೇನೈವ ನಿಯುಕ್ತಃ ಪುಣ್ಯಕರ್ಮಣಾ ।
ತತ್ರೈವಾಹಂ ಕರಿಷ್ಯಾಮಿ ಪಿತುರಾರ್ಯಸ್ಯ ಶಾಸನಮ್ ॥ ೪೧

ನ ಮಯಾ ಶಾಸನಂ ತಸ್ಯ ತ್ಯಕ್ತುಂ ನ್ಯಾಯ್ಯಮರಿಂದಮ ।
ತತ್ತ್ವಯಾಪಿ ಸದಾ ಮಾನ್ಯಂ ಸ ವೈ ಬಂಧುಃ ಸ ನಃ ಪಿತಾ ॥ ೪೨

ತದ್ವಚಃ ಪಿತುರೇವಾಹಂ ಸಂಮತಂ ಧರ್ಮಚಾರಿಣಾಮ್ ।
ಕರ್ಮಣಾ ಪಾಲಯಿಷ್ಯಾಮಿ ವನವಾಸೇನ ರಾಘವ ॥ ೪೩

ಧಾರ್ಮಿಕೇಣಾನೃಶಂಸೇನ ನರೇಣ ಗುರುವರ್ತಿನಾ ।
ಭವಿತವ್ಯಂ ನರವ್ಯಾಘ್ರ ಪರಲೋಕಂ ಜಗೀಷತಾ ॥ ೪೪

ಸ್ವತಃ ಅತ್ಯಂತ ಬುದ್ಧಿಶಾಲಿಯೂ ಆಗಿದ್ದೀಯೆ (೩೭-೩೮). ಹೀಗೆ ನಾನಾ ಪ್ರಕಾರದ ಶೋಕಸಂದರ್ಭಗಳು ಮನುಷ್ಯನಿಗೆ ಬರುತ್ತವೆ. ವಿವೇಕಿಯಾದ ಧೀರನು ಎಲ್ಲ ಸನ್ನಿವೇಶಗಳಲ್ಲಿಯೂ ಚಿಂತಿಸುವುದು, ಹಲುಬುವುದು, ಅಳುವುದು - ಇವುಗಳನ್ನು ಬಿಟ್ಟುಬಿಡಬೇಕು (೩೯). ಆದ್ದರಿಂದ, ಭರತ, ಸಮಾಧಾನವನ್ನು ತಂದುಕೊ. ಶೋಕಿಸಬೇಡ. ಇಲ್ಲಿಂದ ಹೋಗಿ ಅಯೋಧ್ಯೆಯಲ್ಲಿರು. ಆ ರೀತಿಯಲ್ಲಿರಲು ತಂದೆಯು ನಿನ್ನನ್ನು ನಿಯಮಿಸಿದ್ದಾನೆ. ನಾನು ಎಲ್ಲಿರಬೇಕೆಂದು ಆ ಪುಣ್ಯಾತ್ಮನು ನಿಯಮಿಸಿದ್ದಾನೋ ಅಲ್ಲಿಯೇ ನಾನು ಇದ್ದು ತಂದೆಯ ಆಜ್ಞೆಯನ್ನು ಪಾಲಿಸುತ್ತೇನೆ (೪೦-೪೧). ಆತನ ಆಜ್ಞೆಯನ್ನು ಉಲ್ಲಂಘಿಸುವುದು ನನಗೆ ಯುಕ್ತವಲ್ಲ. ನೀನೂ ಆತನ ಆಜ್ಞೆಯನ್ನು ಗೌರವಿಸಬೇಕು. ಅವನೇ ನಮಗೆ ಆಪ್ತನಾದ ಬಂಧುವಲ್ಲವೆ? ತಂದೆಯಲ್ಲವೆ? (೪೨). ಭರತ, ನಾನು ತಂದೆಯ ವಚನವನ್ನು ಕಾರ್ಯರೂಪಕ್ಕೆ ತಂದು ಪಾಲಿಸಿಯೇ ತೀರುತ್ತೇನೆ. ಧರ್ಮನಿಷ್ಠರಿಗೆ ಇದು ಸಮ್ಮತವಾದದ್ದು. ನಾನು ವನದಲ್ಲಿ ವಾಸವಾಗಿರುತ್ತೇನೆ. ಸದ್ಗತಿಯನ್ನು ಬಯಸುವ ಮನುಷ್ಯನು ಧಾರ್ಮಿಕನೂ

ಆತ್ಮಾನಮನುತಿಷ್ಠ ತ್ವಂ ಸ್ವಭಾವೇನ ನರರ್ಷಭ।
ನಿಶಾಮ್ಯ ತು ಶುಭಂ ವೃತ್ತಂ ಪಿತುರ್ದಶರಥಸ್ಯ ನಃ॥ ೪೫

ಇತ್ಯೇವಮುಕ್ತ್ವಾ ವಚನಂ ಮಹಾತ್ಮಾ
ಪಿತುರ್ನಿದೇಶಪ್ರತಿಪಾಲನಾರ್ಥಮ್।
ಯವೀಯಸಂ ಭ್ರಾತರಮರ್ಥವಚ್ಚ
ಪ್ರಭುರ್ಮುಹೂರ್ತಾದ್ವಿರರಾಮ ರಾಮಃ॥ ೪೬

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಪಂಚಾಧಿಕಶತತಮಃ ಸರ್ಗಃ

❀❀❀

ದಯಾಳುವೂ ಗುರುಹಿರಿಯರಿಗೆ ವಿಧೇಯನೂ ಆಗಿರಬೇಕು (೪೩-೪೪). ನಮ್ಮ ತಂದೆಯಾದ ದಶರಥಮಹಾರಾಜನ ಶುಭಚಾರಿತ್ರ್ಯವನ್ನು ಗಮನಿಸಿ, ನೀನು ಯೋಗ್ಯವಾದ ನಿನ್ನ ಕರ್ತವ್ಯವನ್ನು ನಿರ್ವಹಿಸು'' ಎಂದನು (೪೫). ಈ ರೀತಿಯಲ್ಲಿ ಮಹಾತ್ಮನೂ ಪ್ರಭಾವಶಾಲಿಯೂ ಆದ ಶ್ರೀರಾಮಚಂದ್ರನು ತಂದೆಯ ಆದೇಶವನ್ನು ಪಾಲಿಸುವುದು ಯುಕ್ತವೆಂದು ತನ್ನ ತಮ್ಮನಿಗೆ ಅರ್ಥವತ್ತಾಗಿ ಸ್ವಲ್ಪ ಕಾಲ ವಿವರಿಸಿ ಹೇಳಿ ಸುಮ್ಮನಾದನು (೪೬).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ನೂರೈದನೆಯ ಸರ್ಗ

❀❀❀

ಷಡಧಿಕಶತತಮ ಸರ್ಗಃ

ಭರತವಚನಮ್

ಏವಮುಕ್ತ್ವಾ ತು ವಿರತೇ ರಾಮೇ ವಚನಮರ್ಥವತ್ ।
ತತೋ ಮಂದಾಕಿನೀತೀರೇ ರಾಮಂ ಪ್ರಕೃತಿವತ್ಸಲಮ್ ॥ ೧

ಉವಾಚ ಭರತಶ್ಚಿತ್ರಂ ಧಾರ್ಮಿಕೋ ಧಾರ್ಮಿಕಂ ವಚಃ ।
ಕೋ ಹಿ ಸ್ಯಾದೀದೃಶೋ ಲೋಕೇ ಯಾದೃಶಸ್ತ್ವಮರಿಂದಮ ॥ ೨

ನ ತ್ವಾಂ ಪ್ರವ್ಯಥಯೇದ್ದುಃಖಂ ಪ್ರೀತಿರ್ವಾ ನ ಪ್ರಹರ್ಷಯೇತ್ ।
ಸಂಮತಶ್ಚಾಸಿ ವೃದ್ಧಾನಾಂ ತಾಂಶ್ಚ ಪೃಚ್ಛಸಿ ಸಂಶಯಾನ್ ॥ ೩

ಯಥಾ ಮೃತಸ್ತಥಾ ಜೀವನ್ ಯಥಾಽಸತಿ ತಥಾ ಸತಿ ।
ಯಸ್ಯೈಷ ಬುದ್ಧಿಲಾಭಃ ಸ್ಯಾತ್ ಪರಿತಪ್ಯೇತ ಕೇನ ಸಃ ॥ ೪

ಸರ್ಗ ೧೦೬

ಶ್ರೀರಾಮನು ಅಯೋಧ್ಯೆಗೆ ಬರಬೇಕೆಂದು ಭರತನು ಪ್ರಾರ್ಥಿಸುವುದು.

ಹೀಗೆ ಮಂದಾಕಿನೀತೀರದಲ್ಲಿ ಶ್ರೀರಾಮನು ಯುಕ್ತಿಯುಕ್ತವಾದ ಮಾತನ್ನಾಡಿ ಸುಮ್ಮನಾಗಲು, ಧರ್ಮನಿಷ್ಠನಾದ ಭರತನು ಪುನಃ ಹೇಳತೊಡಗಿದನು. ಅವನು ಪ್ರಜಾನುರಾಗಿಯಾದ ಶ್ರೀರಾಮನ ಮನಸ್ಸನ್ನೊಲಿಸಲು ಅಚ್ಚರಿಯಾಗುವಂತೆ ಮಾತನಾಡಿದನು : ‘‘ಅಣ್ಣ ನಿನ್ನಂಥ ಇನ್ನೊಬ್ಬ ಪುರುಷನು ಈ ಲೋಕದಲ್ಲಿ ಯಾರುಂಟು? (೧-೨). ನಿನಗೆ ದುಃಖ ಬಂದರೆ ವ್ಯಥೆಯಿಲ್ಲ, ಸುಖ ಬಂದರೆ ಹಿಗ್ಗಿಲ್ಲ. ನೀನು ಹಿರಿಯರಿಗೂ ಮಾನ್ಯನಾಗಿ ಸಕಲವನ್ನು ಬಲ್ಲವನಾದರೂ ಅವರನ್ನು ಕೇಳಿ ಸಂಶಯವನ್ನು ಬಗೆಹರಿಸಿಕೊಳ್ಳುತ್ತೀಯೆ? (೩). ಸತ್ತವನ ವಿಷಯದಲ್ಲಿ ದ್ವೇಷವನ್ನು ಬಿಡುವಂತೆ ಬದುಕಿರುವವನ ವಿಷಯದಲ್ಲಿಯೂ ದ್ವೇಷವನ್ನು ಬಿಟ್ಟಿರುವುದು, ಇಲ್ಲದಿರುವ ಪದಾರ್ಥದಲ್ಲಿ ಆಸೆಯನ್ನಿಡದಂತೆ ಇರುವ ಪದಾರ್ಥದಲ್ಲಿಯೂ ಆಸೆಯನ್ನು ತೊರೆಯುವುದು - ಈ ಎರಡು ಬಗೆಯ ಬುದ್ಧಿಸ್ಥೈರ್ಯವು ಯಾರಿಗಿರುವುದೋ ಆತನು ಏತಕ್ಕಾಗಿ ಪರಿತಪಿಸುತ್ತಾನೆ? (೪). ನಿತ್ಯ ಮತ್ತು ಅನಿತ್ಯ

ಪರಾವರಜ್ಞೋ ಯಶ್ಚ ಸ್ಯಾತ್ತಥಾ ತ್ವಂ ಮನುಜಾಧಿಪ ।
ಸ ಏವಂ ವ್ಯಸನಂ ಪ್ರಾಪ್ಯ ನ ವಿಷೀದಿತುಮರ್ಹತಿ ॥ ೫

ಅಮರೋಪಮಸತ್ತ್ವಸ್ತ್ವಂ ಮಹಾತ್ಮಾ ಸತ್ಯಸಂಗರಃ ।
ಸರ್ವಜ್ಞಃ ಸರ್ವದರ್ಶೀ ಚ ಬುದ್ಧಿಮಾಂಶ್ಚಾಸಿ ರಾಘವ ॥ ೬

ನ ತ್ವಾಮೇವಂಗುಣೈರ್ಯುಕ್ತಂ ಪ್ರಭವಾಭವಕೋವಿದಮ್ ।
ಅವಿಷಹ್ಯತಮಂ ದುಃಖಮಾಸಾದಯಿತುಮರ್ಹತಿ ॥ ೭

ಏವಮುಕ್ತ್ವಾ ತು ಭರತೋ ರಾಮಂ ಪುನರಥಾಬ್ರವೀತ್ ।
ಪ್ರೋಷಿತೇ ಮಯಿ ಯತ್ಪಾಪಂ ಮಾತ್ರಾ ಮತ್ಕಾರಣಾತ್ ಕೃತಮ್ ॥ ೮

ಕ್ಷುದ್ರಯಾ ತದನಿಷ್ಟಂ ಮೇ ಪ್ರಸೀದತು ಭವಾನ್ ಮಮ ।
ಧರ್ಮಬಂಧೇನ ಬದ್ಧೋಽಸ್ಮಿ ತೇನೇಮಾಂ ನೇಹ ಮಾತರಮ್ ॥ ೯

ಹನ್ಮಿ ತೀವ್ರೇಣ ದಂಡೇನ ದಂಡಾರ್ಹಾಂ ಪಾಪಕಾರಿಣೀಮ್ ।
ಕಥಂ ದಶರಥಾಜ್ಜಾತಃ ಶುದ್ಧಾಭಿಜನಕರ್ಮಣಃ ॥ ೧೦

ಜಾನನ್ ಧರ್ಮಮಧರ್ಮಿಷ್ಠಂ ಕುರ್ಯಾಂ ಕರ್ಮ ಜುಗುಪ್ಸಿತಮ್
ಗುರುಃ ಕ್ರಿಯಾವಾನ್ ವೃದ್ಧಶ್ಚ ರಾಜಾ ಪ್ರೇತಃ ಪಿತೇತಿ ಚ ॥ ೧೧

ವಸ್ತುಗಳ ವಿವೇಚನಾಜ್ಞಾನವುಳ್ಳ ನಿನ್ನಂಥವನು ಇಂಥ ವ್ಯಸನಕಾಲದಲ್ಲಿಯೂ ದುಃಖಿಸುವುದಿಲ್ಲ. ನೀನು ದೇವತೆಯಂಥ ಸತ್ತ್ವಶಾಲಿ, ಮಹಾನ್, ಸತ್ಯಸಂಧ, ರಾಘವ, ನೀನು ಸಕಲವನ್ನೂ ಬಲ್ಲವನು; ಸಕಲವನ್ನೂ ವಿಮರ್ಶಿಸಿದವನು. ಮಹಾಮೇಧಾವಿಯಾಗಿದ್ದೀಯೆ (೫-೬). ಲೋಕದ ಉತ್ಪತ್ತಿ ವಿನಾಶಗಳ ರಹಸ್ಯವನ್ನು ಬಲ್ಲ ಮಹಾಗುಣಸಂಪನ್ನನಾದ ನಿನ್ನನ್ನು, ತಡೆಯಲಾರದ ದುಃಖವೂ ಕುಗ್ಗಿಸಲಾರದು ಎಂದು ಹೇಳಿ ''ಭರತನು ಪುನಃ ಹೀಗೆಂದನು:'' ನಾನು ಪರಸ್ಥಳಕ್ಕೆ ಹೋಗಿದ್ದಾಗ ನನ್ನ ತಾಯಿಯು ನನಗೋಸ್ಕರ ಒಂದು ಪಾಪಕೃತ್ಯವನ್ನು ಮಾಡಿದಳು (೭-೮). ಅವಳು ಕ್ಷುದ್ರಬುದ್ಧಿಯವಳು. ಆ ಕೃತ್ಯಕ್ಕೆ ಎಂದಿಗೂ ನನ್ನ ಒಪ್ಪಿಗೆ ಇಲ್ಲ. ನನ್ನ ಮೇಲೆ ನೀನು ಪ್ರಸನ್ನನಾಗು. ನಾನು ಧರ್ಮಪಾಶಕ್ಕೆ ಸಿಕ್ಕಿದ್ದೇನೆ. ಆದ್ದರಿಂದಲೇ ಪಾಪಿಯಾದ ಈ ನನ್ನ ತಾಯಿಯನ್ನು ಕೊಲ್ಲದೆ ಬಿಟ್ಟಿದ್ದೇನೆ. ಅವಳು ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದಾಳೆ (೯-೧೦). ನಾನು ಪರಿಶುದ್ಧವಾದ ವಂಶದಲ್ಲಿ ಶುದ್ಧಚಾರಿತ್ರನಾದ ದಶರಥನಿಗೆ ಮಗನಾಗಿ ಜನಿಸಿದ್ದೇನೆ. ಧರ್ಮವನ್ನು ತಿಳಿದೂ ತಿಳಿದು ಗರ್ಹಿತವಾದ

ತಾತಂ ನ ಪರಿಗರ್ಹೇಯಂ ದೈವತಂ ಚೇತಿ ಸಂಸದಿ ।
ಕೋ ಹಿ ಧರ್ಮಾರ್ಥಯೋರ್ಹೀನಮೀದೃಶಂ ಕರ್ಮ ಕಿಲ್ಬಿಷಮ್ ॥

ಸ್ತ್ರಿಯಾಃ ಪ್ರಿಯಂ ಚಿಕೀರ್ಷುಃ ಸನ್ ಕುರ್ಯಾದ್ಧರ್ಮಜ್ಞ ಧರ್ಮವಿತ್ ।
ಅಂತಕಾಲೇ ಹಿ ಭೂತಾನಿ ಮುಹ್ಯಂತೀತಿ ಪುರಾಶ್ರುತಿಃ ॥ ೧೩

ರಾಜ್ಞೈವಂ ಕುರ್ವತಾ ಲೋಕೇ ಪ್ರತ್ಯಕ್ಷಂ ಸಾ ಶ್ರುತಿಃ ಕೃತಾ ।
ಸಾಧ್ವರ್ಥಮಭಿಸಂಧಾಯ ಕ್ರೋಧಾನ್ಮೋಹಾಚ್ಚ ಸಾಹಸಾತ್ ॥ ೧೪

ತಾತಸ್ಯ ಯದತಿಕ್ರಾಂತಂ ಪ್ರತ್ಯಾಹರತು ತದ್ಭವಾನ್ ।
ಪಿತುರ್ಹಿ ಸಮತಿಕ್ರಾಂತಂ ಪುತ್ರೋ ಯಃ ಸಾಧು ಮನ್ಯತೇ ॥ ೧೫

ತದಪತ್ಯಂ ಮತಂ ಲೋಕೇ ವಿಪರೀತಮತೋಽನ್ಯಥಾ ।
ತದಪತ್ಯಂ ಭವಾನಸ್ತು ಮಾ ಭವಾನ್ ದುಷ್ಕೃತಂ ಪಿತುಃ ॥ ೧೬

ಈ ಹೇಯಕೃತ್ಯವನ್ನು ನಾನು ಹೇಗೆ ಮಾಡಲಿ? ಎಷ್ಟಾದರೂ ನಮ್ಮ ತಂದೆ ನಮಗೆ ಗುರುವಾದವನು; ಸತ್ಕರ್ಮಗಳನ್ನು ಮಾಡಿದವನು; ವೃದ್ಧ; ಮಹಾರಾಜ; ಮೃತನಾಗಿದ್ದಾನೆ; ನನಗೆ ತಂದೆ(೧೧). ದೇವತಾಸಮಾನನಾದವನು. ಆತನನ್ನು ನಾನು ಈ ಸಭೆಯಲ್ಲಿ ನಿಂದಿಸಬಾರದು. ಆದರೆ ಶ್ರೀರಾಮ, ಧರ್ಮಜ್ಞನಾದ ಯಾವ ಮನುಷ್ಯನು ತಾನೆ ಒಬ್ಬ ಹೆಂಗಸನ್ನು ಸಂತೋಷಪಡಿಸುವುದಕ್ಕಾಗಿ ಧರ್ಮಬಾಹಿರನೂ ಅರ್ಥಶೂನ್ಯನೂ ಆದ ಇಂಥ ಹೇಯಕೃತ್ಯವನ್ನು ಮಾಡಿಯಾನು? ಸಾಯುವ ಕಾಲದಲ್ಲಿ ಪ್ರಾಣಿಗಳ ಬುದ್ಧಿಗೆ ಮಂಕುಹಿಡಿಯುವುದಂತೆ (೧೨-೧೩). 'ವಿನಾಶಕಾಲೇ ವಿಪರೀತಬುದ್ಧಿಃ' ಎಂಬುದನ್ನು ಮಹಾರಾಜನು ನಿದರ್ಶನ ಮಾಡಿಕೊಟ್ಟನು. ಅಣ್ಣ ಕೈಕೇಯಿಯ ಕೋಪದ ಭಯದಿಂದಲೊ ಅವಳ ಮೇಲಿನ ವ್ಯಾಮೋಹದಿಂದಲೊ ಅಥವಾ ಅವಿವೇಕದಿಂದಲೊ ತಂದೆಯು ತಪ್ಪು ಮಾಡಿದನು. ಅದನ್ನು ನೀನು ಸರಿಪಡಿಸು. ತಂದೆಯ ತಪ್ಪನ್ನು ತಿದ್ದಲು ಯಾವನು ಉದ್ದೇಶಿಸುವನೋ ಅವನೇ ಸತ್ಪುತ್ರ (೧೪-೧೫). ಹಾಗಿಲ್ಲದವನು ಒಳ್ಳೆಯ ಪುತ್ರನೆನಿಸಲಾರ. ನೀನು ಸತ್ಪುತ್ರನೆನಿಸು. ನಮ್ಮ ತಂದೆಯು ಲೋಕಗರ್ಹಿತವಾದ ಒಂದು ಅಕೃತ್ಯವನ್ನು ಮಾಡಿದನೆಂದು ನೀನು ಅದಕ್ಕೆ ತಲೆಬಾಗಬೇಡ. ಕೈಕೇಯಿ, ನಾನು, ನಮ್ಮ ತಂದೆ, ಇಷ್ಟಮಿತ್ರರು-ಇವರೆಲ್ಲರನ್ನೂ ನೀನು

ಅಭಿಪತ್ತಾ ಕೃತಂ ಕರ್ಮ ಲೋಕೇ ಧೀರವಿಗರ್ಹಿತಮ್ ।
ಕೈಕೇಯೀಂ ಮಾಂ ಚ ತಾತಂ ಚ ಸುಹೃದೋ ಬಾಂಧವಾಂಶ್ಚ ನಃ ॥ ೧೭
ಪೌರಜಾನಪದಾನ್ ಸರ್ವಾಂಸ್ತ್ರಾತು ಸರ್ವಮಿದಂ ಭವಾನ್ ।
ಕ್ವ ಚಾರಣ್ಯಂ ಕ್ವ ಚ ಕ್ಷಾತ್ರಂ ಕ್ವ ಜಟಾಃ ಕ್ವ ಚ ಪಾಲನಮ್ ॥ ೧೮
ಈದೃಶಂ ವ್ಯಾಹತಂ ಕರ್ಮ ನ ಭವಾನ್ ಕರ್ತುಮರ್ಹತಿ ।
ಏಷ ಹಿ ಪ್ರಥಮೋ ಧರ್ಮಃ ಕ್ಷತ್ರಿಯಸ್ಯಾಭಿಷೇಚನಮ್ ॥ ೧೯
ಯೇನ ಶಕ್ಯಂ ಮಹಾಪ್ರಾಜ್ಞ ಪ್ರಜಾನಾಂ ಪರಿಪಾಲನಮ್ ।
ಕಶ್ಚ ಪ್ರತ್ಯಕ್ಷಮುತ್ಸೃಜ್ಯ ಸಂಶಯಸ್ಥಮಲಕ್ಷಣಮ್ ॥ ೨೦
ಆಯತಿಸ್ಥಂ ಚರೇದ್ಧರ್ಮಂ ಕ್ಷತ್ರಬಂಧುರನಿಶ್ಚಿತಮ್ ।
ಅಥ ಕ್ಲೇಶಜಮೇವ ತ್ವಂ ಧರ್ಮಂ ಚರಿತುಮಿಚ್ಛಸಿ ॥ ೨೧
ಧರ್ಮೇಣ ಚತುರೋ ವರ್ಣಾನ್ ಪಾಲಯನ್ ಕ್ಲೇಶಮಾಪ್ನುಹಿ ।
ಚತುರ್ಣಾಮಾಶ್ರಮಾಣಾಂ ಹಿ ಗಾರ್ಹಸ್ಥ್ಯಂ ಶ್ರೇಷ್ಠಮಾಶ್ರಮಮ್ ॥

ಕಾಪಾಡು (೧೬-೧೭). ನಮ್ಮ ಪುರವಾಸಿಗಳು, ಪ್ರಜೆಗಳು-ಎಲ್ಲರನ್ನೂ ನೀನು ರಕ್ಷಿಸಬೇಕು. ಅಣ್ಣ ಈ ಅರಣ್ಯವೆಲ್ಲಿ? ಕ್ಷತ್ರಿಯ ಧರ್ಮವೆಲ್ಲಿ? ಈ ಜಟೆಗಳೆಲ್ಲಿ? ರಾಜ್ಯಪಾಲನೆಯೆಲ್ಲಿ? ಹೀಗೆ ವಿರುದ್ಧವಾದ ಕಾರ್ಯವನ್ನು ನೀನು ಮಾಡಬಾರದು. ಕ್ಷತ್ರಿಯನಾದವನಿಗೆ ರಾಜ್ಯದಲ್ಲಿ ಪಟ್ಟಾಭಿಷಿಕ್ತನಾಗುವುದು ಮುಖ್ಯವಾದ ಧರ್ಮ (೧೮-೧೯). ಅದರಿಂದಲೇ ಪ್ರಜೆಗಳನ್ನು ಪಾಲಿಸಲು ಸಾಧ್ಯವಾಗುತ್ತದೆ. ಪ್ರಜಾಪಾಲನೆಯು ತ್ಯಾಗಭೋಗಗಳಿಂದ ಕೂಡಿದ ಪ್ರತ್ಯಕ್ಷಧರ್ಮ. ತಾಪಸಧರ್ಮದಲ್ಲಿ (ಬಹು ವಿಘ್ನಗಳಿರುವುದರಿಂದ) ಫಲವು ಸಂಶಯಗ್ರಸ್ತವಾಗಿರುತ್ತದೆ. ಅದು ಪ್ರತ್ಯಕ್ಷವಲ್ಲ. ಅದನ್ನು ನಡೆಸುವ ಬಗೆ ಹೇಗೆಂದು ಅದರ ಲಕ್ಷಣವು ಅಸ್ಪುಟ (೨೦). ತಾಪಸಧರ್ಮದಲ್ಲಿ ಫಲವು ಕಾಲಾಂತರದಲ್ಲಿ ಲಭಿಸುತ್ತದೆ. ಕ್ಷತ್ರಿಯನು ತಾಪಸಧರ್ಮವನ್ನು ನಡೆಸಬೇಕೆಂಬ ನಿರ್ಣಯವೇನೂ ಇಲ್ಲ. ಅಂಥ ಧರ್ಮವನ್ನು ಯಾವ ಕ್ಷತ್ರಿಯನು ತಾನೇ ನಡೆಸಬಹುದು? ಕಷ್ಟವಾದ ಧರ್ಮವನ್ನೇ ಆಚರಿಸಬೇಕೆಂಬುದು ನಿನ್ನ ಅಪೇಕ್ಷೆಯೆ? (೨೧). ಹಾಗಿದ್ದರೆ ಚಾತುರ್ವಣ್ಯವನ್ನು

ಪ್ರಾಹುರ್ಧರ್ಮಜ್ಞ ಧರ್ಮಜ್ಞಾಸ್ತಂ ಕಥಂ ತ್ಯಕ್ತುಮರ್ಹಸಿ ।
ಶ್ರುತೇನ ಬಾಲಃ ಸ್ಥಾನೇನ ಜನ್ಮನಾ ಭವತೋ ಹ್ಯಹಮ್ ॥ ೨೩

ಸ ಕಥಂ ಪಾಲಯಿಷ್ಯಾಮಿ ಭೂಮಿಂ ಭವತಿ ತಿಷ್ಠತಿ ।
ಹೀನಬುದ್ಧಿಗುಣೋ ಬಾಲೋ ಹೀನಃ ಸ್ಥಾನೇನ ಚಾಪ್ಯಹಮ್ ॥ ೨೪

ಭವತಾ ಚ ವಿನಾ ಭೂತೋ ನ ವರ್ತಯಿತುಮುತ್ಸಹೇ ।
ಇದಂ ನಿಖಿಲಮವ್ಯಗ್ರಂ ರಾಜ್ಯಂ ಪಿತ್ರ್ಯಮಕಂಟಕಮ್ ॥ ೨೫

ಅನುಶಾಧಿ ಸ್ವಧರ್ಮೇಣ ಧರ್ಮಜ್ಞ ಸಹ ಬಾಂಧವೈಃ ।
ಇಹೈವ ತ್ವಾಭಿಷಿಂಚಂತು ಸರ್ವಾಃ ಪ್ರಕೃತಯಃ ಸಹ ॥ ೨೬

ಋತ್ವಿಜಃ ಸವಸಿಷ್ಠಾಶ್ಚ ಮಂತ್ರವನ್ಮಂತ್ರಕೋವಿದಾಃ ।
ಅಭಿಷಿಕ್ತಸ್ತ್ವಮಸ್ಮಾಭಿರಯೋಧ್ಯಾಂ ಪಾಲನೇ ವ್ರಜ ॥ ೨೭

ವಿಜಿತ್ಯ ತರಸಾ ಲೋಕಾನ್ ಮರುದ್ಭಿರಿವ ವಾಸವಃ ।
ಋಣಾನಿ ತ್ರೀಣ್ಯಪಾಕುರ್ವನ್ ದುರ್ಹೃದಃ ಸಾಧು ನಿರ್ದಹನ್ ॥ ೨೮

ಧರ್ಮದಿಂದ ಪರಿಪಾಲಿಸು. ಅದು ಕಷ್ಟವಾದ ಧರ್ಮವಲ್ಲವೆ? ನಾಲ್ಕು ಆಶ್ರಮಗಳಲ್ಲಿ ಗೃಹಸ್ಥಾಶ್ರಮವು ಶ್ರೇಷ್ಠವಾದ್ದೆಂದು ಧರ್ಮಜ್ಞರು ಹೇಳುತ್ತಾರೆ. ನೀನು ಧರ್ಮವನ್ನು ಬಲ್ಲವನಾಗಿ ಗೃಹಸ್ಥಾಶ್ರಮವನ್ನು ತ್ಯಜಿಸುವುದು ಹೇಗೆ ಯುಕ್ತವಾದೀತು? ನಾನು ವಿದ್ಯೆಯಲ್ಲಿ ನಿನಗಿಂತ ಕೀಳಾದವನು. ಸ್ಥಾನದಲ್ಲಿ ಕೆಳಗಿನವನು. ವಯಸ್ಸಿನಲ್ಲಿ ಚಿಕ್ಕವನು (೨೨-೨೩). ಎಲ್ಲಾ ವಿಧದಲ್ಲಿಯೂ ಶ್ರೇಷ್ಠನಾದ ನೀನಿರುವಾಗ ನಾನು ರಾಜ್ಯವನ್ನು ಪಾಲಿಸುವುದಾದರೂ ಹೇಗೆ? ಬುದ್ಧಿಯಲ್ಲಿ - ಗುಣದಲ್ಲಿ - ಸ್ಥಾನದಲ್ಲಿ ನಾನು ಕೆಳಮಟ್ಟದವನು. ಈಗ ನಿನ್ನನ್ನು ಅಗಲಿ ಬದುಕಿರುವುದೂ ನನಗೆ ಬೇಡವಾಗಿದೆ. ನೀನು ಬಂಧುಗಳೊಡನೆ ತಂದೆಯ ಈ ಸಮಸ್ತರಾಜ್ಯವನ್ನೂ ನಿರಾತಂಕವಾಗಿ ಧರ್ಮದಿಂದ ಪರಿಪಾಲಿಸುತ್ತಿರು. ನಿನಗೆ ಇಲ್ಲಿಯೇ ಪಟ್ಟಾಭಿಷೇಕವು ನಡೆಯಲಿ (೨೪-೨೫). ಸಕಲ ಪ್ರಜೆಗಳೂ ಋತ್ವಿಜರೂ ವಸಿಷ್ಠ ಮುನಿಗಳೂ ಮಂತ್ರಿಗಳೂ ಸೇರಿ ವಿಧಿಪೂರ್ವಕವಾಗಿ ನಿನಗೆ ಪಟ್ಟಾಭಿಷೇಕವನ್ನು ನಡೆಸಲಿ. ನೀನು ಪಟ್ಟಾಭಿಷಿಕ್ತನಾಗಿಯೇ ಪ್ರಜಾಪಾಲನಾರ್ಥವಾಗಿ ನಮ್ಮೊಡನೆ ಹೊರಟು ಅಯೋಧ್ಯಾ ನಗರವನ್ನು ಪ್ರವೇಶಿಸು (೨೬-೨೭). ಸಕಲ ಲೋಕಗಳನ್ನೂ ಜಯಿಸಿದ ದೇವೇಂದ್ರನು ದೇವತೆಗಳೊಡನೆ

ಸುಹೃದಸ್ತರ್ಪಯನ್ ಕಾಮೈಸ್ತ್ವಮೇವಾತ್ರಾನುಶಾಧಿ ಮಾಮ್ ।
ಅದ್ಯಾರ್ಯಾ ಮುದಿತಾಃ ಸಂತು ಸುಹೃದಸ್ತೇಽಭಿಷೇಚನೇ ॥ ೨೯

ಅದ್ಯ ಭೀತಾಃ ಪಯಾಯಂತಾಂ ದುರ್ಹೃದಸ್ತೇ ದಿಶೋ ದಶ ।
ಆಕ್ರೋಶಂ ಮಮ ಮಾತುಶ್ಚ ಪ್ರಮೃಜ್ಯ ಪುರುಷರ್ಷಭ ॥ ೩೦

ಅದ್ಯ ತತ್ರಭವಂತಂ ಚ ಪಿತರಂ ರಕ್ಷ ಕಿಲ್ಬಿಷಾತ್ ।
ಶಿರಸಾ ತ್ವಾಭಿಯಾಚೇಽಹಂ ಕುರುಷ್ವಕರುಣಾಂ ಮಯಿ ॥ ೩೧

ಬಾಂಧವೇಷು ಚ ಸರ್ವೇಷು ಭೂತೇಷ್ವಿವ ಮಹೇಶ್ವರಃ ।
ಅಥೈತತ್ ಪೃಷ್ಠತಃ ಕೃತ್ವಾವನಮೇವ ಭವಾನಿತಃ ॥ ೩೨

ಗಮಿಷ್ಯತಿ ಗಮಿಷ್ಯಾಮಿ ಭವತಾ ಸಾರ್ಧಮಪ್ಯಹಮ್ ।
ತಥಾ ಹಿ ರಾಮೋ ಭರತೇನ ತಾಮ್ಯತಾ
ಪ್ರಸಾದ್ಯಮಾನಃ ಶಿರಸಾ ಮಹೀಪತಿಃ ।

ಅಮರಾವತಿಯನ್ನು ಪ್ರವೇಶಿಸಿದಂತೆ ಪ್ರವೇಶಿಸು. ದೇವರ್ಷಿಪಿತೃಋಣಗಳನ್ನು ತೀರಿಸುತ್ತ, ವೈರಿಗಳನ್ನು ಸದೆಬಡಿಯುತ್ತ, ಇಷ್ಟಾರ್ಥಗಳಿಂದ ಮಿತ್ರವರ್ಗವನ್ನು ತೃಪ್ತಿಪಡಿಸುತ್ತ, ನನಗೆ ಆಜ್ಞೆಯನ್ನೀಯುತ್ತ ರಾಜ್ಯವಾಳು. ಅಣ್ಣ ನಿನಗೆ ಪಟ್ಟಾಭಿಷೇಕವಾಯಿತೆಂದು ಮಿತ್ರರೆಲ್ಲರೂ ನಲಿಯಲಿ (೨೮-೨೯). ನಿನ್ನನ್ನು ದ್ವೇಷಿಸತಕ್ಕವರಿದ್ದರೆ ಅವರೆಲ್ಲರೂ ಈ ದಿನವೇ ಭಯದಿಂದ ದಿಕ್ಕುದಿಕ್ಕಿಗೆ ಪಲಾಯನ ಮಾಡಲಿ! ಹೇ ಪುರುಷೋತ್ತಮ, (ನನ್ನ ಈ ಪ್ರಾರ್ಥನೆಯನ್ನಂಗೀಕರಿಸಿ) ಈ ಪ್ರಜೆಗಳು ನನಗೂ ನನ್ನ ತಾಯಿಗೂ ಹಾಕುತ್ತಿರುವ ಶಾಪವನ್ನು ತಪ್ಪಿಸು. ಪೂಜ್ಯನಾದ ನಮ್ಮ ತಂದೆಗೆ ಬಂದ ಅಪವಾದವನ್ನು ಹೋಗಲಾಡಿಸು. ತಲೆಬಾಗಿ ಬೇಡಿಕೊಳ್ಳುತ್ತಿದ್ದೇನೆ; ನನ್ನ ಮೇಲೆ ದಯೆದೋರು (೩೦-೩೧). ಪರಮೇಶ್ವರನು ಸಕಲಜೀವಿಗಳಲ್ಲಿಯೂ ಕರುಣೆಯಿಂದ ವರ್ತಿಸುವಂತೆ ಈ ಬಾಂಧವರಲ್ಲಿ ವರ್ತಿಸು. ಇದೆಲ್ಲವನ್ನೂ ಕಡೆಗಾಣಿಸಿ ನೀನು ಕಾಡಿಗೆ ಹೋಗುವುದೇ ದಿಟವಾದರೆ, ನಾನೂ ಸಹ ನಿನ್ನ ಜೊತೆಗೆ ಬರುತ್ತೇನೆ' ಎಂದು ಹೇಳಿದನು (೩೨). ಈ ರೀತಿಯಲ್ಲಿ ಭರತನು ಸಂಕಟದಿಂದ ನೊಂದು ಬೇಡಿ ಕೊಳ್ಳುತ್ತ ಶ್ರೀರಾಮನಿಗೆ ತಲೆಬಾಗಿ ನಮಸ್ಕರಿಸಿದನು. ಆದರೆ ಧೀರನಾದ ಶ್ರೀರಾಮನು ತಂದೆಯ

ನ ಚೈವ ಚಕ್ರೇ ಗಮನಾಯ ಸತ್ತ್ವವಾನ್
ಮತಿಂ ಪಿತುಸ್ತದ್ವಚನೇ ವ್ಯವಸ್ಥಿತಃ ॥ ೩೩

ತದದ್ಭುತಂ ಸ್ಥೈರ್ಯಮವೇಕ್ಷ್ಯ ರಾಘವೇ
ಸಮಂ ಜನೋ ಹರ್ಷಮವಾಪ ದುಃಖಿತಃ ।
ನ ಯಾತ್ಯಯೋಧ್ಯಾಮಿತಿ ದುಃಖಿತೋಽಭವತ್
ಸ್ಥಿರಪ್ರತಿಜ್ಞತ್ವಮವೇಕ್ಷ್ಯ ಹರ್ಷಿತಃ ॥ ೩೪

ತಮೃತ್ವಿಜೋ ನೈಗಮಯೂಥವಲ್ಲಭಾ
ಸ್ತಥಾ ವಿಸಂಜ್ಞಾಶ್ರುಕಲಾಶ್ಚ ಮಾತರಃ ।
ತಥಾ ಬ್ರುವಾಣಂ ಭರತಂ ಪ್ರತುಷ್ಟುವುಃ
ಪ್ರಣಮ್ಯ ರಾಮಂ ಚ ಯಯಾಚಿರೇ ಸಹ ॥ ೩೫

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಷಡಧಿಕಶತತಮಃ ಸರ್ಗಃ

***

ಆಜ್ಞೆಯನ್ನು ಪಾಲಿಸಬೇಕೆಂದು ದೃಢನಿಶ್ಚಯದಲ್ಲಿದ್ದನು. ಅವನ ಮನಸ್ಸು ಸ್ವಲ್ಪವೂ ಚಲಿಸಲಿಲ್ಲ (೩೩). ಅಲ್ಲಿದ್ದ ಜನರಿಗೆ ಶ್ರೀರಾಮನ ಸ್ಥೈರ್ಯವನ್ನು ಕಂಡು ಆಶ್ಚರ್ಯವಾಯಿತು. ಅವರಿಗೆ ಒಂದು ಬಗೆಯಲ್ಲಿ ಹರ್ಷ, ಇನ್ನೊಂದು ಬಗೆಯಲ್ಲಿ ದುಃಖ. ಶ್ರೀರಾಮನು ಅಯೋಧ್ಯೆಗೆ ಬರುವುದಿಲ್ಲವಲ್ಲ ಎಂದು ದುಃಖವಾಯಿತು. ಅವನ ಸ್ಥಿರನಿಶ್ಚಯವನ್ನು ಕಂಡು ಹರ್ಷವಾಯಿತು (೩೪). ಭರತನ ಮಾತನ್ನು ಆಲಿಸುತ್ತಿದ್ದ ಋತ್ವಿಜರೂ ಪೌರರೂ ಸೇನಾಪತಿಗಳೂ ಭರತನ ಮಾತೆಯರೂ (ಅವನ ಭ್ರಾತೃವಾತ್ಸಲ್ಯವನ್ನು ಕಂಡು) ಭಾವಾವಿಷ್ಟರಾಗಿ ಮೈಮರೆತರು. ಕಣ್ಣೀರು ತುಳುಕಿತು. ಅವರು ಭರತನನ್ನು ಕೊಂಡಾಡಿದರು. ಶ್ರೀರಾಮನು ಅಯೋಧ್ಯೆಗೆ ಬರಬೇಕೆಂದು ಕೈಮುಗಿದು ಕೇಳಿಕೊಂಡರು (೩೫).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ನೂರಾರನೆಯ ಸರ್ಗ

***

ಸಪ್ತಾಧಿಕಶತತಮಃ ಸರ್ಗಃ

ರಾಮಪ್ರತಿವಚನಮ್

ಪುನರೇವಂ ಬ್ರುವಾಣಂ ತಂ ಭರತಂ ಲಕ್ಷ್ಮಣಾಗ್ರಜಃ ।
ಪ್ರತ್ಯುವಾಚ ತತಃ ಶ್ರೀಮಾನ್ ಜ್ಞಾತಿಮಧ್ಯೇಽಭಿಸತ್ಕೃತಃ ॥ ೧

ಉಪಪನ್ನಮಿದಂ ವಾಕ್ಯಂ ಯತ್ತ್ವಮೇವಮಭಾಷಥಾಃ ।
ಜಾತಃ ಪುತ್ರೋ ದಶರಥಾತ್ ಕೈಕೇಯ್ಯಾಂ ರಾಜಸತ್ತಮಾತ್ ॥ ೨

ಪುರಾ ಭ್ರಾತಃ ಪಿತಾ ನಃ ಸ ಮಾತರಂ ತೇ ಸಮುದ್ವಹನ್ ।
ಮಾತಾಮಹೇ ಸಮಾಶ್ರೌಷೀದ್ರಾಜ್ಯಶುಲ್ಕಮನುತ್ತಮಮ್ ॥ ೩

ದೈವಾಸುರೇ ಚ ಸಂಗ್ರಾಮೇ ಜನನ್ಯೈ ತವ ಪಾರ್ಥಿವಃ ।
ಸಂಪ್ರಹೃಷ್ಟೋ ದದೌ ರಾಜಾ ವರಮಾರಾಧಿತಃ ಪ್ರಭುಃ ॥ ೪

ತತಃ ಸಾ ಸಂಪ್ರತಿಶ್ರಾವ್ಯ ತವ ಮಾತಾ ಯಶಸ್ವಿನೀ ।

ಸರ್ಗ ೧೦೭

ಶ್ರೀರಾಮನು ಅಯೋಧ್ಯೆಗೆ ಬರಲು ಒಪ್ಪದೆ, ಭರತನಿಗೆ ಉತ್ತರವನ್ನು ಹೇಳುವುದು.

ಈ ರೀತಿಯಲ್ಲಿ ಭರತನು ಶ್ರೀರಾಮನನ್ನು ಅಯೋಧ್ಯೆಗೆ ಬರುವಂತೆ ಬಂಧುಗಳೆದುರಿಗೆ ಆದರದಿಂದ ಕೇಳಿಕೊಳ್ಳುತ್ತಿರಲು, ಶ್ರೀರಾಮನು ಹೀಗೆಂದನು: "ಭರತ, ನೀನು ಯೋಗ್ಯವಾದ ಮಾತನ್ನೇ ಆಡಿದೆ. ರಾಜಶ್ರೇಷ್ಠನಾದ ದಶರಥನಿಗೆ ಕೈಕೇಯಿದೇವಿಯಲ್ಲಿ ಪುತ್ರನಾಗಿ ಜನಿಸಿದ ನಿನಗೆ ಇದು ತಕ್ಕ ನುಡಿ (೧-೨). ತಮ್ಮ ನಮ್ಮ ತಂದೆಯು ಹಿಂದೆ ನಿನ್ನ ತಾಯಿಯನ್ನು ಮದುವೆಯಾಗುವಾಗ ನಿನ್ನ ಅಜ್ಜನಾದ ಕೇಕಯರಾಜನಿಗೆ ಒಂದು ಮಾತನ್ನು ಕೊಟ್ಟಿದ್ದನು. ಆತನ ಮಗಳ ಹೊಟ್ಟೆಯಲ್ಲಿ ಹುಟ್ಟುವ ಮಗನಿಗೆ ರಾಜ್ಯವನ್ನು ಕೊಡುವೆನೆಂದು ಒಪ್ಪಿದ್ದನು* (೩). ಅಲ್ಲದೆ ದೇವಾಸುರಸಂಗ್ರಾಮದಲ್ಲಿ ನಿನ್ನ ತಾಯಿಯ ಉಪಕಾರದಿಂದ ಸಂತುಷ್ಟನಾಗಿ,

---

* ಅನುಬಂಧವನ್ನು ನೋಡಿ.

ಅಯಾಚತ ನರಶ್ರೇಷ್ಠಂ ದ್ವೌ ವರೌ ವರವರ್ಣಿನೀ ॥ ೫
ತವ ರಾಜ್ಯಂ ನರವ್ಯಾಘ್ರ ಮಮ ಪ್ರವ್ರಾಜನಂ ತಥಾ ।
ತೌ ಚ ರಾಜಾ ತದಾ ತಸ್ಯೈ ನಿಯುಕ್ತಃ ಪ್ರದದೌ ವರೌ ॥ ೬
ತೇನ ಪಿತ್ರಾಹಮಪ್ಯತ್ರ ನಿಯುಕ್ತಃ ಪುರುಷರ್ಷಭ ।
ಚತುರ್ದಶ ವನೇ ವಾಸಂ ವರ್ಷಾಣಿ ವರದಾನಿಕಮ್ ॥ ೭
ಸೋಽಹಂ ವನಮಿದಂ ಪ್ರಾಪ್ತೋ ನಿರ್ಜನಂ ಲಕ್ಷ್ಮಣಾನ್ವಿತಃ ।
ಸೀತಯಾ ಚಾಪ್ರತಿದ್ವಂದ್ವಃ ಸತ್ಯವಾದೇ ಸ್ಥಿತಃ ಪಿತುಃ ॥ ೮
ಭವಾನಪಿ ತಥೇತ್ಯೇವ ಪಿತರಂ ಸತ್ಯವಾದಿನಮ್ ।
ಕರ್ತುಮರ್ಹತಿ ರಾಜೇಂದ್ರಂ ಕ್ಷಿಪ್ರಮೇವಾಭಿಷೇಚನಾತ್ ॥ ೯
ಋಣಾನ್ಮೋಚಯ ರಾಜಾನಂ ಮತ್ಕೃತೇ ಭರತ ಪ್ರಭುಮ್ ।
ಪಿತರಂ ತ್ರಾಹಿ ಧರ್ಮಜ್ಞಂ ಮಾತರಂ ಚಾಭಿನಂದಯ ॥ ೧೦

ಮಹಾರಾಜನು ಎರಡು ವರಗಳನ್ನು ಅವಳಿಗೆ ಕೊಟ್ಟಿದ್ದನು. ಆದ್ದರಿಂದ ನಿನ್ನ ತಾಯಿಯಾದ ಕೈಕೇಯಿದೇವಿಯು ಮಹಾರಾಜನಿಂದ ವರಗಳನ್ನು ಸಲ್ಲಿಸುವಂತೆ ಪ್ರತಿಜ್ಞೆ ಮಾಡಿಸಿಕೊಂಡು ಆ ಎರಡು ವರಗಳನ್ನು ಕೇಳಿಕೊಂಡಳು (೪-೫). ನಿನಗೆ ರಾಜ್ಯವನ್ನು ಕೊಡಬೇಕು, ನನ್ನನ್ನು ಅರಣ್ಯಕ್ಕೆ ಕಳಿಸಬೇಕು - ಇವೇ ಆ ಎರಡು ವರಗಳು. ಹೀಗೆ ನಿರ್ಬಂಧಿಸಲಾಗಿ ಮಹಾರಾಜನು ಆ ವರಗಳನ್ನು ಸಲ್ಲಿಸಿದ್ದಾನೆ (೬). ವರದಾನನಿಮಿತ್ತವಾಗಿ ನಾನು ಹದಿನಾಲ್ಕು ವರ್ಷಗಳವರೆಗೆ ಅರಣ್ಯದಲ್ಲಿರಬೇಕೆಂದು ನಮ್ಮ ತಂದೆಯು ಆಜ್ಞಾಪಿಸಿದ್ದಾನೆ. ಆದ್ದರಿಂದ ನಾನು ನಿರ್ಜನವಾದ ಈ ವನಕ್ಕೆ ಬಂದೆನು. ಸೀತಾಲಕ್ಷ್ಮಣರೂ ನನ್ನೊಡನೆ ಬಂದರು. ನನ್ನ ತಂದೆಯನ್ನು ಸತ್ಯಸಂಧನನ್ನಾಗಿಯೇ ಉಳಿಸಬೇಕೆಂದು ಸಂಕಲ್ಪಿಸಿದ್ದೇನೆ. ನನ್ನ ಸಂಕಲ್ಪವನ್ನು ಕದಲಿಸಲು ಶಕ್ಯವಲ್ಲ (೭-೮). ಭರತ, ನೀನೂ ಕೂಡ ಬೇಗನೆ ಪಟ್ಟಾಭಿಷೇಕ ಮಾಡಿಸಿಕೊಂಡು ರಾಜಾಧಿರಾಜನೆನಿಸಿ, ನಮ್ಮ ತಂದೆಯು ಸತ್ಯನಿಷ್ಠನೆಂಬುದನ್ನು ಸ್ಥಾಪಿಸುವುದು ಯುಕ್ತವಾದದ್ದು(೯). ಭೂಮಂಡಲಕ್ಕೆ ಪ್ರಭುವಾಗಿ ಧರ್ಮನಿಷ್ಠನಾಗಿದ್ದ ತಂದೆಯ ಮಾತಿನಂತೆ ನಡೆದುಕೊಂಡು, ತಂದೆಯನ್ನು ಋಣಮುಕ್ತನನ್ನಾಗಿ ಮಾಡಿ

ಶ್ರೂಯತೇ ಹಿ ಪುರಾ ತಾತ ಶ್ರುತಿರ್ಗೀತಾ ಯಶಸ್ವಿನಾ ।
ಗಯೇನ ಯಜಮಾನೇನ ಗಯೇಷ್ವೇವ ಪಿತೄನ್ ಪ್ರತಿ ॥ ೧೧

ಪುನ್ನಾಮ್ನೋ ನರಕಾದ್ಯಸ್ಮಾತ್ ಪಿತರಂ ತ್ರಾಯತೇ ಸುತಃ ।
ತಸ್ಮಾತ್ ಪುತ್ರ ಇತಿ ಪ್ರೋಕ್ತಃ ಪಿತೄನ್ ಯಃ ಪಾತಿ ಸರ್ವತಃ ॥ ೧೨

ಏಷ್ಟವ್ಯಾ ಬಹವಃ ಪುತ್ರಾ ಗುಣವಂತೋ ಬಹುಶ್ರುತಾಃ ।
ತೇಷಾಂ ವೈ ಸಮವೇತಾನಾಮಪಿ ಕಶ್ಚಿದ್ಗಯಾಂ ವ್ರಜೇತ್ ॥ ೧೩

ಏವಂ ರಾಜರ್ಷಯಃ ಸರ್ವೇ ಪ್ರತೀತಾ ರಾಜನಂದನ ।
ತಸ್ಮಾತ್ ತ್ರಾಹಿ ನರಶ್ರೇಷ್ಠ ಪಿತರಂ ನರಕಾತ್ ಪ್ರಭೋ ॥ ೧೪

ಅಯೋಧ್ಯಾಂ ಗಚ್ಛ ಭರತ ಪ್ರಕೃತೀರನುರಂಜಯ ।
ಶತ್ರುಘ್ನಸಹಿತೋ ವೀರ ಸಹ ಸರ್ವೈರ್ದ್ವಿಜಾತಿಭಿಃ ॥ ೧೫

ಪ್ರವೇಕ್ಷ್ಯೇ ದಂಡಕಾರಣ್ಯಮಹಮಪ್ಯವಿಲಂಬಯನ್ ।
ಆಭ್ಯಾಂ ತು ಸಹಿತೋ ರಾಜನ್ ವೈದೇಹ್ಯಾ ಲಕ್ಷ್ಮಣೇನ ಚ ॥ ೧೬

ಉದ್ಧರಿಸು. ನನಗೋಸ್ಕರ ಹೀಗೆ ಮಾಡು. ತಾಯಿಯನ್ನೂ ಆನಂದಪಡಿಸು (೧೦). ತಮ್ಮ, ಹಿಂದೆ ಗಯಾಕ್ಷೇತ್ರದಲ್ಲಿ ಯಾಗಮಾಡುತ್ತಿದ್ದ ಗಯನೆಂಬ ಕೀರ್ತಿಶಾಲಿಯಾದ ರಾಜನು ಹೇಳಿದ ನೀತಿವಾಕ್ಯವು ನಿನಗೆ ಗೊತ್ತಿದೆಯಲ್ಲವೆ? "ಮಗನು ತಂದೆಯನ್ನು ಪುತ್ ಎಂಬ ನರಕದಿಂದ ರಕ್ಷಿಸುತ್ತಾನಾದ್ದರಿಂದ ಪುತ್ರನೆನಿಸಿಕೊಳ್ಳುತ್ತಾನೆ. ಅವನು ಪಿತೃಗಳನ್ನು ಸರ್ವವಿಧದಿಂದಲೂ ಪಾಲಿಸುತ್ತಾನೆ (೧೧-೧೨). ಗುಣವಂತರೂ ವಿದ್ಯಾವಂತರೂ ಆದ ಬಹುಮಂದಿ ಮಕ್ಕಳಿರಲೆಂದು ತಂದೆತಾಯಿಗಳು ಹಾರೈಸುತ್ತಾರೆ. ಏಕೆಂದರೆ, ಅವರಲ್ಲಿ ಒಬ್ಬನಾದರೂ ಗಯಾಕ್ಷೇತ್ರಕ್ಕೆ ಹೋಗಿ ಶ್ರಾದ್ಧವನ್ನು ಆಚರಿಸಬಹುದು" ಎಂದು ಗಯನು ಹೇಳಿದ್ದಾನೆ (೧೩). ಈ ಪ್ರಕಾರದಲ್ಲಿಯೇ ಪೂರ್ವದ ಸಕಲ ರಾಜರ್ಷಿಗಳೂ ನಂಬಿಕೊಂಡಿದ್ದರು. ಅಪ್ಪಾ-ಭರತ, ನಮ್ಮ ತಂದೆಯು ನರಕಕ್ಕೆ ಹೋಗದಂತೆ ಅವನನ್ನು ಉದ್ಧರಿಸು. ನೀನು ಈಗ ಅಯೋಧ್ಯೆಗೆ ಹಿಂದಿರುಗು. ಪ್ರಜೆಗಳನ್ನು ಸಂತೋಷಪಡಿಸುತ್ತ ರಾಜ್ಯಭಾರ ಮಾಡು. ಹೇ ವೀರಾಗ್ರಣಿ, ನಿನಗೆ ಶತ್ರುಘ್ನನು ಸಹಾಯಕನಾಗಿರುವನು. ಈ ಸಕಲದ್ವಿಜರೂ ನಿನಗೆ ನೆರವಾಗುವರು (೧೪-೧೫). ನಾನೂ ಇನ್ನು ತಡಮಾಡುವುದಿಲ್ಲ. ಈ ವೈದೇಹಿಯನ್ನೂ ಲಕ್ಷ್ಮಣನನ್ನೂ ಕರೆದುಕೊಂಡು ದಂಡಕಾರಣ್ಯವನ್ನು ಪ್ರವೇಶಿಸುವೆನು (೧೬). ವತ್ಸ-ಭರತ, ನೀನು

ತ್ವಂ ರಾಜಾ ಭರತ ಭವ ಸ್ವಯಂ ನರಾಣಾಂ
ವನ್ಯಾನಾಮಹಮಪಿ ರಾಜರಾಣ್ಮೃಗಾಣಾಮ್ ।
ಗಚ್ಛ ತ್ವಂ ಪುರವರಮದ್ಯ ಸಂಪ್ರಹೃಷ್ಟಃ
ಸಂಹೃಷ್ಟಸ್ತ್ವಹಮಪಿ ದಂಡಕಾನ್ ಪ್ರವೇಕ್ಷ್ಯೇ ॥ ೧೭

ಛಾಯಾಂ ತೇ ದಿನಕರಭಾಃ ಪ್ರಬಾಧಮಾನಂ
ವರ್ಷತ್ರಂ ಭರತ ಕರೋತು ಮೂರ್ಧ್ನಿ ಶೀತಾಮ್ ।
ಏತೇಷಾಮಹಮಪಿ ಕಾನನದ್ರುಮಾಣಾಂ
ಛಾಯಾಂ ತಾಮತಿಶಯಿನೀಂ ಸುಖೀ ಶ್ರಯಿಷ್ಯೇ ॥ ೧೮

ಶತ್ರುಘ್ನಃ ಕುಶಲಮತಿಸ್ತು ತೇ ಸಹಾಯಃ
ಸೌಮಿತ್ರಿರ್ಮಮ ವಿದಿತಃ ಪ್ರಧಾನಮಿತ್ರಮ್ ।
ಚತ್ವಾರಸ್ತನಯವರಾ ವಯಂ ನರೇಂದ್ರಂ
ಸತ್ಯಸ್ಥಂ ಭರತ ಚರಾಮ ಮಾ ವಿಷೀದ ॥ ೧೯

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತಾಧಿಕಶತತಮಃ ಸರ್ಗಃ

ಮನುಷ್ಯರಿಗೆ ಒಡೆಯನಾಗು. ನಾನು ಕಾಡುಮೃಗಗಳಿಗೆ ಒಡೆಯನಾಗುವೆನು. ನೀನು ಸಂತೋಷದಿಂದ ಈಗ ರಾಜಧಾನಿಗೆ ಹೋಗು. ನಾನೂ ಸಹ ಸಂತೋಷದಿಂದಲೇ ದಂಡಕಾರಣ್ಯಕ್ಕೆ ಹೋಗುವೆನು (೧೭). ಸೂರ್ಯನ ತಾಪವನ್ನು ನಿವಾರಿಸುವ ಶ್ವೇತಚ್ಛತ್ರವು ನಿನ್ನ ಶಿರಸ್ಸಿನ ಮೇಲೆ ವಿರಾಜಿಸುತ್ತ ತಂಪಾದ ನೆರಳನ್ನು ಕೊಡುತ್ತಿರಲಿ. ಅದಕ್ಕಿಂತಲೂ ತಂಪಾಗಿರುವ ಈ ವನ್ಯವೃಕ್ಷಗಳ ನೆರಳಿನಲ್ಲಿ ನಾನು ಸುಖದಿಂದಿರುವೆನು (೧೮). ಕುಶಾಗ್ರಬುದ್ಧಿಯುಳ್ಳ ಶತ್ರುಘ್ನನು ನಿನಗೆ ಸಹಾಯಕನಾಗಿರಲಿ. ಈ ಸುಮಿತ್ರಾತನಯನು ನನಗೆ ಆಪ್ತಮಿತ್ರನಾಗಿರುವನು. ಭರತ, ದಶರಥ ನರೇಂದ್ರನಿಗೆ ನಾವು ನಾಲ್ವರು ಮಕ್ಕಳಿದ್ದೇವೆ. ನಾವೆಲ್ಲರೂ ಸೇರಿ ನಮ್ಮ ತಂದೆಯನ್ನು ಸತ್ಯಸಂಧನೆಂದು ಸ್ಥಾಪಿಸೋಣ. ನೀನು ವ್ಯಥೆಪಡಬೇಡ'' ಎಂದು ಹೇಳಿದನು (೧೯).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ನೂರೇಳನೆಯ ಸರ್ಗ

ಅಷ್ಟಾಧಿಕಶತತಮಃ ಸರ್ಗಃ

ಜಾಬಾಲಿವಾಕ್ಯಮ್

ಆಶ್ವಾಸಯಂತಂ ಭರತಂ ಜಾಬಾಲಿರ್ಬ್ರಾಹ್ಮಣೋತ್ತಮಃ।
ಉವಾಚ ರಾಮಂ ಧರ್ಮಜ್ಞಂ ಧರ್ಮಾಪೇತಮಿದಂ ವಚಃ ॥ ೧

ಸಾಧು ರಾಘವ ಮಾ ಭೂತ್ತೇ ಬುದ್ಧಿರೇವಂ ನಿರರ್ಥಿಕಾ।
ಪ್ರಾಕೃತಸ್ಯ ನರಸ್ಯೇವ ಹ್ಯಾರ್ಯಬುದ್ಧೇರ್ಮನಸ್ವಿನಃ ॥ ೨

ಕಃ ಕಸ್ಯ ಪುರುಷೋ ಬಂಧುಃ ಕಿಂ ಕಾರ್ಯಂ ಕಸ್ಯ ಕೇನಚಿತ್ ।
ಯದೇಕೋ ಜಾಯತೇ ಜಂತುರೇಕ ಏವ ವಿನಶ್ಯತಿ ॥ ೩

ತಸ್ಮಾನ್ಮಾತಾ ಪಿತಾ ಚೇತಿ ರಾಮ ಸಜ್ಜೇತ ಯೋ ನರಃ।
ಉನ್ಮತ್ತ ಇವ ಸ ಜ್ಞೇಯೋ ನಾಸ್ತಿ ಕಶ್ಚಿದ್ಧಿ ಕಸ್ಯಚಿತ್ ॥ ೪

ಸರ್ಗ ೧೦೮

ಜಾಬಾಲಿಮುನಿಗಳು ನಾಸ್ತಿಕವಾದವನ್ನವಲಂಬಿಸಿ ಶ್ರೀರಾಮನನ್ನು ಹಿಂದಿರುಗಿಸಲು ಪ್ರಯತ್ನಿಸುವುದು.

ಹೀಗೆ ಭರತನನ್ನು ಸಂತೈಸುತ್ತಿದ್ದ ಶ್ರೀರಾಮನನ್ನು ನೋಡಿ ಬ್ರಾಹ್ಮಣೋತ್ತಮರಾದ ಜಾಬಾಲಿಮುನಿಗಳು ಮಾತನಾಡಿದರು. ಅವರು ಧರ್ಮಜ್ಞನಾದ ಶ್ರೀರಾಮನಿಗೆ ಧರ್ಮಬಾಹಿರವಾದ ನುಡಿಯನ್ನು ಹೀಗೆ ಹೇಳಿದರು (೧) : "ಬಹಳ ಚೆನ್ನಾಗಿದೆ, ರಾಮ! ಪರಿಷ್ಕೃತ ಬುದ್ಧಿಯುಳ್ಳ ವಿವೇಕಿಯಾದ ನಿನಗೆ ಇಂಥ ಬುದ್ಧಿ ಹುಟ್ಟಬಹುದು! ಇದು ನಿರರ್ಥಕ. ಪಾಮರನಂತೆ ನೀನು ಆಲೋಚಿಸಬಹುದೆ? ಲೋಕದಲ್ಲಿ ಯಾವನಿಗೆ ಯಾವನು ನೆಂಟ? ಯಾರಿಗೆ ಯಾರು ಮಾಡಬೇಕಾದ್ದೇನಿದೆ? ಮನುಷ್ಯನು ಒಂಟಿಯಾಗಿ ಹುಟ್ಟುತ್ತಾನೆ; ಒಂಟಿಯಾಗಿ ಸಾಯುತ್ತಾನೆ (೨-೩). ತಾಯಿಯಂತೆ! ತಂದೆಯಂತೆ! ಹೀಗೆ ಶ್ರದ್ಧಾಜಾಡ್ಯದಿಂದ ನಡೆದುಕೊಳ್ಳತಕ್ಕವನು ಮರುಳನೇ ಸರಿ. ಯಾರಿಗೋಸ್ಕರ ಯಾರೂ ಬದುಕಿಲ್ಲ,

ಯಥಾ ಗ್ರಾಮಾಂತರಂ ಗಚ್ಛನ್ನರಃ ಕಶ್ಚಿತ್ ಕ್ವಚಿದ್ವಸೇತ್ ।
ಉತ್ಸೃಜ್ಯ ಚ ತಮಾವಾಸಂ ಪ್ರತಿಷ್ಠೇತಾಪರೇಽಹನಿ ॥ ೫

ಏವಮೇವ ಮನುಷ್ಯಾಣಾಂ ಪಿತಾ ಮಾತಾ ಗೃಹಂ ವಸು ।
ಆವಾಸಮಾತ್ರಂ ಕಾಕುತ್ಸ್ಥ ಸಜ್ಜಂತೇ ನಾತ್ರ ಸಜ್ಜನಾಃ ॥ ೬

ಪಿತ್ರ್ಯಂ ರಾಜ್ಯಂ ಪರಿತ್ಯಜ್ಯ ಸ ನಾರ್ಹಸಿ ನರೋತ್ತಮ ।
ಆಸ್ಥಾತುಂ ಕಾಪಥಂ ದುಃಖಂ ವಿಷಮಂ ಬಹುಕಂಟಕಮ್ ॥ ೭

ಸಮೃದ್ಧಾಯಾಮಯೋಧ್ಯಾಯಾಮಾತ್ಮಾನಮಭಿಷೇಚಯ ।
ಏಕವೇಣೀಧರಾ ಹಿ ತ್ವಾಂ ನಗರೀ ಸಂಪ್ರತೀಕ್ಷತೇ ॥ ೮

ರಾಜಭೋಗಾನನುಭವನ್ ಮಹಾರ್ಹಾನ್ ಪಾರ್ಥಿವಾತ್ಮಜ ।
ವಿಹರ ತ್ವಮಯೋಧ್ಯಾಯಾಂ ಯಥಾ ಶಕ್ರಸ್ತ್ರಿವಿಷ್ಟಪೇ ॥ ೯

ನ ತ ಕಶ್ಚಿದ್ದಶರಥಸ್ತ್ವಂ ಚ ತಸ್ಯ ನ ಕಶ್ಚನ ।
ಅನ್ಯೋ ರಾಜಾ ತ್ವಮನ್ಯಃ ಸ ತಸ್ಮಾತ್ ಕುರು ಯದುಚ್ಯತೇ ॥ ೧೦

ಇನ್ನೊಂದು ಊರಿಗೆ ಹೋಗತಕ್ಕವನು ದಾರಿಯಲ್ಲಿ ಎಲ್ಲಾದರೂ ಒಂದು ಕಡೆ ಉಳಿದುಕೊಳ್ಳುತ್ತಾನೆ. ಮಾರನೆಯ ದಿನ ಆ ಸ್ಥಳವನ್ನು ಬಿಟ್ಟು ಮುಂದಕ್ಕೆ ತೆರಳುತ್ತಾನೆ (೪-೫). ಹೀಗೆಯೇ ಮನುಷ್ಯರಿಗೆ ತಂದೆ, ತಾಯಿ, ಮನೆ, ಹಣ-ಎಲ್ಲವೂ ದಾರಿಯಲ್ಲಿ ಸಿಕ್ಕಿದ ಒಂದು ನೆಲೆ. ತಿಳಿದವರು ಇದನ್ನೆಲ್ಲ ನಂಬಿಕೊಂಡು ಇದರಲ್ಲಿ ಆಸಕ್ತರಾಗುವುದಿಲ್ಲ. ಆದ್ದರಿಂದ, ಹೇ ನರಶ್ರೇಷ್ಠ, ಪಿತ್ರಾರ್ಜಿತವಾಗಿ ಬರಬೇಕಾದ ರಾಜ್ಯವನ್ನು ಬಿಟ್ಟು ನೀನು ಹೊರಟು ಹೋಗುವುದು ತಪ್ಪು ದಾರಿ. ಈ ದಾರಿಯಲ್ಲಿ ಏರು-ತಗ್ಗು ಮುಳ್ಳುಗಳು ಬಹಳ. ಇದರಿಂದ ನಿನಗೆ ಕಷ್ಟವೇ ಸರಿ (೬-೭). ಈಗ ನೀನು ಸಕಲ ಸಂಪತ್ತುಗಳಿಂದಲೂ ತುಳುಕುವ ಅಯೋಧ್ಯೆಗೆ ಬಂದು ಪಟ್ಟಾಭಿಷೇಕವನ್ನು ಮಾಡಿಸಿಕೊ. ನಗರದೇವತೆಯು (ವಿರಹಿಣಿಯಂತೆ) ಏಕವೇಣೀಧರಳಾಗಿ ನಿನ್ನ ಬರವನ್ನೇ ನಿರೀಕ್ಷಿಸುತ್ತಿದ್ದಾಳೆ (೮). ರಾಜಪುತ್ರ, ವೈಭವೋಪೇತವಾದ ರಾಜಭೋಗಗಳನ್ನು ಅನುಭವಿಸು. ಇಂದ್ರನು ದೇವಲೋಕದಲ್ಲಿ ವಿಹರಿಸುವಂತೆ ಅಯೋಧ್ಯೆಯಲ್ಲಿ ವಿಹರಿಸು. ನಿನಗೆ ದಶರಥನು ಯಾವ ಸಂಬಂಧಿಯೂ ಅಲ್ಲ. ನೀನು ದಶರಥನಿಗೆ ಯಾವ ಸಂಬಂಧಿಯೂ ಅಲ್ಲ. (ಈಗ ದಶರಥನು ನಿನ್ನ ತಂದೆಯಾಗಿ ಉಳಿದಿಲ್ಲ) ಅವನೇ ಬೇರೆ, ನೀನೇ ಬೇರೆ. ಆದ್ದರಿಂದ ನಾನು ಹೇಳುವಂತೆ ಮಾಡು (೯-೧೦). ತಂದೆ ಎಂಬುವವನು ಪ್ರಾಣಿಗೆ

ಬೀಜಮಾತ್ರಂ ಪಿತಾ ಜಂತೋಃ ಶುಕ್ಲಂ ಶೋಣಿತಮೇವ ಚ ।
ಸಂಯುಕ್ತಮೃತುಮನ್ಮಾತ್ರಾ ಪುರುಷಸ್ಯೇಹ ಜನ್ಮ ತತ್ ॥ ೧೧

ಗತಃ ಸ ನೃಪತಿಸ್ತತ್ರ ಗಂತವ್ಯಂ ಯತ್ರ ತೇನ ವೈ ।
ಪ್ರವೃತ್ತಿರೇಷಾ ಮರ್ತ್ಯಾನಾಂ ತ್ವಂ ತು ಮಿಥ್ಯಾ ವಿಹನ್ಯಸೇ ॥ ೧೨

ಅರ್ಥಧರ್ಮಪರಾ ಯೇ ಯೇ ತಾಂಸ್ತಾನ್ ಶೋಚಾಮಿ ನೇತರಾನ್
ತೇ ಹಿ ದುಃಖಮಿಹ ಪ್ರಾಪ್ಯ ವಿನಾಶಂ ಪ್ರೇತ್ಯ ಭೇಜಿರೇ ॥ ೧೩

ಅಷ್ಟಕಾ ಪಿತೃದೈವತ್ಯಮಿತ್ಯಯಂ ಪ್ರಸೃತೋ ಜನಃ ।
ಅನ್ನಸ್ಯೋಪದ್ರವಂ ಪಶ್ಯ ಮೃತೋ ಹಿ ಕಿಮಶಿಷ್ಯತಿ ॥ ೧೪

ಯದಿ ಭುಕ್ತಮಿಹಾನ್ಯೇನ ದೇಹಮನ್ಯಸ್ಯ ಗಚ್ಛತಿ ।
ದದ್ಯಾತ್ ಪ್ರವಸತಃ ಶ್ರಾದ್ಧಂ ನ ತತ್ ಪಥ್ಯಶನಂ ಭವೇತ್ ॥ ೧೫

ಕೇವಲ ನಿಮಿತ್ತ ಕಾರಣ. ಋತುಮತಿಯಾದ ತಾಯಿಯು ಗರ್ಭದಲ್ಲಿ ಶುಕ್ಲಶೋಣಿತಗಳೆರಡೂ ಸೇರಿದರೆ ಮನುಷ್ಯನ ಉತ್ಪತ್ತಿಯಾಗುವುದು (೧೧). ದಶರಥರಾಜನು ಪಂಚಭೂತಗಳಲ್ಲಿ ಸೇರಿಹೋಗಬೇಕಾದ್ದರಿಂದ ಅದರಂತೆ ಸೇರಿಹೋದನು. ಹೀಗೆ ಲಯವಾಗುವುದು ಮನುಷ್ಯರಿಗೆ ಸಹಜ. ನೀನು ಮಾತ್ರ ಏನೋ ಸಂಬಂಧವಿದೆಯೆಂದು ಸುಮ್ಮನೆ ವ್ಯರ್ಥವಾಗಿ ತೊಂದರೆಗೆ ಸಿಕ್ಕಿಕೊಳ್ಳುತ್ತಿದ್ದೀಯೆ (೧೨). ಇನ್ನು ಯಾರನ್ನು ಕಂಡರೂ ನನಗೆ ದುಃಖವಿಲ್ಲ. ಆದರೆ ಕೇವಲ ಧರ್ಮದ ಹೆಸರಿನಲ್ಲಿ ಕಷ್ಟಪಡುವವರನ್ನು ಕಂಡರೆ ಮಾತ್ರ ನನಗೆ ಬಹಳ ಕನಿಕರವಾಗುವುದು! ಏಕೆಂದರೆ, ಅವರು ಬದುಕಿರುವಾಗ ಬರಿಯ ಕಷ್ಟವನ್ನೇ ಅನುಭವಿಸುತ್ತಾರೆ; ಸತ್ತಮೇಲೆ ಹೇಳಹೆಸರಿಲ್ಲದಂತೆ ನಾಶವಾಗುತ್ತಾರೆ! (೧೩). ಈ ಜನರು ಪಿತೃದೇವತೆಗಳಿಗೆ ಅರ್ಪಿಸುತ್ತೇವೆಂದು ಅಷ್ಟಕಾಶ್ರಾದ್ಧ ಮೊದಲಾದ್ದರಲ್ಲಿ ತೊಡಗುತ್ತಾರೆ. ರಾಮ, ಅನ್ನದ ಅಪವ್ಯಯವನ್ನು ನೋಡು! ಅನ್ನಕ್ಕೆ ಬಂದ ಪೀಡೆಯನ್ನು ನೋಡು! ಸತ್ತವನು ಪುನಃ ಬಂದು ತಿನ್ನುತ್ತಾನೆಯೆ? (೧೪). ಇಲ್ಲಿಯಾವನೋ ಒಬ್ಬ ಪುರೋಹಿತನು ತಿಂದ ಊಟ ಇನ್ನೊಬ್ಬನ ಹೊಟ್ಟೆಗೆ ಸೇರಿ ಅವನಿಗೆ ತೃಪ್ತಿಯನ್ನು ಕೊಡುತ್ತದೆಯೆ? ಹಾಗಿದ್ದರೆ ಪರಸ್ಥಳಕ್ಕೆ ಹೋದವರಿಗೋಸ್ಕರ ಇಲ್ಲಿಯೇ ಶ್ರಾದ್ಧವನ್ನು ಮಾಡಿದರಾಯಿತು! ದಾರಿಯಲ್ಲಿ ಅದು

ದಾನಸಂವನನಾ ಹ್ಯೇತೇ ಗ್ರಂಥಾ ಮೇಧಾವಿಭಿಃ ಕೃತಾಃ ।
ಯಜಸ್ವ ದೇಹಿ ದೀಕ್ಷಸ್ವ ತಪಸ್ತಪ್ಯಸ್ವ ಸಂತ್ಯಜ ॥ ೧೬
ಸ ನಾಸ್ತಿ ಪರಮಿತ್ಯೇವ ಕುರು ಬುದ್ಧಿಂ ಮಹಾಮತೇ ।
ಪ್ರತ್ಯಕ್ಷಂ ಯತ್ತಾದಾಶಿಷ್ಠ ಪರೋಕ್ಷಂ ಪೃಷ್ಠತಃ ಕುರು ॥ ೧೭
ಸತಾಂ ಬುದ್ಧಿಂ ಪುರಸ್ಕೃತ್ಯ ಸರ್ವಲೋಕನಿದರ್ಶಿನೀಮ್ ।
ರಾಜ್ಯಂ ತ್ವಂ ಪ್ರತಿಗೃಹ್ಣೀಷ್ವ ಭರತೇನ ಪ್ರಸಾದಿತಃ ॥ ೧೮

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಅಷ್ಟಾಧಿಕಶತತಮಃ ಸರ್ಗಃ

ಅವರಿಗೆ ಭೋಜನವಾಗಿ ಏಕೆ ತಲುಪಬಾರದು? (೧೫). ಬುದ್ಧಿವಂತರಾದ ವೈದಿಕರು ಹಣವನ್ನು ಕಿತ್ತುಕೊಳ್ಳುವುದಕ್ಕಾಗಿ ಈ ಗ್ರಂಥಗಳನ್ನು ಬರೆದಿದ್ದಾರೆ : 'ದೇವತೆಗಳನ್ನು ಆರಾಧಿಸು! ದಾನಮಾಡು! ಯಜ್ಞಮಾಡು! ತಪಸ್ಸುಮಾಡು! ಎಲ್ಲವನ್ನೂ ಬಿಟ್ಟು ಸಂನ್ಯಾಸಿಯಾಗಿ ಹೊರಟುಹೋಗು!' ಇವೆಲ್ಲ ದಾನದ ಮರುಳನ್ನು ಹಚ್ಚಿಸಿ ಜನರನ್ನು ವಶಮಾಡಿಕೊಳ್ಳುವ ಪುಸ್ತಕಗಳು!' (೧೬). ರಾಮ, ನೀನು ಮಹಾಮೇಧಾವಿ. ಪರಲೋಕವನ್ನು ಕೊಡತಕ್ಕ ಧರ್ಮವೆಂಬುದು ಇಲ್ಲವೇ ಇಲ್ಲ ಎಂದು ನಿಶ್ಚಯಿಸು. ಎದುರಿಗೆ ಕಾಣುವ ಪ್ರತ್ಯಕ್ಷವನ್ನು ನಂಬಿ ಅದರಂತೆ ನಡೆ. ಕಣ್ಣಿಗೆ ಕಾಣದ್ದನ್ನು ಆಚೆಗೆ ತಳ್ಳಿಹಾಕು! (೧೭). ಇದು ವಿವೇಕಿಗಳ ವಿಚಾರಧಾರೆ; ಸಮಸ್ತರೂ ಮೆಚ್ಚತಕ್ಕದ್ದು. ಭರತನು ಇಷ್ಟೊಂದು ಬಗೆಯಲ್ಲಿ ಬೇಡಿಕೊಳ್ಳುತ್ತಿದ್ದಾನೆ. ಆದ್ದರಿಂದ ರಾಜ್ಯವನ್ನು ಸ್ವೀಕರಿಸು'' ಎಂದು ಜಾಬಾಲಿಮುನಿಗಳು ಹೇಳಿದರು (೧೮).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ನೂರೆಂಟನೆಯ ಸರ್ಗ

ನವಾಧಿಕಶತತಮಃ ಸರ್ಗಃ

ಸತ್ಯಪ್ರಶಂಸಾ

ಜಾಬಾಲೇಸ್ತು ವಚಃ ಶ್ರುತ್ವಾ ರಾಮಃ ಸತ್ಯವತಾಂ ವರಃ ।
ಉವಾಚ ಪರಯಾ ಸೂಕ್ತ್ಯಾ ಸ್ವಬುದ್ಧ್ಯಾ ಚಾವಿಪನ್ನಯಾ ॥ ೧

ಭವಾನ್ ಮೇ ಪ್ರಿಯಕಾಮಾರ್ಥಂ ವಚನಂ ಯದಿಹೋಕ್ತವಾನ್ ।
ಅಕಾರ್ಯಂ ಕಾರ್ಯಸಂಕಾಶಮಪಥ್ಯಂ ಪಥ್ಯಸಂಮಿತಮ್ ॥ ೨

ನಿರ್ಮರ್ಯಾದಸ್ತು ಪುರುಷಃ ಪಾಪಾಚಾರಸಮನ್ವಿತಃ ।
ಮಾನಂ ನ ಲಭತೇ ಸತ್ಸು ಭಿನ್ನಚಾರಿತ್ರದರ್ಶನಃ ॥ ೩

ಕುಲೀನಮಕುಲೀನಂ ವಾ ವೀರಂ ಪುರುಷಮಾನಿನಮ್ ।
ಚಾರಿತ್ರಮೇವ ವ್ಯಾಖ್ಯಾತಿ ಶುಚಿಂ ವಾ ಯದಿ ವಾಶುಚಿಮ್ ॥ ೪

ಅನಾರ್ಯಸ್ತ್ವಾರ್ಯಸಂಕಾಶಃ ಶೌಚಾದ್ಧೀನಸ್ತಥಾ ಶುಚಿಃ ।
ಲಕ್ಷಣ್ಯವದಲಕ್ಷಣ್ಯೋ ದುಃಶೀಲಃ ಶೀಲವಾನಿವ ॥ ೫

ಸರ್ಗ ೧೦೯

ಶ್ರೀರಾಮನು ನಾಸ್ತಿಕವಾದವನ್ನು ನಿರಾಕರಿಸಿ ಸತ್ಯಮಾರ್ಗವನ್ನು ಪ್ರಶಂಸಿಸುವುದು.

ಸತ್ಯಸಂಧರಲ್ಲಿ ಶ್ರೇಷ್ಠನಾದ ಶ್ರೀರಾಮನ ದೃಢನಿರ್ಧಾರವು ಜಾಬಾಲಿಗಳ ಹೇಳಿಕೆಯನ್ನು ಕೇಳಿ ಸ್ವಲ್ಪವೂ ಚಲಿಸಲಿಲ್ಲ. ಅವನು ವೇದಸಮ್ಮತವಾದ ಶ್ರೇಷ್ಠ ಸೂಕ್ತಿಗಳಿಂದ ಉತ್ತರಕೊಟ್ಟನು (೧) : ''ಜಾಬಾಲಿಮುನಿಗಳೆ, ನೀವು ನನಗೆ ಪ್ರಿಯವಾಗಲೆಂದು ಹೀಗೆ ಮಾತನಾಡಿದಿರಿ. ಮಾಡಬಾರದ್ದು ಕರ್ತವ್ಯವೆಂದೂ ಅಹಿತವು ಹಿತವೆಂದೂ ನಿರೂಪಿಸಿದಿರಿ. ಅಂಕೆಯನ್ನು ಮೀರಿ ದುಷ್ಕೃತ್ಯದಲ್ಲಿ ತೊಡಗಿದ ಮನುಷ್ಯನು ನಡತೆಗೆಟ್ಟವನೆಂದೂ ವಿಚಾರಗೆಟ್ಟವನೆಂದೂ ತಿಳಿಯಬೇಕು. ಅವನಿಗೆ ಸಜ್ಜನರ ಗೋಷ್ಠಿಯಲ್ಲಿ ಮರ್ಯಾದೆ ದೊರೆಯದು (೨-೩). ಮನುಷ್ಯನು ಉತ್ತಮ ಕುಲದವನೆ - ಕುಲಹೀನನೆ, ವೀರನೆ- ಹೇಡಿಯೆ, ಶುದ್ಧಹೃದಯನೆ- ಕಶ್ಮಲ ಹೃದಯನೆ ಎಂಬುದನ್ನು ಅವನ ನಡತೆಯೇ ಸ್ಪಷ್ಟವಾಗಿ ತೋರಿಸಿಕೊಡುವುದು (೪). ನಾನು ಅನಾರ್ಯನಾಗಿ ಆರ್ಯನಂತೆ, ಕಶ್ಮಲ ಹೃದಯನಾಗಿ ಶುದ್ಧಹೃದಯನಂತೆ ನಟಿಸಬೇಕೇ?

ಅಧರ್ಮಂ ಧರ್ಮವೇಷೇಣ ಯದೀಮಂ ಲೋಕಸಂಕರಮ್ ।
ಅಭಿಪತ್ಸ್ಯೇ ಶುಭಂ ಹಿತ್ವಾ ಕ್ರಿಯಾಂ ವಿಧಿವಿವರ್ಜಿತಾಮ್ ॥ ೬

ಕಶ್ಚೇತಯಾನಃ ಪುರುಷಃ ಕಾರ್ಯಾಕಾರ್ಯವಿಚಕ್ಷಣಃ ।
ಬಹು ಮಂಸ್ಯತಿ ಮಾಂ ಲೋಕೇ ದುರ್ವೃತ್ತಂ ಲೋಕದೂಷಣಮ್॥ ೭

ಕಸ್ಯ ಯಾಸ್ಯಾಮ್ಯಹಂ ವೃತ್ತಂ ಕೇನ ವಾ ಸ್ವರ್ಗಮಾಪ್ನುಯಾಮ್ ।
ಅನಯಾ ವರ್ತಮಾನೋಽಹಂ ವೃತ್ತ್ಯಾ ಹೀನಪ್ರತಿಜ್ಞಯಾ ॥ ೮

ಕಾಮವೃತ್ತಸ್ತ್ವಯಂ ಲೋಕಃ ಕೃತ್ಸ್ನಃ ಸಮುಪವರ್ತತೇ ।
ಯದ್ವೃತ್ತಾಃ ಸಂತಿ ರಾಜಾನಸ್ತದ್ವೃತ್ತಾಃ ಸಂತಿ ಹಿ ಪ್ರಜಾಃ ॥ ೯

ಸತ್ಯಮೇವಾನೃಶಂಸಂ ಚ ರಾಜವೃತ್ತಂ ಸನಾತನಮ್ ।
ತಸ್ಮಾತ್ ಸತ್ಯಾತ್ಮಕಂ ರಾಜ್ಯಂ ಸತ್ಯೇ ಲೋಕಃ ಪ್ರತಿಷ್ಠಿತಃ ॥ ೧೦

ಶಿಷ್ಟಲಕ್ಷಣವಿಲ್ಲದೆ ಶಿಷ್ಟನಂತೆಯೂ ದುಶ್ಶೀಲನಾಗಿ ಶೀಲವಂತನಂತೆಯೂ ತೋರಿಸಿಕೊಳ್ಳಬೇಕೆ? (೫). ನೀವು ಹೇಳಿದ್ದು ಲೋಕಸಾಂಕರ್ಯವನ್ನುಂಟುಮಾಡುವ ಅಧರ್ಮಮಾರ್ಗ. ನಾನು ಶ್ರೇಯಸ್ಕರವಾದ ಮಾರ್ಗವನ್ನು ಬಿಟ್ಟು ಧರ್ಮದ ನೆಪದಿಂದ ಈ ಅಧರ್ಮಮಾರ್ಗಕ್ಕಿಳಿದರೆ – ಶಾಸ್ತ್ರದೂಷಿತವಾದ ಕಾರ್ಯದಲ್ಲಿ ತೊಡಗಿದರೆ – ಬುದ್ಧಿಯುಳ್ಳ ಯಾವ ಮನುಷ್ಯನು ತಾನೆ ನನ್ನನ್ನು ಗೌರವಿಸಿಯಾನು? (೬). ಕಾರ್ಯಾಕಾರ್ಯಗಳನ್ನು ಬಲ್ಲ ಯಾವನು ತಾನೆ ನನಗೆ ಮರ್ಯಾದೆಯನ್ನು ಕೊಟ್ಟಾನು? ಲೋಕದಲ್ಲಿ ನಾನು ದುರಾಚಾರಿಯೆಂದೂ ಜನತೆಯನ್ನು ದುರ್ಮಾರ್ಗಕ್ಕೆ ಎಳೆಯಲು ಹೊರಟಿದ್ದೇನೆಂದೂ ಜನರು ತಿಳಿಯುತ್ತಾರೆ (೭). ನಾನು ಆಡಿದ ಮಾತಿಗೆ ತಪ್ಪಿ ಈ ಕ್ಷುದ್ರವೃತ್ತಿಯನ್ನವಲಂಬಿಸಿದರೆ, ನನ್ನ ಯಾವ ಹಿರಿಯರ ಆಚಾರವನ್ನು ಪಾಲಿಸಿದಂತಾಯಿತು? ನನಗೆ ಸದ್ಗತಿಯಾಗುವುದಾದರೂ ಹೇಗೆ? ನೀವು ಹೇಳಿದಂತೆ ನಾನು ನಡೆದುಕೊಂಡಲ್ಲಿ, ಸಮಸ್ತಜನರೂ ತಮಗೆ ಮನಸ್ಸು ಬಂದಂತೆ ಸ್ವೇಚ್ಛಾಚಾರದಲ್ಲಿ ತೊಡಗುವರು. ರಾಜರು ನಡೆದಂತೆ ಪ್ರಜೆಗಳು ನಡೆದುಕೊಳ್ಳುತ್ತಾರೆ. 'ಯಥಾ ರಾಜಾ ತಥಾ ಪ್ರಜಾಃ' (೮–೯). ಸತ್ಯಪಾಲನೆ, ಪ್ರಾಣಿದಯೆ – ಇವೆರಡೂ ಅನಾದಿಸಿದ್ಧವಾದ ರಾಜಧರ್ಮಗಳು. ಪ್ರಾಣಿದಯೆಯೂ ಸತ್ಯದ ಒಂದು ರೂಪವೇ. ಆದ್ದರಿಂದ

ಋಷಯಶ್ಚೈವ ದೇವಾಶ್ಚ ಸತ್ಯಮೇವ ಹಿ ಮೇನಿರೇ ।
ಸತ್ಯವಾದೀ ಹಿ ಲೋಕೇಽಸ್ಮಿನ್ ಪರಮಂ ಗಚ್ಛತಿ ಕ್ಷಯಮ್ ॥ ೧೧

ಉದ್ವಿಜಂತೇ ಯಥಾ ಸರ್ಪಾನ್ನರಾದನೃತವಾದಿನಃ ।
ಧರ್ಮಃ ಸತ್ಯಂ ಪರೋ ಲೋಕೇ ಮೂಲಂ ಸರ್ವಸ್ಯ ಚೋಚ್ಯತೇ ॥

ಸತ್ಯಮೇವೇಶ್ವರೋ ಲೋಕೇ ಸತ್ಯೇ ಪದ್ಮಾ ಪ್ರತಿಷ್ಠಿತಾ ।
ಸತ್ಯಮೂಲಾನಿ ಸರ್ವಾಣಿ ಸತ್ಯಾನ್ನಾಸ್ತಿ ಪರಂ ಪದಮ್ ॥ ೧೩

ದತ್ತಮಿಷ್ಟಂ ಹುತಂ ಚೈವ ತಪ್ತಾನಿ ಚ ತಪಾಂಸಿ ಚ ।
ವೇದಾಃ ಸತ್ಯಪ್ರತಿಷ್ಠಾನಾಸ್ತಸ್ಮಾತ್ ಸತ್ಯಪರೋ ಭವೇತ್ ॥ ೧೪

ಏಕಃ ಪಾಲಯತೇ ಲೋಕಮೇಕಃ ಪಾಲಯತೇ ಕುಲಮ್ ।
ಮಜ್ಜತ್ಯೇಕೋ ಹಿ ನಿರಯೇ ಏಕಃ ಸ್ವರ್ಗೇ ಮಹೀಯತೇ ॥ ೧೫

ಸೋಽಹಂ ಪಿತುರ್ನಿಯೋಗಂ ತು ಕಿಮರ್ಥಂ ನಾನುಪಾಲಯೇ ।
ಸತ್ಯಪ್ರತಿಶ್ರವಃ ಸತ್ಯಂ ಸತ್ಯೇನ ಸಮಯೀಕೃತಮ್ ॥ ೧೬

ರಾಜ್ಯಭಾರವೆಂದರೆ ಸತ್ಯಪಾಲನೆ. ಸತ್ಯದಲ್ಲಿಯೇ ಜಗತ್ತು ನಿಂತಿದೆ (೧೦). ಋಷಿಗಳೂ ದೇವತೆಗಳೂ ಸತ್ಯವೇ ಉತ್ಕೃಷ್ಟವಾದುದೆಂದು ತಿಳಿದಿದ್ದಾರೆ. ಸತ್ಯವಾದಿಯು ಪರಮಸದ್ಗತಿಯನ್ನು ಪಡೆಯುತ್ತಾನೆ. ಜನರಿಗೆ ಸುಳ್ಳನನ್ನು ಕಂಡರೆ ಸರ್ಪವನ್ನು ಕಂಡಂತೆ ಅಂಜಿಕೆಯಾಗುವುದು. ಲೋಕದಲ್ಲಿ ಸತ್ಯವೇ ಸರ್ವಕ್ಕೂ ಆಧಾರವಾದ ಪರಮಧರ್ಮವೆನಿಸಿದೆ (೧೧-೧೨). ಸತ್ಯವೇ ಜಗತ್ತನ್ನು ನಿಯಮದಲ್ಲಿಡುವ ಈಶ್ವರ. ಸತ್ಯದಲ್ಲಿ ಲಕ್ಷ್ಮಿಯು ಪ್ರತಿಷ್ಠಿತಳಾಗಿ ನಿಂತಿದ್ದಾಳೆ. ಸತ್ಯವನ್ನೇ ಆಧರಿಸಿ ಸಕಲಕಾರ್ಯಗಳೂ ನಡೆಯುತ್ತವೆ. ಸತ್ಯಕ್ಕಿಂತ ಶ್ರೇಷ್ಠವಾದ ಇನ್ನೊಂದು ವಸ್ತುವಿಲ್ಲ (೧೩). ದಾನ, ಯಜ್ಞ, ಅಗ್ನಿಹೋತ್ರ, ವ್ರತ, ತಪಸ್ಸು ಇವುಗಳನ್ನು ಪ್ರತಿಪಾದಿಸುವ ವೇದಗಳು – ಇವೆಲ್ಲವೂ ಸತ್ಯದ ಅಡಿಗಲ್ಲಿನ ಮೇಲೆ ನಿಂತಿವೆ. ಆದ್ದರಿಂದ ಮನುಷ್ಯನು ಸತ್ಯಸಂಧನಾಗಿ ಬಾಳಬೇಕು (೧೪). ಸತ್ಯದ ಬಲವಿರುವಾತನೇ ಪೃಥ್ವಿಯನ್ನೂ ಆಳುವನು; ತನ್ನ ವಂಶವನ್ನೂ ಉದ್ಧರಿಸುವನು; ಕಡೆಗೆ ಸ್ವರ್ಗದಲ್ಲಿಯೂ ಸತ್ಕೃತನಾಗುವನು. ಸತ್ಯವನ್ನು ಬಿಟ್ಟವನು ನರಕದಲ್ಲಿ ಮುಳುಗುವನು (೧೫). ಹೀಗಿರುವಾಗ ನಾನು ಯಾವ ಕಾರಣದಿಂದ ತಂದೆಯ ಆಜ್ಞೆಯನ್ನು ಉಲ್ಲಂಘಿಸಿ ನಡೆಯಬೇಕು? ಸತ್ಯವಾಗಿ ನಡೆಯುವೆನೆಂದು

ನೈವ ಲೋಭಾನ್ನ ಮೋಹಾದ್ವಾ ನ ಹ್ಯಜ್ಞಾನಾತ್ತಮೋಽನ್ವಿತಃ ।
ಸೇತುಂ ಸತ್ಯಸ್ಯ ಭೇತ್ಸ್ಯಾಮಿ ಗುರೋಃ ಸತ್ಯಪ್ರತಿಶ್ರವಃ ॥ ೧೭

ಅಸತ್ಯಸಂಧಸ್ಯ ಸತಶ್ಚಲಸ್ಯಾಸ್ಥಿರಚೇತಸಃ ।
ನೈವಾ ದೇವಾ ನ ಪಿತರಃ ಪ್ರತೀಚ್ಛಂತೀತಿ ನಃ ಶ್ರುತಮ್ ॥ ೧೮

ಪ್ರತ್ಯಗಾತ್ಮ ಮಿಮಂ ಧರ್ಮಂ ಸತ್ಯಂ ಪಶ್ಯಾಮ್ಯಹಂ ಧ್ರುವಮ್ ।
ಭಾರಃ ಸತ್ಪುರುಷೈಶ್ಚೀರ್ಣಸ್ತದರ್ಥಮಭಿಮನ್ಯತೇ ॥ ೧೯

ಕ್ಷಾತ್ರಂ ಧರ್ಮಮಹಂ ತ್ಯಕ್ಷ್ಯೇ ಹ್ಯಧರ್ಮಂ ಧರ್ಮಸಂಹಿತಮ್ ।
ಕ್ಷುದ್ರೈರ್ನೃಶಂಸೈರ್ಲುಬ್ಧೈಶ್ಚ ಸೇವಿತಂ ಪಾಪಕರ್ಮಭಿಃ ॥ ೨೦

ತಂದೆಗೆ ಪ್ರತಿಜ್ಞೆಮಾಡಿಕೊಟ್ಟಿದ್ದೇನೆ. ನಮ್ಮ ತಂದೆಯೂ ತನ್ನ ಸತ್ಯವನ್ನು ಪಾಲಿಸುವುದಕ್ಕಾಗಿಯೇ ನನಗೆ ಈ ಸತ್ಯವನ್ನು ಗೊತ್ತುಪಡಿಸಿದ್ದಾನೆ (೧೬). ನನ್ನ ಗುರುವಾದ ತಂದೆಗೆ ಸತ್ಯವನ್ನು ಪಾಲಿಸುವೆನೆಂದು ಮಾತು ಕೊಟ್ಟಿದ್ದೇನೆ. ಸತ್ಯದ ಸೇತುವೆಯನ್ನು ಎಂದಿಗೂ ನಾನು ಒಡೆಯತಕ್ಕವನಲ್ಲ. ಯಾವ ಪ್ರಲೋಭನೆಯನ್ನು ತೋರಿಸಿದರೂ ನಾನು ಅಸತ್ಯವನ್ನು ನುಡಿಯಲಿಕ್ಕಿಲ್ಲ. ಚಿತ್ತಭ್ರಮಣೆಯಿಂದಾಗಲಿ ಅಜ್ಞಾನದಿಂದಾಗಲಿ ತಮೋಗುಣಯುಕ್ತನಾಗಿ ಸತ್ಯದ ಕಟ್ಟನ್ನು ನಾನು ಮೀರತಕ್ಕವನಲ್ಲ (೧೭). ಸ್ಥಿರಬುದ್ಧಿಯಿಲ್ಲದೆ ಚಪಲಚಿತ್ತನಾಗಿ ಸುಳ್ಳು ಹೇಳತಕ್ಕವನಿಗೆ ದೇವತೆಗಳೂ ಇಲ್ಲ, ಪಿತೃಗಳೂ ಇಲ್ಲ. ಅವನು ಅರ್ಪಿಸಿದ್ದನ್ನು ದೇವಪಿತೃಗಳು ಸ್ವೀಕರಿಸುವುದಿಲ್ಲವೆಂದು ದೊಡ್ಡವರು ಹೇಳಿದ್ದನ್ನು ನಾವು ಕೇಳಿಬಲ್ಲೆವು (೧೮). ಸತ್ಯರೂಪವಾದ ಈ ಧರ್ಮವೇ ಜೀವಿಗೆ ಶಾಶ್ವತವಾದ ಅಂತರಾತ್ಮವೆಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದಲೇ ಸಜ್ಜನರು ಕಷ್ಟವನ್ನನುಭವಿಸಿಯಾದರೂ ಸತ್ಯವನ್ನು ಪಾಲಿಸಿದ್ದಾರೆ. ಸತ್ಯವನ್ನು ಆದರಿಸಿದ್ದಾರೆ (೧೯). ಜಾಬಾಲಿ ಮುನಿಗಳೆ, ಧರ್ಮದ ಹೆಸರಿನಲ್ಲಿ ಅಧರ್ಮವನ್ನು ನಾನು ಆಚರಿಸಲಾರೆ. (ಅಸತ್ಯಮಾರ್ಗದಿಂದ ರಾಜ್ಯವನ್ನು ಗಳಿಸಿ) ಕ್ಷತ್ರಿಯಧರ್ಮದ ಹೆಸರಿನಿಂದ ರಾಜ್ಯವನ್ನಾಳುವುದು ನನಗೆ ಬೇಡ. ಕ್ಷುದ್ರರೂ ಘಾತುಕರೂ ದುರಾಸೆಯುಳ್ಳವರೂ ಆದ ಪಾಪಿಗಳು ಬಯಸುವ ಇಂಥ ಕ್ಷತ್ರಿಯಧರ್ಮವನ್ನು ನಾನು ತ್ಯಜಿಸಿದ್ದೇನೆ (೨೦). ಮನುಷ್ಯನು ಪಾಪಕೃತ್ಯವನ್ನು ದೇಹದಿಂದ ಆಚರಿಸುವಾಗ

ಕಾಯೇನ ಕುರುತೇ ಪಾಪಂ ಮನಸಾ ಸಂಪ್ರಧಾರ್ಯ ಚ ।
ಅನೃತಂ ಜಿಹ್ವಯಾ ಚಾಹ ತ್ರಿವಿಧಂ ಕರ್ಮ ಪಾತಕಮ್ ॥ ೨೧

ಭೂಮಿಃ ಕೀರ್ತಿರ್ಯಶೋ ಲಕ್ಷ್ಮೀಃ ಪುರುಷಂ ಪ್ರಾರ್ಥಯಂತಿ ಹಿ ।
ಸತ್ಯಂ ಸಮನುವರ್ತಂತೇ ಸತ್ಯಮೇವ ಭಜೇತ್ತತಃ ॥ ೨೨

ಶ್ರೇಷ್ಠಂ ಹ್ಯನಾರ್ಯಮೇವ ಸ್ಯಾದ್ಯದ್ಭವಾನವಧಾರ್ಯ ಮಾಮ್ ।
ಆಹ ಯುಕ್ತಿಕರೈರ್ವಾಕ್ಯೈರಿದಂ ಭದ್ರಂ ಕುರುಷ್ವ ಹ ॥ ೨೩

ಕಥಂ ಹ್ಯಹಂ ಪ್ರತಿಜ್ಞಾಯ ವನವಾಸಮಿಮಂ ಗುರೌ ।
ಭರತಸ್ಯ ಕರಿಷ್ಯಾಮಿ ವಚೋ ಹಿತ್ವಾ ಗುರೋರ್ವಚಃ ॥ ೨೪

ಸ್ಥಿರಾ ಮಯಾ ಪ್ರತಿಜ್ಞಾತಾ ಪ್ರತಿಜ್ಞಾ ಗುರುಸನ್ನಿಧೌ ।
ಪ್ರಹೃಷ್ಯಮಾಣಾ ಸಾ ದೇವೀ ಕೈಕೇಯೀ ಚಾಭವತ್ತದಾ ॥ ೨೫

ಮನಸ್ಸಿನಲ್ಲಿ ಅದನ್ನು ನಿಶ್ಚಯಿಸುತ್ತಾನೆ. ನಾಲಿಗೆಯಿಂದ ಸುಳ್ಳನ್ನು ಹೇಳುತ್ತಾನೆ. ಹೀಗೆ ದೈಹಿಕ ಮಾನಸಿಕ ವಾಚಿಕ-ಎಂಬ ಮೂರು ಬಗೆಯ ಪಾಪಗಳೂ ಅಧರ್ಮಿಗೆ ಗಂಟುಬೀಳುತ್ತವೆ (೨೧). ಭೂಸಂಪತ್ತು, ಪುಣ್ಯಕಾರ್ಯಗಳಿಂದ ಜನಿಸುವ ಕೀರ್ತಿ, ವೀರನೆಂಬ ಯಶಸ್ಸು, ಐಶ್ವರ್ಯ-ಇವು ಸತ್ಯಸಂಧನಾದ ಪುರುಷನನ್ನು ಬಯಸಿ ಹುಡುಕಿಕೊಂಡು ಬರುತ್ತವೆ. ಮಹಾಪುರುಷರು ಸತ್ಯವನ್ನೇ ಆಶ್ರಯಿಸಬೇಕು (೨೨). ಜಾಬಾಲಿಮುನಿಗಳೆ, ನೀವು ಶ್ರೇಷ್ಠವಾದ ಮಾರ್ಗವೆಂದು ನಿಶ್ಚಯಿಸಿ ಯುಕ್ತಿಪೂರ್ಣವಾದ ವಾಕ್ಯಗಳಿಂದ 'ಇದು ಒಳ್ಳೆಯದು, ಹೀಗೆಮಾಡು' ಎಂದು ಹೇಳಿದಿರಲ್ಲ, ಅದು ಅಕ್ರಮವಾದ ಅನ್ಯಾಯದ ನುಡಿ (೨೩). ಹದಿನಾಲ್ಕು ವರ್ಷಗಳ ವರೆಗೆ ವನವಾಸಮಾಡುತ್ತೇನೆಂದು ತಂದೆಯ ಮುಂದೆ ಪ್ರತಿಜ್ಞೆಮಾಡಿ, ಈಗ ಆತನ ಆಜ್ಞೆಯನ್ನುಲ್ಲಂಘಿಸಿ ಭರತನ ಮಾತನ್ನು ಹೇಗೆ ನಡೆಸಲಿ? ತಂದೆ ತಾಯಿಗಳೆದುರಿಗೆ ದೃಢವಾದ ಪ್ರತಿಜ್ಞೆಯನ್ನು ಕೈಗೊಂಡಿದ್ದೇನೆ. ಆಗ ಕೈಕೇಯೀ ದೇವಿಯು ಸಂತೋಷಪಟ್ಟಿದ್ದಾಳೆ (೨೪-೨೫). ಆದ್ದರಿಂದ ನಾನು ಹೀಗೆಯೇ ವನವಾಸದಲ್ಲಿದ್ದು

ವನವಾಸಂ ವಸನ್ನೇವಂ ಶುಚಿರ್ನಿಯತಭೋಜನಃ ।
ಮೂಲೈಃ ಪುಷ್ಪೈಃ ಫಲೈಃ ಪುಣ್ಯೈಃ ಪಿತೄನ್ ದೇವಾಂಶ್ಚ ತರ್ಪಯನ್ ॥
ಸಂತುಷ್ಟಪಂಚವರ್ಗೋಽಹಂ ಲೋಕಯಾತ್ರಾಂ ಪ್ರವರ್ತಯೇ ।
ಅಕುಹಃ ಶ್ರದ್ದಧಾನಃ ಸನ್ ಕಾರ್ಯಾಕಾರ್ಯವಿಚಕ್ಷಣಃ ॥ ೨೭

ಕರ್ಮಭೂಮಿಮಿಮಾಂ ಪ್ರಾಪ್ಯ ಕರ್ತವ್ಯಂ ಕರ್ಮ ಯಚ್ಛುಭಮ್ ।
ಅಗ್ನಿರ್ವಾಯುಶ್ಚ ಸೋಮಶ್ಚ ಕರ್ಮಣಾಂ ಫಲಭಾಗಿನಃ ॥ ೨೮

ಶತಂ ಕ್ರತೂನಾಮಾಹೃತ್ಯ ದೇವರಾಟ್ ತ್ರಿದಿವಂ ಗತಃ ।
ತಪಾಂಸ್ಯುಗ್ರಾಣಿ ಚಾಸ್ಥಾಯ ದಿವಂ ಯಾತಾ ಮಹರ್ಷಯಃ ॥ ೨೯

ಅಮೃಷ್ಯಮಾಣಃ ಪುನರುಗ್ರತೇಜಾ
ನಿಶಮ್ಯ ತನ್ನಾಸ್ತಿಕಹೇತುವಾಕ್ಯಮ್ ।
ಅಥಾಬ್ರವೀತ್ತಂ ನೃಪತೇಸ್ತನೂಜೋ
ವಿಗರ್ಹಮಾಣೋ ವಚನಾನಿ ತಸ್ಯ ॥ ೩೦

ಶುಚಿಯಾಗಿ ಆಹಾರ ನಿಯಮವನ್ನು ಪಾಲಿಸುತ್ತಿರುವೆನು. ಪುಣ್ಯಕರವಾದ ಫಲ ಮೂಲ ಪುಷ್ಪ ಗಳಿಂದ ಪಿತೃಗಳನ್ನೂ ದೇವತೆಗಳನ್ನೂ ಆರಾಧಿಸುತ್ತಿರುವೆನು (೨೬). ಪಂಚೇಂದ್ರಿಯಗಳೂ ಸಂತುಷ್ಟವಾದವೆಂದು ತೃಪ್ತನಾಗಿ ಲೋಕಯಾತ್ರೆಯನ್ನು ನಿರ್ವಹಿಸುವೆನು. ಈ ಕರ್ಮಭೂಮಿಯಲ್ಲಿ ಹುಟ್ಟಿದ ಮನುಷ್ಯನು ಕಾರ್ಯಾಕಾರ್ಯಗಳನ್ನು ಚೆನ್ನಾಗಿ ತಿಳಿದು, ನಿಷ್ಕಪಟಭಾವದಿಂದ ಶಾಸ್ತ್ರದಲ್ಲಿ ಶ್ರದ್ಧೆಯನ್ನಿಟ್ಟು ಶ್ರೇಯಸ್ಕರವಾದ ಕರ್ಮವನ್ನು ಆಚರಿಸಬೇಕು. 'ಅಗ್ನಿ, ವಾಯು, ಸೋಮ-ಇವರೆಲ್ಲರೂ ಸತ್ಕರ್ಮದ ಫಲದಿಂದ ದೇವತ್ವವನ್ನು ಪಡೆದಿದ್ದಾರೆ (೨೭-೨೮). ಇಂದ್ರನು ನೂರು ಯಾಗಗಳನ್ನು ಮಾಡಿ ಸ್ವರ್ಗಲೋಕದಲ್ಲಿ ದೇವೇಂದ್ರ ಪದವಿಯನ್ನು ಪಡೆದಿದ್ದಾನೆ. ಮಹರ್ಷಿಗಳು ಉಗ್ರವಾದ ತಪಸ್ಸನ್ನಾಚರಿಸಿ ಸ್ವರ್ಗಾದಿಪುಣ್ಯಲೋಕಗಳನ್ನು ಸೇರಿದ್ದಾರೆ'' ಎಂದು ಹೇಳಿದನು (೨೯). ಮಹಾತೇಜಸ್ವಿಯಾದ ಶ್ರೀರಾಮನು ಜಾಬಾಲಿ ಮುನಿಗಳಾಡಿದ ನಾಸ್ತಿಕಮತದ ಹೇತುವಾದವನ್ನು ಕೇಳಿ ಸಹಿಸಲಾರದೆ ಹೋದನು. ಆ ರಾಜಪುತ್ರನು ಅವರ ವಾದವನ್ನು ದೂಷಿಸುತ್ತ ಪುನಃ ಹೀಗೆಂದನು (೩೦). ''ಸತ್ಯ, ಧರ್ಮ, ಪರಾಕ್ರಮ, ಭೂತದಯೆ,

ಸತ್ಯಂ ಚ ಧರ್ಮಂ ಪರಾಕ್ರಮಂ ಚ
ಭೂತಾನುಕಂಪಾಂ ಪ್ರಿಯವಾದಿತಾಂ ಚ ।
ದ್ವಿಜಾತಿದೇವಾತಿಥಿಪೂಜನಂ ಚ
ಪಂಥಾನುಮಾಹುಸ್ತ್ರಿದಿವಸ್ಯ ಸಂತಃ ॥ ೩೧

ತೇನೈವಮಾಜ್ಞಾಯ ಯಥಾವದರ್ಥ
ಮೇಕೋದಯಂ ಸಂಪ್ರತಿಪದ್ಯ ವಿಪ್ರಾಃ ।
ಧರ್ಮಂ ಚರಂತಃ ಸಕಲಂ ಯಥಾವತ್
ಕಾಂಕ್ಷಂತಿ ಲೋಕಾಗಮಮಪ್ರಮತ್ತಾಃ ॥ ೩೨

ನಿಂದಾಮ್ಯಹಂ ಕರ್ಮ ಪಿತುಃ ಕೃತಂ ತತ್
ಯಸ್ತ್ವಾಮಗೃಹ್ಣಾದ್ವಿಷಮಸ್ಥಬುದ್ಧಿಮ್ ।
ಬುದ್ಧ್ಯಾನಯೈವಂವಿಧಯಾ ಚರಂತಂ
ಸುನಾಸ್ತಿಕಂ ಧರ್ಮಪಥಾದಪೇತಮ್ ॥ ೩೩

ಯಥಾ ಹಿ ಚೋರಃ ಸ ತಥಾ ಹಿ ಬುದ್ಧ
ಸ್ತಥಾಗತಂ ನಾಸ್ತಿಕಮತ್ರ ವಿದ್ಧಿ ।

ಪ್ರಿಯವಾದ ಒಳ್ಳೆಯ ಮಾತನ್ನಾಡುವುದು, ವಿಪ್ರರನ್ನೂ ದೇವರನ್ನೂ ಅತಿಥಿಗಳನ್ನೂ ಪೂಜಿಸುವುದು – ಇವು ಸ್ವರ್ಗಕ್ಕೆ ದಾರಿಯೆಂದು ಸಜ್ಜನರು ಹೇಳುತ್ತಾರೆ (೩೧). ಆದ್ದರಿಂದ ವಿಪ್ರರು ವಸ್ತುತತ್ತ್ವವನ್ನು ಯಥಾರ್ಥವಾಗಿ ತಿಳಿದು ಒಮ್ಮತದಿಂದ ಧರ್ಮವನ್ನಾ ಚರಿಸುತ್ತಾರೆ. ನ್ಯೂನತೆಯಿಲ್ಲದಂತೆ ಎಚ್ಚರಿಕೆಯಿಂದ ಧರ್ಮಮಾರ್ಗದಲ್ಲಿ ನಡೆದು ಸದ್ಗತಿಯನ್ನುಪೇಕ್ಷಿಸುತ್ತಾರೆ (೩೨). ಜಾಬಾಲಿಗಳೆ, ನೀವು ವಿಕಟಬುದ್ಧಿಯವರು; ಪರಮ ನಾಸ್ತಿಕರು; ಧರ್ಮಭ್ರಷ್ಟರು; ಈ ಧೂರ್ತಬುದ್ಧಿಯನ್ನು ಹರಡುವುದಕ್ಕಾಗಿ ಸಂಚರಿಸುತ್ತಿದ್ದೀರಿ. ಮುಖ್ಯವಾಗಿ ನಿಮ್ಮನ್ನು ಹತ್ತಿರಕ್ಕೆ ಸೇರಿಸಿದ ನಮ್ಮ ತಂದೆಯ ಕೃತ್ಯಕ್ಕಾಗಿ ನಾನು ದೂರಬೇಕಾಗಿದೆ (೩೩). (ವೇದಬಾಹ್ಯನಾದ) ಬೌದ್ಧನನ್ನು ಚೋರನೆಂದು ತಿಳಿಯಬೇಕು. ನಾಸ್ತಿಕನೂ ಬೌದ್ಧನಂತೆಯೇ ಎಂದು ತಿಳಿಯಿರಿ. ಆದ್ದರಿಂದ ನಾಸ್ತಿಕನು ಪ್ರಜೆಗಳ ವಿಶ್ವಾಸಕ್ಕೆ ಅರ್ಹನಲ್ಲ. ವಿದ್ಯಾವಂತನು ನಾಸ್ತಿಕನನ್ನು ಆದರಿಸಬಾರದು (೩೪).

ತಸ್ಮಾದ್ಧಿ ಯಃ ಶಂಕ್ಯತಮಃ ಪ್ರಜಾನಾಂ
ನ ನಾಸ್ತಿಕೇನಾಭಿಮುಖೋ ಬುಧಃ ಸ್ಯಾತ್ ॥ ೩೪

ತ್ವತ್ತೋ ಜನಾಃ ಪೂರ್ವತರೇಽವರಾಶ್ಚ
ಶುಭಾನಿ ಕರ್ಮಾಣಿ ಬಹೂನಿ ಚಕ್ರುಃ ।
ಜಿತ್ವಾ ಸದೇಮಂ ಚ ಪರಂ ಚ ಲೋಕಂ
ತಸ್ಮಾದ್ದ್ವಿಜಾಃ ಸ್ವಸ್ತಿ ಹುತಂ ಕೃತಂ ಚ ॥ ೩೫

ಧರ್ಮೇ ರತಾಃ ಸತ್ಪುರುಷೈಃ ಸಮೇತಾ
ಸ್ತೇಜಸ್ವಿನೋ ದಾನಗುಣಪ್ರಧಾನಾಃ ।
ಅಹಿಂಸಕಾ ವೀತಮಲಾಶ್ಚ ಲೋಕೇ
ಭವಂತಿ ಪೂಜ್ಯಾ ಮುನಯಃ ಪ್ರಧಾನಾಃ ॥ ೩೬

ಇತಿ ಬ್ರುವಂತಂ ವಚನಂ ಸರೋಷಂ
ರಾಮಂ ಮಹಾತ್ಮಾನಮದೀನಸತ್ತ್ವಮ್ ।
ಉವಾಚ ತಥ್ಯಂ ಪುನರಾಸ್ತಿಕಂ ಚ
ಸತ್ಯಂ ವಚಃ ಸಾನುನಯಂ ಚ ವಿಪ್ರಃ ॥ ೩೭

ನಿಮಗಿಂತ ಶ್ರೇಷ್ಠರಾದ ಪೂರ್ವಜರು ನಾನಾವಿಧವಾದ ಶುಭಕರ್ಮಗಳನ್ನು ಮಾಡಿದ್ದಾರೆ. ಅವರು ಇಹಲೋಕ ಪರಲೋಕಗಳನ್ನು ಜಯಿಸಿದ್ದಾರೆ. ಆದ್ದರಿಂದ ದ್ವಿಜರು ಸತ್ಯ, ಪರೋಪಕಾರಾದಿಗಳನ್ನು ಆದರಿಸುತ್ತಾರೆ. ಯಜ್ಞಗಳನ್ನು ಆಚರಿಸುತ್ತಾರೆ (೩೫). ಧರ್ಮಪರಾಯಣರಾಗಿ ಸಜ್ಜನರ ಸಹವಾಸದಲ್ಲಿದ್ದು ತೇಜಸ್ವಿಗಳೂ ಉದಾರಿಗಳೂ ಪ್ರಾಣಿದಯಾಪರರೂ ಆಗಿ, ತ್ರಿಕರಣಶುದ್ಧಿಯುಳ್ಳವರು ಲೋಕದಲ್ಲಿ ಪೂಜ್ಯರಾಗುತ್ತಾರೆ. ಅಂಥವರು ಮಹರ್ಷಿಗಳೆನಿಸಿಕೊಳ್ಳುತ್ತಾರೆ' ಎಂದು ಹೇಳಿದನು (೩೬). ಹೀಗೆ ಕೋಪದಿಂದ ನುಡಿಯುತ್ತಿದ್ದ ಮಹಾತ್ಮನೂ ಧೀರನೂ ಆದ ಶ್ರೀರಾಮನನ್ನು ನೋಡಿ ಜಾಬಾಲಿಮುನಿಗಳು ಅವನನ್ನು ಸಂತೈಸುತ್ತ, ಆಸ್ತಿಕಮತಾವಲಂಬಿಯಾದ ತಮ್ಮ ಹೃದ್ಗತಸತ್ಯವನ್ನು ಹೊರಗೆಡವಿದರು (೩೭) :

ನ ನಾಸ್ತಿಕಾನಾಂ ವಚನಂ ಬ್ರವೀಮ್ಯಹಂ
ನ ನಾಸ್ತಿಕೋಽಹಂ ನ ಚ ನಾಸ್ತಿ ಕಿಂಚನ ।
ಸಮೀಕ್ಷ್ಯ ಕಾಲಂ ಪುನರಾಸ್ತಿಕೋಽಭವಂ
ಭವೇಯ ಕಾಲೇ ಪುನರೇವ ನಾಸ್ತಿಕಃ ॥ ೩೮

ಸ ಚಾಪಿ ಕಾಲೋಽಯಮುಪಾಗತಃ ಶನೈ-
ರ್ಯಥಾ ಮಯಾ ನಾಸ್ತಿಕವಾಗುದೀರಿತಾ ।
ನಿವರ್ತನಾರ್ಥಂ ತವ ರಾಮ ಕಾರಣಾತ್
ಪ್ರಸಾದನಾರ್ಥಂ ಚ ಮಯೈತದೀರಿತಮ್ ॥ ೩೯

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ನವಾಧಿಕಶತತಮಃ ಸರ್ಗಃ

❋❋❋

''ರಾಮ, ನಾನು ನಾಸ್ತಿಕವಾದವನ್ನು ಸ್ಥಾಪಿಸುತ್ತಿಲ್ಲ. ನಾನು ನಾಸ್ತಿಕನಲ್ಲ. ಪರಲೋಕಾದಿಗಳು ಇಲ್ಲವೆಂಬುದು ಸುಳ್ಳು. ನಾಸ್ತಿಕರು ವಾದವನ್ನೆಬ್ಬಿಸಿದ ಕಾಲದಲ್ಲಿ ನಾನು ಆಸ್ತಿಕನಾಗಿ ಅವರ ವಾದವನ್ನು ಖಂಡಿಸಿದ್ದೇನೆ. ಧರ್ಮಸಂಕಟವು ಬಂದ ಕಾಲದಲ್ಲಿ (ಧರ್ಮವನ್ನು ಸ್ಥಾಪಿಸುವುದಕ್ಕಾಗಿಯೇ) ಮರಳಿ ನಾಸ್ತಿಕನಾಗುತ್ತೇನೆ (೩೮). ಅಂಥ ಒಂದು ಸಮಯ ಈಗ ಪ್ರಾಪ್ತವಾಗಿತ್ತು. (ಕೋಸಲರಾಜ್ಯವು ಅನಾಯಕವಾಗಿ ಧರ್ಮ ಲೋಪವಾದೀತೆಂಬ ಶಂಕೆ ನನಗೆ ಬಂದಿತು.) ಆದ್ದರಿಂದ ನಾಸ್ತಿಕವಾದವನ್ನವಲಂಬಿಸಿ ನಿನ್ನನ್ನು ಅಯೋಧ್ಯೆಗೆ ಹಿಂದಿರುಗಿಸುವುದಕ್ಕಾಗಿ ಹೀಗೆ ಮಾತನಾಡಿದೆನು. ಅಯೋಧ್ಯೆಗೆ ಬರಲು ನಿನ್ನನ್ನು ಒಪ್ಪಿಸುವುದಕ್ಕಾಗಿ ನಾಸ್ತಿಕವಾದವನ್ನು ನಾನು ಮುಂದಿಟ್ಟೆನು'' ಎಂದು ಹೇಳಿದರು (೩೯).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ನೂರೊಂಬತ್ತನೆಯ ಸರ್ಗ

❋❋❋

ದಶಾಧಿಕಶತತಮಃ ಸರ್ಗಃ

ಇಕ್ಷ್ವಾಕುವಂಶಕೀರ್ತನಮ್

ಕ್ರುದ್ಧಮಾಜ್ಞಾಯ ರಾಮಂ ತು ವಸಿಷ್ಠಃ ಪ್ರತ್ಯುವಾಚ ಹ ।
ಜಾಬಾಲಿರಪಿ ಜಾನೀತೇ ಲೋಕಸ್ಯಾಸ್ಯ ಗತಾಗತಿಮ್ ॥ ೧

ನಿವರ್ತಯಿತುಕಾಮಸ್ತು ತ್ವಾಮೇತದ್ವಾಕ್ಯಮುಕ್ತವಾನ್ ।
ಇಮಾಂ ಲೋಕಸಮುತ್ಪತ್ತಿಂ ಲೋಕನಾಥ ನಿಬೋಧ ಮೇ ॥ ೨

ಸರ್ವಂ ಸಲಿಲಮೇವಾಸೀತ್ ಪೃಥಿವೀ ಯತ್ರ ನಿರ್ಮಿತಾ ।
ತತಃ ಸಮಭವದ್ಬ್ರಹ್ಮಾ ಸ್ವಯಂಭೂರ್ದೈವತೈಃ ಸಹ ॥ ೩

ಸ ವರಾಹಸ್ತತೋ ಭೂತ್ವಾ ಪ್ರೋಜ್ಜಹಾರ ವಸುಂಧರಾಮ್ ।
ಅಸೃಜಚ್ಚ ಜಗತ್ ಸರ್ವಂ ಸಹ ಪುತ್ರೈಃ ಕೃತಾತ್ಮಭಿಃ ॥ ೪

ಸರ್ಗ ೧೧೦

ಜ್ಯೇಷ್ಠಪುತ್ರನೇ ರಾಜ್ಯಾರ್ಹನೆಂಬ ಇಕ್ಷ್ವಾಕುವಂಶದ ಪದ್ಧತಿಯನ್ನು ವಸಿಷ್ಠರು ವಿವರಿಸುವುದು

ಶ್ರೀರಾಮನು ಕ್ರುದ್ಧನಾಗಿರುವುದನ್ನು ಕಂಡು, ಅವನನ್ನು ಸಂತೈಸುವುದಕ್ಕಾಗಿ ವಸಿಷ್ಠರು ಹೀಗೆಂದರು : ''ರಾಮ, ಈ ಲೋಕದ ಉತ್ಪತ್ತಿ ವಿನಾಶಗಳೂ ಜೀವಿಗಳ ಜನನ ಮರಣಸ್ವರೂಪವೂ ಜಾಬಾಲಿ ಮುನಿಗಳಿಗೆ ಗೊತ್ತಿದೆ (ಅವರು ನಾಸ್ತಿಕರಲ್ಲ) (೧). ಆದರೆ ನಿನ್ನನ್ನು ಅಯೋಧ್ಯೆಗೆ ಹಿಂದಿರುಗಿಸಬೇಕೆಂದು ನಿನ್ನೊಡನೆ ಈ ರೀತಿ ಹೇಳಿದರು. ರಾಜಕುಮಾರ, ಈ ಲೋಕದ ಉತ್ಪತ್ತಿ ಕ್ರಮವನ್ನು ಹೇಳುವೆನು, ಕೇಳು (೨) : ಮೊದಲು ಈ ಜಗತ್ತೆಲ್ಲವೂ ಜಲಮಯವಾಗಿತ್ತು. ಅದರಲ್ಲಿಯೇ ಈ ಪೃಥ್ವಿಯು ಸೃಷ್ಟಿಯಾಗಿದೆ. ಜಲರೂಪನಾಗಿದ್ದ ಆ ಪರಮಾತ್ಮನಿಂದ ಬ್ರಹ್ಮನೂ ದೇವತೆಗಳೂ ಉದ್ಭವಿಸಿದರು (೩). ಆ ಪರಮಾತ್ಮನು ವರಾಹಾವತಾರದಿಂದ ಈ ಭೂಮಿಯನ್ನು ಮೇಲಕ್ಕೆ ಎತ್ತಿ ತಂದನು. ಆಕಾಶವೆಂಬ ಹೆಸರಿನ ಪರಮಾತ್ಮನಿಂದ ಬ್ರಹ್ಮನು ಗೋಚರಿಸಿದನು. ಅವನು ಅನಾದಿಯೂ ನಾಶರಹಿತನೂ

ಆಕಾಶಪ್ರಭವೋ ಬ್ರಹ್ಮಾ ಶಾಶ್ವತೋ ನಿತ್ಯ ಅವ್ಯಯಃ ।
ತಸ್ಮಾನ್ಮರೀಚಿಃ ಸಂಜಜ್ಞೇ ಮರೀಚೇಃ ಕಶ್ಯಪಃ ಸುತಃ ॥ ೫

ವಿವಸ್ವಾನ್ ಕಶ್ಯಪಾಜ್ಜಜ್ಞೇ ಮನುರ್ವೈವಸ್ವತಃ ಸುತಃ ।
ಸ ತು ಪ್ರಜಾಪತಿಃ ಪೂರ್ವಮಿಕ್ಷ್ವಾಕುಸ್ತು ಮನೋಃ ಸುತಃ ॥ ೬

ಯಸ್ಯೇಯಂ ಪ್ರಥಮಂ ದತ್ತಾ ಸಮೃದ್ಧಾ ಮನುನಾ ಮಹೀ ।
ತಮಿಕ್ಷ್ವಾಕುಮಯೋಧ್ಯಾಯಾಂ ರಾಜಾನಂ ವಿದ್ಧಿ ಪೂರ್ವಕಮ್ ॥ ೭

ಇಕ್ಷ್ವಾಕೋಸ್ತು ಸುತಃ ಶ್ರೀಮಾನ್ ಕುಕ್ಷಿರಿತ್ಯೇವ ವಿಶ್ರುತಃ ।
ಕುಕ್ಷೇರಥಾತ್ಮಜೋ ವೀರೋ ವಿಕುಕ್ಷಿರುದಪದ್ಯತ ॥ ೮

ವಿಕುಕ್ಷೇಸ್ತು ಮಹಾತೇಜಾ ಬಾಣಃ ಪುತ್ರಃ ಪ್ರತಾಪವಾನ್ ।
ಬಾಣಸ್ಯ ತು ಮಹಾಬಾಹುರನರಣ್ಯೋ ಮಹಾಯಶಾಃ ॥ ೯

ನಾನಾವೃಷ್ಟಿರ್ಬಭೂವಾಸ್ಮಿನ್ನ ದುರ್ಭಿಕ್ಷಂ ಸತಾಂ ವರೇ ।
ಅನರಣ್ಯೇ ಮಹಾರಾಜೇ ತಸ್ಕರೋ ನಾಪಿ ಕಶ್ಚನ ॥ ೧೦

ಪರಿಣಾಮರಹಿತನೂ ಆದವನು. ಆತನು ಜ್ಞಾನಿಗಳಾದ ತನ್ನ ಪುತ್ರರ ನೆರವಿನಿಂದ ಈ ಪ್ರಪಂಚವನ್ನು ನಿರ್ಮಿಸಿದನು. ಬ್ರಹ್ಮನಿಂದ ಮರೀಚಿ ಹುಟ್ಟಿದನು. ಮರೀಚಿಯ ಮಗ ಕಶ್ಯಪ (೪-೫). ಕಶ್ಯಪನಿಂದ ವಿವಸ್ವಂತನೂ ಅವನಿಂದ ಮನುವೂ ಜನಿಸಿದರು. ಮನುವು ಪ್ರಜಾಪತಿಗಳಲ್ಲೊಬ್ಬನು. ಮನುವಿನ ಪುತ್ರ ಇಕ್ಷ್ವಾಕು. ಆತನಿಗೆ ಮನುವು ಸಂಪತ್ಸಮೃದ್ಧವಾದ ಈ ಭೂಮಂಡಲವನ್ನು ಪಾಲಿಸಬೇಕೆಂದು ವಹಿಸಿಕೊಟ್ಟನು. ಆ ಇಕ್ಷ್ವಾಕುವೇ ಅಯೋಧ್ಯೆಯಲ್ಲಿ ರಾಜ್ಯವಾಳಿದ ನಿಮ್ಮ ಪೂರ್ವಜರಲ್ಲಿ ಮೊದಲಿಗನೆಂದು ತಿಳಿ (೬-೭). ಆ ಇಕ್ಷ್ವಾಕುವಿನ ಮಗ ಕುಕ್ಷಿ. ಅವನ ಮಗ ವೀರನಾದ ವಿಕುಕ್ಷಿ. ಅವನಿಗೆ ಬಾಣನೆಂಬ ಪ್ರತಾಪಶಾಲಿಯಾದ ಪುತ್ರನು ಜನಿಸಿದನು. ಬಾಣನ ಪುತ್ರನೇ ಯಶಸ್ವಿಯಾದ ಅನರಣ್ಯ (೮-೯). ಈ ಅನರಣ್ಯನು ಸಜ್ಜನರಲ್ಲಿ ಅಗ್ರಗಣ್ಯ. ಈತನು ಮಹಾರಾಜನಾಗಿರುವಾಗ ಅನಾವೃಷ್ಟಿಯಾಗಲಿಲ್ಲ, ದುರ್ಭಿಕ್ಷವು ಸಂಭವಿಸಲಿಲ್ಲ,

ಅನರಣ್ಯಾನ್ಮಹಾಬಾಹುಃ ಪೃಥೂ ರಾಜಾ ಬಭೂವ ಹ ।
ತಸ್ಮಾತ್ಪೃಥೋರ್ಮಹಾರಾಜಸ್ತ್ರಿಶಂಕುರುದಪದ್ಯತ ॥ ೧೧

ಸ ಸತ್ಯವಚನಾದ್ವೀರಃ ಸಶರೀರೊ ದಿವಂ ಗತಃ ।
ತ್ರಿಶಂಕೋರಭವತ್ಸೂನುರ್ದುಂಧುಮಾರೋ ಮಹಾಯಶಾಃ ॥ ೧೨

ದುಂಧುಮಾರಾನ್ಮಹಾತೇಜಾ ಯುವನಾಶ್ವೋ ವ್ಯಜಾಯತ ।
ಯುವನಾಶ್ವಸುತಃ ಶ್ರೀಮಾನ್ ಮಾಂಧಾತಾ ಸಮಪದ್ಯತ ॥ ೧೩

ಮಾಂಧಾತುಸ್ತು ಮಹಾತೇಜಾಃ ಸುಸಂಧಿರುದಪದ್ಯತ ।
ಸುಸಂಧೇರಪಿ ಪುತ್ರೌ ದ್ವೌ ಧ್ರುವಸಂಧಿಃ ಪ್ರಸೇನಜಿತ್ ॥ ೧೪

ಯಶಸ್ವೀ ಧ್ರುವಸಂಧೇಸ್ತು ಭರತೋ ರಿಪುಸೂದನಃ ।
ಭರತಾತ್ತು ಮಹಾಬಾಹೋರಸಿತೋ ನಾಮ ಜಾಯತ ॥ ೧೫

ಯಸ್ಯೈತೇ ಪ್ರತಿರಾಜಾನ ಉದಪದ್ಯಂತ ಶತ್ರವಃ ।
ಹೈಹಯಾಸ್ತಾಲಜಂಘಾಶ್ಚ ಶೂರಾಶ್ಚ ಶಶಿಬಿಂದವಃ ॥ ೧೬

ತಾಂಸ್ತು ಸರ್ವಾನ್ ಪ್ರತಿವ್ಯೂಹ್ಯ ಯುದ್ಧೇ ರಾಜಾ ಪ್ರವಾಸಿತಃ ।
ಸ ಚ ಶೈಲವರೇ ರಮ್ಯೇ ಬಭೂವಾಭಿರತೋ ಮುನಿಃ ॥ ೧೭

ರಾಜ್ಯದಲ್ಲಿ ಒಬ್ಬ ಕಳ್ಳನೂ ಇರಲಿಲ್ಲ(೧೦). ಅನರಣ್ಯನಿಗೆ ಮಹಾವೀರನಾದ ಪೃಥುವು ಪುತ್ರನಾದನು. ಅವನಿಗೆ ತ್ರಿಶಂಕುಮಹಾರಾಜನು ಜನಿಸಿದನು. ಆತನು ಸತ್ಯದ ಮಹಿಮೆಯಿಂದ ಸಶರೀರನಾಗಿ ಸ್ವರ್ಗವನ್ನು ಸೇರಿದನು. ತ್ರಿಶಂಕುವಿಗೆ ಕೀರ್ತಿಶಾಲಿಯಾದ ದುಂಧುಮಾರನು ಪುತ್ರನಾಗಿದ್ದನು (೧೧-೧೨). ದುಂಧುಮಾರನ ಮಗ ಯುವನಾಶ್ವ. ಅವನ ಮಗ ಮಾಂಧಾತ. ಮಾಂಧಾತನ ಕುಮಾರ ಸುಸಂಧಿ. ಸುಸಂಧಿಗೆ ಧ್ರುವಸಂಧಿ, ಪ್ರಸೇನಜಿತ್ ಎಂಬ ಇಬ್ಬರು ಮಕ್ಕಳು. ಧ್ರುವಸಂಧಿಯ ಪುತ್ರನೇ ಭರತ ಚಕ್ರವರ್ತಿ. ಆತನ ಮಗ ಅಸಿತ (೧೩-೧೫). ಅಸಿತನಿಗೆ ಹೈಹಯರು, ತಾಲಜಂಘರು, ಶಶಿಬಿಂದುಗಳು - ಎಂಬ ಕ್ಷತ್ರಿಯರು ವೈರಿಗಳಾಗಿದ್ದರು. ಅಸಿತನು ಅವರೊಡನೆ ಯುದ್ಧಮಾಡಿ ಸೋತು ರಾಜ್ಯಭ್ರಷ್ಟನಾದನು. ಅವನು ಹಿಮಾಲಯಕ್ಕೆ ಹೋಗಿ ತಪಸ್ಸು ಮಾಡುತ್ತ ಮುನಿವೃತ್ತಿಯಲ್ಲಿರತೊಡಗಿದನು (೧೬-೧೭). ಆ ಸಮಯದಲ್ಲಿ ಆತನ ಇಬ್ಬರು ಪತ್ನಿಯರು ಗರ್ಭಿಣಿಯರಾಗಿದ್ದರೆಂದು ಕೇಳಿದ್ದೇನೆ.

ದ್ವೇ ಚಾಸ್ಯ ಭಾರ್ಯೇ ಗರ್ಭಿಣ್ಯೌ ಬಭೂವತುರಿತಿ ಶ್ರುತಿಃ ।
ಏಕಾ ಗರ್ಭವಿನಾಶಾಯ ಸಪತ್ನ್ಯೈ ಗರಲಂ ದದೌ ॥ ೧೮

ಭಾರ್ಗವಶ್ಚ್ಯವನೋ ನಾಮ ಹಿಮವಂತಮುಪಾಶ್ರಿತಃ ।
ತಮೃಷಿಂ ಸಮುಪಾಗಮ್ಯ ಕಾಲಿಂದೀ ತ್ವಭ್ಯವಾದಯತ್ ॥ ೧೯

ಸ ತಾಮಭ್ಯವದದ್ವಿಪ್ರೋ ವರೇಪ್ಸುಂ ಪುತ್ರಜನ್ಮನಿ ।
ಪುತ್ರಸ್ತೇ ಭವಿತಾ ದೇವಿ ಮಹಾತ್ಮಾ ಲೋಕವಿಶ್ರುತಃ ॥ ೨೦

ಧಾರ್ಮಿಕಶ್ಚ ಸುಶೀಲಶ್ಚ ವಂಶಕರ್ತಾರಿಸೂದನಃ ।
ಕೃತ್ವಾ ಪ್ರದಕ್ಷಿಣಂ ಸಾ ತು ಮುನಿಂ ತಮನುಮಾನ್ಯ ಚ ॥ ೨೧

ಪದ್ಮಪತ್ರಸಮಾನಾಕ್ಷಂ ಪದ್ಮಗರ್ಭಸಮಪ್ರಭಮ್ ।
ತತಃ ಸಾ ಗೃಹಮಾಗಮ್ಯ ದೇವೀ ಪುತ್ರಂ ವ್ಯಜಾಯತ ॥ ೨೨

ಸಪತ್ನ್ಯಾ ತು ಗರಸ್ತಸ್ಯೈ ದತ್ತೋ ಗರ್ಭಜಿಘಾಂಸಯಾ ।
ಗರೇಣ ಸಹ ತೇನೈವ ಜಾತಃ ಸ ಸಗರೋಽಭವತ್ ॥ ೨೩

ಅವರಲ್ಲೊಬ್ಬಳು ಗರ್ಭನಾಶವಾಗಲೆಂದು ತನ್ನ ಸವತಿಗೆ ವಿಷವನ್ನು ಹಾಕಿದಳು (೧೮). ಆ ಸಮಯದಲ್ಲಿ ಭೃಗುವಂಶೀಯನಾದ ಚ್ಯವನನೆಂಬ ಋಷಿಯು ಹಿಮಾಲಯದಲ್ಲಿದ್ದನು. ಆಗ (ವಿಷಮಿಶ್ರವಾದ ಆಹಾರವನ್ನು ಸೇವಿಸಿದ್ದ) ಕಾಲಿಂದಿಯು ಅಲ್ಲಿಗೆ ಹೋಗಿ ಚ್ಯವನನಿಗೆ ಅಭಿವಂದಿಸಿದಳು (೧೯). ತನಗೆ ಹುಟ್ಟುವ ಪುತ್ರನ ವಿಷಯದಲ್ಲಿ ವರವನ್ನು ಕಾಂಕ್ಷಿಸಿದ ಕಾಲಿಂದಿಯನ್ನು ಕುರಿತು ಆ ಋಷಿಯು "ದೇವಿ, ನಿನಗೆ ಮಹಾತ್ಮನೂ ಲೋಕವಿಖ್ಯಾತನೂ ಆಗುವ ಪುತ್ರನು ಜನಿಸುವನು. ಆತನು ಧಾರ್ಮಿಕನೂ ಶೀಲವಂತನೂ ವಂಶೋದ್ಧಾರಕನಾದ ವೀರಾಗ್ರಣಿಯೂ ಆಗುವನು" ಎಂದು ಹೇಳಿದನು. ಕಾಲಿಂದಿಯು ಚ್ಯವನನಿಗೆ ನಮಸ್ಕರಿಸಿ ಅವನ ಅನುಜ್ಞೆಯನ್ನು ಪಡೆದು ಹೊರಟು ಬಂದಳು (೨೦-೨೧). ಆ ದೇವಿಯು ತನ್ನ ನಿವಾಸಕ್ಕೆ ಬಂದು ಒಬ್ಬ ಪುತ್ರನನ್ನು ಹಡೆದಳು. ಆ ಪುತ್ರನಾದರೋ ಪದ್ಮದಳದಂತೆ ನೇತ್ರವುಳ್ಳವನೂ ಬ್ರಹ್ಮನಂತೆ ತೇಜಸ್ವಿಯೂ ಆಗಿದ್ದನು (೨೨). ಕಾಲಿಂದಿಯ ಸವತಿಯು ಗರ್ಭನಾಶವಾಗಲೆಂದು ಅವಳಿಗೆ ವಿಷವನ್ನು ಕೊಟ್ಟಿದ್ದಳಷ್ಟೆ ಆ ವಿಷದೊಡನೆ ಮಗುವು

ಸ ರಾಜಾ ಸಗರೋ ನಾಮ ಯಃ ಸಮುದ್ರಮಖಾನಯತ್ ।
ಇಷ್ಟ್ವಾ ಪರ್ವಣಿ ವೇಗೇನ ತ್ರಾಸಯಂತಮಿಮಾಃ ಪ್ರಜಾಃ ॥ ೨೪

ಅಸಮಂಜಸ್ತು ಪುತ್ರೋಽಭೂತ್ ಸಗರಸ್ಯೇತಿ ನಃ ಶ್ರುತಮ್ ।
ಜೀವನ್ನೇವ ಸ ಪಿತ್ರಾ ತು ನಿರಸ್ತಃ ಪಾಪಕರ್ಮಕೃತ್ ॥ ೨೫

ಅಂಶುಮಾನಿತಿ ಪುತ್ರೋಽಭೂದಸಮಂಜಸ್ಯ ವೀರ್ಯವಾನ್ ।
ದಿಲೀಪೋಽಂಶುಮತಃ ಪುತ್ರೋ ದಿಲೀಪಸ್ಯ ಭಗೀರಥಃ ॥ ೨೬

ಭಗೀರಥಾತ್ ಕಕುತ್ಸ್ಥಸ್ತು ಕಾಕುತ್ಸ್ಥಾ ಯೇನ ವಿಶ್ರುತಾಃ ।
ಕಕುತ್ಸ್ಥಸ್ಯ ಚ ಪುತ್ರೋಽಭೂದ್ರಘುರ್ಯೇನ ತು ರಾಘವಾಃ ॥ ೨೭

ರಘೋಸ್ತು ಪುತ್ರಸ್ತೇಜಸ್ವೀ ಪ್ರವೃದ್ಧಃ ಪುರುಷಾದಕಃ ।
ಕಲ್ಮಾಷಪಾದಃ ಸೌದಾಸ ಇತ್ಯೇವಂ ಪ್ರಥಿತೋ ಭುವಿ ॥ ೨೮

ಹುಟ್ಟಿದ್ದರಿಂದ ಅದಕ್ಕೆ ಸಗರ* ಎಂದೇ ನಾಮಕರಣವಾಯಿತು (೨೩). ಆ ಸಗರಮಹಾರಾಜನೇ ಯಾಗದೀಕ್ಷಿತನಾಗಿದ್ದಾಗ (ತನ್ನ ಪುತ್ರರಿಂದ) ಈ ಸಮುದ್ರವನ್ನು ತೋಡಿಸಿದನು. ಪರ್ವಕಾಲದಲ್ಲಿ ಅಬ್ಬರಿಸುತ್ತ ಜನರನ್ನು ಹೆದರಿಸುವ ಈ ಸಾಗರವೇ ಅದು (೨೪). ಸಗರನಿಗೆ ಅಸಮಂಜನೆಂಬ ಮಗನಿದ್ದನೆಂದು ಕೇಳಿದ್ದೇವೆ. ಅಸಮಂಜನು ಪಾಪಿಯಾದ್ದರಿಂದ ಸಗರನು ಆಜೀವಪರ್ಯಂತ ಅವನನ್ನು ದೇಶ ಭ್ರಷ್ಟನನ್ನಾಗಿ ಹೊರಡಿಸಿದನು (೨೫). ಅಸಮಂಜನಿಗೆ ಅಂಶುಮಂತನೆಂಬ ವೀರನಾದ ಪುತ್ರನೊಬ್ಬನಿದ್ದನು. ಆತನ ಮಗ ದಿಲೀಪ. ದಿಲೀಪನ ಮಗ ಭಗೀರಥ. ಆತನಿಗೆ ಕಕುತ್ಸ್ಥನೆಂಬ ಪುತ್ರನು ಜನಿಸಿದನು. ಆತನಿಂದಲೇ ನಿಮ್ಮ ವಂಶದವರು. ಕಾಕುಸ್ಥರೆಂದು ವಿಖ್ಯಾತರಾಗಿದ್ದಾರೆ (೨೬). ಆತನ ಪುತ್ರ ರಘು. ಅವನು ಪ್ರಖ್ಯಾತ ನಾದ್ದರಿಂದ ನೀವು ರಾಘವರೆಂಬ ಹೆಸರನ್ನು ಗಳಿಸಿದ್ದೀರಿ. ರಘುವಿನ ಮಗ ಪ್ರವೃದ್ಧ. ಅವನು ಪುರುಷಾದಕ, ಕಲ್ಮಾಷಪಾದ, ಸೌದಾಸ ಎಂಬ ಹೆಸರುಗಳಿಂದ ಪ್ರಸಿದ್ಧನಾದನು. ಆ ಕಲ್ಮಾಷಪಾದನಿಗೆ ಶಂಖಣನೆಂಬ ಪುತ್ರನಿದ್ದನು. ಆ ಶಂಖಣನು ತಂದೆಯಾದ ಕಲ್ಮಾಷಪಾದನನ್ನೇ ಎದುರಿಸಿ

---

* ಗರ = ವಿಷ. ಗರದಿಂದ ಸಹಿತ ಸಗರ.

ಕಲ್ಮಾಷಪಾದಪುತ್ರೋಽಭೂಚ್ಛಂಖಣಸ್ತ್ವಿತಿ ವಿಶ್ರುತಃ ।
ಯಸ್ತು ತದ್ವೀರ್ಯಮಾಸಾದ್ಯ ಸಹಸೈನ್ಯೋ ವ್ಯನೀನಶತ್ ॥ ೨೯

ಶಂಖಣಸ್ಯ ಚ ಪುತ್ರೋಽಭೂಚ್ಛೂರಃ ಶ್ರೀಮಾನ್ ಸುದರ್ಶನಃ ।
ಸುದರ್ಶನಸ್ಯಾಗ್ನಿವರ್ಣ ಅಗ್ನಿವರ್ಣಸ್ಯ ಶೀಘ್ರಗಃ ॥ ೩೦

ಶೀಘ್ರಗಸ್ಯ ಮರುಃ ಪುತ್ರೋ ಮರೋಃ ಪುತ್ರಃ ಪ್ರಶುಶ್ರುಕಃ ।
ಪ್ರಶುಶ್ರುಕಸ್ಯ ಪುತ್ರೋಽಭೂದಂಬರೀಷೋ ಮಹಾದ್ಯುತಿಃ ॥ ೩೧

ಅಂಬರೀಷಸ್ಯ ಪುತ್ರೋಽಭೂನ್ನಹುಷಃ ಸತ್ಯವಿಕ್ರಮಃ ।
ನಹುಷಸ್ಯ ಚ ನಾಭಾಗಃ ಪುತ್ರಃ ಪರಮಧಾರ್ಮಿಕಃ ॥ ೩೨

ಅಜಶ್ಚ ಸುವ್ರತಶ್ಚೈವ ನಾಭಾಗಸ್ಯ ಸುತಾವುಭೌ ।
ಅಜಸ್ಯ ಚೈವ ಧರ್ಮಾತ್ಮಾ ರಾಜಾ ದಶರಥಃ ಸುತಃ ॥ ೩೩

ಯೋ ಜಿತ್ವಾ ವಸುಧಾಂ ಕೃತ್ಸ್ನಾಂ ದಿವಂ ಶಾಸತಿ ಸ ಪ್ರಭುಃ ।
ತಸ್ಯ ಜ್ಯೇಷ್ಠೋಽಸಿ ದಾಯಾದೋ ರಾಮ ಇತ್ಯಭಿವಿಶ್ರುತಃ ॥ ೩೪

ಆತನಿಂದಲೇ ಸೇನಾಸಮೇತನಾಗಿ ನಾಶಹೊಂದಿದನು* (೨೭-೨೯). ಶಂಖಣನ ಮಗನು ಶೂರನಾದ ಸುದರ್ಶನ. ಸುದರ್ಶನನ ಮಗ ಅಗ್ನಿವರ್ಣ. ಆತನ ಮಗ ಶೀಘ್ರಗ. ಶೀಘ್ರಗನಿಗೆ ಮರುವೂ ಆತನಿಗೆ ಪ್ರಶುಕ್ರಕನೂ ಆತನಿಗೆ ಮಹಾತೇಜಸ್ವಿಯಾದ ಅಂಬರೀಷನೂ ಪುತ್ರರಾಗಿದ್ದರು (೩೦-೩೧). ಅಂಬರೀಷನ ಮಗ ಸತ್ಯಸಂಧನಾದ ನಹುಷ. ನಹುಷನ ಮಗ ಮಹಾಧಾರ್ಮಿಕನಾದ ನಾಭಾಗ. ಆತನಿಗೆ ಅಜ, ಸುವ್ರತ ಎಂಬ ಇಬ್ಬರು ಮಕ್ಕಳು. ಅಜರಾಜನ ಪುತ್ರನೇ ಧರ್ಮಾತ್ಮನಾದ ದಶರಥ (೩೨-೩೩). ಆತನು ತನ್ನ ಪರಾಕ್ರಮದಿಂದ ಸಮಸ್ತ ಭೂಮಂಡಲವನ್ನೂ ವಶಪಡಿಸಿಕೊಂಡು ಪ್ರಭುತ್ವವನ್ನು ನಡೆಸಿದ್ದಾನೆ. ದಶರಥನಿಗೆ ಜ್ಯೇಷ್ಠಪುತ್ರನಾಗಿ ಉತ್ತರಾಧಿಕಾರಿಯಾಗಿರುವ ನೀನು ರಾಮನೆಂದು ಪ್ರಖ್ಯಾತನಾಗಿದ್ದೀಯೆ (೩೪). ಆದ್ದರಿಂದ, ರಾಜಪುತ್ರ, ನೀನು

---

* ಅನುಬಂಧವನ್ನು ನೋಡಿ.

ತದ್ಗೃಹಾಣ ಸ್ವಕಂ ರಾಜ್ಯಮವೇಕ್ಷಸ್ವ ಜನಂ ನೃಪ ।
ಇಕ್ಷ್ವಾಕೂಣಾಂ ಹಿ ಸರ್ವೇಷಾಂ ರಾಜಾ ಭವತಿ ಪೂರ್ವಜಃ ॥ ೩೫

ಪೂರ್ವಜೇ ನಾವರಃ ಪುತ್ರೋ ಜ್ಯೇಷ್ಠೋ ರಾಜ್ಯೇಽಭಿಷಿಚ್ಯತೇ ॥
ಸ ರಾಘವಾಣಾಂ ಕುಲಧರ್ಮಮಾತ್ಮನಃ
ಸನಾತನಂ ನಾದ್ಯ ವಿಹಂತುಮರ್ಹಸಿ ।
ಪ್ರಭೂತರತ್ನಾಮನುಶಾಧಿ ಮೇದಿನೀಂ
ಪ್ರಭೂತರಾಷ್ಟ್ರಾಂ ಪಿತೃವನ್ಮಹಾಯಶಾಃ ॥ ೩೬

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದಶಾಧಿಕಶತತಮಃ ಸರ್ಗಃ

❂❂❂

ನಿನ್ನ ರಾಜ್ಯವನ್ನು ಆಳು. ಪ್ರಜೆಗಳನ್ನು ಪಾಲಿಸು. ನಿಮ್ಮ ಇಕ್ಷ್ವಾಕು ವಂಶದಲ್ಲಿ ಹಿರಿಯಮಗನೇ ಯಾವಾಗಲೂ ರಾಜನಾಗುತ್ತ ಬಂದಿದ್ದಾನೆ. ಹಿರಿಯಮಗನಿರುವಾಗ ಕಿರಿಯಮಗನು ಪಟ್ಟಾಭಿಷಿಕ್ತನಾಗಲಾರ. ಹಿರಿಯನೇ ಪಟ್ಟಾಭಿಷಿಕ್ತನಾಗಬೇಕು (೩೫). ಎಲೈ ಕೀರ್ತಿಶಾಲಿಯೆ, ರಘುವಂಶೋತ್ಪನ್ನರಾದ ನಿಮ್ಮ ಈ ಕುಲಧರ್ಮ ಶಾಶ್ವತವಾಗಿ ಬಂದದ್ದು. ಈಗ ನೀನು ಇದನ್ನು ತಪ್ಪಿಸುವುದು ಸರಿಯಲ್ಲ. ಅನೇಕ ಜನಪದಗಳಿಂದ ಕೂಡಿ ಸಮೃದ್ಧವಾದ ಈ ರಾಜ್ಯವನ್ನು ನಿನ್ನ ತಂದೆಯಂತೆಯೇ ಪಾಲಿಸುತ್ತಿರು'' ಎಂದು ವಸಿಷ್ಠರು ಹೇಳಿದರು (೩೬).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ನೂರಹತ್ತನೆಯ ಸರ್ಗ

❂❂❂

ಏಕಾದಶಾಧಿಕಶತತಮಃ ಸರ್ಗಃ

ಭರತಾನುಶಾಸನಮ್

ವಸಿಷ್ಠಸ್ತು ತದಾ ರಾಮಮುಕ್ತ್ವಾ ರಾಜಪುರೋಹಿತಃ ।
ಅಬ್ರವೀದ್ಧರ್ಮಸಂಯುಕ್ತಂ ಪುನರೇವಾಪರಂ ವಚಃ ॥ ೧

ಪುರುಷಸ್ಯೇಹ ಜಾತಸ್ಯ ಭವಂತಿ ಗುರುವಸ್ತ್ರಯಃ ।
ಆಚಾರ್ಯಶ್ಚೈವ ಕಾಕುತ್ಸ್ಥ ಪಿತಾ ಮಾತಾ ಚ ರಾಘವ ॥ ೨

ಪಿತಾ ಹ್ಯೇನಂ ಜನಯತಿ ಪುರುಷಂ ಪುರುಷರ್ಷಭ ।
ಪ್ರಜ್ಞಾಂ ದದಾತಿ ಚಾಚಾರ್ಯಸ್ತಸ್ಮಾತ್ ಸ ಗುರುರುಚ್ಯತೇ ॥ ೩

ಸೋಽಹಂ ತೇ ಪಿತುರಾಚಾರ್ಯಸ್ತವ ಚೈವ ಪರಂತಪ ।
ಮಮ ತ್ವಂ ವಚನಂ ಕುರ್ವನ್ನಾತಿವರ್ತೇಃ ಸತಾಂ ಗತಿಮ್ ॥ ೪

ಇಮಾ ಹಿ ತೇ ಪರಿಷದಃ ಶ್ರೇಣಯಶ್ಚ ದ್ವಿಜಾತಯಃ ।
ಏಷು ತಾತ ಚರನ್ ಧರ್ಮಂ ನಾತಿವರ್ತೇಃ ಸತಾಂ ಗತಿಮ್ ॥ ೫

ಸರ್ಗ ೧೧೧

ಅಯೋಧ್ಯೆಗೆ ಮರಳಬೇಕೆಂಬ ವಸಿಷ್ಠರ ಕೋರಿಕೆಯನ್ನು ಶ್ರೀರಾಮನು ಒಪ್ಪದೆ,
ಭರತನಿಗೆ ಬುದ್ಧಿವಾದವನ್ನು ಹೇಳುವುದು.

ರಾಜಪುರೋಹಿತರಾದ ವಸಿಷ್ಠರು ಶ್ರೀರಾಮನ ಕುಲಪದ್ಧತಿಯನ್ನು ತಿಳಿಸಿ, ಪುನಃ ಧರ್ಮಯುಕ್ತವಾದ ಮಾತುಗಳಿಂದ ಹೀಗೆಂದರು: "ರಾಘವ, ಹುಟ್ಟಿದ ಮನುಷ್ಯನಿಗೆ ಆಚಾರ್ಯ, ತಂದೆ, ತಾಯಿ-ಎಂದು ಮೂವರು ಗುರುಗಳಿರುತ್ತಾರೆ (೧-೨). ಅವರಲ್ಲಿ ತಂದೆಯೂ (ತಾಯಿಯೂ) ಮನುಷ್ಯನ ದೇಹೋತ್ಪತ್ತಿಗೆ ನಿಮಿತ್ತರು. ಆಚಾರ್ಯನಾದರೊ ಜ್ಞಾನವನ್ನು ಕೊಡುತ್ತಾನೆ. ಆದ್ದರಿಂದ ಆಚಾರ್ಯನು ಗುರುಗಳಲ್ಲಿ ಶ್ರೇಷ್ಠನೆನಿಸಿದ್ದಾನೆ (೩). ನಾನು ನಿನ್ನ ತಂದೆಗೂ ನಿನಗೂ ಆಚಾರ್ಯನಾಗಿದ್ದೇನೆ. ನೀನು ನನ್ನ ಸೂಚನೆಯಂತೆ ನಡೆದರೆ ಸಜ್ಜನರ ಮಾರ್ಗವನ್ನು ಅತಿಕ್ರಮಿಸಿದಂತಾಗುವುದಿಲ್ಲ (೪). ಈ ಬ್ರಾಹ್ಮಣರು, ಈ ಕ್ಷತ್ರಿಯ ವೈಶ್ಯರು, ಈ ಪೌರಜನರು - ಎಲ್ಲರೂ ನಿನ್ನ ಪ್ರಜೆಗಳು. ಇವರನ್ನು ಪಾಲಿಸುವುದು

ವೃದ್ಧಾಯಾ ಧರ್ಮಶೀಲಾಯಾ ಮಾತುರ್ನಾರ್ಹಸ್ಯವರ್ತಿತುಮ್ ।
ಅಸ್ಯಾಸ್ತು ವಚನಂ ಕುರ್ವನ್ನಾತಿವರ್ತೇಃ ಸತಾಂ ಗತಿಮ್ ॥ ೬

ಭರತಸ್ಯ ವಚಃ ಕುರ್ವನ್ ಯಾಚಮಾನಸ್ಯ ರಾಘವ ।
ಆತ್ಮಾನಂ ನಾತಿವರ್ತೇಸ್ತ್ವಂ ಸತ್ಯಧರ್ಮಪರಾಯಣ ॥ ೭

ಏವಂ ಮಧುರಮುಕ್ತಸ್ತು ಗುರುಣಾ ರಾಘವಃ ಸ್ವಯಮ್ ।
ಪ್ರತ್ಯುವಾಚ ಸಮಾಸೀನಂ ವಸಿಷ್ಠಂ ಪುರುಷರ್ಷಭಃ ॥ ೮

ಯನ್ಮಾತಾಪಿತರೌ ವೃತ್ತಂ ತನಯೇ ಕುರುತಃ ಸದಾ ।
ನ ಸುಪ್ರತಿಕರಂ ತತ್ತು ಮಾತ್ರಾ ಪಿತ್ರಾ ಚ ಯತ್ಕೃತಮ್ ॥ ೯

ಯಥಾಶಕ್ತಿ ಪ್ರದಾನೇನ ಸ್ನಾಪನಾಚ್ಛಾದನೇನ ಚ ।
ನಿತ್ಯಂ ಚ ಪ್ರಿಯವಾದೇನ ತಥಾ ಸಂವರ್ಧನೇನ ಚ ॥ ೧೦

ನಿನ್ನ ಧರ್ಮ. ಈ ಕರ್ತವ್ಯವನ್ನು ನೀನು ನಿರ್ವಹಿಸಿದರೆ ಸಜ್ಜನರ ಮಾರ್ಗವನ್ನು ಉಲ್ಲಂಘಿಸಿದಂತಾಗುವುದಿಲ್ಲ (೫). ಧರ್ಮಶೀಲಳಾದ ನಿನ್ನ ತಾಯಿ ವೃದ್ಧೆಯಾಗಿದ್ದಾಳೆ. ಅವಳ ಮಾತನ್ನು ಮೀರುವುದು ನಿನಗೆ ಯೋಗ್ಯವಲ್ಲ. ಅವಳ ಆಜ್ಞೆಯಂತೆ ನೀನು ನಡೆದುಕೊಂಡರೆ ಸಜ್ಜನರ ಮಾರ್ಗವನ್ನು ತ್ಯಜಿಸಿದಂತಾಗುವುದಿಲ್ಲ (೬). ನೀನು ಸತ್ಯಧರ್ಮಪರಾಯಣನೆಂಬುದು ನಿಶ್ಚಯ. ಭರತನು ಕೈಯೊಡ್ಡಿ ನಿನ್ನನ್ನು ಬೇಡಿಕೊಳ್ಳುವುದನ್ನು ನೋಡು. ಅವನ ಬೇಡಿಕೆಯನ್ನು ಸಲ್ಲಿಸಿದರೆ ನೀನು ಸನ್ಮಾರ್ಗವನ್ನು ಮೀರಿದಂತಾಗುವುದಿಲ್ಲ" ಎಂದು ನುಡಿದರು (೭). ಹೀಗೆ ಮಧುರವಚನಗಳಿಂದ ಗುರುಗಳು ಹೇಳಲಾಗಿ, ಶ್ರೀರಾಮನು ಅಲ್ಲಿ ಕುಳಿತಿದ್ದ ಆ ವಸಿಷ್ಠರನ್ನು ಕುರಿತು "ಗುರುಗಳೆ, ತಾಯಿತಂದೆಗಳು ಮಕ್ಕಳನ್ನು ಸಲಹುವುದಕ್ಕಾಗಿ ಎಷ್ಟು ಕಷ್ಟಪಡುತ್ತಾರೆ! ಅದನ್ನು ಗಮನಿಸಿದರೆ, ಯಾವ ಮಗನಿಗೂ ತಾಯಿತಂದೆಗಳ ಉಪಕಾರವನ್ನು ತೀರಿಸಲು ಸಾಧ್ಯವಿಲ್ಲವೆಂಬುದು ತಿಳಿದೀತು (೮-೯). ಶಕ್ತಿಯಿರುವಷ್ಟೂ ಪ್ರಯತ್ನಿಸಿ ಆಹಾರಾದಿಗಳನ್ನು ತಂದುಕೊಟ್ಟು ಮೈತೊಳಿಸಿ ಬಟ್ಟೆಯುಡಿಸಿ ಸತತವೂ ಮುದ್ದಾಡಿ ಹಿತವನ್ನು ಬೋಧಿಸಿ ಮಕ್ಕಳನ್ನು ಸಾಕಿ ಸಲಹಿರುತ್ತಾರೆ. ದಶರಥಮಹಾರಾಜನು ನನಗೆ

ಸ ಹಿ ರಾಜಾ ಜನಯಿತಾ ಪಿತಾ ದಶರಥೋ ಮಮ ।
ಆಜ್ಞಾತಂ ಯನ್ಮಯಾ ತಸ್ಯ ನ ತನ್ಮಿಥ್ಯಾ ಭವಿಷ್ಯತಿ ॥ ೧೧

ಏವಮುಕ್ತಸ್ತು ರಾಮೇಣ ಭರತಃ ಪ್ರತ್ಯನಂತರಮ್ ।
ಉವಾಚ ಪರಮೋದಾರಃ ಸೂತಂ ಪರಮದುರ್ಮನಾಃ ॥ ೧೨

ಇಹ ಮೇ ಸ್ಥಂಡಿಲೇ ಶೀಘ್ರಂ ಕುಶಾನಾಸ್ತರ ಸಾರಥೇ ।
ಆರ್ಯಂ ಪ್ರತ್ಯುಪವೇಕ್ಷ್ಯಾಮಿ ಯಾವನ್ಮೇ ನ ಪ್ರಸೀದತಿ ॥ ೧೩

ಅನಾಹಾರೋ ನಿರಾಲೋಕೋ ಧನಹೀನೋ ಯಥಾ ದ್ವಿಜಃ ।
ಶೇಷ್ಯೇ ಪುರಸ್ತಾಚ್ಛಾಲಾಯಾಂ ಯಾವನ್ಮಾಂ ಪ್ರತಿಯಾಸ್ಯತಿ ॥ ೧೪

ಸ ತು ರಾಮಮವೇಕ್ಷಂತಂ ಸುಮಂತ್ರಂ ಪ್ರೇಕ್ಷ್ಯ ದುರ್ಮನಾಃ ।
ಕುಶೋತ್ತರಮುಪಾಸ್ಥಾಯ ಭೂಮಾವೇವಾಸ್ಥಿತಃ ಸ್ವಯಮ್ ॥ ೧೫

ತಮುವಾಚ ಮಹಾತೇಜಾ ರಾಮೋ ರಾಜರ್ಷಿಸತ್ತಮಃ ।
ಕಿಂ ಮಾಂ ಭರತ ಕುರ್ವಾಣಂ ತಾತ ಪ್ರತ್ಯುಪವೇಕ್ಷ್ಯಸಿ ॥ ೧೬

ಜನ್ಮವನ್ನು ಕೊಟ್ಟ ತಂದೆ. (ಗುರುಗಳೆ, ಹೆಚ್ಚು ಹೇಳುವುದೇನು?) ನನ್ನ ತಂದೆಗೆ ನಾನು ಯಾವ ಮಾತು ಕೊಟ್ಟೆನೋ ಅದು ಎಂದಿಗೂ ಸುಳ್ಳಾಗದು'' ಎಂದು ಹೇಳಿಬಿಟ್ಟನು (೧೦-೧೧). ಅದನ್ನು ಕೇಳಿ ಉದಾರಶೀಲನಾದ ಭರತನಿಗೆ ಅತ್ಯಂತ ದುಃಖವಾಯಿತು. ಅವನು ಬಳಿಯಲ್ಲಿದ್ದ ಸುಮಂತ್ರನ ಕಡೆಗೆ ತಿರುಗಿ ''ಸಾರಥಿ, ಈ ನೆಲದ ಮೇಲೆ ಕೂಡಲೆ ದರ್ಭೆಗಳನ್ನು ಹರಡು. ಅಣ್ಣನು ಪ್ರಸನ್ನನಾಗುವವರೆಗೂ ಇದರಲ್ಲಿ ಮಲಗಿಬಿಡುತ್ತೇನೆ (೧೨-೧೩). ಧನಹೀನನಾದ ಬ್ರಾಹ್ಮಣನು ಸಾಲಗಾರನ ಮನೆಯ ಬಾಗಿಲಿನಲ್ಲಿ ಆಹಾರವನ್ನು ತೊರೆದು ಮುಸುಕುಹಾಕಿ ಮಲಗುವಂತೆ, ಅಣ್ಣನು ಅಯೋಧ್ಯೆಗೆ ಬರಲು ಒಪ್ಪುವವರೆಗೂ ಹಠದಿಂದ ಮಲಗುವೆನು'' ಎಂದನು (೧೪). ಸುಮಂತ್ರನು ಶ್ರೀರಾಮನ ಮುಖವನ್ನು ನೋಡುತ್ತ ಸುಮ್ಮನಿದ್ದನು. ಆಗ ಭರತನು ವಿಷಣ್ಣನಾಗಿ ತಾನೇ ಎದ್ದು ನೆಲದ ಮೇಲೆ ದರ್ಭೆಗಳನ್ನು ಹರಡಿ ಅದರ ಮೇಲೆ ಮಲಗಿಬಿಟ್ಟನು (೧೫). ಆಗ ರಾಜರ್ಷಿಗಳಲ್ಲಿ ಶ್ರೇಷ್ಠನಾಗಿ ತೇಜಸ್ಸಿನಿಂದ ಬೆಳಗುತ್ತಿದ್ದ ಶ್ರೀರಾಮನು ''ಅಪ್ಪಾ-ಭರತ, ನಾನು ಯಾವ ತಪ್ಪು ಮಾಡುತ್ತಿದ್ದೇನೆಂದು ನೀನು ಪ್ರತ್ಯುಪವೇಶವನ್ನು* ಕೈಗೊಳ್ಳುತ್ತಿದ್ದೀಯೆ? ಬ್ರಾಹ್ಮಣನು ಮಾತ್ರ ಹೀಗೆ

ಬ್ರಾಹ್ಮಣೋ ಹ್ಯೇಕಪಾರ್ಶ್ವೇನ ನರಾನ್ ರೋದ್ಧುಮಿಹಾರ್ಹತಿ।
ನ ತು ಮೂರ್ಧಾಭಿಷಿಕ್ತಾನಾಂ ವಿಧಿಃ ಪ್ರತ್ಯುಪವೇಶನೇ ॥ ೧೭

ಉತ್ತಿಷ್ಠ ನರಶಾರ್ದೂಲ ಹಿತ್ವೈತದ್ದಾರುಣಂ ವ್ರತಮ್।
ಪುರವರ್ಯಾಮಿತಃ ಕ್ಷಿಪ್ರಮಯೋಧ್ಯಾಂ ಯಾಹಿ ರಾಘವ ॥ ೧೮

ಆಸೀನಸ್ತ್ವೇವ ಭರತಃ ಪೌರಜಾನಪದಂ ಜನಮ್।
ಉವಾಚ ಸರ್ವತಃ ಪ್ರೇಕ್ಷ್ಯ ಕಿಮಾರ್ಯಂ ನಾನುಶಾಸಥ ॥ ೧೯

ತೇ ತಮೂಚುರ್ಮಹಾತ್ಮಾನಂ ಪೌರಜಾನಪದಾ ಜನಾಃ।
ಕಾಕುತ್ಸ್ಥಮಭಿಜಾನೀಮಃ ಸಮ್ಯಗ್ವದತಿ ರಾಘವಃ ॥ ೨೦

ಏಷೋಽಪಿ ಹಿ ಮಹಾಭಾಗಃ ಪಿತುರ್ವಚಸಿ ತಿಷ್ಠತಿ।
ಅತ ಏವ ನ ಶಕ್ತಾಃ ಸ್ಮೋ ವ್ಯಾವರ್ತಯಿತುಮಂಜಸಾ ॥ ೨೧

ಒಂಟಿಮಗ್ಗುಲಾಗಿ ಮಲಗಿ ಒತ್ತಾಯವನ್ನು ತರಬಹುದು. ಪಟ್ಟಾಭಿಷೇಕಕ್ಕೆ ಅರ್ಹರಾದ ಕ್ಷತ್ರಿಯರಿಗೆ ಇದು ಅನುಚಿತ (೧೬-೧೭). ಎಲೈ ಪುರುಷಶ್ರೇಷ್ಠನೆ, ಈ ಕಠೋರವಾದ ವ್ರತವನ್ನು ಬಿಟ್ಟುಬಿಡು. ಮೇಲೇಳು, ರಾಜಧಾನಿಯಾದ ಅಯೋಧ್ಯೆಗೆ ಹೋಗು " ಎಂದನು (೧೮). ಆಗ ಭರತನು ನೆಲದ ಮೇಲೆ ಮಲಗಿಕೊಂಡೇ ಸುತ್ತಲೂ ನೆರೆದಿದ್ದ ಪ್ರಜೆಗಳನ್ನು ನೋಡುತ್ತ "ನೀವಾದರೂ ಅಣ್ಣನನ್ನು ಒತ್ತಾಯಪಡಿಸಬಾರದೆ? (ಏಕೆ ಸುಮ್ಮನಿದ್ದೀರಿ?)" ಎಂದು ಕೇಳಿದನು (೧೯). ಆಗ ಆ ಜನರು ಮಹಾತ್ಮನಾದ ಭರತನಿಗೆ "ರಾಜಕುಮಾರ, ಶ್ರೀರಾಮನನ್ನು ನಾವು ಚೆನ್ನಾಗಿ ಬಲ್ಲೆವು. ರಘುವಂಶೋತ್ಪನ್ನನಾದ ಈತನು ಹೇಳುವುದೂ ಯುಕ್ತವಾಗಿದೆ. ಈ ಮಹಾತ್ಮನಾದರೊ ಪಿತೃವಾಕ್ಯ ಪರಿಪಾಲನೆಯಲ್ಲಿ ದೃಢನಿಷ್ಠನಾಗಿದ್ದಾನೆ. ಅದು ಯುಕ್ತವೇ ಸರಿ. ಆದ್ದರಿಂದ ಇವನನ್ನು ಹಿಂದಿರುಗಿಸಲು ನಮಗೆ ಶಕ್ತಿಯಿಲ್ಲ" ಎಂದರು (೨೦-೨೧). ಆಗ ಶ್ರೀರಾಮನು

---

* ಪ್ರತ್ಯುಪವೇಶ = ಯಾವುದಾದರೊಂದುಕಾರ್ಯವನ್ನು ಸಾಧಿಸುವುದಕ್ಕಾಗಿ ದರ್ಭೆಯ ಮೇಲೆ ಒಂಟಿಮಗ್ಗುಲಿನಲ್ಲಿ ಮುಸುಕುಹಾಕಿ ಹೊರಳದೆ ನಿರಾಹಾರವಾಗಿ ಮಲಗುವುದು ; 'ಸತ್ಯಾಗ್ರಹ'.

ತೇಷಾಮಾಜ್ಞಾಯ ವಚನಂ ರಾಮೋ ವಚನಮಬ್ರವೀತ್ ।
ಏತನ್ನಿಬೋಧ ವಚನಂ ಸುಹೃದಾಂ ಧರ್ಮಚಕ್ಷುಷಾಮ್ ॥ ೨೨

ಏತಚ್ಚೈವೋಭಯಂ ಶ್ರುತ್ವಾ ಸಮ್ಯಕ್ ಸಂಪಶ್ಯ ರಾಘವ ।
ಉತ್ತಿಷ್ಠ ತ್ವಂ ಮಹಾಬಾಹೋ ಮಾಂ ಚ ಸ್ಪೃಶ ತಥೋದಕಮ್ ॥ ೨೩

ಅಥೋತ್ಥಾಯ ಜಲಂ ಸ್ಪೃಷ್ಟ್ವಾ ಭರತೋ ವಾಕ್ಯಮಬ್ರವೀತ್ ।
ಶೃಣ್ವಂತು ಮೇ ಪರಿಷದೋ ಮಂತ್ರಿಣಃ ಶ್ರೇಣಯಸ್ತಥಾ ॥ ೨೪

ನ ಯಾಚೇ ಪಿತರಂ ರಾಜ್ಯಂ ನಾನುಶಾಸಾಮಿ ಮಾತರಮ್ ।
ಆರ್ಯಂ ಪರಮಧರ್ಮಜ್ಞಂ ನಾನುಜಾನಾಮಿ ರಾಘವಮ್ ॥ ೨೫

ಯದಿ ತ್ವವಶ್ಯಂ ವಸ್ತವ್ಯಂ ಕರ್ತವ್ಯಂ ಚ ಪಿತುರ್ವಚಃ ।
ಅಹಮೇವ ನಿವತ್ಸ್ಯಾಮಿ ಚತುರ್ದಶ ಸಮಾ ವನೇ ॥ ೨೬

ಅವರ ಮಾತುಗಳನ್ನು ಕೇಳಿ ಸಂತೋಷದಿಂದ ''ಭರತ, ಇವರ ಮಾತನ್ನು ಕೇಳು. ಇವರೆಲ್ಲರೂ ನಮಗೆ ಆಪ್ತರು; ಧರ್ಮದೃಷ್ಟಿಯುಳ್ಳವರು. ನನ್ನ ಮಾತನ್ನೂ ಇವರ ಮಾತನ್ನೂ ಲಾಲಿಸಿ ನೀನೇ ವಿಚಾರಮಾಡು. ಮೇಲೇಳು. (ಪ್ರಾಯಶ್ಚಿತ್ತಾರ್ಥವಾಗಿ) ಶುದ್ಧಜಲವನ್ನು ಸ್ಪರ್ಶಿಸಿ ಆಚಮನ ಮಾಡಿ ನನ್ನನ್ನು ಸ್ಪರ್ಶಿಸು'' ಎಂದು ನುಡಿದನು (೨೨-೨೩). ಅನಂತರ ಭರತನು ಎದ್ದು ಆಚಮನಮಾಡಿ ಶ್ರೀರಾಮನನ್ನು ಸ್ಪರ್ಶಿಸಿ ಅಲ್ಲಿ ನೆರೆದಿದ್ದವರ ಕಡೆಗೆ ತಿರುಗಿ ''ಎಲೈ ಬ್ರಾಹ್ಮಣೋತ್ತಮರೆ, ಮಂತ್ರಿಗಳೆ, ಪ್ರಜೆಗಳೆ! ಎಲ್ಲರೂ ಕೇಳಿರಿ! ನನಗೆ ರಾಜ್ಯ ಬೇಕೆಂದು ನಾನು ತಂದೆಯನ್ನು ಕೇಳಿಕೊಳ್ಳಲೂ ಇಲ್ಲ! ತಾಯಿಯನ್ನು ನಿರ್ಬಂಧಿಸಲೂ ಇಲ್ಲ! ಧರ್ಮಿಷ್ಠನಾದ ಅಣ್ಣನು ಹೀಗೆ ವನವಾಸಕ್ಕೆ ಹೋಗಲು ನಾನು ಅನುಮತಿಸಲೂ ಇಲ್ಲ! (೨೪-೨೫). ವನವಾಸವನ್ನು ಮಾಡಲೇಬೇಕಾದರೆ - ತಂದೆಯ ಮಾತನ್ನು ನಡೆಸಲೇ ಬೇಕಾದರೆ, ನಾನೇ ಹದಿನಾಲ್ಕುವರ್ಷಗಳ ಕಾಲ ಅರಣ್ಯದಲ್ಲಿರುತ್ತೇನೆ!'' ಎಂದು ಘೋಷಿಸಿದನು (೨೬). ತಮ್ಮನ ಘೋಷಣೆಯನ್ನು ಕೇಳಿ ಶ್ರೀರಾಮನು ಬೆರಗಾದನು! ಆತನು ಪ್ರಜೆಗಳನ್ನು

ಧರ್ಮಾತ್ಮಾ ತಸ್ಯ ತಥ್ಯೇನ ಭ್ರಾತುರ್ವಾಕ್ಯೇನ ವಿಸ್ಮಿತಃ ।
ಉವಾಚ ರಾಮಃ ಸಂಪ್ರೇಕ್ಷ್ಯ ಪೌರಜಾನಪದಂ ಜನಮ್ ॥ ೨೭

ವಿಕ್ರೀತಮಾಹಿತಂ ಕ್ರೀತಂ ಯತ್ ಪಿತ್ರಾ ಜೀವತಾ ಮಮ ।
ನ ತಲ್ಲೋಪಯಿತುಂ ಶಕ್ಯಂ ಮಯಾ ವಾ ಭರತೇನ ವಾ ॥ ೨೮

ಉಪಧಿರ್ನ ಮಯಾ ಕಾರ್ಯೋ ವನವಾಸೇ ಜುಗುಪ್ಸಿತಃ ।
ಯುಕ್ತಮುಕ್ತಂ ಚ ಕೈಕೇಯ್ಯಾ ಪಿತ್ರಾ ಮೇ ಸುಕೃತಂ ಕೃತಮ್ ॥ ೨೯

ಜಾನಾಮಿ ಭರತಂ ಕ್ಷಾಂತಂ ಗುರುಸತ್ಕಾರಕಾರಿಣಮ್ ।
ಸರ್ವಮೇವಾತ್ರ ಕಲ್ಯಾಣಂ ಸತ್ಯಸಂಧೇ ಮಹಾತ್ಮನಿ ॥ ೩೦

ಅನೇನ ಧರ್ಮಶೀಲೇನ ವನಾತ್ ಪ್ರತ್ಯಾಗತಃ ಪುನಃ ।
ಭ್ರಾತ್ರಾ ಸಹ ಭವಿಷ್ಯಾಮಿ ಪೃಥಿವ್ಯಾಃ ಪತಿರುತ್ತಮಃ ॥ ೩೧

ನೋಡುತ್ತ ಹೀಗೆಂದನು: ''ನನ್ನ ತಂದೆ ಬದುಕಿರುವಾಗ ಯಾವುದನ್ನು ಮಾರಿದನೊ, ಒತ್ತೆಯಿಟ್ಟನೊ ಅಥವಾ ಕೊಂಡುಕೊಂಡನೊ, ಅದನ್ನು ಅಳಿಸಿಹಾಕಲು ನನಗೂ ಸಾಧ್ಯವಿಲ್ಲ, ಭರತನಿಗೂ ಸಾಧ್ಯವಿಲ್ಲ (೨೭-೨೮). ನಾನು ಮಾಡಬೇಕಾದ ವನವಾಸವನ್ನು ಇನ್ನೊಬ್ಬನು ಮಾಡುವಂತೆ ಪ್ರತಿನಿಧಿಯನ್ನು ಗೊತ್ತುಮಾಡಲಾರೆ. ಹೀಗೆ ಗೊತ್ತು ಮಾಡುವುದು ತುಚ್ಛವಾದ ಕಾರ್ಯ. ಕೈಕೇಯೀದೇವಿಯು ಸಲ್ಲಬೇಕಾದ ವರವನ್ನು ಕೇಳಿಕೊಂಡಳು. ನಮ್ಮ ತಂದೆಯು ಸಲ್ಲಿಸಬೇಕಾದ್ದಕ್ಕೆ 'ಅಸ್ತು' ಎಂದನು. ಆಕೆಯು ಕೇಳಿದ್ದು ಈತನು ಮಾಡಿದ್ದು ಎರಡೂ ಯುಕ್ತವೇ (೨೯). ಭರತನು ಎಂಥ ಕ್ಷಮಾಶೀಲನೆಂಬುದೂ ಗುರುಹಿರಿಯರಲ್ಲಿ ಅವನಿಗೆ ಎಷ್ಟು ಭಕ್ತಿ ಇದೆಯೆಂಬುದೂ ನನಗೆ ಗೊತ್ತಿದೆ. ಸತ್ಯಸಂಧನಾದ ಈ ಮಹಾತ್ಮನಲ್ಲಿ ಕಲ್ಯಾಣಕರಗಳಾದ ಸಮಸ್ತ ಸದ್ಗುಣಗಳೂ ನೆಲೆಸಿವೆ (೩೦). (ಒಳ್ಳೆಯದು) ನಾನು ವನವಾಸವನ್ನು ಮುಗಿಸಿ ಪುನಃ ಬರುವೆನು. ಧರ್ಮಶೀಲನಾದ ಈ ತಮ್ಮನೊಡನೆ ಸೇರಿ ಕೋಸಲರಾಜ್ಯಕ್ಕೆ ಅಧಿಪತಿಯಾಗುವೆನು. ಕೈಕೇಯಿಯು ಮಹಾರಾಜನೊಡನೆ ಈ ರೀತಿ ವರವನ್ನು

ವೃತೋ ರಾಜಾ ಹಿ ಕೈಕೇಯ್ಯಾ ಮಯಾ ತದ್ವಚನಂ ಕೃತಮ್ ।
ಅನೃತಾನ್ಮೋಚಯಾನೇನ ಪಿತರಂ ತಂ ಮಹೀಪತಿಮ್ ॥ ೩೨

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ
ಏಕಾದಶಾಧಿಕಶತತಮಃ ಸರ್ಗಃ

ದ್ವಾದಶಾಧಿಕಶತತಮಃ ಸರ್ಗಃ

ಪಾದುಕಾಪ್ರದಾನಮ್

ತಮಪ್ರತಿಮತೇಜೋಭ್ಯಾಂ ಭ್ರಾತೃಭ್ಯಾಂ ರೋಮಹರ್ಷಣಮ್ ।
ವಿಸ್ಮಿತಾಃ ಸಂಗಮಂ ಪ್ರೇಕ್ಷ್ಯ ಸಮವೇತಾ ಮಹರ್ಷಯಃ ॥ ೧

ಅಂತರ್ಹಿತಾಸ್ತ್ವೃಷಿಗಣಾಃ ಸಿದ್ಧಾಶ್ಚ ಪರಮರ್ಷಯಃ ।
ತೌ ಭ್ರಾತರೌ ಮಹಾತ್ಮಾನೌ ಕಾಕುತ್ಸ್ಥೌ ಪ್ರಶಶಂಸಿರೇ ॥ ೨

ಕೇಳಿಕೊಂಡಳು. ಆದ್ದರಿಂದ ತಂದೆಯನ್ನು ಅನೃತವಚನದಿಂದ ತಪ್ಪಿಸುವುದಕ್ಕಾಗಿ, ನಾನು ಅವಳ ಮಾತಿನಂತೆ ಹೀಗೆ ಅರಣ್ಯಕ್ಕೆ ಬಂದೆನು'' ಎಂದು ಹೇಳಿದನು (೩೧-೩೨).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ನೂರಹನ್ನೊಂದನೆಯ ಸರ್ಗ

ಸರ್ಗ ೧೧೨

ಶ್ರೀರಾಮನ ನಿಲುವನ್ನು ಕಂಡು ಮಹರ್ಷಿಗಳ ಮೆಚ್ಚಿಗೆ. ಭರತನಿಗೆ ಶ್ರೀರಾಮನು ಪಾದುಕೆಗಳನ್ನು ಕೊಡುವುದು.

ಮಹಾತೇಜಸ್ವಿಗಳಾದ ಆ ಅಣ್ಣತಮ್ಮಂದಿರು ಹೀಗೆ ಕಲೆತು ಸಂಭಾಷಿಸುವುದನ್ನು ಕೇಳಿ, ಅಲ್ಲಿದ್ದ ಮಹರ್ಷಿಗಳು ರೋಮಾಂಚಗೊಂಡು ವಿಸ್ಮಿತರಾದರು (೧). ಆ ಸ್ಥಳದಲ್ಲಿ ಅದೃಶ್ಯರಾಗಿ ಬಂದು ನೆರೆದಿದ್ದ ರಾಜರ್ಷಿಗಳೂ ದೇವರ್ಷಿಗಳೂ ಸಿದ್ಧಪುರುಷರೂ ಕಕುತ್ಸ್ಥವಂಶತಿಲಕರಾದ ಶ್ರೀರಾಮಭರತರನ್ನು ಕೊಂಡಾಡಿದರು (೨) : ''ಆಹಾ!

ಸ ಧನ್ಯೋ ಯಸ್ಯ ಪುತ್ರೌ ದ್ವೌ ಧರ್ಮಜ್ಞೌ ಧರ್ಮವಿಕ್ರಮೌ ।
ಶ್ರುತ್ವಾ ವಯಂ ಹಿ ಸಂಭಾಷಾಮುಭಯೋಃ ಸ್ಪೃಹಯಾಮಹೇ ॥ ೩

ತತಸ್ತ್ವೃಷಿಗಣಾಃ ಕ್ಷಿಪ್ರಂ ದಶಗ್ರೀವವಧೈಷಿಣಃ ।
ಭರತಂ ರಾಜಶಾರ್ದೂಲಮಿತ್ಯೂಚುಃ ಸಂಗತಾ ವಚಃ ॥ ೪

ಕುಲೇ ಜಾತ ಮಹಾಪ್ರಾಜ್ಞ ಮಹಾವೃತ್ತ ಮಹಾಯಶಃ ।
ಗ್ರಾಹ್ಯಂ ರಾಮಸ್ಯ ವಾಕ್ಯಂ ತೇ ಪಿತರಂ ಯದ್ಯವೇಕ್ಷಸೇ ॥ ೫

ಸದಾನೃಣಮಿಮಂ ರಾಮಂ ವಯಮಿಚ್ಛಾಮಹೇ ಪಿತುಃ ।
ಅನೃಣತ್ವಾಚ್ಚ ಕೈಕೇಯ್ಯಾಃ ಸ್ವರ್ಗಂ ದಶರಥೋ ಗತಃ ॥ ೬

ಏತಾವದುಕ್ತ್ವಾ ವಚನಂ ಗಂಧರ್ವಾಃ ಸಮಹರ್ಷಯಃ ।
ರಾಜರ್ಷಯಶ್ಚೈವ ತದಾ ಸರ್ವೇ ಸ್ವಾಂ ಸ್ವಾಂ ಗತಿಂ ಗತಾಃ ॥ ೭

ಹ್ಲಾದಿತಸ್ತೇನ ವಾಕ್ಯೇನ ಶುಭೇನ ಶುಭದರ್ಶನಃ ।
ರಾಮಃ ಸಂಹೃಷ್ಟವದನಸ್ತಾನೃಷೀನಭ್ಯಪೂಜಯತ್ ॥ ೮

ಧರ್ಮಜ್ಞರೂ ಧರ್ಮನಿಷ್ಠರೂ ಆದ ಈ ಇಬ್ಬರು ಮಕ್ಕಳನ್ನು ಪಡೆದ ತಂದೆಯೇ ಧನ್ಯ! ಇವರ ಸಂಬಾಷಣೆಯನ್ನು ಕೇಳಿ, (ನಮಗೆ ಪರಮಾನಂದವಾಯಿತು) 'ಇವರನ್ನು ಮತ್ತೆ ಮತ್ತೆ ನೋಡೋಣ! ಮಾತನ್ನು ಕೇಳೋಣ!' ಎಂದು ಆಸೆಯಾಗುತ್ತದೆ ಎಂದು ಹೇಳಿಕೊಂಡರು (೩). ಅನಂತರ ಅವರೆಲ್ಲರೂ ಆದಷ್ಟು ಬೇಗನೆ ರಾವಣ ವಧೆಯು ನಡೆಯಲೆಂಬ ಉದ್ದೇಶವನ್ನಿಟ್ಟುಕೊಂಡು ಏಕಕಂಠದಿಂದ ಹೀಗೆಂದರು: ''ಭರತ, ನೀನು ಸತ್ಕುಲಪ್ರಸೂತನಾಗಿದ್ದೀಯೆ. ವಿವೇಕಿಯೂ ಸಚ್ಚಾರಿತ್ರನೂ ಆಗಿದ್ದೀಯೆ. ಮಹಾಕೀರ್ತಿಶಾಲಿ ನೀನು (೪-೫). ನಿನ್ನ ತಂದೆಗೆ ಶ್ರೇಯಸ್ಸನ್ನು ಬಯಸುವುದಾದರೆ, ರಾಮನ ಮಾತನ್ನು ನೀನು ಒಪ್ಪ ಬೇಕು. ರಾಮನು ತಂದೆಯ ಆಜ್ಞೆಯಂತೆ ನಡೆದು ಋಣಮುಕ್ತನಾಗಲೆಂಬುದು ನಮ್ಮ ಬಯಕೆ. (ರಾಮನು ವನವಾಸ ಮಾಡುತ್ತೇನೆಂದು ಪ್ರತಿಜ್ಞೆ ಮಾಡಿದ್ದರಿಂದ) ದಶರಥನು ಕೈಕೇಯಿಯ ಋಣದಿಂದ ಮುಕ್ತನಾಗಿ ಸ್ವರ್ಗಲೋಕವನ್ನು ಪಡೆದಿದ್ದಾನೆ'' ಎಂದು ಹೇಳಿ ಗಂಧರ್ವರೂ ದೇವರ್ಷಿ ರಾಜರ್ಷಿಗಳೂ ತಮ್ಮ ತಮ್ಮ ಸ್ಥಾನಗಳಿಗೆ ಹೊರಟುಹೋದರು (೬-೭). ಅವರ ಶುಭವಾಕ್ಯವನ್ನು ಕೇಳಿ ಹರ್ಷದಿಂದ ಶ್ರೀರಾಮನ ಮುಖವು ಅರಳಿತು. ಅವನು

ತ್ರಸ್ತಗಾತ್ರಸ್ತು ಭರತಃ ಸ ವಾಚಾ ಸಜ್ಜಮಾನಯಾ ।
ಕೃತಾಂಜಲಿರಿದಂ ವಾಕ್ಯಂ ರಾಘವಂ ಪುನರಬ್ರವೀತ್ ॥ ೯

ರಾಜಧರ್ಮಮನುಪ್ರೇಕ್ಷ್ಯ ಕುಲಧರ್ಮಾನುಸಂತತಿಮ್ ।
ಕರ್ತುಮರ್ಹಸಿ ಕಾಕುತ್ಸ್ಥ ಮಮ ಮಾತುಶ್ಚ ಯಾಚನಾಮ್ ॥ ೧೦

ರಕ್ಷಿತುಂ ಸುಮಹದ್ರಾಜ್ಯಮಹಮೇಕಸ್ತು ನೋತ್ಸಹೇ ।
ಪೌರಜಾನಪದಾಂಶ್ಚಾಪಿ ರಕ್ತಾನ್ ರಂಜಯಿತುಂ ತಥಾ ॥ ೧೧

ಜ್ಞಾತಯಶ್ಚ ಹಿ ಯೋಧಾಶ್ಚ ಮಿತ್ರಾಣಿ ಸುಹೃದಶ್ಚ ನಃ ।
ತ್ವಾಮೇವ ಪ್ರತಿಕಾಂಕ್ಷಂತೇ ಪರ್ಜನ್ಯಮಿವ ಕರ್ಷಕಾಃ ॥ ೧೨

ಇದಂ ರಾಜ್ಯಂ ಮಹಾಪ್ರಾಜ್ಞಸ್ಥಾಪಯ ಪ್ರತಿಪದ್ಯ ಹಿ ।
ಶಕ್ತಿಮಾನಸಿ ಕಾಕುತ್ಸ್ಥ ಲೋಕಸ್ಯ ಪರಿಪಾಲನೇ ॥ ೧೩

ಇತ್ಯುಕ್ತ್ವಾ ನ್ಯಪತದ್ಭ್ರಾತುಃ ಪಾದಯೋರ್ಭರತಸ್ತದಾ ।
ಭೃಶಂ ಸಂಪ್ರಾರ್ಥಯಾಮಾಸ ರಾಮಮೇವ ಪ್ರಿಯಂವದಃ ॥ ೧೪

ಸಂತೋಷದಿಂದ (ಮಹಾತ್ಮರೆ, ನನ್ನನ್ನು ಧರ್ಮಸಂಕಟದಿಂದ ಪಾರುಮಾಡಿದಿರಿ ಎಂದು) ಆ ಋಷಿಗಳನ್ನು ಸ್ತುತಿಸಿದನು (೮). ಆದರೆ ಭರತನಿಗೆ ನಡುಕ ಹುಟ್ಟಿತು. ಅವನು ಕೈಮುಗಿದುಕೊಂಡು ಗದ್ಗದ ಸ್ವರದಿಂದ ರಾಘವನನ್ನು ಕುರಿತು ಹೀಗೆ ಹೇಳಿದನು :''ಶ್ರೀರಾಮ, ರಾಜಧರ್ಮವನ್ನೂ ಪರಂಪರೆಯಿಂದ ಬಂದ ನಮ್ಮ ಕುಲಧರ್ಮವನ್ನು ಪರಿಶೀಲಿಸು. ಈಗ ನನ್ನ ತಾಯಿಯು ಬೇಡಿಕೊಳ್ಳುತ್ತಿರುವುದನ್ನು ನೋಡು. ಅವಳ ಯಾಚನೆಯನ್ನು ನಡೆಸಿಕೊಡು (೯-೧೦). ವಿಶಾಲವಾದ ಈ ರಾಜ್ಯವನ್ನು ರಕ್ಷಿಸುವುದಕ್ಕೂ ಅನುರಕ್ತನಾದ ಈ ಪ್ರಜೆಗಳನ್ನು ಸಂತೋಷಪಡಿಸುವುದಕ್ಕೂ ನನ್ನ ಕೈಯಿಂದಾಗದು. ನಮ್ಮ ಬಂಧುಗಳೂ ಸೈನಿಕರೂ ಮಿತ್ರರೂ ಆಪ್ತರೂ – ಎಲ್ಲರೂ ನಿನ್ನನ್ನು ಎದುರುನೋಡುತ್ತಿದ್ದಾರೆ. ಬೇಸಾಯಗಾರರು ಮೋಡವನ್ನು ಕಾಯುತ್ತಿರುವಂತೆ ನಿನ್ನ ಬರವನ್ನು ಕಾದುಕೊಂಡಿದ್ದಾರೆ (೧೧-೧೨). ಪ್ರಾಜ್ಞನಾದ ನಿನಗೆ ನಾನು ಹೇಳತಕ್ಕದ್ದೇನಿದೆ? ರಾಜ್ಯವನ್ನು ಸ್ವೀಕರಿಸಿ ಅದನ್ನು ಸ್ಥಿರವಾಗಿ ನಿಲ್ಲಿಸು. ಶ್ರೀರಾಮ, ಈ ರಾಜ್ಯವನ್ನಾಳಲು ನೀನೇ ಸಮರ್ಥ'' ಎಂದು ಹೇಳಿ, ಭರತನು ಅಣ್ಣನ ಎರಡು ಪಾದಗಳನ್ನು ಹಿಡಿದುಕೊಂಡನು. ಮತ್ತೆ ಮತ್ತೆ ವಿನಯವಚನದಿಂದ ಬೇಡಿಕೊಂಡನು

ತಮಂಕೇ ಭ್ರಾತರಂ ಕೃತ್ವಾ ರಾಮೋ ವಚನಮಬ್ರವೀತ್ ।
ಶ್ಯಾಮಂ ನಲಿನಪತ್ರಾಕ್ಷಂ ಮತ್ತಹಂಸಸ್ವರಃ ಸ್ವಯಮ್ ॥ ೧೫

ಆಗತಾ ತ್ವಾಮಿಯಂ ಬುದ್ಧಿಃ ಸ್ವಜಾ ವೈನಯಿಕೀ ಚ ಯಾ ।
ಭೃಶಮುತ್ಸಹಸೇ ತಾತ ರಕ್ಷಿತುಂ ಪೃಥಿವೀಮಪಿ ॥ ೧೬

ಅಮಾತ್ಯೈಶ್ಚ ಸುಹೃದ್ಭಿಶ್ಚ ಬುದ್ಧಿಮದ್ಭಿಶ್ಚ ಮಂತ್ರಿಭಿಃ ।
ಸರ್ವಕಾರ್ಯಾಣಿ ಸಂಮಂತ್ರ್ಯ ಸುಮಹಾಂತ್ಯಪಿ ಕಾರಯ ॥ ೧೭

ಲಕ್ಷ್ಮೀಶ್ಚಂದ್ರಾದಪೇಯಾದ್ವಾ ಹಿಮವಾನ್ ವಾ ಹಿಮಂ ತ್ಯಜೇತ್ ।
ಅತೀಯಾತ್ ಸಾಗರೋ ವೇಲಾಂ ನ ಪ್ರತಿಜ್ಞಾಮಹಂ ಪಿತುಃ ॥ ೧೮

ಕಾಮಾದ್ವಾ ತಾತ ಲೋಭಾದ್ವಾ ಮಾತ್ರಾ ತುಭ್ಯಮಿದಂ ಕೃತಮ್ ।
ನ ತನ್ಮನಸಿ ಕರ್ತವ್ಯಂ ವರ್ತಿತವ್ಯಂ ಚ ಮಾತೃವತ್ ॥ ೧೯

(೧೩-೧೪). ಆಗ ಶ್ರೀರಾಮನು ಶ್ಯಾಮಲಾಂಗನೂ ಪದ್ಮದಳಾಯತಾಕ್ಷನೂ ಆದ ಭರತನನ್ನು ತನ್ನ ತೊಡೆಯಮೇಲೆ ಕುಳ್ಳಿರಿಸಿಕೊಂಡು ಮದಿಸಿದ ಹಂಸಪಕ್ಷಿಯ ಸ್ವರದಂತೆ ಮಧುರವಾದ ಸ್ವರದಿಂದ ಹೀಗೆಂದನು (೧೫) : "ತಮ್ಮ - ಭರತ, ಈ ಬಗೆಯ ಸದ್ಬುದ್ಧಿ ಸಹಜವಾಗಿ ನಿನಗೆ ಬಂದಿದೆ. ಗುರುಹಿರಿಯರ ಸೇವೆಯಿಂದ ಅದು ಪರಿಷ್ಕೃತವಾಗಿದೆ. ಆದ್ದರಿಂದ ಈ ಭೂಮಂಡಲವನ್ನೇ ಪಾಲಿಸುವ ಸಾಮರ್ಥ್ಯ ನಿನ್ನಲ್ಲುಂಟು (೧೬). ನೀನು ಆಪ್ತರೂ ಬುದ್ಧಿವಂತರೂ ಆದ ಪ್ರಧಾನ ಮಂತ್ರಿಗಳೊಡನೆಯೂ ಉಪಮಂತ್ರಿ ಗಳೊಡನೆಯೂ ಸಮಸ್ತರಾಜ ಕಾರ್ಯವನ್ನೂ ಪರ್ಯಾಲೋಚಿಸಿ ನಡೆಸು. ಮಹತ್ತರವಾದ ಕಾರ್ಯವನ್ನೂ ಮಂತ್ರಿಗಳ ಸಹಾಯದಿಂದ ನೀನು ಸಾಧಿಸಬಹುದು (೧೭). ಭರತ, ಒಂದು ವೇಳೆ ಚಂದ್ರನಿಂದ ಚಂದ್ರಿಕೆಯು ಬೇರೆಯಾದೀತು, ಹಿಮವಂತನು ಹಿಮವನ್ನು ತ್ಯಜಿಸಿಯಾನು, ಸಮುದ್ರವು ತನ್ನ ಮೇರೆಯನ್ನು ಅತಿಕ್ರಮಿಸೀತು, ನಾನು ಮಾತ್ರ ತಂದೆಗೆ ಮಾಡಿಕೊಟ್ಟ ಪ್ರತಿಜ್ಞೆಯನ್ನು ಎಂದಿಗೂ ಮೀರಿ ನಡೆಯಲಿಕ್ಕಿಲ್ಲ (೧೮). ನಿನ್ನ ಮೇಲಿನ ಪ್ರೀತಿಯಿಂದಲೋ ರಾಜ್ಯದ ಆಸೆಯಿಂದಲೊ ನಿನ್ನ ತಾಯಿ ಹೀಗೆ ಮಾಡಿರಬಹುದು. ಆದರೆ ಅದನ್ನು ನೀನು ಸರ್ವಥಾ ಮನಸ್ಸಿನಲ್ಲಿಟ್ಟು ಕೊಳ್ಳದೆ ತಾಯಿಯೆಂಬ ಒಂದೇ ಭಾವನೆಯಿಂದ ಅವಳನ್ನು ಗೌರವಿಸು"

ಏವಂ ಬ್ರುವಾಣಂ ಭರತಃ ಕೌಸಲ್ಯಾಸುತಮಬ್ರವೀತ್ ।
ತೇಜಸಾದಿತ್ಯಸಂಕಾಶಂ ಪ್ರತಿಪಚ್ಚಂದ್ರದರ್ಶನಮ್ ॥ ೨೦

ಅಧಿರೋಹಾರ್ಯ ಪಾದಾಭ್ಯಾಂ ಪಾದುಕೇ ಹೇಮಭೂಷಿತೇ ।
ಏತೇ ಹಿ ಸರ್ವಲೋಕಸ್ಯ ಯೋಗಕ್ಷೇಮಂ ವಿಧಾಸ್ಯತಃ ॥ ೨೧

ಸೋಽಧಿರುಹ್ಯ ನರವ್ಯಾಘ್ರಃ ಪಾದುಕೇ ವ್ಯವಮುಚ್ಯ ಚ ।
ಪ್ರಾಯಚ್ಛತ್ ಸುಮಹಾತೇಜಾ ಭರತಾಯ ಮಹಾತ್ಮನೇ ॥ ೨೨

ಸ ಪಾದುಕೇ ಸಂಪ್ರಣಮ್ಯ ರಾಮಂ ವಚನಮಬ್ರವೀತ್ ।
ಚತುರ್ದಶ ಹಿ ವರ್ಷಾಣಿ ಜಟಾಚೀರಧರೋ ಹ್ಯಹಮ್ ॥ ೨೩

ಫಲಮೂಲಾಶನೋ ವೀರ ಭವೇಯಂ ರಘುನಂದನ ।
ತವಾಗಮನಮಾಕಾಂಕ್ಷನ್ ವಸನ್ ವೈ ನಗರಾದ್ಬಹಿಃ ॥ ೨೪

ಎಂದನು (೧೯). ಅನಂತರ ಭರತನು (ಶ್ರೀರಾಮನು ಮುಂದೆ ಎರಡು ಪಾದುಕೆಗಳನ್ನಿಟ್ಟು) ಆದಿತ್ಯನಂತೆ ತೇಜಸ್ವಿಯೂ ಪಾಡ್ಯದ ಚಂದ್ರನಂತೆ* ವರ್ಧಿಷ್ಣುವೂ ಆದ ಕೌಸಲ್ಯಾತನಯನನ್ನು ಕುರಿತು, ''ಅಣ್ಣ, ಸುವರ್ಣಭೂಷಿತವಾದ ಈ ಪಾದುಕೆಗಳ ಮೇಲೆ ನಿನ್ನ ಪಾದಗಳನ್ನಿಡು. ಈ ಪಾದುಕೆಗಳೇ ಸಮಸ್ತಲೋಕದ ಯೋಗಕ್ಷೇಮಗಳನ್ನೂ ನಿರ್ವಹಿಸುತ್ತವೆ' ಎಂದು ಹೇಳಿದನು** (೨೦-೨೧). ಆಗ ಪುರುಷೋತ್ತಮನಾದ ಶ್ರೀರಾಮನು ಆ ಪಾದುಕೆಗಳ ಮೇಲೆ ನಿಂತು ಅವುಗಳನ್ನು ತೆಗೆದು ಮಹಾತ್ಮನಾದ ಭರತನಿಗೆ ಕೊಟ್ಟನು. ಭರತನು ಆ ಪಾದುಕೆಗಳನ್ನು ಸ್ವೀಕರಿಸಿ, ಭಕ್ತಿಯಿಂದ ಅವುಗಳಿಗೆ ವಂದಿಸಿ, ಶ್ರೀರಾಮನನ್ನು ನೋಡಿ ''ರಘುನಂದನ, ಹದಿನಾಲ್ಕು ವರ್ಷಗಳವರೆಗೆ ನಾನು ಹೀಗೆಯೇ ಜಟೆಯನ್ನು ಬೆಳೆಸಿ ನಾರುಬಟ್ಟೆಯನ್ನುಟ್ಟಿರುತ್ತೇನೆ (೨೨-೨೩). ಫಲಮೂಲಗಳೇ ನನಗೆ ಆಹಾರವಾಗಿರುತ್ತವೆ. ಅಯೋಧ್ಯಾನಗರದ ಹೊರಗೆ

---

* ಅನುಬಂಧವನ್ನು ನೋಡಿ

** ಪಾದುಕೆಗಳ ಮೂಲಕ ಈ ಸಮಸ್ಯೆಯನ್ನು ಬಗೆಹರಿಸುವ ಉಪಾಯವನ್ನು ವಸಿಷ್ಠರು ಸೂಚಿಸಿದರು. ಅವರ ಮಾತಿನಂತೆ ಭರತನು ಪಾದುಕೆಗಳನ್ನು ಮುಂದಿಟ್ಟನೆಂದು ತಿಳಿಯಬೇಕು. ಮುಂದಿನ ಸರ್ಗದಲ್ಲಿ ಭರತನು ಭರದ್ವಾಜರೊಡನೆ ಮಾತನಾಡುವಾಗ ಈ ಅಂಶವು ಸ್ಪಷ್ಟವಾಗಿದೆ.

ತವ ಪಾದುಕಯೋರ್ನ್ಯಸ್ಯ ರಾಜ್ಯತಂತ್ರಂ ಪರಂತಪ ।
ಚತುರ್ದಶೇ ಹಿ ಸಂಪೂರ್ಣೇ ವರ್ಷೇಽಹನಿ ರಘೂತ್ತಮ ॥ ೨೫

ನ ದ್ರಕ್ಷ್ಯಾಮಿ ಯದಿ ತ್ವಾಂ ತು ಪ್ರವೇಕ್ಷ್ಯಾಮಿ ಹುತಾಶನಮ್ ।
ತಥೇತಿ ಚ ಪ್ರತಿಜ್ಞಾಯ ತಂ ಪರಿಷ್ವಜ್ಯ ಸಾದರಮ್ ॥ ೨೬

ಶತ್ರುಘ್ನಂ ಚ ಪರಿಷ್ವಜ್ಯ ಭರತಂ ಚೇದಮಬ್ರವೀತ್ ।
ಮಾತರಂ ರಕ್ಷ ಕೈಕೇಯೀಂ ಮಾ ರೋಷಂ ಕುರು ತಾಂ ಪ್ರತಿ ॥ ೨೭

ಮಯಾ ಚ ಸೀತಯಾ ಚೈವ ಶಪ್ತೋಽಸಿ ರಘುಸತ್ತಮ ।
ಇತ್ಯುಕ್ತ್ವಾಶ್ರುಪರೀತಾಕ್ಷೋ ಭ್ರಾತರಂ ವಿಸಸರ್ಜ ಹ ॥ ೨೮

ಸ ಪಾದುಕೇ ತೇ ಭರತಃ ಪ್ರತಾಪವಾನ್
ಸ್ವಲಂಕೃತೇ ಸಂಪರಿಗೃಹ್ಯ ಧರ್ಮವಿತ್ ।
ಪ್ರದಕ್ಷಿಣಂ ಚೈವ ಚಕಾರ ರಾಘವಂ
ಚಕಾರ ಚೈವೋತ್ತಮನಾಗಮೂರ್ಧನಿ ॥ ೨೯

ವಾಸವಾಗಿದ್ದು ನಿನ್ನ ಆಗಮನವನ್ನೇ ಕಾದುಕೊಂಡಿರುವೆನು. ಹೇ ವೀರಾಗ್ರಣಿ, ಸಮಸ್ತ ರಾಜ್ಯಭಾರವನ್ನೂ ನಿನ್ನ ಪಾದುಕೆಗಳಿಗೆ ಒಪ್ಪಿಸುವೆನು. ಹದಿನಾಲ್ಕು ವರ್ಷಗಳು ಕಳೆದ ಮಾರನೆಯ ದಿನವೇ ನಿನ್ನ ದರ್ಶನವಾಗದಿದ್ದರೆ ಬೆಂಕಿಯಲ್ಲಿ ಬೀಳುವೆನು'' ಎಂದು ಪ್ರತಿಜ್ಞೆ ಮಾಡಿದನು (೨೪-೨೫). ಆಗ ಶ್ರೀರಾಮನು ಹದಿನಾಲ್ಕು ವರ್ಷಗಳು ಕಳೆದಕೂಡಲೆ ಬರುವೆನೆಂದು ಮಾತುಕೊಟ್ಟು ಭರತನನ್ನೂ ಶತ್ರುಘ್ನನನ್ನೂ ವಾತ್ಸಲ್ಯದಿಂದ ಅಪ್ಪಿ ಕೊಂಡನು (೨೬). ಆಮೇಲೆ ಭರತನನ್ನು ಕುರಿತು ''ತಮ್ಮ, ಕೈಕೇಯಿ ನಮ್ಮ ತಾಯಿ. ಅವಳನ್ನು ಗೌರವದಿಂದ ಪಾಲಿಸು. ನನ್ನ ಆಣೆ; ಸೀತೆಯ ಆಣೆ. ಕೈಕೇಯಿಯ ಮೇಲೆ ಕೋಪಿಸಿಕೊಳ್ಳಬೇಡ'' ಎಂದು ಹೇಳಿ ಭರತನನ್ನು ಬೀಳ್ಕೊಂಡನು. ಶ್ರೀರಾಮನ ಕಣ್ಣುಗಳಿಂದ ಕಂಬನಿ ತುಳುಕಿತು (೨೭-೨೮). ಅನಂತರ ಧರ್ಮಜ್ಞನಾದ ಭರತನು ಆ ಪಾದುಕೆಗಳನ್ನು ಅಲಂಕರಿಸಿ ತನ್ನ ತಲೆಯಮೇಲಿಟ್ಟುಕೊಂಡು ಶ್ರೀರಾಮನನ್ನು ಪ್ರದಕ್ಷಿಣೆ ಮಾಡಿ ಆ ಪಾದುಕೆಗಳನ್ನು ಪಟ್ಟದಾನೆಯ ಶಿರಸ್ಸಿನ ಮೇಲೆ ಇಟ್ಟನು (೨೯).

ಅಥಾನುಪೂರ್ವ್ಯಾತ್ ಪ್ರತಿನಂದ್ಯ ತಂ ಜನಂ
ಗುರೂಂಶ್ಚ ಮಂತ್ರಿಪ್ರಕೃತೀಸ್ತಥಾವುಭೌ ।
ವ್ಯಸರ್ಜಯದ್ರಾಘವವಂಶವರ್ಧನಃ
ಸ್ಥಿರಃ ಸ್ವಧರ್ಮೇ ಹಿಮವಾನಿವಾಚಲಃ ॥ ೩೦

ತಂ ಮಾತರೋ ಬಾಷ್ಪಗೃಹೀತಕಂಠ್ಯೋ
ದುಃಖೇನ ನಾಮಂತ್ರಯಿತುಂ ಹಿ ಶೇಕುಃ ।
ಸ ತ್ವೇವ ಮಾತೄರಭಿವಾದ್ಯ ಸರ್ವಾ
ರುದನ್ ಕುಟೀಂ ಸ್ವಾಂ ಪ್ರವಿವೇಶ ರಾಮಃ ॥ ೩೧

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದ್ವಾದಶಾಧಿಕಶತತಮಃ ಸರ್ಗಃ

ಶ್ರೀರಾಮನು ತನ್ನ ಗುರುಹಿರಿಯರಿಗೂ ಮಂತ್ರಿ ಪ್ರಜೆಗಳಿಗೂ ತಮ್ಮಂದಿರಾದ ಭರತಶತ್ರುಘ್ನರಿಗೂ ಸಮಾಧಾನ ಹೇಳಿ ಯಥೋಚಿತವಾಗಿ ಮನ್ನಿಸಿ ಅವರನ್ನು ಕಳಿಸಿಕೊಟ್ಟನು. ಆ ರಘುವಂಶತಿಲಕನು ತನ್ನ ಸ್ಥಿರವಾದ ನಿಲುವಿನಿಂದ ಕದಲದೆ ಹಿಮಾಲಯಪರ್ವತದಂತೆ ಸ್ವಧರ್ಮದಲ್ಲಿ ಅಚಲನಾಗಿದ್ದನು (೩೦). ಅವನ ತಾಯಂದಿರಾದ ಕೌಸಲ್ಯೆಯೇ ಮೊದಲಾದವರಿಗೆ ಕಣ್ಣೀರು ಹರಿಯುತ್ತಿತ್ತು. ದುಃಖದಿಂದ ಕಂಠವು ಬಿಗಿದು ಬಂದಿತ್ತು. ಶ್ರೀರಾಮನನ್ನು ಬೀಳ್ಕೊಡುವಾಗ ಅವರ ಬಾಯಿಂದ ಶಬ್ದವೇ ಹೊರಡಲಿಲ್ಲ. ಶ್ರೀರಾಮನು ಅವರೆಲ್ಲರಿಗೂ ಪ್ರಣಾಮವನ್ನರ್ಪಿಸಿ ಕಂಬನಿಯನ್ನು ಮಿಡಿಯುತ್ತ ತನ್ನ ಪರ್ಣಶಾಲೆಯೊಳಗೆ ಹೋದನು (೩೧).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ನೂರಹನ್ನೆರಡನೆಯ ಸರ್ಗ

ತ್ರಯೋದಶಾಧಿಕಶತತಮಃ ಸರ್ಗಃ

ಪಾದುಕಾಗ್ರಹಣಮ್

ತತಃ ಶಿರಸಿ ಕೃತ್ವಾತು ಪಾದುಕೇ ಭರತಸ್ತದಾ ।
ಆರುರೋಹ ರಥಂ ಹೃಷ್ಟಃ ಶತ್ರುಘ್ನೇನ ಸಮನ್ವಿತಃ ॥ ೧

ವಸಿಷ್ಠೋ ವಾಮದೇವಶ್ಚ ಜಾಬಾಲಿಶ್ಚ ದೃಢವ್ರತಃ ।
ಅಗ್ರತಃ ಪ್ರಯಯುಃ ಸರ್ವೇ ಮಂತ್ರಿಣೋ ಮಂತ್ರಪೂಜಿತಾಃ ॥ ೨

ಮಂದಾಕಿನೀಂ ನದೀಂ ಪುಣ್ಯಾಂ ಪ್ರಾಙ್ಮುಖಾಸ್ತೇ ಯಯುಸ್ತದಾ ।
ಪ್ರದಕ್ಷಿಣಂ ಚ ಕುರ್ವಾಣಾಶ್ಚಿತ್ರಕೂಟಂ ಮಹಾಗಿರಿಮ್ ॥ ೩

ಪಶ್ಯನ್ ಧಾತುಸಹಸ್ರಾಣಿ ರಮ್ಯಾಣಿ ವಿವಿಧಾನಿ ಚ ।
ಪ್ರಯಯೌ ತಸ್ಯ ಪಾರ್ಶ್ವೇನ ಸಸೈನ್ಯೋ ಭರತಸ್ತದಾ ॥ ೪

ಅದೂರಾಚ್ಚಿತ್ರಕೂಟಸ್ಯ ದದರ್ಶ ಭರತಸ್ತದಾ ।
ಆಶ್ರಮಂ ಯತ್ರ ಸ ಮುನಿರ್ಭರದ್ವಾಜಃ ಕೃತಾಲಯಃ ॥ ೫

ಸರ್ಗ ೧೧೩

ಪಾದುಕೆಗಳನ್ನು ತೆಗೆದುಕೊಂಡು ಅಯೋಧ್ಯೆಗೆ ಭರತನ ಪ್ರಯಾಣ.

ಹೀಗೆ ಭರತನು ಶ್ರೀರಾಮನ ಪಾದುಕೆಗಳನ್ನು ಪಟ್ಟದಾನೆಯ ಶಿರಸ್ಸಿನಲ್ಲಿ ಸ್ಥಾಪಿಸಿ ಸಂತುಷ್ಟನಾಗಿ ಶತ್ರುಘ್ನನೊಡನೆ ರಥವನ್ನೇರಿದನು. ಆಮೇಲೆ ವಸಿಷ್ಠವಾಮದೇವರೂ ಧರ್ಮನಿಷ್ಠರಾದ ಜಾಬಾಲಿಗಳೂ ಮಂತ್ರಾಲೋಚನಾ ನಿಪುಣರಾದ ಮಂತ್ರಿಗಳೂ ಮುಂದೆ ಹೊರಟರು (೧-೨). ಅವರೆಲ್ಲರೂ ಚಿತ್ರಕೂಟದ ಉತ್ತರದಿಕ್ಕಿನಲ್ಲಿದ್ದ ಮಂದಾಕಿನಿಯೆಂಬ ಪುಣ್ಯನದಿಯ ಬಳಿಗೆ ಹೋಗಿ ಪರ್ವತಕ್ಕೆ ಪ್ರದಕ್ಷಿಣೆಯಾಗಲೆಂದು ಅಲ್ಲಿಂದ ಪೂರ್ವಾಭಿಮುಖವಾಗಿ ಪ್ರಯಾಣ ಮಾಡಿದರು (೩). ಭರತನು ರಮ್ಯವಾಗಿ ಕಾಣಿಸುತ್ತಿದ್ದ ನಾನಾಬಗೆಯ ಸಾವಿರಾರು ಧಾತುವಿಶೇಷಗಳನ್ನು ನೋಡುತ್ತ ಆ ಪರ್ವತದ ಪಕ್ಕದಲ್ಲಿ ಸೇನಾಸಮೇತನಾಗಿ ಹೋಗುತ್ತಿದ್ದನು. ಅನಂತರ ಸ್ವಲ್ಪ ದೂರ

ಪಾದುಕಾ ಪಟ್ಟಾಭಿಷೇಕ

ಸ ತಮಾಶ್ರಮಮಾಗಮ್ಯ ಭರದ್ವಾಜಸ್ಯ ಬುದ್ಧಿಮಾನ್ ।
ಅವತೀರ್ಯ ರಥಾತ್ ಪಾದೌ ವವಂದೇ ಕುಲನಂದನಃ ॥ ೬

ತತೋ ಹೃಷ್ಟೋ ಭರದ್ವಾಜೋ ಭರತಂ ವಾಕ್ಯಮಬ್ರವೀತ್ ।
ಅಪಿ ಕೃತ್ಯಂ ಕೃತಂ ತಾತ ರಾಮೇಣ ಚ ಸಮಾಗಮ್ ॥ ೭

ಏವಮುಕ್ತಸ್ತು ಭರತೋ ಭರದ್ವಾಜೇನ ಧೀಮತಾ ।
ಪ್ರತ್ಯುವಾಚ ಭರದ್ವಾಜಂ ಭರತೋ ಭ್ರಾತೃವತ್ಸಲಃ ॥ ೮

ಸ ಯಾಚ್ಯಮಾನೋ ಗುರುಣಾ ಮಯಾ ಚ ದೃಢವಿಕ್ರಮಃ ।
ರಾಘವಃ ಪರಮಪ್ರೀತೋ ವಸಿಷ್ಠಂ ವಾಕ್ಯಮಬ್ರವೀತ್ ॥ ೯

ಪಿತುಃ ಪ್ರತಿಜ್ಞಾಂ ತಾಮೇವ ಪಾಲಯಿಷ್ಯಾಮಿ ತತ್ತ್ವತಃ ।
ಚತುರ್ದಶ ಹಿ ವರ್ಷಾಣಿ ಯಾ ಪ್ರತಿಜ್ಞಾ ಪಿತುರ್ಮಮ ॥ ೧೦

ಏವಮುಕ್ತೋ ಮಹಾಪ್ರಾಜ್ಞೋ ವಸಿಷ್ಠಃ ಪ್ರತ್ಯುವಾಚ ಹ ।
ವಾಕ್ಯಜ್ಞೋ ವಾಕ್ಯಕುಶಲಂ ರಾಘವಂ ವಚನಂ ಮಹತ್ ॥ ೧೧

ಹೋಗಲು ಭರದ್ವಾಜಮುನಿಗಳು ವಾಸಿಸುತ್ತಿದ್ದ ಆಶ್ರಮವು ಕಾಣಿಸಿತು* (೪-೫). ವಿವೇಕಿಯೂ ಸತ್ಕುಲಪ್ರಸೂತನೂ ಆದ ಭರತನು ಆಶ್ರಮಕ್ಕೆ ಹೋಗಿ ರಥದಿಂದಿಳಿದು ಭರದ್ವಾಜಮುನಿಗಳನ್ನು ಕಂಡು ಅವರ ಪಾದಗಳಿಗೆ ವಂದಿಸಿದನು. ಸಂತುಷ್ಟರಾದ ಭರದ್ವಾಜರು ''ವತ್ಸ - ಭರತ, ನಿನ್ನ ಉದ್ದೇಶವು ನಡೆಯಿತೆ? ರಾಮನ ದರ್ಶನವಾಯಿತೆ?'' ಎಂದು ಕೇಳಿದರು (೬-೭). ಆಗ ಭ್ರಾತೃವತ್ಸಲನಾದ ಭರತನು ಹೀಗೆಂದನು : ''ಮಹರ್ಷಿಗಳೆ, ನಾನು ಶ್ರೀರಾಮನನ್ನು ಎಷ್ಟೋ ಬೇಡಿಕೊಂಡೆನು. ನಮ್ಮ ಗುರುಗಳೂ ಹೇಳಿ ನೋಡಿದರು. ಆದರೆ ತಾನು ಇಟ್ಟ ಹೆಜ್ಜೆಯಿಂದ ಶ್ರೀರಾಮನು ಹಿಂದಕ್ಕೆ ಸರಿಯಲಿಲ್ಲ. ಆತನು ಸಂತೋಷದಿಂದಲೇ ವಸಿಷ್ಠರನ್ನು ಕುರಿತು ''ನಾನು ತಂದೆಯ ಎದುರಿಗೆ ಯಾವ ಪ್ರತಿಜ್ಞೆಯನ್ನು ಕೈಗೊಂಡೆನೊ, ಆದನ್ನು ಅಕ್ಷರಶಃ ಪಾಲಿಸುವೆನು. ಹದಿನಾಲ್ಕು ವರ್ಷಗಳ ಕಾಲ ವನವಾಸ ಮಾಡುವೆನೆಂದು ತಂದೆಗೆ ಮಾತುಕೊಟ್ಟಿದ್ದೇನೆ'' ಎಂದು ಹೇಳಿಬಿಟ್ಟನು (೮-೧೦). ಆಗ ಮಹಾಪ್ರಾಜ್ಞರಾದ

---

* ಅನುಬಂಧವನ್ನು ನೋಡಿ.

ಏತೇ ಪ್ರಯಚ್ಛ ಸಂಹೃಷ್ಟಃ ಪಾದುಕೇ ಹೇಮಭೂಷಿತೇ ।
ಅಯೋಧ್ಯಾಯಾಂ ಮಹಾಪ್ರಾಜ್ಞ ಯೋಗಕ್ಷೇಮಕರೇ ತವ ॥ ೧೨

ಏವಮುಕ್ತೋ ವಸಿಷ್ಠೇನ ರಾಘವಃ ಪ್ರಾಙ್ಮುಖಃ ಸ್ಥಿತಃ ।
ಪಾದುಕೇ ಅಧಿರುಹ್ಯೈತೇ ಮಮ ರಾಜ್ಯಾಯ ವೈ ದದೌ ॥ ೧೩

ನಿವೃತ್ತೋಽಹಮನುಜ್ಞಾತೋ ರಾಮೇಣ ಸುಮಹಾತ್ಮನಾ ।
ಅಯೋಧ್ಯಾಮೇವ ಗಚ್ಛಾಮಿ ಗೃಹೀತ್ವಾ ಪಾದುಕೇ ಶುಭೇ ॥ ೧೪

ಏತಚ್ಛ್ರುತ್ವಾ ಶುಭಂ ವಾಕ್ಯಂ ಭರತಸ್ಯ ಮಹಾತ್ಮನಃ ।
ಭರದ್ವಾಜಃ ಶುಭತರಂ ಮುನಿರ್ವಾಕ್ಯಮುವಾಚ ತಮ್ ॥ ೧೫

ನೈತಚ್ಚಿತ್ರಂ ನರವ್ಯಾಘ್ರೇ ಶೀಲವೃತ್ತವಿದಾಂ ವರೇ ।
ಯದಾರ್ಯಂ ತ್ವಯಿ ತಿಷ್ಠೇತ್ತು ನಿಮ್ನೋತ್ಸೃಷ್ಟಮಿವೋದಕಮ್ ॥ ೧೬

ಅನೃಣಃ ಸ ಮಹಾಬಾಹುಃ ಪಿತಾ ದಶರಥಸ್ತವ ।
ಯಸ್ಯ ತ್ವಮೀದೃಶಃ ಪುತ್ರೋ ಧರ್ಮಜ್ಞೋ ಧರ್ಮವತ್ಸಲಃ ॥ ೧೭

ವಸಿಷ್ಠರು (ಮಧ್ಯಸ್ಥವಾದ ಒಂದು ಮಾರ್ಗವನ್ನು ಕಂಡುಹಿಡಿದು) ಯುಕ್ತಿಯುಕ್ತವಾದ ವಚನಗಳಿಂದ ಶ್ರೀರಾಮ, ನೀನು ಎಲ್ಲವನ್ನೂ ಬಲ್ಲವನು. ಸುವರ್ಣಭೂಷಿತವಾದ ನಿನ್ನ ಪಾದುಕೆಗಳನ್ನು ಸಂತೋಷದಿಂದ ಭರತನಿಗೆ ಕೊಡು. ಈ ಪಾದುಕೆಗಳೇ ಅಯೋಧ್ಯೆಯಲ್ಲಿ ನಿನ್ನ ರಾಜ್ಯದ ಯೋಗಕ್ಷೇಮಗಳನ್ನು ನಿರ್ವಹಿಸುತ್ತವೆ' ಎಂದು ನುಡಿದರು (೧೧-೧೨). ಆಗ ರಾಘವನು ಪ್ರಾಙ್ಮುಖನಾಗಿ ನಿಂತು ಈ ಪಾದುಕೆಗಳ ಮೇಲೆ ತನ್ನ ಪಾದಗಳನ್ನಿಟ್ಟು ರಾಜ್ಯವನ್ನು ನೋಡಿಕೊಳ್ಳಲೆಂದು ನನಗೆ ಕೊಟ್ಟನು. ಆಮೇಲೆ ಆ ಮಹಾತ್ಮನ ಅನುಜ್ಞೆಯನ್ನು ಪಡೆದು ನಾನು ಹಿಂದಿರುಗಿದೆನು. ಮಹಾತ್ಮರೆ, ಈ ಶುಭಕರವಾದ ಪಾದುಕೆಗಳನ್ನು ತೆಗೆದುಕೊಂಡು ನಾನು ಈಗ ಅಯೋಧ್ಯೆಗೆ ಹೋಗುತ್ತಿದ್ದೇನೆ' ಎಂದು ನಿವೇದಿಸಿದನು (೧೩-೧೪). ಮಹಾಪುರುಷನಾದ ಭರತನ ಈ ಶುಭವಾಕ್ಯವನ್ನು ಕೇಳಿ ಭರದ್ವಾಜರು ಭರತ, ಸೌಶೀಲ್ಯ ಸದಾಚಾರಗಳನ್ನು ನೀನು ಚೆನ್ನಾಗಿ ಬಲ್ಲೆ. ಪುರುಷಶ್ರೇಷ್ಠನಾದ ನಿನ್ನಲ್ಲಿ ಇಂಥ ಒಳ್ಳೆಯ ನಡತೆಯಿರುವುದರಲ್ಲಿ ಆಶ್ಚರ್ಯವಿಲ್ಲ. ಹಳ್ಳದಲ್ಲಿ ನೀರು ನಿಲ್ಲುವಂತೆ ಈ ಪುಣ್ಯಚಾರಿತ್ರವು ನಿನ್ನಲ್ಲಿರುವುದು ಸಹಜ (೧೫-೧೬). ನಿನ್ನ ತಂದೆಯಾದ ದಶರಥಮಹಾರಾಜನು ನಿಜವಾಗಿಯೂ

ತಮೃಷಿಂ ತು ಮಹಾತ್ಮಾ ನಮುಕ್ತವಾಕ್ಯಂ ಕೃತಾಂಜಲಿಃ ।
ಆಮಂತ್ರಯಿತುಮಾರೇಭೇ ಚರಣಾವುಪಗೃಹ್ಯ ಚ ॥ ೧೮

ತತಃ ಪ್ರತದಕ್ಷಿಣಂ ಕೃತ್ವಾ ಭರದ್ವಾಜಂ ಪುನಃ ಪುನಃ ।
ಭರತಸ್ತು ಯಯೌ ಶ್ರೀಮಾನಯೋಧ್ಯಾಂ ಸಹ ಮಂತ್ರಿಭಿಃ ॥ ೧೯

ಯಾನೈಶ್ಚ ಶಕಟೈಶ್ಚೈವ ಹಯೈರ್ನಾಗೈಶ್ಚ ಸಾ ಚಮೂಃ ।
ಪುನರ್ನಿವೃತ್ತಾ ವಿಸ್ತೀರ್ಣಾ ಭರತಸ್ಯಾನುಯಾಯಿನೀ ॥ ೨೦

ತತಸ್ತೇ ಯಮುನಾಂ ದಿವ್ಯಾಂ ನದೀಂ ತೀರ್ತ್ವೋರ್ಮಿಮಾಲಿನೀಮ್ ।
ದದೃಶುಸ್ತಾಂ ಪುನಃ ಸರ್ವೇ ಗಂಗಾಂ ಶುಭಜಲಾಂ ನದೀಮ್ ॥ ೨೧

ತಾಂ ಪುಣ್ಯಜಲಸಂಪೂರ್ಣಾಂ ಸಂತೀರ್ಯ ಸಹಬಾಂಧವಃ ।
ಶೃಂಗಿವೇರಪುರಂ ರಮ್ಯಂ ಪ್ರವಿವೇಶ ಸಸೈನಿಕಃ ॥ ೨೨

ಶೃಂಗಿವೇರಪುರಾದ್ಭೂಯಸ್ತ್ವಯೋಧ್ಯಾಂ ಸಂದದರ್ಶ ಹ ।
ಅಯೋಧ್ಯಾಂ ಚ ತತೋ ದೃಷ್ಟ್ವಾ ಪಿತ್ರಾ ಭ್ರಾತ್ರಾ ವಿವರ್ಜಿತಾಮ್ ॥

ಪಿತೃಋಣದಿಂದ ಮುಕ್ತನಾದನು. ಇಂಥ ಧರ್ಮಜ್ಞನೂ ಧರ್ಮನಿಷ್ಠನೂ ಆದ ನಿನ್ನನ್ನು ಮಗನನ್ನಾಗಿ ಪಡೆದು ಅವನು ಧನ್ಯನಾದನು'' ಎಂದು ಕೊಂಡಾಡಿದರು (೧೭). ಭರತನು ಆ ಋಷಿಗಳ ಪಾದಗಳಿಗೆ ಅಭಿವಂದಿಸಿ ಕೈಮುಗಿದುಕೊಂಡು ತಾನು ಪ್ರಯಾಣ ಮಾಡಲು ಅನುಮತಿಯನ್ನು ಬೇಡಿದನು. ಆಮೇಲೆ ಅನುಮತಿಯನ್ನು ಪಡೆದು ಭರದ್ವಾಜರಿಗೆ ಮೂರುಸಲ ಪ್ರದಕ್ಷಿಣೆ ಮಾಡಿ ನಮಸ್ಕರಿಸಿ, ತನ್ನ ಮಂತ್ರಿಗಳೊಡನೆ ಭರತನು ಅಯೋಧ್ಯೆಗೆ ಪ್ರಯಾಣಮಾಡಿದನು (೧೮-೧೯). ನಾನಾಬಗೆಯ ವಾಹನ, ರಥ, ಕುದುರೆ, ಆನೆಗಳಿಂದ ವಿಶಾಲವಾಗಿದ್ದ ಸೇನೆಯು ಭರತನನ್ನು ಹಿಂಬಾಲಿಸಿ ಹೊರಟಿತು. ತರಂಗಮಾಲಿನಿಯಾದ ದಿವ್ಯನದಿ ಯಮುನೆಯನ್ನು ಪೂರ್ವದಲ್ಲಿಯೇ ದಾಟಿ ಬಂದಿದ್ದ ಅವರಿಗೆ, ಪುಣ್ಯಜಲಪೂರ್ಣವಾದ ಗಂಗಾನದಿಯು ಪುನಃ ಕಾಣಿಸಿತು (೨೦-೨೧). ಭರತನು ತನ್ನ ಬಂಧುಗಳನ್ನೂ ಸೈನಿಕರನ್ನೂ ಕರೆದುಕೊಂಡು ಆ ಮಹಾನದಿಯನ್ನು ದಾಟಿ ಶೃಂಗಿವೇರಪುರಕ್ಕೆ ಬಂದನು. ಪುನಃ ಅಲ್ಲಿಂದ ಹೊರಟು ಬರುತ್ತಿರಲು ಅಯೋಧ್ಯಾನಗರವು ಕಾಣಿಸಿತು! ತಂದೆಯೂ ಅಣ್ಣನೂ ಇಲ್ಲದಿರುವ

ಭರತೋ ದುಃಖಸಂತಪ್ತಃ ಸಾರಥಿಂ ಚೇದಮಬ್ರವೀತ್ ।
ಸಾರಥೇ ಪಶ್ಯ ವಿಧ್ವಸ್ತಾ ಸಾಯೋಧ್ಯಾ ನ ಪ್ರಕಾಶತೇ ॥ ೨೪

ನಿರಾಕಾರಾ ನಿರಾನಂದಾ ದೀನಾ ಪ್ರತಿಹತಸ್ವನಾ ॥

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತ್ರಯೋದಶಾಧಿಕಶತತಮಃ ಸರ್ಗಃ

ಚತುರ್ದಶಾಧಿಕಶತತಮಃ ಸರ್ಗಃ

ಅಯೋಧ್ಯಾಪ್ರವೇಶಃ

ಸ್ನಿಗ್ಧಗಂಭೀರಘೋಷೇಣ ಸ್ಯಂದನೇನೋಪಯಾನ್ ಪ್ರಭುಃ ।
ಅಯೋಧ್ಯಾಂ ಭರತಃ ಕ್ಷಿಪ್ರಂ ಪ್ರವಿವೇಶ ಮಹಾಯಶಾಃ ॥ ೧

ಬಿಡಾಲೋಲೂಕಚರಿತಾಮಾಲೀನನರವಾರಣಾಮ್ ।
ತಿಮಿರಾಭ್ಯಾಹತಾಂ ಕಾಲೀಮಪ್ರಕಾಶಾಂ ನಿಶಾಮಿವ ॥ ೨

ಈ ನಗರವನ್ನು ಕಂಡೊಡನೆ ಭರತನಿಗೆ ದುಃಖವು ಮರುಕಳಿಸಿತು (೨೨-೨೩). ಅವನು ಸಾರಥಿಯನ್ನು ಕುರಿತು ''ಸುಮಂತ್ರ, ಅಲ್ಲಿ ನೋಡು! ಹಾಗಿದ್ದ ಅಯೋಧ್ಯೆ ಈಗ ಹೇಗೆ ಹಾಳುಬಿದ್ದಿದೆ! ಶೋಭೆಯೇ ಇಲ್ಲ, ಇದರ ಆಕಾರವೇ ಕೆಟ್ಟುಹೋಗಿದೆ. ಆನಂದದ ಸೊಲ್ಲೇ ಇಲ್ಲ. ಎಷ್ಟು ದೈನ್ಯಾವಸ್ಥೆ ಇದಕ್ಕೆ ಬಂದಿತು! ಜನರ ಶಬ್ದವೇ ಇಲ್ಲ'' ಎಂದು ಗೋಳಾಡಿದನು (೨೪).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ನೂರಹದಿಮೂರನೆಯ ಸರ್ಗ

ಸರ್ಗ ೧೧೪

ಭರತನು ಅಯೋಧ್ಯೆಯ ದುಃಸ್ಥಿತಿಯನ್ನು ನೋಡಿ ಮರುಗುವುದು.

ಕೀರ್ತಿಶಾಲಿಯಾದ ಭರತನು ತನ್ನ ದುಃಖವನ್ನು ಬಿಗಿಹಿಡಿದುಕೊಂಡು ಅಯೋಧ್ಯೆಯನ್ನು ಪ್ರವೇಶಿಸಿದನು. ಅವನ ರಥವು ಮಧುರಗಂಭೀರವಾಗಿ ಶಬ್ದಮಾಡುತ್ತ ಬೇಗಬೇಗನೆ ನಗರದೊಳಗೆ ಹೋಯಿತು (೧). ಭರತನು ರಥದಲ್ಲಿ ಕುಳಿತು ಸುತ್ತಲೂ ನಗರವನ್ನು ಗಮನಿಸಿ ನೋಡುತ್ತಿದ್ದನು. ಆ ಅಯೋಧ್ಯಾ

ರಾಹುಶತ್ರೋಃ ಪ್ರಿಯಾಂ ಪತ್ನೀಂ ಶ್ರಿಯಾ ಪ್ರಜ್ವಲಿತಪ್ರಭಾಮ್ ।
ಗ್ರಹೇಣಾಭ್ಯುದಿತೇನೈಕಾಂ ರೋಹಿಣೀಮಿವ ಪೀಡಿತಾಮ್ ॥ ೩

ಅನಿಲೋತ್ಕ್ಷುಬ್ಧಸಲಿಲಾಂ ಘರ್ಮೋತ್ತಪ್ತವಿಹಂಗಮಾಮ್ ।
ಲೀನಮೀನಝಷಗ್ರಾಹಾಂ ಕೃಶಾಂ ಗಿರಿನದೀಮಿವ ॥ ೪

ವಿಧೂಮಾಮಿವ ಹೇಮಾಭಾಮಧ್ವರಾಗ್ನೇಃ ಸಮುತ್ಥಿತಾಮ್ ।
ಹವಿರಭ್ಯುಕ್ಷಿತಾಂ ಪಶ್ಚಾಚ್ಛಿಖಾಂ ಪ್ರವಿಲಯಂ ಗತಾಮ್ ॥ ೫

ವಿಧ್ವಸ್ತಕವಚಾಂ ರುಗ್ಣಗಜವಾಜಿರಥಧ್ವಜಾಮ್ ।
ಹತಪ್ರವೀರಾಮಾಪನ್ನಾಂ ಚಮೂಮಿವ ಮಹಾಹವೇ ॥ ೬

ಸಫೇನಾಂ ಸಸ್ವನಾಂ ಭೂತ್ವಾ ಸಾಗರಸ್ಯ ಸಮುತ್ಥಿತಾಮ್ ।
ಪ್ರಶಾಂತಮಾರುತೋದ್ಧೂತಾಂ ಜಲೋರ್ಮಿಮಿವ ನಿಃಸ್ವನಾಮ್ ॥

ನಗರದಲ್ಲಾದರೂ ಬೆಕ್ಕುಗಳೂ ಗೂಗೆಗಳೂ ತಿರುಗಾಡುತ್ತಿದ್ದವು. ಮನುಷ್ಯರ-ಆನೆಗಳ ಸಂಚಾರದ ಸುಳಿವು ಇರಲಿಲ್ಲ. ಆದ್ದರಿಂದ ಕತ್ತಲೆಗವಿದ ಕೃಷ್ಣಪಕ್ಷದ ರಾತ್ರಿಯಂತೆ ಮಬ್ಬು ಕವಿದಿತ್ತು (೨). ಚಂದ್ರನಿಗೆ ರಾಹುಗ್ರಹಣವು ಸಂಭವಿಸಿದಾಗ ಚಂದ್ರನ ಪ್ರಿಯಪತ್ನಿಯಾಗಿ ಕಾಂತಿಯಿಂದ ಬೆಳಗುವ ರೋಹಿಣಿಯು ಗ್ರಹಣದಿಂದ ಪೀಡಿತಳಾಗಿ ಕಾಂತಿಗೆಡುವಂತೆ, ಶ್ರೀರಾಮಚಂದ್ರನಿಗೆ ವನವಾಸವು ಸಂಭವಿಸಿದ್ದರಿಂದ ಅಯೋಧ್ಯೆಯು ಕಾಂತಿಗೆಟ್ಟಿತ್ತು (೩). ಬಿರುಗಾಳಿಯಿಂದ ಜಲವು ಕಲುಷಿತವಾಗಲು, ಬಿಸಿಲಿನ ಬೇಗೆಯಿಂದ ನೀರುಹಕ್ಕಿಗಳು ತಳಮಳಗೊಳ್ಳುತ್ತಿರಲು, ಮೀನುಗಳೇ ಮೊದಲಾದ ಜಲಚರಗಳು ತಳದಲ್ಲಿ ಹುದುಗಿಕೊಂಡಿರಲು (ಬೇಸಿಗೆಯಲ್ಲಿ) ಕೃಶವಾದ ಗಿರಿನದಿಯಂತೆ ಅಯೋಧ್ಯೆಯು ಗೋಚರಿಸುತ್ತಿತ್ತು (೪). ಮೊದಲು ಯಾಗದ ಅಗ್ನಿಕುಂಡದಲ್ಲಿ ಹೊಗೆಯಿಲ್ಲದೆ ಬಂಗಾರದಂತೆ ಬೆಳಗುವ ಅಗ್ನಿಜ್ವಾಲೆಯಂತಿದ್ದ ಆ ನಗರಿಯು, ಹಾಲು ಮೊಸರು ಮುಂತಾದ ಹವಿಸ್ಸನ್ನು ಸುರಿದಾಗ ತೋರುವ ಜ್ವಾಲೆಯಂತೆ, ಈಗ ಕಂದಿ ಕುಂದಿ ಹೋಗಿತ್ತು (೫). ಮಹಾಸಂಗ್ರಾಮದಲ್ಲಿ ಹೊಡೆದಾಡಿದಾಗ ಯೋಧರ ಕವಚಗಳು ಬಿರಿದು, ಗಜವಾಜಿಗಳು ಗಾಯಗೊಂಡು ಸರಿದು, ರಥವು ಮುರಿದು, ಧ್ವಜಪಟಗಳು ಹರಿದು, ವೀರಭಟರು ತರಿದುಹೋದ ಸೇನೆಯಂತೆ ತೋರುತ್ತಿತ್ತು (೬). ಚಂಡಮಾರುತದಿಂದ ಮೇಲೆದ್ದು ನೊರೆಯುಗುಳುತ್ತ

ತ್ಯಕ್ತಾಂ ಯಜ್ಞಾಯುಧೈಃ ಸರ್ವೈರಭಿರೂಪೈಶ್ಚ ಯಾಜಕೈಃ ।
ಸುತ್ಯಾಕಾಲೇ ವಿನಿರ್ವೃತ್ತೇ ವೇದಿಂ ಗತರವಾಮಿವ ॥ ೮

ಗೋಷ್ಠಮಧ್ಯೇ ಸ್ಥಿತಾಮಾರ್ತಾಮಚರಂತೀಂ ತೃಣಂ ನವಮ್ ।
ಗೋವೃಷೇಣ ಪರಿತ್ಯಕ್ತಾಂ ಗವಾಂ ಪತ್ನೀಮಿವೋತ್ಸುಕಾಮ್ ॥ ೯

ಪ್ರಭಾಕರಾದ್ಯೈಃ ಸುಸ್ನಿಗ್ಧೈಃ ಪ್ರಜ್ವಲದ್ಭಿರಿವೋತ್ತಮೈಃ ।
ವಿಯುಕ್ತಾಂ ಮಣಿಭಿರ್ಜಾತ್ಯೈರ್ನವಾಂ ಮುಕ್ತಾವಲೀಮಿವ ॥ ೧೦

ಸಹಸಾ ಚಲಿತಾಂ ಸ್ಥಾನಾನ್ಮಹೀಂ ಪುಣ್ಯಕ್ಷಯಾದ್ಗತಾಮ್ ।
ಸಂಹೃತದ್ಯುತಿವಿಸ್ತಾರಾಂ ತಾರಾಮಿವ ದಿವಶ್ಚ್ಯುತಾಮ್ ॥ ೧೧

ಪುಷ್ಪನದ್ಧಾಂ ವಸಂತಾಂತೇ ಮತ್ತಭ್ರಮರನಾದಿತಾಮ್ ।
ದ್ರುತದಾವಾಗ್ನಿವಿಪ್ಲುಷ್ಟಾಂ ಕ್ಲಾಂತಾಂ ವನಲತಾಮಿವ ॥ ೧೨

ಸಂಮೂಢನಿಗಮಾಂ ಸ್ತಬ್ಧಾಂ ಸಂಕ್ಷಿಪ್ತವಿಪಣಾಪಣಾಮ್ ।
ಪ್ರಚ್ಛನ್ನಶಶಿನಕ್ಷತ್ರಾಂ ದ್ಯಾಮಿವಾಂಬುಧರೈರ್ವೃತಾಮ್ ॥ ೧೩

ಭೋರ್ಗರೆಯುವ ಸಮುದ್ರಕಲ್ಲೋಲವು, ಗಾಳಿಯಡಗಿದಾಗ ಸದ್ದಿಲ್ಲದೆ ಅಲ್ಲಿಯೇ ಕುಸಿದು ಹೋದಂತೆ ಭಾಸವಾಗುತ್ತಿತ್ತು (೭). ಸ್ರುವ ಮುಂತಾದ ಯಜ್ಞಸಾಮಗ್ರಿಗಳನ್ನು ಹಿಡಿದು ವೇದಘೋಷಮಾಡುತ್ತ ಪ್ರಶಸ್ತರಾದ ವೈದಿಕರು ಸುತ್ತಲೂ ನೆರೆದಿದ್ದಾಗ ಶೋಭಿಸುವ ಯಜ್ಞವೇದಿಯಂತಿದ್ದ ಅಯೋಧ್ಯೆಯು, ಯಜ್ಞಕಾಲವು ಕಳೆದಮೇಲೆ ಕಾಣುವ ವೇದಿಯಂತೆ ಈಗ ನಿಶ್ಯಬ್ದವಾಗಿತ್ತು (೮). ಗೂಳಿಯನ್ನು ಅಗಲಿದ್ದರಿಂದ ಶೋಕಿಸುತ್ತ ಹಸಿರುಹುಲ್ಲನ್ನೂ ಸಹ ತಿನ್ನದೆ ತಳಮಳಿಸುತ್ತ ಕೊಟ್ಟಿಗೆಯಲ್ಲಿ ನಿಂತಿರುವ ಹಸುವಿನಂತೆ, ಆ ನಗರವು ಶೋಚನೀಯವಾಗಿತ್ತು (೯). ಪ್ರಭೆಯನ್ನು ಬೀರುತ್ತ ಝುಗಝುಗಿಸುವ ಉತ್ತಮಜಾತಿಯ ಪದ್ಮರಾಗಾದಿರತ್ನಗಳು ಕಳಚಿಹೋಗಲು ಶೋಭಾಹೀನವಾದ ಮುತ್ತಿನಸರದಂತೆ, ಅಯೋಧ್ಯೆಯ ಸ್ಥಿತಿಯಾಗಿತ್ತು (೧೦). ಆ ನಗರಿಯು, ಪುಣ್ಯಕ್ಷಯವಾಗಲು ಸ್ಥಾನಭ್ರಷ್ಟವಾಗಿ ಆಕಾಶದಿಂದ ಭೂಮಿಗೆ ಬಿದ್ದಿರುವ ನಿಸ್ತೇಜವಾದ ತಾರೆಯಂತಿತ್ತು. ವಸಂತ ಕಾಲದಲ್ಲಿ ಕುಸುಮಶೋಭಿನಿಯಾಗಿ, ಸೊಕ್ಕಿದ ದುಂಬಿಗಳ ಝೇಂಕಾರದಿಂದ ಮೊಳಗುತ್ತಿದ್ದ ವನಲತೆಯು ಬೇಸಿಗೆಯಲ್ಲಿ ಕಾಳ್ಗಿಚ್ಚಿನ ಬೇಗೆಯಿಂದ ಬೆಂದು ಸುಕ್ಕಿ ಸೊರಗಿದಂತಿತ್ತು (೧೧-೧೨). ಬೀದಿಗಳಲ್ಲಿ

ಕ್ಷೀಣಪಾನೋತ್ತಮೈರ್ಭಿನ್ನೈಃ ಶರಾವೈರಭಿಸಂವೃತಾಮ್ ।
ಗತಶೌಂಡಾಮಿವ ಧ್ವಸ್ತಾಂ ಪಾನಭೂಮಿಮಸಂಸ್ಕೃತಾಮ್ ॥ ೧೪

ವೃಕ್ಣಭೂಮಿತಲಾಂ ನಿಮ್ನಾಂ ವೃಕ್ಣಪಾತ್ರೈಃ ಸಮಾವೃತಾಮ್ ।
ಉಪಯುಕ್ತೋದಕಾಂ ಭಗ್ನಾಂ ಪ್ರಪಾಂ ನಿಪತಿತಾಮಿವ ॥ ೧೫

ವಿಪುಲಾಂ ವಿತತಾಂ ಚೈವ ಯುಕ್ತಪಾಶಾಂ ತರಸ್ವಿನಾಮ್ ।
ಭೂಮೌ ಬಾಣೈರ್ವಿನಿಷ್ಕೃತ್ತಾಂ ಪತಿತಾಂ ಜ್ಯಾಮಿವಾಯುಧಾತ್ ॥೧೬

ಸಹಸಾ ಯುದ್ಧಶೌಂಡೇನ ಹಯಾರೋಹೇಣ ವಾಹಿತಾಮ್ ।
ನಿಕ್ಷಿಪ್ತಭಾಂಡಾಮುತ್ಸೃಷ್ಟಾಂ ಕಿಶೋರೀಮಿವ ದುರ್ಬಲಾಮ್ ॥ ೧೭

ಶುಷ್ಕತೋಯಾಂ ಮಹಾಮತ್ಸ್ಯೈಃ ಕೂರ್ಮೈಶ್ಚ ಬಹುಭಿರ್ವೃತಾಮ್
ಪ್ರಭಿನ್ನತಟವಿಸ್ತೀರ್ಣಾಂ ವಾಪೀಮಿವ ಹೃತೋತ್ಪಲಾಮ್ ॥ ೧೮

ಸಂಚಾರವಿರಲಿಲ್ಲ. ಜನರಲ್ಲಿ ಕಾರ್ಯೋತ್ಸಾಹವಿರಲಿಲ್ಲ. ಅಂಗಡಿಬೀದಿಗಳು ಮುಚ್ಚಿದ್ದವು. ಅಯೋಧ್ಯೆಯು ಚಂದ್ರನಾಗಲಿ ನಕ್ಷತ್ರಗಳಾಗಲಿ ಕಾಣಿಸದೆ ಮೋಡಮುಸುಕಿದ ಗಗನದಂತಿತ್ತು (೧೩). ಪೇಯದ್ರವ್ಯವಾವುದೂ ಇಲ್ಲದೆ, ಕುಡಿಯುವ ಕುಡಿಕೆಗಳು ಒಡೆದು ಸುತ್ತಲೂ ಹರಡಿ, ಕುಡುಕರೆಲ್ಲರೂ ಹೊರಟುಹೋಗಲು, ಚಲ್ಲಾಪಿಲ್ಲಿಯಾಗಿ ಹಾಳುಬಿದ್ದಿರುವ ಹೆಂಡದಂಗಡಿಯಂತಿತ್ತು (೧೪). ಅಯೋಧ್ಯೆಯು, ಜಗುಲಿಯು ಬಿರಿದು ಬಿರುಕುಗಳಿಂದ ಹಳ್ಳವಾಗಿ, ಉರುಳಿದ ಮುರುಕುಪಾತ್ರೆಗಳಿಂದ ಸಮಾವೃತವಾಗಿ, ಕುಡಿಯುವ ನೀರೆಲ್ಲವೂ ವಿನಿಯುಕ್ತವಾಗಿ ಮುರಿದುಬಿದ್ದ ಅರವಟ್ಟಿಗೆಯಂತಿತ್ತು (೧೫). ಧನುಸ್ಸಿನ ಉಭಯಕೋಟಿಗಳಿಗೂ ಎಳೆದು ಬಿಗಿದು ಕಟ್ಟಿದ್ದ ವಿಶಾಲವಾದ ಮೌರ್ವಿಯು ವೀರಯೋಧರ ಬಾಣಗಳಿಂದ ಕತ್ತರಿಸಲ್ಪಟ್ಟು ನೆಲದ ಮೇಲೆ ಬಿದ್ದಂತೆ ಕರುಣಾಸ್ಪದವಾಗಿತ್ತು (೧೬). ಆ ಅಯೋಧ್ಯಾನಗರಿಯು, ಸಮರೋತ್ಸಾಹಿಯಾದ ಸವಾರನು ದುಡುಕಿ ಸವಾರಿಮಾಡಿ, ಕಡೆಯಲ್ಲಿ ಜೀನು ಮುಂತಾದ ಸಾಮಗ್ರಿಗಳನ್ನು ಕಳಚಿ ಕೈಬಿಡಲು, ಬಳಲಿ ಬೆಂಡಾಗಿ ದುರ್ಬಲವಾದ ಹೆಣ್ಣುಕುದುರೆಯ ಮರಿಯಂತಿತ್ತು (೧೭). ನೀರು ಒಣಗಿ, ಮೀನುಗಳೂ ಆಮೆಗಳೂ ಒಳಗೆ ಹುದುಗಿ, ನೈದಿಲೆಗಳು

ಪುರುಷಸ್ಯಾಪ್ರಹೃಷ್ಟಸ್ಯ ಪ್ರತಿಷಿದ್ಧಾನುಲೇಪನಾಮ್ ।
ಸಂತಪ್ತಾಮಿವ ಶೋಕೇನ ಗಾತ್ರಯಷ್ಟಿಮಭೂಷಣಾಮ್ ॥ ೧೯

ಪ್ರಾವೃಷಿ ಪ್ರವಿಗಾಢಾಯಾಂ ಪ್ರವಿಷ್ಟಸ್ಯಾಭ್ರಮಂಡಲಮ್ ।
ಪ್ರಚ್ಛನ್ನಾಂ ನೀಲಜೀಮೂತೈರ್ಭಾಸ್ಕರಸ್ಯ ಪ್ರಭಾಮಿವ ॥ ೨೦

ನಿಹತಾಂ ಪ್ರತಿಸೈನ್ಯೇನ ವಡವಾಮಿವ ಪಾಲಿತಾಮ್ ।
ಭರತಸ್ತು ರಥಸ್ಥಃ ಸನ್ ಶ್ರೀಮಾನ್ ದಶರಥಾತ್ಮಜಃ ॥ ೨೧

ವಾಹಯಂತಂ ರಥಂ ಶ್ರೇಷ್ಠಂ ಸಾರಥಿಂ ವಾಕ್ಯಮಬ್ರವೀತ್ ।
ಕಿಂ ನು ಖಲ್ವದ್ಯ ಗಂಭೀರೋ ಮೂರ್ಛಿತೋ ನ ನಿಶಮ್ಯತೇ ॥ ೨೨

ಯಥಾಪುರಮಯೋಧ್ಯಾಯಾಂ ಗೀತವಾದ್ರಿತನಿಸ್ವನಃ ।
ವಾರುಣೀಮದಗಂಧಶ್ಚ ಮಾಲ್ಯಗಂಧಶ್ಚ ಮೂರ್ಛಿತಃ ॥ ೨೩

ಧೂಪಿತಾಗರುಗಂಧಶ್ಚ ನ ಪ್ರವಾತಿ ಸಮಂತತಃ ।
ಯಾನಪ್ರವರಘೋಷಶ್ಚ ಸ್ನಿಗ್ಧಶ್ಚ ಹಯನಿಸ್ವನಃ ॥ ೨೪

ಪ್ರಮತ್ತಗಜನಾದಶ್ಚ ಮಹಾಂಶ್ಚ ರಥನಿಸ್ವನಃ ।
ನೇದಾನೀಂ ಶ್ರೂಯತೇ ಪುರ್ಯಾಮಸ್ಯಾಂ ರಾಮೇ ವಿವಾಸಿತೇ ॥

ನಾಶವಾಗಿ, ದಡವೆಲ್ಲವೂ ಕುಸಿದುಬಿದ್ದ ಕೊಳದಂತಿತ್ತು ಶೋಕದಿಂದ ಬಸವಳಿದು ಅಂಗಲೇಪನವನ್ನು ಅಲ್ಲಗಳೆದು, ಒಡವೆಗಳನ್ನು ಕಿತ್ತೆಸೆದು, ದುಃಖದಿಂದ ಕುದಿಯುವ ಪುರುಷನ ದೇಹದಂತಿತ್ತು (೧೮-೧೯). ಗಾಢವಾದ ಮಳೆಗಾಲದಲ್ಲಿ ಗಗನಮಂಡಲವನ್ನೇರಿ ಬಂದ ಸೂರ್ಯನ ಪ್ರಭೆಯನ್ನು ಕಾರ್ಮೋಡಗಳು ಅಡ್ಡಗಟ್ಟಿ ಮುಸುಕಿದಂತಾಗಿತ್ತು. ಪ್ರೀತಿಯಿಂದ ಪೋಷಿಸಿದ ಹೆಣ್ಣುಕುದುರೆಯನ್ನು ಶತ್ರುಸೈನ್ಯವು ಹೊಡೆದು ಉರುಳಿಸಿದಂತಾಗಿತ್ತು (೨೦-೨೧). ಇದೆಲ್ಲವನ್ನೂ ರಥದಲ್ಲಿ ಕುಳಿತು ನೋಡುತ್ತ ಹೋಗುತ್ತಿದ್ದ ದಶರಥಕುಮಾರನಾದ ಭರತನು ಶೋಕಾವಿಷ್ಟನಾಗಿ ಸಾರಥಿಯನ್ನು ಕುರಿತು ಹೀಗೆಂದನು : ''ಸುಮಂತ್ರ, ಅಯೋಧ್ಯೆಯಲ್ಲಿ ಹಿಂದಿನಂತೆ ಗೀತವಾದ್ಯಗಳ ಮಂಜುಳ ನಿನಾದವಿಲ್ಲ. ಪಾನಭೂಮಿಯಿಂದ ಮದ್ಯದ ಗಂಧವು ಬರುತ್ತಿಲ್ಲ. ಹೂಗಳ ಸುವಾಸನೆ ಹರಡಿಲ್ಲ (೨೨-೨೩). ಅಗರುಧೂಪಗಳ ಸುಗಂಧವು ವ್ಯಾಪಿಸಿಲ್ಲ. ವಾಹನಗಳ ಶಬ್ದವಿಲ್ಲ. ಕುದುರೆಗಳ ಸದ್ದಿಲ್ಲ. ಆನೆಗಳ ಘೀಂಕಾರವಿಲ್ಲ. ರಥಗಳ

ಚಂದನಾಗರುಗಂಧಾಶ್ಚ ಮಹಾರ್ಹಾಶ್ಚ ನವಸ್ರಜಃ ।
ಗತೇ ಹಿ ರಾಮೇ ತರುಣಾಃ ಸಂತಪ್ತಾ ನೋಪಭುಂಜತೇ ॥ ೨೬

ಬಹಿರ್ಯಾತ್ರಾಂ ನ ಗಚ್ಛಂತಿ ಚಿತ್ರಮಾಲ್ಯಧರಾ ನರಾಃ ।
ನೋತ್ಸವಾಃ ಸಂಪ್ರವರ್ತಂತೇ ರಾಮಶೋಕಾರ್ದಿತೇ ಪುರೇ ॥ ೨೭

ಸಹ ನೂನಂ ಮಮ ಭ್ರಾತ್ರಾ ಪುರಸ್ಯಾಸ್ಯ ದ್ಯುತಿರ್ಗತಾ ।
ನ ಹಿ ರಾಜತ್ಯಯೋಧ್ಯೇಯಂ ಸಾಸಾರೇವಾರ್ಜುನೀ ಕ್ಷಪಾ ॥ ೨೮

ಕದಾ ನು ಖಲು ಮೇ ಭ್ರಾತಾ ಮಹೋತ್ಸವ ಇವಾಗತಃ ।
ಜನಯಿಷ್ಯತ್ಯಯೋಧ್ಯಾಯಾಂ ಹರ್ಷಂ ಗ್ರೀಷ್ಮ ಇವಾಂಬುದಃ ॥ ೨೯

ತರುಣೈಶ್ಚಾರುವೇಷೈಶ್ಚ ನರೈರುನ್ನತಗಾಮಿಭಿಃ ।
ಸಂಪತದ್ಭಿರಯೋಧ್ಯಾಯಾಂ ನಾಭಿಭಾಂತಿ ಮಹಾಪಥಾಃ ॥ ೩೦

ಏವಂ ಬಹುವಿಧಂ ಜಲ್ಪನ್ ವಿವೇಶ ವಸತಿಂ ಪಿತುಃ ।
ತೇನ ಹೀನಾಂ ನರೇಂದ್ರೇಣ ಸಿಂಹಹೀನಾಂ ಗುಹಾಮಿವ ॥ ೩೧

ಚೀತ್ಕಾರವಿಲ್ಲ. ಶ್ರೀರಾಮನು ವನಕ್ಕೆ ಹೊರಟುಹೋದಮೇಲೆ ಇವೆಲ್ಲವೂ ಅಡಗಿಹೋದವು (೨೪-೨೫). ಶ್ರೀರಾಮನು ಹೊರಟುಹೋದನೆಂದು ಈ ತರುಣರೂ ದುಃಖಿತರಾಗಿದ್ದಾರೆ. ಇವರಿಗೆ ಚಂದನಾಗರುಗಳ ಸುಗಂಧವೂ ಬೇಡವಾಗಿದೆ. ಬೆಲೆಬಾಳುವ ಹೊಸಮಾಲೆಗಳೂ ಬೇಡವಾಗಿದೆ. ಇವನ್ನು ಇವರು ಉಪಯೋಗಿಸುತ್ತಿಲ್ಲ (೨೬). ವಿಚಿತ್ರವಾದ ಮಾಲೆಗಳನ್ನು ಧರಿಸಿಕೊಂಡು ಜನರು ಸಂಚಾರಕ್ಕೆ ಹೊರಡುತ್ತಿಲ್ಲ. ಉತ್ಸವಗಳೆಲ್ಲವೂ ನಿಂತುಹೋಗಿವೆ. ಈ ಪುರವು ಶ್ರೀರಾಮನ ವಿರಹಶೋಕದಿಂದ ಸಂತಪ್ತವಾಗಿದೆ (೨೭). ಸುಮಂತ್ರ, ನನ್ನ ಅಣ್ಣನೊಡನೆ ಈ ನಗರದ ಕಾಂತಿಯೇ ಹೊರಟುಹೋಯಿತು. ಈ ಅಯೋಧ್ಯೆ ಶೋಭಿಸುವುದೇ ಇಲ್ಲ. ಜಡಿಮಳೆಯು ಹೊಡೆಯುತ್ತಿರುವ ಶುಕ್ಲಪಕ್ಷದ ರಾತ್ರಿಯಂತೆ ಕಾಣುತ್ತಿದೆ (೨೮). ಸುಮಂತ್ರ, ನನ್ನ ಅಣ್ಣನು ಯಾವಾಗ ಇಲ್ಲಿಗೆ ಮರಳಿ ಬಂದಾನು! ಮಹೋತ್ಸವವನ್ನು ತಂದಾನು! ಉರಿಯುವ ಬೇಸಿಗೆಯಲ್ಲಿ ತಂಪಾದ ಮೋಡದಂತೆ ಬಂದು ಅಯೋಧ್ಯೆಗೆ ಹರ್ಷವನ್ನು ತಂದಾನು! (೨೯). ತರುಣರು ಸುಂದರವಾಗಿ ಅಲಂಕರಿಸಿಕೊಂಡು ರಾಜಬೀದಿಗಳಲ್ಲಿ ಹಿಗ್ಗುತ್ತ ಬರುತ್ತಲೇ ಇಲ್ಲ. ಈ ಬೀದಿಗಳಿಗೆ ಮೊದಲಿನ ಕಳೆಯೇ ಇಲ್ಲ" ಎಂದು ನಾನಾವಿಧವಾಗಿ ಹಲುಬುತ್ತ ಭರತನು ತಂದೆಯ ಅರಮನೆಯನ್ನು

ತದಾ ತದಂತಃಪುರಮುಜ್ಝಿತಪ್ರಭಂ
ಸುರೈರಿವೋತ್ಸೃಷ್ಟಮಭಾಸ್ಕರಂ ದಿನಮ್ ।
ನಿರೀಕ್ಷ್ಯ ಸರ್ವಂ ತು ವಿವಿಕ್ತಮಾತ್ಮವಾನ್
ಮುಮೋಚ ಬಾಷ್ಪಂ ಭರತಃ ಸುದುಃಖಿತಃ ॥ ೩೨

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ
ಚತುರ್ದಶಾಧಿಕಶತತಮಃ ಸರ್ಗಃ

***

ಪ್ರವೇಶಿಸಿದನು. ಆದರೆ ಆ ನರೇಂದ್ರನು ಇಲ್ಲದ್ದರಿಂದ ಅರಮನೆಯ ಮೃಗೇಂದ್ರನಿಲ್ಲದ ಗುಹೆಯಾಗಿತ್ತು (೩೦-೩೧). ಸೂರ್ಯನಿಲ್ಲದೆ ದೇವಸಂಚಾರಹೀನವಾದ ದಿವಸದಂತೆ ಅಂತಃಪುರವು ಶೂನ್ಯವಾಗಿತ್ತು; ತೇಜೋಹೀನವಾಗಿತ್ತು. ಅದೆಲ್ಲವನ್ನೂ ನೋಡಿ ಭರತನಿಗೆ ದುಃಖವು ಉಮ್ಮಳಿಸಿತು; ಕಣ್ಣೀರು ಹರಿಯಿತು (೩೨).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ನೂರಹದಿನಾಲ್ಕನೆಯ ಸರ್ಗ

***

ಪಂಚದಶಾಧಿಕಶತತಮಃ ಸರ್ಗಃ

ನಂದಿಗ್ರಾಮನಿವಾಸಃ

ತತೋ ನಿಕ್ಷಿಪ್ಯ ಮಾತೄಃ ಸ ಅಯೋಧ್ಯಾಯಾಂ ದೃಢವ್ರತಃ।
ಭರತಃ ಶೋಕಸಂತಪ್ತೋ ಗುರೂನಿದಮಥಾಬ್ರವೀತ್ ॥ ೧

ನಂದಿಗ್ರಾಮಂ ಗಮಿಷ್ಯಾಮಿ ಸರ್ವಾನಾಮಂತ್ರಯೇಽದ್ಯ ವಃ।
ತತ್ರ ದುಃಖಮಿದಂ ಸರ್ವಂ ಸಹಿಷ್ಯೇ ರಾಘವಂ ವಿನಾ ॥ ೨

ಗತಶ್ಚ ಹಿ ದಿವಂ ರಾಜಾ ವನಸ್ಥಶ್ಚ ಗುರುರ್ಮಮ।
ರಾಮಂ ಪ್ರತೀಕ್ಷೇ ರಾಜ್ಯಾಯ ಸ ಹಿ ರಾಜಾ ಮಹಾಯಶಾಃ ॥ ೩

ಏತಚ್ಛ್ರುತ್ವಾ ಶುಭಂ ವಾಕ್ಯಂ ಭರತಸ್ಯ ಮಹಾತ್ಮನಃ।
ಅಬ್ರುವನ್ ಮಂತ್ರಿಣಃ ಸರ್ವೇ ವಸಿಷ್ಠಶ್ಚ ಪುರೋಹಿತಃ ॥ ೪

ಸರ್ಗ ೧೧೫

ಪಾದುಕಾಪಟ್ಟಾಭಿಷೇಕ

ನಂದಿಗ್ರಾಮವಾಸ

ಅನಂತರ ಭರತನು ಅಯೋಧ್ಯೆಯಲ್ಲಿ ತನ್ನ ಮಾತೆಯರು ವಾಸವಾಗಿರುವಂತೆ ವ್ಯವಸ್ಥೆ ಮಾಡಿದನು. ದೃಢಸಂಕಲ್ಪನಾದ ಆ ರಾಜಪುತ್ರನು ಶೋಕಾವಿಷ್ಟನಾಗಿ ತನ್ನ ಗುರುಗಳನ್ನು ಕುರಿತು ''ಮಾನ್ಯರೇ, ನಾನು ನಂದಿಗ್ರಾಮಕ್ಕೆ ಹೋಗಬೇಕೆಂದು ಸಂಕಲ್ಪಿಸಿದ್ದೇನೆ. ನಿಮ್ಮೆಲ್ಲರ ಅನುಜ್ಞೆಯನ್ನು ಬೇಡುತ್ತಿದ್ದೇನೆ. ಶ್ರೀರಾಮನ ವಿಯೋಗದಿಂದಾದ ಈ ಸಮಸ್ತದುಃಖವನ್ನೂ ಅಲ್ಲಿ ಸಹಿಸಿಕೊಂಡಿರುವೆನು (೧-೨). ಮಹಾರಾಜನು ಸ್ವರ್ಗಸ್ಥನಾದನು. ನನ್ನ ಅಣ್ಣನು ವನಸ್ಥನಾದನು. ಈ ರಾಜ್ಯ ಭಾರವನ್ನು ವಹಿಸಿಕೊಳ್ಳಲು ಶ್ರೀರಾಮನು ಯಾವಾಗ ಬರುವನೆಂದು ನಿರೀಕ್ಷಿಸುತ್ತಿದ್ದೇನೆ. ಕೀರ್ತಿಶಾಲಿಯಾದ ಆತನೇ ಈ ಕೋಸಲದೇಶಕ್ಕೆ ಅಧಿಪತಿ'' ಎಂದು ಅರಿಕೆ ಮಾಡಿದನು (೩). ಮಹಾತ್ಮನಾದ ಭರತನ ಈ ಶುಭವಾಕ್ಯವನ್ನು ಕೇಳಿ ವಸಿಷ್ಠರೂ ಮಂತ್ರಿಗಳೂ ''ಭರತ, ನೀನು ಆಡಿದ ಮಾತು (ನಿನ್ನ ವಂಶದ ಯೋಗ್ಯತೆಗೆ)

ಸದೃಶಂ ಶ್ಲಾಘನೀಯಂ ಚ ಯದುಕ್ತಂ ಭರತ ತ್ವಯಾ ।
ವಚನಂ ಭ್ರಾತೃವಾತ್ಸಲ್ಯಾದನುರೂಪಂ ತಥೈವ ತತ್ ॥ ೫

ನಿತ್ಯಂ ತೇ ಬಂಧುಲುಬ್ಧಸ್ಯ ತಿಷ್ಠತೋ ಭ್ರಾತೃಸೌಹೃದೇ ।
ಆರ್ಯಮಾರ್ಗಂ ಪ್ರಪನ್ನಸ್ಯ ನಾನುಮನ್ಯೇತ ಕಃ ಪುಮಾನ್ ॥ ೬

ಮಂತ್ರಿಣಾಂ ವಚನಂ ಶ್ರುತ್ವಾ ಯಥಾಭಿಲಷಿತಂ ಪ್ರಿಯಮ್ ।
ಅಬ್ರವೀತ್ಸಾರಥಿಂ ವಾಕ್ಯಂ ರಥೋ ಮೇ ಯುಜ್ಯತಾಮಿತಿ ॥ ೭

ಪ್ರಹೃಷ್ಟವದನಃ ಸರ್ವಾ ಮಾತೄಃ ಸಮಭಿವಾದ್ಯ ಸಃ ।
ಆರುರೋಹ ರಥಂ ಶ್ರೀಮಾನ್ ಶತ್ರುಘ್ನೇನ ಸಮನ್ವಿತಃ ॥ ೮

ಆರುಹ್ಯ ತ ರಥಂ ಶೀಘ್ರಂ ಶತ್ರುಘ್ನಭರತಾವುಭೌ ।
ಯಯತುಃ ಪರಮಪ್ರೀತೌ ವೃತೌ ಮಂತ್ರಿಪುರೋಹಿತೈಃ ॥ ೯

ಅಗ್ರತೋ ಗುರವಸ್ತತ್ರ ವಸಿಷ್ಠಪ್ರಮುಖಾ ದ್ವಿಜಾಃ ।
ಪ್ರಯಯುಃ ಪ್ರಾಙ್ಮುಖಾಃ ಸರ್ವೇ ನಂದಿಗ್ರಾಮೋ ಯತೋಽಭವತ್

ಸದೃಶವಾಗಿದೆ; ಪ್ರಶಂಸನೀಯವಾಗಿದೆ. ಭ್ರಾತೃವಾತ್ಸಲ್ಯದಿಂದ ಬಂದ ಈ ನಿಶ್ಚಯವಚನವು ನಿನಗೆ ಅನುರೂಪವಾಗಿದೆ. (ಹೀಗೆ ನುಡಿಯುವವರು ಯಾರಿದ್ದಾರೆ?) (೪-೫). ಬಂಧುಗಳೆಂದರೆ ಆಸೆಪಡುತ್ತ ಸೋದರಸ್ನೇಹದಲ್ಲಿ ನೆಲೆಸಿದ್ದೀಯೆ. ಸಕಲ ಸಮ್ಮಾನ್ಯವಾದ ಮಾರ್ಗದಲ್ಲಿ ಹೊರಟಿರುವ ನಿನ್ನ ನಿಲುವನ್ನು ಒಪ್ಪದವನಾರು?'' ಎಂದರು (೬). ಅವರು ತನ್ನ ಇಷ್ಟಕ್ಕೆ ಅಡ್ಡಿ ಮಾಡದೆ ಪ್ರಿಯವಾದ ವಚನವನ್ನೇ ನುಡಿದರೆಂದು ಭರತನು ಸಂತುಷ್ಟನಾಗಿ, ರಥವನ್ನು ಸಿದ್ಧಪಡಿಸಬೇಕೆಂದು ಸಾರಥಿಗೆ ಸೂಚಿಸಿದನು (೭). ತನ್ನ ಇಷ್ಟವು ನೆರವೇರಿತೆಂದು ಭರತನ ಮುಖವು ಅರಳಿತು. ಅವನು ಮಾತೆಯರೆಲ್ಲರಿಗೂ ಅಭಿವಾದನೆ ಮಾಡಿ ಶತ್ರುಘ್ನನೊಡನೆ ರಥವನ್ನೇರಿದನು. ಭರತ ಶತ್ರುಘ್ನರಿಬ್ಬರೂ ಸಂತೃಪ್ತಿಯಿಂದ ರಥವನ್ನೇರಿ ತಡಮಾಡದೆ ಮಂತ್ರಿ ಪುರೋಹಿತರುಗಳನ್ನು ಕರೆದುಕೊಂಡು ಹೊರಟರು (೮-೯). ಮುಂದುಗಡೆ ವಸಿಷ್ಠರೇ ಮೊದಲಾದ ದ್ವಿಜಶ್ರೇಷ್ಠರು ನಂದಿಗ್ರಾಮದ ಕಡೆಗೆ ಪೂರ್ವಾಭಿಮುಖರಾಗಿ

ಬಲಂ ಚ ತದನಾಹೂತಂ ಗಜಾಶ್ವರಥಸಂಕುಲಮ್ ।
ಪ್ರಯಯೌ ಭರತೇ ಯಾತೇ ಸರ್ವೇ ಚ ಪುರವಾಸಿನಃ ॥ ೧೧

ರಥಸ್ಥಃ ಸ ಹಿ ಧರ್ಮಾತ್ಮಾ ಭರತೋ ಭ್ರಾತೃವತ್ಸಲಃ ।
ನಂದಿಗ್ರಾಮಂ ಯಯೌ ತೂರ್ಣಂ ಶಿರಸ್ಯಾಧಾಯ ಪಾದುಕೇ ॥ ೧೨

ತತಸ್ತು ಭರತಃ ಕ್ಷಿಪ್ರಂ ನಂದಿಗ್ರಾಮಂ ಪ್ರವಿಶ್ಯ ಸಃ ।
ಅವತೀರ್ಯ ರಥಾತ್ತೂರ್ಣಂ ಗುರೂನಿದಮುವಾಚ ಹ ॥ ೧೩

ಏತದ್ರಾಜ್ಯಂ ಮಮ ಭ್ರಾತ್ರಾ ದತ್ತಂ ಸನ್ನ್ಯಾಸವತ್ ಸ್ವಯಮ್ ।
ಯೋಗಕ್ಷೇಮವಹೇ ತಸ್ಯ ಪಾದಕೇ ಹೇಮಭೂಷಿತೇ ॥ ೧೪

ಭರತಃ ಶಿರಸಾ ಕೃತ್ವಾ ಸನ್ನ್ಯಾಸಂ ಪಾದುಕೇ ತತಃ ।
ಅಬ್ರವೀದ್ದುಃಖಸಂತಪ್ತಃ ಸರ್ವಂ ಪ್ರಕೃತಿಮಂಡಲಮ್ ॥ ೧೫

ಛತ್ರಂ ಧಾರಯತ ಕ್ಷಿಪ್ರಮಾರ್ಯಪಾದಾವಿಮೌ ಮತೌ ।
ಆಭ್ಯಾಂ ರಾಜ್ಯೇ ಸ್ಥಿತೋ ಧರ್ಮಃ ಪಾದುಕಾಭ್ಯಾಂ ಗುರೋರ್ಮಮ ॥

ಪ್ರಯಾಣ ಮಾಡಿದರು. ಭರತನು ತನ್ನೊಡನೆ ಬರುವಂತೆ ತಿಳಿಸದಿದ್ದರೂ ಚತುರಂಗ ಸೇನೆಯು ಅವನ ಹಿಂದೆ ಹೊರಟಿತು. ಹಾಗೆಯೇ ನಗರವಾಸಿಗಳೂ ಅವನನ್ನು ಹಿಂಬಾಲಿಸಿ ಬಂದರು (೧೦-೧೧). ಧರ್ಮಾತ್ಮನಾದ ಭರತನು ರಥದಲ್ಲಿ ಕುಳಿತು ನಂದಿಗ್ರಾಮಕ್ಕೆ ಹೋಗುವಾಗ ಅಣ್ಣನ ಮೇಲಿನ ಪ್ರೀತಿಯಿಂದ ಅವನ ಪಾದುಕೆಗಳನ್ನು ತನ್ನ ಶಿರಸ್ಸಿನ ಮೇಲೆ ಇಟ್ಟುಕೊಂಡಿದ್ದನು (೧೨). ನಂದಿಗ್ರಾಮಕ್ಕೆ ಹೋದೊಡನೆ ಭರತನು ರಥದಿಂದಿಳಿದು ಸಮೀಪದಲ್ಲಿದ್ದ ವಸಿಷ್ಠರೇ ಮೊದಲಾದ ಹಿರಿಯರನ್ನು ನೋಡಿ ''ಪೂಜ್ಯರೇ, ಈ ರಾಜ್ಯವನ್ನು ನನ್ನ ಅಣ್ಣನು ನ್ಯಾಸರೂಪವಾಗಿ ನನ್ನಲ್ಲಿ ಇಟ್ಟಿದ್ದಾನೆ. ಸುವರ್ಣಭೂಷಿತವಾದ ಈ ಪಾದುಕೆಗಳು ರಾಷ್ಟ್ರದ ಯೋಗಕ್ಷೇಮಗಳನ್ನು ನಿರ್ವಹಿಸುತ್ತವೆ' ಎಂದು ಹೇಳಿದನು (೧೩-೧೪). ಶ್ರೀರಾಮನು ತನ್ನ ಪ್ರತಿನಿಧಿಯಾಗಿ ಕೊಟ್ಟಿದ್ದ ಆ ಪಾದುಕೆಗಳಿಗೆ ಭರತನು ತಲೆಬಾಗಿ ವಂದಿಸಿ, ಅಲ್ಲಿ ನೆರೆದಿದ್ದ ಸಕಲ ಅಧಿಕಾರಿಗಳನ್ನೂ ಪ್ರಜೆಗಳನ್ನೂ ಕುರಿತು ದುಃಖಿಸುತ್ತ ಹೀಗೆಂದನು (೧೫) : ''ಈ ಪಾದುಕೆಗಳ ಮೇಲೆ ಶ್ವೇತಚ್ಛತ್ರ ಚಾಮರಾದಿಗಳನ್ನು ಹಿಡಿಯಿರಿ. ಇವು ನನ್ನ ಅಣ್ಣನ

ಭ್ರಾತ್ರಾ ಹಿ ಮಯಿ ಸನ್ನ್ಯಾಸೋ ನಿಕ್ಷಿಪ್ತಃ ಸೌಹೃದಾದಯಮ್ ।
ತಮಿಮಂ ಪಾಲಯಿಷ್ಯಾಮಿ ರಾಘವಾಗಮನಂ ಪ್ರತಿ ॥ ೧೭

ಕ್ಷಿಪ್ರಂ ಸಂಯೋಜಯಿತ್ವಾ ತು ರಾಘವಸ್ಯ ಪುನಃ ಸ್ವಯಮ್ ।
ಚರಣೌ ತೌ ತು ರಾಮಸ್ಯ ದ್ರಕ್ಷ್ಯಾಮಿ ಸಹಪಾದುಕೌ ॥ ೧೮

ತತೋ ನಿಕ್ಷಿಪ್ತಭಾರೋಽಹಂ ರಾಘವೇಣ ಸಮಾಗತಃ ।
ನಿವೇದ್ಯ ಗುರವೇ ರಾಜ್ಯಂ ಭಜಿಷ್ಯೇ ಗುರುವರ್ತಿತಾಮ್ ॥ ೧೯

ರಾಘವಾಯ ಚ ಸನ್ನ್ಯಾಸಂ ದತ್ತ್ವೇಮೇ ವರಪಾದುಕೇ ।
ರಾಜ್ಯಂ ಚೇದಮಯೋಧ್ಯಾಂ ಚ ಧೂತಪಾಪೋ ಭವಾಮ್ಯಹಮ್ ॥

ಅಭಿಷಿಕ್ತೇ ತು ಕಾಕುತ್ಸ್ಥೇ ಪ್ರಹೃಷ್ಟಮುದಿತೇ ಜನೇ ।
ಪ್ರೀತಿರ್ಮಮ ಯಶಶ್ಚೈವ ಭವೇದ್ರಾಜ್ಯಾಚ್ಚತುರ್ಗುಣಮ್ ॥ ೨೧

ಸಾಕ್ಷಾತ್ ಪಾದಗಳೆಂದು ತಿಳಿಯತಕ್ಕದ್ದು. ಇವುಗಳಿಂದಲೇ ರಾಷ್ಟ್ರದಲ್ಲಿ ಧರ್ಮಪಾಲನೆಯು ನಡೆಯುತ್ತದೆ (೧೬). ನನ್ನ ಅಣ್ಣನು ಸೌಹಾರ್ದದಿಂದ ಈ ಪಾದುಕೆಗಳನ್ನು ನ್ಯಾಸವಾಗಿ ನನ್ನಲ್ಲಿಟ್ಟಿರುವನು. ಅವನು ಬರುವವರೆಗೆ ನಾನು ಇವುಗಳ ಸೇವೆಯಲ್ಲಿ ನಿರತವಾಗಿರುವೆನು (೧೭). ಶ್ರೀರಾಮನು ಆಗಮಿಸಿದೊಡನೆ ಇವನ್ನು ಆತನ ಪಾದಗಳಿಗೆ ತೊಡಿಸಿ, ಪಾದುಕಾಲಂಕೃತವಾದ ಆ ಪಾದಗಳನ್ನು ನೋಡಿ ಸಂತೋಷಿಸುವೆನು (೧೮). ಶ್ರೀರಾಮನಿಗೆ ಅವನ ರಾಜ್ಯವನ್ನು ಒಪ್ಪಿಸಿದ ಮೇಲೆ ನನ್ನ ಭಾರವು ಹಗುರವಾಗುವುದು. ಆತನಿಗೆ ಈ ರಾಜ್ಯವನ್ನು ಸಮರ್ಪಿಸಿ ಅಣ್ಣನನ್ನು ಸೇವಿಸಿಕೊಂಡಿರುವೆನು (೧೯). ನ್ಯಾಸಭೂತವಾದ ಈ ಶ್ರೇಷ್ಠಪಾದುಕೆಗಳನ್ನೂ ಈ ರಾಷ್ಟ್ರವನ್ನೂ ಅಯೋಧ್ಯೆಯನ್ನೂ ಶ್ರೀರಾಮನಿಗೆ ಅರ್ಪಿಸುವವರೆಗೂ ನನ್ನ ಮನಸ್ಸಿಗೆ ಶಾಂತಿಯಿಲ್ಲ. ಆಗಲೇ ನನ್ನ ಪಾಪವು ತೊಳೆದೀತು (೨೦). 'ಶ್ರೀರಾಮನಿಗೆ ಪಟ್ಟಾಭಿಷೇಕವಾಗಬೇಕು – ಪ್ರಜೆಗಳೆಲ್ಲರೂ ಆನಂದದಿಂದ ನಲಿಯಬೇಕು' ಆಗಲೇ ನನ್ನ ಮನಸ್ಸಿಗೆ ನೆಮ್ಮದಿ. ಆಗಲೇ ನನಗೆ ಒಳ್ಳೆಯ ಹೆಸರು ಬಂದೀತು. ಆಗ ನನಗಾಗುವ ಸಂತೋಷ ರಾಜ್ಯಲಾಭಕ್ಕಿಂತ ನಾಲ್ಮಡಿ ಹೆಚ್ಚುವುದು'' ಎಂದು ದೈನ್ಯದಿಂದ ಹಲುಬಿದನು

ಏವಂ ತು ವಿಲಪನ್ ದೀನೋ ಭರತಃ ಸ ಮಹಾಯಶಾಃ ।
ನಂದಿಗ್ರಾಮೇಽಕರೋದ್ರಾಜ್ಯಂ ದುಃಖಿತೋ ಮಂತ್ರಿಭಿಃ ಸಹ ॥ ೨೨

ಸ ವಲ್ಕಲಜಟಾಧಾರೀ ಮುನಿವೇಷಧರಃ ಪ್ರಭುಃ ।
ನಂದಿಗ್ರಾಮೇಽವಸದ್ವೀರಃ ಸಸೈನ್ಯೋ ಭರತಸ್ತದಾ ॥ ೨೩

ರಾಮಾಗಮನಮಾಕಾಂಕ್ಷನ್ ಭರತೋ ಭ್ರಾತೃವತ್ಸಲಃ ।
ಭ್ರಾತುರ್ವಚನಕಾರೀ ಚ ಪ್ರತಿಜ್ಞಾಪಾರಗಸ್ತಥಾ ॥ ೨೪

ಪಾದುಕೇ ತ್ವಭಿಷಿಚ್ಯಾಥ ನಂದಿಗ್ರಾಮೇಽವಸತ್ತದಾ ।
ಸ ವಾಲವ್ಯಜನಂ ಛತ್ರಂ ಧಾರಯಾಮಾಸ ಚ ಸ್ವಯಮ್ ॥ ೨೫

ಭರತಃ ಶಾಸನಂ ಸರ್ವಂ ಪಾದುಕಾಭ್ಯಾಂ ನ್ಯವೇದಯತ್ ।
ತತಸ್ತು ಭರತಃ ಶ್ರೀಮಾನಭಿಷಿಚ್ಯಾರ್ಯಪಾದುಕೇ ॥ ೨೬

ತದಧೀನಸ್ತದಾ ರಾಜ್ಯಂ ಕಾರಯಾಮಾಸ ಸರ್ವದಾ ॥
ಯದಾ ಹಿ ಯತ್ಕಾರ್ಯಮುಪೈತಿ ಕಿಂಚಿ-
ದುಪಾಯನಂ ಚೋಪಹೃತಂ ಮಹಾರ್ಹಮ್ ।

---

(೨೧). ಮಂತ್ರಿಗಳೊಡನೆ ನಂದಿಗ್ರಾಮದಲ್ಲಿದ್ದು ರಾಜ್ಯಭಾರವನ್ನು ನಡೆಸಬೇಕೆಂದು ಉದ್ದೇಶಿಸಿದನು. ಆ ಧೀರನು ಜಟೆಯನ್ನು ಬೆಳೆಸಿ ನಾರುಬಟ್ಟೆಯನ್ನು ಧರಿಸಿ ಸೇನಾಸಮೇತನಾಗಿ ನಂದಿಗ್ರಾಮದಲ್ಲಿ ನೆಲೆಸಿದನು (೨೨-೨೩). ಭ್ರಾತೃವತ್ಸಲನಾದ ಭರತನು ಶ್ರೀರಾಮನ ಆಗಮನವನ್ನು ನಿರೀಕ್ಷಿಸುತ್ತ, ಅವನು ಹೇಳಿದ ಬುದ್ಧಿವಾದಗಳಂತೆ ನಡೆಯುತ್ತ, ತನ್ನ ಪ್ರತಿಜ್ಞೆಯನ್ನು ನಡೆಸಲೇಬೇಕೆಂದು ದೃಢನಿಷ್ಠೆಯಲ್ಲಿದ್ದನು (೨೪). ಆತನು ಶ್ರೀರಾಮನ ಪಾದುಕೆಗಳನ್ನು ಸಿಂಹಾಸನದಲ್ಲಿಟ್ಟು ಪಟ್ಟಾಭಿಷೇಕಮಾಡಿದನು. ಆ ಸಮಯದಲ್ಲಿ ಪಾದುಕೆಗಳಿಗೆ ಛತ್ರಚಾಮರಗಳನ್ನು ತಾನೇ ಹಿಡಿದು ನಿಂತನು (೨೫). ಹೀಗೆ ಭರತನು ಅಣ್ಣನ ಪಾದುಕೆಗಳಿಗೆ ಪಟ್ಟಾಭಿಷೇಕಮಾಡಿ, ರಾಜಕಾರ್ಯಗಳೆಲ್ಲವನ್ನೂ ಪ್ರತಿದಿನ ಆ ಪಾದುಕೆಗಳಿಗೆ ಅರಿಕೆಮಾಡಿಕೊಳ್ಳುತ್ತ, ಅವುಗಳಿಗೆ ಅಧೀನನಾಗಿ ರಾಜಕಾರ್ಯಗಳನ್ನು ನಡೆಸಲಾರಂಭಿಸಿದನು (೨೬). ಯಾವುದೊಂದು ರಾಜಕಾರ್ಯವು ಒದಗಿದರೂ ಭರತನು ಪಾದುಕೆಗಳೆದುರಿಗೆ ನಿಂತು ವಿಜ್ಞಾಪಿಸಿಕೊಳ್ಳುತ್ತಿದ್ದನು. ಬೆಲೆಬಾಳುವ ಯಾವುದೊಂದು ಕಾಣಿಕೆಯು ಬಂದರೂ

ಸ ಪಾದುಕಾಭ್ಯಾಂ ಪ್ರಥಮಂ ನಿವೇದ್ಯ
ಚಕಾರ ಪಶ್ಚಾದ್ಭರತೋ ಯಥಾವತ್ ॥ ೨೭

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಪಂಚದಶಾಧಿಕಶತತಮಃ ಸರ್ಗಃ

ಷೋಡಶಾಧಿಕಶತತಮಃ ಸರ್ಗಃ

ಖರವಿಪ್ರಕರಣಕಥನಮ್

ಪ್ರತಿಪ್ರಯಾತೇ ಭರತೇ ವಸನ್ ರಾಮಸ್ತಪೋವನೇ ।
ಲಕ್ಷಯಾಮಾಸ ಸೋದ್ವೇಗಮಥೌತ್ಸುಕ್ಯಂ ತಪಸ್ವಿನಾಮ್ ॥ ೧

ಯೇ ತತ್ರ ಚಿತ್ರಕೂಟಸ್ಯ ಪುರಸ್ತಾತ್ತಾಪಸಾಶ್ರಮೇ ।
ರಾಮಮಾಶ್ರಿತ್ಯ ನಿರತಾಸ್ತಾನಲಕ್ಷಯದುತ್ಸುಕಾನ್ ॥ ೨

ಅದನ್ನು ಮೊದಲು ಪಾದುಕೆಗಳೆದುರಿಗಿಟ್ಟು ಅರಿಕೆ ಮಾಡುತ್ತಿದ್ದನು. ಈ ರೀತಿಯಲ್ಲಿ ಭರತನು ಕೋಸಲರಾಜ್ಯವನ್ನು ಯಥಾಕ್ರಮವಾಗಿ ನಡೆಸಿಕೊಂಡು ಹೋಗುತ್ತಿದ್ದನು (೨೭).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ನೂರಹದಿನೈದನೆಯ ಸರ್ಗ

ಸರ್ಗ ೧೧೬

ಖರಾದಿರಾಕ್ಷಸರಿಂದ ಬಾಧೆಯಾದೀತೆಂದು ಋಷಿಗಳ ಶಂಕೆ. ಋಷಿಗಳು ಚಿತ್ರಕೂಟವನ್ನು ಬಿಟ್ಟುಹೋಗುವುದು.

ಇತ್ತ ಭರತನು ಹೊರಟುಬಂದ ಮೇಲೆ, ಶ್ರೀರಾಮನು ಚಿತ್ರಕೂಟದಲ್ಲಿದ್ದ ತಪೋವನದಲ್ಲಿಯೇ ವಾಸಮಾಡುತ್ತಿದ್ದನು. ಹೀಗಿರಲು ಒಂದು ದಿವಸ ಅಲ್ಲಿದ್ದ ತಪಸ್ವಿಗಳು ಭಯಪಟ್ಟು ಬೇರೊಂದು ಕಡೆಗೆ ಹೋಗಲು ಕುತೂಹಲಗೊಂಡಿರುವುದು ಶ್ರೀರಾಮನಿಗೆ ತಿಳಿಯಿತು (೧). ಚಿತ್ರಕೂಟದ ಆ ತಪೋವನಕ್ಕೆ ಶ್ರೀರಾಮನು ಬಂದಮೇಲೆ, ಆ ಋಷಿಗಳು ಅವನ ಸಮಾಗಮದಿಂದ ಸಂತುಷ್ಟರಾಗಿದ್ದರು. ಆ

ನಯನೈರ್ಭ್ರುಕುಟೀಭಿಶ್ಚ ರಾಮಂ ನಿರ್ದಿಶ್ಯ ಶಂಕಿತಾಃ ।
ಅನ್ಯೋನ್ಯಮುಪಜಲ್ಪಂತಃ ಶನೈಶ್ಚಕ್ರುರ್ಮಿಥಃ ಕಥಾಃ ॥ ೩

ತೇಷಾಮೌತ್ಸುಕ್ಯಮಾಲಕ್ಷ್ಯ ರಾಮಸ್ತ್ವಾತ್ಮನಿ ಶಂಕಿತಃ ।
ಕೃತಾಂಜಲಿರುವಾಚೇದಮೃಷಿಂ ಕುಲಪತಿಂ ತತಃ ॥ ೪

ನ ಕಚ್ಚಿದ್ಭಗವನ್ ಕಿಂಚಿತ್ ಪೂರ್ವವೃತ್ತಮಿದಂ ಮಯಿ ।
ದೃಶ್ಯತೇ ವಿಕೃತಂ ಯೇನ ವಿಕ್ರಿಯಂತೇ ತಪಸ್ವಿನಃ ॥ ೫

ಪ್ರಮಾದಾಚ್ಚರಿತಂ ಕಚ್ಚಿತ್ ಕಚ್ಚಿನ್ನಾವರಜಸ್ಯ ಮೇ ।
ಲಕ್ಷ್ಮಣಸ್ಯರ್ಷಿಭಿರ್ದೃಷ್ಟಂ ನಾನುರೂಪಮಿವಾತ್ಮನಃ ॥ ೬

ಕಚ್ಚಿಚ್ಛುಶ್ರೂಷಮಾಣಾ ವಃ ಶುಶ್ರೂಷಣಪರಾ ಮಯಿ ।
ಪ್ರಮದಾಭ್ಯುಚಿತಾಂ ವೃತ್ತಿಂ ಸೀತಾ ಯುಕ್ತಾಂ ನ ವರ್ತತೇ ॥ ೭

ಅಥರ್ಷಿರ್ಜರಯಾ ವೃದ್ಧಸ್ತಪಸಾ ಚ ಜರಾಂ ಗತಃ ।
ವೇಪಮಾನ ಇವೋವಾಚ ರಾಮಂ ಭೂತದಯಾಪರಮ್ ॥ ೮

ಋಷಿಗಳೇ ಈಗ ಕಳವಳಿಸುವುದು ಶ್ರೀರಾಮನಿಗೆ ಗೋಚರಿಸಿತು (೨). ಅವರು ಭೀತರಾಗಿ ಶ್ರೀರಾಮನ ಕಡೆಗೆ ಕಣ್ಣುಮಿಟುಕಿಸಿ ಹುಬ್ಬುಹಾರಿಸಿ ಒಬ್ಬರಿಗೊಬ್ಬರು ಪಿಸುಗುಟ್ಟುತ್ತ ಮೆಲ್ಲಗೆ ಮಾತನಾಡುತ್ತಿದ್ದರು (೩). ಆ ತಪಸ್ವಿಗಳ ಕಳವಳವನ್ನು ಕಂಡು ಶ್ರೀರಾಮನಿಗೆ ತನ್ನಲ್ಲಿ ಯಾವುದಾದರೂ ತಪ್ಪಿರಬಹುದೆ ಎಂದು ಶಂಕೆಯಾಯಿತು. ಅವನು ಕುಲಪತಿಗಳ ಬಳಿಗೆ ಹೋಗಿ ಕೈಮುಗಿದುಕೊಂಡು ''ಮಹರ್ಷಿಗಳೆ, ಇಲ್ಲಿರುವ ತಪಸ್ವಿಗಳು ನನ್ನನ್ನು ಕಂಡು ಬೇಸರಗೊಂಡಂತೆ ಕಾಣುವುದು. ನನ್ನ ನಡವಳಿಕೆಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲವಷ್ಟೆ? (೪-೫). ನನ್ನ ತಮ್ಮನಾದ ಲಕ್ಷ್ಮಣನು ಪ್ರಮಾದದಿಂದ ಏನಾದರೂ ಮಾಡಿದನೆ? ಅವನಲ್ಲಿ ಅನುಚಿತವಾದ ನಡತೆಯನ್ನೇನಾದರೂ ಋಷಿಗಳು ಕಂಡರೆ? ಅಥವಾ ನನ್ನ ಪತ್ನಿಯಾದ ಸೀತೆಯು ನನ್ನ ಸೇವೆಯಲ್ಲಿಯೇ ನಿರತಳಾಗಿ ತಮ್ಮ ಶುಶ್ರೂಷೆಯಲ್ಲಿ ಅನಾದರವನ್ನು ತೋರಿದಳೆ?'' ಎಂದು ಕೇಳಿದನು (೬-೭). ಆ ಕುಲಪತಿಯು ವಯೋವೃದ್ಧನೂ ತಪೋವೃದ್ಧನೂ ಆಗಿದ್ದನು. ದೇಹವು ಶಿಥಿಲವಾಗಿತ್ತು.

ಕುತಃ ಕಲ್ಯಾಣಸತ್ತ್ವಾಯಾಃ ಕಲ್ಯಾಣಾಭಿರತೇಸ್ತಥಾ ।
ಚಲನಂ ತಾತ ವೈದೇಹ್ಯಾಸ್ತಪಸ್ವಿಷು ವಿಶೇಷತಃ ॥ ೯

ತ್ವನ್ನಿಮಿತ್ತಮಿದಂ ತಾವತ್ತಾಪಸಾನ್ ಪ್ರತಿ ವರ್ತತೇ ।
ರಕ್ಷೋಭ್ಯಸ್ತೇನ ಸಂವಿಗ್ನಾಃ ಕಥಯಂತಿ ಮಿಥಃ ಕಥಾಃ ॥ ೧೦

ರಾವಣಾವರಜಃ ಕಶ್ಚಿತ್ ಖರೋ ನಾಮೇಹ ರಾಕ್ಷಸಃ ।
ಉತ್ಪಾಟ್ಯ ತಾಪಸಾನ್ ಸರ್ವಾನ್ ಜನಸ್ಥಾನನಿಕೇತನಾನ್ ॥ ೧೧

ಧೃಷ್ಟಶ್ಚ ಜಿತಕಾಶೀ ಚ ನೃಶಂಸಃ ಪುರುಷಾದಕಃ ।
ಅವಲಿಪ್ತಶ್ಚ ಪಾಪಶ್ಚ ತ್ವಾಂ ಚ ತಾತ ನ ಮೃಷ್ಯತೇ ॥ ೧೨

ತ್ವಂ ಯದಾಪ್ರಭೃತಿ ಹ್ಯಸ್ಮಿನ್ನಾಶ್ರಮೇ ತಾತ ವರ್ತಸೇ ।
ತದಾಪ್ರಭೃತಿ ರಕ್ಷಾಂಸಿ ವಿಪ್ರಕುರ್ವಂತಿ ತಾಪಸಾನ್ ॥ ೧೩

ಆ ಋಷಿಯು ನಡುಗುತ್ತ* ಸರ್ವಭೂತ ದಯಾಪರನಾದ ಶ್ರೀರಾಮನನ್ನು ಕುರಿತು ಹೀಗೆಂದನು (೮) : "ಇಲ್ಲ, ಇಲ್ಲ! ರಾಮ, ಸೀತೆಯು ಕಲ್ಯಾಣಗುಣಸಂಪನ್ನೆ, ಅವಳ ಬುದ್ಧಿ ಬಹಳ ಒಳ್ಳೆಯದು. ಅವಳು ಎಂದಿಗಾದರೂ ತಪ್ಪಿ ನಡೆದಾಳೆ? ಅದರಲ್ಲಿಯೂ ತಪಸ್ವಿಗಳ ವಿಷಯದಲ್ಲಿ? (೯). ಈ ತಪಸ್ವಿಗಳಿಗೆ ರಾಕ್ಷಸರ ಭಯ ಹುಟ್ಟಿದೆ. ಅದು ನಿನ್ನ ನಿಮಿತ್ತವಾಗಿ. ಇವರು ಅಂಜಿ ತಮ್ಮೊಳಗೆ ಮಾತನಾಡಿಕೊಳ್ಳುತ್ತಿದ್ದಾರೆ. ರಾವಣನ ತಮ್ಮನಾದ ಖರನೆಂಬ ರಾಕ್ಷಸನೊಬ್ಬನಿದ್ದಾನೆ. ಅವನು ಜನಸ್ಥಾನದಲ್ಲಿರುವ ತಾಪಸರನ್ನು ಪೀಡಿಸುತ್ತಿದ್ದಾನೆ (೧೦-೧೧). ಆ ರಾಕ್ಷಸನು ಬಹಳ ಉದ್ಧತ, ಯುದ್ಧವೀರ, ಕ್ರೂರಿ. ಮನುಷ್ಯರನ್ನೇ ತಿನ್ನುತ್ತಾನೆ. ಅವನು ದುರಹಂಕಾರಿ, ಪಾಪಿ. ವತ್ಸ - ರಾಮ, ನೀನು ಇಲ್ಲಿರುವುದನ್ನು ಖರನು ಸಹಿಸಲಾರ (೧೨). ನೀನು ಯಾವಾಗ ಈ ಆಶ್ರಮಕ್ಕೆ ಬಂದು ನಿಂತೆಯೊ, ಆಗಿನಿಂದ ರಾಕ್ಷಸರು ಈ ತಾಪಸರಿಗೆ ತೊಂದರೆ ಮಾಡುತ್ತಿದ್ದಾರೆ. ಈ ರಾಕ್ಷಸರು ಅಸಹ್ಯವೂ ಕ್ರೂರವೂ ಭಯಂಕರವೂ ವಿಲಕ್ಷಣವೂ ಆದ ನಾನಾಬಗೆಯ

---

* ವೃದ್ಧನಾದ್ದರಿಂದ ದೇಹವು ನಡುಗುತ್ತಿತ್ತು. ಮತ್ತು ಶ್ರೀರಾಮನ ಪ್ರಶ್ನೆಯನ್ನು ಕೇಳಿದಾಗ, ಶ್ರೀರಾಮನಲ್ಲಿ ಯಾವ ತಪ್ಪೂ ಇಲ್ಲದ್ದರಿಂದ ಅವನ ಶಂಕೆಯನ್ನು ನಿಷೇಧಿಸುವುದಕ್ಕಾಗಿ ತನ್ನ ಶಿರಸ್ಸನ್ನು ಅಲ್ಲಾಡಿಸಿದನು.

ದರ್ಶಯಂತಿ ಹಿ ಭೀಭತ್ಸೈಃ ಕ್ರೂರೈರ್ಭೀಷಣಕೈರಪಿ ।
ನಾನಾರೂಪೈರ್ವಿರೂಪೈಶ್ಚ ರೂಪೈರ್ವಿಕೃತದರ್ಶನೈಃ ॥ ೧೪

ಅಪ್ರಶಸ್ತೈರಶುಚಿಭಿಃ ಸಂಪ್ರಯೋಜ್ಯ ಚ ತಾಪಸಾನ್ ।
ಪ್ರತಿಘ್ನಂತ್ಯಪರಾನ್ ಕ್ಷಿಪ್ರಂ ಮಾಯಯಾ ಪುರತಃ ಸ್ಥಿತಾನ್ ॥ ೧೫

ತೇಷು ತೇಷ್ವಾಶ್ರಮಸ್ಥಾನೇಷ್ವಬುದ್ಧಮವಲೀಯ ಚ ।
ರಮಂತೇ ತಾಪಸಾಂಸ್ತತ್ರ ನಾಶಯಂತೋಽಲ್ಪಚೇತಸಃ ॥ ೧೬

ಅಪಕ್ಷಿಪಂತಿ ಸೃಗ್ಭಾಂಡಾನಗ್ನೀನ್ ಸಿಂಚಂತಿ ವಾರಿಣಾ ।
ಕಲಶಾಂಶ್ಚ ಪ್ರಮೃದ್ನಂತಿ ಹವನೇ ಸಮುಪಸ್ಥಿತೇ ॥ ೧೭

ತೈರ್ದುರಾತ್ಮಭಿರಾಮೃಷ್ಟಾನಾಶ್ರಮಾನ್ ಪ್ರಜಿಹಾಸವಃ ।
ಗಮನಾಯಾನ್ಯದೇಶಸ್ಯ ಚೋದಯಂತ್ಯೃಷಯೋಽದ್ಯ ಮಾಮ್ ॥

ತತ್ ಪುರಾ ರಾಮ ಶಾರೀರೀಮುಪಹಿಂಸಾಂ ತಪಸ್ವಿಷು ।
ದರ್ಶಯಂತಿ ಹಿ ದುಷ್ಟಾಸ್ತೇ ತ್ಯಕ್ಷ್ಯಾಮ ಇಮಮಾಶ್ರಯಮ್ ॥ ೧೯

ವಿಕಾರವಾದ ರೂಪಗಳನ್ನು ತೋರಿಸಿ ಅಂಜಿಸುತ್ತಿದ್ದಾರೆ (೧೩-೧೪). ಹೇಯವಾದ ಕೊಳಕು ವಸ್ತುಗಳನ್ನು ತಪಸ್ವಿಗಳ ಮೇಲೆ ಎಸೆಯುತ್ತಾರೆ. ಕೆಲವರು ಎದುರಿಗೆ ಬಂದ ಋಷಿಗಳನ್ನು ಹೊಡೆಯುತ್ತಾರೆ. ಆಶ್ರಮದ ಸಮೀಪ ಪ್ರದೇಶಗಳಲ್ಲಿ ಆ ದುರ್ಬುದ್ಧಿಗಳು ಯಾರಿಗೂ ತಿಳಿಯದಂತೆ ಅಡಗಿಕೊಂಡಿದ್ದು ತಪಸ್ವಿಗಳನ್ನು ಹೆದರಿಸಿ ಓಡಿಸಿ ವಿನೋದಿಸುತ್ತಾರೆ (೧೫-೧೬). ಹೋಮಕಾಲದಲ್ಲಿ ಥಟ್ಟನೆ ಬಂದು ಸ್ರುಕ್ ಮೊದಲಾದ ಹೋಮಪಾತ್ರೆಗಳನ್ನು ಎಸೆದು, ಅಗ್ನಿಗೆ ನೀರು ಹೊಯ್ದು ಕಲಶಗಳನ್ನು ಒಡೆದುಹಾಕುತ್ತಾರೆ (೧೭). ಆದ್ದರಿಂದ, ರಾಮ, ಆ ದುರಾತ್ಮರು ಕಾಡುತ್ತಿರುವ ಈ ಆಶ್ರಮವನ್ನು ಬಿಟ್ಟು ಬೇರೊಂದು ಕಡೆಗೆ ಹೋಗೋಣವೆಂದು ಋಷಿಗಳು ನನ್ನನ್ನು ಪ್ರೇರಿಸುತ್ತಿದ್ದಾರೆ. ಇನ್ನು ಆ ದುಷ್ಟರು ತಪಸ್ವಿಗಳಿಗೆ ದೈಹಿಕ ಹಿಂಸೆಯನ್ನೊಡ್ಡಿ ಪ್ರಾಣಾಪಾಯವನ್ನು ತಂದಾರು. ಆದ್ದರಿಂದ ಈ ಆಶ್ರಮವನ್ನು ಬಿಟ್ಟುಬಿಡುವೆವು (೧೮-೧೯). ಈ ವನಕ್ಕೆ ಸ್ವಲ್ಪದೂರದಲ್ಲಿ ನಮ್ಮ ಹಳೆಯ ಆಶ್ರಮ ಒಂದುಂಟು. ಅದು

ಬಹುಮೂಲಫಲಂ ಚಿತ್ರಮವಿದೂರಾದಿತೋ ವನಮ್ ।
ಪುರಾಣಾಶ್ರಮಮೇವಾಹಂ ಶ್ರಯಿಷ್ಯೇ ಸಗಣಃ ಪುನಃ ॥ ೨೦

ಖರಸ್ತ್ವಯ್ಯಪಿ ಚಾಯುಕ್ತಂ ಪುರಾ ತಾತ ಪ್ರವರ್ತತೇ ।
ಸಹಾಸ್ಮಾಭಿರಿತೋ ಗಚ್ಛ ಯದಿ ಬುದ್ಧಿಃ ಪ್ರವರ್ತತೇ ॥ ೨೧

ಸಕಲತ್ರಸ್ಯ ಸಂದೇಹೋ ನಿತ್ಯಂ ಯತ್ತಸ್ಯ ರಾಘವ ।
ಸಮರ್ಥಸ್ಯಾಪಿ ಹಿ ಸತೋ ವಾಸೋ ದುಃಖಮಿಹಾದ್ಯ ತೇ ॥ ೨೨

ಇತ್ಯುಕ್ತವಂತಂ ರಾಮಸ್ತಂ ರಾಜಪುತ್ರಸ್ತಪಸ್ವಿನಮ್ ।
ನ ಶಶಾಕೋತ್ತರೈರ್ವಾಕ್ಯೈರವರೋದ್ಧುಂ ಸಮುತ್ಸುಕಮ್ ॥ ೨೩

ಅಭಿನಂದ್ಯ ಸಮಾಪೃಚ್ಛ್ಯ ಸಮಾಧಾಯ ಚ ರಾಘವಮ್ ।
ಸ ಜಗಮಾಶ್ರಮಂ ತ್ಯಕ್ತ್ವಾ ಕುಲೈಃ ಕುಲಪತಿಃ ಸಹ ॥ ೨೪

ರಾಮಃ ಸಂಸಾಧ್ಯ ತ್ವೃಷಿಗಣಮನುಗಮನಾ
ದ್ದೇಶಾತ್ತಸ್ಮಾತ್ ಕುಲಪತಿಮಭಿವಾದ್ಯ ಋಷಿಮ್ ।

ರಮಣೀಯವಾಗಿ ಫಲಮೂಲಗಳಿಂದ ತುಂಬಿದೆ. ನಾನು ಈ ಪರಿವಾರದೊಂದಿಗೆ ಪುನಃ ಅದನ್ನು ಸೇರಿಕೊಳ್ಳುವೆನು (೨೦). ಅಪ್ಪಾ-ರಾಮ, ಆ ಖರನು ನಿನ್ನಲ್ಲಿಯೂ ಅಯುಕ್ತವಾಗಿ ನಡೆದುಕೊಂಡಾನು. ನಿನಗೆ ಇಷ್ಟವಿದ್ದರೆ ನೀನೂ ನಮ್ಮೊಡನೆ ಅಲ್ಲಿಗೆ ಬಂದುಬಿಡು. ನೀನು ಸಪತ್ನೀಕನಾಗಿರುವುದರಿಂದ ಇಲ್ಲಿ ಸದಾ ಭಯದ ಸಂದೇಹವಿದ್ದೇ ಇದೆ. ರಾಘವ, ರಾಕ್ಷಸರನ್ನು ತಡೆಯಲು ನೀನು ಸಮರ್ಥನಾಗಿದ್ದರೂ ಇಲ್ಲಿ ವಾಸಮಾಡುವುದು ನಿನಗೆ ಕಷ್ಟವೇ ಸರಿ ಎಂದು ಹೇಳಿದನು (೨೧-೨೨). ಆ ತಪಸ್ವಿಯು ಬೇರೊಂದು ಆಶ್ರಮಕ್ಕೆ ಹೋಗಲು ಬಹಳ ಉತ್ಸುಕನಾಗಿದ್ದುದರಿಂದ, ಅವನಿಗೆ ಸಮಾಧಾನ ಹೇಳಿ ಅಲ್ಲಿಯೇ ಉಳಿಸಲು ಶ್ರೀರಾಮನಿಗೆ ಸಾಧ್ಯವಾಗಲಿಲ್ಲ. ಆ ಕುಲಪತಿಯು ಶ್ರೀರಾಮನನ್ನು ಪ್ರಶಂಸಿಸಿ ಅವನಿಗೆ ಸಮಾಧಾನ ಹೇಳಿ ಬೀಳ್ಕೊಂಡು, ತನ್ನ ಶಿಷ್ಯಗಣದೊಂದಿಗೆ ಆ ತಪೋವನವನ್ನು ಬಿಟ್ಟು ಹೊರಟುಹೋದನು (೨೩-೨೪). ಶ್ರೀರಾಮನು ಸ್ವಲ್ಪದೂರದವರೆಗೆ ಅವರನ್ನು

ಸಮ್ಯಕ್ ಪ್ರೀತೈಸ್ತೈರನುಮತ ಉಪದಿಷ್ಟಾರ್ಥಃ
ಪುಣ್ಯಂ ವಾಸಾಯ ಸ್ವನಿಲಯಮಭಿಸಂಪೇದೇ ॥ ೨೫

ಆಶ್ರಮಮೃಷಿವಿರಹಿತಂ ಪ್ರಭುಃ
ಕ್ಷಣಮಪಿ ನ ವಿಜಹೌ ಸ ರಾಘವಃ ।
ರಾಘವಂ ಹಿ ಸತತಮನುಗತಾ
ಸ್ತಾಪಸಾಶ್ಚಾರ್ಷಚರಿತಧೃತಗುಣಾಃ ॥ ೨೬

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ
ಷೋಡಶಾಧಿಕಶತತಮಃ ಸರ್ಗಃ

ಕಳಿಸುತ್ತ ಹೋಗಿ ಕುಲಪತಿಗೆ ಅಭಿವಾದನೆ ಮಾಡಿದನು. ಆ ಋಷಿಗಳೆಲ್ಲರೂ ಸಂಪ್ರೀತರಾಗಿ ಅವನಿಗೆ ಬುದ್ಧಿವಾದವನ್ನು ಹೇಳಿ, ಹಿಂದಿರುಗಲು ಅನುಜ್ಞೆಯನ್ನಿತ್ತರು. ಅನಂತರ ಶ್ರೀರಾಮನು ತಾನು ವಾಸಮಾಡುತ್ತಿದ್ದ ಪುಣ್ಯಾಶ್ರಮಕ್ಕೆ ಮರಳಿದನು (೨೫). ತಪೋವನವು ಋಷಿಗಳಿಲ್ಲದೆ ನಿರ್ಜನವಾಗಿತ್ತು. ಧೀರನಾದ ಶ್ರೀರಾಮನು ತನ್ನ ಆಶ್ರಮದಿಂದ ಚಲಿಸಲೇ ಇಲ್ಲ. ಋಷಿಗಳಂತೆ ಸಾತ್ತ್ವಿಕಚರಿತ್ರನಾದ ಅವನ ಗುಣಗಳನ್ನು ಕಂಡು ಮೆಚ್ಚಿದ ಆ ತಾಪಸರು ಸದಾ ಶ್ರೀರಾಮನನ್ನು ಸ್ಮರಿಸಿಕೊಳ್ಳುತ್ತಿದ್ದರು (೨೬).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ನೂರಹದಿನಾರನೆಯ ಸರ್ಗ

ಸಪ್ತದಶಾಧಿಕಶತತಮಃ ಸರ್ಗಃ

ಸೀತಾಪಾತಿವ್ರತ್ಯಪ್ರಶಂಸಾ

ರಾಘವಸ್ತ್ವಥ ಯಾತೇಷು ತಪಸ್ವಿಷು ವಿಚಿಂತಯನ್ ।
ನ ತತ್ರಾರೋಚಯದ್ವಾಸಂ ಕಾರಣೈರ್ಬಹುಭಿಸ್ತದಾ ॥ ೧

ಇಹ ಮೇ ಭರತೋ ದೃಷ್ಟೋ ಮಾತರಶ್ಚ ಸನಾಗರಾಃ ।
ಸಾ ಚ ಮೇ ಸ್ಮೃತಿರನ್ವೇತಿ ತಾನ್ನಿತ್ಯಮನುಶೋಚತಃ ॥ ೨

ಸ್ಕಂಧಾವಾರನಿವೇಶೇನ ತೇನ ತಸ್ಯ ಮಹಾತ್ಮನಃ ।
ಹಯಹಸ್ತಿಕರೀಷೈಶ್ಚ ಉಪಮರ್ದಃ ಕೃತೋ ಭೃಶಮ್ ॥ ೩

ತಸ್ಮಾದನ್ಯತ್ರ ಗಚ್ಛಾಮ ಇತಿ ಸಂಚಿಂತ್ಯ ರಾಘವಃ ।
ಪ್ರಾತಿಷ್ಠತ ಸ ವೈದೇಹ್ಯಾ ಲಕ್ಷ್ಮಣೇನ ಚ ಸಂಗತಃ ॥ ೪

ಸೋಽತ್ರೇರಾಶ್ರಮಮಾಸಾದ್ಯ ತಂ ವವಂದೇ ಮಹಾಯಶಾಃ ।
ತಂ ಚಾಪಿ ಭಗವಾನತ್ರಿಃ ಪುತ್ರವತ್ ಪ್ರತ್ಯಪದ್ಯತ ॥ ೫

ಸರ್ಗ ೧೧೭

ಶ್ರೀರಾಮಲಕ್ಷ್ಮಣರು ಸೀತೆಯೊಡನೆ ಅತ್ರಿಮುನಿಗಳ ಆಶ್ರಮಕ್ಕೆ ಹೋಗುವುದು.
ಅನಸೂಯಾದೇವಿಯು ಸೀತೆಯ ಪಾತಿವ್ರತ್ಯವನ್ನು ಕೊಂಡಾಡುವುದು.

ಋಷಿಗಳೆಲ್ಲರೂ ಹೊರಟುಹೋದಮೇಲೆ ಆಲೋಚನಾಪರನಾದ ಶ್ರೀರಾಮನಿಗೆ ಚಿತ್ರಕೂಟವಾಸವು ಹಿಡಿಸಲಿಲ್ಲ. ಅದಕ್ಕೆ ಅನೇಕ ಕಾರಣಗಳಿದ್ದವು. ಅವನು ''ಈ ಸ್ಥಳದಲ್ಲಿ ನಾನು ಭರತನನ್ನೂ ಮಾತೆಯರನ್ನೂ ನೋಡಿದೆ. ಪುರವಾಸಿಗಳನ್ನು ಇಲ್ಲಿ ಕಂಡೆ. ಅವರ ನೆನಪು ಆಗುತ್ತಲೇ ಇದೆ. ನೆನಪಾದಾಗ ದುಃಖವಾಗುತ್ತದೆ (೧-೨). ಭರತನು ಎಂಥ ಮಹಾಪುರುಷ! ಅವನ ಸೇನೆ ಇಲ್ಲಿ ಬೀಡುಬಿಟ್ಟಿತ್ತು. ಆನೆಕುದುರೆಗಳು ತುಳಿದಾಡಿ ಈ ವನವನ್ನು ನುಗ್ಗುಮಾಡಿವೆ. ಅವುಗಳ ಲದ್ದಿ ಅಲ್ಲಲ್ಲಿ ಕಾಣಿಸುತ್ತದೆ (ಅದನ್ನು ಕಂಡಾಗ ಮತ್ತೆ ಭರತನ ನೆನಪಾಗುತ್ತದೆ) (೩). ಆದ್ದರಿಂದ ಬೇರೊಂದು ಸ್ಥಳಕ್ಕೆ ಹೋಗೋಣ'' ಎಂದು ಆಲೋಚಿಸಿ ಸೀತಾಲಕ್ಷ್ಮಣರೊಡನೆ ಅಲ್ಲಿಂದ ಹೊರಟನು (೪). ಶ್ರೀರಾಮನು ಮುಂದೆ ಅತ್ರಿಮುನಿಗಳ ಆಶ್ರಮಕ್ಕೆ ಹೋಗಿ ಆ ಮುನಿಗಳನ್ನು

ಸ್ವಯಮಾತಿಥ್ಯಮಾದಿಶ್ಯ ಸರ್ವಮಸ್ಯ ಸುಸತ್ಕೃತಮ್ ।
ಸೌಮಿತ್ರಿಂ ಚ ಮಹಾಭಾಗಾಂ ಸೀತಾಂ ಚ ಸಮಸಾಂತ್ವಯಮ್ ॥ ೬

ಪತ್ನೀಂ ಚ ಸಮನುಪ್ರಾಪ್ತಾಂ ವೃದ್ಧಾಮಾಮಂತ್ರ್ಯ ಸತ್ಕೃತಾಮ್ ।
ಸಾಂತ್ವಯಾಮಾಸ ಧರ್ಮಜ್ಞಃ ಸರ್ವಭೂತಹಿತೇ ರತಃ ॥ ೭

ಅನಸೂಯಾಂ ಮಹಾಭಾಗಾಂ ತಾಪಸೀಂ ಧರ್ಮಚಾರಿಣೀಮ್ ।
ಪ್ರತಿಗೃಹ್ಣೀಷ್ವ ವೈದೇಹೀಮಬ್ರವೀದೃಷಿಸತ್ತಮಃ ॥ ೮

ರಾಮಾಯ ಚಾಚಚಕ್ಷೇ ತಾಂ ತಾಪಸೀಂ ಧರ್ಮಚಾರಿಣೀಮ್ ।
ದಶ ವರ್ಷಾಣ್ಯನಾವೃಷ್ಟ್ಯಾ ದಗ್ಧೇ ಲೋಕೇ ನಿರಂತರಮ್ ॥ ೯

ಯಯಾ ಮೂಲಫಲೇ ಸೃಷ್ಟೇ ಜಾಹ್ನವೀ ಚ ಪ್ರವರ್ತಿತಾ ।
ಉಗ್ರೇಣ ತಪಸಾ ಯುಕ್ತಾ ನಿಯಮೈಶ್ಚಾಪ್ಯಲಂಕೃತಾ ॥ ೧೦

ವಂದಿಸಿದನು. ಭಗವಾನ್ ಅತ್ರಿಮುನಿಗಳು ಮಕ್ಕಳನ್ನು ಕಂಡಂತೆ ಅವರೆಲ್ಲರನ್ನೂ ಪ್ರೀತಿಯಿಂದ ಬರಮಾಡಿಕೊಂಡರು. ಅವರು ತಾವೇ ಬಂದು ಅತಿಥಿಸತ್ಕಾರವನ್ನಿತ್ತು ಆದರಿಸಿ ಪ್ರಿಯವಾಕ್ಯಗಳಿಂದ ಶ್ರೀರಾಮನನ್ನೂ ಸೀತಾಲಕ್ಷ್ಮಣರನ್ನೂ ಮಾತನಾಡಿಸಿ ಉಪಚರಿಸಿದರು (೫-೬). ಅನಂತರ ಧರ್ಮಜ್ಞರೂ ಸರ್ವಭೂತದಯಾಪರರೂ ಆದ ಅತ್ರಿ ಮಹರ್ಷಿಗಳು ತಮ್ಮ ಪತ್ನಿಯೂ ವೃದ್ಧೆಯೂ ಆದ ಅನಸೂಯಾ ದೇವಿಯನ್ನು ಕರೆದು ಈ ಮೂವರನ್ನು ತೋರಿಸಿದರು. ಶ್ರೀರಾಮನೂ ಸೀತೆಯೂ ಲಕ್ಷ್ಮಣನೂ ಆಕೆಗೆ ವಂದಿಸಿದರು (೭). ಅನಸೂಯೆಯಾದರೊ ಮಹಾತ್ಮಳಾದ ತಪಸ್ವಿನಿ; ಧರ್ಮಶೀಲೆ. ಅತ್ರಿಮುನಿಗಳು ಅನಸೂಯೆಯನ್ನು ಕುರಿತು "ಅನಸೂಯೆ, ಇವಳು ವೈದೇಹಿ. ಇವಳನ್ನು ಒಳಗೆ ಕರೆದು ಉಪಚರಿಸು" ಎಂದು ನುಡಿದರು (೮). ಮತ್ತು ಶ್ರೀರಾಮನಿಗೆ ಆ ತಪಸ್ವಿನಿಯ ಪರಿಚಯವನ್ನು ಮಾಡಿಕೊಡುತ್ತ "ರಾಮ, ಒಂದು ಸಲ ಹತ್ತು ವರ್ಷಗಳವರೆಗೆ ಮಳೆಯಿಲ್ಲದೆ ಮಹಾಕ್ಷಾಮ ಉಂಟಾಯಿತು. ಬಿಸಿಲಿನ ಬೇಗೆಯಿಂದ ಒಂದೇ ಸಮನಾಗಿ ಲೋಕವು ಸುಟ್ಟು ಹೋಗುತ್ತಿತ್ತು (೯). ಆಗ ಈ ಅನಸೂಯೆ ಫಲಮೂಲಗಳನ್ನು ತಪೋಬಲದಿಂದ ಸೃಜಿಸಿ, ಒಣಗಿದ ಗಂಗಾನದಿಯಲ್ಲಿ ನೀರು ಹರಿಯುವಂತೆ ಮಾಡಿದಳು. ಇವಳು ಉಗ್ರವಾದ ತಪಸ್ಸನ್ನಾಚರಿಸಿದ್ದಾಳೆ. ವಿವಿಧ ವ್ರತಗಳನ್ನು ನಡೆಸಿದ್ದಾಳೆ (೧೦). ಈ ಅನಸೂಯೆ ಹತ್ತು ಸಾವಿರ ವರ್ಷಗಳವರೆಗೆ

ದಶವರ್ಷಸಹಸ್ರಾಣಿ ಯಯಾ ತಪ್ತಂ ಮಹತ್ತಪಃ ।
ಅನಸೂಯಾ ವ್ರತೈಃ ಸ್ನಾತ್ವಾ ಪ್ರತ್ಯೂಹಾಶ್ಚ ನಿವರ್ತಿತಾಃ ॥ ೧೧
ದೇವಕಾರ್ಯನಿಮಿತ್ತಂ ಚ ಯಯಾ ಸಂತ್ವರಮಾಣಯಾ ।
ದಶರಾತ್ರಂ ಕೃತಾ ರಾತ್ರಿಃ ಸೇಯಂ ಮಾತೇವ ತೇಽನಘ ॥ ೧೨
ತಾಮಿಮಾಂ ಸರ್ವಭೂತಾನಾಂ ನಮಸ್ಕಾರ್ಯಾಂ ಯಶಸ್ವಿನೀಮ್ ।
ಅಬಿಗಚ್ಛತು ವೈದೇಹೀ ವೃದ್ಧಾಮಕ್ರೋಧನಾಂ ಸದಾ ॥ ೧೩
ಅನಸೂಯೇತಿ ಯಾ ಲೋಕೇ ಕರ್ಮಭಿಃ ಖ್ಯಾತಿ ಮಾಗತಾ ।
ಏವಂ ಬ್ರುವಾಣಂ ತಮೃಷಿಂ ತಥೇತ್ಯುಕ್ತ್ವಾ ಸ ರಾಘವಃ ॥ ೧೪
ಸೀತಾಮುವಾಚ ಧರ್ಮಜ್ಞಾಮಿದಂ ವಚನಮುತ್ತಮಮ್ ।
ರಾಜಪುತ್ರಿ ಶ್ರುತಂ ತ್ವೇತನ್ಮುನೇರಸ್ಯ ಸಮೀರಿತಮ್ ॥ ೧೫
ಶ್ರೇಯೋಽರ್ಥಮಾತ್ಮನಃ ಶೀಘ್ರಮಭಿಗಚ್ಛತಪಸ್ವಿನೀಮ್ ।
ಸೀತಾ ತ್ವೇತದ್ವಚಃ ಶ್ರುತ್ವಾ ರಾಘವಸ್ಯ ಹಿತೈಷಿಣಃ ॥ ೧೬

ಮಹತ್ತರವಾದ ತಪಸ್ಸನ್ನು ಮಾಡಿದ್ದಾಳೆ. ಚಾಂದ್ರಾಯಣಾದಿವ್ರತಗಳನ್ನು ಪಟ್ಟು ಹಿಡಿದು ನೆರವೇರಿಸಿದ್ದಾಳೆ. ಯಾವ ಅಡ್ಡಿಗಳು ಬಂದರೂ ಇವಳು ಲೆಕ್ಕಿಸಲಿಲ್ಲ. ಒಮ್ಮೆ ದೇವತೆಗಳ ಕಾರ್ಯವೆಂದು ಅವರ ಸಹಾಯಕ್ಕಾಗಿ ಧಾವಿಸಿ ಹತ್ತು ರಾತ್ರಿಗಳನ್ನು ಒಂದೇ ರಾತ್ರಿಯನ್ನಾಗಿಸಿ (ಸೂರ್ಯನು ಉದಯಿಸುವಂತೆ) ಮಾಡಿದಳು. ರಾಮ, ಇವಳು ನಿನಗೆ ತಾಯಿಯಂತೆ ಇದ್ದಾಳೆ (೧೧-೧೨). ಈ ಕೀರ್ತಿಶಾಲಿನಿಯು ಸಕಲರಿಗೂ ವಂದನೀಯಳಾಗಿದ್ದಾಳೆ. ವೈದೇಹಿಯು ಇವಳ ಬಳಿಗೆ ಹೋಗಲಿ. ಅನಸೂಯೆಯು ಮುದುಕಿಯಾಗಿ ಬಿಟ್ಟಿದ್ದಾಳೆ! ಅವಳಿಗೆ ಎಳ್ಳಷ್ಟೂ ಕೋಪವಿಲ್ಲ. ಅಸೂಯೆ ಇಲ್ಲದ್ದರಿಂದ 'ಅನಸೂಯೆ' ಎಂದು ಲೋಕದಲ್ಲಿ ಪ್ರಖ್ಯಾತಿಯಾಯಿತು'' ಎಂಬುದಾಗಿ ಅತ್ರಿಮುನಿಗಳು ಹೇಳಿದರು (೧೩-೧೪). ಅದಕ್ಕೆ ಶ್ರೀರಾಮನು ಒಪ್ಪಿಕೊಂಡು ಸೀತೆಯನ್ನು ನೋಡಿ ''ರಾಜಪುತ್ರಿ, ಈ ಮಹರ್ಷಿಗಳು ಹೇಳಿದುದನ್ನು ಕೇಳಿದೆಯಾ? ಈ ತಪಸ್ವಿನಿಯ ಬಳಿಗೆ ಹೋಗಿ ವಂದಿಸು. ನಿನಗೆ ಮಂಗಳವಾಗುತ್ತದೆ'' ಎಂದನು. ಹಿತೈಷಿಯಾದ ಶ್ರೀರಾಮನ ಸೂಚನೆಯಂತೆ ಮೈಥಿಲಿಯು ಅತ್ರಿ ಮಹರ್ಷಿಗಳ ಪತ್ನಿಯ

ತಾಮತ್ರಿಪತ್ನೀಂ ಧರ್ಮಜ್ಞಾಮಭಿಚಕ್ರಾಮ ಮೈಥಿಲೀ ।
ಶಿಥಿಲಾಂ ವಲಿತಾಂ ವೃದ್ಧಾಂ ಜರಾಪಾಂಡರಮೂರ್ಧಜಾಮ್ ॥ ೧೭

ಸತತಂ ವೇಪಮಾನಾಂಗೀಂ ಪ್ರವಾತೇ ಕದಲೀಂ ಯಥಾ ।
ತಾಂ ತು ಸೀತಾ ಮಹಾಭಾಗಾಮನಸೂಯಾಂ ಪತಿವ್ರತಾಮ್ ॥ ೧೮

ಅಭ್ಯವಾದಯವ್ಯಗ್ರಾ ಸ್ವಂ ನಾಮ ಸಮುದಾಹರತ್ ।
ಅಭಿವಾದ್ಯ ಚ ವೈದೇಹೀ ತಾಪಸೀಂ ತಾಮನಿಂದಿತಾಮ್ ॥ ೧೯

ಬದ್ಧಾಂಜಲಿಪುಟಾ ಹೃಷ್ಟಾ ಪರ್ಯಪೃಚ್ಛದನಾಮಯಮ್ ।
ತತಃ ಸೀತಾಂ ಮಹಾಭಾಗಾಂ ದೃಷ್ಟ್ವಾ ತಾಂ ಧರ್ಮಚಾರಿಣೀಮ್ ॥

ಸಾಂತ್ವಯಂತ್ಯಬ್ರವೀದ್ ಹೃಷ್ಟಾ ದಿಷ್ಟ್ಯಾ ಧರ್ಮಮವೇಕ್ಷಸೇ ।
ತ್ಯಕ್ತ್ವಾ ಜ್ಞಾತಿಜನಂ ಸೀತೇ ಮಾನಮೃದ್ಧಿಂ ಚ ಭಾಮಿನಿ ॥ ೨೧

ಅವರುದ್ಧಂ ವನೇ ರಾಮಂ ದಿಷ್ಟ್ಯಾ ತ್ವಮನುಗಚ್ಛಸಿ ।
ನಗರಸ್ಥೋ ವನಸ್ಥೋ ವಾ ಶುಭೋ ವಾ ಯದಿ ವಾಶುಭಃ ॥ ೨೨

ಬಳಿಗೆ ಹೋದಳು (೧೫-೧೬). ಅನಸೂಯಾದೇವಿಯು ಬಹಳ ವೃದ್ಧೆಯಾಗಿದ್ದಳು. ಅವಳ ಅಂಗಗಳು ಸಡಿಲವಾಗಿದ್ದವು. ದೇಹವು ಸುಕ್ಕುಗಟ್ಟಿತ್ತು. ಮುಪ್ಪಿನಿಂದ ತಲೆಗೂದಲು ಬೆಳ್ಳಗಾಗಿತ್ತು (೧೭). ಗಾಳಿಗೆ ಸಿಕ್ಕಿದ ಬಾಳೆಯ ಗಿಡದಂತೆ ಶರೀರವು ನಡುಗುತ್ತಿತ್ತು. ಪುಣ್ಯಾತ್ಮಳೂ ಪತಿವ್ರತಾ ಶಿರೋಮಣಿಯೂ ಆದ ಅನಸೂಯಾದೇವಿಯ ಸಮೀಪಕ್ಕೆ ಹೋಗಿ, ಸೀತೆಯು ತನ್ನ ಹೆಸರನ್ನು ಹೇಳಿ, ಭಕ್ತಿಯಿಂದ ನಮಸ್ಕರಿಸಿದಳು. ಹರ್ಷದಿಂದ ಕೈಮುಗಿದುಕೊಂಡು ಆ ತಾಪಸಿಯ ಕುಶಲವನ್ನು ವಿಚಾರಿಸಿದಳು (೧೮-೧೯). ಮಹಾಭಾಗ್ಯಶಾಲಿನಿಯೂ ಧರ್ಮಶೀಲೆಯೂ ಆದ ಸೀತಾದೇವಿಯನ್ನು ಕಂಡು ಅನಸೂಯೆಗೆ ಆನಂದವಾಯಿತು. ಅವಳು ''ಸೀತೆ, ಭಾಗ್ಯವಶದಿಂದ ಧರ್ಮಮಾರ್ಗದಲ್ಲಿ ನಡೆಯುತ್ತಿದ್ದೀಯೆ. ಬಂಧುಗಳನ್ನು ಬಿಟ್ಟು, ರಾಜಕುಮಾರಿಯೆಂಬ ಹೆಮ್ಮೆಯನ್ನು ತೊರೆದು, ಸಕಲೈಶ್ವರ್ಯವನ್ನೂ ಅಲಕ್ಷಿಸಿ ಕಾಡಿಗೆ ಬಂದಿದ್ದೀಯೆ (೨೦-೨೧). ರಾಮನು ಕಾಡಿನಲ್ಲಿರುವಂತೆ ನೇಮಿಸಲ್ಪಟ್ಟರೂ ನೀನು ಅವನ ಹಿಂದೆಯೇ ಬಂದಿರುವುದು ಒಂದು

ಯಾಸಾಂ ಸ್ತ್ರೀಣಾಂಪ್ರಿಯೋ ಭರ್ತಾ ತಾಸಾಂ ಲೋಕಾ ಮಹೋದಯಾಃ ।
ದುಃಶೀಲಃ ಕಾಮವೃತ್ತೋ ವಾ ಧನೈರ್ವಾ ಪರಿವರ್ಜಿತಃ ॥ ೨೩

ಸ್ತ್ರೀಣಾಮಾರ್ಯಸ್ವಭಾವಾನಾಂ ಪರಮಂ ದೈವತಂ ಪತಿಃ ।
ನಾತೋ ವಿಶಿಷ್ಟಂ ಪಶ್ಯಾಮಿ ಬಾಂಧವಂ ವಿಮೃಶಂತ್ಯಹಮ್ ॥ ೨೪

ಸರ್ವತ್ರ ಯೋಗ್ಯಂ ವೈದೇಹಿ ತಪಃ ಕೃತಮಿವಾವ್ಯಯಮ್ ।
ನ ತ್ವೇವಮವಗಚ್ಛಂತಿ ಗುಣದೋಷಮಸತ್ಸ್ತ್ರಿಯಃ ॥ ೨೫

ಕಾಮವಕ್ತವ್ಯಹೃದಯಾ ಭರ್ತೃನಾಥಾಶ್ಚರಂತಿ ಯಾಃ ।
ಪ್ರಾಪ್ನುವಂತ್ಯಯಶಶ್ಚೈವ ಧರ್ಮಭ್ರಂಶಂ ಚ ಮೈಥಿಲಿ ॥ ೨೬

ಅಕಾರ್ಯವಶಮಾಪನ್ನಾಃ ಸ್ತ್ರಿಯೋ ಯಾಃ ಖಲು ತದ್ವಿಧಾಃ ।
ತ್ವದ್ವಿಧಾಸ್ತು ಗುಣೈರ್ಯುಕ್ತಾ ದೃಷ್ಟಲೋಕಪರಾವರಾಃ ॥ ೨೭

ಭಾಗ್ಯ ವಿಶೇಷ. ಪತಿಯು ನಗರದಲ್ಲಿರಲಿ - ವನದಲ್ಲಿರಲಿ, ಒಳ್ಳೆಯವನಾಗಿರಲಿ - ಕೆಟ್ಟವನಾಗಿರಲಿ, ಯಾವ ಸ್ತ್ರೀಯರು ಅವನನ್ನು ಪ್ರೀತಿಸುವರೊ ಅವರಿಗೆ ಪುಣ್ಯಲೋಕ ಉಂಟು (೨೨). ಅವನು ದುಷ್ಟನಾಗಿರಬಹುದು, ಸ್ವೇಚ್ಛಾಚಾರಿಯಾಗಿರಬಹುದು. ಬಡವನಾಗಿರಬಹುದು - ಆದರೂ ಆರ್ಯಸ್ವಭಾವದ ಸ್ತ್ರೀಯರು ಪತಿಯನ್ನು ಪರದೈವವೆಂದು ತಿಳಿಯುತ್ತಾರೆ. ನಾನು ಎಷ್ಟೋ ರೀತಿಯಲ್ಲಿ ಆಲೋಚಿಸಿ ನೋಡಿದ್ದೇನೆ - ಪತಿಗಿಂತ ಹೆಚ್ಚಿನ ಇನ್ನೊಬ್ಬ ಆಪ್ತನಿಲ್ಲವೆಂದು ನನ್ನ ನಿಶ್ಚಯ (೨೩-೨೪). ಮಾಡಿದ ತಪಸ್ಸು ಇಹಪರಲೋಕಗಳಲ್ಲಿ ಶಾಶ್ವತವಾಗಿ ಜನರನ್ನು ರಕ್ಷಿಸುವುದು. ಸ್ತ್ರೀಯರಿಗೆ ಪತಿಯು ಅಂಥ ತಪಸ್ಸಿನ ಫಲವಿದ್ದಂತೆ. ಆದರೆ ದುಷ್ಟಸ್ತ್ರೀಯರು ಮಾತ್ರ ಹೀಗೆ ಗುಣದೋಷಗಳನ್ನು ವಿಚಾರಿಸುವುದಿಲ್ಲ. ಕಾಮ ಒಂದೇ ಅವರ ಹೃದಯಕ್ಕೆ ಉಪದೇಶ ಮಾಡುವುದು. ತಮ್ಮನ್ನು ಪಾಲಿಸಿ ನೋಡಿಕೊಳ್ಳತಕ್ಕವರನ್ನು ಹುಡುಕಿಕೊಂಡು ಆ ಹೆಂಗಸರು ಅಲೆಯುತ್ತಾರೆ. ಅಂಥ ಕೆಟ್ಟ ಹೆಂಗಸರು ಅಪಕೀರ್ತಿಯನ್ನು ಪಡೆಯುವುದಲ್ಲದೆ ಧರ್ಮಭ್ರಷ್ಟರಾಗುತ್ತಾರೆ (೨೫-೨೬). ಅವರು ಮಾಡಬಾರದ ಕೆಲಸದಲ್ಲಿ ತೊಡಗುತ್ತಾರೆ. ಮೈಥಿಲಿ, ಲೋಕದ ನೀಚೋಚ್ಚಭಾವಗಳನ್ನು ಬಲ್ಲ ನಿನ್ನಂಥ

ಸ್ತ್ರಿಯಃ ಸ್ವರ್ಗೇ ಚರಿಷ್ಯಂತಿ ಯಥಾ ಧರ್ಮಕೃತಸ್ತಥಾ ॥
ತದೇವಮೇನಂ ತ್ವಮನುವ್ರತಾ ಸತೀ
ಪತಿವ್ರತಾನಾಂ ಸಮಯಾನುವರ್ತಿನೀ।
ಭವ ಸ್ವಭರ್ತುಃ ಸಹಧರ್ಮಚಾರಿಣೀ
ಯಶಶ್ಚ ಧರ್ಮಂ ಚ ತತಃ ಸಮಾಪ್ಸ್ಯಸಿ ॥ ೨೮

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತದಶಾಧಿಕಶತತಮಃ ಸರ್ಗಃ

ಗುಣಸಂಪನ್ನೆಯರಾದ ಸ್ತ್ರೀಯರು ಧರ್ಮನಿಷ್ಠರಾದ ಸ್ವರ್ಗಲೋಕದಲ್ಲಿ ವಿಹರಿಸುವರು (೨೭). ಆದ್ದರಿಂದ, ಸೀತೆ, ನೀನು ಹೀಗೆಯೇ ನಿನ್ನ ಪತಿಯನ್ನು ಅನುವರ್ತಿಸುತ್ತ ಬಾಳು. ಪತಿವ್ರತೆಯರ ನಿಯಮವನ್ನು ಪಾಲಿಸುತ್ತ ನಿನ್ನ ಪತಿಯ ಸಹಧರ್ಮಚಾರಿಣಿಯಾಗಿರು. ಇದರಿಂದ ನಿನಗೆ ಕೀರ್ತಿಯುಂಟು, ಪುಣ್ಯವುಂಟು'' ಎಂದು ನುಡಿದಳು (೨೮).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ನೂರಹದಿನೇಳನೆಯ ಸರ್ಗ

ಅಷ್ಟಾದಶಾಧಿಕಶತತಮಃ ಸರ್ಗಃ

ದಿವ್ಯಾಲಂಕಾರಗ್ರಹಣಮ್

ಸಾ ತ್ವೇವಮುಕ್ತಾ ವೈದೇಹೀ ತ್ವನಸೂಯಾನಸೂಯಯಾ ।
ಪ್ರತಿಪೂಜ್ಯ ವಚೋ ಮಂದಂ ಪ್ರವಕ್ತುಮುಪಚಕ್ರಮೇ ॥ ೧

ನೈತದಾಶ್ಚರ್ಯಮಾರ್ಯಾಯಾ ಯನ್ಮಾಂ ತ್ವಮನುಭಾಷಸೇ ।
ವಿದಿತುಂ ತು ಮಯಾಪ್ಯೇತದ್ಯಥಾ ನಾರ್ಯಾಃ ಪತಿರ್ಗುರುಃ ॥ ೨

ಯದ್ಯಪ್ಯೇಷ ಭವೇದ್ಭರ್ತಾ ಮಮಾರ್ಯೇ ವೃತ್ತವರ್ಜಿತಃ ।
ಅದ್ವೈಧಮುಪಚರ್ತವ್ಯಸ್ತಥಾಪ್ಯೇಷ ಮಯಾ ಭವೇತ್ ॥ ೩

ಕಿಂ ಪುನರ್ಯೋ ಗುಣಶ್ಲಾಘ್ಯಃ ಸಾನುಕ್ರೋಶೋ ಜಿತೇಂದ್ರಿಯಃ ।
ಸ್ಥಿರಾನುರಾಗೋ ಧರ್ಮಾತ್ಮಾ ಮಾತೃವತ್ ಪಿತೃವತ್ ಪ್ರಿಯಃ ॥ ೪

ಯಾಂ ವೃತ್ತಿಂ ವರ್ತತೇ ರಾಮಃ ಕೌಸಲ್ಯಾಯಾಂ ಮಹಾಬಲಃ ।

ಸರ್ಗ ೧೧೮

ಅನಸೂಯಾದೇವಿಯು ದಿವ್ಯಾಲಂಕಾರಗಳನ್ನು ಕೊಡುವುದು. ಸೀತೆಯು ಅದನ್ನು ಸ್ವೀಕರಿಸಿ ತನ್ನ ಸ್ವಯಂವರ ವೃತ್ತಾಂತವನ್ನು ಹೇಳುವುದು.

ಅನಸೂಯಾದೇವಿಯ ಈ ಹಿತವಚನವನ್ನು ಕೇಳಿ ಗುಣಗ್ರಾಹಿಣಿಯಾದ ವೈದೇಹಿಯು ಆ ತಾಪಸಿಯನ್ನು ಕೊಂಡಾಡುತ್ತ ಮೃದುವಾಗಿ ಈ ರೀತಿ ಹೇಳಿದಳು (೧) : ''ಆರ್ಯೆ, ಪೂಜ್ಯಳಾದ ನೀನು ನನಗೆ ಹೀಗೆ ಬುದ್ಧಿವಾದವನ್ನು ಹೇಳಿದ್ದು ಅಚ್ಚರಿಯಲ್ಲ. ಸ್ತ್ರೀಯರಿಗೆ ಪತಿಯು ಪೂಜ್ಯನೆಂಬುದನ್ನು ನಾನೂ ತಿಳಿದಿದ್ದೇನೆ. ಪತಿಯು ಒಂದು ವೇಳೆ ಚಾರಿತ್ರಹೀನನಾಗಿದ್ದರೂ ಎರಡೆಣಿಸದೆ ಆತನನ್ನು ಉಪಚರಿಸುವುದು ನನ್ನ ಕರ್ತವ್ಯವಾಗಿತ್ತು (೨-೩). ಆದರೆ ನನ್ನ ಪತಿಯಾದರೊ ಸದ್ಗುಣಸಂಪನ್ನನೂ ದಯಾಳುವೂ ಜಿತೇಂದ್ರಿಯನೂ ಆಗಿದ್ದಾನೆ. ಆ ಧರ್ಮಾತ್ಮನು ನನ್ನಲ್ಲಿ ಸ್ಥಿರವಾದ ಪ್ರೇಮವನ್ನಿಟ್ಟಿದ್ದಾನೆ. ನನ್ನ ತಾಯಿಯಂತೆ - ತಂದೆಯಂತೆ ನನ್ನನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದಾನೆ (೪). ಆ ವೀರಾಗ್ರಣಿಯು ತನ್ನ ತಾಯಿಯಾದ

ತಾಮೇವ ನೃಪನಾರೀಣಾಮನ್ಯಾಸಾಮಪಿ ವರ್ತತೇ ॥ ೫

ಸಕೃದ್ದೃಷ್ಟಾಸ್ವಪಿ ಸ್ತ್ರೀಷು ನೃಪೇಣ ನೃಪವತ್ಸಲಃ ।
ಮಾತೃವದ್ವರ್ತತೇ ವೀರೋ ಮಾನಮುತ್ಸೃಜ್ಯ ಧರ್ಮವಿತ್ ॥ ೬

ಆಗಚ್ಛಂತ್ಯಾಶ್ಚ ವಿಜನಂ ವನಮೇವಂ ಭಯಾವಹಮ್ ।
ಸಮಾಹಿತಂ ಮೇ ಶ್ವಶ್ರ್ವಾ ಚ ಹೃದಯೇ ತದ್ಧೃತಂ ಮಹತ್ ॥ ೭

ಪಾಣಿಗ್ರಹಣಕಾಲೇ ಚ ಯತ್ ಪುರಾ ತ್ವಗ್ನಿಸಂನಿಧೌ ।
ಅನುಶಿಷ್ಟಾ ಜನನ್ಯಾಸ್ಮಿ ವಾಕ್ಯಂ ತದಪಿ ಮೇ ಧೃತಮ್ ॥ ೮

ನವೀಕೃತಂ ಚ ತತ್ ಸರ್ವಂ ವಾಕ್ಯೈಸ್ತೇ ಧರ್ಮಚಾರಿಣಿ ।
ಪತಿಶುಶ್ರೂಷಣಾನ್ನಾರ್ಯಾಸ್ತಪೋ ನಾನ್ಯದ್ವಿಧೀಯತೇ ॥ ೯

ಸಾವಿತ್ರೀ ಪತಿಶುಶ್ರೂಷಾಂ ಕೃತ್ವಾ ಸ್ವರ್ಗೇ ಮಹೀಯತೇ ।
ತಥಾವೃತ್ತಿಶ್ಚ ಯಾತಾ ತ್ವಂ ಪತಿಶುಶ್ರೂಷಯಾ ದಿವಮ್ ॥ ೧೦

ಕೌಸಲ್ಯಾದೇವಿಯಲ್ಲಿ ಹೇಗೆ ವಿನಯದಿಂದ ನಡೆಯುವನೊ, ಹಾಗೆ ಮಹಾರಾಜನ ಎಲ್ಲ ಅಂತಃಪುರಸ್ತ್ರೀಯರಲ್ಲಿಯೂ ನಡೆದುಕೊಳ್ಳುತ್ತಾನೆ. ದಶರಥಮಹಾರಾಜನು ಒಂದು ಸಲ ಕಣ್ಣಿಟ್ಟು ನೋಡಿದ ಸಾಮಾನ್ಯಸ್ತ್ರೀಯರಲ್ಲಿಯೂ ಕೂಡ, ಪಿತೃಭಕ್ತನೂ ಧರ್ಮಜ್ಞನೂ ಆದ ಶ್ರೀರಾಮನು ಮಾತೃಭಕ್ತಿಯಿಂದ ವರ್ತಿಸುತ್ತಾನೆ (೫-೬). ಭೀಕರವಾದ ಈ ಅರಣ್ಯಕ್ಕೆ ನಾನು ಹೊರಟುಬರುವಾಗ, ನನ್ನ ಅತ್ತೆಯೂ ನನಗೆ ನಿನ್ನಂತೆ ಹಿತೋಪದೇಶವನ್ನು ಮಾಡಿದ್ದಾಳೆ. ಅತಿಮುಖ್ಯವಾದ ಆ ವಿಷಯವು ನನ್ನ ಹೃದಯದಲ್ಲಿ ನೆಲೆಸಿ ನಿಂತಿದೆ (೭). ಹಿಂದೆ ನನ್ನ ವಿವಾಹ ಕಾಲದಲ್ಲಿ ನನ್ನ ತಾಯಿಯು ಅಗ್ನಿ ಸನ್ನಿಧಾನದಲ್ಲಿ ಯಾವ ಬುದ್ಧಿವಾದವನ್ನು ಹೇಳಿದಳೊ ಅದೂ ಕೂಡ ನನಗೆ ನೆನಪಿದೆ (೮). ಹೇ ತಪಸ್ವಿನಿ, ನಿನ್ನ ಬುದ್ಧಿವಾದಗಳಿಂದ ಅದೆಲ್ಲವೂ ಈಗ ಹೊಚ್ಚಹೊಸದಾಯಿತು. ಹೆಂಗಸಿಗೆ ಪತಿಶುಶ್ರೂಷೆಗಿಂತ ದೊಡ್ಡದಾದ ಇನ್ನೊಂದು ತಪಸ್ಸಿಲ್ಲ. ಸಾವಿತ್ರೀದೇವಿಯು ಪತಿಸೇವೆಯನ್ನಾಚರಿಸಿ ಸ್ವರ್ಗದಲ್ಲಿ ಮಾನ್ಯತೆಯನ್ನು ಪಡೆದಿರುವಳು. ಹಾಗೆಯೇ ಪತಿಶುಶ್ರೂಷೆಯ ಬಲದಿಂದ ನೀನು ಸ್ವರ್ಗವನ್ನು ಪಡೆದಂತೆಯೇ ಸರಿ (೯-೧೦).

ವರಿಷ್ಠಾ ಸರ್ವನಾರೀಣಾಮೇಷಾ ಚ ದಿವಿ ದೇವತಾ ।
ರೋಹಿಣೀ ನ ವಿನಾ ಚಂದ್ರಂ ಮುಹೂರ್ತಮಪಿ ದೃಶ್ಯತೇ ॥ ೧೧

ಏವಂವಿಧಾಶ್ಚ ಪ್ರವರಾಃ ಸ್ತ್ರಿಯೋ ಭರ್ತೃದೃಢವ್ರತಾಃ ।
ದೇವಲೋಕೇ ಮಹೀಯಂತೇ ಪುಣ್ಯೇನ ಸ್ವೇನ ಕರ್ಮಣಾ ॥ ೧೨

ತತೋಽನಸೂಯಾ ಸಂಹೃಷ್ಟಾ ಶ್ರುತ್ವೋಕ್ತಂ ಸೀತಯಾ ವಚಃ ।
ಶಿರಸ್ಯಾಘ್ರಾಯ ಚೋವಾಚ ಮೈಥಿಲೀಂ ಹರ್ಷಯಂತ್ಯುತ ॥ ೧೩

ನಿಯಮೈರ್ವಿವಿಧೈರಾಪ್ತಂ ತಪೋ ಹಿ ಮಹದಸ್ತಿ ಮೇ ।
ತತ್ ಸಂಶ್ರಿತ್ಯ ಬಲಂ ಸೀತೇ ಛಂದಯೇ ತ್ವಾಶುಚಿಸ್ಮಿತೇ ॥ ೧೪

ಉಪಪನ್ನಂ ಮನೋಜ್ಞಂ ಚ ವಚನಂ ತವ ಮೈಥಿಲಿ ।
ಪ್ರೀತಾ ಚಾಭ್ಯುಚಿತಂ ಕಿಂ ತೇ ಕರವಾಣಿ ಬ್ರವೀಹಿ ಮೇ ॥ ೧೫

ತಸ್ಯಾಸ್ತದ್ವಚನಂ ಶ್ರುತ್ವಾ ವಿಸ್ಮಿತಾ ಮಂದವಿಸ್ಮಯಾ ।
ಕೃತಮಿತ್ಯಬ್ರವೀತ್ ಸೀತಾ ತಪೋಬಲಸಮನ್ವಿತಾಮ್ ॥ ೧೬

ಸರ್ವನಾರಿಯರಲ್ಲಿಯೂ ಶ್ರೇಷ್ಠಳೆನಿಸಿ ದೇವತಾಸ್ವರೂಪಳಾದ ರೋಹಿಣಿಯು ಗಗನದಲ್ಲಿ ಚಂದ್ರನನ್ನು ಒಂದು ಕ್ಷಣವೂ ಅಗಲುವುದು ಕಂಡುಬರುವುದಿಲ್ಲ(೧೧). ಹೀಗೆ ಸ್ಥಿರವಾದ ಪಾತಿವ್ರತ್ಯವನ್ನು ಪಾಲಿಸತಕ್ಕ ಉತ್ತಮ ಸ್ತ್ರೀಯರು ತಮ್ಮ ಪುಣ್ಯಕರ್ಮದ ಬಲದಿಂದ ದೇವಲೋಕದಲ್ಲಿ ಸಮ್ಮಾನ್ಯರಾಗಿ ವಿರಾಜಿಸುವರು'' ಎಂದು ಸೀತೆಯು ನುಡಿದಳು (೧೨). ಆ ನುಡಿಯನ್ನು ಕೇಳಿ ಅನಸೂಯೆಗೆ ಆನಂದವಾಯಿತು. ಅವಳು ಮೈಥಿಲಿಯ ಶಿರಸ್ಸನ್ನಾಘ್ರಾಣಿಸಿ, ಅವಳಿಗೆ ಹರ್ಷವನ್ನುಂಟುಮಾಡಬೇಕೆಂದು ಸೀತೆ, ನಾನಾಬಗೆಯ ನಿಯಮಗಳಿಂದ ಗಳಿಸಿದ ಮಹತ್ತರವಾದ ತಪೋಬಲವು ನನ್ನಲ್ಲಿದೆ. ಆ ಬಲದಿಂದ ನಿನಗೆ ಏನನ್ನು ದೊರಕಿಸಿಕೊಡಲಿ? ಹೇಳು (೧೩-೧೪). ಮೈಥಿಲಿ, ಈಗಲೂ ಹಸನ್ಮುಖಿಯಾಗಿರುವ ನಿನ್ನ ಮಾತು ಬಹಳ ಯುಕ್ತವಾಗಿದೆ; ಮನೋಹರವಾಗಿದೆ. ನನಗೆ ಆನಂದವಾಯಿತು. ನಿನಗೆ ಯೋಗ್ಯವಾದ ಯಾವ ಕಾರ್ಯವನ್ನು ಮಾಡಲಿ? ಹೇಳು'' ಎಂದಳು (೧೫). ಅದನ್ನು ಕೇಳಿ ಸೀತೆಯು ಬೆರಗಾಗಿ ಮುಗುಳ್ನಗೆಯಿಂದ ''ದೇವಿ, ನಿನ್ನ ಅನುಗ್ರಹದಿಂದ ನನಗೆ ಯಾವುದಕ್ಕೂ

ಸಾ ತ್ವೇವಮುಕ್ತಾ ಧರ್ಮಜ್ಞಾ ತಯಾ ಪ್ರೀತತರಾಭವತ್ ।
ಸಫಲಂ ಚ ಪ್ರಹರ್ಷಂ ತ ಹಂತ ಸೀತೇ ಕರೋಮ್ಯಹಮ್ ॥ ೧೭

ಇದಂ ದಿವ್ಯಂ ವರಂ ಮಾಲ್ಯಂ ವಸ್ತ್ರಮಾಭರಣಾನಿ ಚ ।
ಅಂಗರಾಗಂ ಚ ವೈದೇಹಿ ಮಹಾರ್ಹಂ ಚಾನುಲೇಪನಮ್ ॥ ೧೮

ಮಯಾ ದತ್ತಮಿದಂ ಸೀತೇ ತವ ಗಾತ್ರಾಣಿ ಶೋಭಯೇತ್ ।
ಅನುರೂಪಮಸಂಕ್ಲಿಷ್ಟಂ ನಿತ್ಯಮೇವ ಭವಿಷ್ಯತಿ ॥ ೧೯

ಅಂಗರಾಗೇಣ ದಿವ್ಯೇನ ಲಿಪ್ತಾಂಗೀ ಜನಕಾತ್ಮಜೇ ।
ಶೋಭಯಿಷ್ಯಸಿ ಭರ್ತಾರಂ ಯಥಾ ಶ್ರೀವಿಷ್ಣುಮವ್ಯಯಮ್ ॥ ೨೦

ಸಾ ವಸ್ತ್ರಮಂಗರಾಗಂ ಚ ಭೂಷಣಾನಿ ಸ್ರಜಸ್ತಥಾ ।
ಮೈಥಿಲೀ ಪ್ರತಿಜಗ್ರಾಹ ಪ್ರೀತಿದಾನಮನುತ್ತಮಮ್ ॥ ೨೧

ಪ್ರತಿಗೃಹ್ಯ ಚ ತತ್ ಸೀತಾ ಪ್ರೀತಿದಾನಂ ಯಶಸ್ವಿನೀ ।
ಶ್ಲಿಷ್ಟಾಂಜಲಿಪುಟಾ ತತ್ರ ಸಮುಪಾಸ್ತ ತಪೋಧನಾಮ್ ॥ ೨೨

ಕೊರತೆಯಿಲ್ಲ'' ಎಂದು ಆ ತಪಸ್ವಿನಿಗೆ ಹೇಳಿದಳು (೧೬). ಆ ತಪಸ್ವಿನಿಗೆ ಮತ್ತಷ್ಟು ಸಂತೋಷವಾಯಿತು. ಅವಳು ''ಆಹಾ! ಸೀತೆ, ನಿನ್ನ ಸಂತೃಪ್ತಿಯನ್ನು ನಾನು ಸಫಲಗೊಳಿಸುವೆನು! ಶ್ರೇಷ್ಠವಾದ ಈ ದಿವ್ಯಪುಷ್ಪ ಈ ವಸ್ತ್ರ ಈ ಆಭರಣಗಳನ್ನೂ ದೇಹಕ್ಕೆ ಕಾಂತಿಯನ್ನು ಕೊಡುವ ಅಮೂಲ್ಯವಾದ ಈ ದಿವ್ಯಗಂಧಾದ್ಯನುಲೇಪವನ್ನೂ ನಿನಗೆ ಕೊಟ್ಟಿದ್ದೇನೆ (೧೭-೧೮). ವೈದೇಹಿ, ಇವು ನಿನ್ನ ದೇಹಕ್ಕೆ ಶೋಭೆಯನ್ನುಂಟುಮಾಡುವುವು. ನಿನ್ನ ರೂಪಕ್ಕೆ ಅನುಗುಣವಾಗಿವೆ. ಇವು ಎಂದಿಗೂ ಬಾಡಿ ಕೊಳೆಯಾಗಿ ಹಾಳಾಗುವುದೇ ಇಲ್ಲ (೧೯). ಜಾನಕಿ, ದಿವ್ಯವಾದ ಈ ಅಂಗರಾಗವನ್ನು ಲೇಪಿಸಿಕೊಂಡು ನಿನ್ನ ಪತಿಯ ಸನ್ನಿಧಿಯಲ್ಲಿದ್ದರೆ, ಶ್ರೀಮನ್ನಾರಾಯಣನ ಸಮೀಪದಲ್ಲಿ ಸಾಕ್ಷಾಲ್ಲಕ್ಷ್ಮಿ ಇದ್ದಂತೆ ಕಾಣಿಸುವೆ! ನಿನ್ನಿಂದ ರಾಮನಿಗೆ ಒಂದು ಶೋಭಾವಿಶೇಷವುಂಟಾಗುವುದು!'' ಎಂದು ಹೇಳಿ ಆ ವಸ್ತುಗಳನ್ನು ಕೊಟ್ಟಳು (೨೦). ಪಾರಿತೋಷಕವಾಗಿ ಕೊಟ್ಟ ದಿವ್ಯವಾದ ಆ ವಸ್ತ್ರ ಅಂಗರಾಗ, ಒಡವೆಗಳು ಮತ್ತು ಹೂವಿನ ಸರಗಳನ್ನು ಮೈಥಿಲಿಯು ಸ್ವೀಕರಿಸಿದಳು. ಆಮೇಲೆ ಆ

ತಥಾ ಸೀತಾಮುಪಾಸೀನಾಮನಸೂಯಾ ದೃಢವ್ರತಾ ।
ವಚನಂ ಪ್ರಷ್ಟುಮಾರೇಭೇ ಕಥಾಂ ಕಾಂಚಿದನುಪ್ರಿಯಾಮ್ ॥ ೨೩

ಸ್ವಯಂವರೇ ಕಿಲ ಪ್ರಾಪ್ತಾ ತ್ವಮನೇನ ಯಶಸ್ವಿನಾ ।
ರಾಘವೇಣೇತಿ ಮೇ ಸೀತೇ ಕಥಾ ಶ್ರುತಿಮುಪಾಗತಾ ॥ ೨೪

ತಾಂ ಕಥಾಂ ಶ್ರೋತುಮಿಚ್ಛಾಮಿ ವಿಸ್ತರೇಣ ಚ ಮೈಥಿಲಿ ।
ಯಥಾನುಭೂತಂ ಕಾರ್ತ್ಸ್ನ್ಯೇನ ತನ್ಮೇತ್ವಂ ವಕ್ತು ಮರ್ಹಸಿ ॥ ೨೫

ಏವಮುಕ್ತಾ ತು ಸಾ ಸೀತಾ ತಾಂ ತತೋ ಧರ್ಮಚಾರಿಣೀಮ್ ।
ಶ್ರೂಯತಾಮಿತಿ ಚೋಕ್ತ್ವಾವೈ ಕಥಯಾಮಾಸ ತಾಂ ಕಥಾಮ್ ॥ ೨೬

ಮಿಥಿಲಾಧಿಪತಿರ್ವೀರೋ ಜನಕೋ ನಾಮ ಧರ್ಮವಿತ್ ।
ಕ್ಷತ್ರಧರ್ಮೇ ಹ್ಯಭಿರತೋ ನ್ಯಾಯತಃ ಶಾಸ್ತಿ ಮೇದಿನೀಮ್ ॥ ೨೭

ತಸ್ಯ ಲಾಂಗಲಹಸ್ತಸ್ಯ ಕೃಷತಃ ಕ್ಷೇತ್ರಮಂಡಲಮ್ ।
ಅಹಂ ಕಿಲೋತ್ಥಿತಾ ಭಿತ್ವಾ ಜಗತೀಂ ನೃಪತೇಃ ಸುತಾ ॥ ೨೮

ತಪೋಧನೆಗೆ ವಂದಿಸಿ ಕೈಮುಗಿದುಕೊಂಡು ಆಕೆಯ ಸಮೀಪದಲ್ಲಿ ಕುಳಿತಳು (೨೧-೨೨). ಆಗ ಅನಸೂಯೆಯು ಪ್ರಿಯವಾದ ಒಂದು ಕಥೆಯನ್ನು ಕೇಳುವ ಉದ್ದೇಶದಿಂದ ''ಸೀತೆ, ಪ್ರಖ್ಯಾತನಾದ ಈ ರಾಮನು ಸ್ವಯಂವರದಲ್ಲಿ ನಿನ್ನನ್ನು ವರಿಸಿದನೆಂಬ ಕಥೆ ನನ್ನ ಕಿವಿಗೆ ಮುಟ್ಟಿದೆ. ಆ ಕಥೆಯನ್ನು ವಿಸ್ತಾರವಾಗಿ (ನಿನ್ನ ಬಾಯಿಂದ) ಕೇಳಬೇಕೆಂದು ನನಗೆ ಅಪೇಕ್ಷೆಯಾಗಿದೆ. ನಿನಗೆ ಗೊತ್ತಿರುವ ಹಾಗೆ ಏನೇನು ನಡೆಯಿತೆಂಬುದೆಲ್ಲವನ್ನೂ ಹೇಳು'' ಎಂದು ಕೇಳಿದಳು (೨೩-೨೫). ಆಗ ಸೀತೆಯು ಆ ಧರ್ಮಚಾರಿಣಿಯನ್ನುದ್ದೇಶಿಸಿ ''ತಾಯಿ, ಕೇಳೋಣವಾಗಲಿ'' ಎಂದು ನುಡಿದು, ಆ ಕಥಾವೃತ್ತಾಂತವನ್ನು ಹೀಗೆ ವಿವರಿಸಿದಳು (೨೬) : ''ಮಿಥಿಲಾನಗರಕ್ಕೆ ಅಧಿಪತಿಯಾದ ಜನಕನೆಂಬ ರಾಜನಿದ್ದಾನೆ. ಆತನು ಮಹಾವೀರ, ಧರ್ಮಜ್ಞ. ಅವನು ಕ್ಷಾತ್ರಧರ್ಮದಲ್ಲಿ ನಿರತನಾಗಿ ಧರ್ಮದಿಂದ ರಾಜ್ಯವನ್ನು ಪಾಲಿಸುತ್ತಿದ್ದಾನೆ (೨೭). ಅವನು ಒಂದು ಸಲ ಯಾಗಭೂಮಿಯನ್ನು ಶೋಧಿಸುವುದಕ್ಕಾಗಿ ನೇಗಿಲನ್ನು ಹಿಡಿದು ನೆಲವನ್ನು ಉಳುತ್ತಿದ್ದನಂತೆ. ಆಗ ನಾನು ಭೂಮಿಯನ್ನು ಸೀಳಿ ಮೇಲಕ್ಕೆ

ಸ ಮಾಂ ದೃಷ್ಟ್ವಾ ನರಪತಿರ್ಮುಷ್ಟಿವಿಕ್ಷೇಪತತ್ಪರಃ ।
ಪಾಂಸುಕುಂಠಿತಸರ್ವಾಂಗೀಂ ಜನಕೋ ವಿಸ್ಮಿತೋಽಭವತ್ ॥ ೨೯

ಅನಪತ್ಯೇನ ಚ ಸ್ನೇಹಾದಂಕಮಾರೋಪ್ಯ ಚ ಸ್ವಯಮ್ ।
ಮಮೇಯಂ ತನಯೇತ್ಯುಕ್ತ್ವಾ ಸ್ನೇಹೋ ಮಯಿ ನಿಪಾತಿತಃ ॥ ೩೦

ಅಂತರಿಕ್ಷೇ ಚ ವಾಗುಕ್ತಾ ಪ್ರತಿ ಮಾಽಮಾನುಷೀ ಕಿಲ ।
ಏವಮೇತನ್ನರಪತೇ ಧರ್ಮೇಣ ತನಯಾ ತವ ॥ ೩೧

ತತಃ ಪ್ರಹೃಷ್ಟೋ ಧರ್ಮಾತ್ಮಾ ಪಿತಾ ಮೇ ಮಿಥಿಲಾಧಿಪಃ ।
ಅವಾಪ್ತೋ ವಿಪುಲಾಮೃದ್ಧಿಂ ಮಾಮವಾಪ್ಯ ನರಾಧಿಪಃ ॥ ೩೨

ದತ್ತಾ ಚಾಸ್ಮೀಷ್ಟವದ್ದೇವ್ಯೈ ಜ್ಯೇಷ್ಠಾಯೈ ಪುಣ್ಯಕರ್ಮಣಾ ।
ತಯಾ ಸಂಭಾವಿತಾ ಚಾಸ್ಮಿ ಸ್ನಿಗ್ಧಯಾ ಮಾತೃಸೌಹೃದಾತ್ ॥ ೩೩

ಪತಿಸಂಯೋಗಸುಲಭಂ ವಯೋ ದೃಷ್ಟ್ವಾ ತು ಮೇ ಪಿತಾ ।
ಚಿಂತಾಮಭ್ಯಗಮದ್ದೀನೋ ವಿತ್ತನಾಶಾದಿವಾಧನಃ ॥ ೩೪

ಎದ್ದುಬಂದೆನಂತೆ. ಆದರಿಂದ ನಾನು ಜನಕರಾಜನಿಗೆ ಮಗಳೆನಿಸಿಕೊಂಡೆನು (೨೮). ಆ ಮಹಾರಾಜನು ಕ್ಷೇತ್ರದಲ್ಲಿ ಓಷಧಿಮುಷ್ಟಿಗಳನ್ನು ಎರಚುತ್ತಿದ್ದಾಗ ನನ್ನನ್ನು ಕಂಡನು. ನನ್ನ ಮೈಯಲ್ಲಿ ಧೂಳಿ ಕವಿದಿತ್ತು. ನನ್ನನ್ನು ನೋಡಿ ಜನಕನಿಗೆ ವಿಸ್ಮಯವಾಯಿತಂತೆ (೨೯). ಆತನಿಗೆ ಆಗ ಸಂತತಿ ಇರಲಿಲ್ಲ. ಆದ್ದರಿಂದ ಆ ಮಹಾರಾಜನು ನನ್ನನ್ನು ಪ್ರೇಮದಿಂದ ತೊಡೆಯ ಮೇಲೆ ಮಲಗಿಸಿಕೊಂಡು 'ಇವಳು ನನ್ನ ಮಗಳು' ಎಂದು ಹೇಳಿ ವಾತ್ಸಲ್ಯದಿಂದ ಲಾಲಿಸಿದನು. ಆಗ ನನ್ನ ವಿಷಯವಾಗಿ ಅಂತರಿಕ್ಷದಲ್ಲಿ 'ಜನಕರಾಜ, ನೀನು ಹೇಳಿದುದೇ ಸರಿ. ಧರ್ಮದೃಷ್ಟಿಯಿಂದ ಇವಳು ನಿನ್ನ ಮಗಳು' ಎಂಬುದಾಗಿ ದೇವವಾಣಿಯಾಯಿತಂತೆ (೩೦-೩೧). ಅದನ್ನು ಕೇಳಿ ನನ್ನ ತಂದೆ ಆನಂದದಿಂದ ಹಿಗ್ಗಿದನು. ಧರ್ಮಾತ್ಮನಾದ ಆ ಮಿಥಿಲಾಧಿಪತಿಗೆ ನಾನು ದೊರಕಿದ್ದರಿಂದ ವಿಪುಲವಾದ ಐಶ್ವರ್ಯವೇ ಲಭಿಸಿದಂತಾಯಿತು (೩೨). ಆ ಪುಣ್ಯಾತ್ಮನು ತನ್ನ ಪ್ರೀತಿಪಾತ್ರಳಾದ ಜ್ಯೇಷ್ಠಪತ್ನಿಗೆ ನನ್ನನ್ನು ಸಾಕುವುದಕ್ಕಾಗಿ ಒಪ್ಪಿಸಿದನು. ಆಕೆಯು ಹಡೆದ ತಾಯಿಯಂತೆ ವಾತ್ಸಲ್ಯದಿಂದ ನನ್ನನ್ನು ಸಾಕಿಸಲಹಿದಳು (೩೩). ಮುಂದೆ ನನಗೆ ವಿವಾಹ ಯೋಗ್ಯವಾದ ವಯಸ್ಸಾಗಲು ನನ್ನ ತಂದೆಗೆ ಚಿಂತೆ ಹುಟ್ಟಿತು. ಸಂಪಾದಿಸಿದ ಸ್ವಲ್ಪ ಹಣವನ್ನು

ಸದೃಶಾಚ್ಚಾಪಕೃಷ್ಟಾಚ್ಚ ಲೋಕೇ ಕನ್ಯಾಪಿತಾ ಜನಾತ್ ।
ಪ್ರಧರ್ಷಣಮವಾಪ್ನೋತಿ ಶಕ್ರೇಣಾಪಿ ಸಮೋ ಭುವಿ ॥ ೩೫

ತಾಂ ಧರ್ಷಣಾಮದೂರಸ್ಥಾಂ ದೃಷ್ಟ್ವಾ ಚಾತ್ಮನಿ ಪಾರ್ಥಿವಃ ।
ಚಿಂತಾರ್ಣವಗತಃ ಪಾರಂ ನಾಸಸಾದಾಪ್ಲವೋ ಯಥಾ ॥ ೩೬

ಅಯೋನಿಜಾಂ ಹಿ ಮಾಂ ಜ್ಞಾತ್ವಾ ನಾಧ್ಯಗಚ್ಛದ್ವಿಚಿಂತಯನ್ ।
ಸದೃಶಂ ಚಾನುರೂಪಂ ಚ ಮಹೀಪಾಲಃ ಪತಿಂ ಮಮ ॥ ೩೭

ತಸ್ಯ ಬುದ್ಧಿರಿಯಂ ಜಾತಾ ಚಿಂತಯಾನಸ್ಯ ಸಂತತಮ್ ।
ಸ್ವಯಂವರಂ ತನೂಜಾಯಾಃ ಕರಿಷ್ಯಾಮೀತಿ ಧೀಮತಃ ॥ ೩೮

ಮಹಾಯಜ್ಞೇ ತದಾ ತಸ್ಯ ವರುಣೇನ ಮಹಾತ್ಮನಾ ।
ದತ್ತಂ ಧನುರ್ವರಂ ಪ್ರೀತ್ಯಾ ತೂಣೀ ಚಾಕ್ಷಯಸಾಯಕೌ ॥ ೩೯

ಕಳೆದುಕೊಂಡ ಬಡವನಂತೆ ಅವನು ದೀನನಾಗಿ ಪರಿತಪಿಸಿದನು (೩೪). ಪೂಜ್ಯಳೆ, ಕನ್ಯಾಪಿತನು ದೇವೇಂದ್ರನಿಗೆ ಸಮಾನನಾಗಿದ್ದರೂ ಲೋಕದಲ್ಲಿ ಅವನಿಗೆ ತಿರಸ್ಕಾರ ತಪ್ಪಿದ್ದಲ್ಲ. ತನಗೆ ಸಮಾನರಾದ ಜನರಿಂದಲೂ ಕೆಲವು ವೇಳೆ ಕೆಳಮಟ್ಟದವರಿಂದಲೂ ಕನ್ಯೆಯ ತಂದೆಗೆ ಅವಮಾನ ಸಂಭವಿಸುತ್ತದೆ (೩೫). ಹಾಗೆ ಅವಮಾನ ಪಡಬೇಕಾದ ಕಾಲವು ಸನ್ನಿಹಿತವಾಯಿತೆಂದು ಮನಸ್ಸಿನಲ್ಲಿಯೇ ಗುಣಿಸುತ್ತ ಜನಕ ಮಹಾರಾಜನು ಚಿಂತಾಸಮುದ್ರದಲ್ಲಿ ಮುಳುಗಿದನು. ಅಲ್ಲಿಂದ ಪಾರಾಗುವ ಉಪಾಯ ತೋರಲಿಲ್ಲ, ದೋಣಿಯಿಲ್ಲದವನು ಸಮುದ್ರದಲ್ಲಿ ಮುಳುಗಿದಂತಾಯಿತು (೩೬). ಅಲ್ಲದೆ ನಾನು ಮನುಷ್ಯ ಗರ್ಭದಲ್ಲಿ ಜನಿಸದೆ ಅಯೋನಿಜೆಯಾಗಿದ್ದೆನು. ಆದ್ದರಿಂದ ನನಗೆ ಸದೃಶನೂ ಅನುರೂಪನೂ ಆದ ವರನು ಯಾರೆಂದು ನನ್ನ ತಂದೆಗೆ ಚಿಂತೆ ಆವರಿಸಿತು. ಎಷ್ಟು ಆಲೋಚಿಸಿದರೂ ಹೊಳೆಯಲಿಲ್ಲ(೩೭). ಹೀಗೆ ಸತತವೂ ಚಿಂತಿಸುತ್ತಿದ್ದ ನನ್ನ ತಂದೆಗೆ ಒಂದು ಆಲೋಚನೆ ಹುಟ್ಟಿತು. 'ನನ್ನ ಮಗಳಿಗೆ ಸ್ವಯಂವರವನ್ನು ಏರ್ಪಡಿಸುವೆನು' ಎಂದು ಆ ಮೇಧಾವಿಯು ನಿರ್ಧರಿಸಿದನು. ಒಂದು ಮಹಾಯಾಗದಲ್ಲಿ ಮಹಾತ್ಮನಾದ

ಅಸಂಚಾಲ್ಯಂ ಮನುಷ್ಯೈಶ್ಚ ಯತ್ನೇನಾಪಿ ಚ ಗೌರವಾತ್ ।
ತನ್ನ ಶಕ್ತಾ ನಮಯಿತುಂ ಸ್ವಪ್ನೇಷ್ವಪಿ ನರಾಧಿಪಾಃ ॥ ೪೦

ತದ್ಧನುಃ ಪ್ರಾಪ್ಯ ಮೇ ಪಿತ್ರಾ ವ್ಯಾಹೃತಂ ಸತ್ಯವಾದಿನಾ ।
ಸಮವಾಯೇ ನರೇಂದ್ರಾಣಾಂ ಪೂರ್ವಮಾಮಂತ್ರ್ಯ ಪಾರ್ಥಿವಾನ್ ॥

ಇದಂ ಚ ಧನುರುದ್ಯಮ್ಯ ಸಜ್ಯಂ ಯಃ ಕುರುತೇ ನರಃ ।
ತಸ್ಯ ಮೇ ದುಹಿತಾ ಭಾರ್ಯಾ ಭವಿಷ್ಯತಿ ನ ಸಂಶಯಃ ॥ ೪೨

ತಸ್ಯ ದೃಷ್ಟ್ವಾ ಧನುಃಶ್ರೇಷ್ಠಂ ಗೌರವಾದ್ಗಿರಿಸಂನಿಭಮ್ ।
ಅಭಿವಾದ್ಯ ನೃಪಾ ಜಗ್ಮುರಶಕ್ತಾಸ್ತಸ್ಯ ತೋಲನೇ ॥ ೪೩

ವರುಣನು* ಸಂತುಷ್ಟನಾಗಿ (ನಮ್ಮ ಪೂರ್ವಜನಾದ ದೇವರಾತನಿಗೆ) ಒಂದು ಶ್ರೇಷ್ಠವಾದ ಧನುಸ್ಸನ್ನೂ ಅಕ್ಷಯಬಾಣಗಳಿರುವ ಎರಡು ಬತ್ತಳಿಕೆಗಳನ್ನೂ ಕೊಟ್ಟಿದ್ದನು. ಅವು ನನ್ನ ತಂದೆಯ ವಶಕ್ಕೆ ಬಂದಿದ್ದವು (೩೮-೩೯). ಆ ಧನುಸ್ಸು ಬಹಳ ಭಾರವಾಗಿತ್ತು. ಎಷ್ಟು ಪ್ರಯತ್ನಿಸಿದರೂ ಮನುಷ್ಯರಿಂದ ಅಲ್ಲಾಡಿಸುವುದಕ್ಕೆ ಆಗುತ್ತಿರಲಿಲ್ಲ. ಯಾವ ರಾಜರಿಗೂ ಅದನ್ನು ಎತ್ತಿ ಬಗ್ಗಿಸಲು ಸ್ವಪ್ನದಲ್ಲಿಯೂ ಸಾಧ್ಯವಿರಲಿಲ್ಲ (೪೦). ಅನಂತರ ನನ್ನ ತಂದೆಯು ಪೃಥಿವಿಯಲ್ಲಿರುವ ಸಕಲ ನರೇಂದ್ರರನ್ನೂ ಆಮಂತ್ರಿಸಿ ಒಂದು ಸಭೆಯನ್ನು ಸೇರಿಸಿದನು. ಅವರೆದುರಿಗೆ ಆ ಧನುಸ್ಸನ್ನು ತರಿಸಿಟ್ಟು ಸತ್ಯಸಂಧನಾದ ನನ್ನ ತಂದೆ ''ಎಲೈ ನರೇಂದ್ರರೆ, ನಿಮ್ಮಲ್ಲಿ ಯಾವಾತನು ಈ ಧನುಸ್ಸನ್ನೆತ್ತಿ ಹೆದೆಯೇರಿಸುವನೋ ಆತನಿಗೆ ನನ್ನ ಮಗಳು ಪತ್ನಿಯಾಗುವಳು; ಸಂದೇಹವಿಲ್ಲ'' ಎಂದು ಸಾರಿದನು (೪೧-೪೨). ಪರ್ವತಾಕಾರವಾಗಿದ್ದ ಆ ಮಹಾಧನುಸ್ಸನ್ನು ನೋಡಿ ಸಕಲನೃಪಾಲರೂ ಅದರ ಗೌರವಕ್ಕೆ ಮಣಿದು ನಮಸ್ಕರಿಸಿ ಹೊರಟುಹೋಗುತ್ತಿದ್ದರು. ಒಬ್ಬರಿಗೂ ಅದನ್ನು ಅಲ್ಲಾಡಿಸಲು ಸಾಧ್ಯವಾಗಲಿಲ್ಲ (೪೩). ಹೀಗೆ ಬಹುಕಾಲ ಕಳೆಯಲು ಮಹಾತೇಜಸ್ವಿಯಾದ ಈ

---

* ಶಿವನು ಧನುಸ್ಸನ್ನು ದೇವತೆಗಳಿಗೆ ಕೊಟ್ಟನು. ದೇವತೆಗಳು ವರುಣನಿಗೂ ವರುಣನು ದೇವರಾತನಿಗೂ ಅದನ್ನು ಕೊಟ್ಟರೆಂದೂ ಪೂರ್ವಕಥೆ. ಬಾಲಕಾಂಡದ ೬೬ನೆಯ ಸರ್ಗವನ್ನು ನೋಡಿ.

ಸುದೀರ್ಘಸ್ಯಾಥ ಕಾಲಸ್ಯ ರಾಘವೋಽಯಂ ಮಹಾದ್ಯುತಿಃ ।
ವಿಶ್ವಾಮಿತ್ರೇಣ ಸಹಿತೋ ಯಜ್ಞಂ ದ್ರಷ್ಟುಂ ಸಮಾಗತಃ ॥ ೪೪

ಲಕ್ಷ್ಮಣೇನ ಸಹ ಭ್ರಾತ್ರಾ ರಾಮಃ ಸತ್ಯಪರಾಕ್ರಮಃ ।
ವಿಶ್ವಾಮಿತ್ರಸ್ತು ಧರ್ಮಾತ್ಮಾ ಮಮ ಪಿತ್ರಾ ಸುಪೂಜಿತಃ ॥ ೪೫

ಪ್ರೋವಾಚ ಪಿತರಂ ತತ್ರ ಭ್ರಾತರೌ ರಾಮಲಕ್ಷ್ಮಣೌ ।
ಸುತೌ ದಶರಥಸ್ಯೇಮೌ ಧನುರ್ದರ್ಶನಕಾಂಕ್ಷಿಣೌ ॥ ೪೬

ಧನುರ್ದರ್ಶಯ ರಾಮಾಯ ರಾಜಪುತ್ರಾಯ ದೈವಿಕಮ್ ।
ಇತ್ಯುಕ್ತಸ್ತೇನ ವಿಪ್ರೇಣ ತದ್ಧನುಃ ಸಮುಪಾನಯತ್ ॥ ೪೭

ನಿಮೇಷಾಂತರಮಾತ್ರೇಣ ತದಾನಮ್ಯ ಸ ವೀರ್ಯವಾನ್ ।
ಜ್ಯಾಂ ಸಮಾರೋಪ್ಯ ಝಟಿತಿ ಪೂರಯಾಮಾಸ ವೀರ್ಯವಾನ್ ॥

ತೇನ ಪೂರಯತಾ ವೇಗಾನ್ಮಧ್ಯೇ ಭಗ್ನಂ ದ್ವಿಧಾ ಧನುಃ ।
ತಸ್ಯ ಶಬ್ದೋಽಭವದ್ಭೀಮಃ ಪತಿತಸ್ಯಾಶನೇರಿವ ॥ ೪೯

ರಾಘವನು ವಿಶ್ವಾಮಿತ್ರಮುನಿಗಳೊಡನೆ ಮಿಥಿಲೆಗೆ ಬಂದನು. ಇವರ ಆಗಮನ ಅಲ್ಲಿ ನಡೆಯುತ್ತಿದ್ದ ಯಜ್ಞವನ್ನು ನೋಡುವುದಕ್ಕಾಗಿ! ಸತ್ಯಸಂಧನಾದ ಶ್ರೀರಾಮನು ತಮ್ಮನಾದ ಲಕ್ಷ್ಮಣನೊಡನೆ ಬಂದಿದ್ದನು. ಆಗ ನನ್ನ ತಂದೆಯು ವಿಶ್ವಾಮಿತ್ರಮಹರ್ಷಿಗಳನ್ನು ಆದರಿಸಿ ಸತ್ಕರಿಸಿದನು (೪೪-೪೫). ಆ ಮಹರ್ಷಿಗಳು ನನ್ನ ತಂದೆಯನ್ನು ಕುರಿತು ''ರಾಜ, ಇವರಿಬ್ಬರೂ ಅಣ್ಣತಮ್ಮಂದಿರು; ದಶರಥರಾಜನ ಮಕ್ಕಳು; ರಾಮ, ಲಕ್ಷ್ಮಣ ಎಂದು ಇವರ ಹೆಸರು. ನಿನ್ನ ದಿವ್ಯಧನುಸ್ಸನ್ನು ತೋರಿಸು'' ಎಂದು ಹೇಳಿದರು. ಆ ವಿಪ್ರೋತ್ತಮರ ನುಡಿಯನ್ನು ಕೇಳಿ ನನ್ನ ತಂದೆಯು ಆ ಧನುಸ್ಸನ್ನು ತರಿಸಿದನು (೪೬-೪೭). ಈ ವೀರಾಗ್ರಣಿಯು ಕಣ್ಣುಮಿಟುಕಿಸುವಷ್ಟರಲ್ಲಿ ಆ ಧನುಸ್ಸನ್ನೆತ್ತಿ ಬಗ್ಗಿಸಿ ಹೆದೆಯನ್ನೆಳೆದು ಕಟ್ಟಿ ಮೀಟಿದನು. ಅಷ್ಟರಲ್ಲಿ ಆ ಧನುಸ್ಸು ದಡಾರನೆ ಎರಡು ತುಂಡಾಗಿ ನಡುವೆ ಮುರಿದು ಹೋಯಿತು. ಸಿಡಿಲು ಎರಗಿದಂತೆ ಭಯಂಕರವಾದ ಸದ್ದಾಯಿತು (೪೮-೪೯).

ತತೋಽಹಂ ತತ್ರ ರಾಮಾಯ ಪಿತ್ರಾ ಸತ್ಯಾಭಿಸಂಧಿನಾ ।
ನಿಶ್ಚಿತಾ ದಾತುಮುದ್ಯಮ್ಯ ಜಲಭಾಜನಮುತ್ತಮಮ್ ॥ ೫೦

ದೀಯಮಾನಾಂ ನ ತು ತದಾ ಪ್ರತಿಜಗ್ರಾಹ ರಾಘವಃ ।
ಅವಿಜ್ಞಾಯ ಪಿತುಶ್ಛಂದಮಯೋಧ್ಯಾಧಿಪತೇಃ ಪ್ರಭೋಃ ॥ ೫೧

ತತಃ ಶ್ವಶುರಮಾಮಂತ್ರ್ಯ ವೃದ್ಧಂ ದಶರಥಂ ನೃಪಮ್ ।
ಮಮ ಪಿತ್ರಾ ತ್ವಹಂ ದತ್ತಾ ರಾಮಾಯ ವಿದಿತಾತ್ಮನೇ ॥ ೫೨

ಮಮ ಚೈವಾನುಜಾ ಸಾಧ್ವೀ ಊರ್ಮಿಲಾ ಪ್ರಿಯದರ್ಶನಾ ।
ಭಾರ್ಯಾರ್ಥೇ ಲಕ್ಷ್ಮಣಸ್ಯಾಪಿ ದತ್ತಾ ಪಿತ್ರಾ ಮಮ ಸ್ವಯಮ್ ॥ ೫೩

ಏವಂ ದತ್ತಾಸ್ಮಿ ರಾಮಾಯ ತದಾ ತಸ್ಮಿನ್ ಸ್ವಯಂವರೇ ।
ಅನುರಕ್ತಾಸ್ಮಿ ಧರ್ಮೇಣ ಪತಿಂ ವೀರ್ಯವತಾಂ ವರಮ್ ॥ ೫೪

ಇತಿ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಅಷ್ಟಾದಶಾಧಿಕಶತತಮಃ ಸರ್ಗಃ

ಅನಂತರ ಸತ್ಯವಾದಿಯಾದ ನನ್ನ ತಂದೆ ನನ್ನನ್ನು ಶ್ರೀರಾಮನಿಗೆ ಧಾರೆಯೆರೆದುಕೊಡುವುದಕ್ಕಾಗಿ ಜಲಕುಂಭವನ್ನು ಹಿಡಿದು ಸಿದ್ಧನಾದನು. ಆದರೆ ಈ ರಘುಕುಲೋತ್ತನ್ನನು ಆಗಲೇ ನನ್ನನ್ನು ಪರಿಗ್ರಹಿಸಲು ಒಪ್ಪಲಿಲ್ಲ! ಅಯೋಧ್ಯಾಧಿಪತಿಯಾದ ನನ್ನ ತಂದೆ ದಶರಥರಾಜನು ತನಗೆ ಪ್ರಭುವೆಂದೂ ಅವನ ಇಚ್ಛೆಯನ್ನರಿಯದೆ ವಿವಾಹವು ಸಾಧ್ಯವಿಲ್ಲವೆಂದೂ ತಿಳಿಸಿಬಿಟ್ಟನು! (೫೦-೫೧). ಆಮೇಲೆ ನನ್ನ ತಂದೆ ವೃದ್ಧನಾದ ದಶರಥಮಹಾರಾಜನಿಗೆ ಹೇಳಿಕಳಿಸಿದನು. ಆಗ ನನ್ನ ಮಾವನು ಬಂದು ಒಪ್ಪಿಗೆಯನ್ನು ಕೊಟ್ಟ ಮೇಲೆ, ಈ ಮಹಾತ್ಮನಿಗೆ ನನ್ನನ್ನು ಮದುವೆಮಾಡಿಕೊಟ್ಟನು (೫೨). ತಾಯೆ, ನನಗೆ ಊರ್ಮಿಳೆಯೆಂಬ ಒಬ್ಬ ತಂಗಿ ಇದ್ದಾಳೆ. ಅವಳು ಬಹಳ ಸಾಧ್ವಿ; ಸುಂದರಿ. ನನ್ನ ತಂದೆ ಅವಳನ್ನು ಲಕ್ಷ್ಮಣನಿಗೆ ಕೊಟ್ಟು ವಿವಾಹ ಮಾಡಿದನು (೫೩). ಹೀಗೆ ಆ ಸ್ವಯಂವರದಲ್ಲಿ ನಾನು ಶ್ರೀರಾಮನ ಕೈಸೇರಿದೆನು. ಪೂಜ್ಯಳೆ, ಅಲ್ಲಿಂದ ವೀರಾಗ್ರೇಸರನಾದ ನನ್ನ ಪತಿಯಲ್ಲಿ ಧರ್ಮರೀತಿಯಿಂದ ಅನುರಕ್ತಳಾಗಿದ್ದೇನೆ ಎಂದು ಹೇಳಿದಳು (೫೪).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ನೂರಹದಿನೆಂಟನೆಯ ಸರ್ಗ

ಏಕೋನವಿಂಶತ್ಯಧಿಕಶತತಮಃ ಸರ್ಗಃ

ದಂಡಕಾರಣ್ಯಪ್ರವೇಶಃ

ಅನಸೂಯಾ ತು ಧರ್ಮಜ್ಞಾ ಶ್ರುತ್ವಾ ತಾಂ ಮಹತೀಂ ಕಥಾಮ್ ।
ಪರ್ಯಷ್ವಜತ ಬಾಹುಭ್ಯಾಂ ಶಿರಸ್ಯಾಘ್ರಾಯ ಮೈಥಿಲೀಮ್ ॥ ೧

ವ್ಯಕ್ತಾಕ್ಷರಪದಂ ಚಿತ್ರಂ ಭಾಷಿತಂ ಮಧುರಂ ತ್ವಯಾ ।
ಯಥಾ ಸ್ವಯಂವರಂ ವೃತ್ತಂ ತತ್ ಸರ್ವಂ ಹಿ ಶ್ರುತಂ ಮಯಾ ॥ ೨

ರಮೇಽಹಂ ಕಥಯಾ ತೇ ತು ದೃಢಂ ಮಧುರಭಾಷಿಣಿ ।
ರವಿರಸ್ತಂ ಗತಃ ಶ್ರೀಮಾನುಪೋಹ್ಯ ರಜನೀಂ ಶಿವಾಮ್ ॥ ೩

ದಿವಸಂ ಪ್ರತಿ ಕೀರ್ಣಾನಾಮಾಹಾರಾರ್ಥಂ ಪತತ್ರಿಣಾಮ್ ।
ಸಂಧ್ಯಾಕಾಲೇ ನಿಲೀನಾನಾಂ ನಿದ್ರಾರ್ಥಂ ಶ್ರೂಯತೇ ಧ್ವನಿಃ ॥ ೪

ಏತೇ ಚಾಪ್ಯಭಿಷೇಕಾರ್ದ್ರಾ ಮುನಯಃ ಕಲಶೋದ್ಯತಾಃ ।
ಸಹಿತಾ ಉಪವರ್ತಂತೇ ಸಲಿಲಾಪ್ಲುತವಲ್ಕಲಾಃ ॥ ೫

ಸರ್ಗ೧೧೯

ಅತ್ರಿಮುನಿಗಳ ಆಶ್ರಮದಲ್ಲಿ ಆ ರಾತ್ರಿಯನ್ನು ಕಳೆಯುವುದು.
ಮಾರನೆಯ ದಿನ ದಂಡಕಾರಣ್ಯಪ್ರವೇಶ.

ಧರ್ಮಜ್ಞಳಾದ ಅನಸೂಯೆಗೆ ಸೀತಾಸ್ವಯಂವರದ ಕಥೆಯನ್ನು ಕೇಳಿ ಆನಂದವಾಯಿತು. ಅವಳು ವೈಥಿಲಿಯನ್ನು ಎರಡು ಕೈಗಳಿಂದಲೂ ಆಲಿಂಗಿಸಿಕೊಂಡು ಶಿರಸ್ಸನ್ನಾಘ್ರಾಣಿಸುತ್ತ ಹೀಗೆಂದಳು (೧) : ''ಮಗಳೆ, ಎಷ್ಟು ಚೆನ್ನಾಗಿ – ಎಷ್ಟು ಇಂಪಾಗಿ ಕಥೆಯನ್ನು ಹೇಳಿದೆ! ಮಾತುಗಳನ್ನು ಎಷ್ಟು ಸ್ಫುಟವಾಗಿ ಉಚ್ಚರಿಸಿದೆ! ಸ್ವಯಂವರದ ವೃತ್ತಾಂತವೆಲ್ಲವನ್ನೂ ನಾನು ಕೇಳಿದಂತಾಯಿತು. ಎಷ್ಟು ಮಧುರವಾಗಿ ಮಾತನಾಡುತ್ತೀಯೆ. ಸೀತೆ! ನಿನ್ನ ವೃತ್ತಾಂತವನ್ನು ಕೇಳಿ ಆನಂದವಾಯಿತು. ಈಗ ಸೂರ್ಯನು ಮುಳುಗುತ್ತಿದ್ದಾನೆ. ಮಂಗಳಕರವಾದ ರಾತ್ರಿ ಸಮೀಪಿಸಿತು (೨-೩). ಹಗಲೆಲ್ಲ ಆಹಾರಕ್ಕಾಗಿ ಚದರಿದ್ದ ಹಕ್ಕಿಗಳು ಸಂಜೆಯಾಯಿತೆಂದು ಗೂಡುಗಳಿಗೆ ಹಿಂದಿರುಗಿವೆ; ನಿದ್ರೆಗಾಗಿ ಗೂಡುಗಳನ್ನು ಸೇರಿಕೊಳ್ಳುತ್ತ ಚಿಲಿಪಿಲಿ ಗುಟ್ಟುವುದು ಕೇಳಿಸುತ್ತಿದೆ. ಮುನಿಗಳು ಸ್ನಾನಮಾಡಿ ಒದ್ದೆಯಾದ ವಲ್ಕಲವನ್ನುಟ್ಟು ಜಲಕಲಶಗಳನ್ನು

ಋಷೀಣಾಮಗ್ನಿಹೋತ್ರೇಷು ಹುತೇಷು ವಿಧಿಪೂರ್ವಕಮ್ ।
ಕಪೋತಾಂಗಾರುಣೋ ಧೂಮೋ ದೃಶ್ಯತೇ ಪವನೋದ್ಧತಃ ॥ ೬

ಅಲ್ಪಪರ್ಣಾ ಹಿ ತರವೋ ಘನೀಭೂತಾಃ ಸಮಂತತಃ ।
ವಿಪ್ರಕೃಷ್ಟೇಽಪಿ ದೇಶೇಽಸ್ಮಿನ್ನ ಪ್ರಕಾಶಂತಿ ವೈ ದಿಶಃ ॥ ೭

ರಜನೀಚರಸತ್ತ್ವಾನಿ ಪ್ರಚರಂತಿ ಸಮಂತತಃ ।
ತಪೋವನಮೃಗಾ ಹ್ಯೇತೇ ವೇದಿತೀರ್ಥೇಷು ಶೇರತೇ ॥ ೮

ಸಂಪ್ರವೃತ್ತಾ ನಿಶಾ ಸೀತೇ ನಕ್ಷತ್ರಸಮಲಂಕೃತಾ ।
ಜ್ಯೋತ್ಸ್ನಾಪ್ರಾವರಣಶ್ಚಂದ್ರೋ ದೃಶ್ಯತೇಽಭ್ಯುದಿತೋಽಂಬರೇ ॥ ೯

ಗಮ್ಯತಾಮನುಜಾನಾಮಿ ರಾಮಸ್ಯಾನುಚರೀ ಭವ ।
ಕಥಯಂತ್ಯಾ ಹಿ ಮಧುರಂ ತ್ವಯಾಹಂ ಪರಿತೋಷಿತಾ ॥ ೧೦

ಅಲಂಕುರು ಚ ತಾವತ್ತ್ವಂ ಪ್ರತ್ಯಕ್ಷಂ ಮಮ ಮೈಥಿಲಿ ।
ಪ್ರೀತಿಂ ಜನಯ ಮೇ ವತ್ಸೇ ದಿವ್ಯಾಲಂಕಾರಶೋಭಿತಾ ॥ ೧೧

ಹಿಡಿದು ಗುಂಪುಗುಂಪಾಗಿ ಬರುತ್ತಿದ್ದಾರೆ (೪-೫). ಅಲ್ಲಿ ಪಾರಿವಾಳದ ಮೈಬಣ್ಣದಂತೆ ನಸುಗಪ್ಪಾದ* ಹೊಗೆಯು ಕಾಣಿಸುತ್ತಿದೆ. ಋಷಿಗಳು ವಿಧಿಪೂರ್ವಕವಾಗಿ ಹೋಮಮಾಡಲು, ಗಾಳಿಯಿಂದ ಹೊಗೆ ಎದ್ದಿದೆ. ದಿಕ್ಕುಗಳು ಸ್ಪಷ್ಟವಾಗಿ ಗೋಚರಿಸುವುದಿಲ್ಲ. ಕಣ್ಣಿಗೆ ದೂರದಲ್ಲಿರುವ ಮರಗಳಲ್ಲಿ ಎಲೆಗಳು ವಿರಳವಾಗಿದ್ದರೂ ದಟ್ಟವಾಗಿರುವಂತೆ ತೋರುತ್ತದೆ (೬-೭). ರಾತ್ರಿ ಸಂಚಾರಿಗಳಾದ ಪ್ರಾಣಿಗಳು ಅಲ್ಲಲ್ಲಿ ಸಂಚಾರವನ್ನಾರಂಭಿಸುತ್ತಿವೆ. ನಮ್ಮ ತಪೋವನದ ಮೃಗಗಳು ವೇದಿಗಳ ಪುಣ್ಯಪ್ರದೇಶಗಳಿಗೆ ಬಂದು ಮಲಗುವುದನ್ನು ನೋಡು! ಸೀತೆ, ತಾರಾಪುಂಜರಂಜಿತಳಾಗಿ ರಜನಿಯು ಬಂದಳು! ಚಂದ್ರನು ಚಂದ್ರಿಕೆಯನ್ನು ಹೊದೆದು ಅಂಬರತಳದಲ್ಲಿ ಉದಿಸಿ ಬಂದನು! (೮-೯). ನೀನೂ ಹೋಗು! ಹೋಗಿ ರಾಮನ ಪಾರ್ಶ್ವದಲ್ಲಿರು! ಸವಿಮಾತಿನಿಂದ ನನ್ನನ್ನು ಸಂತೋಷಪಡಿಸಿದ್ದೀಯೆ. ಮೈಥಿಲಿ, ನನ್ನೆದುರಿಗೇ ಈ ಒಡವೆಗಳಿಂದ ಸಿಂಗರಿಸಿಕೊ. ವತ್ಸೆ ಈ ದಿವ್ಯಾಲಂಕಾರಗಳನ್ನು ಧರಿಸು.

---

* ಅರುಣ = ಅವ್ಯಕ್ತರಾಗ, ಕಪಿಲ, ನಸುಗೆಂಪು, 'ಶ್ಯಾಮೇರುಕ್ತೇಽರುಣೋಽರ್ಕೇಚ'

ಸಾ ತಥಾ ಸಮಲಂಕೃತ್ಯ ಸೀತಾ ಸುರಸುತೋಪಮಾ ।
ಪ್ರಣಮ್ಯ ಶಿರಸಾ ತಸ್ಯೈ ರಾಮಂ ತ್ವಭಿಮುಖೀ ಯಯೌ ॥ ೧೨

ತಥಾ ವಿಭೂಷಿತಾಂ ಸೀತಾಂ ದದರ್ಶ ವದತಾಂ ವರಃ ।
ರಾಘವಃ ಪ್ರೀತಿದಾನೇನ ತಪಸ್ವಿನ್ಯಾ ಜಹರ್ಷ ಚ ॥ ೧೩

ನ್ಯವೇದಯತ್ತತಃ ಸರ್ವಂ ಸೀತಾ ರಾಮಾಯ ಮೈಥಿಲೀ ।
ಪ್ರೀತಿದಾನಂ ತಪಸ್ವಿನ್ಯಾ ವಸನಾಭರಣಸ್ರಜಾಮ್ ॥ ೧೪

ಪ್ರಹೃಷ್ಟಸ್ತ್ವಭವದ್ರಾಮೋ ಲಕ್ಷ್ಮಣಶ್ಚ ಮಹಾರಥಃ ।
ಮೈಥಿಲ್ಯಾಃ ಸತ್ಕ್ರಿಯಾಂ ದೃಷ್ಟ್ವಾ ಮಾನುಷೇಷು ಸುದುರ್ಲಭಾಮ್ ॥

ತತಸ್ತಾಂ ಶರ್ವರೀಂ ಪ್ರೀತಃ ಪುಣ್ಯಾಂ ಶಶಿನಿಭಾನನಃ ।
ಅರ್ಚಿತಸ್ತಾಪಸ್ಯೈಃ ಸಿದ್ಧೈರುವಾಸ ರಘುನಂದನಃ ॥ ೧೬

ತಸ್ಯಾಂ ರಾತ್ರ್ಯಾಂ ವ್ಯತೀತಾಯಾಮಭಿಷಿಚ್ಯ ಹುತಾಗ್ನಿಕಾನ್ ।
ಆಪೃಚ್ಛೇತಾಂ ನರವ್ಯಾಘ್ರೌ ತಾಪಸಾನ್ ವನಗೋಚರಾನ್ ॥ ೧೭

ನೋಡಿ ಸಂತೋಷಿಸುತ್ತೇನೆ' ಎಂದಳು (೧೦-೧೧). ಆಗ ಸುರಸುಂದರಿಯಾದ ಸೀತೆಯು ಆ ಸೀರೆಯನ್ನುಟ್ಟು ಒಡವೆಗಳಿಂದ ಅಲಂಕರಿಸಿಕೊಂಡು ಅನಸೂಯಾ ದೇವಿಗೆ ತಲೆಬಾಗಿ ವಂದಿಸಿದಳು. ಅನಂತರ ಶ್ರೀರಾಮನಿದ್ದಲ್ಲಿಗೆ ಬಂದಳು. ಶ್ರೀರಾಮನು ಸೀತೆಯನ್ನು ನೋಡುತ್ತಾನೆ, ಅವಳು ದಿವ್ಯಾಲಂಕಾರ ಭೂಷಿತಳಾಗಿ ಬರುತ್ತಿದ್ದಾಳೆ! ಆ ತಪಸ್ವಿನಿಯು ಪ್ರೀತಿಯಿಂದ ಕೊಟ್ಟ ಪಾರಿತೋಷಕವನ್ನು ಕಂಡು ಶ್ರೀರಾಮನಿಗೆ ಹರ್ಷವಾಯಿತು (೧೨-೧೩). ಆಮೇಲೆ ಅನಸೂಯಾ ದೇವಿಯು ವಸ್ತ್ರಾಭರಣ ಹೂಮಾಲೆಗಳನ್ನು ಪ್ರೀತಿಯಿಂದ ಕೊಟ್ಟ ಸುದ್ದಿಯೆಲ್ಲವನ್ನೂ ಸೀತೆಯು ಶ್ರೀರಾಮನಿಗೆ ತಿಳಿಸಿದಳು. ಮನುಷ್ಯಮಾತ್ರರಿಗೆ ದುರ್ಲಭವಾದ ಅಂಥ ಸತ್ಕಾರವು ಜಾನಕಿಗೆ ದೊರಕಿತೆಂದು ತಿಳಿದು ಶ್ರೀರಾಮನೂ ಲಕ್ಷ್ಮಣನೂ ಹರ್ಷಗೊಂಡರು (೧೪-೧೫). ಅಲ್ಲಿದ್ದ ಮಹರ್ಷಿಗಳೆಲ್ಲರೂ ಆ ರಾತ್ರಿ ಆಶ್ರಮದಲ್ಲಿಯೇ ಉಳಿಯಬೇಕೆಂದು ಹೇಳಿ ಶ್ರೀರಾಮನನ್ನು ಸತ್ಕರಿಸಿದರು. ಅದರಂತೆಯೇ ಶ್ರೀರಾಮಚಂದ್ರನು ಸಂತುಷ್ಟನಾಗಿ

ತಾವೂಚುಸ್ತೇ ವನಚರಾಸ್ತಾಪಸಾ ಧರ್ಮಚಾರಿಣಃ ।
ವನಸ್ಯ ತಸ್ಯ ಸಂಚಾರಂ ರಾಕ್ಷಸೈಃ ಸಮಭಿಪ್ಲುತಮ್ ॥ ೧೮

ರಕ್ಷಾಂಸಿ ಪುರುಷಾದೀನಿ ನಾನಾರೂಪಾಣಿ ರಾಘವ ।
ವಸಂತ್ಯಸ್ಮಿನ್ ಮಹಾರಣ್ಯೇ ವ್ಯಾಲಾಶ್ಚರುಧಿರಾಶನಾಃ ॥ ೧೯

ಉಚ್ಛಿಷ್ಟಂ ವಾ ಪ್ರಮತ್ತಂ ವಾ ತಾಪಸಂ ಧರ್ಮಚಾರಿಣಮ್ ।
ಅದಂತ್ಯಸ್ಮಿನ್ ಮಹಾರಣ್ಯೇ ತಾನ್ನಿವಾರಯ ರಾಘವ ॥ ೨೦

ಏಷ ಪಂಥಾ ಮಹರ್ಷೀಣಾಂ ಫಲಾನ್ಯಾಹರತಾಂ ವನೇ ।
ಅನೇನ ತು ವನಂ ದುರ್ಗಂ ಗಂತುಂ ರಾಘವ ತೇ ಕ್ಷಮಮ್ ॥ ೨೧

ಆ ರಾತ್ರಿಯನ್ನು ಆಶ್ರಮದಲ್ಲಿ ಕಳೆದನು. ರಾತ್ರಿ ಕಳೆಯಲು ವನವಾಸಿಗಳಾದ ಆ ತಾಪಸರು ಅಗ್ನಿಕಾರ್ಯಾದಿ ಪ್ರಾತಃಕೃತ್ಯಗಳನ್ನು ಮುಗಿಸಿದರು. ಆಗ ಪುರುಷಶ್ರೇಷ್ಠರಾದ ರಾಮಲಕ್ಷ್ಮಣರು ಆ ಋಷಿಗಳ ಬಳಿಗೆ ಬಂದು, ಮುಂದೆ ಪ್ರಯಾಣಮಾಡಲು ಅವರ ಅನುಜ್ಞೆಯನ್ನು ಬೇಡಿದರು (೧೬-೧೭). ಧರ್ಮನಿಷ್ಠರಾದ ಆ ಋಷಿಗಳು, ಸುತ್ತಮುತ್ತಲಿನ ಅರಣ್ಯವು ರಾಕ್ಷಸರ ಬಾಧೆಗೆ ಒಳಗಾಗಿದೆಯೆಂಬುದನ್ನು ತಿಳಿಸುತ್ತ "ರಾಮ, ಈ ಮಹಾರಣ್ಯದಲ್ಲಿ ನರಭಕ್ಷಕರಾದ ರಾಕ್ಷಸರು ನಾನಾರೂಪಗಳನ್ನು ಧರಿಸಿ ವಾಸವಾಗಿದ್ದಾರೆ. ಅಲ್ಲದೆ ರಕ್ತಪಾನ ಮಾಡುವ ಕ್ರೂರಜಂತುಗಳು ಇಲ್ಲಿವೆ (೧೮-೧೯). ಧರ್ಮಾನುಷ್ಠಾನ ಮಾಡಿಕೊಂಡಿರತಕ್ಕ ತಪಸ್ವಿಗಳು ಯಾವಾಗಲಾದರೂ ಮೈಲಿಗೆಯಲ್ಲಿದ್ದರೆ ಅಥವಾ ಅಜಾಗರೂಕರಾಗಿದ್ದರೆ, ಆ ರಾಕ್ಷಸರು ಇವರನ್ನು ತಿಂದುಬಿಡುತ್ತಾರೆ. ರಾಘವ, ಅವರ ಕಾಟವನ್ನು ತಪ್ಪಿಸು (೨೦). (ಇಲ್ಲಿ ನೋಡು) ಋಷಿಗಳು ಹಣ್ಣುಹಂಪಲುಗಳನ್ನು ತರುವ ದಾರಿ ಇದು. ಈ ದಾರಿಯನ್ನು ಹಿಡಿದರೆ ನೀನು ದುರ್ಗಮವಾದ ದಂಡಕಾರಣ್ಯಕ್ಕೆ ಹೋಗಲು ಸಾಧ್ಯವಾದೀತು'' ಎಂದು ಹೇಳಿದರು. ಆಮೇಲೆ ತಪಸ್ವಿಗಳಾದ ಆ ವಿಪ್ರರು ಕೈಮುಗಿದುಕೊಂಡು ದೇವತಾ ಪ್ರಾರ್ಥನೆಯನ್ನು ಮಾಡಿ ಆಶೀರ್ವದಿಸಿದರು. ಶ್ರೀರಾಮನು ಪತ್ನೀಸಮೇತನಾಗಿ ಲಕ್ಷ್ಮಣನೊಡನೆ ಪ್ರಯಾಣ ಮಾಡಿದನು. ಮೇಘಮಂಡಲವನ್ನು ಭೇದಿಸಿಕೊಂಡು

ಇತೀವ ತೈಃ ಪ್ರಾಂಜಲಿಭಿಸ್ತಪಸ್ವಿಭಿ
ರ್ದ್ವಿಜೈಃ ಕೃತಸ್ವಸ್ತ್ಯಯನಃ ಪರಂತಪಃ ।
ವನಂ ಸಭಾರ್ಯಃ ಪ್ರವಿವೇಶ ರಾಘವಃ
ಸಲಕ್ಷ್ಮಣಃ ಸೂರ್ಯ ಇವಾಭ್ರಮಂಡಲಮ್ ॥ ೨೨

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ
ಆದಿಕಾವ್ಯೇ ಚತುರ್ವಿಂಶತಿಸಹಸ್ರಿಕಾಯಾಂ ಸಂಹಿತಾಯಾಮಯೋಧ್ಯಾಕಾಂಡೇ
ಏಕೋನವಿಂಶತ್ಯಧಿಕಶತತಮಃ ಸರ್ಗಃ

ಅಯೋಧ್ಯಾಕಾಂಡಃ ಸಂಪೂರ್ಣಃ

ಸೂರ್ಯನು ನುಗ್ಗಿಹೋಗುವಂತೆ, ವೀರಾಗ್ರಣಿಯಾದ ಶ್ರೀರಾಮಚಂದ್ರನು ದಂಡಕಾರಣ್ಯವನ್ನು ಪ್ರವೇಶಿಸಿದನು (೨೧-೨೨).

ಇಲ್ಲಿಗೆ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದಲ್ಲಿ ನೂರಹತ್ತೊಂಬತ್ತನೆಯ ಸರ್ಗ

– ಅಯೋಧ್ಯಾಕಾಂಡವು ಸಂಪೂರ್ಣವಾಯಿತು –

ಸೀತಾದೇವೀಯುತಂ ವೀರಂ ಸರ್ವಭೂಷಣಭೂಷಿತಮ್
ಸೀತಾಪತಿಂ ಹರಿಂ ಧ್ಯಾಯೇದಯೋಧ್ಯಾಕಾಂಡ ಉತ್ತಮೇ

ಅನುಬಂಧ

(ಅಯೋಧ್ಯಾಕಾಂಡ - ಉತ್ತರಾರ್ಧ)

೧

ವನವಾಸಾಯ ರಾಮಸ್ಯ ಪಂಚರಾತ್ರೋಽದ್ಯ ಗಣತೇ

- ಪುಟ ೩೫

ಶ್ರೀರಾಮನು ವನವಾಸಕ್ಕೆ ಹೊರಟುಹೋದಮೇಲೆ ಐದು ರಾತ್ರಿಗಳು ಕಳೆದಿದ್ದವು. ಆರನೆಯ ರಾತ್ರಿಯಲ್ಲಿ ಕೌಸಲ್ಯೆಯು ಈ ಮಾತುಗಳನ್ನು ಹೇಳಿದ್ದಾಳೆ. ಕಳೆದುಹೋದ ರಾತ್ರಿಗಳು ಐದು ಎಂದು ಅಭಿಪ್ರಾಯ. ಶ್ರೀರಾಮನಿಗೆ ಮೊದಲನೆಯ ರಾತ್ರಿ ತಮಸಾತೀರದಲ್ಲಿ ಕಳೆಯಿತು. ಎರಡನೆಯ ರಾತ್ರಿ ಗಂಗಾತೀರದಲ್ಲಿ, ಮೂರನೆಯ ರಾತ್ರಿ ಗಂಗಾನದಿಯ ದಕ್ಷಿಣತೀರದಲ್ಲಿದ್ದ ಒಂದು ವೃಕ್ಷದ ತಳದಲ್ಲಿ, ನಾಲ್ಕನೆಯ ರಾತ್ರಿ ಪ್ರಯಾಗದಲ್ಲಿ, ಐದನೆಯ ರಾತ್ರಿ ಯಮುನಾತೀರದಲ್ಲಿ ಕಳೆದವು. ಆರನೆಯ ದಿನ ಶ್ರೀರಾಮನು ಚಿತ್ರಕೂಟಕ್ಕೆ ಹೋದನು. ಅವನು ಚಿತ್ರಕೂಟಕ್ಕೆ ಹೋಗಲು ಉದ್ದೇಶಿಸಿರುವ ವೃತ್ತಾಂತ, ಐದನೆಯ ದಿನವೇ ಸುಮಂತ್ರನಿಗೆ ದೂತರ ಮೂಲಕ ತಿಳಿದಿರಲು ಸಾಧ್ಯ. ಸುಮಂತ್ರನು ಗುಹನೊಡನೆ ಮೂರು ದಿನ ಗಂಗಾತೀರದಲ್ಲಿದ್ದನು. ಆದ್ದರಿಂದ ಅವನು 'ಗುಹೇನ ಸಾರ್ಧಂ ತತ್ರೈವ ಸ್ಥಿತೋಽಸ್ಮಿ ದಿವಸಾನ್ ಬಹೂನ್' (ಪುಟ೧೫, ಶ್ಲೋಕ೭) ಎಂದು ಹೇಳಿದ್ದಾನೆ. ಐದನೆಯ ದಿನವೇ ಸುಮಂತ್ರನು ಅಲ್ಲಿಂದ ಹೊರಟು ಆರನೆಯ ದಿನ ಸಾಯಂಕಾಲ ಅಯೋಧ್ಯೆಗೆ ಬಂದಿದ್ದಾನೆ.

೨

ಕೋ ಮಾಂ ಸಂಧ್ಯಾಮುಪಾಸ್ಯೈವ ಸ್ನಾತ್ವಾ ಹುತಹುತಾಶನಃ

- ಪುಟ ೫೨

ಆ ಋಷಿಕುಮಾರನು ವೈಶ್ಯನಿಂದ ಶೂದ್ರಸ್ತ್ರೀಯಲ್ಲಿ ಹುಟ್ಟಿದವನು. ಅವನ ಜಾತಿಯ ಹೆಸರು ಕರಣ. ಕರಣನು ಅನುಲೋಮವಿವಾಹದಿಂದ ಜನಿಸಿದ ಪ್ರಯುಕ್ತ

ಪಿತೃಜಾತಿಗಿಂತ ನಿಕೃಷ್ಟ; ಮಾತೃಜಾತಿಗಿಂತ ಉತ್ಕೃಷ್ಟ ಕರಣನು ತಾಂತ್ರಿಕಮಾರ್ಗದಿಂದ ಸಂಧ್ಯಾವಂದನೆಯನ್ನು ಮಾಡಬಹುದು. ಯಾಜ್ಞವಲ್ಕ್ಯಸ್ಮೃತಿಯಲ್ಲಿ 'ನಮಸ್ಕಾರೇಣ ಮಂತ್ರೇಣ ಪಂಚ ಯಜ್ಞಾನ್ ಸಮಾಪಯೇತ್' ಎಂದು ಶೂದ್ರನಿಗೂ ಪಂಚಯಜ್ಞಾಧಿಕಾರವನ್ನು ಹೇಳಿದೆ. ಆದ್ದರಿಂದ ಅವನಿಗಿಂತ ಉತ್ತಮವಾದ ಕರಣನಿಗೆ ಸಂಧ್ಯಾವಂದನೆಯಲ್ಲಿಯೂ ಅಗ್ನಿಕಾರ್ಯದಲ್ಲಿಯೂ ಅಧಿಕಾರವಿದೆಯೆಂಬುದು ಕೌಮುತಿಕ ನ್ಯಾಯದಿಂದ ಸಿದ್ಧವಾಗುತ್ತದೆ.

೩

ಕಚ್ಚಿನ್ಮಂತ್ರಯಸೇ ನೈಕಃ ಕಚ್ಚಿನ್ನ ಬಹುಭಿಃ ಸಹ

- ಪುಟ ೨೭೧

ರಾಜನು ತಾನೊಬ್ಬನೇ ಆಲೋಚಿಸಿ ಸ್ವತಂತ್ರನಾಗಿ ನಿರ್ಣಯವನ್ನು ತೆಗೆದುಕೊಳ್ಳಬಾರದು. ಸಾಧಕಬಾಧಕಗಳು ಅವನಿಗೆ ಸರಿಯಾಗಿ ಸ್ಫುರಿಸದೇ ಹೋಗಬಹುದು. ಆದ್ದರಿಂದ ಮಂತ್ರಿಗಳೊಡನೆ ಸಮಾಲೋಚಿಸಿ ಕರ್ತವ್ಯವನ್ನು ನಿರ್ಧರಿಸಬೇಕು. ಮಂತ್ರಾಲೋಚನೆ ಹೇಳತಕ್ಕವರು ಬಹುಮಂದಿಯಾದರೆ ಭಿನ್ನಾಭಿಪ್ರಾಯ ತಲೆದೋರಬಹುದು; ಐಕಮತ್ಯ ಒಡೆಯಬಹುದು; ರಹಸ್ಯದ ಮಂತ್ರಾಲೋಚನೆ ಬಹಿರಂಗವಾಗಬಹುದು. ಆದ್ದರಿಂದ, ಮಿತಸಂಖ್ಯೆಯುಳ್ಳ ಮಂತ್ರಿಗಳೊಡನೆ ಸಮಾಲೋಚಿಸಿ ನಿರ್ಣಯಕ್ಕೆ ಬರಬೇಕು ಎಂದು ರಾಜನೀತಿ.

೪

ಪುಟ ೨೭೫, ಶ್ಲೋಕ ೩೬

ಶತ್ರುಪಕ್ಷದ ಹದಿನೆಂಟು ತೀರ್ಥಗಳು : ಮಂತ್ರಿ, ಪುರೋಹಿತ, ಯುವರಾಜ, ಸೇನಾಪತಿ, ದೌವಾರಿಕ, ಅಂತಃಪುರದ ಅಧಿಕಾರಿ, ಸೆರೆಮನೆಯ ಅಧಿಕಾರಿ, ಕೋಶಾಧ್ಯಕ್ಷ, ರಾಜಾಜ್ಞೆಯನ್ನು ಪ್ರಕಟಿಸತಕ್ಕ 'ಕಾರ್ಯನಿಯೋಜಕ'ನೆಂಬ ಅಧಿಕಾರಿ. ಪ್ರಾಡ್ವಿವಾಕ (ನ್ಯಾಯಾಧೀಶ), ಧರ್ಮಾಧ್ಯಕ್ಷ (ದಾಯ ವಿಭಾಗಾದಿ ವ್ಯವಹಾರಗಳಲ್ಲಿ ಧರ್ಮಶಾಸ್ತ್ರದ ನಿರ್ಣಯವನ್ನು ಹೇಳತಕ್ಕವನು), ಸೇನಾಪತಿ, ಕರ್ಮಾಂತಿಕ (ಸೈನಿಕರನ್ನುಳಿದು ಇತರ ಅಧಿಕಾರಿಗಳಿಗೆ ಸಂಬಳವನ್ನು ಸಲ್ಲಿಸುವ ವೇತನಾಧಿಕಾರಿ)

ಸಭ್ಯ (ರಾಜಸಭೆಯ ವ್ಯವಹಾರಗಳನ್ನು ನೋಡಿಕೊಳ್ಳತಕ್ಕವನು – ದರ್ಬಾರ್ ಭಕ್ಷಿ), ನಗರಪಾಲ, ರಾಷ್ಟ್ರಾಂತಪಾಲ (ರಾಜ್ಯದ ಗಡಿಯನ್ನು ನೋಡಿಕೊಳ್ಳುವ ಅಧಿಕಾರಿ), ದುರ್ಗಪಾಲ ಮತ್ತು ದಂಡಪಾಲ (ರಾಜಾಜ್ಞೆಯಂತೆ ಅಪರಾಧಿಗಳಿಗೆ ದಂಡನೆಯನ್ನು ನಡೆಸತಕ್ಕವನು).

ಈ ಹದಿನೆಂಟು ಜನರಿಗೆ ನೀತಿಶಾಸ್ತ್ರದಲ್ಲಿ ತೀರ್ಥಗಳೆಂದು ಹೆಸರು. ಶತ್ರುಪಕ್ಷದಲ್ಲಿ ಈ ಹದಿನೆಂಟು ಅಧಿಕಾರಿಗಳನ್ನು ಗೂಢಚಾರರ ಮೂಲಕ ಪರೀಕ್ಷಿಸುತ್ತಿರಬೇಕು.

ಸ್ವಪಕ್ಷದಲ್ಲಿ ಮಂತ್ರಿ, ಪುರೋಹಿತ ಮತ್ತು ಯುವರಾಜರನ್ನು ಬಿಟ್ಟರೆ ಮೇಲ್ಕಂಡವರೇ ಹದಿನೈದು ತೀರ್ಥಗಳು. ಅವರನ್ನು ಗೂಢಚಾರರಿಂದ ಪರೀಕ್ಷಿಸುತ್ತಿರಬೇಕು. ಮಂತ್ರಿ ಮೊದಲಾದ ಮೂವರನ್ನು ರಾಜನು ಸ್ವಯಂ ಪರೀಕ್ಷಿಸುತ್ತಿರಬೇಕು.

೫

ಪುಟಗಳು ೨೮೧, ೨೮೨ – ಶ್ಲೋಕಗಳು ೬೮, ೬೯, ೭೦

೧. ದಶವರ್ಗ :

ಮೃಗಯಾಕ್ಷೋ ದಿವಾಸ್ವಪ್ನಃ ಪರಿವಾದಃ ಸ್ತ್ರಿಯೋ ಮದಃ

ತೌರ್ಯತ್ರಿಕಂ ವೃಥಾಟ್ಯಾ ಚ ಕಾಮಜೋ ದಶಕೋ ಗುಣಃ

– ಮನು ೭.೪೭

ಬೇಟೆ, ಜೂಜು, ಹಗಲು ನಿದ್ರೆ, ಪರರ ದೋಷವನ್ನಾಡಿಕೊಳ್ಳುವುದು, ಹೆಂಗಸರ ವ್ಯಾಮೋಹ, ಮದ್ಯಪಾನದ ಮದ, ನೃತ್ಯ, ಗೀತ, ವಾದ್ಯ, ನಿಷ್ಫಲವಾದ ಸಂಚಾರ – ಈ ಹತ್ತು ಕಾಮಜನ್ಯದೋಷಗಳು

ಅಥವಾ

ಲೋಭ, ಕ್ರೋಧ, ಆಲಸ್ಯ, ಅಸತ್ಯ, ಅಜಾಗರೂಕತೆ, ಹೇಡಿತನ, ಚಾಂಚಲ್ಯ, ಮೌಢ್ಯ, ಅನೀತಿ ಮತ್ತು ಪರಾವಮಾನ – ಈ ಹತ್ತು ರಾಜದೋಷಗಳು.

–ಕಾಮಂದಕ

೨. ಪಂಚವರ್ಗ

ಔದಕಂ ಪಾರ್ವತಂ ವಾರ್ಕ್ಷಮೈರಿಣಂ ಧಾನ್ವನಂ ತಥಾ

ಶಸ್ತಂ ಪ್ರಶಸ್ತಮತಿಭಿರ್ದುರ್ಗಂ ದುರ್ಗೋಪಚಿಂತಕೈಃ

ಜಲದುರ್ಗ, ಗಿರಿದುರ್ಗ, ವೃಕ್ಷದುರ್ಗ, ಬೆಂಗಾಡುದುರ್ಗ, ಮರುಭೂಮಿದುರ್ಗ ಎಂಬ ಪಂಚದುರ್ಗಗಳೇ ಪಂಚವರ್ಗಗಳೆಂದೂ, ಮೇಲ್ಕಂಡ ಶ್ಲೋಕವು ಮನುಸ್ಮೃತಿಯಲ್ಲಿದೆಯೆಂದೂ ವ್ಯಾಖ್ಯಾನಕಾರರು ಬರೆದಿದ್ದಾರೆ. ಆದರೆ ಈ ಶ್ಲೋಕವು ಮನುಸ್ಮೃತಿಯಲ್ಲಿ ದೊರೆಯಲಿಲ್ಲ. ಅಲ್ಲದೆ ಮನುಸ್ಮೃತಿಯಲ್ಲಿ ನರದುರ್ಗವನ್ನೂ ಸೇರಿಸಿ ಆರು ದುರ್ಗಗಳ ವರ್ಣನೆ ಇದೆ.

-ಮನು ೭.೭೦

ಕಾಮಂದಕನು ಹೇಳುವ ಪಂಚವಿಧವೈರಗಳನ್ನು ಪಂಚವರ್ಗವೆಂದು ತಿಳಿಯಬಹುದು.

ಸಾಪತ್ನಂ ವಸ್ತುಜಂ ಸ್ತ್ರೀಜಂ ವಾಗ್ಜಾತಮಪರಾಧಜಮ್

ವೈರಪ್ರಭೇದನಿಪುಣೈರ್ವೈರಂ ಪಂಚವಿಧಂ ಸ್ಮೃತಿಮ್

ಸವತಿತಾಯಿಯಿಂದಾದದ್ದು, ದ್ರವ್ಯನಿಮಿತ್ತಕ, ಸ್ತ್ರೀಹೇತುಕ, ವಾಙ್ಮೂಲಕ, ಅಪರಾಧಜನ್ಯ ಎಂದು ಐದು ಬಗೆಯ ವೈರಗಳು.

೩. ಚತುರ್ವರ್ಗ :

ಕಾಮಂದಕನು ಮೂರು ಅಭಿಪ್ರಾಯಗಳನ್ನು ತಿಳಿಸಿ ಮೂರೂ ಗ್ರಾಹ್ಯವೆನ್ನುತ್ತಾನೆ:

೧. ಸಾಮ, ದಾನ, ಭೇದ, ದಂಡ ಎಂಬ ನಾಲ್ಕು ಉಪಾಯಗಳು.

೨. ಪುತ್ರ, ಸೋದರಮಾವನೇ ಮೊದಲಾದ ಕುಲಬಂಧು, ವಂಶ ಪರಂಪರೆಯಿಂದ ಬಂದವನು, ಆಪತ್ತಿನಲ್ಲಿ ರಕ್ಷಿಸಲ್ಪಟ್ಟವನು ಎಂಬ ನಾಲ್ಕು ಬಗೆಯ ಮಿತ್ರರು.

೩. ನ್ಯಾಯದಿಂದ ಧನಸಂಪಾದನೆ, ಧನದ ರಕ್ಷಣೆ, ಧನದ ಅಭಿವೃದ್ಧಿ ಸತ್ಪಾತ್ರದಲ್ಲಿ ವಿನಿಯೋಗ ಎಂಬ ನಾಲ್ಕು ಕರ್ತವ್ಯಗಳು.

೪. ಸಪ್ತವರ್ಗ:

ಸ್ವಾಮ್ಯಮಾತ್ಯಶ್ಚ ರಾಷ್ಟ್ರಂ ಚ ದುರ್ಗಕೋಶೌ ಬಲಂ ತಥಾ
ಪರಸ್ಪರೋಪಕಾರೀದಂ ರಾಜ್ಯಂ ಸಪ್ತಾಂಗಮುಚ್ಯತೇ

-ಕಾಮಂದಕ

ರಾಜ, ಮಂತ್ರಿ, ರಾಷ್ಟ್ರ, ದುರ್ಗ, ಭಂಡಾರ, ಸೈನ್ಯ, ಮಿತ್ರ - ಈ ಸಪ್ತಾಂಗಗಳು ಪರಸ್ಪರವಾಗಿ ಉಪಕಾರಿಗಳು. ಈ ಸಪ್ತಾಂಗವೇ ರಾಜ್ಯ.

೫. ಅಷ್ಟವರ್ಗ:

ಪೈಶುನ್ಯಂ ಸಾಹಸಂ ದ್ರೋಹ ಈರ್ಷ್ಯಾಸೂಯಾರ್ಥದೂಷಣಮ್
ವಾಗ್ದಂಡಯೋಶ್ಚ ಪಾರುಷ್ಯಂ ಕ್ರೋಧಜೋಪಿ ಗಣೋಷ್ಟಕ:

-ಮನು ೭-೪೮

ನಿಶ್ಚಯವಾಗಿ ಗೊತ್ತಿಲ್ಲದಿದ್ದರೂ ಇತರರಲ್ಲಿ ದೋಷಾರೋಪಣೆ, ದುಡುಕಿನಿಂದ ಮಾಡುವ ಅಧರ್ಮಕೃತ್ಯ, ಅಪಕಾರ, ಹೊಟ್ಟೆಕಿಚ್ಚು, ಅನ್ಯರ ಗುಣವನ್ನೇ ದೋಷವಾಗಿ ಪರಿಗಣಿಸುವುದು. ಅನ್ಯರ ಸ್ವತ್ತನ್ನು ಕಿತ್ತುಕೊಳ್ಳುತ್ತ ತಾನು ಕೊಡಬೇಕಾದ್ದನ್ನು ಕೊಡದಿರುವುದು, ಕಠೋರವಾಕ್ಯ, ಉಗ್ರದಂಡನೆ - ಇವು ಕ್ರೋಧದಿಂದಾಗುವ ಎಂಟು ದೋಷಗಳು.

ಅಥವಾ

ಕೃಷಿವಾಣಿಜ್ಯದುರ್ಗಾಣಿ ಸೇತು: ಕುಂಜರಬಂಧನಮ್
ಖನ್ಯಾಕರ: ಕರಾದಾನಂ ಶೂನ್ಯಾನಾಂ ಚ ನಿವೇಶನಮ್
ಅಷ್ಟವರ್ಗಮಿಮಂ ಸಾಧು ಸ್ವಸ್ಥವೃತ್ತೋ ನ ಲೋಪಯೇತ್

-ಕಾಮಂದಕ

ವ್ಯವಸಾಯ, ವಾಣಿಜ್ಯ, ದುರ್ಗರಚನೆ, ಅಣೆಕಟ್ಟು ಆನೆಗಳ ಸಂಗ್ರಹ, ಗಣಿಗಳ ಉದ್ಯಮ, ಕಪ್ಪ-ಕಂದಾಯಗಳ ವಸೂಲಿ, ಹಾಳುಜಾಗಗಳನ್ನು ವಾಸಯೋಗ್ಯವಾಗಿ ಮಾಡುವುದು-ಈ ಅಷ್ಟವರ್ಗಗಳಿಗೆ ಲೋಪವಾಗದಂತೆ ರಾಜನು ನಡೆದುಕೊಳ್ಳಬೇಕು.

೬. ತ್ರಿವರ್ಗಃ

೧. ಧರ್ಮ, ಅರ್ಥ, ಕಾಮ.

೨. ಪ್ರಭುಶಕ್ತಿ, ಮಂತ್ರಶಕ್ತಿ, ಉತ್ಸಾಹಶಕ್ತಿ.

೩. ಶತ್ರುಗಳ ಕ್ಷೀಣಸ್ಥಿತಿ, ಸಮಸ್ಥಿತಿ, ಅಭಿವೃದ್ಧಿ

ಅಸಾಧ್ಯಕಾರ್ಯಗಳಲ್ಲಿ ಪ್ರಯತ್ನ, ಸಾಧ್ಯಕಾರ್ಯಗಳಲ್ಲಿ ಅಪ್ರಯತ್ನ ಸಾಧ್ಯಕಾರ್ಯಗಳಲ್ಲಿಯೂ ಅಕಾಲದಲ್ಲಿ ಪ್ರಯತ್ನ

೭. ಮೂರು ವಿದ್ಯೆಗಳು :

ತ್ರಯೀ ವಾರ್ತಾ ದಂಡನೀತಿರಿತಿ ವಿದ್ಯಾ ಹಿ ಮಾನವಾಃ

-ಕಾಮಂದಕ

ತ್ರಯೀ=ವೇದತ್ರಯ, ವಾರ್ತಾ=ಕೃಷಿಗೋರಕ್ಷಣೆ ವಾಣಿಜ್ಯಗಳು, ದಂಡನೀತಿ=ರಾಜನೀತಿಶಾಸ್ತ್ರ

೮. ಷಾಡ್ಗುಣ್ಯ=ಆರು ಗುಣಗಳು :

ಸಂಧಿ, ವಿಗ್ರಹ, ಯಾನ, ಆಸನ, ದ್ವೈಧೀಭಾವ, ಸಮಾಶ್ರಯ.

ಸಂಧಿ=ಶತ್ರುವಿನೊಡನೆ ಒಡಂಬಡಿಕೆ.

ವಿಗ್ರಹ=ಯುದ್ಧ

ಯಾನ=ದಂಡಯಾತ್ರೆ.

ಆಸನ=ತನ್ನ ಬಲವನ್ನು ಹೆಚ್ಚಿಸಿಕೊಳ್ಳುತ್ತ ಯುದ್ಧಕ್ಕೆ ತಕ್ಕ ಸಮಯವನ್ನು ಪ್ರತೀಕ್ಷಿಸುತ್ತಿರುವುದು.

ದ್ವೈಧೀಭಾವ = ಕಾದಾಡುವ ಎರಡು ರಾಷ್ಟ್ರಗಳಲ್ಲಿ ಯಾರ ಪಕ್ಷವನ್ನೂ ವಹಿಸದೆ ತಟಸ್ಥನಾಗಿರುವುದು.

ಸಮಾಶ್ರಯ = ಶತ್ರುವಿನೊಡನೆ ಯುದ್ಧ ಒದಗಿದರೆ ಬಲಶಾಲಿಯಾದ ಇನ್ನೊಬ್ಬ ರಾಜನನ್ನಾಶ್ರಯಿಸುವುದು; ಅಥವಾ ಬಲಶಾಲಿಯಾದ ಶತ್ರುವಿಗೇ ಶರಣಾಗತನಾಗುವುದು.

೯. ದೈವವ್ಯಸನ :

ಅಗ್ನಿಭಯ, ಅತಿವೃಷ್ಟಿ ಅನಾವೃಷ್ಟಿ ರೋಗ, ಮರಣ – ಈ ಐದು ದೈವವ್ಯಸನಗಳು.

೧೦. ಮಾನುಷವ್ಯಸವ :

ಅಧಿಕಾರಿಗಳಿಂದ, ಕಳ್ಳರಿಂದ, ಶತ್ರುಗಳಿಂದ, ರಾಜನಿಗೆ ಪ್ರಿಯರಾದ ಪುಢಾರಿಗಳಿಂದ, ರಾಜನ ಲೋಭದಿಂದ – ಹೀಗೆ ಆರು ಬಗೆಯಲ್ಲಿ ಪ್ರಜೆಗಳಿಗೆ ವ್ಯಸನಗಳು ಪಾತ್ರವಾಗುತ್ತವೆ.

೧೧. ಕೃತ್ಯ :

ಭೇದನೀತಿ; ಶತ್ರುಗಳಿಂದ ಅಲಬ್ಧವೇತನವಾದ ಲುಬ್ಧ ಅವಮಾನಗೊಂಡ ಮಾನಿ, ಕೋಪಗೊಳಿಸಲ್ಪಟ್ಟ ಕೋಪಿ, ಹೆದರಿಸಲ್ಪಟ್ಟ ಭೀರು – ಈ ನಾಲ್ವರನ್ನು ಕಂಡುಹಿಡಿದು ಅವರ ಇಷ್ಟಾರ್ಥಗಳನ್ನು ನೆರವೇರಿಸಿ ತನ್ನ ವಶಪಡಿಸಿಕೊಳ್ಳಬೇಕು.

೧೨. ವಿಂಶತಿವರ್ಗ:

ಬಾಲ, ವೃದ್ಧ, ದೀರ್ಘರೋಗಿ, ಬಂಧುಗಳಿಂದ ಬಹಿಷ್ಕೃತ, ಭೀರು, ಭೀರು ಪರಿವಾರವುಳ್ಳವನು, ಲೋಭಿ, ಲೋಭಿಪರಿವಾರವುಳ್ಳವನು, ವೈರಾಗ್ಯ ಸ್ವಭಾವದವನು, ಅತ್ಯಂತ ವಿಷಯಸುಖಾಭಿಲಾಷಿ, ಅಸ್ಥಿರಬುದ್ಧಿ ದೇವಬ್ರಾಹ್ಮಣ ನಿಂದಕ, ದುರದೃಷ್ಟಶಾಲಿ, ದೈವವನ್ನೇ ನಂಬಿಕೊಂಡು ಪೌರುಷವನ್ನು ಕೈಬಿಟ್ಟವನು, ದುರ್ಭಿಕ್ಷಪೀಡಿತ, ಸೈನ್ಯದಲ್ಲಿ ಒಗ್ಗಟ್ಟಿಲ್ಲದವನು, ದೇಶಾಂತರದಲ್ಲಿರುವವನು, ಅನೇಕ ಶತ್ರುಗಳುಳ್ಳವನು,

ಕಷ್ಟಕಾಲಗಳಿಂದ ನೊಂದವನು, ಸತ್ಯಧರ್ಮಗಳನ್ನು ಬಿಟ್ಟವನು – ಈ ಇಪ್ಪತ್ತು ಬಗೆಯ ವೈರಿಗಳೊಡನೆ ಸಂಧಿಯನ್ನು ಮಾಡಿಕೊಳ್ಳಬಾರದು. ಇವರನ್ನು ಸಮಯಾನುಸಾರವಾಗಿ ಅಡಗಿಸಬೇಕು.

ಅಥವಾ

ಕೆಳಗೆ ಕಂಡ ಇಪ್ಪತ್ತು ರಾಜದೋಷಗಳು. ವೈರಿಯಲ್ಲಿ ಈ ದೋಷಗಳಿದ್ದರೆ ಅವನೊಡನೆ ಯುದ್ಧಮಾಡಬೇಕು:

ಪರರಾಜ್ಯ ಪರಸ್ತ್ರೀ ಪರಾಧಿಕಾರಸ್ಥಾನ ಪರದೇಶ ಪರಧನ ಪರಬಂಧುಗಳನ್ನು ಅಪಹರಿಸುವುದು, ಮದ, ಮಾನ, ವಿಷಯಲೋಲುಪತೆ, ಜ್ಞಾನವಿರೋಧ, ಅರ್ಥವಿರೋಧ, ಶಕ್ತಿವಿರೋಧ, ಧರ್ಮವಿರೋಧ, ದೈವವಿರೋಧ, ಮಿತ್ರಾವಮಾನ, ಮಿತ್ರಧನಾಪಹಾರ, ಬಂಧುದ್ರೋಹ, ಭೂತದಯಾರಾಹಿತ್ಯ, ತನ್ನ ಅಧಿಕಾರಿಗಳನ್ನೇ ದೂಷಿಸುವುದು ಮತ್ತು ದುಷ್ಕೃತ್ಯದಲ್ಲಿ ಹಠ.

೧೩. ಪಂಚಪ್ರಕೃತಿಗಳು :

ಮಂತ್ರಿ, ರಾಷ್ಟ್ರ, ದುರ್ಗ, ಕೋಶ ಮತ್ತು ಸೇನೆ.

೧೪. ದ್ವಾದಶ ಮಂಡಲ :

ಹನ್ನೆರಡು ಮಂದಿ ರಾಜರ ಮಂಡಲ. ಶತ್ರುಜಯಕ್ಕಾಗಿ ಹೋಗುವ ವಿಜಿಗೀಷುವಿನ ಮುಂದೆ ಮತ್ತು ಹಿಂದೆ ಸಹಾಯಾರ್ಥವಾಗಿ ಸೇನಾಸಮೇತರಾದ ರಾಜರಿರಬೇಕು. ಅವರು ಯಾರೆಂದರೆ :

ಅರಿರ್ಮಿತ್ರಮರೇರ್ಮಿತ್ರಂ ಮಿತ್ರಮಿತ್ರಮತಃ ಪರಮ್ ।
ತಥಾರಿಮಿತ್ರಮಿತ್ರಂ ಚ ವಿಜಿಗೀಷೋಃ ಪುರಃಸರಾಃ ॥

ಪಾರ್ಷ್ಣಿಗ್ರಾಹಸ್ತತಃ ಪಶ್ಚಾದಾಕ್ರಂದಸ್ತದನಂತರಮ್ ।
ಆಸಾರಾವನಯೋಶ್ಚೈವ ವಿಜಿಗೀಷೋಸ್ತು ಪೃಷ್ಠತಃ ॥

ಅರೇಶ್ಚ ವಿಜಿಗೀಷೋಶ್ಚ ಮಧ್ಯಮೋ ಭೂಮ್ಯನಂತರಃ ।

ಅನುಗ್ರಹೇ ಸಂಹತಯೋರ್ವ್ಯಸ್ತಯೋರ್ನಿಗ್ರಹೇ ಪ್ರಭುಃ ||

ಮಂಡಲಾದ್ಬಹಿರೇತೇಷಾಮುದಾಸೀನೋ ಬಲಾಧಿಕಃ |
ಅನುಗ್ರಹೇ ಸಂಹತಾನಾಂ ವ್ಯಸ್ತಾನಾಂ ಚ ವಧೇ ಪ್ರಭುಃ ||

ಅರಿ, ಮಿತ್ರ, ಅರಿಯ ಮಿತ್ರ, ಮಿತ್ರನ ಮಿತ್ರ, ಅರಿಯ ಮಿತ್ರನ ಮಿತ್ರ – ಈ ಐವರು ಕ್ರಮವಾಗಿ ವಿಜಿಗೀಷುವಿನ ಮುಂದಿರುತ್ತಾರೆ.

ಪಾರ್ಷ್ಣಿಗ್ರಾಹ, ಆಕ್ರಂದ, ಪಾರ್ಷ್ಣಿಗ್ರಾಹಾಸಾರ, ಆಕ್ರಂದಾಸಾರ – ಈ ನಾಲ್ವರು ಕ್ರಮವಾಗಿ ವಿಜಿಗೀಷುವಿನ ಹಿಂದಿರುತ್ತಾರೆ.

ಇವರ ಹಿಂದೆ ಮಧ್ಯಮನಿರುತ್ತಾನೆ. ಅವನು ವಿಜಿಗೀಷು ಮತ್ತು ಅರಿಗಳನ್ನು ಅನುಗ್ರಹಿಸಲೂ ನಿಗ್ರಹಿಸಲೂ ಸಮರ್ಥ.

ಇವರೆಲ್ಲರ ಹಿಂದೆ ಉದಾಸೀನನು ಇರುತ್ತಾನೆ. ಇವನು ವಿಜಿಗೀಷು ಸಹಿತರಾದ ಮೇಲ್ಕಂಡ ಹನ್ನೊಂದು ಮಂದಿಯನ್ನೂ ಅನುಗ್ರಹಿಸಬಲ್ಲ. ಸಮಯ ಬಂದರೆ ನಿಗ್ರಹಿಸಬಹಲ್ಲ ಬಲಶಾಲಿಯಾಗಿರುತ್ತಾನೆ.

ಮೇಲ್ಕಂಡ ರಾಜಮಂಡಲದಲ್ಲಿ ಅರಿ ಮುಂತಾದವು ರಾಜ್ಯಶಾಸ್ತ್ರದ ಪಾರಿಭಾಷಿಕಶಬ್ದಗಳು. ಅರಿಯೆಂದರೆ ನಿಜವಾದ ಶತ್ರುವಲ್ಲ. ಶತ್ರುವಿನೊಡನೆ ಕೂಡಿ ವಿಜಿಗೀಷುವು ದಂಡಯಾತ್ರೆಗೆ ಹೊರಡುವುದಿಲ್ಲವಷ್ಟೆ? ಇವುಗಳ ಅರ್ಥ ಹೀಗೆ :

೧. ಅರಿ=ವಿಜಿಗೀಷುವಿನ ರಾಜ್ಯದ ಪಕ್ಕದಲ್ಲಿರುವ ರಾಜ್ಯದ ಒಡೆಯ (ಇವನು ವಿಜಿಗೀಷುವಿಗೆ ಆಪ್ತನಾದಾಗ ಅವನಿಗೆ ಸಹಾಯಕನಾಗಿ ಬರುತ್ತಾನೆ).

೨. ಮಿತ್ರ=ಮೇಲ್ಕಂಡ 'ಅರಿ'ಯ ರಾಜ್ಯದ ಆಚೆಗಿರುವ ರಾಜ್ಯದ ಒಡೆಯ.

೩. ಅರಿಯ ಮಿತ್ರ=ಮೇಲ್ಕಂಡ 'ಅರಿ'ಯ ಮಿತ್ರ.

೪. ಮಿತ್ರನ ಮಿತ್ರ=ಮೇಲ್ಕಂಡ ಮಿತ್ರನ ಮಿತ್ರ.

೫. ಅರಿಯ ಮಿತ್ರನ ಮಿತ್ರ=ಮೇಲ್ಕಂಡ ಮೂರನೆಯ ಅರಿಮಿತ್ರನ ಮಿತ್ರ.

೬. ಪಾರ್ಷ್ಣಿಗ್ರಾಹ=ವಿಜಿಗೀಷುವಿನ ಹಿಂದೆ ಬರುವ ಮೇಲ್ಕಂಡ 'ಅರಿ'.

೭. ಆಕ್ರಂದ=ಪಾರ್ಷ್ಣಿಗ್ರಾಹನ ಹಿಂದಿರುವ ಮೇಲ್ಕಂಡ 'ಮಿತ್ರ'.

೮. ಪಾರ್ಷ್ಣಿಗ್ರಾಹಾಸಾರ=ಪಾರ್ಷ್ಣಿಗ್ರಾಹನ 'ಮಿತ್ರ'.

೯. ಆಕ್ರಂದಾಸಾರ=ಆಕ್ರಂದನ 'ಮಿತ್ರ'.

೧೦. ಮಧ್ಯಮ=ವಿಜಿಗೀಷುವಿನ ನೆರೆಯ ರಾಜ್ಯದ ಒಡೆಯನಾಗಿ ವಿಜಿಗೀಷು ಮತ್ತು 'ಅರಿ'ಗಳನ್ನು ನಿಗ್ರಹಿಸಬಲ್ಲ ವೀರ.

೧೧. ಉದಾಸೀನ=ವಿಜಿಗೀಷುವಿನ ರಾಜ್ಯದ ದೂರದೇಶಕ್ಕೆ ಒಡೆಯನಾಗಿ ಮೇಲ್ಕಂಡವರೆಲ್ಲರನ್ನೂ ಮತ್ತು ವಿಜಿಗೀಷುವನ್ನೂ ನಿಗ್ರಹಿಸಬಲ್ಲ ಬಲಶಾಲಿ.

ಹನ್ನೆರಡನೆಯವನೇ ವಿಜಿಗೀಷು. ಇವನು ಜಯಾಪೇಕ್ಷೆಯಿಂದ ಈ ಹನ್ನೊಂದು ಮಂದಿ ರಾಜರ ಸಹಾಯವನ್ನೂ ಪಡೆದು ದಂಡಯಾತ್ರೆ ಹೊರಡುತ್ತಾನೆ. ಇವರೆಲ್ಲರ ಸಮೂಹವೇ ದ್ವಾದಶರಾಜಮಂಡಲ.

೧೫. ಯಾತ್ರಾವಿಧಾನ - ದಂಡಯಾತ್ರಾವಿಧಿ; ಇದು ಐದು ವಿಧ :

ವಿಗೃಹ್ಯ ಸಂಧಾಯ ತಥಾ ಸಂಭೂಯಾಥ ಪ್ರಸಂಗತಃ
ಉಪೇಕ್ಷ್ಯ ಚೇತಿ ನಿಪುಣೈರ್ಯಾನಂ ಪಂಚವಿಧಂ ಸ್ಮೃತಮ್

೧. ವಿಗೃಹ್ಯಯಾನ : ಪಾರ್ಷ್ಣಿಗ್ರಾಹಾದಿಗಳೊಡನೆ ಒಪ್ಪಂದಮಾಡಿಕೊಳ್ಳದೆ ಅವರೊಡನೆಯೂ ವಿರೋಧವನ್ನು ಬೆಳೆಸಿ ಶತ್ರುವಿನ ಮೇಲೆ ಒಬ್ಬನೇ ದಂಡಯಾತ್ರೆ ಮಾಡುವುದು.

೨. ಸಂಧಾಯಯಾನ : ಪಾರ್ಷ್ಣಿಗ್ರಾಹಾದಿಗಳೊಡನೆ ಒಪ್ಪಂದ ಮಾಡಿಕೊಂಡು ಶತ್ರುವಿನ ಮೇಲೆ ಒಬ್ಬನೇ ದಂಡಯಾತ್ರೆ ಮಾಡುವುದು.

೩. ಸಂಭೂಯಯಾನ: ಪಾರ್ಷ್ಣಿಗ್ರಾಹಾದಿಗಳ ನೆರವಿನಿಂದ ಮಾಡುವ ದಂಡಯಾತ್ರೆ.

೪. ಪ್ರಸಂಗಯಾನ : ಒಬ್ಬ ಶತ್ರುವಿನ ಮೇಲೆ ದಂಡಯಾತ್ರೆ ಹೊರಟು ಪ್ರಸಂಗವಶದಿಂದ ಇನ್ನೊಬ್ಬ ಶತ್ರುವಿನ ಮೇಲೆ ಬೀಳುವುದು.

೫. ಉಪೇಕ್ಷ್ಯಯಾನ: ಶತ್ರುವನ್ನು ಉಪೇಕ್ಷಿಸಿ ಅವನ ಮಿತ್ರನ ಮೇಲೆ ಧಾಳಿಯಿಡುವುದು.

೧೬. ದಂಡವಿಧಾನ :

ಸೈನ್ಯದ ವ್ಯೂಹರಚನೆ; ಪದ್ಮವ್ಯೂಹ, ಮಕರವ್ಯೂಹ ಮುಂತಾದವು.

೧೭. ಎರಡೆರಡು ಗುಣಗಳಿಗೆ ಕಾರಣಗಳಾದ ಸಂಧಿವಿಗ್ರಹಗಳು :

ಹಿಂದೆ ಸಂಧಿ, ವಿಗ್ರಹ, ಯಾವ, ಆಸನ, ದ್ವೈಧೀಕರಣ, ಸಮಾಶ್ರಯ ಎಂದು ಷಡ್ಗುಣಗಳನ್ನು ನಿರೂಪಿಸಲಾಗಿದೆ. ಈ ಆರು ಗುಣಗಳನ್ನು ಮುಖ್ಯವಾಗಿ ಸಂಧಿ, ವಿಗ್ರಹ ಎಂದು ಎರಡು ವಿಭಾಗಮಾಡಬಹುದು. ದ್ವೈಧೀಭಾವ ಸಮಾಶ್ರಯಗಳು ಸಂಧಿಯಲ್ಲಿಯೂ ಯಾವ ಆಸನಗಳು ವಿಗ್ರಹದಲ್ಲಿಯೂ ಅಂತರ್ಗತವಾಗುತ್ತವೆ.

ಯಾನಾಸನೇ ವಿಗ್ರಹಸ್ಯ ರೂಪಂ ಸದ್ಭಿರಿತಿ ಸ್ಮೃತಿಮ್
ಸಂಧೇಶ್ಚ ಸಂಧಿಮಾರ್ಗಜ್ಞೈರ್ದ್ವೈಧೀಭಾವಸಮಾಶ್ರಯೌ

-ಕಾಮಂದಕ

೬

ಮಾತಾಮಹೇ ಸಮಾಶ್ರೌಷೀದ್ರಾಜ್ಯಶುಲ್ಕಮನುತ್ತಮಮ್

-ಪುಟ ೩೨೩

ದಶರಥನು ಕೈಕೇಯಿಯನ್ನು ಮದುವೆಯಾಗುವಾಗ ಅವಳಲ್ಲಿ ಜನಿಸುವ ಮಗನಿಗೆ ರಾಜ್ಯವನ್ನು ಕೊಡುವೆನೆಂದು ಕೈಕೇಯಿಯ ತಂದೆಯಾದ ಅಶ್ವಪತಿ ರಾಜನಿಗೆ

ಮಾತುಕೊಟ್ಟಿದ್ದನಂತೆ. ಈ ವೃತ್ತಾಂತವು ಪ್ರಥಮತಃ ಶ್ರೀರಾಮನ ಮುಖದಿಂದ ಗೊತ್ತಾಗುತ್ತದೆ. ಹಿಂದೆ ದಶರಥನು ಯಾವ ಸಂದರ್ಭದಲ್ಲಿಯೂ ಇದನ್ನು ತಿಳಿಸಿಲ್ಲ, ಕೈಕೇಯಿಯೂ ಪ್ರಸ್ತಾಪಿಸಿಲ್ಲ, ಮಂಥರೆಯೂ ಹೇಳಿಲ್ಲ.

ಕೌಸಲ್ಯಾ ಸುಮಿತ್ರೆಯರಲ್ಲಿ ದಶರಥನಿಗೆ ಸಂತತಿಯಾಗದುದರಿಂದ ಕಡೆಯಲ್ಲಿ ಕೈಕೇಯಿಯನ್ನು ಮದುವೆಯಾಗಿರಬೇಕು. ಆ ಸನ್ನಿವೇಶದಲ್ಲಿ ಅವನು ಅಶ್ವಪತಿಗೆ ಹಾಗೆ ಮಾತುಕೊಟ್ಟಿರಬಹುದು. ಅದು ಬಹಳ ಹಳೆಯ ವೃತ್ತಾಂತ. ಅಶ್ವಪತಿಯಾಗಲಿ ಭರತನ ಸೋದರಮಾವನಾದ ಯುಧಾಜಿತನಾಗಲಿ ಅದಕ್ಕೆ ಮಹತ್ತ್ವವನ್ನು ಕೊಟ್ಟಂತೆ ಕಾಣುವುದಿಲ್ಲ. ಶ್ರೀರಾಮನ ಧೀರೋದಾತ್ತಗುಣಗಳಿಗೆ ಅವರೆಲ್ಲರೂ ಮಾರುಹೋಗಿದ್ದರು. ವಯೋಜ್ಯೇಷ್ಠನೂ ಗುಣಶ್ರೇಷ್ಠನೂ ಆದ ಶ್ರೀರಾಮನಿಗೆ ರಾಜ್ಯವು ಸಲ್ಲುವುದು ಯೋಗ್ಯವೆಂದು ಅವರು ಭಾವಿಸಿರಬೇಕು. ಅಲ್ಲದೆ ಅಶ್ವಪತಿಯು ದಶರಥನಿಂದ ಆ ರೀತಿಯಲ್ಲಿ ಕೈಕೇಯೀಪುತ್ರನಿಗೇ ರಾಜ್ಯವನ್ನು ಕೊಡಬೇಕೆಂದು ಮಾತನ್ನು ತೆಗೆದುಕೊಂಡು ಅದನ್ನು ಗಟ್ಟಿಯಾಗಿ ಹಿಡಿದಿದ್ದನೆಂದು ಹೇಳಲೂ ಶಕ್ಯವಿಲ್ಲ. ದಶರಥನು ಪ್ರರೋಚನಾರ್ಥವಾಗಿ ತಾನೇ ಆ ಮಾತನ್ನು ಅಶ್ವಪತಿಗೆ ಹೇಳಿರಬೇಕು. ಆದ್ದರಿಂದಲೇ ಅಶ್ವಪತಿಯಾಗಲಿ ಯುಧಾಜಿತನಾಗಲಿ ಅದನ್ನು ಪ್ರಸ್ತಾಪಿಸಿಲ್ಲ. ಕೈಕೇಯಿಗೆ ಅದು ತಿಳಿದೇ ಇರಬೇಕು. ಆದರೂ ಅವಳು ಅದರ ಸುದ್ದಿಯನ್ನೆತ್ತದೆ ತನಗೆ ಕೊಟ್ಟ ವರಗಳನ್ನೇ ಪಟ್ಟಾಗಿ ಹಿಡಿದಳು. ಮಂಥರೆಯಾದರೂ ಆ ಸಂಗತಿಯನ್ನು ಎತ್ತಬಹುದಾಗಿತ್ತಲ್ಲ! ಅವಳಿಗೂ ಅದು ದುರ್ಬಲನಾದ ವಿಚಾರವೆಂದು ತೋರಿರಬೇಕು. ಅಲ್ಲದೆ ದಶರಥನು ಹಾಗೆ ಮಾತುಕೊಟ್ಟದ್ದು ಅಶ್ವಪತಿಗೆ. ಅದನ್ನು ಅಶ್ವಪತಿಯು ಪ್ರಸ್ತಾವಿಸಬಹುದಲ್ಲದೆ, ಕೈಕೇಯಿಯಲ್ಲ. ಕೈಕೇಯಿಯು ಆ ಪ್ರತಿಜ್ಞೆಯನ್ನು ನೆನಪುಮಾಡಿದರೂ ದಶರಥನು ಅದನ್ನು ಉಪೇಕ್ಷಿಸಬಹುದು. ಅದನ್ನು ಕೇಳಬೇಕಾದವನು ಅಶ್ವಪತಿಯೇ ವಿನಾ ನೀನಲ್ಲವೆಂದು ದಶರಥನು ಕೈಕೇಯಿಗೆ ಹೇಳಬಹುದು. ಅಂಥ ಸಂದರ್ಭದಲ್ಲಿ ಅಶ್ವಪತಿಗೆ ಈ ಸಂಗತಿಯನ್ನು ತಿಳಿಸಬೇಕಾದೀತು. ಗುಣಶಾಲಿಯೂ ಗುಣಗ್ರಾಹಿಯೂ ಆದ ಆತನು ಶ್ರೀರಾಮನ ಪಟ್ಟಾಭಿಷೇಕಕ್ಕೆ ಅಡ್ಡಿಯನ್ನು ತರಲಾರನೆಂದು ಕೈಕೇಯಿ ಭಾವಿಸಿದ್ದಾಳೆ. ಅಂಥ

ಸಂದರ್ಭದಲ್ಲಿ ಈ ಪಟ್ಟಾಭಿಷೇಕದ ಗೊಂದಲ ಅಶ್ವಪತಿಯ ಮನೆಯಲ್ಲಿದ್ದ ಭರತನಿಗೆ ತಿಳಿಯದೆ ಇರಲು ಸಾಧ್ಯವೆ? ಭರತನು ಇಂಥ ಕೃತ್ಯಕ್ಕೆ ಒಪ್ಪಿಗೆಯನ್ನು ಕೊಟ್ಟಾನೆ? ಇವೆಲ್ಲವೂ ಚಾಣಾಕ್ಷೆಯಾದ ಮಂಥರೆಯ ಕುಟಿಲಬುದ್ಧಿಗೆ ಹೊಳೆಯದೆ ಇಲ್ಲ. ರಾಮನನ್ನು ಹೇಗಾದರೂ ಕಾಡಿಗೆ ಮೊದಲು ಅಟ್ಟಿಬಿಟ್ಟರೆ ಕಡೆಗೆ ನಿರ್ವಾಹವಿಲ್ಲದೆ ಭರತನು ರಾಜ್ಯವನ್ನು ಸ್ವೀಕರಿಸಿಯಾನು ಎಂದು ಅವಳ ಕಲ್ಪನೆ. ಕೈಕೇಯಿಯೂ ಹಾಗೆಯೇ ತಿಳಿದಿರಲು ಸಾಕು.

ಅಶ್ವಪತಿಗೆ ಕೊಟ್ಟ ಮಾತು ದಶರಥನ ಸ್ಮರಣೆಯಲ್ಲಿರಲಿಲ್ಲವೆ ? ಅವನು ತನ್ನ ಮಾತನ್ನುಲ್ಲಂಘಿಸಿ ಶ್ರೀರಾಮನಿಗೆ ಪಟ್ಟವನ್ನು ಕಟ್ಟಲು ಏಕೆ ಮುಂದುವರಿದ ?

ಎಲ್ಲವೂ ದಶರಥನ ಸ್ಮರಣೆಯಲ್ಲಿದ್ದಿರಬೇಕು. ಆದ್ದರಿಂದಲೇ ಅವನು ಶ್ರೀರಾಮನಿಗೆ ಪಟ್ಟಾಭಿಷೇಕ ಮಾಡಲು ತ್ವರೆಯಿಂದ ನಿರ್ಣಯಿಸಿದ್ದಾನೆ. ಭರತನ ವಿಷಯದಲ್ಲಿ ಅವನಿಗೆ ಸ್ವಲ್ಪ ಶಂಕೆಯಿದ್ದಿರಬೇಕು. ತನ್ನ ಮಾತಾಮಹನಿಗೆ ಮಾತುಕೊಟ್ಟಂತೆ ರಾಜ್ಯವು ತನಗೆ ಸಲ್ಲಬೇಕೆಂದು ಭರತನು ಪ್ರಸ್ತಾವಿಸಿದರೆ ಹೇಗೆ ? ಈ ಶಂಕೆ ದಶರಥನ ಮನಸ್ಸಿನಲ್ಲಿತ್ತೆಂದು ಅವನ ಮಾತುಗಳಿಂದ ಊಹಿಸಬಹುದಾಗಿದೆ. (ಅಯೋ. ಸರ್ಗ ೪ ಶ್ಲೋಕಗಳು–೨೪, ೨೫, ೨೬, ೨೭) ಹಾಗಿಲ್ಲದಿದ್ದರೆ ಮೇಲ್ಕಂಡ ಶ್ಲೋಕಗಳಿಗೆ ಉಪಪತ್ತಿಸಂಗತಿಗಳು ಸರಿಯಾಗಿ ತೋರುವುದಿಲ್ಲ.

ದಶರಥನು ಅಶ್ವಪತಿಗೆ ಹೇಳಿದ ಮಾತು ಶಪಥವಲ್ಲ; ಪ್ರತಿಜ್ಞೆಯಲ್ಲ. ಲೋಕಾಭಿರಾಮವಾಗಿ ಪ್ರರೋಚನೆಗೋಸ್ಕರ ಹೇಳಿದ ಮಾತು. ಆದ್ದರಿಂದಲೇ ಕೈಕೇಯಿ ಮೊದಲಾದವರು ಈ ವಿಷಯದಲ್ಲಿ ಉದಾಸೀನರಾಗಿದ್ದರು. ದಶರಥನು ಸತ್ಯಸಂಧನೆಂದೂ ಕೊಟ್ಟಮಾತಿಗೆ ಎಂದಿಗೂ ತಪ್ಪತಕ್ಕವನಲ್ಲವೆಂದೂ ಶ್ರೀರಾಮನು ಪದೇ ಪದೇ ಹೇಳಿದ್ದಾನೆ. ಕೈಕೇಯಿಯೂ ಅದನ್ನು ನಂಬಿದ್ದಾಳೆ. ದಶರಥನು ಸತ್ಯವನ್ನು ಉಲ್ಲಂಘಿಸತಕ್ಕವನಾಗಿದ್ದರೆ ಕೈಕೇಯಿಯ ವರವನ್ನು ತಿರಸ್ಕರಿಸಬಹುದಾಗಿತ್ತಲ್ಲವೆ ?

ಸ್ತ್ರೀಷು ನರ್ಮವಿವಾಹೇ ಚ ವೃತ್ತರ್ಥೇ ಪ್ರಾಣಸಂಕಟೇ
ಗೋಬ್ರಾಹ್ಮಣಾರ್ಥೇ ಹಿಂಸಾಯಾಂ ನಾನೃತಂ ಸ್ಯಾಜ್ಜುಗುಪ್ಸಿತಮ್

ಎಂದು ಧರ್ಮಶಾಸ್ತ್ರವು ಹೇಳುತ್ತದೆ.

ಮಹಾಭಾರತದ ಕರ್ಣಪರ್ವದಲ್ಲಿ ಶ್ರೀಕೃಷ್ಣನು -

ವಿವಾಹಕಾಲೇ ರತಿಸಂಪ್ರಯೋಗೇ
ಪ್ರಾಣಾತ್ಯಯೇ ಸರ್ವಧನಾಪಹಾರೇ
ವಿಪ್ರಸ್ಯ ಚಾರ್ಥೇ ಹ್ಯನೃತಂ ವದೇತ
ಪಂಚಾನೃತಾನ್ಯಾಹುರಪಾತಕಾನಿ

ಎಂದು ಹೇಳಿದ್ದಾನೆ.

-ಕರ್ಣ, ೬೯-೩೩

ನರ್ಮವಿವಾಹ ಸಂದರ್ಭದಲ್ಲಿ ದಶರಥನು ಹೇಳಿದ ಮಾತು ಗಮನಾರ್ಹವಲ್ಲವೆಂದೇ ಭಾವಿಸಬೇಕು. ಪ್ರಸಂಗವಶದಿಂದ ಶ್ರೀರಾಮನು ಭರತನ ಸಮಾಧಾನಕ್ಕಾಗಿ ಈ ವಿಷಯವನ್ನು ಹೇಳಿ, ಅದು ಸರಿಯಾದ ಕಾರಣವಾಗಲಾರದೆಂಬ ಅರುಚಿಯಿಂದಲೇ 'ದೈವಾಸುರೇ ಚ ಸಂಗ್ರಾಮೋ...............' ಎಂದು ವರಗಳ ವಿಷಯವನ್ನು ತಿಳಿಸಿದ್ದಾನೆ.

೭

ಕಲ್ಮಾಷಪಾದಪುತ್ರೋಽಭೂಚ್ಛಂಖಣಸ್ತ್ವಿತಿ ವಿಶ್ರುತಃ।
ಯಸ್ತು ತದ್ವೀರ್ಯಮಾಸಾದ್ಯ ಸಹಸ್ಸೈನ್ಯೋ ವ್ಯನೀನಶತ್ ॥

-ಪುಟ ೩೪೫

ರಘುವಿನ ಮಗ ಪ್ರವೃದ್ಧ. ಇವನು ರಾಕ್ಷಸನಾಗಿ ಮನುಷ್ಯರನ್ನು ಭಕ್ಷಿಸಿದ್ದರಿಂದ ಪುರುಷಾದಕನೆಂದು ಹೆಸರಾಯಿತು. ಕಲ್ಮಾಷಯುಕ್ತವಾದ-ಕಪ್ಪಾದ ಪಾದವುಳ್ಳವನು ಕಲ್ಮಾಷಪಾದ. ಸುದಾಸನ ಮಗ ಸೌದಾಸ ಅಥವಾ ಸೌದಾಸನ ಮಗ ಸೌದಾಸ. ಈತನಿಗೆ ಮಿತ್ರಸಹ, ವೀರಸಹ ಎಂಬ ಹೆಸರುಗಳು ಇದ್ದವೆಂದು ತಿಳಿದುಬರುತ್ತದೆ.

ಉತ್ತರಕಾಂಡದ ೫೬ನೆಯ ಸರ್ಗದಲ್ಲಿ ಈತನ ಕಥೆ ಬಂದಿದೆ. ಇವನ ತಂದೆಯಾದ ರಘುವಿಗೆ ಸುದಾಸನೆಂದೋ ಸೌದಾಸನೆಂದೋ ಇನ್ನೊಂದು ಹೆಸರಿದ್ದಿತೆಂದು ಈ ಪ್ರಕರಣದಿಂದ ಊಹಿಸಬೇಕಾಗುತ್ತದೆ.

ಕಾಳಿದಾಸನ ರಘುವಂಶಕಾವ್ಯದಲ್ಲಿ ಈ ವಂಶಾವಳಿಯು ರಾಮಾಯಣದಲ್ಲಿ ಹೇಳಿದಂತೆ ಇಲ್ಲ. ಮಗನೆಂದರೆ ಎಲ್ಲಾ ಕಡೆಯಲ್ಲಿಯೂ ಔರಸಪುತ್ರನೆಂದು ತಿಳಿಯುವುದಾದರೆ ಅನ್ಯೋನ್ಯ ವಿರೋಧವನ್ನು ಸರಿಪಡಿಸುವುದು ಅಸಾಧ್ಯವಾಗುತ್ತದೆ. ರಘುವಿನ ಮಗ– ಎಂಬ ರೀತಿಯಲ್ಲಿ ಹೇಳಿದರೆ ಕೆಲವು ಕಡೆ ವಿರೋಧಪರಿಹಾರ ಸಾಧ್ಯ. ಮತ್ತು ಒಬ್ಬನಿಗೆ ಅನೇಕ ಹೆಸರುಗಳಿದ್ದವೆಂದೂ ಅನೇಕರಿಗೆ ಒಂದೇ ಬಗೆಯ ಹೆಸರುಗಳಿದ್ದವೆಂದೂ ಹೇಳಿ ಉಳಿದ ಕಡೆ ವಿರೋಧವನ್ನು ಪರಿಹರಿಸಬೇಕಾಗುತ್ತದೆ.

ಪ್ರವೃದ್ಧನು ಯಜ್ಞಮಾಡುತ್ತಿದ್ದಾಗ ವಸಿಷ್ಠರು ಪುರೋಹಿತರಾಗಿದ್ದರು. ಒಬ್ಬ ರಾಕ್ಷಸನು ಹಳೆಯ ಸೇಡನ್ನು ತೀರಿಸಿಕೊಳ್ಳುವುದಕ್ಕಾಗಿ ವಸಿಷ್ಠವೇಷದಲ್ಲಿ ಬಂದು ಪ್ರವೃದ್ಧನನ್ನು ಕುರಿತು ''ರಾಜ, ಈ ದಿನ ನನಗೆ ಮಾಂಸಭೋಜನವನ್ನು ನೀಡು'' ಎಂದನು. ರಾಜನು ಆದರಂತೆ ತನ್ನ ಅಡಿಗೆಯವನಿಗೆ ತಿಳಿಸಿದನು. ಆ ರಾಕ್ಷಸನು ಅಡಿಗೆಯವನ ವೇಷದಲ್ಲಿ ನರಮಾಂಸವನ್ನು ತಂದು ವಸಿಷ್ಠರಿಗೆ ಬಡಿಸಿದನು. ವಸಿಷ್ಠರು ಕುಪಿತರಾಗಿ 'ರಾಜ, ಇಂಥ ದುಷ್ಟವಾದ ಆಹಾರವನ್ನು ನನಗೆ ಹಾಕುವೆಯಾ ? ನೀನು ನರಮಾಂಸಭಕ್ಷಕನಾದ ರಾಕ್ಷಸನಾಗು' ಎಂದು ಶಪಿಸಿದರು. ಆಗ ಪ್ರವೃದ್ಧನೂ ಕುಪಿತನಾಗಿ ''ನನ್ನ ಅಪರಾಧವೇನು? ನೀವು ಹೇಳಿದಂತೆ ಮಾಂಸವನ್ನು ತರಿಸಿದ್ದೇನೆ' ಎಂದು ನುಡಿದು, ವಸಿಷ್ಠರಿಗೆ ಪ್ರತಿಶಾಪವನ್ನು ಕೊಡಲು ಕೈಯಲ್ಲಿ ಜಲವನ್ನು ತೆಗೆದುಕೊಂಡನು. ರಾಜನ ಪತ್ನಿಯಾದ ಮದಯಂತಿ ರಾಜನನ್ನು ತಡೆದಳು. ಆಗ ಪ್ರವೃದ್ಧನು ಆ ಜಲವನ್ನು ತನ್ನ ಪಾದಗಳ ಮೇಲೆ ಸುರಿದುಕೊಂಡನು. ಜಲವನ್ನು ಅಭಿಮಂತ್ರಿಸಿದ್ದರಿಂದ ಅದರ ತೇಜಸ್ಸು ರಾಜನ ಪಾದಗಳನ್ನು ಕಪ್ಪುಬಣ್ಣಕ್ಕೆ ತಿರುಗಿಸಿತು.

ಆದ್ದರಿಂದ ಅವನಿಗೆ ಕಲ್ಮಾಷಪಾದನೆಂದು ಹೆಸರಾಯಿತು. ಅವನು ವಸಿಷ್ಠಶಾಪದಿಂದ ರಾಕ್ಷಸನಾಗಿ ಪೂರ್ವಸ್ಮೃತಿಯನ್ನು ಕಳೆದುಕೊಂಡನು. ಆಮೇಲೆ ಪ್ರವೃದ್ಧನು ತನ್ನ ಮಗನಾದ ಶಂಖಣನೊಡನೆಯೇ ಯುದ್ಧಮಾಡಿ ಆತನನ್ನು ಕೊಂದನು ಅಥವಾ ಭಕ್ಷಿಸಿದನು ಎಂದು ಪೂರ್ವಕಥೆ.

೮

ತೇಜಸಾದಿತ್ಯಸಂಕಾಶಂ ಪ್ರತಿಪಚ್ಚಂದ್ರದರ್ಶನಮ್

-ಪುಟ ೩೫೭

'ಪ್ರತಿಚ್ಚಂದ್ರದರ್ಶನಮ್' ಶ್ರೀರಾಮನು ಪಾಡ್ಯದ ಚಂದ್ರನಂತೆ ಕಾಣಿಸಿದನಂತೆ. ಪೂರ್ಣಚಂದ್ರನಿಗೆ ಹೋಲಿಸುವುದು ಸಹಜ. ಆದರೆ ಪಾಡ್ಯದ ಚಂದ್ರನಿಗೆ ಹೋಲಿಸುವಲ್ಲಿ ಕವಿಯ ಆಶಯವೇನು?

'ಪಾದಂ ಪಾದಂ ಪ್ರತಿ ಪ್ರತಿಪತ್' ಹೆಜ್ಜೆ ಹೆಜ್ಜೆಗೂ ಶ್ರೀರಾಮನು ಚಂದ್ರನಂತೆ ಕಾಣುತ್ತಿದ್ದನು ಎಂದು ಅರ್ಥಮಾಡಿದರೆ ಹೇಗೆ? ಪ್ರತಿಪತ್ ಶಬ್ದಕ್ಕೆ ಕೇವಲ ಯೌಗಿಕಾರ್ಥವನ್ನು ಮಾಡಿದಂತಾಗುತ್ತದೆ. ರೂಢಾರ್ಥವು ಬಿಟ್ಟುಹೋಗುತ್ತದೆ. ಆ ಶಬ್ದಕ್ಕೆ ಅರ್ಥಪುಷ್ಟಿಯೂ ಇಲ್ಲದೆ ಹೋಗುತ್ತದೆ.

ಪಾಡ್ಯವೆಂದಾದರೆ ಕೃಷ್ಣಪಕ್ಷದ ಪಾಡ್ಯವೊ? ಶುಕ್ಲಪಕ್ಷದ ಪಾಡ್ಯವೊ? ಕೃಷ್ಣಪಕ್ಷದ ಪಾಡ್ಯದಲ್ಲಿ ಚಂದ್ರನು ಕ್ರಮೇಣ ಕ್ಷಯಿಸುತ್ತಾನೆ. ಇಂಥ ಚಂದ್ರನ ಹೋಲಿಕೆ ಶ್ರೀರಾಮನಿಗೆ ಸರಿಯಾದೀತೇ? ಆದರೆ ಕೃಷ್ಣಪಕ್ಷದ ಚಂದ್ರನಂತೆ ಶ್ರೀರಾಮನು ಕ್ರಮೇಣ ಅರಣ್ಯದಲ್ಲಿ ಮರೆಯಾಗುತ್ತಾನೆ ಎಂಬ ಆಶಯವನ್ನು ಹೇಳಲು ಸಾಧ್ಯ.

ಶುಕ್ಲಪಕ್ಷದ ಪ್ರತಿಪಚ್ಚಂದ್ರನೆಂದು ಅರ್ಥಹೇಳುವುದು ಯುಕ್ತವೆಂದು ತೋರುತ್ತದೆ. ಕ್ರಮವಾಗಿ ಅವನು ವರ್ಧಿಷ್ಣುವಾಗಿದ್ದಾನೆ ಎಂಬ ಅರ್ಥ ಸೂಚಿತವಾಗುತ್ತದೆ. ಅವನ ಸತ್ಯಧರ್ಮ ಶೌರ್ಯಾದಿಗುಣಗಳು ಇನ್ನು ಮೇಲೆ ಅತಿಸ್ಪಷ್ಟವಾಗಿ ತೋರುತ್ತ ಹೋಗುವುವೆಂದೂ ಅವನ ದಿವ್ಯಕಥೆಯಲ್ಲಿ ಇದುವರೆಗೆ ನಡೆದದ್ದು ಆರಂಭದ ಅಧ್ಯಾಯವೆಂದೂ ಆಶಯವನ್ನು ಹೇಳಬಹುದಾಗಿದೆ.

'ತೇಜಸಾದಿತ್ಯಸಂಕಾಶಂ ಪ್ರತಿಪಚ್ಚಂದ್ರದರ್ಶನಃ'

ಎಂದು ಮೂಲಪಾಠವಿರಬಹುದೆ? ಎಂಬ ಶಂಕೆ ನನಗುಂಟು. ಆ ಸಂದರ್ಭದಲ್ಲಿ ಪ್ರತಿಪಚ್ಚಂದ್ರದರ್ಶನನು ಭರತನಾಗುತ್ತಾನೆ. ಶ್ರೀರಾಮ-ಭರತರ ಸಂವಾದದಲ್ಲಿ ಗೆದ್ದವನು ಶ್ರೀರಾಮ. ಸೋತವನು ಭರತ. ಭರತನ ಹೃದಯಕ್ಕೆ ತೀವ್ರವಾದ ಆಘಾತವಾಗಿದೆ. ಅವನು ಸಂಕಟದಿಂದ ನೊಂದು ಕುಂದಿಹೋಗಿದ್ದಾನೆ. ಅವನ ಮುಖ ಸಪ್ಪೆಯಾಗಿದೆ. ಕಾಂತಿಹೀನವಾಗಿದೆ. 'ಆದಿತ್ಯಸಂಕಾಶನಾದ ಶ್ರೀರಾಮನ ಎದುರಿಗೆ ಭರತನು ಪಾಡ್ಯದ ಚಂದ್ರನಂತೆ ಕಾಣಿಸಿದನು' ಎಂದು ಕವಿಯ ಆಶಯವಿದ್ದೀತೆ?

೯

ಅದೂರಾಚ್ಚಿತ್ರಕೂಟಸ್ಯ ದದರ್ಶ ಭರತಸ್ತದಾ
ಆಶ್ರಮಂ ಯತ್ರ ಸ ಮುನಿರ್ಭರದ್ವಾಜಃ ಕೃತಾಲಯಃ

-ಪುಟ ೩೬೦

ಭರದ್ವಾಜಮುನಿಗಳ ಆಶ್ರಮ ಗಂಗಾಯಮುನಾನದಿಗಳ ಮಧ್ಯದಲ್ಲಿ ಇತ್ತು. ಶ್ರೀರಾಮನು ಅಯೋಧ್ಯೆಯಿಂದ ಹೊರಟು ಗಂಗೆಯನ್ನು ದಾಟಿ ಭರದ್ವಾಜಾಶ್ರಮಕ್ಕೆ ಬಂದು, ಆಮೇಲೆ ಯಮುನೆಯನ್ನು ದಾಟಿ ಅದರ ದಕ್ಷಿಣಕ್ಕಿದ್ದ ಚಿತ್ರಕೂಟಕ್ಕೆ ಹೋಗಿದ್ದಾನೆ. ಭರತನು ಸೇನಾಸಮೇತನಾಗಿ ಅಯೋಧ್ಯೆಯಿಂದ ಹೊರಟು ಗಂಗೆಯನ್ನು ದಾಟಿ ಭರದ್ವಾಜಾಶ್ರಮಕ್ಕೆ ಬಂದಿದ್ದಾನೆ. ಅನಂತರ ಚಿತ್ರಕೂಟಕ್ಕೆ ಹೋಗಿದ್ದಾನೆ. ಮಧ್ಯದಲ್ಲಿ ಯಮುನಾನದಿಯ ವಿಷಯವನ್ನು ವರ್ಣಿಸಿಲ್ಲ. ಪುನಃ ಭರತನು ಚಿತ್ರಕೂಟದಿಂದ ಅಯೋಧ್ಯೆಗೆ ಬರುವಾಗ ಮೊದಲು ಭರದ್ವಾಜಾಶ್ರಮಕ್ಕೆ ಬಂದನೆಂದೂ ಆಮೇಲೆ ಯಮುನೆಯನ್ನು ದಾಟಿ ಗಂಗಾನದಿಯನ್ನು ಹಾಯ್ದು ಅಯೋಧ್ಯೆಯನ್ನು ಸೇರಿದನೆಂದೂ ವರ್ಣಿತವಾಗಿದೆ (ಅಯೋ. ೧೧೩-೨೧). ಚಿತ್ರಕೂಟದಿಂದ ಅಯೋಧ್ಯೆಗೆ ಬರುವಾಗ ಯಮುನೆಯನ್ನು ದಾಟಿದ ಮೇಲಲ್ಲವೆ ಭರದ್ವಾಜಾಶ್ರಮವು ಗೋಚರಿಸಬೇಕಾದದ್ದು? ಯಮುನೆಯ ಉತ್ತರತೀರದಲ್ಲಲ್ಲವೆ ಭರದ್ವಾಜರ ಆಶ್ರಮ ?

ಭರದ್ವಾಜರಿಗೆ ಯಮುನಾನದಿಯ ಉತ್ತರತೀರದಲ್ಲೊಂದು, ದಕ್ಷಿಣ ತೀರದಲ್ಲೊಂದು - ಹೀಗೆ ಎರಡು ಆಶ್ರಮಗಳಿದ್ದವೆಂದೂ ಭರತನು ಚಿತ್ರಕೂಟದಿಂದ ಹಿಂದಿರುಗುವಾಗ ಭರದ್ವಾಜಮುನಿಗಳು ಯಮುನಾ ನದಿಯ ದಕ್ಷಿಣತೀರದಲ್ಲಿದ್ದ ಆಶ್ರಮಕ್ಕೆ ಬಂದಿದ್ದರೆಂದೂ ಕೆಲವರು ಸಮಾಧಾನ ಹೇಳುತ್ತಾರೆ.

ಆದರೆ ನಾವು ಇಲ್ಲಿ ಕ್ರಮವನ್ನು ಇಟ್ಟುಕೊಳ್ಳಬೇಕಾಗಿಲ್ಲ. ಭರದ್ವಾಜರಿಗೆ ನಡೆದ ಸಂಗತಿಯನ್ನು ತಿಳಿಸುವುದಕ್ಕಾಗಿ ಭರತನು ಅವರ ಆಶ್ರಮಕ್ಕೆ ಹೋಗಿದ್ದಾನೆ. ಅನಂತರ ಅಯೋಧ್ಯೆಗೆ ಹೊರಟಾಗ ಗಂಗಾನದಿ ಸಿಕ್ಕಿತು. ಅಲ್ಲಿ ಪ್ರಸಂಗವಶದಿಂದ ಯಮುನಾನದಿಯ ಸ್ಮರಣೆ ಬಂದಿದೆ. ಹಿಂದೆ ಯಮುನಾನದಿಯನ್ನು ದಾಟಿಬಂದಿದ್ದ ಅವನ ಪರಿವಾರದವರು ಈಗ ಗಂಗಾನದಿಯನ್ನೂ ದಾಟಿಹೋದರು ಎಂದು ಹೇಳಿದರೆ ವಿರೋಧವೇನೂ ಇಲ್ಲ. ಭರದ್ವಾಜರಿಗೆ ಎರಡು ಆಶ್ರಮಗಳಿದ್ದವೆಂದು ಕಲ್ಪಿಸುವುದು ಅನಾವಶ್ಯಕವೆಂದು ತೋರುತ್ತದೆ.

- ಸಂಪೂರ್ಣ -